889

ವಿದ್ಯಾದಾಯಿನಿ

K1234
188



೧ನೆಯ ಭಾಗ.

೧೯೦೩

ಮೈಸೂರು.

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್,

ವಿಷಯಗಳನ್ನು ಬರೆದವರ ಹೆಸರು.

ಮ॥ ರಾ॥ ರಾ॥ ಶ್ರೀ॥

1. ಎಡಿಟರ್.
2. ಎಸ್. ವೆಂಕೋಬರಾವ್ ಬಿ. ಎ. ಯವರು.
3. ಎಂ. ವೆಂಕಟಕೃಷ್ಣಯ್ಯನವರು.
4. ಎಂ. ಎ. ರಾಮಾನುಜ್ಯೆಯಂಗಾರ್ ರವರು.
5. ಎಂ. ವೆಂಕಟಸುಬ್ಬೈಯ್ಯನವರು.
6. ಎಂ. ಹಿರಿಯಣ್ಣನವರು.
7. ಎಚ್. ಸೂರ್ಯನಾರಣಪ್ಪನವರು.
8. ಆರ್. ಹಯವದನಾಚಾರ್ ರವರು.
9. ಕೆ. ರಾಮಸ್ವಾಮ್ಯೆಯಂಗಾರ್ ರವರು.
10. ಜಿ. ಹನುಮಂತರಾವ್ ರವರು.
11. ಶ್ರೀನಿವಾಸರಾಘವಾಚಾರ್ ರವರು.
12. ಬಿ. ಅನಂತಾಚಾರ್ರವರು.
13. ವೀಣಾ.. ಬಿಷ್ಟಪ್ಪನವರು.
14. ಬಿ. ಆರ್. ಶ್ರೀನಿವಾಸಚಾರ್ಯರವರು.
15. ಚಿ॥ ಶ್ರೀಕಂಠಶಾಸ್ತ್ರಿಯವರು.

ಮೊದಲಾದವರು.

ವಿದ್ಯಾದಾಯಿನಿಯ 15 ನೆಯ ಭಾಗ.

1907 ನೆ ಇಸವಿಯ ವಿಷಯಗಳು.

I. ಶಾಸ್ತ್ರೀಯವಿಷಯ ವಿಚಾರ.—

1	ಭೂಗೋಳಶಾಸ್ತ್ರ.	40—63.
2	ಬುಗ್ಗೆಗಳು ಮತ್ತು ಗುಪ್ತಗಾಮಿನಿಗಳಾದ ನದಿಗಳು	66.
3	ಜಲಸಂಚಾರ	81.
4	ಬುಗ್ಗೆಗಳು	112.
5	ಭೂಮಿಯೊಳಗಿನ ನೀರು	129.
6	ಪರ್ವತಗಳು, ವೈದಾನಗಳೂ ಮತ್ತು ಕಣಿವೆಗಳು..	152.
7	ರೇಷ್ಮೆ ವ್ಯವಸಾಯುಗಳು	253—277.
8	ಗಣಿತ	41,88,115,231.
9	ಕಣಿತಶಾಸ್ತ್ರವಿಚಾರ	186.
10	ಮನೊ ಗಣಿತ	206.
11	ಮಾನಸ ಗಣಿತ	230.
12	ಕ್ಷೇತ್ರಗಣಿತ	67·134.
13	ಕರ್ಣಾಟಕ ಭಾಷೆಯಲ್ಲಿ ಅಕ್ಷರಗಳೆಷ್ಟು	... 131–155,201,226.
14	ವ್ಯಾಕರಣ	256,278.
15	ಕನ್ನಡದ ವರ್ಣಮಾಲೆ	179.
16	ಬಾಲ ವ್ಯಾಕರಣ	50.

II. ಉಪನ್ಯಾಸ.—

1	ವಿದ್ಯಾಭ್ಯಾಸ	1,21,45,74,104, 120,141,175,189,247,273.
2	ಲೋಕಾನುಭವ	78.
3	ಸ್ತ್ರೀವಿದ್ಯಾಭ್ಯಾಸ	109.
4	ಪೆನ್‌ಷ್ಞ್ ಫಂಡ್	85.
5	ಮದ್ರಾಸಿನಲ್ಲಿ ನಡೆದ ವಿದ್ಯಾಭ್ಯಾಸವಿಷಯಕವಾದ ವಸ್ತುಪ್ರದರ್ಶನ	165.

6 ಕಿಂಡರ್‌ಗಾರ್ಟನ್ ಮತ್ತು ಮ್ಯಾನ್ಯೂಲ್ ಟ್ರೇನಿಂಗ್. 193.
7 ವಿದ್ಯಾಭ್ಯಾಸನಿಷಯಕವಾದ ವಸ್ತುಪ್ರದರ್ಶನ ... 216,237,261.

III. ಹಿತೋಪದೇಶ.—

1 ಬದೋಡಾ ಸಂಸ್ಥಾನದ ಗಾಯಕವಾರ್ ಮಹಾರಾಜರು ಮಾಡಿದ ಉಪನ್ಯಾಸ ... 5—25.
2 ವ್ಯವಸಾಯಮಾಡುವದರಲ್ಲಿ ಪರಸ್ಪರಸಹಾಯ ... 57.
3 ಹಸ್ತಕೌಶಲವನ್ನು ಹೆಚ್ಚಿಸುವದು ... 69.
4 ಬ್ರಹ್ಮಚರ್ಯಾಶ್ರಮ ... ... 94.
5 ಪಾಠಕರು ... ... 49.
6 ಪರೀಕ್ಷಣಶಕ್ತಿಯನ್ನು ಹೆಚ್ಚಿಸುವುದು ... 100.
7 ಲೋವರ್‌ಸೆಕೆಂಡರೀ ಪರೀಕ್ಷೆ ... ... 251.
8 ಮೈಸೂರ್ ನಾರ್ಮಲ್‌ಸ್ಕೂಲ್ ಪ್ರವೇಶ ... 144.
9 ವಾಚಕಶಕ್ತಿ ... ... 182.

IV. ಶಿಷ್ಷಾ ಕ್ರಮ.—

1 ನಕ್ಷೆ ಒರೆಸುವುದು ... ... 53.
2 ವಸ್ತುಪಾಠ ... ... 60.
3 ಪಾಠಶಾಲೆಯ ತೋಟ ... ... 117.
4 ಕಥೆ ಹೇಳುವುದು ... ... 146.
5 ಕಥೆ ... ... 158.

V. ವಿವಿಧ ವಿಷಯ.—

1 ಕನ್ನಡ ಗ್ರಂಥಕರ್ತರ ಸಮ್ಮೇಳನ ... 92—123.
2 ಮೈಸೂರ್ ವಿದ್ಯಾಭ್ಯಾಸದ ಇಲಾಖೆಯ ವಿಷಯಗಳು. 211.
3 ಮೈಸೂರ್ ವಿದ್ಯಾಭ್ಯಾಸದ ಇಲಾಖೆ ... 281.

VI. ಸರ್ಕಾರಿ ವಿಷಯ.—

3 ಮೈಸೂರ್ ದೇಶೀಯ ಪರೀಕ್ಷೆ ... ... 135.
4 ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ದಿವಾನರವರು ಮಾಡಿದ ಉಪನ್ಯಾಸ ... ... 213.

VII ಗ್ರಂಥ ಶೋಧನೆ.—

1 ಗ್ರಂಥ ವಿಮರ್ಶೆ (ಕವಿಚರಿತೆ.) ... 161.

VIII. ವಿದ್ಯಾರ್ಥಿಗಳಿಗೆ ಉಪಯುಕ್ತಾಂಶ.—

1 ಕನ್ನಡ 3ನೆ ಪುಸ್ತಕದ ಟಿಪ್ಪಣಿ... ... 252-258,283.

* ವಿದ್ಯಾದಾಯಿನಿ. *

ಭಾಗ ೧೫.] ಜನವರಿ—೧೯೦೭. [ಸಂಚಿಕೆ ೧.

ವಿದ್ಯಾಭ್ಯಾಸ.

[೨೬೯ನೇ ಪುಟದ ಶೇಷ.]

ಇಂಥಾ ಆತ್ಮರಕ್ಷಣಕ್ಕೆ ಬೇಕಾಗುವ ಜ್ಞಾನವೂ ಕೂಡ ನಮಗೆ ಸ್ವಲ್ಪಮಟ್ಟಿಗೆ ಪ್ರಕೃತಿ ಸಿದ್ಧವಾಗಿ ದೊರಕುತ್ತದೆ. ಮನುಷ್ಯರಿಗೆ ಉಂಟಾಗುವ ನಾನಾ ಅಪೇಕ್ಷೆಗಳೂ ದೇಹಬಾಧೆಗಳೂ ಅವರ ರಕ್ಷಣಕ್ಕೋಸ್ಕರವೇ ಹುಟ್ಟುವುವು. ಬಲವಾದ ಕ್ಷುತ್ತೂ ಶೀತೋಷ್ಣಗಳೂ ಪ್ರಾಪ್ತವಾದಾಗ ಅವನ್ನು ನಿವಾರಣೆ ಮಾಡಿಕೊಳ್ಳಲು ಪ್ರಯತ್ನಿಸದೆ ಯಾರೂ ಸುಮ್ಮನಿರಲಾರರು. ಅವುಗಳು ಮತ್ತು ಇತರ ಬಾಧೆಗಳು ಅಲ್ಪವಾಗಿರುವಾಗಲೂ ಕೂಡ ಜನರು ಅವನ್ನು ಪೇಕ್ಷಿಸದೆ ನಿವಾರಣೆ ಮಾಡುತ್ತಾ ಬಂದರೆ ಅವರಿಗೆ ಪ್ರಾಯಕವಾಗಿ ಕೇಡು ಸಂಭವಿಸುವುದು ಬಹಳಮಟ್ಟಿಗೆ ಕಡಿಮೆಯಾಗುವುದು.

ದೇಹಕ್ಕಾಗಲೀ ಮನಸ್ಸಿಕ್ಕಾಗಲೀ ಆಯಾಸವಾದಾಗ ಕೆಲಸಗಳನ್ನು ಮಾಡದೆ ವಿಶ್ರಾಂತರಾಗಿರುವುದು, ಗಾಳಿ ಸಾಲದೆ ಉಸರುಗಟ್ಟುವ ಸಂದರ್ಭದಲ್ಲಿ ಮನೆಯೊಳಗೆ ಯಥೇಚ್ಛವಾಗಿ ಗಾಳಿಯು ಬರುವಂತೆ ಏರ್ಪಾಟು ಮಾಡುವುದು, ಹಸಿವಿಲ್ಲದಾಗ ತಿನ್ನದೆ ಇರುವುದು, ದಾಹವಿಲ್ಲದಾಗ ಕುಡಿಯದೆ ಇರುವುದು—ಇವೇ ಮುಂತಾದವುಗಳನ್ನು ಕ್ರಮಪಡಿಸಿಕೊಂಡವರು ರೋಗಗ್ರಸ್ತರಾಗುವುದು ಅಪೂರ್ವ. ಆದರೆ ಅನೇಕರು ಬಹು ಮೂಢರಾಗಿರುವುದರಿಂದ, ಇಂಥಾ ದೇಹಬಾಧೆಗಳು ಆರೋಗ್ಯ ವಿಷಯದಲ್ಲಿ ಕರ್ತವ್ಯತೆಯನ್ನು ಸೂಚಿಸುವುವೆಂಬುದೇ ಅವರಿಗೆ ತಿಳಿಯದು.

ಈ ಬಾಧೆಗಳನ್ನು ಜನರು ಬಹುಕಾಲದಿಂದ ದುರುಪಯೋಗಪಡಿಸಿದೆ ಸ್ವಭಾವಿಕಸ್ಥಿತಿಯಲ್ಲಿಟ್ಟುಕೊಂಡಿದ್ದರೆ, ಅವು ಅವರಿಗೆ ಕರ್ತವ್ಯತೆಯನ್ನು ಬೋಧಿಸಲು ಬಹು ಅಪ್ತವಾದ ಮಾರ್ಗದರ್ಶಿಗಳಾಗುವುದರಲ್ಲಿ ಸಂದೇಹವಿಲ್ಲ. ಹೀಗೆ ಆರೋಗ್ಯರಕ್ಷಣೆಗೆ ಪ್ರಕೃತಿಯು ದೇಹಬಾಧೆಗಳನ್ನು ಕಾವಲುಗಾರರನ್ನಾಗಿಟ್ಟಿದ್ದಾಗ್ಗೂ ಜನರ ಅಜ್ಞಾನದದಶೆಯಿಂದ ಅವುಗಳು ಅವರಿಗೆ ಅಷ್ಟು ಪ್ರಯೋಜನಕಾರಿಗಳಾಗಿ ಪರಿಣಮಿಸುವುದಿಲ್ಲ.

ಹೀಗೆ ದೇಹಶಾಸ್ತ್ರಜ್ಞಾನವು ಪರಿಪೂರ್ಣ ಜೀವನಕ್ಕೆ ಆವಶ್ಯಕವಾಗಿರುವುದು. ಈ ವಿಷಯದಲ್ಲಿ ಯಾರಿಗಾದರೂ ಸಂದೇಹ ತೋರಿದರೆ ಅವರು ತಮ್ಮ ಸಮೀಪದಲ್ಲಿರುವ ಮಧ್ಯವಾಯ್ಯದವರಾದ ಸ್ತ್ರೀಪುರುಷರಲ್ಲಿಯೂ ಇನ್ನೂ ಸ್ವಲ್ಪ ಅಧಿಕ ವಯಸ್ಸುಳ್ಳವರಲ್ಲಿಯೂ ಎಷ್ಟು ಜನರು ಪೂರ್ಣಾರೋಗ್ಯವಾಗಿರುವರೆಂಬುದನ್ನು ಪರೀಕ್ಷಿಸಿ ನೋಡಲಿ. ವಾರ್ಧಕ್ಯ ಬರುವವರಿಗೂ ಬಲವಾಗಿಯೂ ಆರೋಗ್ಯವಾಗಿಯೂ ಇರುವಂಥವರ ದರ್ಶನವಾಗುವುದೇ ಅಪೂರ್ವ. ಅದರೆ ಗಂಟಿಗಂಟಿಯಲ್ಲಿಯೂ ತೀವ್ರರೋಗದಿಂದಲಾಗಲೀ ದೀರ್ಘರೋಗದಿಂದಲಾಗಲೀ ದೌರ್ಬಲ್ಯದಿಂದಾಗಲೀ ಅಥವಾ ಅಕಾಲ ವಾರ್ಧಕ್ಯದಿಂದಾಗಲೀ ಪೀಡಿತರಾಗಿರುವ ಬಹು ಜನರನ್ನು ನೋಡಬಹುದು. ಜನ್ಮಾರಭ್ಯದಿಂದ ಯಾವಕಾಲದಲ್ಲಿಯಾದರೂ ರೋಗವನ್ನನುಭವಿಸದೆ ಇರುವವರು ಯಾರು? ಎಂದು ಪ್ರಶ್ನೆ ಮಾಡಿದರೆ, ನಾನು ಅನುಭವಿಸಿಲ್ಲ ಎಂದು ಉತ್ತರ ಹೇಳುವವರು ಸಿಕ್ಕುವುದೇ ಅಪೂರ್ವ. ಸ್ವಲ್ಪಮಟ್ಟಿನ ತಿಳಿವಳಿಕೆ ಇದ್ದರೆ ಅನೇಕ ರೋಗಗಳನ್ನು ತಪ್ಪಿಸಿಕೊಳ್ಳಬಹುದು.

ಬುದ್ಧಿಹೀನರಾಗಿ ಜನರು ಅನೇಕ ರೋಗಗಳಿಗೆ ಗುರಿಯಾಗುವರು. ಅಜಾಗ್ರತೆಯಿಂದ ಶೀತಕ್ಕಾಸ್ಪದಕೊಟ್ಟು ಅದರಿಂದ ವಾತಜ್ವರ ಹುಟ್ಟಿ ಆಬಳಿಕ ಹೃದ್ರೋಗ ಉಂಟಾಗಿ ಅದರಿಂದ ಒಬ್ಬನು ನೆರಳುತ್ತಿರುವನು. ಮತ್ತೊಬ್ಬನು ತನ್ನ ಶಕ್ತಿಮೀರಿ ವ್ಯಾಸಂಗಮಾಡಿ ಕಣ್ಣುಗಳನ್ನು ಕಳಕೊಂಡಿರುವನು. ಇನ್ನೊಬ್ಬನು ಪೊಣಕಾಲಿಗೆ ಸ್ವಲ್ಪ ಗಾಯವಾಗಿ ನೋವಾದಾಗ ವಿಶ್ರಾಂತಿ ತೆಗೆದುಕೊಳ್ಳದೆ ಉಪೇಕ್ಷೆಮಾಡಿ ಬಹಳವಾಗಿ ಅಲೆದಾಡಿ ಕುಂಟನಾಗಿರುವನು. ಬೆಬ್ಬನು ಮಸ್ತಿಷ್ಕಕ್ಕೆ ಮಿತಿಮೀರಿ ಕೆಲಸವನ್ನು ಕೊಟ್ಟುದರಿಂದ ಹೃದಯಸ್ಪಂದನ ಉಂಟಾಗಲು ಅದರಕಾರಣವನ್ನರಿಯದೆ ಮತ್ತೆಮತ್ತೂ ವ್ಯಾಸಂಗಮಾಡಿ ಬಹು ವರ್ಷಗಳಿಂದ ರೋಗದಲ್ಲಿ ಬಿದ್ದು ನೆರಳುತ್ತಿರುವನು. ಮತ್ತೊಬ್ಬನು ಬುದ್ಧಿಹೀನನಾಗಿ ತನ್ನ ಕೈಲಾಗದ ಶರೀ

ಸಾಹಸವನ್ನು ತೋರಿಸಲಿಕ್ಕೆ ಹೋಗಿ ನಿವಾರಣ ಮಾಡಿಕೊಳ್ಳಲಸಾಧ್ಯವಾದ ಹಾನಿಯನ್ನು ಅದರಿಂದ ಹೊಂದಿರುವನು. ಇನ್ನೊಬ್ಬನು ನಿಷ್ಪ್ರಯೋಜನವಾದ ಕಾರ್ಯವನ್ನ ತಿಯಾಗಿಮಾಡಿ ಅದರಿಂದ ದೇಹಸ್ಥಿತಿಯನ್ನು ಕೆಡಿಸಿಕೊಂಡಿರುವನು. ಇದಲ್ಲದೆ ದೌರ್ಬಲ್ಯದ ದಶೆಯಿಂದ ಸರ್ವದಾ ಕಾಡಿಸುತ್ತಿರುವ ಅಲ್ಪ ರೋಗದಿಂದ ವ್ಯಾಕುಲಿತರಾದ ಜನರನ್ನು ನಾವು ಎಲ್ಲೆಲ್ಲಿಯೂ ನೋಡಬಹುದು.

ಅನಾರೋಗ್ಯದಿಂದ ನೋವೂ ದಣವೂ ವ್ಯಥೆಯೂ ವೃಥಾ ಕಾಲಹರಣವೂ ಧನವ್ಯಯವೂ ಆಗುವುದೆಂದು ಹೇಳಬೇಕಾದ ಆವಶ್ಯಕವೇನಿಲ್ಲ. ಇದಲ್ಲದೆ ಅದು ನಮ್ಮ ಜೀವನಕಾರ್ಯಗಳಿಗೆ ಬಹಳವಾಗಿ ವಿಘ್ನಮಾಡುವುದು. ರೋಗವು ಬಲವಾಗಿರುವಾಗ ಯಾವಕೆಲಸವನ್ನು ಮಾಡಲೂ ಸಾಧ್ಯವಿಲ್ಲ. ಅಲ್ಪ ರೋಗಗಳು ಪ್ರಾಪ್ತವಾದಾಗ ಕೆಲಸ ಮಾಡಿದರೆ ಹೆಚ್ಚು ಶ್ರಮವಾಗುತ್ತದೆ. ರೋಗದಿಂದ ಮನಸ್ಸಿಗೆ ಬೇಸರ ಹುಟ್ಟುವುದರಿಂದ ಪುಕ್ಕಳ ಪೋಷಣೆಯು ಸರಿಯಾಗಿ ನಡೆಯುವುದಿಲ್ಲ. ಪೌರಕಾರ್ಯದಲ್ಲಿ ಬುದ್ಧಿಯೇ ಹೋಗುವುದಿಲ್ಲ. ವಿನೋದಕಾರ್ಯಗಳಲ್ಲಿ ಬೇಸರ ಹುಟ್ಟುವುದು. ಹೀಗೆ ರೋಗದಿಂದ ಬಹು ಅನರ್ಥ ವುಂಟಾಗುವುದು. ನಮ್ಮ ಪೂರ್ವಿಕರೂ ನಾವೂ ಮಾಡಿದ ಕಾಯಿಕ ಅನಾಚಾರಗಳಿಂದಲೇ ಬಹು ತೊಂದರೆಯುಂಟಾಗಿ ಪರಿಪೂರ್ಣ ಜೀವನಕ್ಕೆ ಕುಂದಕ ಬರುವುದು. ಜೀವನವು ಮಂಗಳವಾಗಿಯೂ ಆನಂದವಾಗಿಯೂ ಇರುವುದಕ್ಕೆ ಬದಲಾಗಿ ರೋಗದದಶೆಯಿಂದ ಅಸಹ್ಯವಾಗಿಯೂ ಹೊರಲಾತದಷ್ಟು ಭಾರವಾಗಿಯೂ ಆಗುವುದು.

ರೋಗದಿಂದ ಪ್ರಾಪ್ತವಾಗುವ ಫಲವು ಇಷ್ಟೇಅಲ್ಲ. ಅದರಿಂದ ಮೇಲೆ ಹೇಳಿದ ಹಾನಿಗಳು ಸಂಭವಿಸುವುದು ಮಾತ್ರವಲ್ಲದೆ, ಆಯುಷ್ಯವೂ ಕ್ಷೀಣವಾಗುವುದು. ರೋಗಬಂದು ವಾಸಿಯಾದಬಳಿಕ ಜನರು ಮೊದಲಿನಂತೆ ದೃಢಕಾಯರಾಗುವರು ಎಂದು ಅನೇಕರು ಭಾವಿಸುವರು. ಇದು ತಪ್ಪು. ದೇಹವ್ಯಾಪಾರಗಳ ಕ್ರಮವು ಒಂದುಸಾರಿ ಕೆಟ್ಟರೆ ಪುನಃ ಅದು ಯಥಾ ಪೂರ್ವಸ್ಥಿತಿಗೆ ಬರುವುದಿಲ್ಲ. ಅಕ್ರಮದಿಂದ ಉಂಟಾಗುವ ಹಾನಿಯು ಶಾಶ್ವತವಾಗಿ ನಿಲ್ಲುವುದು. ತಕ್ಷಣದಲ್ಲಿ ತೋರದೆ ಇದ್ದಾಗ್ಗೂ ಅದು ಇದ್ದೇಇರುವುದು. ಪ್ರಕೃತಿಯು ತನ್ನ ನಿಯಮಗಳನ್ನುಲ್ಲಂಘಿಸಿದವರನ್ನು ಸುಮ್ಮನೆ ಬಿಡುವುದಿಲ್ಲ. ಅವರಿಗೆ ದಂಡನೆಯು ತಪ್ಪುವುದಿಲ್ಲ. ಅನೇಕಸಾರಿ ಮಾಡಿದ ಅಕ್ರಮಗಳು ಸೇರಿ ಕಡೆಗೆ ಅವು ಆಯುಃಕ್ಷಯರೂಪವಾದ ದಂಡನೆಯಾಗಿ ಪರಿಣಮಿಸುವುವು. ಅಲ್ಪ ಅಲ್ಪವಾದ ಹಾನಿಗಳು ಸೇರಿ

ಕೊಂಡು ದೇಹಸ್ಥಿತಿಯನ್ನು ಕೆಡಿಸಿ ಕಡೆಗೆ ಅಕಾಲ ಮರಣವನ್ನು ತರುವುದು ಪ್ರಾಯಶಃವಾಗಿ ಅಕ್ರಮಗಳಿಂದ ಸಂಗಡ್ಡ ಪಾಲಿನಷ್ಟು ಆಯುಷವು ಕ್ಷೀಣಿಸುವುದು. ಯಥಾಕ್ರಮದಲ್ಲಿರುವವನು ಸುಮಾರು ನೂರು ವರ್ಷಗಳ ಪರ್ಯಂತ ಬದುಕಿದರೆ, ಪದೆಪದೆ ಕ್ರಮತಪ್ಪಿ ನಡೆಯುವವನು ಐವತ್ತು ವರ್ಷಗಳಲ್ಲಿಯೇ ಸತ್ತು ಹೋಗುವನು.

ಆದುದರಿಂದ ಆತ್ಮರಕ್ಷಣೆಗೆ ಆರೋಗ್ಯ ಶಾಸ್ತ್ರಜ್ಞಾನವು ಅವಶ್ಯಕವಾದುದು. ಆದರೆ ಬರೀ ಶಾಸ್ತ್ರಜ್ಞಾ ಮಾತ್ರವಿದ್ದರೆ ಸಾಲದು. ಅದನ್ನು ಸರಿಯಾದ ಆಚರಣೆಗೆ ಪ್ರತಿಬಬ್ಬನೂ ತರಬೇಕು. ಇಲ್ಲದಿದ್ದರೆ ನಿಷ್ಫಲ. ಈ ಗಿನ ನಾಗರೀಕ ಸ್ಥಿತಿಯಲ್ಲಿ ಅನೇಕರು ಯತ್ನವಿಲ್ಲದೆ ಆರೋಗ್ಯ ನಿಯಮಗಳನ್ನು ತಪ್ಪಿ ನಡೆಯುಬೇಕಾಗಿ ಬರುವುದು. ಕೆಲವರು ಸೋಮಾರಿತನದಿಂದ ಆನಿಯಮಗಳನ್ನು ಲ್ಲಂಘಿಸುವರು. ತತ್ಕಾಲದ ಸುಖಕ್ಕೋಸ್ಕರ ಮುಂದಿನ ಮಂಗಳವನ್ನು ಕಳೆದುಕ್ಕೊಳ್ಳುವರು. ಯಥಾರ್ಥವಾದ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ ಮಹಾ ಫಲ ವುಂಟಾಗುವುದರಲ್ಲಿ ಸಂದೇಹವಿಲ್ಲ. ಆರೋಗ್ಯ ನಿಯಮಗಳನ್ನನು ಸರಿಸುವುದಕ್ಕೆ ಮೊದಲು ಅವುಗಳಿಂಥವುಗಳೆಂಬ ಜ್ಞಾನವು ಅವಶ್ಯಕವಾಗಿ ಬೇಕು. ಪರಿಪೂರ್ಣ ಜೀವನವನ್ನಪೇಕ್ಷಿಸುವರು ಈ ನಿಯಮಗಳನ್ನು ಅಗತ್ಯವಾಗಿ ತಿಳಿದು ಅವುಗಳನ್ನಾಚರಣೆಗೆ ತರಬೇಕು. ಪೂರ್ಣಾ ರೋಗ್ಯವೂ ಅದರಿಂದುಂಟಾಗುವ ಉತ್ಸಾಹ ಧೈರ್ಯಗಳೂ ಸುಖ ಸಾಧನಗಳಾಗಿರುವುದರಿಂದ, ಅವುಗಳನ್ನು ಹೊಂದುವ ಮಾರ್ಗವನ್ನು ಸರ್ವರೂ ತಿಳಿದಿರಬೇಕು. ಆದುದರಿಂದ ಯೋಗ್ಯವಾದ ವಿದ್ಯಾಭ್ಯಾಸದ ಏರ್ಪಾಟಿನಲ್ಲಿ ಯಥೋಚಿತವಾದ ದೇಹ ಶಾಸ್ತ್ರಾಧ್ಯಯನವನ್ನೂ ಕಲ್ಪಿಸಬೇಕು.

ಸಶೇಷ.

S. V.

ಬರೋಡಾ ಸಂಸ್ಥಾನದ ಗಯಕ್ವಾರ್ ಮಹಾರಾಜರವರು
ಮಾಡಿದ ಉಪನ್ಯಾಸ :—

ಯೂರೋಪ್ ಮತ್ತು ಅಮೆರಿಕಾಖಂಡಗಳಲ್ಲಿ ಸಂಚಾರವನ್ನು ಮಾಡಿಕೊಂಡು ನಾನು ಬಂದು ಸುಮಾರು ಒಂದು ತಿಂಗಳಾಯಿತು. ಈವತ್ತಿನ ದಿನ ಉಪನ್ಯಾಸಮಾಡುವ ಕೆಲಸವನ್ನು ನಾನು ಅಂಗೀಕರಿಸಬೇಕಾಯಿತು. ಇದು ನಮಗೆಲ್ಲರಿಗೂ ಸಮನಾಗಿ ಕರ್ತವ್ಯವಾದುದು. ಇದನ್ನು ತಪ್ಪಿಸಿಕೊಳ್ಳುವುದು ಯೋಗ್ಯವಲ್ಲ. ನಾವೆಲ್ಲರೂ ಸಮವಾಗಿ ಕೆಲಸಮಾಡಿ ಫಲಾನುಭವದಲ್ಲಿಯೂ ಸಮಭಾಗಿಗಳಾಗೋಣ. ಕೈಗಾರಿಕೆಯ ಕೆಲಸದಲ್ಲಿಯೂ, ಸಂಘ ಸಂಸ್ಕರಣದ ವಿಷಯದಲ್ಲಿಯೂ ರಾಜತಂತ್ರಗಳ ವಿಷಯದಲ್ಲಿಯೂ, ನಮ್ಮ ದೇಶವು ಅಭಿವೃದ್ಧಿಗೆ ಬರತಕ್ಕ ಕೆಲಸಗಳಲ್ಲಿಯೂ ಯಾವುದು ಮಾಡಲ್ಪಟ್ಟಾಗ್ಯೂ ಅದರ ಫಲಕ್ಕೆ ನಾವೆಲ್ಲರೂ ಸಮಭಾಗಿಗಳಷ್ಟೆ. ಪ್ರವಾಹಕ್ಕೆ ಅನೇಕಕಟ್ಟೆಯನ್ನು ಹಾಕಿ ಜಮೀನುಗಳಿಗೆ ನೀರುಲಭ್ಯವಾಗುವಂತೆ ಮಾಡಿಕೊಂಡು ಆ ಕಟ್ಟೆಯ ಕೆಳಗಣ ಜಮೀನುದಾರರೆಲ್ಲರೂ ನೀರಿನ ಫಲ

ವನ್ನು ಹೇಗೆ ಅನುಭವಿಸುವರೋ ಹಾಗೆಯೇ ನಮ್ಮ ದೇಶದಲ್ಲಿ ಕೈಗಾರಿಕೆ ಮೊದಲಾದ ವೃತ್ತಿಗಳು ಶಾಸ್ತ್ರಶಕ್ತಿಯ ಬಲದಿಂದ ದೇಶಾಂತರಗಳಲ್ಲಿ ಹೇಗೋಹಾಗೆ ವೃದ್ಧಿಗೆಬರುವಂತೆ ಮಾಡಿಕೊಂಡರೆ ನಾವು ಅದರ ಫಲವನ್ನು ಸಮವಾಗಿ ಅನುಭವಿಸುವೆವು.

ಪೂರ್ವಕಾಲದಲ್ಲಿ ಇಂಡಿಯಾದೇಶದ ಅರಳೇ ಬಟ್ಟೆಗಳು ಬಹಳ ಪ್ರಸಿದ್ಧವಾಗಿದ್ದುವು ಈ ಬಟ್ಟೆಗಳು ಅಸೀರಿಯಾ ಮತ್ತು ಬ್ಯಾಬಿಲನ್ ಪಟ್ಟಣಗಳಿಗೂ ರಫ್ತಾಗುತ್ತಿದ್ದುವು. ಅನೇಕ ಸಾವಿರ ವರುಷಗಳ ಕೆಳಗೆ ನೇಯಲ್ಪಟ್ಟು ಈಗಲೂ ಈಜಿಪ್ಟ್ ದೇಶದ ಗೋಪುರಗಳಲ್ಲಿ ಕಾಣಲ್ಪಡತಕ್ಕ ಈಜಿಪ್ಟ್ ದೇಶದ ಶವಗಳಿಗೆ ಸುತ್ತಿರತಕ್ಕ ಬಟ್ಟೆಗಳಲ್ಲಿ ಇಂಡಿಯಾ ದೇಶದ ನೀಲಿಯು ಕಾಣಲ್ಪಡುವುದು. ಇಂಡಿಯಾ ದೇಶದ ದಂತವು ಪೂರ್ವದ ಈಜಿಪ್ಟ್ ದೇಶಕ್ಕೆ ರಫ್ತಾದ ಅನೇಕ ಪದಾರ್ಥರೂಪವಾಗಿ ಈಗಲೂ ಸಿಕ್ಕುವುದು. ಫಿನೀಷಿಯಾ ದೇಶದವರು ವ್ಯಾಪಾರಾರ್ಥವಾಗಿ ಈ ದೇಶಕ್ಕೆ ಬಂದು ಇಲ್ಲಿ ತಯಾರಾಗುತ್ತಲಿದ್ದ ಅನೇಕ ವಿಧವಾದ ಜವಾಹಿರಿಗಳನ್ನೂ ಚಿನ್ನವೇ ಮೊದಲಾದ ಅನೇಕ ಲೋಹಗಳಿಂದ ಮಾಡಲ್ಪಟ್ಟ ಬಟ್ಟೆ ಬರೆ ಮೊದಲಾದುವುಗಳನ್ನೂ, ನಮ್ಮ ದೇಶದಲ್ಲಿ ಉತ್ಪತ್ತಿಯಾಗತಕ್ಕ ಪರಿಮಳದ್ರವ್ಯಗಳನ್ನೂ ತೆಗದುಕೊಂಡು ಹೋಗಿ ಯೂರೋಪ್ ಖಂಡಕ್ಕೂ ಆಫ್ರಿಕಾಖಂಡದ ಉತ್ತರಭಾಗದಲ್ಲಿರತಕ್ಕ ದೇಶಗಳಿಗೂ ಸರಪರಾಜು ಮಾಡುತ್ತಿದ್ದರು. ಈಚೆಗೆ ಗ್ರೀಕ್ ಜನರು ನಾಗರಿಕರಾದರು. ಚರಿತ್ರೆಯನ್ನು ರಚಿಸಿದವರಲ್ಲಿ ಪಿತಾಮಹನಾದ ಹೆರೋಡೊಟಾಸ್ ಎಂಬಾತನು ನಮ್ಮದೇಶದ ಹತ್ತಿಯನ್ನು ನೋಡಿ ಕುರಿಯ ತುಪಟಕ್ಕಿಂತಲೂ ಇದು ಬಹಳ ಶ್ರೇಷ್ಠವೆಂದು ಅನೇಕಸಾವಿರವರುಷಗಳ ಕೆಳಗೆ ಬರೆದು ಇಟ್ಟಿರುವನು.

ಕ್ರಿಸ್ತಶಕಕ್ಕೆ ಪೂರ್ವ ಇಂಡಿಯಾದೇಶಕ್ಕೂ, ಯೂರೋಪ್ ಖಂಡಕ್ಕೂ ಬಲವಾದ ವ್ಯಾಪಾರವು ನಡೆಯುತ್ತಲಿತ್ತು. ರೋಮ್ ಮತ್ತು ಅಲಕ್ಸಾಂಡ್ರಿಯಾ ಪಟ್ಟಣಗಳು ಈ ವ್ಯಾಪಾರಕ್ಕೆ ಮಾತೃಸ್ಥಾನವಾಗಿದ್ದುವು. ರೇಷ್ಮೆ, ಇಂದ್ರನೀಲಮಣಿ, ನೀಲೀ ಬಟ್ಟೆಗಳು ಇವುಗಳೆಲ್ಲಾ ಸಿಂಧೂ ನದೀ ತೀರದಲ್ಲಿರತಕ್ಕ ಪಟ್ಟಣಗಳಿಂದ ಯೂರೋಪ್ ಮತ್ತು ಆಫ್ರಿಕಾ ಖಂಡಗಳಿಗೆ ರಫ್ತಾಗುತ್ತಿದ್ದುವು. ಬ್ರೋಚ್ ರೇವುಪಟ್ಟಣದಿಂದ ಇಂಡಿಯಾದೇಶದ ರೇವುಪಟ್ಟಣಗಳಿಗೆ ಚಿನ್ನ, ಬೆಳ್ಳಿ ಮೊದಲಾದ ಲೋಹಗಳು, ಗಾಜಿನ ಸಾಮಾನುಗಳು, ಹವಳಗಳು, ಪರಿಮಳದ್ರವ್ಯಗಳು, ಇವುಗಳು ಸರಪರಾಜಾಗುತ್ತಲಿದ್ದುವು. ಇದೇ ರೇವುಪಟ್ಟಣದಿಂದ ಹೊರಗಿನ ದೇಶಗಳಿಗೆ

ರತ್ನಪುಡಿಗಳು, ಮಜಲಿನ್ ಬಟ್ಟೆಗಳೂ, ಅರಳೇಬಟ್ಟೆಗಳೂ, ದಂತದ ಸಾಮಾನು, ಕರೀ ಮರದ ಸಾಮಾನು, ಮೆಣಸು, ರೇಷ್ಮೆ, ಮೊದಲಾದುವುಗಳೆಲ್ಲಾ ರಫ್ತಾಗುತ್ತಿದ್ದುವು. ಕ್ರಿಸ್ತಶಕ ಮೂರನೇಶತಮಾನದಲ್ಲಿ ಕಾನ್‌ಸ್ಟ್ಯಾಂಟಿನೋಪಲ್ ಪಟ್ಟಣವು ನಮ್ಮ ದೇಶದ ಸರುಕುಗಳ ವ್ಯಾಪಾರಕ್ಕೆ ಮೂಲಸ್ಥಾನವಾಯಿತು. ಸಿತಿಯನ್‌ರು, ಹನ್ನರು ಎಂಬ ದೇಶಾಂತರದ ಜನರು ಲಾಭದಮೇಲೆ ದೃಷ್ಟಿಯನ್ನಿಟ್ಟು ನಮ್ಮ ದೇಶಕ್ಕೆ ಮುತ್ತಿಗೆಯನ್ನು ಹಾಕಿದರು. ಆಗ ವಿಕ್ರಮಾದಿತ್ಯನು ಇವರನ್ನು ಸೋಲಿಸಿಓಡಿಸಿದನು. ಚೀನಾದೇಶದಿಂದ ಫಾಹಿಯಾನ್ ಮತ್ತು ಹ್ಯೂಯಗ್‌ತ್ಸಾಂಗ್ ಎಂಬ ಯಾತ್ರಿಕರು ಬೌದ್ಧ ದೇವಾಲಯಗಳನ್ನೂ ಮತ್ತು ಮಠಗಳನ್ನೂ ನೋಡುವ ಉದ್ದಿಶ್ಯ ನಮ್ಮ ದೇಶಕ್ಕೆ ಬಂದರು. ಜಾವಾ ಮೊದಲಾದ ದ್ವೀಪಗಳಲ್ಲಿ ಹಿಂದುಗಳು ಇದ್ದುದನ್ನೂ, ಆ ಕಾಲದಲ್ಲಿ ಹಿಂದುಗಳು ಇಟ್ಟುಕೊಂಡಿದ್ದ ನಾವೆಯನ್ನೂ ಒಂದು ಹಿಂದೂ ಹಡಗಿನಲ್ಲಿ ಫಾಹಿಯಾನ್ ಎಂಬುವನು ಇಂಡಿಯಾದೇಶವನ್ನು ಬಿಟ್ಟು ತಾರ್ಮಲಿಪ್ತಿಗೆ ಹೋದುದನ್ನೂ ಏಡನ್ ಪಟ್ಟಣದ ಸರ್ವವಸ್ತು ಪ್ರದರ್ಶನ ಶಾಲೆಗೂ ಲೀಡನ್ ಪಟ್ಟಣದ ಸರ್ವವಸ್ತುಪ ದರ್ಶನಶಾಲೆಗೆ ಇಂಡಿಯಾ ಜಾವಾ ಮೊದಲಾದವುಗಳಿಂದ ಹಿಂದೂವಿಗ್ರಹಗಳು ತೆಗೆದುಕೊಂಡು ಹೋಗಲ್ಪಟ್ಟದನ್ನೂ ಇವುಗಳನ್ನೆಲ್ಲಾ ಫಾಹಿಯನ್‌ರವರು ವಿವರಿಸಿದಾರೆ. ಅನಂತರ ವೆನಿಸ್ ಪಟ್ಟಣವು ನಮ್ಮ ದೇಶದೊಡನೆ ವ್ಯಾಪಾರ ಮಾಡುವುದಕ್ಕೆ ಉಪಕ್ರಮಿಸಿ ಅಭೂತಪೂರ್ವವಾದ ಸಂಪತ್ತಿಗೆ ಮಾತೃಸ್ಥಾನವಾಯಿತು. ತರುವಾಯ ಪೋರ್ಚುಗಲ್ ದೇಶವು ಇದೇ ರೀತಿಯಲ್ಲಿ ಸಂಪತ್ತನ್ನು ಹೊಂದಿತು. ಕ್ರಿಸ್ತಶಖ ೧೬ ನೇ ಶತಮಾನದವರಿಗೂ ಪೋರ್ಚುಗಲ್ ದೇಶವು ಈ ವ್ಯಾಪಾರದಿಂದ ಅತ್ಯುನ್ನತ ಪದವಿಗೆ ಬಂದು ಚೀನಾ ದೇಶದವರೆಗೂ ಆಸ್ಯಾಖಂಡದ ಸಮುದ್ರ ತೀರದಲ್ಲಿರತಕ್ಕ ಪಟ್ಣಣಗಳಲ್ಲೆಲ್ಲಾ ಸಾಮ್ರಾಜ್ಯಪದವಿಯನ್ನು ಹೊಂದಿತು. ಹದಿದೇಳನೇ ಶತಮಾನದಲ್ಲಿ ಡಚ್ ಜನಗಳು ಈ ಪದವಿಯನ್ನು ಹೊಂದಿದರು. ಅನಂತರ ಹದಿನೆಂಟನೇ ಶತಮಾನದಲ್ಲಿ ಇಂಗ್ಲೀಷ್ ಜನರು ಡಚ್ ಜನಗಳಿಂದ ಈ ಸಾಮ್ರಾಜ್ಯ ಪದವಿಯನ್ನು ಪಡೆದರು. ಹೀಗೆ ನಮ್ಮ ದೇಶದೊಡನೆ ವ್ಯಾಪಾರ ಮಾಡಿ ಕಾನ್‌ಸ್ಟ್ಯಾಂಟಿನೋಪಲ್, ವೆನಿಸ್, ಪೋರ್ಚುಗಲ್, ಹಾಲೆಂಡ್, ಇಂಗ್ಲೆಂಡ್, ಮೊದಲಾದ ರಾಜ್ಯಗಳು ಪೂರ್ವಕಾಲದಲ್ಲಿ ತುಂಬಾ ಸಂಪತ್ತನ್ನು ಹೊಂದಿದುವು. ಹದಿನೆಂಟನೇ ಶತಮಾನದಲ್ಲಿ ವಿಲಾಯತಿಯವರು ನಮ್ಮ ದೇಶವನ್ನು ಪಡೆದರು. ೧೯ ನೇ ಶತಮಾನದಲ್ಲಿ ಇಂಡಿಯಾ

ದೇಶದ ಕೈಗಾರಿಕೆಗಳು ಕ್ಷೀಣಸ್ಥಿತಿಗೆ ಬರುವುದಕ್ಕೆ ಉಪಕ್ರಮವಾಯಿತು. ವಿಲಾಯತಿಯ ಕೈಗಾರಿಕೆಗಳು ವಿಶೇಷವಾಗಿ ಅಭಿವೃದ್ಧಿಗೆ ಬಂದುವು. ಲಾಭವು ಹೆಚ್ಚಾಗಿ ಬಂದಹಾಗೆಲ್ಲಾ ಸ್ಟೀಮ್ ಮೊದಲಾದ ಶಕ್ತಿಗಳಿಂದ ನಡೆಸಲ್ಪಡತಕ್ಕ ಯಂತ್ರಗಳ ಸಹಾಯದಿಂದ ಒಟ್ಟೀಬರೆ ಮೊದಲಾದುವುಗಳು ಮಾಡಲ್ಪಡುವ ಏರ್ಪಾಡುಗಳು ಜಾರಿಗೆ ಬಂದವು. ಅದುಮೊದಲುಗೊಂಡು ವಿಲಾಯತಿಯವರು ವ್ಯಾಪಾರ ಮಾಡುವುದರಲ್ಲಿ ಕೊಂಚ ಹೆಚ್ಚಾದ ಧರ್ಮವನ್ನವಲಂಬಿಸಿದರು. ನ್ಯಾಯಮಿನೇರ್ಷ್ ಕಾನೂನನ್ನು ಹೆಚ್ಚುಸುಂಕಗಳನ್ನು ಕ್ರಮಕ್ರಮವಾಗಿ ತೆಗೆದುಹಾಕಿದರು. ಈಗ ನಿರ್ಬಂಧವಿಲ್ಲದೆ ವ್ಯಾಪಾರದಲ್ಲಿ ಬ್ರಿಟಿಷ್ ಜನಗಳು ಅತ್ಯುನ್ನತವಾದ ಪದವಿಯಲ್ಲಿರುತ್ತಾರೆ. ಇದರಿಂದ ವಿಲಾಯತಿಗೆ ಕೀರ್ತಿಯೂ ಬಂದುದಲ್ಲದೆ ನಷ್ಟಕ್ಕೆ ಅವಕಾಶವೇನೂ ಆಗಲಿಲ್ಲ. ಏಕಂದರೆ ಸ್ಟೀಂ ಮೊದಲಾದ ಶಕ್ತಿಗಳಿಂದ ನಡೆಸಲ್ಪಡತಕ್ಕ ಯಂತ್ರಸಹಾಯದಿಂದ ಇವರು ಬಟ್ಟೆಬರೆ ಮೊದಲಾದುವುಗಳನ್ನು ಮಾಡುವರು. ಯಂತ್ರಸಹಾಯದಿಂದ ಮಾಡತಕ್ಕ ಕೆಲಸದೊಡನೆ ಕೈಮಗ್ಗದಿಂದ ಕೆಲಸವನ್ನು ಮಾಡುವವರು ಹೆಚ್ಚುಲಾಭವನ್ನು ಹೊಂದುವುದು ಹೇಗೆತಾನೇ ಆತೀತು ? ಇಂಥಾವರೊಡನೆ ಪೋಟಾಪೋಟಿಯನ್ನು ತಾವು ಮಾಡಿದುದರಿಂದ ಇಂಗ್ಲೀಷ್ ಜನರಿಗೆ ಯಾವ ನಷ್ಟತಾನೇ ಬರುವುದು. ?

ಸ್ಟೀಮು ಮತ್ತು ವಿದ್ಯುಚ್ಛಕ್ತಿಯು ಈ ಪ್ರಪಂಚದ ಸ್ವರೂಪವನ್ನು ಬದಲಾಯಿಸಿದುವು. ಇವುಗಳ ಪ್ರಭಾವದಿಂದ ಕೈಕೆಲಸಗಳಿಂದ ಆಗುವುದಕ್ಕಿಂತಲೂ ಲಕ್ಷಾಂತರ ಪಾಲು ಹೆಚ್ಚುವುದಕ್ಕೆ ಅವಕಾಶವಾಯಿತು. ಹೀಗಿದ್ದಾಗ್ಯೂ ಕೂಲೀಜನಗಳ ಜೀವನಕ್ಕೆ ಯಾವ ಲೋಪವೂ ಬರಲಿಲ್ಲ. ಈ ಯಂತ್ರಗಳ ಸಹಾಯದಿಂದ ಕೆಲಸ ಮಾಡುವುದಕ್ಕೆ ಉಪಕ್ರಮ ಮಾಡುವುದಕ್ಕೆ ಮುಂಚೆ ಮಗ್ಗಗಳಲ್ಲಿ ಎಷ್ಟು ಜನಗಳಿಗೆ ಜೀವನವು ಸಿಕ್ಕುತ್ತಿತ್ತೋ ಅದಕ್ಕಿಂತಲೂ ಹೆಚ್ಚು ಜನಗಳಿಗೆ ಈಗಿನ ಕಾರಖಾನೆಗಳಲ್ಲಿ ಹೆಚ್ಚು ಕೂಲಿಯು ಸಿಕ್ಕುವುದಕ್ಕೆ ಉಪಕ್ರಮವಾಯಿತು. ಕೈಮಗ್ಗಗಳಿಂದ ಕೆಲಸಮಾಡುತ್ತಿದ್ದ ಜನಗಳ ಸಂಖ್ಯೆಯು ಪೂರ್ವಕ್ಕಿಂತಲೂ ಮೂರುಪಾಲು ಕಡಿಮೆಯಾಯಿತು. ಬೊಂಬಾಯಿ ಮಿಲ್ಲುಗಳಲ್ಲಿ ಈಗ ೧ ಲಕ್ಷವೂ ೭೦ ಸಾವಿರ ಜನ ಯಂತ್ರಗಳಿಂದ ನೇಯುತಕ್ಕ ಕೆಲಸವನ್ನು ಮಾಡುತ್ತಿದಾರೆ. ಅರಳೇ ರಾಟೆಯ ಯಂತ್ರದಲ್ಲಿ ೭೦ ಸಾವಿರ ಜನರು ಕೆಲಸ ಮಾಡುತ್ತಲಿದಾರೆ. ಈಗ ೪೦ ವರುಷಗಳಿಗೆ ಮುಂಚೆ ಇಂಡಿಯಾದಲ್ಲೆಲ್ಲಾ ೧೩ ಮಿಲ್ಲುಗಳಿದ್ದವು. ೧೪೯೭ನೇ ಇಸವಿ

ಯಲ್ಲಿ ೬೦ ಮಿಲ್ಲುಗಳಾದುವು. ೧೮೮೬ ರಲ್ಲಿ ೯೫ ಆದುವು. ೧೮೯೫ ರಲ್ಲಿ ೧೫೫ ಆದುವು ೧೯೦೪ ರಲ್ಲಿ ೨೦೦ ಆದುವು. ೪೦ ವರುಷಗಳ ಕೆಳಗೆ ನಮ್ಮ ದೇಶದಲ್ಲಿ ೩ ಲಕ್ಷ ರಾಟೆಗಳಿದ್ದುವು. ೧೯೦೪ರಲ್ಲಿ ೫೦ ಲಕ್ಷರಾಟೆಗಳಾದುವು. ದಿನೇದಿನೇ ಇವುಗಳು ಹೆಚ್ಚುತ್ತಲಿವೆ. ನೂಲು ವರುಷ ೧೫ಕ್ಕೆ ೬೧ ಕೋಟಿ ಪೌಂಡುಗಳು ತಯಾರಾಗುತ್ತಲಿದೆ. ಈ ಪೈಕಿ ಮೂರರಲ್ಲಿ ೧ ಭಾಗ ಕೈಮಗ್ಗದವರಿಂದ ಉಪಯೋಗಿಸಲ್ಪಡುತ್ತಲಿದೆ. ಉಳಿದುದೆಲ್ಲಾ ಯಂತ್ರಗಳಿಂದ ಉಪಯೋಗಿಸಲ್ಪಡುತ್ತಲಿವೆ.

ನಮ್ಮ ದೇಶದಲ್ಲಿ ಕೃಷಿಯೇ ಬಹುಜನಗಳಿಗೆ ಮುಖ್ಯವಾದ ಜೀವಿಕೆಯಾಗಿರುವುದು. ಎರಡನೇ ಜೀವಿಕೆಯೇ ಕೈಮಗ್ಗಗಳಿಂದ ಆಗತಕ್ಕುದು. ಈಗ ಸ್ವದೇಶೀ ಏರ್ಪಾಡುಗಳಾದಮೇಲೆ ಅಹಮದಾಬಾದಿನಲ್ಲಿಯೂ, ಬೊಂಬಾಯಿನಲ್ಲಿಯೂ, ಹೊಸ ಕೈಗಾರಿಕೆಯ ಯಂತ್ರಗಳು ಪ್ರತಿಷ್ಠಿಸಲ್ಪಟ್ಟುವು. ಬರೋಡಾ ಸಂಸ್ಥಾನದಲ್ಲಿಯೂ ಈ ಏರ್ಪಾಡು ಮಾಡಲ್ಪಟ್ಟಿರುವುದು. ಜನಗಳಿಗೆ ಮೇಲ್ಪಜ್ಞೆಯನ್ನು ಹಾಕುವುದಕ್ಕೋಸ್ಕರ ಈ ಸಂಸ್ಥಾನದಲ್ಲಿ ೨೦ ವರುಷಗಳಿಗೆ ಮುಂಚೆ ಬಟ್ಟೆಯಂತ್ರಗಳಿಗೆ ಪ್ರೋತ್ಸಾಹವನ್ನು ಮಾಡುವುದಕ್ಕೂ, ಮಾರ್ಗದರ್ಶನವನ್ನು ಮಾಡುವುದಕ್ಕೂ ಒಂದು ಯಂತ್ರವು ಸ್ಥಾಪಿಸಲ್ಪಟ್ಟಿತು. ಈಚಿಗೆ ಇನ್ನೆರಡು ಮಿಲ್ಲುಗಳು ಇಡಲ್ಪಟ್ಟುವು. ಇದಲ್ಲದೆ, ರಾಟೆಗಳು ಅನೇಕವಾಗಿ ಇಡಲ್ಪಟ್ಟುವು. ಮಗ್ಗಗಳು ಕೂಡ ಬಹಳವಾಗಿ ಹೆಚ್ಚಾದುವು. ಈ ಯಂತ್ರಗಳು ಮುಂಚೆ ಎಷ್ಟು ಇದ್ದುವೋ ಅದಕ್ಕಿಂತಲೂ ಬಹಳವಾಗಿ ಹೆಚ್ಚಿದುವು. ದಪ್ಪ ನೂಲಿನ ಬಟ್ಟೆಗಳು ನಮ್ಮ ಸಂಸ್ಥಾನಕ್ಕೆ ಎಷ್ಟು ಬೇಕೋ ಅಷ್ಟು ಇಲ್ಲಿಯೇ ತಯಾರಾಗುವುದು. ಸಾಮಾನ್ಯ ಜನಗಳಿಗೆ ಬೇಕಾದ ದೇಶಾಂತರದ ಬಟ್ಟೆಗಳು ಬರುವುದೇ ಅಪೂರ್ವವಾಗುತ್ತಾ ಇದೆ. ಅದೇ ಖರೀದಿಗೆ ಇಲ್ಲೇ ದೊರೆಯುವುದರಿಂದ ಜನರು ದೇಶಾಂತರದ ಬಟ್ಟೆಗಳನ್ನು ಕೊಳ್ಳುವುದು ಅಪೂರ್ವ. ನಯವಾದ ನೂಲಿನಿಂದ ತಯಾರಾಗುವ ಬಟ್ಟೆಗಳ ತಯಾರಿಯು ಕಡಿಮೆಯಾಗಿದೆ. ನಾವು ತಯಾರು ಮಾಡುವ ನಯವಾದ ಬಟ್ಟೆಗಳಿಗಿಂತಲೂ ಸುಲಭ ಕ್ರಯಕ್ಕೆ ಹೊರಗಿನ ಬಟ್ಟೆಗಳು ಸಿಕ್ಕುತ್ತವೆ. ಹೊರಗಿನ ಬಣ್ಣಗಳು ಚೆನ್ನಾಗಿವೆ. ಚೀಟಿಗಳು ದೇಶಾಂತರದಿಂದ ಬರತಕ್ಕವುಗಳೇ ಚೆನ್ನಾಗಿವೆ. ವಿಲಾಯತಿ, ಜರ್ಮನಿ, ಫ್ರಾನ್ಸ್ ದೇಶಗಳಿಂದ ಬರತಕ್ಕ ದಿನಸುಗಳು ಬಹಳ ಉತ್ಕೃಷ್ಟವಾದುವುಗಳು. ಹಾಗೆ ನಯವಾಗಿಯೂ, ಒಳ್ಳೇ ರಂಗು ಉಳ್ಳವುಗಳಾಗಿಯೂ ಇರುವ ಬಟ್ಟೆಗಳನ್ನು ಮಾಡುವುದನ್ನು ನಮ್ಮ ಜನಗಳು ಇನ್ನೂ ಕಲಿಯಬೇಕು.

ಇಷ್ಟುಮಟ್ಟಿಗೆ ನಮ್ಮ ದೇಶೀಯರು ಕೆಲಸಮಾಡುತ್ತಾರೆಂದು ತೃಪ್ತರಾಗಕೂಡದು. ಇನ್ನೂ ತುಂಬಾ ಕೆಲಸಮಾಡುವುದಕ್ಕೆ ಅವಕಾಶವಿರುವುದು. ನಮ್ಮ ದೇಶದಿಂದ ಅಂದರೆ ಇಂಡಿಯಾದಿಂದ ೨೧ವರೆ ಕೋಟಿ ಪೌನಿನ ಅರಳೆಯು ದೇಶಾಂತರಕ್ಕೆ ಹೋಗುತ್ತಲಿದೆ. ದೇಶಾಂತರದಿಂದ ೩೯ ಕೋಟಿ ಪೌನಿನ ಬಟ್ಟೆಬರೆಗಳು ಬರುತ್ತಲಿವೆ. ನಮ್ಮ ದೇಶಕ್ಕೆ ಎಷ್ಟು ಬಟ್ಟೆಗಳು ಬೇಕೋ ಅಷ್ಟು ಉತ್ಪತ್ತಿಯನ್ನಾದರೂ ನಮ್ಮ ಜನಗಳೇ ಮಾಡುವಂತೆ ಏರ್ಪಾಡು ಮಾಡಬೇಕು. ಬಟ್ಟೆಬರೆಗಳು ಮಾತ್ರವೇ ಯಂತ್ರಸಹಾಯದಿಂದ ಆಗುವುದೆಂದು ತಿಳಿಯಕೂಡದು. ಅನೇಕ ಪದಾರ್ಥಗಳು ಯಂತ್ರಸಹಾಯದಿಂದ ತಯಾರಾಗುತ್ತಲಿವೆ. ಬಂಗಾಳಾದಲ್ಲಿ ಜೂಟ್ ಎಂಬ ನಾರಿನ ಕೆಲಸವು ವಿಶೇಷವಾಗಿ ನಡೆಯುವುದು. ೧೮೭೫ ರಲ್ಲಿ ಇಂಥಾ ಯಂತ್ರಗಳು ೨೮ ಇದ್ದುವು. ೧೮೯೬ ರಲ್ಲಿ ೧೮ ಮಿಲ್ಲುಗಳಾದುವು. ದಕ್ಷಿಣ ಇಂಡಿಯಾ ಮತ್ತು ಪಂಜಾಬಿನಲ್ಲಿ ತುಪಟದ ಒಟ್ಟೆಗಳನ್ನು ಮಾಡತಕ್ಕ ಕಾರ್ಖಾನೆಗಳು ೬ ಇರುವುವು. ಅವುಗಳ ಉತ್ಪತ್ತಿಯು ೧೮೯೫ ರಲ್ಲಿ ೨೫ ಲಕ್ಷ ಪೌನು ತೂಕವುಳ್ಳದಾಗಿತ್ತು. ೧೯೦೪ ರಲ್ಲಿ ೩೫ ಲಕ್ಷ ಪೌನುಗಳ ತೂಕವುಳ್ಳದಾಯ್ತು. ದಿನೇ ದಿನೇ ಕ್ರಮಕ್ರಮವಾಗಿ ಈ ಕೈಗಾರಿಕೆಗಳು ವೃದ್ಧಿಗೆ ಬರುತ್ತಲಿವೆ. ಇದು ಸಂತೋಷಕಾರಿಯಾದುದು. ರೇಷ್ಮೇ ಕೆಲಸವು ಇಂಡಿಯಾದೇಶದಲ್ಲಿ ಬಹುಕಾಲದಿಂದ ನಡೆಯುತ್ತಿತ್ತು. ೧೮ನೇ ಶತಮಾನ ಮತ್ತು ೧೯ನೇ ಶತಮಾನದಲ್ಲಿ ಮೊದಲುಭಾಗ, ಇವುಗಳಲ್ಲಿ ಈ ಕೆಲಸಕ್ಕೆ ಬಹಳ ನಿರ್ಬಂಧಗಳುಂಟಾದುದರಿಂದ ಅದು ಕ್ಷೀಣದೆಸೆಗೆ ಬಂದಿತು. ಈ ಕಸಬಿನಲ್ಲಿಯೂ ಈಚೆಗೆ ಅಲ್ಪಸ್ವಲ್ಪ ಅಭಿವೃದ್ಧಿಯು ನಡೆಯುತ್ತಲಿರುವುದು. ಇಂಡಿಯಾದೇಶದ ಅನೇಕ ಭಾಗಗಳಲ್ಲಿ ಕಾಸಾಟಾರ್ ರೇಷ್ಮೆಯು ಕೆಲಸವು ನಡೆಯುತ್ತಲಿರುವುದು ಈ ರೇಷ್ಮೇ ಬಟ್ಟೆಗಳು ಯೂರವ್‌ಖಂಡಕ್ಕೂ ರಫ್ತಾಗುತ್ತಲಿವೆ. ಅಸ್ಸಾಂ ದೇಶದಲ್ಲಿ ಹೆಂಗಸರು ರೇಷ್ಮೇ ಉಡಿಗೆಗಳನ್ನು ಹಾಕಿಕೊಳ್ಳುತ್ತಲಿದಾರೆ. ಪ್ರತಿಯೊಂದು ಕುಟುಂಬದವರೂ ತಮ್ಮ ಸೀರೆಗಳನ್ನು ರೇಷ್ಮೆಯಿಂದ ತಾವೇ ನೇಯುತ್ತಲಿದಾರೆ. ಕಾಶ್ಮೀರದಲ್ಲಿ ರೇಷ್ಮೇ ಕೆಲಸವು ಬಹುಕಾಲದಿಂದ ನಡೆಯುತ್ತಲಿದೆ. ವೃದ್ಧಿಗೆ ತರುವುದಕ್ಕೆ ಸರ್ಕಾರದವರು ಪ್ರಯತ್ನಿಸುತ್ತಲಿದಾರೆ. ಮೈಸೂರು ಸಂಸ್ಥಾನದಲ್ಲಿ ಈ ಕೆಲಸಕ್ಕೆ ವಿಶೇಷ ಗಮನವು ಕೊಡಲ್ಪಡುತ್ತಲಿದೆ. ಬರೋಡಾದಲ್ಲಿ ಇದನ್ನು ವೃದ್ಧಿನಾಡುವ ಪ್ರಯತ್ನವು ಮಾಡಲ್ಪಡುತ್ತಲಿದೆ. ರೇಷ್ಮೆಯ ಹುಳುಗಳಿಂದ ನೂಲನ್ನು ನೂಲತಕ್ಕ ಕಾರ್ಖಾನೆಗಳು ೧೯೦೪ ರಲ್ಲಿ ೭೫ ಇದ್ದುವು. ಈಗ

ರೇಷ್ಮೇಯಂತ್ರಗಳು ೧೧ ಇಂಟಾಗಿವೆ. ಗ್ರಾನೂಂತರಗಳಲ್ಲಿಯೂ ಅನೇಕ ರೈತರು ತಮ್ಮ ತಮ್ಮ ಗುಡಿಸಲುಗಳಲ್ಲಿ ರೇಷ್ಮೆಯನ್ನು ತೆಗೆಯುವ ಏರ್ಪಾಡಿರುವುದು.

ಹಿತ್ತಾಳೇ ತಾಂಬ್ರ ಮೊದಲಾದವುಗಳಿಂದ ಪಾತ್ರೆಗಳನ್ನು ಮಾಡತಕ್ಕ ಕೈಗಾರಿಕೆಯು ಈ ದೇಶದಲ್ಲಿ ಬಹು ಕಾಲದಿಂದ ಇರುವುದು. ಯೂರೋಪ್ ಖಂಡದಿಂದ ಈಚೆಗೆ ಕಲ್ಪಿಸಿದ ಪಾತ್ರೆಗಳಿಗೆ ಗಾಜಿನ ಮುಲಾಮನ್ನು ಮಾಡಿ ಬಿಕರಿಗಾಗಿ ಕಳುಹಿಸುವ ಏರ್ಪಾಡು ಆಚರಣೆಗೆ ಬಂದಿತು. ಅಲ್ಯೂಮಿನಿಯಂ ಪಾತ್ರೆಗಳನ್ನು ತಯಾರ್ಮಾಡುವ ಒಂದು ಹೊಸ ಕೆಲಸವು ಈಚೆಗೆ ಆಚರಣೆಗೆ ಬಂದಿರುವುದು. ಇದನ್ನು ವೃದ್ಧಿಗೆ ತರುವುದಕ್ಕೆ ಮದರಾಸು ಪಟ್ಟಣದ ಮೆ॥ ಫಾಟರ್‌ಟರ್ಟ್‌ರವರು ಬಹಳ ಸಹಾಯಮಾಡಿರುವರು.

ಇಂಡಿಯಾ ದೇಶದ ಮಧ್ಯಪ್ರಾಂತ್ಯದಲ್ಲಿ ಕಬ್ಬಿಣವು ವಿಶೇಷವಾಗಿ ಸಿಕ್ಕುವ ದೆಂಬ ಅಂಶವನ್ನು ಭೂಗರ್ಭಶಾಸ್ತ್ರದ ಇಲಾಖೆಯವರು ಗೊತ್ತು ಮಾಡಿರುವರು. ಈ ಕೆಲಸವು ವಿಶೇಷವೃದ್ಧಿಗೆ ಬರುವ ಸಂಭವವು ಇರುತ್ತದೆ. ಈಗ ಸಿಕ್ಕಿರತಕ್ಕ ಗಣಿಗಳಂತೆ ಕಬ್ಬಿಣದ ಗಣಿಗಳು ಇನ್ನೂ ವಿಶೇಷವಾಗಿರುತ್ತವೆ. ತಾತಾರವರ ಕಂಪೆನಿಯಹಾಗೆ ಶ್ರದ್ಧೆಯಿಂದ ಕೆಲಸಮಾಡತಕ್ಕ ಕಂಪೆನಿಗಳು ಇನ್ನೂ ಕೆಲವು ಉಂಟಾದರೆ ಈ ಕೆಲಸವು ಜಾಗ್ರತೆಯಲ್ಲಿಯೇ ವಿಶೇಷ ವೃದ್ಧಿಗೆ ಬರಬಹುದು. ಈ ದೇಶದಲ್ಲಿ ಅಲ್ಲಲ್ಲಿಯೇ ಕಲ್ಲಿದ್ದಲಿನ ಗಣಿಗಳು ಇರುವ್ರವು. ಈ ಗಣಿಗಳಿಂದ ಕಬ್ಬಿಣದ ಕೆಲಸ ನಡೆಯತಕ್ಕ ಕಾರ್ಖಾನೆಗಳಿಗೆ ಇದನ್ನು ಸಾಗಿಸುವುದಕ್ಕೆ ರೈಲುರಸ್ತೆ ಮೊದಲಾದುವುಗಳನ್ನು ಹಾಕಿ ಅನುಕೂಲಪಡಿಸಿದರೆ ಈ ಕೆಲಸವು ಇನ್ನೂ ವಿಶೇಷವಾಗಿ ನಡೆಯುವದಕ್ಕೆ ಅವಕಾಶವಾಗುವುದು ತಾತಾಕಂಪೆನಿಯವರು ರೂಢಿಸುತ್ತಲಿರುವ ಕಬ್ಬಿಣದ ಗಣಿಯನ್ನ ಮೆ॥ ಪಿ. ಎಚ್ ಬೊಸ್‌ರವರು ಕಂಡುಹಿಡಿದರು. ಈಗಣಿಯನ್ನು ರೂಢಿಸುವದಕ್ಕೋಸ್ಕರ ಮೆ॥ ತಾತಾರವರ ಮಕ್ಕಳು ೧೯೦೪ ರಲ್ಲಿ ೪೯ ಕುಲಿಮೆಗಳನ್ನು ಇಟ್ಟರು. ಈ ಕುಲಿಮೆಗಳನ್ನು ಇನ್ನೂ ಜಾಸ್ತಿಮಾಡುವದರಲ್ಲಿದಾರೆ.

ಬಂಗಾಳಾದಲ್ಲಿ ಕಲ್ಲಿದ್ದಲಿನ ಗಣಿಗಳು ಅನೇಕವಾಗಿರುತ್ತವೆ. ೧೯೦೪ ರಲ್ಲಿ ಇಂಡಿಯಾದ ಕಲ್ಲಿದ್ದಲಿನ ಗಣಿಗಳಿಂದ ಎರಡು ಕೋಟಿ ರೂಪಾಯಿ ಕಲ್ಲಿದ್ದಲು ತೆಗೆಯಲ್ಪಟ್ಟಿತು. ಎಂಭತ್ತುಲಕ್ಷ ಟನ್ ಕಲ್ಲಿದ್ದಲು ತೆಗೆಯಲ್ಪಟ್ಟಿತು. ಅದರೆ ವಿಲಾಯತಿಯಲ್ಲಿ ಪ್ರತಿವರುಷವೂ ೩೦ ಕೋಟಿ ಟನ್ ಕಲ್ಲಿದ್ದಲನ್ನು ತೆಗೆದು ಕೆಲಸಮಾಡುತ್ತಾರೆ. ಎಂಭತ್ತುಲಕ್ಷ ಟನ್‌ಗಳಲ್ಲಿ ೮೫ತಕ್ಕ ಕೆಲಸಕ್ಕೂ ಮೂವತ್ತು ಕೋಟಿ ಟನ್ ಗಳಲ್ಲಿ

ಆಗತಕ್ಕ ಕೆಲಸಕ್ಕೂ ಎಷ್ಟೋ ವ್ಯತ್ಯಾಸವು ಇರುವುದು. ಈ ದೇಶದಲ್ಲಿ ಬಂಡವಾಳದ ಅಭಾವದ ಜೊತೆಗೆ ಇಂಥಾ ಕೆಲಸಗಳನ್ನು ಮಾಡುವದಕ್ಕೆ ಬೇಕಾದ ಶಾಸ್ತ್ರಜ್ಞಾನದ ಅಭಾವವೂ ಸೇರಿರುವುದು. ಇಂಡಿಯಾ ಗವರ್ನಮೆಂಟನವರು ಗಣೀ ಕೆಲಸಗಳನ್ನು ಕಲಿತುಕೊಳ್ಳುವುದಕ್ಕಾಗಿ ಕೆಲವು ಜನ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಟ್ಟು ಕಳುಹಿಸಿರುವರು. ಕಬ್ಬಿಣದ ಕೆಲಸವು ಸಮರ್ಪಕವಾಗಿ ನಡೆಯುಬೇಕಾದರೆ ಕಬ್ಬಿಣದ ಗಣಿಗಳು ಸಿಕ್ಕಿದ ಮಾತ್ರದಿಂದಲೇ ಆಗುವುದಿಲ್ಲ ಇದರ ಜೊತೆಗೆ ಕಲ್ಲಿದ್ದಲಿನ ಗಣಿಗಳು ವಿಶೇಷವಾಗಿ ಸಿಕ್ಕಬೇಕು. ಅವುಗಳನ್ನು ರೂಢಿಸಲು ಬೇಕಾದ ಬಂಡವಾಳವೂ ಶಾಸಜ್ಞಾನವೂ ಇವೆರಡೂ ಬೇಕು.

ಸ್ಟೀಂಯಂತ್ರಗಳಿಂದ ನಡೆಯತಕ್ಕ ಕೆಲಸಗಳು ಅನೇಕವಾಗಿರುವುವು. ಇವುಗಳಲ್ಲಿ ಅರಳೇಬಟ್ಟೆಯನ್ನು ಮಾಡತಕ್ಕ ಯಂತ್ರಗಳೂ, ಜೂಟೆಂಬ ನಾರಿನ ಬಟ್ಟೆಯನ್ನು ಮಾಡತಕ್ಕ ಯಂತ್ರಗಳೂ, ತುಬಟೆದ ಬಟ್ಟೆಯನ್ನು ಮಾಡತಕ್ಕ ಯಂತ್ರಗಳೂ, ಅರಳೇ ನೂಲತಕ್ಕ ಯಂತ್ರಗಳೂ, ಅರಳೆಯನ್ನು ಶುದ್ಧಿಮಾಡತಕ್ಕ ಯಂತ್ರಗಳೂ, ಹಿಟ್ಟನ್ನು ಮಾಡತಕ್ಕ ಯಂತ್ರಗಳೂ, ಭಸ್ತವನ್ನು ಕುಟ್ಟತಕ್ಕ ಯಂತ್ರಗಳೂ, ಸಕ್ಕರೇ ಮಾಡತಕ್ಕ ಯಂತ್ರಗಳೂ, ರೇಷ್ಮೇ ತೆಗೆಯತಕ್ಕ ಯಂತ್ರಗಳೂ ರೇಷ್ಮೇ ಮಲ್‌ಗಳೂ, ಚಮಡಾದ ಯಂತ್ರಗಳೂ, ವೀಣೇ ಯಂತ್ರಗಳೂ, ಅರಗಿನ ಯಂತ್ರಗಳೂ, ಕಬ್ಬಿಣದ ಮತ್ತು ಪೆತ್ತಾಳೆ ಯಂತ್ರಗಳೂ, ನೀಲೀ ಯಂತ್ರಗಳೂ,ಇವುಗಳಲ್ಲೆಲ್ಲಾ ಈಗ ಕೆಲಸವು ನಡೆಯುತ್ತಲಿದೆ. ೧೪೯೫ರಲ್ಲಿ ಈ ಯಂತ್ರಗಳು ೧೧,೨೫೭ ಇದ್ದುವು. ೧೯೦೪ ರಲ್ಲಿ ೪೨೭೦ ಯಂತ್ರಗಳು ಜಾಸ್ತಿಯಾದುವು. ಇವುಗಳೆಲ್ಲಾ ಸ್ಟೀಂ ಶಕ್ತಿಯಿಂದ ನಡಿಸಲ್ಪಡುತ್ತವೆ. ಆದಾಗ್ಯೂ ಈ ಯಂತ್ರಶಕ್ತಿಯಿಂದ ಎಷ್ಟು ಉತ್ಪತ್ತಿಯಾಗಬೇಕೋ ಅದರಲ್ಲಿ ನಾಲ್ಕರಲ್ಲಿ ಒಂದು ಪಾಲು ಮಾತ್ರ ನಾವು ಈಗ ಉತ್ಪತ್ತಿ ಮಾಡುತ್ತಲಿದೇವೆ. ತುಪಟೆ ಮತ್ತು ಜೂಟ್ ಬಟ್ಟೆಗಳನ್ನು ನೇಯುತಕ್ಕ ಯಂತ್ರಗಳೆಲ್ಲಾ ಯೂರೋಪ್ ಖಂಡದ ಬಂಡವಾಳಸ್ಥರಿಂದ ನಡೆಸಲ್ಪಡುತ್ತಲಿವೆ:

ನಾವು ಈ ಕೈಗಾರಿಕೆಯನ್ನು ಉಪಕ್ರಮಿಸಿದ ಕಳೆದ ೧೦ ವರ್ಷಗಳಿಂದ ಸಕ್ಕರೇ ಮತ್ತು ಚಮಡಾ ಕಾರ್ಖಾನೆಗಳ ಕೆಲಸದಲ್ಲಿಯೂ ಕೂಡ ನಮ್ಮ ಜನರು ಸಮರ್ಪಕವಾದ ಕೆಲಸವನ್ನು ಮಾಡುತ್ತಿಲ್ಲ. ಕಬ್ಬಿಣ ಕೆಲಸಮಾಡುವುದರಲ್ಲಿ ಇಂಡಿಯಾಕ್ಕೆ ಎಷ್ಟು ನಾಮಾನುಬೇಕೋ ಅಷ್ಟನ್ನು ನಾವು ಮಾಡುತ್ತಿಲ್ಲ. ಈ ನಾಮಾ

ನುಗಳು ಪ್ರಾಯಿಕವಾಗಿ ದೇಶಾಂತರದಿಂದ ಬರುತ್ತಲಿವೆ. ಈ ಬಾಬುಗಳಲ್ಲೆಲ್ಲಾ ನಾವು ಶ್ರದ್ಧೆಯಿಂದ ಕೆಲಸಮಾಡಿದರೆ ನಮ್ಮ ದೇಶದ ದಾರಿದ್ರ್ಯವು ಹತವಾಗುವುದು.

ನಮ್ಮ ದೇಶದಲ್ಲಿ ಯಂತ್ರಸಹಾಯದಿಂದ ಕೆಲವು ಕೈಗಾರಿಕೆಗಳು ನಡೆಯುವುವು. ಇದಲ್ಲದೆ ತೇಯಲೆ, ನೀಲಿ, ಕಾಫಿ ಇವುಗಳನ್ನು ಬೆಳೆಯುತಕ್ಕ ಕೃಷಿಯು ನಡೆಯುವುದು. ಯಂತ್ರದ ಕಾರ್ಖಾನೆಗಳು ಅನೇಕವಾಗಿರುವುವು. ಇಲ್ಲಿ ಕೆಲಸ ಮಾಡತಕ್ಕವರೂ ಬಹುಜನಗಳಿರುವರು. ಈ ಕೆಲಸಗಳೆಲ್ಲಾ ಪಟ್ಟಣವಾಸಗಳಲ್ಲಿ ನಡೆಯುವುವು. ಗ್ರಾಮಾಂತರಗಳಲ್ಲಿ ಜನಗಳು ತಮ್ಮ ತಮ್ಮ ಮನೆಗಳಲ್ಲಿ ನಡಿಸತಕ್ಕ ಕೆಲಸಗಳು ಅನೇಕವಾಗಿರುತ್ತವೆ. ಇಂಥಾ ಕೆಲಸಗಳು ವೃದ್ಧಿಯಾದ ಹೊರತೂ ಜನಗಳ ಕಷ್ಟವು ಹತವಾಗುವುದಿಲ್ಲ. ಪಟ್ಟಣಗಳಲ್ಲಿ ಲಕ್ಷಾಂತರ ಜನಗಳು ಕೆಲಸಮಾಡುವುದುಂಟು. ಗ್ರಾಮಾಂತರಗಳಲ್ಲಿ ಸ್ತ್ರೀಪುರುಷರೆಲ್ಲರೂ ಅವರವರ ಮನೆಗಳಲ್ಲಿ ಮಾಡಿಕೊಳ್ಳಬಹುದಾದ ಕೆಲಸಗಳನ್ನು ಮಾಡುತ್ತಾ ಬಂದರೆ ಕೋಟ್ಯಂತರ ಜನಗಳಿಗೆ ಜೀವನವು ದೊರೆಯುವುದು. ಇಂಡಿಯಾದೇಶದಲ್ಲಿ ಉದ್ಯೋಗದಿಂದ ಜೀವಿಸುವುದುಕಷ್ಟವಲ್ಲ. ಜನಗಳಿಗೆಲ್ಲಾ ಜೀವನವು ಸಿಕ್ಕಬೇಕಾದರೆ ಇದೇ ಮುಖ್ಯವಾದ ಉಪಾಯ.

ನಮ್ಮ ದೇಶದಲ್ಲಿ ಅನೇಕ ಕೈಗಾರಿಕೆಗಳು ಇರುವುವು. ಅವುಗಳನ್ನು ಯಾವ ಯಂತ್ರಸಹಾಯದಿಂದ ಪಾಶ್ಚಾತ್ಯರು ಮಾಡುವರೋ ಅದನ್ನು ತಿಳಿದುಕೊಳ್ಳಬೇಕು. ಮದರಾಸಿನಲ್ಲಿ ಚಮಡಾವನ್ನು ಹದಮಾಡತಕ್ಕ ಕೆಲಸ ಒಂದು ಇರುವುದು. ಇದೇ ಕೆಲಸವನ್ನು ಅಮೇರಿಕಾಖಂಡದಲ್ಲಿ ಬಹಳ ಸುಲಭವಾಗಿ ಮಾಡುವರು. ಈ ಕೆಲಸಕ್ಕೆ ಇಂಡಿಯಾದೇಶದಲ್ಲಿ ತಗಲತಕ್ಕ ಖರ್ಚಿಗಿಂತ ಅಮೇರಿಕಾದೇಶದಲ್ಲಿ ಬಹಳ ಕಡಮೆಯಾಗಿ ಖರ್ಚಾಗುವುದು. ಇದಲ್ಲದೆ ನೀಲಿಯನ್ನು ತಯಾರುಮಾಡತಕ್ಕ ಕಾರ್ಖಾನೆಯೊಂದಿರುವುದು. ನಮ್ಮ ದೇಶದಲ್ಲಿ ನೀಲಿಯನ್ನು ಬೆಳೆಯುತ್ತಾರೆ. ಅಮೇರಿಕಾಖಂಡದಲ್ಲಿ ಯಾವ ಯಾವ ದ್ರವ್ಯಗಳು ಸೇರಿ ನೀಲಿಯಾಗುತ್ತದೋ ಅದನ್ನು ಪರೀಕ್ಷಿಸಿ ಅವುಗಳನ್ನು ಸೇರಿಸಿ ನೀಲಿಯನ್ನು ಮಾಡುತ್ತಾರೆ. ಈ ರೀತಿಯಲ್ಲಿ ಮಾಡಲ್ಪಟ್ಟ ನೀಲಿಯು ನಿರ್ಮಾಣವು ಕಲ್ಲಿದ್ದಲಿನಿಂದ ಮಾಡಲ್ಪಟ್ಟ ಟಾರಿನ ನಿರ್ಮಾಣದಂತೆ ವಸ್ತುಶಾಸ್ತ್ರದಲ್ಲಿ ಬಹಳ ಆಶ್ಚರ್ಯವನ್ನು ಉಂಟುಮಾಡಿ ಇದೆ. ದೇಶಾಂತರದ ಶಿಲ್ಪಿಗಳಿಂದ ಕೈಗಾರಿಕೇ ಕೆಲಸದವರ ಮೇಧನತ್ತಿನಿಂದ ನಮಗೆ ಭೋಜನವೂ ಬಟ್ಟೆಬರೆಗಳೂ, ಬೆಳಕೂ ಶಾಖವನ್ನುಂಟುಮಾಡುವ ಪದಾರ್ಥಗಳೂ,

ಸೌಖ್ಯವನ್ನುಂಟುಮಾಡುವ ಪದಾರ್ಥಗಳೂ, ಗಾಡಿಗಳೇಮೊದಲಾದ ಯಾನಗಳೂ ಮನೆಗಳೂ, ಇವೆಲ್ಲಾ ಸರಪರಾಜುಮಾಡಲ್ಪಡುತ್ತವೆ.

ನಮ್ಮಕೈಗಾರಿಕೆಗಳೆಲ್ಲಾ ಹೀನಸ್ಥಿತಿಗೆ ಬಂದುವು. ನಿರ್ಮೂಲವಾಗುವದರಲ್ಲಿದೆ. ಕೈಗಾರಿಕೆಗಳವಿಷಯದಲ್ಲಿ ನಾವು ಪಾಶ್ಚಾತ್ಯರಿಗೆ ದಾಸರಾಗಿ ಇದ್ದೇವೆ. ಎಲ್ಲಾ ರೋಗಗಳಿಗಿಂತಲೂ ಈಕೈಗಾರಿಕೆಗಳಿಗುಂಟಾಗಿರತಕ್ಕ ರೋಗವು ಬಹಳ ಅನರ್ಥಕಾರಿಯೂದುದು. ಇದಕ್ಕೆ ಸರಿಯಾದ ಚಿಕಿತ್ಸೆಯನ್ನು ಮಾಡದೇ ಇದ್ದರೆ ನಮ್ಮದೇಶವು ಬಹಳ ಹೀನಸ್ಥಿತಿಗೆ ಬರುವುದು. ಇದನ್ನು ತಪ್ಪಿಸುವದು ನಮಗೆ ಮುಖ್ಯಕರ್ತವ್ಯ. ಯಾವ ಯಾವ ಕೈಗಾರಿಕೆಗಳನ್ನು ನಾವು ಶೀಘ್ರದಲ್ಲಿಯೇ ಅಭಿವೃದ್ಧಿಗೆ ತಂದು ನಮ್ಮ ದೇಶೀಯರ ಆತ್ಮಾವಲಂಬನೆಗೆ ಅವಕಾಶವನ್ನುಂಡುಮಾಡಬಹುದೋ ಅದನ್ನು ಇಲ್ಲಿ ಸೂಚಿಸುತ್ತೇನೆ. ನೇಗೆಯ ಕೆಲಸ, ಬಡಗೀ ಕೆಲಸ, ಕಬ್ಬಿಣ, ತಾಂಬ್ರ ಮೊದಲಾದವುಗಳಲ್ಲಿ ಮಾಡತಕ್ಕ ಕೆಲಸ, ಚಿನ್ನ ಮತ್ತು ಬೆಳ್ಳೀಕೆಲಸ, ಗಾರೇಕೆಲಸ, ಕಲ್ಲುಕೆಲಸ, ಕುಂಬಾರಕೆಲಸ, ಬಣ್ಣಹಾಕತಕ್ಕ ಕೆಲಸ, ಚಮಡದನಾವಾನು ಮಾಡತಕ್ಕ ಕೆಲಸ, ನಾನಾವಿಧವಾದ ಹಗ್ಗಗಳನ್ನು ಮಾಡತಕ್ಕ ಕೆಲಸ, ಬೆತ್ತ ಬೊಂಬುಗಳು, ಮೊದಲಾದುವುಗಳಿಂದ ಉಪಯುಕ್ತವಾದ ಸಾಮಾನುಗಳನ್ನು ಮಾಡತಕ್ಕ ಕೆಲಸ, ಗಾಜಿನ ಕೆಲಸ, ಅರಗಿನ ಕೆಲಸ, ಕೊಂಬು ಮತ್ತು ದಂತದ ಕೆಲಸ, ಕಸೂತೀ ಕೆಲಸ, ಸಕ್ಕರೆಯನ್ನು ಮಾಡುವ ಕೆಲಸ, ಹೊಗೇಸೊಪ್ಪಿನ ಕೆಲಸ, ಎಣ್ಣೇ ತೆಗೆಯತಕ್ಕ ಕೆಲಸ, ಧಾನ್ಯಗಳನ್ನು ಯಂತ್ರಗಳಿಂದ ಹಿಟ್ಟುಮಾಡತಕ್ಕ ಕೆಲಸ, ಇವೆಲ್ಲಾ ಮೊದಲಾದ ಅನೇಕ ಕೆಲಸಗಳು ಸ್ವಶಕ್ತಿಯಿಂದ ಜೀವಿಸುವುದಕ್ಕೆ ಜನಗಳಿಗೆ ಅತ್ಯಂತ ಉಪಯುಕ್ತವಾದುವುಗಳು. ಇವುಗಳಲ್ಲಿ ಎಲ್ಲಿ ಎಲ್ಲಿ ಯಾವುಯಾವುದಕ್ಕೆ ಗಿರಾಕಿಯು ವಿಶೇಷವಾಗಿರುವುದೋ ಅದಕ್ಕೆ ಅವಕಾಶವನ್ನು ಮಾಡಬೇಕು. ಹತ್ತಿ ಮೊದಲಾದ ಅನೇಕ ಪದಾರ್ಥಗಳು ದೇಶಾಂತರಕ್ಕೆ ರವ್ತುಮಾಡಲ್ಪಟ್ಟು ಅಲ್ಲಿಂದ ಒಟ್ಟೆಬರೆಗಳಾಗಿ ತಯಾರಾಗಿ ಬರುತ್ತವೆ. ದೇಶಾಂತರದವರು ಯಂತ್ರಸಹಾಯದಿಂದ ಹೇಗೆ ಈ ಸರಕುಗಳನ್ನು ತಯಾರು ಮಾಡುತ್ತಾರೋ ಹಾಗೆಯೇ ನಾವೂ ಮಾಡುತ್ತಾ ಬಂದರೆ ದೇಶಾಂತರದಿಂದ ಬಟ್ಟೆಗಳನ್ನು ತರಿಸಿಕೊಳ್ಳುವುದಕ್ಕೆ ಬದಲು ನಮ್ಮ ದೇಶಕ್ಕೆ ಬೇಕಾದಷ್ಟು ಬಟ್ಟೇಬರೆಗಳನ್ನು ನಾವೇ ತಯಾರ್ಮಾಡಿಕೊಳ್ಳಬಹುದು. ದೇಶಾಂತರಗಳಿಗೂ ಕೂಡ ನಾವು ಕಳುಹಿಸಲೂ ಬಹುದು. ೧೯೦೫ನೇ ಇಸವಿಯಲ್ಲಿ ೧೦ ಕೋಟಿಯೂ ಅರವತ್ತುಲಕ್ಷ ರೂಪಾಯಿನ

ಎಣ್ಣೇಬೀಜವು ನಮ್ಮ ದೇಶದಿಂದ ಹೊರಕ್ಕೆ ರಫ್ತಾಯಿತು. ಹೊರಗಿನಿಂದ ಎರಡು ಕೋಟಿ ಇಪ್ಪತ್ತು ಲಕ್ಷ ಪೌನಿನ ಎಣ್ಣೆಯನ್ನು ನಾವು ತರಿಸಿಕೊಂಡೆವು. ನಮ್ಮ ದೇಶದಲ್ಲಿಯೂ ಯಣ್ಣೆಯನ್ನು ತೆಗೆಯುತಕ್ಕ ಯಂತ್ರಗಳಿವೆ. ಆದರೆ ಈ ಕೆಲಸವನ್ನು ಚೆನ್ನಾಗಿ ಮಾಡಬೇಕೆಂಬ ಶ್ರದ್ಧೆ ಮಾತ್ರ ಇಲ್ಲ. ಈ ಶ್ರದ್ಧೆಯ ಅಭಾವದಿಂದ ಕಳೆದ ೧೦ ವರುಷಗಳಲ್ಲಿ ೪೫ ಯಂತ್ರಗಳು ಕೆಲಸಮಾಡತಕ್ಕವರಿಲ್ಲದೆ ಮಣ್ಣು ಹಿಡಿಯುವುದಕ್ಕೆ ಉಪಕ್ರಮವಾಯಿತು. ಇದಕ್ಕೆ ಕಾರಣ ಉಂಟು. ದೇಶಾಂತರದಲ್ಲಿ ಬಹಳ ಸುಲಭವಾಗಿ ಯಣ್ಣೆಯನ್ನು ತೆಗೆಯುತಕ್ಕ ಯಂತ್ರಗಳು ಉಪಯೋಗದಲ್ಲಿವೆ. ಅಂಥಾ ಯಂತ್ರಗಳನ್ನು ನಾವು ಕಲ್ಪಿಸಿಕೊಂಡಿಲ್ಲ. ಯಣ್ಣೇ ಬೀಜಗಳನ್ನು ದೇಶಾಂತರಗಳಿಗೆ ಕಳುಹಿಸುವುದು ಲಾಭಕರವಾಗಿರುವುದೇ ಹೊರತು ಎಣ್ಣೆಯನ್ನು ಮಾಡಿ ಕಳುಹಿಸುವುದು ಲಾಭಕರವಾಗಿಲ್ಲ. ಇದರಿಂದಲೇ ಜನಗಳು ಬೀಜಗಳನ್ನು ದೇಶಾಂತರಕ್ಕೆ ಕಳುಹಿಸುವುದನ್ನು ಇಟ್ಟುಕೊಂಡಿರುತ್ತಾರೆ. ಇದರಿಂದ ಬಹಳ ಅನರ್ಥ ಉಂಟು. ನಾವೇ ಎಣ್ಣೆಯನ್ನು ಮಾಡಿ ದೇಶಾಂತರಕ್ಕೆ ಕಳುಹಿಸಿದರೆ, ಎಣ್ಣೆಮಾತ್ರ ರಫ್ತಾಗುವುದು.

ಜವಿಾನಿನ ಅಭಿವೃದ್ಧಿಗೆ ಅತ್ಯತ್ಕೃಷ್ಟವಾದ ಗೊಬ್ಬರವಾಗುವ ಪದಾರ್ಥಗಳು ನಮ್ಮ ದೇಶದಲ್ಲಿಯೇ ಉಳಿಯುವುದು. ನಮ್ಮ ಭೂಮಿಯು ಫಲವತ್ತಾಗುವುದಕ್ಕೆ ಇದು ಅತ್ಯಂತ ಸಾಧಕವಾಗುವುದು. ಎಣ್ಣೇ ಬೀಜವನ್ನು ದೇಶಾಂತರಕ್ಕೆ ಕಳುಹಿಸುವುದರಿಂದ ನಮ್ಮ ದೇಶದ ಜವಿಾನಿನ ಫಲವತ್ತಿಗೆ ಸಾಧಕವಾದ ಪದಾರ್ಥಗಳೂ ಕೂಡ ದೇಶಾಂತರಕ್ಕೆ ಕಳುಹಿಸಲ್ಪಡುವುವು. ಇದಲ್ಲದೆ ಧಾನ್ಯಗಳನ್ನೂ ಕೂಡ ನಾವು ದೇಶಾಂತರಗಳಿಗೆ ವಿಶೇಷವಾಗಿ ಕಳುಹಿಸುತ್ತಲಿದೇವೆ. ದೇಶಾಂತರದಿಂದ ಹಿಟ್ಟನ್ನು ತರಿಸಿಕೊಳ್ಳುತ್ತೇವೆ. ಧಾನ್ಯವನ್ನು ಹಿಟ್ಟು ಮಾಡತಕ್ಕ ಕೆಲಸದಲ್ಲಿ ಬೊಂಬಾಯಿ ಪಟ್ಟಣದಲ್ಲೆಲ್ಲಾ ೭೬ ಸಾವಿರ ಜನಗಳಿಗೆ ಕೆಲಸ ಸಿಕ್ಕುತ್ತದೆ. ನಮ್ಮ ದೇಶದಲ್ಲಿ ಬೆಳೆದ ಗೋಧಿ ಮೊದಲಾದವುಗಳಿಂದ ದೇಶಾಂತರದಲ್ಲಿ ಕೋಟ್ಯಂತರ ಜನಗಳಿಗೆ ಉದ್ಯೋಗವು ಸಿಕ್ಕುವುದು. ಇದರಿಂದಲೇ ಸ್ವಂತವಾಗಿ ಕೈಗಾರಿಕೆಗಳನ್ನು ಮಾಡುವುದರಿಂದ ಜೀವನವನ್ನು ಹೇಗೆ ಸಂಪಾದಿಸಿಕೊಳ್ಳಬಹುದೋ ಆ ವಿಷಯವನ್ನು ನಾವು ತಿಳಿದುಕೊಂಡಿಲ್ಲವೆಂಬುವುದು, ಸ್ಪಷ್ಟವಾಗುತ್ತದೆ. ಈ ವಿಷಯವನ್ನು ಪರ್ಯಾಲೋಚಿಸಿ ಉದ್ಯೋಗದಿಂದ ಸುಲಭವಾಗಿ ಉದರಪೋಷಣೆಯನ್ನು ಮಾಡಿಕೊಳ್ಳುವುದಕ್ಕೆ ನಮ್ಮ ಜನಗಳಿಗೆ ತಕ್ಕ ಸೌಲಭ್ಯವನ್ನು ಕಲ್ಪಿಸಬೇಕು.

ದೇಶದ ಪ್ರಜೆಗಳಲ್ಲಿ ಅತಿವೃಷ್ಟಿ ಅನಾವೃಷ್ಟಿಯು ದೆಸೆಯಿಂದ ಬಹಳವಾಗಿ ಹತರಾಗತಕ್ಕವರ್ಯಾರು, ಎಂದು ಇಲ್ಲಿ ಪರ್ಯಾಲೋಚಿಸಬೇಕು. ಕೃಷಿಯಿಂದ ಜೀವಿಸತಕ್ಕವರು ಎಂಥಾ ಕಷ್ಟಕಾಲದಲ್ಲಿಯೂ ದೇಹಧಾರಣೆಯನ್ನು ಮಾಡುವು ದಕ್ಕೆ ಸಾಕಾದಷ್ಟು ದವಸವನ್ನು ಹೇಗಾದರೂ ಹೊಂದುವರು. ಎಂಥಾ ಕ್ಷಾಮ ಬಂದಾಗ್ಯೂ ಇವರಿಗೆ ತೊಂದರೆಯು ಬರುವುದಿಲ್ಲ. ಕೈಗಾರಿಕೆಗಳಿಂದಲೂ ಕೂಲಿ ಯಿಂದಲೂ ಜೀವನಮಾಡತಕ್ಕವರಿಗೆ ಹೀಗಾಗುವುದಿಲ್ಲ. ಬಹುಜನ ಕೂಲಿಯುವ ರಿಗೆ ಸುಭಿಕ್ಷವಾಗಿಯೂ ದವಸಗಳು ಅಗ್ಗವಾಗಿಯೂ ಇರುವ ಕಾಲದಲ್ಲಿ ತೊಂದರೆಗ ಳ್ಯಾವುದೂ ಇರುವುದಿಲ್ಲ. ದವಸ ಧಾನ್ಯಗಳು ತಗ್ಗಾದ ಕಾಲದಲ್ಲಿ ಇವರು ಸಂಪಾ ದಿಸತಕ್ಕ ಕೂಲಿಗೆ ಇವರಿಗೆ ಬೇಕಾದಷ್ಟು ಧಾನ್ಯವು ಸಿಕ್ಕುವುದಿಲ್ಲ. ಆಗ ದೇಹಧಾ ರಣೆಗೆ ಬೇಕಾದಷ್ಟು ಅನ್ನೋದಕಗಳು ಸಿಕ್ಕದೇ ಹೋಗುವುದರಿಂದ ಅವರಿಗೆ ಅನಿ ವಾರಿಣೀಯವಾದ ರೋಗಗಳೂ ಅಕಾಲಮರಣಗಳೂ ಸಂಭವಿಸುವುವು. ಇಂಥಾ ಅನರ್ಥಗಳೆಲ್ಲಾ ಗ್ರಾಮಾಂತರದಲ್ಲಿರತಕ್ಕ ಕೈಗಾರಿಕೆಯವರಿಗೂ ಕೂಲಿಯವರಿಗೂ ಮಾತ್ರವೇ ಅಲ್ಲದೆ ಪುರನಿವಾಸಿಗಳಿಗೂ ಕೂಡ ಸಂಭವಿಸುವುವು. ಕಂಚುಗಾರರು, ಹಿತ್ತಾಳೆ ತಾಂಬ್ರ ಮೊದಲಾದ ಲೋಹಗಳಲ್ಲಿ ಕೆಲಸಮಾಡತಕ್ಕವರು, ಕುಂಬಾರರು, ಕಬ್ಬಿಣಕೆಲಸದವರು, ಬಡಗಿಯವರು, ಕಾರಖಾನೆಗಳಲ್ಲಿ ಕೂಲೀ ಮಾಡತಕ್ಕವರು, ಇವರುಗಳಲ್ಲಿ ಅನೇಕರು ಕ್ಷಾಮವು ಬಂದ ಕೂಡಲೆ ಅಕಾಲಮರಣಕ್ಕೆ ಗುರಿಯಾಗು ವರು. ಅವರ ಮನೇ ಮಠಗಳನ್ನೂ, ಅವರು ಪಡುವ ಕಷ್ಟಗಳನ್ನೂ ಅವರ ದರಿ ದ್ರಾವಸ್ಥೆಯನ್ನೂ ಇದರಿಂದ ಉಂಟಾಗತಕ್ಕ ರೋಗಾದಿಗಳನ್ನೂ ಇದರಿಂದ ಅವ ರಿಗೆ ಉಂಟಾಗತಕ್ಕ ಅಕಾಲಮರಣಗಳನ್ನೂ ನೋಡಿದರೆ ಯಾರಿಗೆ ತಾನೇ ಸಂಕಟ ವಾಗುವುದಿಲ್ಲ?

ಇಂಥಾ ಕಷ್ಟಗಳನ್ನು ತಪ್ಪಿಸುವುದು ಕರ್ತವ್ಯವಾದುದು. ಇದು ಸುಲಭ ವಾದ ಕೆಲಸವಲ್ಲ. ಆದಾಗ್ಯೂ ಈ ಕಷ್ಟಗಳನ್ನು ತಪ್ಪಿಸುವುದು ಮುಖ್ಯ ಕರ್ತವ್ಯ ಯಾವ ಜನಾಂಗದವರು ಕೈಗಾರಿಕೆಗಳನ್ನು ಮಾಡುವುದಕ್ಕೆ ನೂತನವಾದ ಯಂತ್ರ ವಿಶೇಷಗಳನ್ನು ಉಪಯೋಗಿಸುವರೋ ಅವರೊಡನೆ ನಾವು ಪೋಟಾಪೋಟಿಯನ್ನು ಮಾಡಬೇಕು ಆದರೆ ಕೈ ಕೆಲಸದಿಂದ ಪೋಟಾಪೋಟಿಯನ್ನು ಮಾಡುವುದಕ್ಕಾಗುವು ದಿಲ್ಲ. ನಾವು ಅವರಂತೆ ಯಂತ್ರಗಳನ್ನು ಉಪಯೋಗಿಸಬೇಕು. ಯಂತ್ರಗಳನ್ನು ಉಪಯೋಗಿಸಬೇಕಾದರೆ ಅವುಗಳನ್ನು ನಿರ್ಮಾಣಮಾಡುವುದನ್ನು ತಿಳಿದುಕೊಳ್ಳ ಬೇಕು. ಯಂತ್ರನಿರ್ಮಾಣಶಕ್ತಿಯಲ್ಲಿ ನಾವು ಪಾಶ್ಚಾತ್ಯರಿಗಿಂತಲೂ ಹೆಚ್ಚಾಗ

ಬೇಕು. ನಮ್ಮಲ್ಲಿ ಯಂತ್ರಗಳನ್ನು ಮಾಡುವದು ಈಗತಾನೇ ಉಪಕ್ರಮವಾಗಿ ಇದೆ. ಕುಲುಮೆಗಳನ್ನು ಇಟ್ಟು ಪಾಶ್ಚಾತ್ಯರಂತೆ ಭಾರೀಕೆಲಸಗಳನ್ನು ಮಾಡುವುದು ಕೂಡ ಈಗತಾನೇ ನಮ್ಮಲ್ಲಿ ಉಪಕ್ರಮವಾಗಿ ಇದೆ. ನಮ್ಮ ಜನಗಳಲ್ಲಿ ಹೊಸಕೆಲಸಗಳನ್ನು ಮಾಡುವ ಧೈರ್ಯವು ಜನಗಳಿಗಿಲ್ಲ. ಹೊಸ ಕೆಲಸವನ್ನು ಉಪಕ್ರಮಿಸಿದರೆ ಮೊದಲಿನಲ್ಲಿ ಕೆಲಸವು ಕೆಡುವುದೂ ಲುಕ್ಸಾನಾಗುವುದೂ ಉಂಟು. ಯಾವ ಕೆಲಸ ಸಮಗ್ರವಾಗಿ ಬರಬೇಕಾದರೂ ಪ್ರಥಮತಃ ತಪ್ಪುಗಳನ್ನು ಮಾಡಿ ಅದನ್ನು ತಿದ್ದುಕೊಂಡು ಹೀಗೆಯೇ ಅನೇಕಾವರ್ತಿ ಆದಮೇಲೆ ತಪ್ಪಿಲ್ಲದೆ ಮಾಡುವ ಸಾಮರ್ಥ್ಯವು ದೊರೆಯುವುದು. ತಪ್ಪುಮಾಡಿದ ಮಾತ್ರದಿಂದಲೇ ಹೆದರಿಕೊಂಡು ಕೆಲಸ ಮಾಡುವುದನ್ನು ಬಿಟ್ಟರೆ ಹಾಗೆ ಕೆಲಸಬಿಡತಕ್ಕವರು, ಎಂದಿಗಾದರೂ ವೃದ್ಧಿಗೆ ಬರುವರೇ? ಸ್ಟೀಮ್ ಎಂಜಿನ್‌ಗಳೂ ವಿದ್ಯುಚ್ಛಕ್ತಿಯ ಎಂಜಿನ್‌ಗಳೂ ಈಗ ತಯಾರಾಗುತ್ತಲಿವೆ. ದೇಶದಿಂದ ದೇಶಕ್ಕೆ ಸಂಚಾರವು ಸುಲಭವಾಗುತ್ತಲಿದೆ. ಒಂದು ದೇಶದ ವರ್ತಮಾನ ಮತ್ತೊಂದು ದೇಶಕ್ಕೆ ತಿಳಿಯುವಂತೆ ಮಾಡುವ ಏರ್ಪಾಡುಗಳು ವಿಶೇಷವಾಗುತ್ತಲಿವೆ. ಲೋಕವ್ಯವಹಾರಜ್ಞಾನವನ್ನು ಸಂಪಾದಿಸುವದಕ್ಕೆ ಸಾಧನಗಳನ್ನೂ ಹೇಳುತ್ತಲಿವೆ. ಸಮಸ್ತ ಭೂತವಸ್ತುಗಳನ್ನೂ ಹತೋಟಿಯಲ್ಲಿಟ್ಟುಕೊಂಡು ಅವುಗಳಿಂದ ಕೆಲಸವನ್ನು ತೆಗೆಯುವ ವಿಧಾನಗಳೂ ರೂಢಿಗೆ ಬರುತ್ತಲಿವೆ. ಇಂಥಾ ಕೆಲಸಗಳನ್ನೆಲ್ಲಾ ಜೆನ್ನಾಗಿ ಮಾಡಿಸುವದರಲ್ಲಿ ನಾವು ಉದ್ಯುಕ್ತರಾಗುತ್ತಾ ಬಂದರೆ ಸುಖವಾದ ಜೀವಿಕೆಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಜನರಿಗೆ ಶಕ್ತಿಯನ್ನುಟುಮಾಡುವುದು ಕಷ್ಟವಲ್ಲ. ಇಂಥಾ ಮಹಾತ್ಕಾರ್ಯಗಳಿಗೆ ಬೇಕಾದುದು ಬಂಡವಾಳ. ಈ ಬಂಡವಾಳವನ್ನು ಅನುಕೂಲಪಡಿಸುವುದಕ್ಕೆ ಪರಸ್ಪರ ಸಹಾಯದ ಏರ್ಪಾಡುಗಳು ಬಹಳ ಪ್ರಯೋಜನಕರವಾದುವುಗಳು. ಇವುಗಳ ಮರ್ಮಗಳನ್ನು ಜನಗಳಿಗೆ ತಿಳಿಸಿದರೆ ಅವರು ಅಸಹಾಯ ಶೂರರಾಗಿ ತಮ್ಮ ಕೆಲಸಗಳನ್ನು ಮಾಡುವುದರಲ್ಲಿ ಸಂದೇಹವಿಲ್ಲ. ಕಾಲವು ಬಹಳ ಬೆಲೆಯುಳ್ಳದೆಂಬುದಾಗಿ ಜನಗಳು ತಿಳಿದುಕೊಂಡು ಅದನ್ನು ಕೆಲಸಗಳ ಮರ್ಮಗಳನ್ನು ತಿಳಿದುಕೊಳ್ಳುವುದರಲ್ಲಿ ವಿನಿಯೋಗಿಸುತ್ತಾ ಬಂದರೆ ಅದರಿಂದ ಎಷ್ಟೋ ಪ್ರಯೋಜನವಾಗಬಹುದು.

ಸ್ವದೇಶೀ ಏರ್ಪಾಡುಗಳು ಜನಗಳಿಗೆ ಆತ್ಮಾವಲಂಬನೆಯನ್ನುಂಟುಮಾಡತಕ್ಕ ಕೆಲಸಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಬಹಳ ಸಾಧಕವಾದುವುಗಳು. ಸ್ವದೇಶೀ ಮರ್ಮಗಳನ್ನು ಚನ್ನಾಗಿ ತಿಳಿದುಕೊಂಡರೆ ಅದರಿಂದ ಬಹಳ ಪ್ರಯೋಜನವುಂಟಾಗುವುದು. ಸ್ವಲ್ಪ ಖರ್ಚಿನಲ್ಲಿ ತುಂಬಾ ಉತ್ಪತ್ತಿಯನ್ನು ಮಾಡುವುದು ಸ್ವದೇಶೀ ಏರ್ಪಾಡಾಗಿರುವುದು. ಸ್ವದೇಶೀ ಸರಕುಗಳಿಗಿಂತಲೂ, ವಿದೇಶೀ ಸರಕುಗಳು ನಯವಾಗಿಯೂ, ಸುಲಭವಾಗಿಯೂ ಇರುವುದುಂಟು. ನಯವನ್ನೂ ಸೌಲಭ್ಯವನ್ನೂ ಉಂಟುಮಾಡಬೇಕಾದರೆ ಕ್ರಮಕ್ರಮವಾಗಿ ಅಭ್ಯಾಸವನ್ನು ಹೆಚ್ಚಿಸಬೇಕು.

ಹೆಚ್ಚು ಅಭ್ಯಾಸವಾದ ಹಾಗೆಲ್ಲಾ ನಯವೂ ಸೌಲಭ್ಯವೂ ಉಂಟಾಗುವುದು. ಇವೆ ರಡನ್ನೂ ಸಂಪಾದಿಸಬೇಕಾದರೆ ಆದಿಭಾಗದಲ್ಲಿ ಪ್ರೋತ್ಸಾಹರೂಪವಾದ ಗಿರಾಕಿ ಯೂ ಬೇಕು. ಅಂಥಾ ಗಿರಾಕಿಯು ಬಾರದೇ ಇದ್ದರೆ ನಯವೂ ಸೌಲಭ್ಯವೂ ಬರುವುದೇ ಇಲ್ಲ. ಇದಕ್ಕಾಗಿ ಆದಿಭಾಗದಲ್ಲಿ ಸ್ವಲ್ಪ ನಷ್ಟವನ್ನು ಹೊಂದುವು ದಕ್ಕೂ ಕೂಡ ಮನಸ್ಸುಮಾಡಬೇಕು. ವಿದೇಶೀ ಸರಕುಗಳು ಸುಲಭ ಖರೀದಿಗೆ ಸಿಕ್ಕಿದಾಗ್ಯೂ ಸ್ವದೇಶೀ ಸರಕುಗಳು ಸ್ವಲ್ಪ ತಗ್ಗಾಗಿದ್ದಾಗ್ಯೂ ಸ್ವದೇಶೀ ಸರಕುಗ ಳಿಗೇ ನಾವು ಗಿರಾಕಿಯನ್ನು ಕೊಡಬೇಕು. ಹಾಗೆ ಕೆಲವು ದಿವಸಗಳು ಮಾಡಿ ಪಾಶ್ಚಾತ್ಯರಲ್ಲಿ ರೂಢಿಯಾಗಿರುವ ಯಂತ್ರಗಳನ್ನು ನಿರ್ಮಾಣಮಾಡಿಕೊಳ್ಳುವುದಕ್ಕೂ ಅಂಥಾ ಯಂತ್ರಗಳಿಂದ ಕೆಲಸವನ್ನು ಮಾಡಿಸುವುದಕ್ಕೂ ತಕ್ಕ ಏರ್ಪಾಡನ್ನು ಮಾ ಡುತ್ತಾ ಬಂದರೆ ಅದರಿಂದ ನಮ್ಮ ದೇಶದ ದುರವಸ್ಥೆಯು ಪರಿಹಾರವಾಗುವುದು. ಹೀಗೆ ಮಾಡಬೇಕಾದರೆ ನಮ್ಮ ದೇಶೀಯರೆಲ್ಲರಿಗೂ ದೇಶಾಭಿಮಾನ ಉಂಟಾಗ ಬೇಕು. ಸ್ವದೇಶೀ ಏರ್ಪಾಡುಗಳಿಗೆ ಎಲ್ಲರೂ ಸಹಾಯ ಮಾಡಬೇಕು. ಪಾಶ್ಚಾ ತ್ಯರು ಸ್ವದೇಶೀ ಏರ್ಪಾಡುಗಳನ್ನು ಮಾಡಿಕೊಳ್ಳುವುದರಲ್ಲಿ ಅತ್ಯಂತ ನಿಪುಣರು. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ—ನಮ್ಮ ದೇಶದಲ್ಲಿ ಸಕ್ಕರೆಯ ಕಾರ್ಖಾನೆಗಳು ಒಂದಾನೊಂದು ಕಾಲದಲ್ಲಿ ಬಹಳ ವಿಶೇಷವಾಗಿದ್ದುವು. ಕಬ್ಬಿನಿಂದ ಸಕ್ಕರೆಯು ವಿಶೇಷವಾಗಿ ಮಾಡಲ್ಪಡುತ್ತಿತ್ತು. ಆಗ ಜರ್ಮನೀ ಮತ್ತು ಆಸ್ಟ್ರಿಯಾ ಹಂಗೇರಿಯವರು ಅವರ ದೇಶದ ಸಕ್ಕರೆಯನ್ನು ನಮ್ಮ ದೇಶಕ್ಕೆ ಕಳುಹಿಸುವ ಏರ್ಪಾ ಡನ್ನು ಮಾಡಿದರು. ಅಂಥಾ ಸಕ್ಕರೆಗಳಿಗೆ ಈ ದೇಶದಲ್ಲಿ ಸುಂಕಗಳನ್ನು ಹಾಕುವ ದಕ್ಕೆ ಉಪಕ್ರಮಿಸಿದಾಗ್ಯೂ ಆ ಸುಂಕವನ್ನು ಕೊಟ್ಟು ನಮ್ಮದೇಶದ ಸಕ್ಕರೆಗಿಂ ತಲೂ, ಸುಲಭಕ್ರಯಕ್ಕೆ ಮಾರುವದಕ್ಕೆ ಉಪಕ್ರಮಿಸಿದರು. ಇದರಿಂದ ನಮ್ಮದೇ ಶದ ಸಕ್ಕರೆಯ ನಿರ್ಮಾಣವು ಮೂಲೆಗೆ ಬಿತ್ತು. ಅವರ ದೇಶದಲ್ಲಿ ಸಕ್ಕರೆಯು ಉತ್ಪ ತ್ತಿಯು ಹೆಚ್ಚುತ್ತಾ ಬಂದಿತು. ಇದರ ಕಾರಣವನ್ನು ಪರಿಶೀಲಿಸಿದರೆ ಅವರ ಗವರ್ನ ಮೆಂಟಿನವರು ಬುದ್ಧಿಶಾಲಿಗಳೆಂಬುದಾಗಿಯೂ ನಮ್ಮ ದೇಶದ ಗವರ್ನಮೆಂಟಿನವರು ಪ್ರಜೆಗಳ ಯೋಗಕ್ಷೇಮಚಿಂತೆಯನ್ನು ಹೇಗೆ ಮಾಡಬೇಕೋ ಅದನ್ನು ಅರಿಯದವ ರೆಂಬುದಾಗಿಯೂ ಜನ್ಮಾಗಿ ಗೊತ್ತಾಗುತ್ತದೆ. ನಮ್ಮ ದೇಶದ ಸಕ್ಕರೆಗೆ ಗಿರಾಕಿಯು ತಪ್ಪದೇ ಇರಲೆಂದು ನಮ್ಮ ಸರಕಾರದವರು ಸಕ್ಕರೆಗಳಿಗೆ ಸುಂಕವನ್ನು ಹಾಕಿದರೆ ಅದಕ್ಕೆ ಹೆದರಿಕೊಂಡು ಅವರು ಸಕ್ಕರೆಯನ್ನು ತಯಾರು ಮಾಡುವುದನ್ನು ಬಿಟ್ಟುಬಿ ಟ್ಟರೆ ಅವರ ದೇಶೀಯರಲ್ಲಿ ಸಕ್ಕರೆಯನ್ನು ತಯಾರುಮಾಡತಕ್ಕ ಬಹುಜನಗಳಿಗೆ ಜೀ ವನವೇ ತಪ್ಪುತ್ತಿತ್ತು. ಅವರ ಜೀವನಕ್ಕೆ ಬಾಧಕ ಬರಕೂಡದೆಂಬುದೇ ಇವರ ಗವರ್ನಮೆಂಟಿನವರ ಉದ್ದೇಶವಾಗಿತ್ತು. ನಮ್ಮ ದೇಶದಲ್ಲಿ ಎಷ್ಟು ಸುಂಕವು ಬಿ ತ್ತೋ ಅಷ್ಟು ಹೊಬಲಗನ್ನು ಅವರಿಗೆ ಅವರ ಸರಕಾರದವರು ಉಚಿತವಾಗಿ ಕೊಡು

* ವಿದ್ಯಾದಾಯಿನಿ. *

ಭಾಗ ೧೫.] ಫೆಬ್ರವರಿ—೧೯೦೭. [ಸಂಚಿಕೆ ೨.

ವಿದ್ಯಾಭ್ಯಾಸ.

(೪ನೆಯ ಪುಟದ ಶೇಷ)

ಹೆಚ್ಚು ಜನರಿಗೆ ದೇಹಶಾಸ್ತ್ರದ ಗಂಧಗಾಳಿಯೇ ಇಲ್ಲ. ಇದನ್ನು ತೋರಿಸಲು ಅಧಿಕ ಪ್ರಯತ್ನವು ಬೇಕಾಗಿಲ್ಲ. ಅನೇಕರನ್ನು ಕೇಳಿದ್ದಾದರೆ ಆ ಶಾಸ್ತ್ರ ವಿಷಯವು ತಮಗೆ ಗೊತ್ತಿಲ್ಲವೆಂದು ಅವರೇ ಹೇಳುವರು. ಕೆಲವರು ಆ ಶಾಸ್ತ್ರದಿಂದೇನು ಪ್ರಯೋಜನವೆಂದು ಆಕ್ಷೇಪಿಸಿ ಅದರ ಜ್ಞಾನವು ತಮಗವಶ್ಯಕವಿಲ್ಲವೆನ್ನುವರು. ಅದರೆ ಯಾರಿಗಾದರೂ ಗ್ರೀಕ್‌ಭಾಷೆಯುಲ್ಲಿ ಬಂದು ವ್ಯಕ್ತಿಯ ಹೆಸರನ್ನು ಸರಿಯಾಗಿ ಉಚ್ಚರಿಸಲಿಕ್ಕೆ ಬಾರದಿದ್ದರೆ, ಅವರನ್ನು ಕಂಡು ನಗುವರು. ಮತ್ತು ಅಂಥಾದ್ಯತೋಚ್ಚಾರಣೆ ಮಾಡುವುದು ಮಹಾ ದೋಷವೆಂದು ಭಾವಿಸುವರು. ಗ್ರೀಕ್ ದೇವತೆಗಳ ಪುರಾಣ ಕಥೆಗಳು ಗೊತ್ತಿಲ್ಲದೆ ಇರುವ್ದದು ಅವಮಾನವೆಂದು ಆಲೋಚಿಸುವರು. ಆದರೆ ದೇಹಶಾಸ್ತ್ರವು ತಮಗೆ ತಿಳಿಯುದೆಂದು ಹೇಳಲು ಅವರು ಸ್ವಲ್ಪವೂ ನಾಚಿಕೊಳ್ಳುವುದಿಲ್ಲ. ಯುಸ್ಟೇಸಿಯನ್ ನಾಳಗಳು ಎಲ್ಲಿವೆ? ಮಹಾರಜ್ಜುವಿನ ಕಾರ್ಯವೇನು? ಆರೋಗ್ಯದಲ್ಲಿ ನಾಡಿಯ ಗತಿ ಎಷ್ಟು? ಪುಪ್ಪುಸಗಳು ಗಾಳಿಯಿಂದ ಹೇಗೆ ತುಂಬಲ್ಪಡುವುವು? ಎಂದು ಮೊದಲಾಗಿ ಪ್ರಶ್ನೆಗಳನ್ನು ಕೇಳಿದರೆ ಅವು ತಮಗೆ ಗೊತ್ತಿಲ್ಲವೆಂದು ಸ್ವಲ್ಪವೂ ನಾಚಿಕೆಪಡದೆ ಪ್ರತ್ಯುತ್ತರ ಕೊಡುವರು.

ಆದರೆ ಇವರು ಈಗ್ಗೆ ಎರಡು ಸಾವಿರ ವರ್ಷಗಳ ಮುಂಚೆ ವಾಸವಾಗಿದ್ದ ಗ್ರೀಕರ ಮತ್ತು ರೋಮನರ ಮೂಢಭಕ್ತಿಯುಕ್ತವಾದ ಪುರಾಣಗಳನ್ನೂ ಇತಿಹಾಸಗಳನ್ನೂ ತಪ್ಪು ಮಕ್ಕಳಿಗೆ ಕಲಿಸುವುದರಲ್ಲಿ ತುಂಬಾ ಆಸಕ್ತರಾಗಿರುವರೇ ಹೊರತು ತಮ್ಮ ಮಕ್ಕಳು ಸ್ವಂತ ದೇಹವಿಷಯವನ್ನು ಕಲಿಯಬೇಕಾದುದು ಅತ್ಯಾವಶ್ಯಕವೆಂದು ಸ್ವಲ್ಪವೂ ಪರ್ಯಾಲೋಚಿಸುವುದಿಲ್ಲ. ಬೇರೆ ಕೆಲವರು ಮಕ್ಕಳಿಗೆ ದೇಹವಿ

ಷಯವನ್ನೇ ಕಲಿಸಕೂಡದೆಂದು ಹೇಳುವರು. ಇದೆಲ್ಲಾ ಪುರಾತನ ಪದ್ಧತಿಯ ಪ್ರೇರಣೆಯಾಗಿರುವುದು. ಅದರೆ ಅಧಿಕಾರವು ಅತಿ ಪ್ರಬಲವಾಗಿರುವುದರಿಂದ ಹೆಚ್ಚು ಜನರು ಅದನ್ನು ವಿಾರಿ ನಡೆಯುವಲಾರರು. ಈ ರೀತಿಯಲ್ಲಿ ನಮ್ಮ ಈಗಿನ ಪಾಠಶಾಲೆಗಳ ವಿದ್ಯಾಭ್ಯಾಸ ಕ್ರಮವು ಅತ್ಯಂತ ಪ್ರಯೋಜನಕರವಾದ ದೇಹ ಶಾಸ್ತ್ರವನ್ನು ತಳ್ಳಿಬಿಟ್ಟು ಕೇವಲ ಅಲಂಕಾರಪ್ರಾಯವಾದ ಪ್ರಾಚೀನರ ಕಟ್ಟು ಕಥೆಗಳ ಪಠಣಕ್ಕೆ ಅವಕಾಶವನ್ನು ಕೊಟ್ಟಿರುವುದು. ಇದು ಬಹು ಶೋಚನೀಯ ವಾಗಿರುವುದು. ಇಂಥಾ ವೈಪರೀತ್ಯವನ್ನು ಕೂಡಲೇ ತೆಗೆದುಹಾಕಿ ಸರಿಯಾದ ಏರ್ಪಾಟನ್ನು ಮಾಡುವುದು ಅತ್ಯಾವಶ್ಯಕವಾಗಿರುವುದು.

ಜೀವನಕ್ಕೆ ಬೇಕಾದ ಆಹಾರ ಮತ್ತು ಇತರ ಸಾಮಗ್ರಿಗಳನ್ನು ಹೊಂದಲಿಕ್ಕೆ ಬೇಕಾದ ನಿದ್ಯೆಗಳನ್ನು ಕುರಿತು ಹೆಚ್ಚಾಗಿ ಹೇಳಬೇಕಾದ ಅವಶ್ಯಕವಿಲ್ಲ. ಅಂಥಾ ವಿದ್ಯೆಗಳನ್ನು ಮಕ್ಕಳಿಗೆ ಕಲಿಸುವುದು ಅವಶ್ಯಕವೆಂದು ಎಲ್ಲರೂ ಒಪ್ಪಿಕೊಳ್ಳುವರು, ಮತ್ತು ಅನೇಕರು ಜೀವನ ಸಾಮಗ್ರಿ ಸಂಪಾದನೆಗೆ ಬೇಕಾದ ವಿದ್ಯೆಗಳನ್ನು ಕಲಿಯುವುದೇ ವಿದ್ಯಾಭ್ಯಾಸವೆಂದು ತಿಳಿದುಕೊಂಡಿರುವರು. ಜೀವಿಕೆಯ ವಿದ್ಯೆಯು ಅತ್ಯಾವಶ್ಯಕವಾದುದು ಅದನ್ನು ಮಕ್ಕಳಿಗೆ ಅಗತ್ಯವಾಗಿ ಕಲಿಸಬೇಕು ಎಂದು ಹೇಳುವರು. ಆದರೆ ಅದಕ್ಕೆ ತಕ್ಕ ವಿದ್ಯೆಗಳು ಯಾವುವೆಂದು ವಿಚಾರ ಮಾಡುವುದು ಕಡಿಮೆ. ಓದುಬರಹ ಲೆಕ್ಕಗಳು ಪ್ರಯೋಜನಕರವಾದ ವಿದ್ಯೆಗಳೆಂದು ತಿಳಿದು ಅವನ್ನು ಮಕ್ಕಳಿಗೆ ಕಲಿಸುವುದರಲ್ಲಿ ಆಸಕ್ತರಾಗಿರುವರು. ಪ್ರಾಯಕವಾಗಿ ಇಷ್ಟೇ ಹೊರತು ಇತರ ಉಪಯುಕ್ತಗಳಾದ ವಿದ್ಯೆಗಳನ್ನು ಕಲಿಸುವುದು ಅಪೂರ್ವ. ಆದರೆ ಜೀವನಕ್ಕೆ ಉಪಯೋಗವಿಲ್ಲದ ಅನೇಕ ವಿದ್ಯೆಗಳನ್ನು ಹೆಚ್ಚಾಗಿ ಕಲಿಸುವರು. ಉಪಯುಕ್ತಗಳಾದ ಅನೇಕ ವಿಷಯಗಳನ್ನು ಬಿಟ್ಟುಬಿಡುವರು.

ಸ್ವಲ್ಪ ಜನರ ಹೊರತು ಮಿಕ್ಕವರೆಲ್ಲರೂ ಹೆಚ್ಚಾಗಿ ಯಾವ ಕೆಲಸಗಳಲ್ಲಿ ಉದ್ಯುಕ್ತರಾಗುವರೆಂದು ವಿಚಾರ ಮಾಡೋಣ. ನಿಜವಾಗಿಯೂ ಬಹುಜನರು ನಾನಾ ಸಾಮಗ್ರಿಗಳನ್ನು ಉತ್ಪಾದನ ಮಾಡುವುದರಲ್ಲಿಯೂ ಸಿದ್ಧಪಡಿಸುವುದರಲ್ಲಿಯೂ ಮತ್ತು ಹಂಚುವುದರಲ್ಲಿಯೂ ಉದ್ಯುಕ್ತರಾಗಿರುವರು. ಈ ಕಾರ್ಯಗಳನ್ನು ಸರಿಯಾಗಿ ಮಾಡುವ ಬಗೆ ಹೇಗೆ? ಸಾಮಗ್ರಿಗಳ ಸ್ವಭಾವವನ್ನೂ ಅವನ್ನು ಹೊಂದುವ ಯೋಗ್ಯವಾದ ಮಾರ್ಗಗಳನ್ನೂ ತಿಳಿದುಕೊಂಡು ಯಥಾಕ್ರಮದಲ್ಲಿ ಮಾಡಿದರೆ ಆ ಕಾರ್ಯಗಳು ಸಮಂಜಸವಾಗಿ ನೆರವೇರುವುವು. ಇದಕ್ಕೋಸ್ಕರ ಶಾಸ್ತ್ರಜ್ಞಾನವು

ಆವಶ್ಯಕ. ಆದರೆ ಯಾವ ಶಾಸ್ತ್ರವನ್ನು ನಮ್ಮ ಮಕ್ಕಳಿಗೆ ಪಾಠಶಾಲೆಗಳಲ್ಲಿ ಕಲಿಸುವುದಿಲ್ಲವೋ ಆ ಶಾಸ್ತ್ರಜ್ಞಾನವೇ ಜೀವಿಕೆಯ ಸಾಮಗ್ರಿಗಳನ್ನು ಹೊಂದಲಿಕ್ಕೆ ಆವಶ್ಯವಾಗಿರುವುದು. ಇದು ಯಥಾರ್ಥವಾದ ವಿಷಯವು. ಅನೃತವಲ್ಲ. ಇದನ್ನು ಕುರಿತು ಹೆಚ್ಚು ಜನರು ಪರ್ಯಾಲೋಚಿಸುವುದಿಲ್ಲ. ಇದು ಬಹು ಪರಿಚಿತವಾದ ವಿಷಯವಾದುದರಿಂದಲೇ ಇದನ್ನು ಹೀಗೆ ಲಕ್ಷ್ಯಕ್ಕೆ ತರದೆ ಉಪೇಕ್ಷೆ ಮಾಡುವರು. ಈ ವಿಷಯವು ಸತ್ಯವಾದುದೆಂದು ಪಾಠಕರಿಗೆ ತೋರಿಸುವುದಕ್ಕೆ ಇದ್ದ ಸಂಗತಿಗಳು ಯಥಾಸ್ಥಿತಿಯಲ್ಲಿ ಸಂಕ್ಷೇಪವಾಗಿ ಇಲ್ಲಿ ವಿಮರ್ಶಿಸಲ್ಪಡುವುವು.

ಸಾಮಗ್ರಿಗಳನ್ನು ಉತ್ಪಾದನಮಾಡುವವರಿಗೂ ಸಿದ್ಧಪಡಿಸುವವರಿಗೂ ಹಂಚುವವರಿಗೂ ತರ್ಕಶಾಸ್ತ್ರಜ್ಞಾನವು ಆವಶ್ಯಕವಾಗಿರುವುದು. ಅದನ್ನು ಅಧ್ಯಯನ ಮಾಡಿಯಾಗಲೀ ಬೇರೆವಿಧದಿಂದಾಗಲೀ ಕಲಿಯಬೇಕು. ಆ ಶಾಸ್ತ್ರದಲ್ಲಿ ಸಾಕಾದಷ್ಟು ಜ್ಞಾನವಿದ್ದವನು ತನ್ನ ಕಾರ್ಯಗಳನ್ನು ಚೆನ್ನಾಗಿ ನೆರವೇರಿಸಲು ಸಮರ್ಥನಾಗುವನು. ಅದಿಲ್ಲದವನು ಕೆಲಸಗಳನ್ನು ಸಮಂಜಸವಾಗಿ ಮಾಡಲಾರನು. ಇದು ಅನುಭವಸಿದ್ಧವಾದ ವಿಷಯವಾಗಿದೆ. ಈ ಸಂದರ್ಭದಲ್ಲಿ ಉಪಯುಕ್ತವಾದ ಎರಡನೆಯ ಶಾಸ್ತ್ರವು ಗಣಿತವಾಗಿರುವುದು. ರೈತರಿಗೂ ಕೈಗೆಲಸದವರಿಗೂ ವರ್ತಕರಿಗೂ ಲೆಕ್ಕ ತಿಳಿದಿರುವುದು ಅತ್ಯವಶ್ಯಕವು. ಅಂದಾಜು ಹಾಕುವುದು, ಜಮಾಖರ್ಚನ್ನು ಗೊತ್ತುಮಾಡಿಕೊಳ್ಳುವುದು, ತಾಳೆಹಾಕುವುದು ಮುಂತಾದವುಗಳಿಗೆ ಲೆಕ್ಕದ ಪರಿಚಿತಿಯು ಅಗತ್ಯವಾಗಿರುವುದು. ಇಂಥಾ ಕಾರ್ಯಗಳಲ್ಲಿ ಲೆಕ್ಕವು ಪ್ರಯೋಜನಕರವಾಗಿರುವುದೆಂದು ಸರ್ವರೂ ಒಪ್ಪಿಕೊಳ್ಳುವರು.

ಶೇತುವೆಯಂತ್ರ ಮುಂತಾದವುಗಳ ನಿರ್ಮಾಣಕ್ಕೆ ವಿಶೇಷ ಗಣಿತಜ್ಞಾನವು ಅವಶ್ಯಕವಾಗಿರುವುದು. ಹಳ್ಳಿಯ ಬಡಗಿಯೂ ದೊಡ್ಡ ಶೇತುವೆಯನ್ನು ಕಟ್ಟುವ ಇಂಜನಿಯರೂ ತಮ್ಮ ತಮ್ಮ ಕೆಲಸಗಳನ್ನು ಮಾಡುವಾಗ ಪ್ರತಿಗಂಟೆಯಲ್ಲಿಯೂ ಗಣಿತಶಾಸ್ತ್ರವನ್ನು ಪಯೋಗಿಸುತ್ತಿರುವರು. ಭೂಮಿಯನ್ನಳೆಯುವ ಸರ್ವೆಯರಿಗೂ ಮನೆಯ ಆಕಾರವನ್ನು ಪರ್ಯಾಲೋಚಿಸುವ ಶಿಲ್ಪಿಗೂ ಮನೆಕಟ್ಟಲು ಪಾಯಾ ಹಾಕುವವನಿಗೂ ಕಲ್ಲುಗಳನ್ನು ಕತ್ತರಿಸುವವರಿಗೂ ಮನೆಕಟ್ಟಲುದ್ಯುಕ್ತರಾದ ಇನ್ನೂ ಬೇರೆಬೇರೆ ಕೆಲಸಗಾರರಿಗೂ ರೇಖಾಗಣಿತದ ಸಹಾಯವು ಅವಶ್ಯಕವಾಗಿರುವುದು. ರೈಲ್ವೆ ಮಾಡುವವರಿಗೆ ಮೊದಲಿನಿಂದ ಕೊನೆಯವರೆಗೂ ರೇಖಾಗಣಿತದ ಸಹಾಯವು ಬೇಕು. ಪ್ಲಾನು ಬರೆಯುವುದು, ಸ್ಟೇರ್ಷಗಳನ್ನು ಕಟ್ಟುವುದು,

ರಸ್ತೆಗೆ ಪಟ್ಟಿಹಾಕುವುದು, ಗುಣಿ ಮತ್ತು ಮಣ್ಣಿನ ಕಟ್ಟಿಗಳನ್ನೆಳೆಯುವುದು, ಶೇತು ಪೆಗೆ ಅಂದಾಜಹಾಕುವುದು, ಮತ್ತು ಅದನ್ನು ಕಟ್ಟುವುದು, ಕಲ್ವರ್ಟ್ ಮತ್ತು ಮೊ ಹರಿ ಸುರಂಗಮಾರ್ಗ ಇವುಗಳ ನಿರ್ಮಾಣ—ಇವೇ ಮುಂತಾದ ಕಾರ್ಯಗಳಿಗೆ ರೇಖಾಗಣಿತ ಶಾಸ್ತ್ರವು ಅವಶ್ಯಕ.

ಹಾಗೆಯೇ ಸಮುದ್ರತೀರಗಳಲ್ಲಿ ರೇವು ಹಡಗಿನ ಕಾರ್ಖಾನೆ ಶೇತುವೆ ಮುಂ ತಾದವುಗಳನ್ನು ಕಟ್ಟುವುದಕ್ಕೆ ರೇಖಾಗಣಿತಜ್ಞಾನವು ಬೇಕು. ಇಂಗ್ಲೆಂಡಿನ ಮಧ್ಯ ಪ್ರದೇಶಗಳಲ್ಲಿಯೂ ಸಮುದ್ರತೀರಗಳಲ್ಲಿಯೂ ಹರಡಿಕೊಂಡು ಅಂದವಾಗಿ ಕಾಣಿ ಸುವ ಕಟ್ಟಡಗಳೂ ವಿಧವಿಧವಾದ ಚಿತ್ರಕೆಲಸಗಳೂ ರೇಖಾಗಣಿತದ ಸಹಾಯ ದಿಂದಲೇ ಮಾಡಲ್ಪಟ್ಟಿರುವುವು. ಆ ದೇಶದಲ್ಲಿ ಅಲ್ಲಲ್ಲಿ ಗಣಿಗಳಲ್ಲಿ ನಮಗೆ ಕಾಣುವ ವಿಚಿತ್ರವಾದ ಕೆಲಸಗಳೆಲ್ಲ ಆ ಶಾಸ್ತ್ರಜ್ಞಾನಾವಲಂಬನದಿಂದಲೇ ಮಾಡಲ್ಪಟ್ಟಿರು ವುವು. ಈಗಿನಕಾಲದ ರೈತರೂ ಕೂಡ ಸಮಮಟ್ಟಾಗಿ ಕಾಲವೆಯನ್ನು ತೆಗೆಯು ಬೇಕಾದರೆ ರೇಖಾಗಣಿತವನ್ನುಪಯೋಗಿಸುವರು. ಹೀಗೆ ಬಗೆಬಗೆಯ ಕೆಲಸಗ ಳನ್ನು ಮಾಡಿ ಪೂರೈಸಲಿಕ್ಕೆ ರೇಖಾಗಣಿತಜ್ಞಾನವು ಅವಶ್ಯವಾಗಿರುವುದು.

ಈಗ ಯಂತ್ರಶಾಸ್ತ್ರ ಪ್ರಯೋಜನವನ್ನು ಕುರಿತು ವಿಚಾರ ಮಾಡೋಣ. ಈಗಿನ ಕೈಗಾರಿಕೆಗಳೆಲ್ಲಾ ಯಂತ್ರಶಾಸ್ತ್ರವನ್ನವಲಂಬಿಸಿರುವುವು. ಯಂತ್ರಾವ ಯವಗಳಾದ ಒತ್ತುಕೋಲು ಜಕ್ಕ ಅಚ್ಚು ಮುಂತಾದವುಗಳನ್ನು ಹೇಗೆ ಉಪ ಯೋಗಿಸಬೇಕೆಂಬುದು ಕೆಲಸಗಾರರಿಗೆ ಚೆನ್ನಾಗಿ ತಿಳಿದಿರಬೇಕು. ಪ್ರಾಯಕವಾಗಿ ಈಗ ಇಂಗ್ಲೆಂಡಿನಲ್ಲಿ ಉತ್ಪಾದನವಾಗುವ ಸಾಮಾನುಗಳೆಲ್ಲಾ ಯಂತ್ರಮುಖವಾ ಗಿಯೇ ಮಾಡಲ್ಪಡುವುವು. ಅಲ್ಲಿಯ ಜನರು ಬೆಳಗಿನಹೊತ್ತು ತಿನ್ನುವ ರೊಟ್ಟಿ ಯನ್ನು ಕುರಿತು ವಿಚಾರ ಮಾಡಿದರೆ, ಯಂತ್ರದ ಸಹಾಯವು ಎಷ್ಟರಮಟ್ಟಿಗೆ ಪ್ರ ಯೋಜನಕಾರಿಯಾಗಿದೆ ಎಂಬುದು ಗೊತ್ತಾಗುವುದು. ಆ ರೊಟ್ಟಿಗೆ ಬೇಕಾದ ಗೋಧಿಯು ಬೆಳೆಯುವ ಭೂಮಿಯಲ್ಲಿ ಯಂತ್ರಗಳಿಂದ ತಯಾರಾದ ಹೆಂಚುಗ ಳಿಂದ ನೀರುಹೋಗುವ ಬಚ್ಚಲುಗಳು ಕಟ್ಟಲ್ಪಟ್ಟಿವೆ. ಆ ಭೂಮಿಯು ಯಂತ್ರ ದಿಂದಲೇ ಉತ್ತಿ ಹದಮಾಡಲ್ಪಡುತ್ತದೆ. ಯಂತ್ರ ಮೂಲಕವೇ ಗೋಧಿಯ ತೆನೆ ಗಳು ಕೊಯ್ಯಲ್ಪಟ್ಟು ಕಾಳುಗಳು ಬಿಡಿಸಲ್ಪಟ್ಟು ಕೇರಲ್ಪಡುತ್ತವೆ. ಯಂತ್ರದಿಂ ದಲೇ ಗೋಧಿಯನ್ನು ಬೀಸಿ ಹಿಟ್ಟನ್ನು ತೆಗೆಯುವರು. ಹಿಟ್ಟನ್ನು ಯಂತ್ರಕ್ಕೆ ಹಾಕಿ ರೊಟ್ಟಿ ಬಿಸ್ಕತ್ತುಗಳನ್ನು ತಯಾರು ಮಾಡುತ್ತಾರೆ. ಹೀಗೆ ಯಂತ್ರವನ್ನು ಅಲ್ಲಿ ವಿಶೇಷವಾಗಿ ಉಪಯೋಗಿಸುವರು. (ಸಶೇಷ). S. V.

ಬರೋಡಾ ಸಂಸ್ಥಾನದ ಗಯಿಕ್ವಾರ್ ಮಹಾರಾಜರವರ ಉಪನ್ಯಾಸ.

No 11

ಬರೋಡಾ ಸಂಸ್ಥಾನದ ಪ್ರಜೆಗಳ ಕ್ಷೇಮಾರ್ಥವಾಗಿ ನಾನು ವಿದ್ಯಾಭ್ಯಾಸವು ಕಡ್ಡಾಯವಾಗಿ ಎಲ್ಲರಿಗೂ ಮಾಡಲ್ಪಡುವಂತೆ ಕೆಲವು ಭಾಗಗಳಲ್ಲಿ ಏರ್ಪಾಡು ಮಾಡಿದೆನು. ಇದು ಬಹಳ, ಪ್ರಯೋಜನಕಾರಿಯಾಗಿ ಪರಿಣಮಿಸಿತು. ಈ ಸನ್ನ ಸಂಸ್ಥಾನದಲ್ಲೆಲ್ಲಾ ವಿದ್ಯಾಭ್ಯಾಸವು ಉಚಿತವಾಗಿಯೂ, ಬಲಾತ್ಕಾರವಾಗಿಯು ಇರುವಂತೆ ಮಾಡಬೇಕೆಂದು ನಿಷ್ಕರ್ಷಿಸಿರುತ್ತೇನೆ. ಬರೆಯುವುದೂ, ಓದುವುದೂ ಲೆಕ್ಕಾಚಾರ, ಇವುಗಳಿಗೆ ಸಂಬಂಧಪಟ್ಟ ವಿದ್ಯಾಭ್ಯಾಸವು ಉಚಿತವಾಗಿಯೂ, ಬಲಾತ್ಕಾರವಾಗಿಯೂ ಇರಬೇಕು. ನಾನು ಅಮೆರಿಕಾ ಮತ್ತು ಯೂರೋಪ್ ಖಂಡಗಳಲ್ಲಿ ಸಂಚಾರ ಮಾಡಿದಾಗ ಕೈಗಾರಿಕೆಯ ವಿದ್ಯಾಭ್ಯಾಸದ ಮಹಿಮೆಯು ಗೊತ್ತಾಯಿತು. ಆ ದೇಶದಲ್ಲಿ ಎಲ್ಲಾವೃತ್ತಿಗಳಿಗಿಂತಲೂ ಕೈಗಾರಿಕೆಯಿಂದ ಬದುಕತಕ್ಕ ವೃತ್ತಿಯೇ ಅತ್ಯಧಿಕವಾಗಿರುವುದು. ಸರಕಾರದ ಉದ್ಯೋಗಗಳಿಗೂ ಕೂಡಾ ಜನಗಳು ಸಿಕ್ಕುವುದಿಲ್ಲ. ಕೈಗಾರಿಕೆಗಳ ಸಹಾಯದಿಂದ ಸ್ವತಂತ್ರವಾದ ಜೀವನವನ್ನು ಕೈಕೊಂಡು ಪ್ರತಿಯೊಬ್ಬರೂ ಸುಖವಾಗಿಯೂ, ಗೌರವವಾಗಿಯೂ ಇರುವರು. ವಿದ್ಯಾಭ್ಯಾಸಕ್ರಮವು ಪಾಶ್ಚಾತ್ಯರಲ್ಲಿ ಬಹಳವಾಗಿ ಬದಲಾಯಿಸಿದೆ. ಪಾಶ್ಚಾತ್ಯರು ಪ್ರಸಿದ್ಧರಾದವರೆಲ್ಲರೂ ಲೌಕಿಕ ವಿದ್ಯಾಭ್ಯಾಸವನ್ನು ಚನ್ನಾಗಿ ಮಾಡಿ ಕೈಗಾರಿಕೆಗಳಲ್ಲಿ ಅಸಮಾನವಾದ ಶಕ್ತಿಯುಳ್ಳವರಾಗಿರುತ್ತಾರೆ. ಈ ದೇಶದಲ್ಲಿ ಅನುಪಪನ್ನತೆ ಎಂಬುದೇ ಬಹಳ ಅಪೂರ್ವ. ಇದಕ್ಕೆ ಮುಖ್ಯಕಾರಣವು ನಾನಾವಿಧವಾದ ಕೈಗಾರಿಕೆಗಳ ಅನವಲಂಬನೆಯಾಗಿರುವುದು. ಕೈಗಾರಿಕೆಗೆ ಮಾತೃಸ್ಥಾನವಾದುದು ಅಮೆರಿಕ ಖಂಡ ಮಾತ್ರವೇ ಅಲ್ಲ. ಅಮೆರಿಕಾಖಂಡಕ್ಕಿಂತಲೂ ಜರ್ಮನೀ ದೇಶವು ಸಕಲ ಲಾಕೌಶಲ್ಯಗಳಿಗೆ ಪಿತೃಸ್ಥಾನವಾಗಿರುವುದು. ಜರ್ಮನೀದೇಶದ ರಾಜಧಾನಿಯಾದ ಬರ್ಲಿನ್ ಪಟ್ಟಣದೊಳಗೆ ಒಂದು ಕೈಗಾರಿಕೆಯ ಹೈಸ್ಕೂಲ್ ಇರುವುದು. ಇಲ್ಲಿ ೧೫೦೦ ಜನ ವಿದ್ಯಾರ್ಥಿಗಳು ಕೈಗಾರಿಕೆಗಳನ್ನು ಕಲಿಯುವರು. ಈ ಪಾಠಶಾಲೆಯಲ್ಲಿ ನಾನಾವಿಧವಾದ ಬಣ್ಣಗಳಲ್ಲಿ ಮಾಡತಕ್ಕ ಕೆಲಸ, ಜೀಟೀಬಟ್ಟೆಗಳನ್ನೂ, ರೇಷ್ಮೇಬಟ್ಟೆಗಳನ್ನೂ ಮಾಡತಕ್ಕ ಕೆಲಸ, ತೊಗಲಿನಲ್ಲಿ ಮಾಡತಕ್ಕ ಕೆಲಸ, ಇವ್ಯಗಳಲ್ಲೆಲ್ಲಾ

ರಸ್ತೆಗೆ ಪಟ್ಟಿಹಾಕುವುದು, ಗುಣಿ ಮತ್ತು ಮಣ್ಣಿನ ಕಟ್ಟೆಗಳನ್ನೆಳೆಯುವುದು, ಶೇತು ವೆಗೆ ಅಂದಾಜಹಾಕುವುದು, ಮತ್ತು ಅದನ್ನು ಕಟ್ಟುವುದು, ಕಲ್ವರ್ಟ್ ಮತ್ತು ಮೊ ಹರಿ ಸುರಂಗಮಾರ್ಗ ಇವುಗಳ ನಿರ್ಮಾಣ—ಇವೇ ಮುಂತಾದ ಕಾರ್ಯಗಳಿಗೆ ರೇಖಾಗಣಿತ ಶಾಸ್ತ್ರವು ಅವಶ್ಯಕ.

ಹಾಗೆಯೇ ಸಮುದ್ರತೀರಗಳಲ್ಲಿ ರೇವು ಹಡಗಿನ ಕಾರ್ಖಾನೆ ಶೇಕುವೆ ಮುಂ ತಾದವುಗಳನ್ನು ಕಟ್ಟುವುದಕ್ಕೆ ರೇಖಾಗಣಿತಜ್ಞಾನವು ಬೇಕು. ಇಂಗ್ಲೆಂಡಿನ ಮಧ್ಯ ಪ್ರದೇಶಗಳಲ್ಲಿಯೂ ಸಮುದ್ರತೀರಗಳಲ್ಲಿಯೂ ಹರಡಿಕೊಂಡು ಅಂದವಾಗಿ ಕಾಣಿ ಸುವ ಕಟ್ಟಡಗಳೂ ವಿಧವಿಧವಾದ ಚಿತ್ರಕೆಲಸಗಳೂ ರೇಖಾಗಣಿತದ ಸಹಾಯ ದಿಂದಲೇ ಮಾಡಲ್ಪಟ್ಟಿರುವುವು. ಆ ದೇಶದಲ್ಲಿ ಅಲ್ಲಲ್ಲಿ ಗಣಿಗಳಲ್ಲಿ ನಮಗೆ ಕಾಣುವ ವಿಚಿತ್ರವಾದ ಕೆಲಸಗಳೆಲ್ಲ ಆ ಶಾಸ್ತ್ರಜ್ಞಾನಾವಲಂಬನದಿಂದಲೇ ಮಾಡಲ್ಪಟ್ಟಿರು ವುವು. ಈಗಿನಕಾಲದ ರೈತರೂ ಕೂಡ ಸಮಮಟ್ಟಾಗಿ ಕಾಲವೆಯನ್ನು ತೆಗೆಯು ಬೇಕಾದರೆ ರೇಖಾಗಣಿತವನ್ನುಪಯೋಗಿಸುವರು. ಹೀಗೆ ಬಗೆಬಗೆಯ ಕೆಲಸಗ ಳನ್ನು ಮಾಡಿ ಪೂರೈಸಲಿಕ್ಕೆ ರೇಖಾಗಣಿತಜ್ಞಾನವು ಅವಶ್ಯವಾಗಿರುವುದು.

ಈಗ ಯಂತ್ರಶಾಸ್ತ್ರ ಪ್ರಯೋಜನವನ್ನು ಕುರಿತು ವಿಚಾರ ಮಾಡೋಣ. ಈಗಿನ ಕೈಗಾರಿಕೆಗಳೆಲ್ಲಾ ಯಂತ್ರಶಾಸ್ತ್ರವನ್ನವಲಂಬಿಸಿರುವುವು. ಯಂತ್ರಾವ ಯವಗಳಾದ ಒತ್ತುಕೋಲು ಚಕ್ರ ಅಚ್ಚು ಮುಂತಾದವುಗಳನ್ನು ಹೇಗೆ ಉಪ ಯೋಗಿಸಬೇಕೆಂಬುದು ಕೆಲಸಗಾರರಿಗೆ ಚೆನ್ನಾಗಿ ತಿಳಿದಿರಬೇಕು. ಪ್ರಾಯಶಕವಾಗಿ ಈಗ ಇಂಗ್ಲೆಂಡಿನಲ್ಲಿ ಉತ್ಪಾದನವಾಗುವ ಸಾಮಾನುಗಳೆಲ್ಲಾ ಯಂತ್ರಮುಖವಾ ಗಿಯೇ ಮಾಡಲ್ಪಡುವುವು. ಅಲ್ಲಿಯ ಜನರು ಬೆಳಗಿನಹೊತ್ತು ತಿನ್ನುವ ರೊಟ್ಟಿ ಯನ್ನು ಕುರಿತು ವಿಚಾರ ಮಾಡಿದರೆ, ಯಂತ್ರದ ಸಹಾಯವು ಎಷ್ಟರಮಟ್ಟಿಗೆ ಪ್ರ ಯೋಜನಕಾರಿಯಾಗಿದೆ ಎಂಬುದು ಗೊತ್ತಾಗುವುದು. ಆ ರೊಟ್ಟಿಗೆ ಬೇಕಾದ ಗೋಧಿಯು ಬೆಳೆಯುವ ಭೂಮಿಯಲ್ಲಿ ಯಂತ್ರಗಳಿಂದ ತಯಾರಾದ ಹೆಂಚುಗ ಳಿಂದ ನೀರುಹೋಗುವ ಬಚ್ಚಲುಗಳು ಕಟ್ಟಲ್ಪಟ್ಟಿವೆ. ಆ ಭೂಮಿಯು ಯಂತ್ರ ದಿಂದಲೇ ಉತ್ತಿ ಹದಮಾಡಲ್ಪಡುತ್ತದೆ. ಯಂತ್ರ ಮೂಲಕವೇ ಗೋಧಿಯ ತೆನೆ ಗಳು ಕೊಯ್ಯಲ್ಪಟ್ಟು ಕಾಳುಗಳು ಬಿಡಿಸಲ್ಪಟ್ಟು ಕೇರಲ್ಪಡುತ್ತವೆ. ಯಂತ್ರದಿಂ ದಲೇ ಗೋಧಿಯನ್ನು ಬೀಸಿ ಹಿಟ್ಟನ್ನು ತೆಗೆಯುವರು. ಹಿಟ್ಟನ್ನು ಯಂತ್ರಕ್ಕೆ ಹಾಕಿ ರೊಟ್ಟಿ ಬಿಸ್ಕತ್ತುಗಳನ್ನು ತಯಾರು ಮಾಡುತ್ತಾರೆ. ಹೀಗೆ ಯಂತ್ರವನ್ನು ಅಲ್ಲಿ ವಿಶೇಷವಾಗಿ ಉಪಯೋಗಿಸುವರು.

(ಸಶೇಷ). S. V.

ಬರೋಡಾ ಸಂಸ್ಥಾನದ ಗಯಿಕ್ವಾರ್ ಮಹಾರಾಜರವರ ಉಪನ್ಯಾಸ.

No 11

ಬರೋಡಾ ಸಂಸ್ಥಾನದ ಪ್ರಜೆಗಳ ಕ್ಷೇಮಾರ್ಥವಾಗಿ ನಾನು ವಿದ್ಯಾಭ್ಯಾಸವು ಕಡ್ಡಾಯವಾಗಿ ಎಲ್ಲರಿಗೂ ಮಾಡಲ್ಪಡುವಂತೆ ಕೆಲವು ಭಾಗಗಳಲ್ಲಿ ಏರ್ಪಾಡು ಮಾಡಿದೆನು. ಇದು ಬಹಳ, ಪ್ರಯೋಜನಕಾರಿಯಾಗಿ ಪರಿಣಮಿಸಿತು. ಈಗ ನನ್ನ ಸಂಸ್ಥಾನದಲ್ಲೆಲ್ಲಾ ವಿದ್ಯಾಭ್ಯಾಸವು ಉಚಿತವಾಗಿಯೂ, ಬಲಾತ್ಕಾರವಾಗಿಯೂ ಇರುವಂತೆ ಮಾಡಬೇಕೆಂದು ನಿಷ್ಕರ್ಷಿಸಿರುತ್ತೇನೆ. ಬರೆಯುವುದೂ, ಓದುವುದೂ, ಲೆಕ್ಕಾಚಾರ, ಇವುಗಳಿಗೆ ಸಂಬಂಧಪಟ್ಟ ವಿದ್ಯಾಭ್ಯಾಸವು ಉಚಿತವಾಗಿಯೂ, ಬಲಾತ್ಕಾರವಾಗಿಯೂ ಇರಬೇಕು. ನಾನು ಅಮೆರಿಕಾ ಮತ್ತು ಯೂರೋಪ್ ಖಂಡಗಳಲ್ಲಿ ಸಂಚಾರ ಮಾಡಿದಾಗ ಕೈಗಾರಿಕೆಯ ವಿದ್ಯಾಭ್ಯಾಸದ ಮಹಿಮೆಯು ಗೊತ್ತಾಯಿತು. ಆ ದೇಶದಲ್ಲಿ ಎಲ್ಲಾ ವೃತ್ತಿಗಳಿಗಿಂತಲೂ ಕೈಗಾರಿಕೆಯಿಂದ ಬದುಕತಕ್ಕ ವೃತ್ತಿಯೇ ಅತ್ಯಧಿಕವಾಗಿರುವುದು. ಸರಕಾರದ ಉದ್ಯೋಗಗಳಿಗೂ ಕೂಡಾ ಜನಗಳು ಸಿಕ್ಕುವುದಿಲ್ಲ. ಕೈಗಾರಿಕೆಗಳ ಸಹಾಯದಿಂದ ಸ್ವತಂತ್ರವಾದ ಜೀವನವನ್ನು ಕೈಕೊಂಡು ಪ್ರತಿಯೊಬ್ಬರೂ ಸುಖವಾಗಿಯೂ, ಗೌರವವಾಗಿಯೂ ಇರುವರು. ವಿದ್ಯಾಭ್ಯಾಸಕ್ರಮವು ಪಾಶ್ಚಾತ್ಯರಲ್ಲಿ ಬಹಳವಾಗಿ ಬದಲಾಯಿಸಿದೆ. ಪಾಶ್ಚಾತ್ಯರಲ್ಲಿ ಪ್ರಸಿದ್ಧರಾದವರೆಲ್ಲರೂ ಲೌಕಿಕ ವಿದ್ಯಾಭ್ಯಾಸವನ್ನು ಚನ್ನಾಗಿ ಮಾಡಿ ಕೈಗಾರಿಕೆಗಳಲ್ಲಿ ಅಸಮಾನವಾದ ಶಕ್ತಿಯುಳ್ಳವರಾಗಿರುತ್ತಾರೆ. ಈ ದೇಶದಲ್ಲಿ ಅನುಪಪನ್ನತೆ ಎಂಬುದೇ ಬಹಳ ಅಪೂರ್ವ. ಇದಕ್ಕೆ ಮುಖ್ಯಕಾರಣವು ನಾನಾವಿಧವಾದ ಕೈಗಾರಿಕೆಗಳ ಅನವಲಂಬನೆಯಾಗಿರುವುದು. ಕೈಗಾರಿಕೆಗೆ ಮಾತೃಸ್ಥಾನವಾದುದು ಅಮೆರಿಕಾ ಖಂಡ ಮಾತ್ರವೇ ಅಲ್ಲ. ಅಮೆರಿಕಾಖಂಡಕ್ಕಿಂತಲೂ ಜರ್ಮನೀ ದೇಶವು ಸಕಲಕಲಾಕೌಶಲ್ಯಗಳಿಗೆ ಪಿತೃಸ್ಥಾನವಾಗಿರುವುದು. ಜರ್ಮನೀದೇಶದ ರಾಜಧಾನಿಯಾದ ಬರ್ಲಿನ್ ಪಟ್ಟಣದೊಳಗೆ ಒಂದು ಕೈಗಾರಿಕೆಯ ಹೈಸ್ಕೂಲ್ ಇರುವುದು. ಇಲ್ಲಿ ೧೫೦೦ ಜನ ವಿದ್ಯಾರ್ಥಿಗಳು ಕೈಗಾರಿಕೆಗಳನ್ನು ಕಲಿಯುವರು. ಈ ಪಾಠಶಾಲೆಯಲ್ಲಿ ನಾನಾವಿಧವಾದ ಬಣ್ಣಗಳಲ್ಲಿ ಮಾಡತಕ್ಕ ಕೆಲಸ, ಜೀಟೀಬಟ್ಟೆಗಳನ್ನೂ, ರೇಷ್ಮೇಬಟ್ಟೆಗಳನ್ನೂ ಮಾಡತಕ್ಕ ಕೆಲಸ, ತೊಗಲಿನಲ್ಲಿ ಮಾಡತಕ್ಕ ಕೆಲಸ, ಇವುಗಳಲ್ಲೆಲ್ಲಾ

ಅತ್ಯುತ್ತಮವಾದ ತಿಕ್ಷೆಯು ನಡೆಯುತ್ತಲಿರುವುದು. ಫ್ರಾನ್ಸ್ ದೇಶದಲ್ಲಿಯೂ ಇದೇ ರೀತಿ ಯಂತ್ರಗಳ ಸಹಾಯದಿಂದ ಅನೇಕ ಕೈಗಾರಿಕೆಗಳು ನಡೆಯುತ್ತಲಿರುವುವು. ಆಗಾಗ್ಯೆ ಹೊಸದಾಗಿ ತಯಾರಾಗತಕ್ಕ ವಸ್ತುಗಳ ಪ್ರದರ್ಶನವು ಮಾಡಲ್ಪಡುತ್ತಲಿರುವುದು. ಬಹಳ ಲಕ್ಷಣವಾಗಿ ಮಾಡಿ ಪದಾರ್ಥಗಳನ್ನು ನಿರ್ಮಾಣಮಾಡತಕ್ಕವರಿಗೆ ಇಂಥಾ ಕೆಲಸಗಳಲ್ಲಿ ಬರತಕ್ಕ ದ್ರವ್ಯಸಹಾಯದಿಂದಲೇ ಜೀವನವೂ ಕೂಡ ನಡೆಯುವುದು. ಈ ವಿಷಯದಲ್ಲಿ ಆಸ್ಟ್ರಿಯಾ ದೇಶವು ಜರ್ಮನೀ ಮತ್ತು ಫ್ರಾನ್ಸ್‌ದೇಶಕ್ಕೆ ಕಡಮೆಯಾಗಿಲ್ಲ. ಲಿಯನ್ನಾ ಮೊದಲಾದ ಪಟ್ಟಣದಲ್ಲಿ ಅನೇಕ ಕೈಗಾರಿಕೆಗಳ ಪಾಠಶಾಲೆಗಳಿರುವುವು. ಇಟಲೀ ದೇಶದಲ್ಲಿ ಕಲೆಗಳ ಅಭ್ಯಾಸವು ಬಹಳ ಸಮರ್ಪಕವಾಗಿ ನಡೆಯುತ್ತಲಿರುವುದು. ನೇಪಲ್ಸ್ ಪಟ್ಟಣದಲ್ಲಿ ಇರತಕ್ಕ ಕೈಗಾರಿಕೆಯು ಪಾಠಶಾಲೆಗಳಲ್ಲಿ ಪ್ರಪಂಚದಲ್ಲಿ ಲಾಭಕರವಾದ ಕೈಗಾರಿಕೆಗಳೆಷ್ಟಿರುವುವೋ ಅವುಗಳನ್ನೆಲ್ಲಾ ಶೋಧಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡಿರುವರು. ಈ ಕೈಗಾರಿಕೆಗಳಲ್ಲಿ ಸಮರ್ಥರಾದ ವಿದ್ವಾಂಸರು ಸೇರಿ ಕಲೆಗಳ ವಿಷಯದಲ್ಲಿ ಮಾಡತಕ್ಕ ಸಂಭಾಷಣೆಯನ್ನು ಕೇಳುವುದೂ ಕೂಡ ಒಂದು ದೊಡ್ಡ ವಿದ್ಯಾಭ್ಯಾಸವಾಗಿ ಪರಿಣಮಿಸಿರುವುದು. ಲಂಡನ್ ಪಟ್ಟಣದಲ್ಲಿ ಅನೇಕ ಕೈಗಾರಿಕೆಯು ಪಾಠಶಾಲೆಗಳಿರುವುವು. ಯಾವ ಕೈಗಾರಿಕೆಯನ್ನು ಕಲಿಯಬೇಕಾದರೂ ಅದಕ್ಕೆಲ್ಲಾ ಅವಕಾಶವು ಪಾಠಶಾಲೆಯಲ್ಲಿರುವುದು. ಮ್ಯಾಂಚಿಸ್ಟರ್ ಬರ್ಮಿಂಗ್‌ಹ್ಯಾಂ, ಲೀಡ್ಸ್ ಎಂಬ ಪಟ್ಟಣಗಳಲ್ಲಿ ಸಕಲಕಲಾಶಾಲೆಗಳಿರುವುವು. ಮ್ಯಾಂಚಿಸ್ಟರ್ ಪಟ್ಟಣದಲ್ಲಿ ಇರತಕ್ಕ ಕಲಾಶಾಲೆಯಲ್ಲಿ ಯಂತ್ರಗಳ ನಿರ್ಮಾಣ, ವಿದ್ಯುಚ್ಛಕ್ತಿಯ ಕೆಲಸಗಳು, ಎಂಜನಿಯರಿಂಗ್ ಶಾಸ್ತ್ರ, ಭೌತಿಕಶಾಸ್ತ್ರ, ವಸ್ತುಶಾಸ್ತ್ರ, ರಂಗನ್ನು ತೆಗೆಯತಕ್ಕ ಶಾಸ್ತ್ರ, ರಂಗನ್ನು ಹಾಕುವಶಾಸ್ತ್ರ, ಬಟ್ಟೆಬರೆಗಳನ್ನೂ, ಕಾಗದವನ್ನೂ, ಲೋಹಗಳಿಂದ ಪದಾರ್ಥನಿರ್ಮಾಣವನ್ನೂ ಮಾಡುವ ಶಾಸ್ತ್ರ, ಇವುಗಳೆಲ್ಲಾ ಕಲಿಸಲ್ಪಡುತ್ತಲಿರುವುವು. ಈ ಶಾಸ್ತ್ರಗಳನ್ನು ಕಲಿಯುವುದಕ್ಕೆ ಬರೋಡಾ ದೇಶದಿಂದ ಕೆಲವು ಜನ ವಿದ್ಯಾರ್ಥಿಗಳನ್ನು ಕಳುಹಿಸಿರುತ್ತೇನೆ.

ನಾನು ನೋಡಿದ ದೇಶಗಳಲ್ಲೆಲ್ಲಾ ಕೈಗಾರಿಕೆಯು ವಿಶೇಷವಾಗಿ ನಡೆಯುವುದು ಅಮೆರಿಕಾಖಂಡದ ಸಂಯುಕ್ತಸಂಸ್ಥಾನಗಳಾಗಿರುತ್ತವೆ. ಇದರಲ್ಲಿ ಪ್ರತಿಯೊಂದು ಸಂಸ್ಥಾನದಲ್ಲಿಯೂ ಬಂದೊಂದು ಕೈಗಾರಿಕೆಯ ಕಾಲೇಜು ಇರುವುದು. ಈ ಕಾಲೇಜುಗಳಲ್ಲಿ ಫೀಜನ್ನು ವಸೂಲ್ಮಾಡದೇ ಪ್ರೌಢಪಾಠವನ್ನು ಕೂಡ ಹೇಳು

ವರು. ಪ್ರಜೆಗಳೆಲ್ಲರೂ ಅವರವರ ಸ್ವಶಕ್ತಿಯಿಂದ ಭೋಗ್ಯವಸ್ತುಗಳನ್ನು ನಿರ್ಮಾಣ ಮಾಡಿ ಆತ್ಮಾವಲಂಬನೆಯಿಂದ ಜೀವಿಸುವುದು ಪ್ರಜೆಗಳಿಗೆ ಮಾತ್ರವೇ ಅಲ್ಲದೆ ಜನಗಳಿಗೂ ಕ್ಷೇಮಕರವಾದುದರಿಂದ ಇಂಥಾ ಕೆಲಸವನ್ನು ಸರ್ಕಾರದವರು ಜಟುವಟಿಕೆಯಿಂದ ಮಾಡಿಸಬೇಕೇ ಹೊರತು ಅಂಥಾ ವಿದ್ಯಾಭ್ಯಾಸಕ್ಕೋಸ್ಕರ ಫೀಜನ್ನು ವಸೂಲ್ ಮಾಡುವುದು ತಪ್ಪೆಂದು ಆ ದೇಶೀಯರು ಅಭಿಪ್ರಾಯಪಡುತ್ತಾರೆ.

ಈ ಕಾಲೇಜುಗಳೆಲ್ಲಾ ಸರ್ಕಾರದ ಕಾಲೇಜುಗಳು. ಇವುಗಳಲ್ಲದೆ ಧರ್ಮಿಷ್ಠರಾದವರಿಂದ ಪ್ರತಿಷ್ಠಿಸಲ್ಪಟ್ಟ ಕೆಲವು ಕಾಲೇಜುಗಳಿರುತ್ತವೆ. ಈ ಕಾಲೇಜುಗಳಲ್ಲಿ ಸಿವಿಲ್ ಎಂಜನಿಯರಿಂಗ್, ವಿದ್ಯುಚ್ಛಕ್ತಿಯ ಎಂಜನಿಯರಿಂಗ್, ಯಂತ್ರಗಳ ಎಂಜನಿಯರಿಂಗ್, ನಾವೆಗಳ ಎಂಜನಿಯರಿಂಗ್ ಪಟ್ಟಣಗಳನ್ನು ಕಟ್ಟುವುದು, ಚಿತ್ರ ಬರೆಯುವುದು, ಪ್ರತಿಮೆಗಳನ್ನು ಮಾಡುವುದು, ನೇಗೆಯ ಕೆಲಸ, ಇವೇ ಮೊದಲಾದವುಗಳೆಲ್ಲಾ ಕಲಿಸಲ್ಪಡುತ್ತವೆ. ಬಾಸ್ಟ್ಯ ಪಟ್ಟಣದಲ್ಲಿ ಒಂದು ಸಕಲಕಲಾಶಾಲೆ ಇರುವುದು. ಇಲ್ಲಿ ೨,೫೦೦ ಜನ ವಿದ್ಯಾರ್ಥಿಗಳು ವ್ಯಾಸಂಗಮಾಡುವರು. ಚಿಕಾಗೋಪಟ್ಟಣದಲ್ಲಿ ಒಂದು ಕಲಾಶಾಲೆ ಇರುವುದು. ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ಕಲಾಶಾಲೆ ಇರುವುದು. ಅಲ್ಲಿ ೧,೫೦೦ ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುವರು. ಇವುಗಳೆಲ್ಲಾ ಧರ್ಮಿಷ್ಠರಾದ ಮಹಾಜನಗಳಿಂದ ಪ್ರತಿಷ್ಠಿಸಲ್ಪಟ್ಟ ಕಲಾಶಾಲೆಗಳಾಗಿರುತ್ತವೆ. ಹಾರ್‌ವರ್ಡ್, ಏಲ್ ಮತ್ತು ಕೊಲಂಬಿಯಾ ಪಟ್ಟಣಗಳಲ್ಲಿ ಎಂಜನಿಯರಿಂಗ್ ಶಾಸ್ತ್ರವು ಸಮಗ್ರವಾಗಿ ಬೋಧಿಸಲ್ಪಡುತ್ತಲಿರುವುದು. ಇಲ್ಲಿನ ಹೈಸ್ಕೂಲುಗಳಲ್ಲೆಲ್ಲಾ ಬಡಗೀ ಕೆಲಸ, ಕಬ್ಬಿಣ ಕೆಲಸ, ಯಂತ್ರಗಳನ್ನು ಮಾಡತಕ್ಕ ಕೆಲಸ ಇವೆಲ್ಲಾ ಸಮಗ್ರವಾಗಿ ಕಲಿಸಲ್ಪಡುತ್ತಲಿರುವುದು. ನಾನು ಇನ್ನೂ ಜಪಾನ್ ದೇಶಕ್ಕೆ ಹೋಗಿಲ್ಲ. ಆದರೆ ಕಳೆದ ಮೂವತ್ತು ನಲವತ್ತು ವರುಷಗಳಲ್ಲಿ ಜಪಾನ್‌ದೇಶೀಯರು ಮಾಡಿರತಕ್ಕ ಅದ್ಭುತವಾದ ಕೆಲಸಗಳನ್ನೆಲ್ಲಾ ನಾವು ಬಲ್ಲೆವು. ಈ ಪ್ರಪಂಚದಲ್ಲಿ ಇರತಕ್ಕ ಜನಗಳಲ್ಲೆಲ್ಲಾ ಇವರು ಅದ್ಭುತವಾದ ಸಾಮರ್ಥ್ಯವುಳ್ಳವರೆಂದು ರಣರಂಗದಲ್ಲಿ ಇವರು ಹೊಂದಿದ ಜಯಗಳಿಂದಲೇ ಪ್ರದರ್ಶನವಾಗುವುದು. ನ್ಯಾರ್ಪೋರ್ಟ್ ಮ್ಯೂರ್ಕ್‌ಗಳಲ್ಲಿ ಇವರು ಹೊಂದಿದ ಜಯವು ಈ ಪ್ರಪಂಚದಲ್ಲಿಯೇ ಅಭೂತಪೂರ್ವವಾದುದು. ಆದರೆ ಕಲಾಕೌಶಲ್ಯದಲ್ಲಿ ಇವರು ಹೊಂದಿರತಕ್ಕ ಜಯಗಳೊಡನೆ ಈ ಜಯಗಳನ್ನು ಹೋಲಿಸಿದರೆ ಅವುಗಳು ಏಕದೇಶವಾಗುವುವು.

ಇದಲ್ಲದೆ ಚಿಕ್ಕವಯಸ್ಸಿನಲ್ಲಿಯೇ ಮಕ್ಕಳ ಕೈಗಳಿಗೂ ಮತ್ತು ಕಣ್ಣುಗಳಿಗೂ ಕಲಗಳಲ್ಲಿ ಅಭ್ಯಾಸವನ್ನು ಮಾಡುವದು ಬಹಳ ಅವಶ್ಯಕವಾದುದು. ಈ ಅಭ್ಯಾಸದ ಮಹಿಮೆಯನ್ನು ಹೇಳುವುದು ಕಷ್ಟ. ಕೈಗಾರಿಕೆಯಿಂದ ಜೀವನಮಾಡತಕ್ಕವರು ಚಿಕ್ಕವಯಸ್ಸಿನಲ್ಲಿಯೇ ತಾವು ಯಾವಕೈಗಾರಿಕೆಯಿಂದ ಜೀವನಮಾಡಬೇಕೆಂದಿರುತ್ತಾರೆಯೊ ಅದನ್ನು ಅವರು ಅಭ್ಯಾಸಮಾಡಿದರೆ ಕೆಲವುವರುಷಗಳೊಳಗಾಗಿಯೇ ಅಂಥಾ ಕೈಗಾರಿಕೆಗಳನ್ನು ಬಹಳ ಲಕ್ಷಣವಾಗಿ ಮಾಡತಕ್ಕ ಶಕ್ತಿಯು ಬರುವುದು. ಕೈಗಾರಿಕೆಯಿಂದ ಜೀವಿಸುವುದು ಯಾರಿಗೆ ಅವಶ್ಯಕವಲ್ಲವೋ ಅಂಥಾವರಿಗೂಕೂಡ ಬಾಲ್ಯದಲ್ಲಿ ಕೈಗಳಿಗೂ ಕಣ್ಣುಗಳಿಗೂ ಮಾಡಬೇಕಾದ ಕೆಲಸಗಳಲ್ಲಿ ಅಭ್ಯಾಸವನು ಮಾಡಿಸಬೇಕು. ಚಿತ್ರಗಳನ್ನು ಬರೆಯುವುದು, ಪ್ರತಿಮೆಗಳನ್ನು ಮಾಡುವುದು, ಮರಗೆಲಸ, ಲೋಹಗಳಕೆಲಸ, ಇವುಗಳೆಲ್ಲಾ ಎಲ್ಲಾ ಪದವಿಯಲ್ಲಿರತಕ್ಕ ವಿದ್ಯಾರ್ಥಿಗಳಿಗೂ ಉಪಯುಕ್ತವಾದುದು. ಇಂಥಾ ವ್ಯಾಸಂಗವನ್ನು ಮಾಡಿಸುವವಿಷಯದಲ್ಲಿ ಬಾಲ್ಯದಲ್ಲಿಯೇ ನಾವು ಸರಿಯಾದ ಕೃಷಿಯನ್ನು ಮಾಡದೇ ಇದ್ದರೆ ವಯಸ್ಸಾದಮೇಲೆ ಈ ಎರಡು ಅಂಗಗಳಿಂದಲೂ ಮಾಡಬೇಕಾದ ಕೆಲಸಗಳು ಲಕ್ಷಣವಾಗಿ ಮಾಡುವುದಕ್ಕಾಗುವುದಿಲ್ಲವೆಂದು ಶಾರೀರಕಶಾಸ್ತ್ರಜ್ಞರೂ ಬುದ್ಧಿಶಾಸ್ತ್ರಜ್ಞರೂ ಹೇಳಿದಾರೆ. ಇದು ವಾಸ್ತವವಾದುದು. ವಿದ್ಯಾಭ್ಯಾಸ ಮತ್ತು ಕೈಗಾರಿಕೆಗಳನ್ನು ಮಾಡುವ ಹಡುಗರೂ ಮತ್ತು ಹುಡುಗಿಯರೂ ಕೈಯಿಂದ ಕೆಲಸಮಾಡುವುದನ್ನೂ, ಕಣ್ಣಿನಿಂದ ವ್ಯತ್ಯಾಸಗಳನ್ನು ತಿಳಿದುಕೊಳ್ಳುವಶಕ್ತಿಯನ್ನೂ ಬಾಲ್ಯದಲ್ಲಿಯೇ ಆರ್ಜಿಸಬೇಕು. ನಾವು ಪಾಠಶಾಲೆಗಳಿಗೆಲ್ಲಾ ಒಂದು ಕೈಗಾರಿಕೆಯ ತರಗತಿಯನ್ನು ಸೇರಿಸುವುದು ಬಹಳ ಅವಶ್ಯಕ. ಬಹಳ ಉಪಯುಕ್ತವಾದ ವಸ್ತುಗಳನ್ನು ನಿರ್ಮಾಣ ಮಾಡುವಕೆಲಸಗಳು ವಿಶೇಷವಾಗಿರುತ್ತವೆ. ಅವುಗಳನ್ನು ಹೇಗೆಮಾಡಬೇಕೋ ಅದನ್ನು ಕಲಿಯುವುದು ಬಡವರಿಗೆ ಜೀವನೋಪಾಯವಾಗಿಯೂ ಐಶ್ವರ್ಯವಂತರಿಗೆ ಸಂತೋಷಜನಕವಾಗಿಯೂ ಪರಿಣಮಿಸುವುದು. ಆದುದರಿಂದ ಯಾವ ಅಂತಸ್ಥುಗಳಲ್ಲಿದ್ದಾಗ್ಯೂ ಎಲ್ಲರೂ ಈ ಕೆಲಸವನ್ನು ಮಾಡಬಹುದು. ನಮ್ಮ ದೇಶದ ಕೈಗಾರಿಕೆಗಳು ವೃದ್ಧಿಗೆ ಬರಬೇಕಾದರೆ ಎಲ್ಲಾ ಕೈಗಾರಿಕೆಗಳಲ್ಲಿಯೂ ಸರಿಯಾದ ಪ್ರವೇಶವನ್ನು ಬಾಲ್ಯದಲ್ಲಿ ಎಲ್ಲರೂ ಹೊಂದಬೇಕು. ಇಂಥಾ ಉಪಯುಕ್ತವಾದ ಕಾಲಗಳಲ್ಲಿ ಅಭ್ಯಾಸವನ್ನು ಮಾಡುವುದು ಅತ್ಯಂತ ಅವಶ್ಯಕವಾದಾಗ್ಯೂ ಈ ಕಲೆಗಳಲ್ಲಿ ಅಭ್ಯಾಸಕ್ಕೆ ಆಧಾರಭೂತವಾದ ಲೋಕವ್ಯವಹಾರಕ್ಕೆ ಸಾಧಕವಾದ ಪ್ರೌಢವಿದ್ಯಾಭ್ಯಾಸವನ್ನೂ, ಕೂಡಾ ನಾವು ಉಪೇಕ್ಷಿಸಬಾರದು.

ಇಂಡಿಯಾದೇಶದ ಸಮಸ್ತ ಪಟ್ಟಣಗಳಲ್ಲಿಯೂ ಸಮಸ್ತ ಗ್ರಾಮಗಳಲ್ಲಿಯೂ ಕೈಗಾರಿಕೆಯ ಪಾಠಶಾಲೆಗಳು ಪ್ರತಿಷ್ಠಿಸಲ್ಪಡಬೇಕು. ಈ ಕೈಗಾರಿಕೆಗಳನ್ನು ಯಂತ್ರಸಹಾಯಗಳಿಂದ ಮಾಡುವ ರೀತಿಯೂ ಅಭ್ಯಾಸಮಾಡಲ್ಪಡಬೇಕು. ಈ ಅಭ್ಯಾಸವಾಗಬೇಕಾದರೆ ಯಾವ ಯಾವ ದೇಶಗಳಲ್ಲಿ ಯಂತ್ರಗಳು ಮಾಡಲ್ಪಡುವುವೋ ಅಲ್ಲಿಗೆ ವಿದ್ಯಾರ್ಥಿಗಳು ಹೋಗಿ ಯಂತ್ರರಚನೆಯನ್ನು ಕಲಿತುಕೊಳ್ಳಬೇಕು. ಈ ರಚನಾ ಕೌಶಲ್ಯವು ಉಂಟಾಗಬೇಕಾದರೆ, ಯೂರೋಪ್ ಅಮೆರಿಕಾ, ಜಪಾನ್, ದೇಶಗಳಿಗೆ ಪ್ರಯಾಣಮಾಡುವುದು ಅವಶ್ಯಕ. ಇಂಥಾ ಪ್ರಯಾಣದ ವಿಷಯದಲ್ಲಿ ದುರಭಿಮಾನಿಗಳು ಪ್ರತಿಬಂಧಕವಾಗುವುದಕ್ಕೆ ಅವಕಾಶ ಕೊಡಬಾರದು. ಲೋಕದಲ್ಲಿ ಸರ್ವಜ್ಞರು ಯಾರೂ ಇಲ್ಲ. ನಮ್ಮ ದೇಶೀಯರಿಗೆ ಕೆಲವು ವಿಷಯಗಳಲ್ಲಿ ಹೆಚ್ಚು ತಿಳುವಳಿಕೆಯು ಇದ್ದರೆ ದೇಶಾಂತರದವರಿಗೆ ಬೇರೇ ಕೆಲವು ವಿಷಯಗಳಲ್ಲಿ ಹೆಚ್ಚು ತಿಳುವಳಿಕೆಯು ಇರುವುದು. ದೇಶಾಂತರದವರು ದುರಭಿಮಾನವನ್ನು ಬಿಟ್ಟು ನಮ್ಮಲ್ಲಿರತಕ್ಕ ಗುಣಾಂಶಗಳನ್ನು ಪರಿಗ್ರಹಿಸುವರು. ಆವರಲ್ಲಿರತಕ್ಕ ಗುಣಾಂಶಗಳನ್ನು ತಿಳಿದುಕೊಂಡು ಅದರಿಂದ ಪ್ರಯೋಜನವನ್ನು ಹೊಂದುವುದು ನಮಗೆ ಕರ್ತವ್ಯವಲ್ಲವೇ? ಯಂತ್ರರಚನಾಶಕ್ತಿಯಲ್ಲಿಯೂ, ನಾನಾವಿಧವಾದ ಕೈಗಾರಿಕೆಗಳಲ್ಲಿಯೂ ನಮಗಿಂತಲೂ ಅಧಿಕರಾದವರಿಂದ ನಾವು ಏತಕ್ಕೆ ತಿಳಿದುಕೊಳ್ಳಬಾರದು? ಹಾಗೆ ತಿಳಿದುಕೊಳ್ಳುವುದಕ್ಕೋಸ್ಕರ ದೇಶಾಟನವನ್ನು ಏತಕ್ಕೆ ಮಾಡಬಾರದು? ಕಳೆದ ೫೦ ವರುಷಗಳಿಂದಲೂ ಇಂಥಾ ದೇಶಾಟನಕ್ಕೆ ಎಷ್ಟು ಅಡ್ಡಿಯನ್ನು ಮಾಡಿದಾಗ್ಯೂ ಅದನ್ನು ಲಕ್ಷ್ಯಮಾಡದೆ ದೇಶಾಟನವನ್ನು ಮಾಡಿ ಅನೇಕರು ಅನೇಕ ಕೈಗಾರಿಕೆಗಳಲ್ಲಿ ಪ್ರವೇಶವನ್ನು ಹೊಂದುತ್ತಲಿರುವರು. ದುರಭಿಮಾನಜನ್ಯವಾದ ನಿರ್ಬಂಧಗಳು ಪರಿಹರಿಸಲ್ಪಟ್ಟರೆ ಇನ್ನೂ ಬಹುಮಂದಿಗಳು ದೇಶಾಂತರಗಳಿಗೆ ಪ್ರಯಾಣ ಮಾಡಿ ಯಾವ ಯಾವ ವಿದ್ಯೆಯನ್ನು ಕಲಿತುಕೊಂಡು ಬಂದು ತಮ್ಮ ದೇಶದಲ್ಲಿ ಪ್ರಚಾರಮಾಡಿ ದೇಶವನ್ನು ವೃದ್ಧಿಗೆ ತರಬಹುದೋ ಅದನ್ನು ಮಾಡುವರು. ಅದಕ್ಕೆ ಇಂಥಾ ದೇಶಾಭಿಮಾನದ ಅನುಷ್ಠಾನಕ್ಕೆ ಪ್ರತಿಬಂಧಕವನ್ನುಂಟುಮಾಡುವುದು ಬಹಳ ಪಾಪಕರವಾದ ಕೆಲಸವು. ಆದರೆ ಈ ದುರಭಿಮಾನವು ಗತಗೋಪ್ಯಿಗೆ ಸೇರಿತೆಂಬುವುದಕ್ಕೆ ದೃಷ್ಟಾಂತಗಳು ಬೇಕಾದಷ್ಟಾಗಿ ಇರುತ್ತವೆ. ನಾನು ಸಂಚಾರ ಮಾಡಿದ ದೇಶಗಳಲ್ಲಿನ ವಿಶೇಷ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಜನರು ಅತ್ಯಂತ ಅಭಿಲಾಷೆಯುಳ್ಳವರಾಗಿರುತ್ತಾರೆ. ಈ ವಿಚಾ

ರಸೇ ಉಪಯುಕ್ತವಾದ ಜ್ಞಾನವಿಷಯದಲ್ಲಿ ಹುಟ್ಟಿರತಕ್ಕ ದಾಹವನ್ನು ಸೂಚಿಸುತ್ತದೆ. ಈ ದಾಹವು ನಿಜವಾದದ್ದು. ಇದು ಶುಭಸೂಚಕವಾದದ್ದಾಗಿಯೂ ಇರುವುದು. ಅಮೆರಿಕಾಖಂಡದವರು ಕೈಗಾರಿಕೆಗಳಲ್ಲಿ ಬಹಳ ಪ್ರಜ್ಞಾಶಾಲಿಗಳಾದಾಗ್ಯೂ ಪ್ರತಿವರುಷವೂ ಮೂರುನಾಲಿರ ಜನ ವಿದ್ಯಾರ್ಥಿಗಳನ್ನು ಬೇರೆಬೇರೆ ದೇಶಾಂತರಗಳಿಗೆ ಕಳುಹಿಸಿ ಯಾವ ಕೈಗಾರಿಕೆಯಲ್ಲಿ ಯಾವ ದೇಶೀಯರು ತಮಗಿಂತಲೂ ಚೆನ್ನಾಗಿ ಕೈಗಾರಿಕೆಗಳನ್ನು ಮಾಡುವರೋ ಅದನ್ನು ಪರೀಕ್ಷಿಸಿ ಅಭ್ಯಾಸ ಮಾಡಿಕೊಂಡು ಬರುವಂತೆ ಆಜ್ಞಾಪಿಸಿ ಕಳುಹಿಸಿ ಕೊಡುತ್ತಾರೆ. ಯಾವ ಯಾವ ದೇಶಗಳಲ್ಲಿ ಯಾವ ಯಾವ ಪದಾರ್ಥಗಳು ಬೆಳೆಯುವುವೋ ಅವುಗಳನ್ನು ಪರೀಕ್ಷಿಸಿ ವ್ಯಾಪಾರಕ್ಕೆ ತಕ್ಕ ಪ್ರೋತ್ಸಾಹವನ್ನುಂಟುಮಾಡುವುದಕ್ಕೂ ಜನಗಳನ್ನು ಕಳುಹಿಸುತ್ತಲಿರುವರು. ಜಪಾನ್ ದೇಶೀಯರು ಕೈಗಾರಿಕೆಗಳಲ್ಲಿ ಸಮಗ್ರವಾದ ಪಾಂಡಿತ್ಯವನ್ನುಳ್ಳವರಾದಾಗ್ಯೂ, ಯಂತ್ರಗಳಿಂದ ತಯಾರಾದ ವಸ್ತುಗಳನ್ನು ಪಾಶ್ಚಾತ್ಯರು ಮಾಡುವ ಪರೀಕ್ಷಿಗಿಂತಲೂ ಕಡಿಮೆಯಾಗಿ ಮಾಡಬೇಕಾದರೆ ಎಷ್ಟು ನೈಪುಣ್ಯವನ್ನು ಹೊಂದಿರಬೇಕೋ ಅಷ್ಟು ನೈಪುಣ್ಯವನ್ನು ಹೊಂದಿದ್ದಾಗ್ಯೂ, ನಾಲಿರಾರು ಜನ ವಿದ್ಯಾರ್ಥಿಗಳನ್ನು ಫ್ರಾನ್ಸ್, ಜರ್ಮನಿ, ಇಂಗ್ಲೆಂಡ್, ಅಮೆರಿಕಾ ದೇಶಗಳಿಗೆ ಕಳುಹಿಸಿ ಇರುವರು. ಅಲ್ಲಿನ ಕೆಲಸಗಳ ಮರ್ಮಗಳನ್ನು ತಿಳಿದುಕೊಂಡು ಅವರಿಗಿಂತಲೂ ಚೆನ್ನಾಗಿ ಕೆಲಸಮಾಡಿ ಅವರನ್ನು ಮೂಲೆಗೆ ಕೂರಿಸುವ ಪ್ರಯತ್ನವನ್ನು ಮಾಡುತ್ತಿರುವರು. ಜ್ಞಾನಾರ್ಜನೆಯ ದಾಹವು ನಾಗರೀಕರಲ್ಲಿ ಇಷ್ಟು ಪ್ರಬಲವಾಗಿರುವುದು. ಸಮಸ್ತ ಕೈಗಾರಿಕೆಗಳೂ ಸರ್ವರಿಗೂ ಅವಲಂಬನೀಯಗಳೆಂದು ಭಾವಿಸಿ ಕೆಲಸಮಾಡುತ್ತಲಿರುವರು. ಹೀಗೆ ಕೆಲಸಮಾಡುವುದರಲ್ಲಿ ದಾರಿದ್ರ್ಯವು ಹುಡಿಕಿ ನೋಡಿದರೂ ಸಿಕ್ಕುವುದಿಲ್ಲ. ಜಪಾನ್ ಗೌರ್ನಮೆಂಟಿನವರು ಅಲ್ಲಿನ ವಿದ್ಯಾರ್ಥಿಗಳನ್ನು ಯೂರೊಪ್‌ಖಂಡಕ್ಕೆ ವಿದ್ಯಾಭ್ಯಾಸಾರ್ಥವಾಗಿ ಕಳುಹಿಸುತ್ತಲಿರುವರು. ಹೀಗೆ ದೇಶಾಟನವನ್ನು ಮಾಡಿ ಸಕಲವಿದ್ಯಾವಿಶಾರದರಾಗಿ ಜಪಾನ್ ದೇಶಕ್ಕೆ ಪಾವನು ಬಂದ ಮಹನೀಯರ ಪ್ರಭಾವದಿಂದ ರಾಜಕೀಯ ವಿಷಯಗಳಲ್ಲಿಯೂ, ಕೈಗಾರಿಕೇ ವಿಷಯದಲ್ಲಿಯೂ, ವ್ಯಾಪಾರದ ವಿಷಯದಲ್ಲಿಯೂ, ಈಗ ಪ್ರಪಂಚದಲ್ಲಿ ಜಪಾನ್‌ದೇಶವು ಉನ್ನತವಾದ ಪದವಿಯನ್ನು ಅನುಭವಿಸುತ್ತಿರುವುದು. ಜಪಾನ್ ದೇಶದ ನಾವಿಕರು ವಿಲಾಯತಿಯಲ್ಲಿ ನಾವೆಗಳ ಶಾಸ್ತ್ರವನ್ನು ಅಭ್ಯಾಸಮಾಡಿದ್ದಲ್ಲದೆ, ತಮ್ಮ ದೇಶದ ಸೊದಲಾದ ನಾವೆಗಳಿಗೆ ಪ್ರಸಿದ್ಧನಾದ ಎಲ್ಲ ನೇವಾಗಳಲ್ಲಿಯೂ ವಿದ್ಯೆಯನ್ನು

ಹೊಂದಿ ಈಗ ಅಖಂಡವಾದ ಪಾಂಡಿತ್ಯವನ್ನು ಹೊಂದಿರುವರು. ಮಿಲಿಟರೀ ವಿದ್ಯಗಳನ್ನು ಜರ್ಮನೀ ಮೊದಲಾದ ಸ್ಥಳಗಳಲ್ಲಿ ಅಭ್ಯಾಸಮಾಡಿ ಮಿಲಿಟರೀ ಚಮತ್ಕಾರಗಳಲ್ಲಿ ಅದ್ವಿತೀಯರಾಗಿರುವರು. ಲಂಡನ್, ಬರ್ಲಿನ್, ನ್ಯೂಯಾರ್ಕ್ ಮೊದಲಾದ ಪಟ್ಟಣಗಳಲ್ಲಿ ಕುಬೇರ ಪದವಿಯನ್ನು ಅಲಂಕರಿಸುತ್ತಿರುವ ಬ್ಯಾಂಕುಗಳಲ್ಲಿ ಧನಾರ್ಜನೆಯು ಮತ್ತು ಧನವ್ಯಯದ ಮರ್ಮಗಳನ್ನು ತಿಳಿದುಕೊಂಡು ಲೆಖ್ಖಾಚಾರಸ್ಥರಾದ ವರ್ತಕಮುಖಾಜನರ ಮೆಹನತ್ತಿನಿಂದ ಜಪಾನ್ ದೇಶವು ಸಂಪತ್ತಿಗೆ ಮಾತೃಸ್ಥಾನವಾಗಿರುವುದು. ದೇಹಾಂತವಾಗಿ ಸಮಸ್ತವನ್ನೂ ಪರಿತ್ಯಾಗಮಾಡುವ, ಧರ್ಮವನು ಅವಲಂಬಿಸಿರುವ ಜಪಾನ್ ದೇಶೀಯರು ಈ ಪ್ರಪಂಚದಲ್ಲಿರುವ ಸಮಸ್ತ ಜನಗಳಿಗಿಂತಲೂ ಮುಂದಾಳುಗಳಾಗಿರುವರು.

ಪ್ರಪಂಚವೆಲ್ಲಾ ಈ ರೀತಿಯಲ್ಲಿ ನಾನು ಮುಂದು, ತಾನು ಮುಂದು ಎಂಬಂತಾಗಿ ದೇಶವನ್ನು ವೃದ್ಧಿಗೆ ತರುವ ಏರ್ಪಾಡನ್ನು ಮಾಡುತ್ತಲಿರುವುದು ಅತ್ಯಾವಶ್ಯಕ. ನಮ್ಮ ದೇಶೀಯರಲ್ಲಿ ಧರ್ಮಿಷ್ಠರಾದ ಮಾ॥ ಯೋಗೇಂದ್ರಚಂದ್ರಘೋಷರವರು ಅಮೆರಿಕಾ ಮತ್ತು ಯೂರೊಪ್‌ಖಂಡಗಳಿಗೆ ವಿದ್ಯಾಭ್ಯಾಸಾರ್ಥವಾಗಿ ವಿದ್ಯಾರ್ಥಿಗಳನ್ನು ಕಳುಹಿಸುವ ಏರ್ಪಾಡನ್ನು ಮಾಡಿ ಅನೇಕ ಜನ ವಿದ್ಯಾರ್ಥಿಗಳನ್ನು ಕಳುಹಿಸಿ ಇರುವರು. ಇದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಯೂರೊಪ್, ಅಮೆರಿಕಾಖಂಡಗಳಲ್ಲಿ ನಾನು ಸಂಚಾರ ಮಾಡುತ್ತಿರುವಾಗ್ಯೆ ಎಲ್ಲೆಲ್ಲಿಯೂ ಬಂಗಾಳೀ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದನ್ನು ನೋಡಿ ನನಗೆ ಅಪರಿಮಿತವಾದ ಸಂತೋಷ ಉಂಟಾಯಿತು. ಇಂಡಿಯಾದೇಶದಿಂದ ಆವರು ಬಹಳ ದೂರದಲ್ಲಿದ್ದಾಗ್ಯೂ ತಮ್ಮ ದೇಶದ ಅಭಿವೃದ್ಧಿಯ ವಿಷಯದಲ್ಲಿ ಅವರಿಗೆ ಇರುವ ಅಭಿಮಾನವು ಅನನ್ಯಸಾಧಾರಣವಾಗಿರುವುದು. ಇಂಡಿಯಾದೇಶದ ಏಳಿಗಿಗೆ ಈ ವಿದ್ಯಾರ್ಥಿಗಳೇ ಕಾರಣಭೂತರು. ಬರೋಡಾ ದೇಶದಿಂದಲೂ ಕಳೆದ ಕೆಲವು ವರುಷಗಳಿಂದ ದೇಶಾಂತರಗಳಿಗೆ ವಿದ್ಯಾಭ್ಯಾಸಾರ್ಥವಾಗಿ ಅನೇಕ ವಿದ್ಯಾರ್ಥಿಗಳು ಕಳುಹಿಸಲ್ಪಟ್ಟಿರು. ಅವರು ಈಗ ಬಹಳ ಪ್ರಯೋಜನವಾದ ಕೆಲಸಗಳನ್ನು ಮಾಡಿ ತಾವು ಜೀವಿಕೆಯನ್ನು ಸಂಪಾದಿಸಿಕೊಳ್ಳುವುದಲ್ಲದೆ ಬಹುಜನಗಳಿಗೆ ಜೀವಿಕೆಯನ್ನು ಕಲ್ಪಿಸುತ್ತಿರುವರು. ಈಚೆಗೆ ಕೆಲವು ಜನ ವಿದ್ಯಾರ್ಥಿಗಳನ್ನು ಇಂಗ್ಲೆಂಡ್, ಜರ್ಮನೀ, ಅಮೆರಿಕಾ ಮತ್ತು ಜಪಾನ್ ದೇಶಗಳಿಗೆ ಕಳುಹಿಸಿ ಇರುತ್ತೇನೆ. ಇನರಲ್ಲದೆ ಹೊಸ ಕೈಗಾರಿಕೆಗಳನ್ನು ಕಲಿಯುವುದಕ್ಕೆ ಇನ್ನೂ ಕೆಲವರನ್ನು ಕಳುಹಿಸುವ ಏರ್ಪಾಡನ್ನು ಮಾಡುತ್ತಲಿದೇನೆ.

ರವೇ ಉಪಯುಕ್ತವಾದ ಜ್ಞಾನವಿಷಯದಲ್ಲಿ ಹುಟ್ಟಿರತಕ್ಕ ದಾಹವನ್ನು ಸೂಚಿಸುತ್ತದೆ. ಈ ದಾಹವು ನಿಜವಾದದ್ದು. ಇದು ಶುಭಸೂಚಕವಾದದ್ದಾಗಿಯೂ ಇರುವುದು. ಅಮೆರಿಕಾಖಂಡದವರು ಕೈಗಾರಿಕೆಗಳಲ್ಲಿ ಬಹಳ ಪ್ರಜ್ಞಾಶಾಲಿಗಳಾದಾಗ್ಯೂ ಪ್ರತಿವರುಷವೂ ಮೂರುನಾವಿರ ಜನ ವಿದ್ಯಾರ್ಥಿಗಳನ್ನು ಬೇರೆಬೇರೆ ದೇಶಾಂತರಗಳಿಗೆ ಕಳುಹಿಸಿ ಯಾವ ಕೈಗಾರಿಕೆಯಲ್ಲಿ ಯಾವ ದೇಶೀಯರು ತಮಗಿಂತಲೂ ಜೆನ್ನಾಗಿ ಕೈಗಾರಿಕೆಗಳನ್ನು ಮಾಡುವುರೋ ಅದನ್ನು ಪರೀಕ್ಷಿಸಿ ಅಭ್ಯಾಸ ಮಾಡಿಕೊಂಡು ಬರುವಂತೆ ಆಜ್ಞಾಪಿಸಿ ಕಳುಹಿಸಿ ಕೊಡುತ್ತಾರೆ. ಯಾವ ಯಾವ ದೇಶಗಳಲ್ಲಿ ಯಾವ ಯಾವ ಪದಾರ್ಥಗಳು ಬೆಳೆಯುವುವೋ ಅವುಗಳನ್ನು ಪರಿಶೀಲಿಸಿ ವ್ಯಾಪಾರಕ್ಕೆ ತಕ್ಕ ಪ್ರೋತ್ಸಾಹವನ್ನುಂಟುಮಾಡುವುದಕ್ಕೂ ಜನಗಳನ್ನು ಕಳುಹಿಸುತ್ತಲಿರುವರು. ಜಪಾನ್ ದೇಶೀಯರು ಕೈಗಾರಿಕೆಗಳಲ್ಲಿ ಸಮಗ್ರವಾದ ಪಾಂಡಿತ್ಯವುಳ್ಳವರಾದಾಗ್ಯೂ, ಯಂತ್ರಗಳಿಂದ ತಯಾರಾದ ವಸ್ತುಗಳನ್ನು ಪಾಶ್ಚಾತ್ಯರು ಮಾರುವ ಬೆಲೆಗಿಂತಲೂ ಕಡಿಮೆಯಾಗಿ ಮಾರಬೇಕಾದರೆ ಎಷ್ಟು ನೈಪುಣ್ಯವನ್ನು ಹೊಂದಿರಬೇಕೋ ಅಷ್ಟು ನೈಪುಣ್ಯವನ್ನು ಹೊಂದಿದ್ದಾಗ್ಯೂ, ನಾವಿರಾರು ಜನ ವಿದ್ಯಾರ್ಥಿಗಳನ್ನು ಫ್ರಾನ್ಸ್, ಜರ್ಮನಿ, ಇಂಗ್ಲೆಂಡ್, ಅಮೆರಿಕಾ ದೇಶಗಳಿಗೆ ಕಳುಹಿಸಿ ಇರುವರು. ಅಲ್ಲಿನ ಕೆಲಸಗಳ ಮರ್ಮಗಳನ್ನು ತಿಳಿದುಕೊಂಡು ಅವರಿಗಿಂತಲೂ ಚೆನ್ನಾಗಿ ಕೆಲಸಮಾಡಿ ಅವರನ್ನು ಮೂಲೆಗೆ ಕೂರಿಸುವ ಪ್ರಯತ್ನವನ್ನು ಮಾಡುತ್ತಿರುವರು. ಜ್ಞಾನಾರ್ಜನೆಯ ದಾಹವು ನಾಗರೀಕರಲ್ಲಿ ಇಷ್ಟು ಪ್ರಬಲವಾಗಿರುವುದು. ಸಮಸ್ತ ಕೈಗಾರಿಕೆಗಳೂ ಸರ್ವರಿಗೂ ಅವಲಂಬನೀಯಗಳೆಂದು ಭಾವಿಸಿ ಕೆಲಸಮಾಡುತ್ತಲಿರುವರು. ಹೀಗೆ ಕೆಲಸಮಾಡುವುದರಲ್ಲಿ ದಾರಿದ್ರ್ಯವು ಹುಡಿಕಿ ಸೋಡಿದರೂ ಸಿಕ್ಕುವುದಿಲ್ಲ. ಜಪಾನ್ ಗೌರ್ನಮೆಂಟಿನವರು ಅಲ್ಲಿನ ವಿದ್ಯಾರ್ಥಿಗಳನ್ನು ಯೂರೊಪ್‌ಖಂಡಕ್ಕೆ ವಿದ್ಯಾಭ್ಯಾಸಾರ್ಥವಾಗಿ ಕಳುಹಿಸುತ್ತಲಿರುವರು. ಹೀಗೆ ದೇಶಾಟನವನ್ನು ಮಾಡಿ ಸಕಲವಿದ್ಯಾವಿಶಾರದರಾಗಿ ಜಪಾನ್ ದೇಶಕ್ಕೆ ವಾಪಸು ಬಂದ ಮಹನೀಯರ ಪ್ರಭಾವದಿಂದ ರಾಜಕೀಯ ವಿಷಯಗಳಲ್ಲಿಯೂ, ಕೈಗಾರಿಕೇ ವಿಷಯದಲ್ಲಿಯೂ, ವ್ಯಾಪಾರದ ವಿಷಯದಲ್ಲಿಯೂ, ಈಗ ಪ್ರಪಂಚದಲ್ಲಿ ಜಪಾನ್‌ದೇಶವು ಅಗ್ರಗಣ್ಯವಾದ ಪದವಿಯನ್ನು ಅನುಭವಿಸುತ್ತಿರುವುದು. ಜಪಾನ್ ದೇಶದ ನಾವಿಕರು ವಿಲಾಯಿತಿಯಲ್ಲಿ ನಾವೆಗಳ ಶಾಸ್ತ್ರವನ್ನು ಅಭ್ಯಾಸಮಾಡಿದ್ದಲ್ಲದೆ, ಅಮೆರಿಕಾ ಮೊದಲಾದ ನಾವೆಗಳಿಗೆ ಪ್ರಸಿದ್ಧವಾದ ಎಲ್ಲಾ ದೇಶಗಳಲ್ಲಿಯೂ ತಿರ್ಗೆಯನ್ನು

ಹೊಂದಿ ಈಗ ಅಖಂಡವಾದ ಪಾಂಡಿತ್ಯವನ್ನು ಹೊಂದಿರುವರು. ಮಿಲಿಟೆರೀ ವಿದ್ಯೆಗಳನ್ನು ಜರ್ಮನೀ ಮೊದಲಾದ ಸ್ಥಳಗಳಲ್ಲಿ ಅಭ್ಯಾಸಮಾಡಿ ಮಿಲಿಟೆರೀ ಚೆಮತ್ಕಾರಗಳಲ್ಲಿ ಅದ್ವಿತೀಯರಾಗಿರುವರು. ಲಂಡನ್, ಬರ್ಲಿನ್, ನ್ಯೂಯಾರ್ಕ್ ಮೊದಲಾದ ಪಟ್ಟಣಗಳಲ್ಲಿ ಕುಬೇರ ಪದವಿಯನ್ನು ಅಲಂಕರಿಸುತ್ತಿರುವ ಬ್ಯಾಂಕುಗಳಲ್ಲಿ ಧನಾರ್ಜನೆಯು ಮತ್ತು ಧನವ್ಯಯದ ಮರ್ಮಗಳನ್ನು ತಿಳಿದುಕೊಂಡು ಲೆಖ್ಖಾಚಾರಸ್ಥರಾದ ಪರ್ಯಕಮಹಾಜನರ ಮೆಹನತ್ತಿನಿಂದ ಜಪಾನ್ ದೇಶವು ಸಂಪತ್ತಿಗೆ ಮಾತೃಸ್ಥಾನವಾಗಿರುವುದು. ದೇಹಾಂತವಾಗಿ ಸಮಸ್ತವನ್ನೂ ಪರಿತ್ಯಾಗಮಾಡುವ, ಧರ್ಮವನು ಅವಲಂಬಿಸಿರುವ ಜಪಾನ್ ದೇಶೀಯರು ಈ ಪ್ರಪಂಚದಲ್ಲಿರುವ ಸಮಸ್ತ ಜನಗಳಿಗಿಂತಲೂ ಮುಂದಾಳುಗಳಾಗಿರುವರು.

ಪ್ರಪಂಚವೆಲ್ಲಾ ಈ ರೀತಿಯಲ್ಲಿ ನಾನು ಮುಂದು, ತಾನು ಮುಂದು ಎಂಬದಾಗಿ ದೇಶವನ್ನು ವೃದ್ಧಿಗೆ ತರುವ ಏರ್ಪಾಡನ್ನು ಮಾಡುತ್ತಲಿರುವುದು ಅತ್ಯಾವಶ್ಯಕ. ನಮ್ಮ ದೇಶೀಯರಲ್ಲಿ ಧರ್ಮಿಷ್ಟರಾದ ಮಾ॥ ಯೋಗೇಂದ್ರಚಂದ್ರಘೋಷರವರು ಅಮೆರಿಕಾ ಮತ್ತು ಯೂರೊಪ್ ಖಂಡಗಳಿಗೆ ವಿದ್ಯಾಭ್ಯಾಸಾರ್ಥವಾಗಿ ವಿದ್ಯಾರ್ಥಿಗಳನ್ನು ಕಳುಹಿಸುವ ಏರ್ಪಾಡನ್ನು ಮಾಡಿ ಅನೇಕ ಜನ ವಿದ್ಯಾರ್ಥಿಗಳನ್ನು ಕಳುಹಿಸಿ ಇರುವರು. ಇದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಯೂರೊಪ್, ಅಮೆರಿಕಾಖಂಡಗಳಲ್ಲಿ ನಾನು ಸಂಚಾರ ಮಾಡುತ್ತಿರುವಾಗ್ಯೆ ಎಲ್ಲೆಲ್ಲಿಯೂ ಬಂಗಾಳೀ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದನ್ನು ನೋಡಿ ನನಗೆ ಅಪರಿಮಿತವಾದ ಸಂತೋಷ ಉಂಟಾಯಿತು. ಇಂಡಿಯಾದೇಶದಿಂದ ಅವರು ಬಹಳ ದೂರದಲ್ಲಿದ್ದಾಗ್ಯೂ ತಮ್ಮ ದೇಶದ ಅಭಿವೃದ್ಧಿಯ ವಿಷಯದಲ್ಲಿ ಅವರಿಗೆ ಇರುವ ಅಭಿಮಾನವು ಅನನ್ಯಸಾಧಾರಣವಾಗಿರುವುದು. ಇಂಡಿಯಾ ದೇಶದ ಏಳಿಗೆಗೆ ಈ ವಿದ್ಯಾರ್ಥಿಗಳೇ ಕಾರಣಭೂತರು. ಬರೋಡಾ ದೇಶದಿಂದಲೂ ಕಳೆದ ಕೆಲವು ವರುಷಗಳಿಂದ ದೇಶಾಂತರಗಳಿಗೆ ವಿದ್ಯಾಭ್ಯಾಸಾರ್ಥವಾಗಿ ಅನೇಕ ವಿದ್ಯಾರ್ಥಿಗಳು ಕಳುಹಿಸಲ್ಪಟ್ಟಿರು. ಅವರು ಈಗ ಬಹಳ ಪ್ರಯೋಜನವಾದ ಕೆಲಸಗಳನ್ನು ಮಾಡಿ ತಾವು ಜೀವಿಕೆಯನ್ನು ಸಂಪಾದಿಸಿಕೊಳ್ಳುವುದಲ್ಲದೆ ಬಹುಜನಗಳಿಗೆ ಜೀವಿಕೆಯನ್ನು ಕಲ್ಪಿಸುತ್ತಿರುವರು. ಈಚೆಗೆ ಕೆಲವು ಜನ ವಿದ್ಯಾರ್ಥಿಗಳನ್ನು ಇಂಗ್ಲೆಂಡ್, ಜರ್ಮನೀ, ಅಮೆರಿಕಾ ಮತ್ತು ಜಪಾನ್ ದೇಶಗಳಿಗೆ ಕಳುಹಿಸಿ ಇರುತ್ತೇನೆ. ಇವರಲ್ಲದೆ ಹೊಸ ಕೈಗಾರಿಕೆಗಳನ್ನು ಕಲಿಯುವುದಕ್ಕೆ ಇನ್ನೂ ಕೆಲವರನ್ನು ಕಳುಹಿಸುವ ಏರ್ಪಾಡನ್ನು ಮಾಡುತ್ತಲಿದೇನೆ.

ಹೀಗೆ ಇಂಡಿಯಾದೇಶದ ಸ್ಥಿತಿಯು ವಿಲಕ್ಷಣವಾಗಿರುವುದು. ಅಭಿವೃದ್ಧಿಗೆ ಬರಬೇಕೆಂಬ ಆಶೆಯು ಜನಗಳಿಗೆ ಹುಟ್ಟುತ್ತಿರುವುದು. ಇಂಡಿಯಾದೇಶದ ಪಶ್ಚಿಮ ಘಟ್ಟಗಳಲ್ಲಿ ವಿದ್ಯುಚ್ಛಕ್ತಿಯನ್ನು ನಿರ್ಮಾಣ ಮಾಡಿ ಅದರಿಂದ ಬೊಂಬಾಯಿನಲ್ಲಿ ಯಂತ್ರಗಳನ್ನು ನಡಿಸಬೇಕೆಂಬ ಪ್ರಯತ್ನವು ನಡೆಯುತ್ತಿರುವುದು. ಮದರಾಸ್ ಜನರು ಮರದ ಹತ್ತಿಯೇ ಮೊದಲಾದವುಗಳನ್ನು ಬೆಳೆದು ಯಂತ್ರಶಕ್ತಿಯಿಂದ ನಮ್ಮ ದೇಶಕ್ಕೆ ಬೇಕಾದಷ್ಟು ಬಟ್ಟೆಯನ್ನು ತಾವೇ ಮಾಡಬೇಕೆಂಬ ಕುತೂಹಲವುಳ್ಳವರಾಗಿರುವರ ಮೈ॥ ತಾತಾರವರ ಶೋಧಕಶಾಲೆಯಿಂದ ಆಗಬಹುದಾದ ಅಭೂತಪೂರ್ವವಾದ ಪ್ರಯೋಜನಗಳನ್ನು ಇಂಡಿಯಾದೇಶೀಯರೆಲ್ಲರೂ ಎದುರುನೋಡುತ್ತಿರುವರು. ಬಹುಕಾಲದಿಂದ ಗಾಢವಾದ ನಿದ್ದೆಯನ್ನು ಮಾಡುತ್ತಿದ್ದ ಜನರು ಜಾಗರಾವಸ್ಥೆಯನ್ನು ಹೊಂದುತ್ತಿರುವರು. ಕೈಗಾರಿಕೆಗಳಲ್ಲಿ ಪಾಶ್ಚಾತ್ಯರಂತೆ ವೃದ್ಧಿಗೆ ಬರಬೇಕಾದರೆ ಅವರಂತೆಯೇ ಬೇಜಾರನ್ನು ಹೊಂದದೆ ಸಹನದಿಂದಲೂ ಸಾಹಸದಿಂದಲೂ ಕೆಲಸಮಾಡಬೇಕೆಂಬ ಜ್ಞಾನವು ಜನಗಳಿಗೆ ಉಂಟಾಗುತ್ತಿರುವುದು. ಇವುಗಳೆಲ್ಲಾ ನಮಗೆ ಉತ್ತರೋತ್ತರ ಉಂಟಾಗತಕ್ಕ ಸಂಪತ್ತಿಗೆ ಸೂಚಕಗಳೆಂದು ನಾನು ಭಾವಿಸುತ್ತೇನೆ. ನಾವೂ ಇತರರಂತೆ ವೃದ್ಧಿಗೆ ಬರುವುದು ಕಷ್ಟವಲ್ಲ. ಇತರರಂತೆ ಸಾಹಸವೃತ್ತಿಗಳನ್ನು ಹೇಗೆ ಮಾಡಬೇಕೋ ಅದನ್ನು ನಾವು ಕಲಿಸಬೇಕು. ಯಾವುವು ನಮಗೆ ಮುಖ್ಯಕರ್ತವ್ಯಗಳೋ ಮತ್ತು ಯಾವುವು ಮುಖ್ಯ ಕರ್ತವ್ಯಗಳಲ್ಲವೋ ಅವುಗಳನ್ನು ಪರಿಶೋಧಿಸಿ ತಿಳಿದುಕೊಂಡು ವೃದ್ಧಿಗೆ ಬರುವ ಮಾರ್ಗವನ್ನು ನೋಡಬೇಕು.

ಗ್ರೀಸ್ ದೇಶವು ಒಂದಾನೊಂದುಕಾಲದಲ್ಲಿ ಅತ್ಯಂತ ಉನ್ನತವಾದ ಸ್ಥಿತಿಯಲ್ಲಿತ್ತು. ಪಶ್ಚಿಮದೇಶವೆಲ್ಲಾ ಈ ದೇಶೀಯರ ಆಜ್ಞೆಗೆ ಒಳಗಾಗಿದ್ದಿತು. ಪೆರಿಕ್ಲೀನ್, ಪ್ಲೇಟೋ, ಆರಿಸ್ಟೋಟಲ್ ಎಂಬ ಹೆಸರುಗಳ ಉಚ್ಚಾರಣೆಯು ಮಾತ್ರದಿಂದಲೇ ಪ್ರಪಂಚವೆಲ್ಲಾ ವಿಸ್ಮಿತವಾಗುತ್ತಿತ್ತು. ಅರ್ಥೆನ್ಸ್ ಪಟ್ಟಣವು ಪ್ರಪಂಚಕ್ಕೆ ರಾಜಧಾನಿ ಎಂಬದಾಗಿ ಪರಿಗಣಿಸಲ್ಪಟ್ಟಿತ್ತು. ಈ ದೇಶೀಯನಾದ ಅಲಕ್ಸಾಂದ್ರನು ಪ್ರಪಂಚವನ್ನೆಲ್ಲಾ ಗೆದ್ದು " ಗೆಲ್ಲುವುದಕ್ಕೆ ಬೇರೇ ಪ್ರಪಂಚವಿಲ್ಲವಲ್ಲಾ " ಎಂದು ಸಂತಾಪಪಟ್ಟನು. ಇಂಥಾ ದೇಶಕ್ಕೆ ಈಗ ಉಂಟಾಗಿರತಕ್ಕ ಸ್ಥಿತಿಯನ್ನು ನೋಡಿದರೆ ಪರಮಾಶ್ಚರ್ಯವಾಗುತ್ತದೆ. ಇದಕ್ಕೆ ಕಾರಣವೇನು? ಅಧಿಕಾರಮದವೂ, ಐಶ್ವರ್ಯಮದವೂ ಮುಖ್ಯಕಾರಣಗಳು. ಈ ಮದಪ್ರವಿಷ್ಟರಾದ ಅಧಿಕಾರಿ

ಗಳು ತಮ್ಮ ಸಂಪತ್ತಿಗೆ ಮೂಲಕಾರಣಗಳು ಯಾವುವೋ ಅವುಗಳನ್ನು ಪರಿಶೀಲಿಸಿ ನೋಡಿದರೆ, ರಾಜ್ಯಲಕ್ಷ್ಮಿಯನ್ನು ಕಾಪಾಡಿಕೊಳ್ಳುವುದಕ್ಕೆ ಸರಿಯಾದ ಉಪಾಯಗಳ್ಯಾವುವೋ ಅವುಗಳನ್ನು ಅವಲಂಬಿಸದೇ ತಮ್ಮ ದೇಶದ ನಾವೆಗಳನ್ನೂ ಮಿಲಟರೀ ಇಲಾಖೆಯನ್ನೂ ಯಾವರೀತಿಯಲ್ಲಿ ಇಟ್ಟುಕೊಳ್ಳಬೇಕೋ ಆ ವಿಷಯದಲ್ಲಿ ಉಪೇಕ್ಷೆಯನ್ನು ಮಾಡಿ, ತಮ್ಮ ದೇಶದ ವ್ಯಾಪಾರ, ಕೈಗಾರಿಕೆ ಮೊದಲಾದವುಗಳನ್ನು ಯಾವರೀತಿಯಲ್ಲಿ ವೃದ್ಧಿಗೆ ತರಬೇಕೋ ಆ ರೀತಿಯಲ್ಲಿ ತರದೇ ಉನ್ಮತ್ತಾವಸ್ಥೆಯನ್ನು ಹೊಂದಿದ್ದರಿಂದ ಅಪ್ರತಿಹತವಾದ ಚಕ್ರವರ್ತಿ ಪದವಿಯನ್ನು ಹೊಂದಿದ್ದ ಈ ದೇಶವೂ ಕೂಡ ಈಗ ಅತ್ಯಂತ ಹೀನಸ್ಥಿಗೆ ಬಂದಿರುವುದು. ಆ ದೇಶದ ವಿದ್ವಾಂಸರು ರಾಜತಂತ್ರಜ್ಞರಾದ ಸಚಿವರೆಂಬದಾಗಿಯೂ, ತಾವೇ ಬೃಹಸ್ಪತಿಗಳೆಂಬದಾಗಿಯೂ ಭಾವಿಸಿಕೊಂಡು ಮಾಡಬೇಕಾದ ಕೆಲಸಗಳ ವಿಷಯದಲ್ಲಿ ಉದಾಸೀನರಾಗಿಲ್ಲದೇ ಇದ್ದಿದ್ದರೆ ಈಗ ಪ್ರಪಂಚದ ಚಕ್ರಾಧಿಪತ್ಯವೆಲ್ಲಾ ಅವರ ಸ್ವಾಧೀನದಲ್ಲಿಯೇ ಇರುತ್ತಿತ್ತು. ಆದರೆ ಗ್ರೀಸ್ ದೇಶೀಯರು ತಮ್ಮ ದೇಶದ ಗಣಿಗಳ ಮೂಲಾಧಾರಗಳನ್ನು ವೃಥಾ ಕಳೆದುಬಿಟ್ಟರು. ಬಹು ದ್ರವ್ಯವನ್ನು ಚಿತ್ರವಿಚಿತ್ರವಾದ ದೇವಸ್ಥಾನಗಳನ್ನೂ, ಇತರ ಕಟ್ಟಡಗಳನ್ನೂ ಕಟ್ಟುವುದರಲ್ಲಿ ವಿನಿಯೋಗಿಸಿದರು. ಸಂಗೀತ, ಸಾಹಿತ್ಯ, ಚಿತ್ರ, ವಿಟನಟಗಾಯಕ, ಮೊದಲಾದವರಿಗೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟರು. ದೇಶದ ಉತ್ಪತ್ತಿಯ ಅಭಿವೃದ್ಧಿಗೆ ಸಾಧಕವಾದ ಕೃಷಿ, ಕೈಗಾರಿಕೆ ವಾಣಿಜ್ಯ, ಧರ್ಮವಾದ ರಾಜ್ಯಭಾರಕ್ಕೆ ಸಾಧಕವಾದ ಧರ್ಮಶಾಸ್ತ್ರಜ್ಞಾನ, ಮೊದಲಾದವುಗಳಿಗೆ ಪ್ರೋತ್ಸಾಹವನ್ನೂ ತಪ್ಪಿಸಿದರು. ಅಧಿಕಾರಮದದಿಂದ ಈ ರೀತಿಯಲ್ಲಿ ಪ್ರವರ್ತಿಸಿದರೆ ಅದರ ಫಲವು ತಪ್ಪುವುದಿಲ್ಲ. ಗ್ರೀಸ್ ದೇಶವು ಅವರ ಔದಾಸೀನ್ಯದಿಂದ ಚಕ್ರವರ್ತಿಪದವಿಯನ್ನು ಕಳೆದುಕೊಂಡು ಬಹಳ ಶೋಚನೀಯವಾದ ಅವಸ್ಥೆಗೆ ಬಂದಿರುವುದು. ಇದರ ಅವಸ್ಥೆಯೇ ಈಗಿನ ಇಂಡಿಯಾದೇಶಕ್ಕೆ ಹಿತೋಪದೇಶಕಾರಿಯಾಗಿ ಪರಿಣಮಿಸಿ ಇರುವುದು. ನಾವು ವೃದ್ಧಿಗೆ ಬರಬೇಕಾದರೆ ಬಹಳ ಜಾಗರೂಕರಾಗಿರಬೇಕು. ಅನುಪಯುಕ್ತವಾದ ಖರ್ಚುಗಳನ್ನು ನಾವು ಎಂದಿಗೂ ಮಾಡಬಾರದು. ಯಾವ ಖರ್ಚನ್ನು ಮಾಡಿದರೆ ದೇಶದ ಸಂಪತ್ತು ಹೆಚ್ಚುವುದೋ ಅಂಥಾ ಖರ್ಚನ್ನು ಮಾತ್ರ ಮಾಡಬೇಕು. ನಮ್ಮ ಏಳಿಗೆಗೆ ಪ್ರತಿಬಂಧಕರೂಪವಾದ ಜಾತಿದ್ವೇಷ, ಕುಲದ್ವೇಷಗಳನ್ನು ಪರಿತ್ಯಾಗ ಮಾಡಿ ಎಲ್ಲರೂ ಗುಣೈಕ ಪಕ್ಷಪಾತಿಗಳಾಗಿ ಇಂಡಿಯಾದೇಶವನ್ನು ವೃದ್ಧಿಗೆ ತರುವ ಏರ್ಪಾಡನ್ನು

ಮಾಡಬೇಕು. ಈ ಪ್ರಪಂಚವೇ ನಿಜವಾದ ದೇವಸ್ಥಾನ. ಸರ್ವವ್ಯಾಪಿಯಾದ ಜಗದೀಶ್ವರನೇ ನಿಜವಾದ ದೇವರು. ಅವನ ಮಹಿಮೆಯಿಂದ ಉತ್ಪನ್ನರಾದ ನಾವೆಲ್ಲರೂ ಅತನ ಮಕ್ಕಳು, ಎಂಬ ಭಾವನೆಯನ್ನಿಟ್ಟು ಪರಸ್ಪರ ಸೌಹಾರ್ದವುಳ್ಳವರಾಗಿ ಐಕಮತ್ಯದಿಂದ ಪ್ರವರ್ತಿಸಿದ ಹೊರತೂ ನಾವು ಕೃತಕೃತ್ಯರಾಗುವುದಿಲ್ಲ. ನಮಗೆ ಸ್ವಾತಂತ್ರ್ಯವು ದೊರೆಯುವುದಿಲ್ಲ. ನಮ್ಮ ಸಮಯಾಚಾರಗಳು ನಿರ್ದುಷ್ಟವಾಗುವುದಿಲ್ಲ. ನಮ್ಮ ಬುದ್ಧಿಯು ವಿಕಾಸವಾಗುವುದಿಲ್ಲ. ಮಿತವ್ಯಯಜ್ಞಾನವು ನಮಗೆ ಲಭ್ಯವಾಗುವುದಿಲ್ಲ.

ರೋಮ್ ಪಟ್ಟಣವೂ ಕೂಡ ನಮಗೆ ಎಷ್ಟೋ ಬುದ್ಧಿಯನ್ನು ಕಲಿಸತಕ್ಕದ್ದಾಗಿರುವುದು. ಈ ಪಟ್ಟಣವು ಒಂದಾನೊಂದು ಕಾಲದಲ್ಲಿ ಈ ಪ್ರಪಂಚಕ್ಕೆ ರಾಜಧಾನಿಯಾಗಿತ್ತು. ಇಲ್ಲಿನ ಚಕ್ರವರ್ತಿಗಳು ಈ ಭೂಮಂಡಲಕ್ಕೆಲ್ಲಾ ಅಧಿಪತಿಗಳಾಗಿದ್ದರು. ಈಗ ಈ ಪಟ್ಟಣವು ಅತ್ಯಂತ ಹೀನಸ್ಥಿಗೆ ಬಂದಿರುವುದು. ಇದಕ್ಕೇನುಕಾರಣ! ಇಲ್ಲಿನ ಚಕ್ರವರ್ತಿಗಳು ನಿರಂಕುಶಪ್ರವರ್ತಕರಾಗಿದ್ದರು. ಈ ಚಕ್ರಾಧಿಪತ್ಯದ ನಾಶಕ್ಕೆ ಈ ನಿರಂಕುಶಪ್ರವರ್ತನೆಯೇ ಮುಖ್ಯಕಾರಣ. ಚಕ್ರವರ್ತಿಗಳು ಪ್ರಾಯಕವಾಗಿ ತುಂಬಾ ಸಂಪತ್ತನ್ನು ಉಳ್ಳವರಾಗಿರುವರು. ಧರ್ಮವಾದ ಪ್ರಭುತ್ವಕ್ಕೆ ಬೇಕಾದ ವಿವೇಕವೇ ಮೊದಲಾದ ಗುಣಾತಿಶಯಗಳು ಇವರಲ್ಲಿ ಮಿತವಾಗಿರುವುವು. ಪ್ರಜಾರಂಜನೆಯನ್ನು ಮಾಡುವ ಶಕ್ತಿಯು ಇವರಲ್ಲಿ ಬೇಕಾದಮಟ್ಟಿಗೆ ಇರುವುದಿಲ್ಲ: ಇದಕ್ಕೊಸ್ಕರವೇ ಪ್ರಜ್ಞಾವಂತರಾಗಿಯೂ ಧರ್ಮಿಷ್ಟರಾಗಿಯೂ ಇರತಕ್ಕ ಸಚಿವರು ಇವರಿಗೆ ಬಹಳ ಆವಶ್ಯಕ. ಪ್ರಜ್ಞೆಯುಳ್ಳವರು ಸಿಕ್ಕುವರು. ಆದರೆ ಧರ್ಮಿಷ್ಟರಾಗಿಯೂ ಪ್ರಜ್ಞೆಯುಳ್ಳವರಾಗಿಯೂ ಇರತಕ್ಕ ಸಚಿವರು ಸಿಕ್ಕಿದಹೊರತು ಪ್ರಜಾರಂಜನೆಯಾಗುವುದಿಲ್ಲ. ಈ ರಂಜನೆಗೆ ಬೇಕಾದ ತಿಳುವಳಿಕೆಯು ಪ್ರಭುಗಳಿಗೂ ಸಚಿವರಿಗೂ ಇಬ್ಬರಿಗೂ ಸಮಗ್ರವಾಗಿರಲಿಲ್ಲ. ಅಧಿಕಾರ ಮದದಿಂದ ಪ್ರಜೆಗಳು ಉಪೇಕ್ಷಿಸಲ್ಪಟ್ಟರು. ದಂಡೋಪಾಯದಿಂದ ಪ್ರಭುತ್ವವು ಮಾಡಲ್ಪಡುತ್ತಾ ಬಂತು. ಸಾಮ, ದಾನ, ಭೇದಗಳು ಉಪೇಕ್ಷಿಸಲ್ಪಟ್ಟವು. ಬಿಟ್ಟೇ ಬೇಗಾರಿಗಳು ಹೆಚ್ಚಿದವು. ಸಂಸ್ಥಾನಾಧಿಪತಿಗಳು ಸ್ವಕಾರ್ಯಧುರಂಧರರಾಗಿಯೂ, ಅಧಿಕಾರಿಗಳು ಸೋಮಾರಿಗಳಾಗಿಯೂ, ಇಂದ್ರಿಯಪರವಶರಾಗಿಯೂ, ದುರ್ಮಾರ್ಗಪ್ರವರ್ತಕರಾಗಿಯೂ ಆದರು. ದೇಶದ ಉತ್ಪತ್ತಿಗೆ ಕಾರಣಭೂತರಾದ ಪ್ರಜೆಗಳು ದರಿದ್ರರಾಗಿಯೂ, ಈತಿಬಾಧೆಗಳಿಂದ ಹತರಾಗಿಯೂ ಚಿಂತಾಕ್ರಾಂತರಾಗಿಯೂ ಆದರು.

ಪ್ರಜೆಗಳ ಧೈರ್ಯ ಸ್ಥೈರ್ಯ ಸಾಹಸಗಳು ಸರಕಾರದ ನಿರಂಕುಶಪ್ರವರ್ತನೆಯಿಂದ ಮೂಲೋತ್ಪಾಟನೆ ಮಾಡಲ್ಪಟ್ಟಿತು. ರಾಜ್ಯಭಾರಕ್ಕೆ ಅಸ್ತಿಭಾರಪ್ರಾಯರಾದ ಪ್ರಜೆಗಳು ಇಷ್ಟು ಹೀನಸ್ಥಿತಿಗೆ ಬಂದಕೂಡಲೇ ದುರ್ಬಲವಾದ ಅಸ್ತಿಭಾರವುಳ್ಳ ಕಟ್ಟಡವು ಹೇಗೆ ಬಿದ್ದುಹೋಗುವುದೋ ಹಾಗೆ ರೋಮ್ಯ ಚಕ್ರಾಧಿಪತ್ಯವು ಬಿದ್ದುಹೋಯಿತು. ಪ್ರಾಜ್ಞರಾದವರು ಇಂಥಾ ವಿಪತ್ತುಗಳನ್ನು ನೋಡಿ ಈ ವಿಪತ್ತುಗಳಿಗೆ ಕಾರಣವನ್ನು ಗೊತ್ತುಮಾಡಿಕೊಂಡು ಅಂಥಾ ವಿಪತ್ತುಗಳಿಗೆ ತಾವು ಗುರಿಯಾಗದಂತೆ ಮಾಡಿಕೊಳ್ಳಬೇಕು. ಯಾವಕಾರಣದಿಂದ ರೋಮ್ಯ ಚಕ್ರಾಧಿಪತ್ಯವು ನಾಶವಾಯಿತೋ ಅದನ್ನು ನಾವು ಪರಿಶೀಲಿಸಿ ಅಂಥಾ ತಪ್ಪುಗಳಿಗೆ ಅವಕಾಶವನ್ನು ಕೊಡದೇ ಇರುವುದು ನಮ್ಮ ಏಳಿಗೆಗೆ ಅತ್ಯಂತ ಸಾಧಕವಾದದ್ದು.

ಈಗ ಇಂಡಿಯಾದೇಶದ ಸ್ಥಿತಿಯು ಬಹಳ ವಿಷಮವಾಗಿ ಇರುವುದು. ನಮ್ಮ ದೇಶೀಯರ ಕ್ಷೇಮವು ಉತ್ತರೋತ್ತರ ಯಾವರೀತಿಯಲ್ಲಿ ಪರಿಣಮಿಸುವುದೋ ಗೊತ್ತಾಗುವುದಿಲ್ಲ. ರೋಮ್ಯ ದೇಶದ ಪರಾಭವವನ್ನು ನಿರಂತರದಲ್ಲಿಯೂ ನಾವು ಮನಸ್ಸಿನಲ್ಲಿಟ್ಟುಕೊಳ್ಳುವುದು ಅವಶ್ಯಕ. ನಾವು ವೃದ್ಧಿಗೆ ಬರಬೇಕಾದರೆ ನಮ್ಮ ದೇಶೀಯರಲ್ಲಿ ಕೆಳಗಿನ ಅಂತಸ್ಥಿನಲ್ಲಿರತಕ್ಕವರಿಗೆ ವಿದ್ಯಾಭ್ಯಾಸವನ್ನು ಮಾಡಿಸಿ ನಾವು ಅವರನ್ನು ಮೇಲಕ್ಕೆ ಎತ್ತಬೇಕು. ನಮ್ಮ ದೇಶದ ಸ್ಥಿತಿಗೆ ನಾವೂಕೂಡ ಕಾರಣಭೂತರೆಂಬ ಅಭಿಪ್ರಾಯವನ್ನು ಅವರಿಗೆ ಹುಟ್ಟಿಸಬೇಕು. ನಮ್ಮ ಸಂಘದಲ್ಲಿ ಅವರು ಕನಿಷ್ಟರೆಂಬ ಅಭಿಪ್ರಾಯಕ್ಕೆ ಅವಕಾಶ ಕೊಡಕೂಡದು. ನಮ್ಮ ಏಳಿಗೆಗೆ ವ್ಯವಸಾಯ, ಕೈಗಾರಿಕೆ ಮೊದಲಾದ ನಮ್ಮ ದೇಶದ ಸಂಪತ್ತನ್ನು ಅಭಿವೃದ್ಧಿಮಾಡುವ ಜನಗಳೇ ಕಾರಣಭೂತರು. ಅವರಿಗೆ ವಿದ್ಯಾಭ್ಯಾಸ ಮಾಡಿಸುವುದೂ ತಾರತಮ್ಯಜ್ಞಾನವನ್ನುಂಟುಮಾಡುವುದೂ, ಅವರ ಕೆಲಸಗಳಲ್ಲ ಅವರು ಪ್ರವೀಣರಾಗುವಂತೆ ಮಾಡುವುದೂ ಇವೆಲ್ಲಾ ನಮಗೆ ಮುಖ್ಯಕರ್ತವ್ಯ. ಅವರು ಆತ್ಮಾವಲಂಬಿಗಳಾಗುವಂತೆ ನಾವು ಅವರಿಗೆ ಸಹಾಯವನ್ನು ಮಾಡಹೇಕು. ನಾವು ಅವರನ್ನು ಉದ್ಧಾರಮಾಡುತ್ತೇವೆಯೆಂದು ನಾವು ತಿಳಿದುಕೊಳ್ಳುವುದು ತಪ್ಪು. ಅವರಿಂದ ಆಗತಕ್ಕ ಉಪಕಾರಕ್ಕೆ ನಾವು ಪ್ರತಿಫಲವನ್ನು ಅವರಿಗೆ ಉಂಟುಮಾಡಿ ಕೃತಾರ್ಥರಾಗುತ್ತೇವೆಯೆಂದು ತಿಳಿದುಕೊಳ್ಳುವುದು ತಪ್ಪು. ಅವರಿಂದ ಆಗತಕ್ಕ ಉಪಕಾರಕ್ಕೆ ನಾವು ಪ್ರತಿಫಲವನ್ನು ಅವರಿಗೆ ಉಂಟುಮಾಡಿ ಕೃತಾರ್ಥರಾಗುತ್ತೇವೆಯೆಂದು ತಿಳಿದುಕೊಳ್ಳಬೇಕು.

ನಮ್ಮ ಜನಗಳು ಮಿತವ್ಯಯದ ಧರ್ಮಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಜನಗಳಿಗೆ ಪ್ರಾಮಾಣಿಕರಾಗಿಯೂ, ಬುದ್ಧಿಶಾಲಿಗಳಾಗಿಯೂ, ತಾರತಮ್ಯಜ್ಞರಾಗಿಯೂ, ಪೂರ್ವಾಪರಜ್ಞಾನವುಳ್ಳವರಾಗಿಯೂ, ಪಾಪಭೀತರಾಗಿಯೂ ಇರುವುದನ್ನು ಕಲಿಸಬೇಕು. ಅವರು ಈ ಧರ್ಮಗಳನ್ನೆಲ್ಲಾ ಅನುಷ್ಠಾನಕ್ಕೆ ತಂದುಕೊಂಡು ಎಲ್ಲಾ ವಿಧವಾದ ಕೈಗಾರಿಕೆಗಳಲ್ಲಿಯೂ, ಪ್ರವೀಣರಾಗಿ ಪ್ರಪಂಚಕ್ಕೆ ಭೋಗ್ಯವಸ್ತುಗಳು ಸುಲಭವಾಗಿ ದೊರೆಯುವಂತೆ ಮಾಡಿದರೆ ಅವರು ಪರೋಪಕಾರವನ್ನು ಮಾಡುವುದರ ಮೂಲಕ ಆತ್ಮಹಿತವನ್ನೂ ಮಾಡಿಕೊಳ್ಳುವುದಕ್ಕೆ ತಕ್ಕ ಶಕ್ತಿಯುಳ್ಳವರಾಗಿರುತ್ತಾರೆ.

ಪೂರ್ವದ ಭಾರತೀಯರು ಕೈಗಾರಿಕೆಗಳಲ್ಲಿ ಬುದ್ಧಿಶಾಲಿಗಳಾಗಿದ್ದ ವಿಷಯವನ್ನು ನಾನು ಮೊದಲೇ ತಿಳಿಸಿರುವೆನು. ಆದರೆ ಅವರು ಯಂತ್ರಗಳ ನಿರ್ಮಾಣದಲ್ಲಿ ವಿಶೇಷ ಚತುರರಾಗಿರಲಿಲ್ಲ. ಯಂತ್ರಗಳನ್ನು ನಿರ್ಮಿಸುವ ಕೆಲಸವು ಕೆಲವು ಜಾತಿಗಳಿಗೆ ಸೇರಿದ್ದವು. ಆ ಜಾತಿಯವರು ವಿಶೇಷ ತಿಳುವಳಿಕೆಯುಳ್ಳವರಾಗಿರಲಿಲ್ಲ. ನಮ್ಮ ಶಿಲ್ಪಿಗಳು ಪೂರ್ವದಲ್ಲಿ ಇದ್ದ ಗ್ರೀಸ್ ದೇಶದ ಶಿಲ್ಪಿಗಳಿಗೆ ಸಮಾನರಾಗಿರಲಿಲ್ಲ. ನಮ್ಮ ಯಂತ್ರಗಳು ಪಾಶ್ಚಾತ್ಯರಿಂದ ನಿರ್ಮಾಣ ಮಾಡಲ್ಪಟ್ಟ ಯಂತ್ರಗಳಿಗೆ ಸಮಾನವಾಗಿರುವುದಿಲ್ಲ. ನಮ್ಮಲ್ಲಿ ಮೇಧಾವಿಗಳಾದವರು ಅನೇಕ ವರುಷಗಳಿಂದ ಕೈಗಾರಿಕೆಗಳನ್ನು ಉಪೇಕ್ಷಿಸಿದರು. ಈ ಕೆಲಸಗಳೆಲ್ಲಾ ವಿಶೇಷ ಬುದ್ಧಿಶಕ್ತಿಯಿಲ್ಲದವರ ಪಾಲಾಗಿತ್ತು. ಆದುದರಿಂದಲೇ ಅವುಗಳು ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗಲಿಲ್ಲ. ಸಾಹಿತ್ಯದಲ್ಲಿಯೂ, ಶಾಸ್ತ್ರಜ್ಞಾನದಲ್ಲಿಯೂ, ನಮ್ಮ ಜನಗಳು ಹೊಂದಿರತಕ್ಕ ಜ್ಞಾನವು ಪಾಶ್ಚಾತ್ಯರು ಇದೇ ವಿಷಯದಲ್ಲಿ ಹೊಂದಿರತಕ್ಕ ಜ್ಞಾನಕ್ಕೆ ಕಡಮೆಯಾಗಿಲ್ಲ. ಕಲಾಕೌಶಲ್ಯವು ಸಾಮಾನ್ಯ ಜನಗಳ ಪಾಲಾಗಿದ್ದಾಗ್ಯೂ ಅವರು ಅದ್ಭುತವಾದ ಶಕ್ತಿಯನ್ನು ತೋರಿಸಿ ಇರುವರು. ಬ್ರಾಹ್ಮಣರೂ ಮತ್ತು ಮೌಲ್ವಿಗಳು ತಮ್ಮ ವೈದುಷ್ಯದ ಜೊತೆಗೆ ಕೈಗಾರಿಕೆಗಳನ್ನೂ ಅಭ್ಯಾಸ ಮಾಡಬೇಕು. ಬಿ. ಎ. ಪರೀಕ್ಷೆಗಳನ್ನು ಕೊಟ್ಟ ವಿದ್ಯಾರ್ಥಿಗಳು ಸರಕಾರದ ಉದ್ಯೋಗವನ್ನು ಅಪೇಕ್ಷಿಸುವುದಕ್ಕೆ ಬದಲಾಗಿ ಕೈಗಾರಿಕೆಗಳನ್ನು ಮಾಡುವುದಕ್ಕೆ ಉಪಕ್ರಮಿಸಬೇಕು. ವಿದ್ಯಾವಂತರು ಈ ಕೆಲಸಗಳಿಗೆ ಪ್ರವೇಶಿಸಿದರೆ ಕೈಗಾರಿಕೆಗಳನ್ನು ಹೇಗೆ ಅಭಿವೃದ್ಧಿಗೆ ತರಬೇಕೋ ಅದು ಅವರಿಗೆ ಗೊತ್ತಾಗುವುದು. ಪಾಶ್ಚಾತ್ಯರಲ್ಲಿ ಅಖಂಡ ಪಾಂಡಿತ್ಯವನ್ನು ಹೊಂದಿದ ಮಹಾ ವಿದ್ವಾಂಸರು ಕೈಗಾರಿಕೆಗ

ಳನ್ನೂ, ವ್ಯಾಪಾರವನ್ನೂ ಅವಲಂಬಿಸಿದ್ದರಿಂದ ಕೋಟ್ಯಂತರ ಜನಗಳಿಂದ ಮಾಡ ಲ್ಪಡತಕ್ಕ ಕೆಲಸಗಳನ್ನೂ ಕೂಡ ಯಂತ್ರಸಾಮಗ್ರಿಗಳಿಂದ ಮಾಡಿಸುವುದಕ್ಕೆ ಮೊದ ಲು ಮಾಡಿದರು ಪಾಶ್ಚಾತ್ಯರು ಯಾವಾಗ್ಗೂ ಈಗಿನಷ್ಟು ಕೌಶಲವುಳ್ಳವರಾಗಿರ ಲಿಲ್ಲ. ಅವರೂ ಕೆಲವು ವರುಷಗಳ ಕೆಳಗೆ ತಿಳುವಳಿಕೆಯ ವಿಷಯದಲ್ಲಿಯೂ ಏನೂ ತಿಳಿಯದವರಾಗಿದ್ದರು. ಆದರೆ ಹೊಸವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಶ್ರದ್ಧೆಯು ಅವರಲ್ಲಿ ವಿಶೇಷವಾಗಿದ್ದುದರಿಂದ ಅವರು ವೃದ್ಧಿಗೆ ಬರುವುದಕ್ಕೆ ಅವಕಾ ಶವಾಯಿತು.

ಪಾಶ್ಚಾತ್ಯರಿಂದ ನಾವು ತಿಳಿದುಕೊಳ್ಳತಕ್ಕದ್ದು ಇನ್ನೊಂದು ವಿಷಯವಿರುವುದು. ಇವರಲ್ಲಿ ಬಹುಜನಗಳು ಸೇರಿ ಕಂಪೆನಿಗಳನ್ನು ಮಾಡಿಕೊಂಡು ಪರಸ್ಪರ ಸಹಾಯ ದಿಂದ ಬಂಡವಾಳವನ್ನು ವದಗಿಸಿಕೊಂಡು ಮಿತವಾಗಿ ಖರ್ಚುಮಾಡಿ ತನ್ಮೂಲಕ ಅಭಿವೃದ್ಧಿಗೆ ಬರುವ ಪ್ರಯತ್ನಗಳು ಸಮಗ್ರವಾಗಿರುವುವು. ಇದರಿಂದಲೇ ಅವರು ವೃದ್ಧಿಗೆ ಬರುತ್ತಲಿರುವರು. ಅವರು ಮಿತವಾಗಿ ಖರ್ಚುಮಾಡಿ ವಸ್ತುಗಳನ್ನು ನಿ ರ್ಮಿಸಿ ಅವುಗಳು ಸರ್ವರಿಗೂ ಸುಲಭವಾಗಿ ಸಿಕ್ಕುವಂತೆ ಮಾಡಿ ಅದರಿಂದ ತಾವೂ ಜೀವಿಸುವರು. ಮಿತವ್ಯಯವೂ ಧರ್ಮಜ್ಞಾನವೂ ಅವರ ಅಭಿವೃದ್ಧಿಗೆ ಮುಖ್ಯ ಕಾರಣ. ಈ ಶಾಸ್ತ್ರವನ್ನು ಅವರು ಕಾಲೇಜುಗಳಲ್ಲಿಯೂ, ಪಾಠಶಾಲೆಗಳಲ್ಲಿಯೂ ಪ್ರಚಾರಗೊಡಿಸುತ್ತಿರುವರು. ಈ ಶಾಸ್ತ್ರಧರ್ಮಗಳನ್ನು ಕಲಿಯಲಪೇಕ್ಷೆಯುಳ್ಳವರು ಪಾಶ್ಚಾತ್ಯರ ಸಕಲಕಲಾಶಾಲೆಯಲ್ಲಿ ಕಲಿಯುವ ಪ್ರಯತ್ನವನ್ನ ಮಾಡಬೇಕು.

ರಾಜಕೀಯ ವಿಷಯಗಳಲ್ಲಿಯೂ, ವ್ಯಾಪಾರದ ವಿಷಯದಲ್ಲಿಯೂ ಸಂಘ ಸಂಸ್ಕಾರದ ಕೆಲಸದಲ್ಲಿಯೂ ಪಾಶ್ಚಾತ್ಯರು ಬಹಳ ತಿಳುವಳಿಕೆಯುಳ್ಳವರು. ಸುಮಾ ರು ೬೦೦ ವರ್ಷಗಳಿಗೆ ಮುಂಚೆ ಪಾಶ್ಚಾತ್ಯರಲ್ಲಿ ಪಾದ್ರಿಗಳ ಅವಾಂತರವು ಬಹಳ ಜಾಸ್ತಿಯಾಗಿತ್ತು. ಮಾರ್ಟಿನ್ ಲೂಥರ್‌ರವರ ಕಾಲದಲ್ಲಿ ಇವರ ಪ್ರಾಬಲ್ಯವು ಅ ತ್ಯಂತವಾಗಿ ಹೆಚ್ಚಿದ್ದರಿಂದ ಲೂಥರ್‌ರವರು ಮತವಿಚಾರದಲ್ಲಿ ದಂಗೆಯನ್ನು ಮಾಡಿ ಈ ಪಾದ್ರಿಗಳ ಸೊಕ್ಕನ್ನು ಮುರಿದರು. ಆಗಲೇ ಪ್ರಾಟೆಸ್ಟೆಂಟ್ ಮತವು ಉಂಟಾ ಯಿತು. ಮತವಿಷಯಗಳಲ್ಲಿರತಕ್ಕ ಭೇದಗಳು ಲೋಕವ್ಯವಹಾರದಲ್ಲಿ ಇರಬೇಕಾದ ಸೌಹಾರ್ದಕ್ಕೆ ಪ್ರತಿಬಂಧಕವಾಗಕೂಡದು. ಈ ಭೇದಗಳಿಗೂ ವ್ಯವಸಾಯ, ವ್ಯಾ ಪಾರ, ಕೈಗಾರಿಕೆ, ರಾಜ್ಯಭಾರ ಮೊದಲಾದವಿಷಯಗಳ ಸಂಬಂಧವೇನೂ ಇರುವುದಿ ಲ್ಲ. ಮತವಿಷಯಗಳಲ್ಲಿ ಭಿನ್ನಾಭಿಪ್ರಾಯವಿದ್ದ ಮಾತ್ರದಿಂದಲೇ ಇತರವಿಷಯಗಳಲ್ಲಿ

ಔದಾಸೀನ್ಯವೂ ವಿಶೇಷವಾಗಿರುತ್ತವೆ. ದುಂದುಗಾರಿಕೆಯಲ್ಲಿ ಪಾಶ್ಚಾತ್ಯರು ನಿಪುಣರಾಗುತ್ತಲಿದಾರೆ. ಮಿತವ್ಯಯ, ಸಾತ್ವಿಕವಾದ ಜೀವನ, ಧರ್ಮಪ್ರವರ್ತನೆ ಇವುಗಳೆಲ್ಲಾ ಮೃಗ್ಯಗಳಾಗುತ್ತಲಿವೆ. ಐಹಿಕಸುಖ ಸಾಧನಗಳಾದ ಶಾಸ್ತ್ರಗಳೂ ಕಲೆಗಳೂ ಒಳ್ಳೇಸ್ಥಿತಿಯಲ್ಲಿರುತ್ತವೆ. ಅವುಗಳನ್ನು ಅವರಿಂದ ಕಲಿಯಬೇಕು. ನಮ್ಮಲ್ಲಿ ಆಮುಷ್ಮಿಕ ಸುಖಸಾಧನಗಳಾದ ಅನೇಕ ವಿದ್ಯೆಗಳು ಇವೆ. ಪಾಶ್ಚಾತ್ಯರಿಗೆ ಬೇಕಾದ ಆಮುಷ್ಮಿಕ ವಿದ್ಯೆಗಳನ್ನು ನಾವು ಬೋಧಿಸಿ ಅವರಿಂದ ನಾವು ಐಹಿಕವಿದ್ಯೆಗಳನ್ನು ಪರಿಗ್ರಹಿಸಿ ಬ್ರಿಟಿಷ್ ಜನಗಳನ್ನು ಅತ್ಯುತ್ತಮವಾದ ಸ್ಥಿತಿಗೆ ತಂದು ನಾವೂ ಒಳ್ಳೇ ಸ್ಥಿತಿಗೆ ಬಂದು ಎಲ್ಲರೂ ಪರಸ್ಪರ ಸೌಹಾರ್ದವುಳ್ಳವರಾಗಿ ಬದುಕಬೇಕು. ಈ ವಿಷಯುದಲ್ಲಿ ನಮ್ಮ ಭಾರತೀಯರೆಲ್ಲರೂ ಅವಶ್ಯಕವಾದ ಕೃಷಿಯನ್ನು ಮಾಡುವರೆಂದು ನಂಬಿ ಇದೇನೆ"

ಭೂಗೋಳಶಾಸ್ತ್ರ.

(೨೪೩ ನೇ ಪುಟದ ಶೇಷ)

ಮಳೆಯ ನೀರಿನಲ್ಲಿ ಅಮ್ಲಜನಕವೂ, ಕಾರ್ಬಾನಿಕ್ ಆಸಿಡ್‌ಗ್ಯಾಸ್ ಎಂಬುವುದೂ ಸ್ವಲ್ಪಮಟ್ಟಿಗೆ ವಿಲೀನತೆಯನ್ನು ಹೊಂದಿರೋಣದರಿಂದ ಆ ನೀರು ಭೂಮಿಯೊಳಗೆ ಪ್ರವಹಿಸುವಾಗ ಭೂಮಿಯಲ್ಲಿರುವ ಅನೇಕ ವಸ್ತುಗಳನ್ನು ಕರಗಿಸಿಬಿಡುವುದು. ಇದರಿಂದಲೇ ಊಟೆಗಳ ನೀರು ಕ್ಷಾರವಾಗಿರುವುದು. ಮತ್ತು ಸುಣ್ಣಕಲ್ಲಿರುವ ಬಂಡೆಗಳ ಮೂಲಕ ಹರಿದರೆ ತನ್ನಲ್ಲಿ ಕರಗಿರುವ ಕಾರ್ಬಾನಿಕ್‌ಆಸಿಡ್ ಗ್ಯಾಸಿನ ಸಹಾಯದಿಂದ ಸುಣ್ಣಕಲ್ಲನ್ನು ಕರಗಿಸುವುದು. ಇಂಥ ನೀರನ್ನು ಕಠಿಣವಾದ ನೀರು (ಹಾರ್ಡ್ ವಾಟರ್) ಎನ್ನಬಹುದು. ಆದುದರಿಂದ ಊಟೆಗಳ ಹೊರಕ್ಕೆ ಚಲಿಸುವ ನೀರು ಶುದ್ಧವಾಗಿರದೆ ಸುಣ್ಣ, ಉಪ್ಪು, ಕಬ್ಬಿಣ ಮೊದಲಾದ ವಸ್ತುಗಳು ವಿಲೀನವಾಗಿರುವುವು. ಇಂಥಾ ನೀರುಗಳನ್ನು ಅನೇಕರು ಔಷಧಕ್ಕೆ ಉಪಯೋಗಿಸುವರು. ಇದರ ಸ್ನಾನದಿಂದ ತೊನ್ನು, ಮುಂಕಾದ ಚರ್ಮರೋಗಗಳು ನಾಶವಾಗುವುವು. ಯೂರೋಪ್ ಖಂಡದಲ್ಲಿ ಇಂಥ ಸ್ಥಳಗಳು ಅನೇಕಕಡೆಗಳಲ್ಲಿರುವುವು. ನಮ್ಮ ದೇಶದಲ್ಲಿ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಕಶತಶ್ಯಂಗ ಬೆಟ್ಟದಲ್ಲಿ ಈ ಬಗೆಯ

ನೀರು ಇರುತ್ತದೆಯೆಂದು ಜನಜನಿತವಾಗಿರುತ್ತದೆ. ಮಳೆಯ ನೀರು ಭೂಮಿಯೊಳಗಡೆ ಬಹಳ ಆಳಕ್ಕೆ ಹೋಗಿ ಹಿಂದಿರುಗಿ ಮೇಲಕ್ಕೆ ಬಂದತೆ ಭೂಗರ್ಭದ ಉಷ್ಣದಿಂದಲೆ ನೀರು ಕಾದು ಇರುವುದು. ಬಿಸಿನೀರಿನ ಊಟೆಗೆ ಇದೇ ಕಾರಣವಾಗಿರುವುದು.ಕೃತಕವಾದ ಊಟೆಗಳಿಗೆ " ಆರ್ಟೀಸಿಯರ್ ಭಾವಿಗಳು " ಎಂದು ಕರೆಯುವ್ವಡುವುದು.

‖ ಸರೋವರಗಳು. ‖

ಕೆಲವು ಸರೋವರಗಳಿಗೆ ನದಿಗಳು ಬಂದು ಸೇರುತ್ತಲು, ಅಲ್ಲಿಂದ ಮುಂದಕ್ಕೆ ಹರಿದುಹೋಗುತ್ತಲೂ ಇರುವುದು. ಇಂಥಾ ನದಿಗಳಿಗೆ ಈರೀತಿಯಲ್ಲಿರತಕ್ಕ ಸರೋವರಗಳನ್ನು ಜಲಶೋಧಕಯಂತ್ರ (ಫಿಲ್ಟರ್) ವೆಂದು ಹೇಳಬಹುದು. ಉದಾಹರಣೆ—(ಜಿನೀವ,) ಇಂಥಾ ಸರೋವರಗಳ ಜಲಗಳು ಸಿಹಿಯಾಗಿಯೇ ಇರುವ್ವವು.

ಕೆಲವು ಸರೋವರಗಳ ಪ್ರಾಂತ್ಯಗಳಲ್ಲಿ ಜಿಲಿಮೆಗಳಿರುವ್ವವು. ಇಂಥ ಸರೋವರಗಳಿಗೆ ಹೊರಗಿನಿಂದ ನದಿಗಳ ನೀರು ಬಾರದೆ, ಆ ಸರೋವರಗಳೇ ನದಿಗಳಿಗೆ ಉತ್ಪತ್ತಿನ್ಥಾನಗಳಾಗಿರುವ್ವವು. ಕೆಲವು ಸರೋವರಗಳಲ್ಲಿ ಯಾವ ನದಿಯೂ ಹೊರಗೆ ಬಾರದೆ ಇರುವುದು. ಇಂಥವುಗಳಿಗೆ ನದಿಗಳು ಬಂದು ಬಿದ್ದರೂ ಆ ನದಿಗಳ ನೀರಿಗಿಂತ ಹೆಚ್ಚಾದ ನೀರು ಅವಿಯಾಗುತ್ತಲೂ ಇರುವ್ವದೇ ಹೀಗಾಗಲು ಕಾರಣವು. ಇಂಥವುಗಳ ನೀರು ಸುಮಾರಾಗಿ ಉಪ್ಪಾಗಿರುವುದು. ಸಮುದ್ರಮಟ್ಟಕ್ಕೆ ತಳದಲ್ಲಿರುವ ಸರೋವರಗಳ ನೀರು ಬಹು ಉಪ್ಪಾಗಿಯೂ, ನಾತವಾಗಿಯೂ ಇರುವ್ವದು.

H. S.

ಗ ಣಿ ತ .

I. ಯಾವ ಎರಡು ಸಂಖ್ಯೆಗಳ ಮಹತ್ತಮಸಾಮಾನ್ಯಾಪವರ್ತನವು 768 ಆಗುತ್ತದೆಯೋ ಅದೇ ಎರಡು ಸಂಖ್ಯೆಗಳ ಲಘುತಮಸಾಮಾನ್ಯಾಪವರ್ತ್ಯವು 39168 ಆಗುತ್ತೆ. ಆದರೆ ಆ ಎರಡು ಸಂಖೆಗಳನ್ನು ಗುಣಿಸಿದರೆ ಬರುವ ಪೊತ್ತವೆಷ್ಟು ? ಉತ್ತರ—30081024.

II. ಒಬ್ಬನು ಕುದುರೆ 1 ಕ್ಕೆ 120 ರೂಪಾಯಿಗಳಂತೆ 21 ಕುದುರೆಗಳನ್ನು ಕೊಂಡುಕೊಂಡನು. ಅವುಗಳಲ್ಲಿ ನಾಲ್ಕು ಕುದುರೆಗಳು ಸತ್ತುಹೋದವು. ಉಳಿದುವನ್ನು ಮಾರಿ ಒಟ್ಟಿನಮೇಲೆ ಶೇಕಡಾ $6\frac{2}{3}$ ರೂಪಾಯಿಗಳಂತೆ ಲಾಭವನ್ನು ಪಡೆಯಬೇಕಾದರೆ ಕುದುರೆ ಒಂದಕ್ಕೆ ಯಾವಪ್ರಕಾರ ಮಾರಬೇಕು? ಉತ್ತರ—200 ರೂಪಾಯಿಗಳು.

III. (2) ಒಬ್ಬನು $10\frac{1}{2}$ ಪಲ್ಲಗಳ ಅಕ್ಕಿಯನ್ನೂ 100 ರೂಪಾಯಿಗಳಿಗೆ 11 ಪಲ್ಲಗಳಂತೆ ಕೆಲವು ಪಲ್ಲಗಳ ಬೇಳೆಯನ್ನೂ ಸಹಾ 109 ರೂಪಾಯಿಗಳಿಗೆ ಕೊಂಡುಕೊಂಡನು. ಬೇಳೆಯನ್ನು $6\frac{2}{3}$ ಪಲ್ಲಗಳಂತೆ ಕೊಂಡುಕೊಂಡಿದ್ದಲ್ಲಿ ಅವನು 125 ರೂಪಾಯಿ 10 ಆಣೆ 8 ಕಾಸುಗಳನ್ನು ಕೊಡಬೇಕಾಗುತ್ತಿತ್ತು. ಹಾಗಾದರೆ ಅವನು ಕೊಂಡುಕೊಂಡ ಬೇಳೆಯೆಷ್ಟು? ಮತ್ತು ಅಕ್ಕಿ 100 ರೂಪಾಯಿಗಳಿಗೆ ಎಷ್ಟು ಪಲ್ಲಗಳಂತೆ ಬಿತ್ತು? ಉತ್ತರ—$2\frac{3}{4}$ ಪಲ್ಲಗಳ ಬೇಳೆ.

100 ರೂ. ಗೆ $12\frac{1}{2}$ ಪಲ್ಲ ಅಕ್ಕಿ.

(b) 1 ರಿಂದ 100 ರ ವರೆಗೆ ಕ್ರಮವಾಗಿ ಬರುವ ವಿಷಮ ಮತ್ತು ಸಮ ಸ್ಥಾನಗಳ ಮೊತ್ತಗಳನ್ನು ಬೇರೆಬೇರೆಯಾಗಿ ಬರೆಯಿರಿ?

ಮಾದರಿ.

ಇಂಥಾ ಲೆಖ್ಖಗಳಲ್ಲಿ ಗಮನಿಸಬೇಕಾದ ವಿಷಯಗಳು—

(1) 1 ರಿಂದ ಯಾವ ಸಂಖ್ಯೆಯವರೆಗೂ ಸಂಕಲನ ಮಾಡಬೇಕೆಂದು ಅಪೇಕ್ಷಿಸುತ್ತೀವೋ ಅದನ್ನು ಆ ಸಂಖ್ಯೆಯಿಂದಲೇ ಗುಣಿಸಿ ಬಂದಲಬ್ಧಕ್ಕೆ ಆ ಸಂಖ್ಯೆಯನ್ನೇ ಸಂಕಲನ ಮಾಡಿ ಬಂದ ಮೊತ್ತವನ್ನು 2 ರಿಂದ ಭಾಗಿಸಬೇಕು. ಹೀಗೆ ಮಾಡುವುದರಿಂದ 1 ರಿಂದ ನಮಗೆ ಬೇಕಾದ ಸಂಖ್ಯೆಯವರೆಗೂ ಸಂಕಲನ ಮಾಡಿದರೆ ಬರುವ ಮೊತ್ತವು ಸಿಕ್ಕುವುದು.

2. 1 ರಿಂದ ನಾವು ಇಷ್ಟಪಡುವ ಸಂಖ್ಯೆಯವರೆಗೂ ಇರುವ ವಿಷಮಸ್ಥಾನಗಳ ಸಂಖ್ಯೆಯನ್ನು ಅದರಿಂದಲೇ ಗುಣಿಸಿದರೆ 1 ರಿಂದ ಬೇಕಾದ ಸಂಖ್ಯೆಯವರೆಗೂ ಇರುವ ವಿಷಮಸ್ಥಾನಗಳ ಅಂಕೆಗಳನ್ನು ಮಾತ್ರ ಸಂಕಲನ ಮಾಡಿದರೆ ಬರುವ ಮೊತ್ತವು ಸಿಕ್ಕುತ್ತೆ.

1 ರಿಂದ ನಾವು ಇಷ್ಟಪಡುವ ಸಂಖ್ಯೆಯವರಿಗೂ ಎಷ್ಟುವಿಷಮಸ್ಥಾನ

ಗಳಿವೆ ಯೆಂಬುದನ್ನು ತಿಳಿಯಬೇಕಾದರೆ ಯಾವ ಸಂಖೆಯವರೆಗೂ ಇಷ್ಟ ಪಡುತ್ತೇವೋ ಆ ಸಂಖೆಯನ್ನು 2 ರಿಂದ ಭಾಗಿಸಬೇಕು. ಹಾಗೆ ಭಾಗಿಸಿದಾಗ ನಿಶ್ಶೇಷವಾಗಿ ಭಾಗವಾಗದೆ ಇದ್ದರೆ ಭಾಗಲಬ್ಧಕ್ಕೆ 1 ನ್ನು ಸೇರಿಸಲಾಗಿ ಒಂದ ಸಂಖೆಯೇ ವಿಷಮಸ್ಥಾನಗಳ ಸಂಖೆಯಾಗಿರುತ್ತೆ. ನಿಶ್ಶೇಷವಾಗಿ ಭಾಗವಾದರೆ ಭಾಗಲಬ್ಧವೇ ವಿಷಮಸ್ಥಾನಗಳ ಸಂಖ್ಯೆಯಾಗಿರುತ್ತೆ.

3. ಒಂದರಿಂದ ಕ್ರಮವಾಗಿ ಸಂಕಲನ ಮಾಡಿದರೆ ಬರುವ ಮೊತ್ತದಲ್ಲಿ ವಿಷಮಸ್ಥಾನಗಳ ಅಂಕೆಗಳನ್ನು ಮಾತ್ರ ಸಂಕಲನ ಮಾಡಿದ್ದರಿಂದ ಬರುವ ಮೊತ್ತವನ್ನು ಕಳೆದರೆ ಸಮಸ್ಥಾನಗಳನ್ನು ಮಾತ್ರ ಸಂಕಲನ ಮಾಡಿದ ಮೊತ್ತವು ಸಿಕ್ಕುವುದು

ಈ ಲೆಖದಲ್ಲಿ—1 ರಿಂದ 100 ರ ವರೆಗೆ ಇಷ್ಟಪಟ್ಟಿದ್ದೇವೆ.

$$\frac{100\times100\times100}{2}=\frac{10100}{2}=5050.$$

1 ರಿಂದ 100 ರ ವರೆಗೆ ಕ್ರಮವಾಗಿ ಎಣಿಸಿದರೆ ಬರುವ ಮೊತ್ತವು 5050. 100 ನ್ನು 2 ರಿಂದ ಭಾಗಿಸಿದರೆ $\left(\begin{matrix}2)\ 100\ (\ 50\\ 100\end{matrix}\right)$ ನಿಶ್ಶೇಷವಾಗಿ ಭಾಗವಾಗುತ್ತಾದ್ದರಿಂದ ಭಾಗಲಬ್ಧವಾದ 50 ಎಂಬುದೇ ವಿಷಮಸ್ಥಾನಗಳ ಸಂಖ್ಯೆಯಾಗಿರುತ್ತೆ. $50\times50=2500$. 1 ರಿಂದ 100 ರ ವರೆಗೆ ಬರುವ ವಿಷಮಸ್ಥಾನಗಳ ಅಂಕೆಗಳನ್ನು ಮಾತ್ರ ಸಂಕಲನ ಮಾಡಿದರೆ ಬರುವ ಮೊತ್ತವು 2500. ಈಗ ವಿಷಮ ಮತ್ತು ಸಮಸ್ಥಾನಗಳ ಒಟ್ಟಾದ 5050 ರಲ್ಲಿ ವಿಷಮಸ್ಥಾನಗಳ ಒಟ್ಟಾದ 2500 ನ್ನು ಕಳೆದರೆ ಮಿಕ್ಕ $(5050-2500)=2550$ ಎಂಬುದೇ ಸಮಸ್ಥಾನಗಳ ಒಟ್ಟಾಗಿದೆ.

ಉತ್ತರ—ವಿಷಮಸ್ಥಾನಗಳ ಒಟ್ಟು 2500.
ಸಮಸ್ಥಾನಗಳ ಒಟ್ಟು 2550.

IV. 2. ಒಬ್ಬನು ಶೇಕಡಾ 5 ರೂಪಾಯಿ ದರದಂತೆ ಕೆಲವು ರೂಪಾಯಿಗಳನ್ನೂ ಶೇಕಡಾ $6\frac{1}{4}$ ರೂಪಾಯಿನಂತೆ ಮತ್ತೆ ಕೆಲವು ಹಣವನ್ನೂ ಒಂದೇ ದಿನದಲ್ಲಿ ಸಾಲವಾಗಿ ತೆಗೆದುಕೊಂಡು 1 ವರ್ಷದ ತರುವಾಯ 304

ರೂಪಾಯಿಗಳನ್ನು ಕೊಟ್ಟು ಎರಡು ಅಸಲುಗಳ ಮೊತ್ತಗಳನ್ನೂ ತೀರಿಸಿದನು. ಎರಡು ಅಸಲುಗಳ ಬಡ್ಡಿಗಳೂ ಒಂದಕ್ಕೊಂದು ಸಮವಾಗಿದ್ದರೆ ಅವನು ಯಾವ ಯಾವ ದರದಂತೆ ತೆಗೆದುಕೊಂಡಿದ್ದರೂ ರೂಪಾಯಿಗಳೆಷ್ಟೆಷ್ಟು ? ಶೇಕಡಾ 5 $6\frac{1}{4}$

ಉತ್ತರ—160. 128.

(b) A ಯ ಭಾಗದ $\frac{1}{2}$ ಭಾಗವು B ಯ ಭಾಗದ $\frac{2}{3}$ ಕ್ಕೂ C ಯ ಭಾಗದ $\frac{3}{4}$ ಕ್ಕೂ D ಯ ಭಾಗದ $\frac{4}{5}$ ಕ್ಕೂ ಸಮವಾಗಿರುವಂತೆ 1095 ರೂಪಾಯಿಗಳನ್ನು A, B, C, D ಗಳಿಗೆ ಹಂಚಿರಿ.

ಉತ್ತರ—a—360.
b—270.
c—240.
d—225.

V. 20 ಹುಡುಗರೂ 50 ಜನ ಹೆಂಗಸರೂ ಸೇರಿ 25 ದಿನಗಳಲ್ಲಿ 6000 ರೂಪಾಯಿಗಳನ್ನು ಸಂಪಾದಿಸುತ್ತಾರೆ. 50 ಹುಡುಗರೂ 20 ಜನ ಹೆಂಗಸರೂ ಸೇರಿ 26 ದಿನಗಳಲ್ಲಿ 4680 ರೂಪಾಯಿಗಳನ್ನು ಸಂಪಾದಿಸಿದರೆ 4 ಜನ ಹೆಂಗಸರೂ 5 ಹುಡುಗರೂ ಸೇರಿ 6 ವಾರಗಳಲ್ಲಿ ಎಷ್ಟು ರೂಪಾಯಿಗಳನ್ನು ಸಂಪಾದಿಸುವರು.

ಉತ್ತರ—1092 ರೂಪಾಯಿ.

VI. ಒಬ್ಬನು ಕೆಲವು ಸೀಸದ ಪೆನಸಲ್‌ಗಳನ್ನು ಪೆನಸಲ್ 1 ಕ್ಕೆ 6 ಪೈಗಳಂತೆ ಕೊಂಡುಕೊಂಡು ಅವುಗಳಲ್ಲಿ $\frac{1}{4}$ ಕ್ಕಿಂತಲೂ 1 ನ್ನು ಹೆಚ್ಚಾಗಿ A ಗೂ ಮಿಕ್ಕದ್ದರಲ್ಲಿ $\frac{2}{3}$ ಕ್ಕಿಂತಲೂ 1 ನ್ನು ಕಮ್ಮಿಯಾಗಿ B ಗೂ ಇನ್ನೂ ಮಿಕ್ಕದ್ದರಲ್ಲಿ $\frac{1}{3}$ ಕ್ಕಿಂತಲೂ 2 ನ್ನು ಹೆಚ್ಚಾಗಿ C ಗೂ ಕೊಟ್ಟು ಉಳಿದ ಕಡ್ಡಿಗಳನ್ನು ಅವುಗಳ ಅಸಲಿನಮೇಲೆ ಶೇಕಡಾ $66\frac{2}{3}$ ಲಾಭಬರುವಂತೆ ಮಾರಿ ಬಂದ ಹಣಕ್ಕೆ ತಾನು ಮೊದಲು ಕೊಂಡುಕೊಂಡಿದ್ದದ್ದಕ್ಕಿಂತ ಶೇಕಡ $16\frac{2}{3}$ ಕಮ್ಮಿಯದರದಂತೆ 4 ಸೀಸದ ಪೆನಸಲ್‌ಗಳನ್ನು ಕೊಂಡುಕೊಂಡರೆ ಅವನು ಮೊದಲು ಕೊಂಡುಕೊಂಡಿದ್ದ ಪೆನಸಲ್‌ಗಳ ಸಂಖ್ಯೆಯೆಷ್ಟು ? ಉತ್ತರ—24 ಪೆನಸಲ್‌ಗಳು.

ಆರ್. ಹಯವದನಾಚಾರ್,

* ವಿದ್ಯಾದಾಯಿನಿ. *

ಭಾಗ ೧೫.] ಮಾರ್ಚ್—೧೯೦೩. [ಸಂಚಿಕೆ ೩.

ವಿದ್ಯಾಭ್ಯಾಸ.

ಇಂಗ್ಲೆಂಡಿನಲ್ಲಿರುವ ಮನೆಗಳನ್ನು ಪರೀಕ್ಷಿಸಿ ನೋಡಿರಿ. ವಾಸ್ತುಕವಾಗಿ ಅಲ್ಲಿಯ ಹೊಸಮನೆಗಳು ಯಂತ್ರದಲ್ಲಿ ತಯಾರಾದ ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿರುತ್ತವೆ. ಆ ಮನೆಗಳ ನೆಲವು ಯಂತ್ರದಿಂದಲೇ ಸಮವಟ್ಟಾಗಿಯೂ ಸುಣ್ಣವಾಗಿಯೂ ಮಾಡಲ್ಪಟ್ಟಿದೆ. ಅಲ್ಲಿಯ ಗೊಡುಗಳೂ ಬೀರುಗಳೂ ಕಾದಗದ ಗುಚ್ಛಗಳೂ ಜಲ್ಲರಿಗಳೂ ಯಂತ್ರಗಳಿಂದ ತಯಾರಾಗಿವೆ. ಕುರ್ಚಿ ಮೇಜುಗಳ ಕಾಲುಗಳೂ ಜಮಖಾನೆಗಳೂ ಪರದೆಗಳೂ ಯಂತ್ರದಿಂದ ಮಾಡಲ್ಪಟ್ಟಿವೆ. ಅಲ್ಲಿಯ ಜನರು ಪಾಸುವ ಹೊದಿಯುವ ಬಟ್ಟೆಗಳು ಯಂತ್ರನಿರ್ಮಿತವಾದುವು. ಓದುವ ಪುಸ್ತಕಗಳೂ ಯಂತ್ರದಿಂದ ತಯಾರಾಗಿವೆ. ಪುಸ್ತಕದಲ್ಲಿರುವ ಕಾಗದಗಳೂ ಅಚ್ಚಿನ ಅಕ್ಷರಗಳೂ ರಟ್ಟೂ ಯಂತ್ರನಿರ್ಮಿತವಾದುವು. ಆ ದೇಶಕ್ಕೆ ಅನ್ಯದೇಶಗಳಿಂದ ಬರುವ ಸಾಮಾನುಗಳೂ ಅಲ್ಲಿಂದ ಪರದೇಶಗಳಿಗೆ ಹೋಗುವ ಸಾಮಾನುಗಳೂ ಯಂತ್ರಗಳಿಂದಲೇ ತರಲ್ಪಡುವುವು. ಮತ್ತು ಒಯ್ಯಲ್ಪಡುವುವು. ಹೀಗೆ ಅಲ್ಲಿಯ ಜನರು ಹೆಚ್ಚು ಕೆಲಸಗಳಿಗೆ ಯಂತ್ರವನ್ನು ಪಯೋಗಿಸುವರು.

ಈಗ ಪರ್ಯಾಲೋಚಿಸಿತಕ್ಕುದು ಏನೆಂದರೆ—ಹೀಗೆ ಯಂತ್ರವನ್ನು ಪಯೋಗಿಸುವವರಿಗೆ ಯಂತ್ರ ಶಾಸ್ತ್ರಜ್ಞಾನವು ಚೆನ್ನಾಗಿದ್ದರೆ ಅವರ ಕಾರ್ಯಗಳು ಸರಿಯಾಗಿ ನಡೆಯುವುವು. ಆ ವಿದ್ಯೆಯಲ್ಲಿ ಸರಿಯಾದ ಜ್ಞಾನವಿಲ್ಲದಿದ್ದರೆ ಅವರ ಕೆಲಸಗಳು ಕೆಟ್ಟು ಹೋಗುವುವು. ತಾನು ಉಪಯೋಗಿಸತಕ್ಕ ಸಾಮಾನುಗಳ ಬಲಾ ಬಲಗಳನ್ನು ಚೆನ್ನಾಗಿ ಪರ್ಯಾಲೋಚಿಸದೆ ಇಂಜನಿಯರು ಸೇತುವೆಯನ್ನು ಕಟ್ಟಿದರೆ ಅದು ಬೇಗನೆ ಮುರಿದುಹೋಗುವುದರಲ್ಲಿ ಸಂದೇಹವಿಲ್ಲ. ಯಂತ್ರಗಳನ್ನೂ ಕೂಡ ಯಾವ

ಯಾವ ಕೆಲಸಗಳಿಗೆ ಯಾವುದು ಯಾವುದು ಬೇಕೋ ಅದನ್ನದನ್ನೇ ಉಪಯೋಗಿಸ ಬೇಕು. ಮತ್ತು ಅವು ಕೆಲಸಕ್ಕೆ ತಕ್ಕಂತೆ ಬಲವಾಗಿರಬೇಕು. ಹಾಗಿಲ್ಲದಿದ್ದರೆ ಅವು ಬೇಗನೆ ಮುರಿದುಹೋಗುವುವು. ಹಳೆಯ ಪದ್ಧತಿಯನ್ನನುಸರಿಸಿ ಕಟ್ಟಿದ ಹಡಗು ಹೊಸರೀತಿಯಲ್ಲಿ ಕಟ್ಟಿದ ಹಡಗಿನಷ್ಟು ವೇಗವಾಗಿ ಓಡುವುದಿಲ್ಲ. ಹೊಸ ಮಾದರಿಯ ಹಡಗುಗಳು ವಿಶೇಷ ಯಂತ್ರಸಾಧನಗಳಿಂದ ಕಟ್ಟಲ್ಪಟ್ಟವಾಗಿರುವುದ ರಿಂದ ಅವು ಹಳೆಯ ಮಾದರಿ ಹಡಗುಗಳಿಗಿಂತ ಎಷ್ಟೋ ಅನುಕೂಲವಾಗಿಯೂ ಮಜಬೂತಾಗಿಯೂ ಚುರುಕಾಗಿ ನಡೆಯುವವಾಗಿಯೂ ಇರುವುವು. ವಾಣಿಜ್ಯ ವಿಷಯದಲ್ಲಾಗಲೀ ಮತ್ತಾವ ವಿಷಯದಲ್ಲಾಗಲೀ ಒಂದು ಜನಾಂಗಕ್ಕೂ ಮತ್ತೊಂದು ಜನಾಂಗಕ್ಕೂ ಪೋಟಾ ಪೋಟಿ ಬಂದಾಗ ಯಾವ ಜನಾಂಗದವರು ಯಂತ್ರ ಪ್ರಯೋಗದಲ್ಲಿ ಹೆಚ್ಚು ಕುಶಲರಾಗಿರುವರೋ ಅವರೇ ಜಯಿಸುವುದು ನಿಶ್ಚಯ. ಯುದ್ಧಸಂಭವಿಸಿದಾಗಲೂ ಯಂತ್ರಶಾಸ್ತ್ರದಲ್ಲಿ ವಿಶೇಷ ಬುದ್ಧಿಕೌಶಲ್ಯ ವುಳ್ಳವರೇ ಜಯಶೀಲರಾಗುವುದರಲ್ಲಿ ಸಂದೇಹವಿಲ್ಲ. ಹೀಗೆ ಯಂತ್ರಶಾಸ್ತ್ರಜ್ಞಾನದಿಂದ ಜನ ರು ಬಹು ಪ್ರಯೋಜನಗಳನ್ನು ಹೊಂದಬಹುದು.

ಈಗ ಹೊಗೆ ಯಂತ್ರವನ್ನು ಕುರಿತು ವಿಚಾರ ಮಾಡೋಣ. ಇದು ಎಷ್ಟೋ ಕೋಟಿ ಜನರು ಮಾಡುವಷ್ಟು ಕೆಲಸಗಳನ್ನು ಮಾಡುವುದು ಉಷ್ಣಸ್ವಭಾವವನ್ನೂ ಗುಣವನ್ನೂ ನಮಗೆ ಭೌತಿಕಶಾಸ್ತ್ರವು ತಿಳಿಸಿಕೊಡುವುದು. ಬಗೆಬಗೆಯ ಕೈಗಾರಿ ಕೆಗಳಲ್ಲಿ ಉಪಯೋಗಿಸುವ ಯಂತ್ರಗಳಲ್ಲಿ ಹಾಕಿ ಉರಿಸಬೇಕಾದ ಕಟ್ಟಿಗೆಗಳನ್ನು ವೃಥಾ ನಷ್ಟವಾಗದಂತೆ ಮಿತಪ್ರಮಾಣದಲ್ಲಿ ಉಪಯೋಗಿಸಿಕ್ಕೊಳ್ಳುವ ರೀತಿಯನ್ನೂ ಕೊಲಿಮೆಗೆ ಬಿಸಿ ಗಾಳಿಯನ್ನೊದಗಿಸಿ ಕಬ್ಬಿಣವೇ ಮೊದಲಾದ ಲೋಹಗಳನ್ನು ಬಹಳವಾಗಿ ಕರಗಿಸಲು ಅನುಕೂಲಪಡಿಸುವ ಮಾರ್ಗವನ್ನೂ ಗಣಿಗಳಿಗೆ ಗಾಳಿಯ ನ್ನು ಒಯ್ಯುವ ವಿಧಾನವನ್ನೂ ಗಣಿಗಳಿಗೆ ಭದ್ರ ದೀಪವನ್ನೊದಗಿಸಿ ಬೆಂಕಿಯು ಅಪಾ ಯವು ಸಂಭವಿಸದಂತೆ ಮಾಡಲು ಬೇಕಾದ ಏರ್ಪಾಟನ್ನೂ ಉಷ್ಣಮಾಪಕ ಯಂತ್ರ ದ ಸಹಾಯದಿಂದ ಎಲ್ಲೆಲ್ಲಿ ಎಷ್ಟೆಷ್ಟು ಉಷ್ಣಾಂಶಬೇಕೋ ಅಷ್ಟೆ ಇರುವಂತೆ ಮಾಡಿ ಅನೇಕವಿಧವಾದ ಕಾರ್ಯಗಳನ್ನು ಕ್ರಮಪಡಿಸಿಕ್ಕೊಳ್ಳುವ ರೀತಿಯನ್ನೂ ಭೌತಿಕ ಶಾಸ್ತ್ರವು ಕಲಿಸುವುದು. ಮತ್ತು ಈ ಶಾಸ್ತ್ರವು ಬೆಳಕಿನ ಸ್ವಭಾವವನ್ನೂ ಗುಣಗಳ ನ್ನೂ ತಿಳಿಸುವುದರಿಂದ ಜನರಿಗೆ ಅನೇಕವಿಧವಾದ ಪ್ರಯೋಜನಗಳನ್ನುಂಟುಮಾಡು ವುದು. ಹೇಗೆಂದರೆ ದೃಷ್ಟಿದೋಷವುಳ್ಳ ವೃದ್ಧರಿಗೂ ಹತ್ತರ ದೃಷ್ಟಿಯುಳ್ಳವರಿಗೂ

ಯೋಗ್ಯವಾದ ಸುಲೋಚನಗಳನ್ನು ಒದಗಿಸಿಕೊಡುವುದರಿಂದ ದೃಷ್ಟಿ ದ್ರೋಹವು ಪರಿಹಾರವಾಗಿ ಸರಿಯಾಗಿ ಕಣ್ಣುಗಳು ಕಾಣಿಸುವಂತೆ ಮಾಡುವುದು.

ಇದಲ್ಲದೆ ಸೂಕ್ಷ್ಮದರ್ಶಿ ಎಂಬ ಯಂತ್ರದ ಮೂಲಕ ರೋಗ ಬೀಜಗಳನ್ನೂ ಪದಾರ್ಥ ಮಿಶ್ರಣಗಳನ್ನೂ ಕಂಡುಹಿಡಿಯಲು ಅನುಕೂಲಿಸುವುದು. ಹಡಗುಗಳ ರಕ್ಷಣೆಗೋಸ್ಕರ ಒಳ್ಳೆಯ ಬೆಳಕಿನ ಮನೆಗಳನ್ನು ಕಟ್ಟುವುದೇ ಮುಂತಾದ ವಿಷಯಗಳಿಗೂ ಸಹಾಯವಾಗುವುದು. ಮತ್ತು ಭೌತಿಕಶಾಸ್ತ್ರವು ತಿಳಿಸುವ ವೈದ್ಯುತ ಮತ್ತು ಲೋಹಡುಂಬನ ಶಕ್ತಿಗಳಿಂದಲೂ ಜನರಿಗೆ ಮಹಾ ಪ್ರಯೋಜನಗಳುಂಟಾಗುವುವು. ಹೋಕಾ ಯಂತ್ರಸಹಾಯದಿಂದ ಅಸಂಖ್ಯಾತವಾದ ಸಾಮಾನುಗಳೂ ಅನೇಕಸಹಸ್ರ ಜನರೂ ಸಮುದ್ರದ ಪಾಲಾಗದಂತೆ ರಕ್ಷಿಸಲ್ಪಡುತ್ತಾರೆ. ಎಲೆಕ್ಟ್ರೋ ಟೈಪಿನಿಂದ ಅನೇಕ ಚಿತ್ರಕೆಲಸ ಮುಂತಾದವುಗಳು ಮಾಡಲ್ಪಡುತ್ತವೆ. ತಂತೀ ಟಪಾಲಿನಿಂದ ಬಹು ದೂರದೇಶಗಳೊಂದಿಗೆ ವ್ಯಾಪಾರ ಮತ್ತು ರಾಜಕೀಯ ಕಾರ್ಯಗಳನ್ನು ನಡೆಸಲು ತುಂಬಾ ಅನುಕೂಲತೆ ಯುಂಟಾಗಿದೆ. ಮನೆಗಳಲ್ಲಿ ಹಚ್ಚುವ ದೀಪಗಳೂ ಅಡಿಗೆಮನೆಯ ಗಾಜಿನ ಸಾಮಾನುಗಳೂ ಪಡಸಾಲೆಯಲ್ಲಿರುವ ಚಿತ್ರಗಳೂ ಇನ್ನೂ ನಾನಾ ಸುಖಸಾಧನ ಸಾಮಗ್ರಿಗಳೂ ಭೌತಿಕ ಶಾಸ್ತ್ರಜ್ಞಾನದಿಂದಲೇ ಹೊಂದಲ್ಪಟ್ಟಿವೆ. ಹೀಗೆ ಆ ಶಾಸ್ತ್ರದಿಂದ ನಮ್ಮಗಳಿಗೆ ಮಹೋಪಕಾರವುಂಟು.

ಜನರು ರಸಾಯನ ಶಾಸ್ತ್ರದಿಂದ ಇನ್ನೂ ಅಧಿಕವಾದ ಪ್ರಯೋಜನಗಳನ್ನು ಹೊಂದುವರು. ಬಣ್ಣಕಲೆ ಮುಂತಾದವುಗಳನ್ನು ತೆಗೆಯುವವರಿಗೂ ಬಗೆಬಗೆಯ ಬಣ್ಣಗಳನ್ನು ಹಾಕುವವರಿಗೂ ಚೀಟಿ ಬಟ್ಟೆಗಳನ್ನು ಮಾಡುವವರಿಗೂ ಈಶಾಸ್ತ್ರದ ಸಹಾಯವು ಬೇಕು. ಇವರಿಗೆ ಆಯಾ ವಿಷಯಗಳ ಜ್ಞಾನವು ಚೆನ್ನಾಗಿದ್ದರೆ ತಮ್ಮ ತಮ್ಮ ಕೆಲಸಗಳನ್ನು ಸಮಂಜಸವಾಗಿ ಮಾಡಲು ಸಮರ್ಥರಾಗುವರು. ಇಲ್ಲದಿದ್ದರೆ ಕೆಲಸಗಳನ್ನು ಕೆಡಿಸಿಬಿಡುವರು. ತಾಮ್ರ ಕಬ್ಬಿಣ ಸತ್ತು ಸೀಸ ಕಬ್ಬಿಣ ಬೆಳ್ಳಿ ಮುಂತಾದ ಲೋಹಗಳನ್ನು ಕರಗಿಸಿ ಅವುಗಳಿಂದ ವಿಧವಿಧವಾದ ಸಾಮಾನುಗಳನ್ನು ಮಾಡುವುದಕ್ಕೂ ರಸಾಯನ ಶಾಸ್ತ್ರಜ್ಞಾನವು ಬೇಕು. ಹಾಗೆಯೆ ಸಕ್ಕರೆಯನ್ನು ಶುದ್ಧಿಮಾಡಲಿಕ್ಕೂ ಜಲಜನಕ ಮುಂತಾದ ವಾಯುಗಳನ್ನು ತ್ಪಾದನ ಮಾಡುವುದಕ್ಕೂ ಸಾಬೂನುಗಳನ್ನೂ ಮದ್ದನ್ನೂ ತಯಾರುಮಾಡಲಿಕ್ಕೂ ಈಶಾಸ್ತ್ರದ ಸಹಾಯವು ಅವಶ್ಯಕ. ಗಾಜಿನ ಮತ್ತು ಚೀನಿಮಣ್ಣಿನ ಸಾಮಾನುಗಳನ್ನು ಮಾಡಲಿಕ್ಕೂ

[illegible]ಯನ ಶಾಸ್ತ್ರದ ಪರಿಚಿತಿಯು ಬೇಕಾಗುವುದು. ಸಾರಾಯಿ ಬಟ್ಟಿ ಇಳಿಸುವವ[illegible]ಗೂ ಈ ಶಾಸ್ತ್ರಜ್ಞಾನವು ಅಗತ್ಯ. ಹದವಾಗಿ ಬಟ್ಟಿ ಇಳಿದರೆ ಲಾಭವೂ ಇಲ್ಲದಿ[illegible]ದರೆ ನಷ್ಟವೂ ಉಂಟಾಗುವುವು. ಆದುದರಿಂದ ಹೆಚ್ಚಾಗಿ ಮದ್ಯಮಾಡುವವರು ಚ[illegible]ತುರನಾದ ರಸಾಯನ ಶಾಸ್ತ್ರಜ್ಞನನ್ನು ಆ ಕೆಲಸಕ್ಕೆ ನೇಮಕಮಾಡಬೇಕು.

ಸಾಮಾನ್ಯವಾಗಿ ಈಗ ಹೆಚ್ಚು ಶಿಲ್ಪಕಾರ್ಯಗಳಿಗೆ ರಸಾಯನ ಶಾಸ್ತ್ರಸಹಾಯ ವು ಬೇಕಾಗುವುದು. ಅದರ ಸಹಾಯವಿಲ್ಲದೆ ಮಾಡತಕ್ಕ ಕೆಲಸಗಳೇ ಬಹಳ ಕಡಿ ಮೆಎಂದು ಹೇಳಬಹುದು. ಈಗಿನಕಾಲದ ಸಾಗವಳಿಗೂ ಕೂಡಾ ಅದರಸಹಾಯವು ಬೇಕಾಗಿರುತ್ತದೆ. ಕೃಷಿಯಿಂದ ಚೆಚ್ಚಾಗಿ ವೈರುಗಳನ್ನು ಬೆಳೆದು ಲಾಭವನ್ನು ಸಂ ಪಾದಿಸಬೇಕೆಂದು ಇಚ್ಛೆಯುಳ್ಳವರಿಗೆ ಆ ಶಾಸ್ತ್ರವು ಅತ್ಯಾವಶ್ಯಕ ವಾಗಿರುವುದು ಗೊಬ್ಬರವನ್ನು ಪರೀಕ್ಷಿಸುವುದೂ ಉತ್ತಮವಾದ ಗೊಬ್ಬರವನ್ನು ಮಾಡುವುದೂ ಭೂಗುಣವೆಂಥಾದ್ದೆಂದು ಗೊತ್ತುಮಾಡಿಕೊಳ್ಳುವುದೂ ಅಮೋನಿಯ ಸಾರವನ್ನು ಸ್ಥಾಪಿಸಲು ಜಿಪ್ಸಂ ಮುಂತಾದ ಪದಾರ್ಥಗಳನ್ನು ಪ್ರಯೋಗಿಸುವುದೂ ಕಾರ್ಪೊ ಲೈಟುಗಳನ್ನುಪಯೋಗಿಸುವುದೂ ಇವೇ ಮೊದಲಾದ ಕೆಲಸಗಳಿಗೆ ರಸಾಯನ ಶಾ ಸ್ತ್ರಜ್ಞಾನವು ಮಹಾ ಫಲದಾಯಕವಾಗಿರುವುದು. ಆದುದರಿಂದ ಲಾಭವನ್ನಪೇಕ್ಷಿ ಸುವ ರೈತನು ಈವಿಷಯವನ್ನು ಚೆನ್ನಾಗಿ ತಿಳಿದಿರಬೇಕು. ದೀಪದಕಡ್ಡಿಗಳನ್ನು ಮಾಡುವುದಕ್ಕೂ ಚರಂಡಿಯ ರೊಚ್ಚನ್ನು ಶುಚಿಮಾಡಲಿಕ್ಕೂ ತಸ್ಪೀರು ಕೆಲಸಕ್ಕೂ ರೊಟ್ಟಿಮಾಡಲಿಕ್ಕೂ ಪರಿಮಳದ್ರವ್ಯಗಳ ಬಟ್ಟಿ ಇಳಿಸಲಿಕ್ಕೂ ರಸಾಯನ ಶಾಸ್ತ್ರಜ್ಞಾ ನವು ಅವಶ್ಯಕವಾಗಿರುವುದು. ಹೀಗೆ ಇನ್ನೂ ಅನೇಕ ಕೆಲಸಗಳಿಗೆ ಆ ಶಾಸ್ತ್ರವು ಪ್ರಯೋಜನಕರವಾಗಿರುವುದು. ಆದುದರಿಂದ ಮೇಲೆ ಹೇಳಲ್ಪಟ್ಟ ಬಗೆಬಗೆಯ ಕೆಲಸಗಳನ್ನು ನಡೆಸತಕ್ಕವರು ಅವರಿಗವರಿಗೆ ಉಪಯುಕ್ತವಾದ ರಸ ವಿದ್ಯಾಸಂಬಂ ಧವಾದ ಜ್ಞಾನವನ್ನು ಅಗತ್ಯವಾಗಿ ಹೊಂದಿರಬೇಕು.

ಈಗ ಜೋತಿಷವನ್ನು ಕುರಿತು ವಿಚಾರ ಮಾಡೋಣ. ಈಶಾಸ ವೂ ಅನೇ ಕ ಕಾರ್ಯಗಳಿಗೆ ಪ್ರಯೋಜನಕರವಾಗಿರುವುದು. [illegible] ನೌಕಾ ವಿದ್ಯೆಯುಂಟಾಗಿರುವುದು. ಇದರಿಂದ ದೂರ ದೇಶಗಳಿಗೆ ಪ್ರಯಾಣಮಾ ಡಿ ಅಲ್ಲಿ ವಾಣಿಜ್ಯಮುಂತಾದ ಕಾರ್ಯಗಳನ್ನು ನಡೆಸಲಿಕ್ಕೆ ಸೌಕರ್ಯ ವುಂಟಾಗಿರು ವುದು. ಈ ವಿದ್ಯೆಯಲ್ಲಿ ಪ್ರವೀಣರಾಗಿರುವುದರಿಂದ ಇಂಗ್ಲೆಂಡಿನ ಜನರು ಅನೇಕ ದೇಶಗಳಿಗೆ ಹೋಗಿಬರುವರು. ತಮ್ಮದೇಶದ ಸಾಮಾನುಗಳನ್ನು ಪರದೇಶಗಳಿಗೆ

ಕಳುಹಿಸಿ ಅಲ್ಲಿಯ ಸಾಮಾನುಗಳನ್ನು ತಮ್ಮದೇಶಕ್ಕೆ ತರುವರು. ಈಕಾರ್ಯಗಳಿಗೆಲ್ಲಾ ನಾವಿಕ ವಿದ್ಯೆಯು ಅವರಿಗೆ ತುಂಬಾ ಸಹಾಯ ಮಾಡುವುದು. ಅದರ ಜ್ಞಾನವಿಲ್ಲದಿದ್ದರೆ ಅವರೆಂದಿಗೂ ಹಡಗುಗಳನ್ನು ಕಟ್ಟುವುದಕ್ಕೂ ನಡೆಯಿಸುವುದಕ್ಕೂ ದೂರ ದೇಶಗಳಿಗೆ ಪ್ರಯಾಣ ಬೆಳಸುವುದಕ್ಕೂ ಸಮರ್ಥರಾಗುತ್ತಿರಲಿಲ್ಲ. ಇದೇ ರೀತಿಯಲ್ಲಿ ಜರ್ಮನಿ ಫ್ರಾನ್ಸ್ ಯುನೈಟೆಡ್ ಸ್ಟೇಟ್ಸ್ ಜಪಾನ್ ಚಿನಾ ಮುಂತಾದ ದೇಶೀಯರು ಹಡಗುಗಳಲ್ಲಿ ಪ್ರಯಾಣ ಬೆಳಸಿ ಅನ್ಯದೇಶಗಳಿಗೆ ಹೋಗಿ ವಾಣಿಜ್ಯಾದಿಕಾರ್ಯಗಳನ್ನು ಮಾಡುತ್ತಿರುವರು

S. V. ಸಶೇಷ.

ಪಾಠಕರು.

ನಮ್ಮ ಪೂರ್ವೀಕರಲ್ಲಿ ವಿದ್ಯಾರ್ಥಿಗಳು ಪಾಠವನ್ನು ಉಪಕ್ರಮಿಸುವುದಕ್ಕೆ ಮುಂಚೆ ಗುರುವಿಗೆ ನಮಸ್ಕಾರವನ್ನು ಮಾಡಿ ಪಾಠವನ್ನು ಉಪಕ್ರಮಿಸುತ್ತಿದ್ದರು. ನಮಸ್ಕಾರ ಮಾಡುವಾಗ್ಗೆ ಒಂದು ಶ್ಲೋಕವನ್ನು ಹೇಳಿ ನಮಸ್ಕಾರ ಮಾಡುತ್ತಿದ್ದರು. ಆ ಶ್ಲೋಕವು ಯಾವುದೆಂದರೆ :—

ಶ್ಲೋ ॥ ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರೇವಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇನಮಃ ॥

ಇದರ ಅರ್ಥವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಗುರುವೇ ಬ್ರಹ್ಮನು, ಅವನೇ ವಿಷ್ಣುವು, ಅವನೇ ಮಹೇಶ್ವರನು, ಅವನೇ ಪರಬ್ರಹ್ಮನು ಆದುದರಿಂದ ಅವನಿಗೆ ನಮಸ್ಕಾರ ಮಾಡುತ್ತೇನೆ. ಪೂರ್ವದಲ್ಲಿ ಗುರುಗಳೂ ಅಂತಹ ಗುಣಾಢ್ಯರೂ, ಶಕ್ತರೂ, ಶಿಷ್ಯಾಭಿಮಾನಿಗಳಾಗಿಯೂ ಇರುತ್ತಿದ್ದರು. ವಸಿಷ್ಠಾದಿಗಳ ಚರಿತ್ರೆಯನ್ನು ನೋಡಿದರೆ ಅವರು ಇಂತಹ ಗುರುಗಳೆಂದು ಗೊತ್ತಾಗುತ್ತಾದೆ. ಅವರಿಂದ ರಾಮನಿಗೆ ಮೋಧಿಸಲ್ಪಟ್ಟ ಜ್ಞಾನವಾಸಿಷ್ಠವು ಕನ್ನಡಕ್ಕೂ ತರ್ಜುಮೆಯಾಗಿ ಇದೆ. ಈ ಗ್ರಂಥವನ್ನು ಓದಿದರೆ ವಸಿಷ್ಠರ ಮಹಿಮೆಯು ಗೊತ್ತಾಗುವುದು. ಗುರುಪದವಿಯನ್ನು ಅಲಂಕರಿಸತಕ್ಕವರು ಸಾಧ್ಯವಾದಮಟ್ಟಿಗೂ ಸರ್ವತೋಮುಖವಾದ ಪ್ರಜ್ಞೆಯನ್ನು ಸಂಪಾದಿಸಿ ಗುರುಪದವಿಗೆ ಅರ್ಹರಾಗಿರಬೇಕು. ಹಾಗಿ

ದ್ದರೆ ಶಿಷ್ಯರಿಗೆ ಅವರಲ್ಲಿ ಭಕ್ತಿಯೂ ನಿಸರ್ಗವಾಗಿ ಹುಟ್ಟುವುದು. ಗುರುವು ವಿದ್ಯಾವಂತನಾಗಿ ಮಾತ್ರ ಇದ್ದರೆ ಸಾಲದು. ಗುಣಾಢ್ಯನಾಗಿಯೂ ಇರಬೇಕು. ಶಿಷ್ಯರಲ್ಲಿ ಪ್ರೀತಿಯುಳ್ಳವನಾಗಿಯೂ ಅವರನ್ನು ಪುರೋವೃದ್ಧಿಗೆ ತರಬೇಕೆಂಬ ಆಸಕ್ತಿಯುಳ್ಳವನಾಗಿಯೂ ವಿನೆಯಾದಿ ಸದ್ಗುಣಗಳಿಗೆ ಮೇಲುಪಜ್ಞೆಯನ್ನು ಹಾಕತಕ್ಕವನಾಗಿಯೂ ಇರಬೇಕು. ಪಾಠಪ್ರವಚನಗಳನ್ನು ಹೇಳುವುದರಲ್ಲಿ ಉತ್ಸಾಹಶಾಲಿಯಾಗಿಯೂ ಹೇಳತಕ್ಕ ವಿಷಯಗಳನ್ನೂ ಅನುಭವಕ್ಕೆ ಬರುವಂತೆ ಉಪದೇಶಮಾಡತಕ್ಕ ಶಕ್ತಿಯುಳ್ಳವನಾಗಿಯೂ ಇರಬೇಕು. ಗಂಭೀರವಾದ ಆಕಾರವುಳ್ಳವನಾಗಿಯೂ, ಆಕಾರಕ್ಕೆ ತಕ್ಕ ಪ್ರಜ್ಞೆಯುಳ್ಳವನಾಗಿಯೂ, ಪ್ರಜ್ಞೆಗೆ ತಕ್ಕ ಶಾಸ್ತ್ರಜ್ಞಾನವುಳ್ಳವನಾಗಿಯೂ, ಶಾಸ್ತ್ರಜ್ಞಾನಕ್ಕೆ ತಕ್ಕ ಅನುಷ್ಠಾನವುಳ್ಳವನಾಗಿಯೂ ಇರಬೇಕು. ಪಾಠಕನು ಈರೀತಿಯಲ್ಲಿದ್ದರೆ ಶಿಷ್ಯರೂ ಅದೇರೀತಿಯಲ್ಲಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ವಸಿಷ್ಠನಂತಹ ಗುರುವಿರುವಾಗ್ಗೆ ಶ್ರೀರಾಮನಂತಹ ಶಿಷ್ಯನಿರತಕ್ಕುದೇನಾಶ್ಚರ್ಯ. ಪ್ರಪಂಚದ ಸ್ಥಿತಿಯು ಮೇಲಾಗಬೇಕಾದರೆ ಜನರು ಸಕಲ ವಿದ್ಯಾವಿಶಾರದರಾಗಿಯೂ, ಧರ್ಮಿಷ್ಟರಾಗಿಯೂ, ಆತ್ಮಾವಲಂಬಿಗಳಾಗಿಯೂ ಆಗಬೇಕಾದರೆ ಮೇಲೆ ಹೇಳಿದರೀತಿಯುಳ್ಳ ವಿದ್ಯಾವಿನಯ ಸಂಪತ್ತುಗಳುಳ್ಳವರು ಪಾಠಕರಾಗಬೇಕು. ಎಲ್ಲಾ ಉದ್ಯೋಗಗಳಿಗಿಂತಲೂ ಜನರನ್ನು ಮೇಧಾವಿಗಳನ್ನಾಗಿಯೂ, ಪೂರ್ವಾಪರಜ್ಞರನ್ನಾಗಿಯೂ, ಆತ್ಮಾವಲಂಬಿಗಳನ್ನಾಗಿಯೂ, ಪರೋಪಕಾರಿಗಳನ್ನಾಗಿಯೂ ಮಾಡುವುದಕ್ಕೆ ಸಾಧ್ಯವಾದ ಪಾಠಕರ ಉದ್ಯೋಗವು ಬಹಳ ಶ್ಲಾಘ್ಯವಾದುದು.

ಬಾಲವ್ಯಾಕರಣ.

೧. ನಾವು ಮಾತನಾಡುವ ಶಬ್ದಗಳೂ, ಬರೆಯುವ ಶಬ್ದಗಳೂ ಶುದ್ಧವಾದುವುಗಳಾಗಿಯೂ, ಒಂದಕ್ಕೊಂದು ಸಂಬಂಧವುಳ್ಳವುಗಳಾಗಿಯೂ ಇರಬೇಕು. ಅಂಥ ಶಬ್ದಗಳ ಸ್ವರೂಪವನ್ನು ತಿಳಿಸುವುದೇ ವ್ಯಾಕರಣ.

೨. ಶಬ್ದಸಮೂಹದಲ್ಲಿ ನಮಗೆ ಬೇಕಾದ ಕೆಲವು ಶಬ್ದಗಳನ್ನು ಸೇರಿಸಿಕೊಂಡು ಮಾತನಾಡುತ್ತೇವೆ. ಅಂಥ ಶಬ್ದಗಳು ಪರಸ್ಪರ ಸಂಬಂಧಿಸಿಕೊಂಡು, ಅರ್ಥ ಕೆಡದಂತೆ ಇರಬೇಕಾಗಿದೆ. ಈ ಶಬ್ದಗಳ ಸೇರಿಸುವಿಕೆಗೆ ವ್ಯಾಕರಣದ ಜ್ಞಾನವು ಅಗತ್ಯ.

ಈಗ ರಾಮ, ಕೃಷ್ಣ, ರಂಗ, ಮನೆ, ಹೋಗು, ಬಂದ, ಮಗ ಎಂಬ ಶಬ್ದಗಳು ಕೊಡಲ್ಪಟ್ಟಿವೆ. ಇವುಗಳನ್ನು ಅರ್ಥ ಕೆಡದಂತೆ ಸೇರಿಸಿ ನೋಡೋಣ.

೧. ರಾಮನ ಮಗ ಕೃಷ್ಣನು ರಂಗನ ಮನೆಗೆ ಹೋಗಿ ಬಂದನು,

೨. ರಾಮನ ಮನೆಯಲ್ಲಿ ರಂಗನು (ಇರುವಾಗ) ಕೃಷ್ಣನ ಮಗನು ಹೋಗಿ ಬಂದನು.

೩. a. ರಾಮನು ಕೃಷ್ಣನ ಮಗನು. b. ರಂಗನು ಬಂದನು. c. ಮನೆಗೆ ಹೋಗು.

೩. ಶಬ್ದಗಳನ್ನು ಎರಡು ಮುಖ್ಯಭಾಗಗಳಾಗಿ ವಿಂಗಡಿಸಿರುವರು. ಯಾವುವೆಂದರೆ:—ಹೆಸರುಗಳನ್ನು ತಿಳಿಸುವುದು ನಾಮಪದ; ಕೆಲಸವನ್ನು ತಿಳಿಸುವುದು ಕ್ರಿಯಾಪದ. ಉದಾಹರಣೆ—

(ನಾಮ) ಹಕ್ಕಿ, ಮಗ, ನೀನು, ಮೂರು, ಕೆಲವು.

(ಕ್ರಿಯಾ) ಹೋಗು, ತಿನ್ನು, ಕಡಿ, ಬೇಡು, ಓದು.

ಅಭ್ಯಾಸ ೧. ಓದು, ಸಾಲ, ಕಟ್ಟಿ, ಕೂಗು, ಕೋಳಿ, ಗೀಚು, ಹೊಲಿ, ಚೇಳು, ನಾಲ್ಕು, ಬೆತ್ತ, ಕಡ್ಡಿ ಇವುಗಳಲ್ಲಿ ನಾಮಪದ ಕ್ರಿಯಾಪದಗಳನ್ನು ವಿಂಗಡಿಸು.

೨. ಜೋಳ, ಬೆಳೆ, ಹೊಲ, ದಾರಿ, ಇರು, ಹಾವು, ಹುಳು, ಹರಿ, ಮೇಲೆ, ಕಾಲು, ಒಗೆ, ಒಟ್ಟಿ, ಅಗಸನು, ರುಚಿ, ಕಾಯಿ, ತೆಂಗು. ಇಲ್ಲಿ ಕೊಟ್ಟಿರುವ ಶಬ್ದಗಳಿಂದ ಬೇರೆ ಬೇರೆ ಅರ್ಥವುಳ್ಳ ಐದು ವಾಕ್ಯಗಳನ್ನು ಮಾಡಿ ಹೇಳು.

೪. ನಾಮಪದ ಕ್ರಿಯಾಪದಗಳಲ್ಲಿನ ಮೂಲಶಬ್ದಗಳಿಗೆ ಪ್ರಕೃತಿ ಎಂತಲೂ ಇದರಮೇಲೆ ಸೇರುವ ಅಕ್ಷರಗಳಿಗೆ ಪ್ರತ್ಯಯಗಳೆಂತಲೂ ಹೆಸರು. ಪ್ರಕೃತಿಪ್ರತ್ಯಯಗಳು ಸೇರಿದಮೇಲೆ ಪದವೆನಿಸುವುದು.

ಉದಾಹರಣೆ.

ಪ್ರಕೃತಿ.	ಪ್ರತ್ಯಯ.	ಪದ.	ಪ್ರಕೃತಿ.	ಪ್ರತ್ಯಯ.	ಪದ.
ಹಕ್ಕಿ	+ ಇಂದ	= ಹಕ್ಕಿಯಿಂದ.	ಮಾಡು	+ ದ + ಅನು	= ಮಾಡಿದನು.
ಮನೆ	+ ಅಲ್ಲಿ	= ಮನೆಯಲ್ಲಿ.	ತಿನ್ನು	+ ಬಣ +	= ತಿನ್ನೋಣ.

ಅಭ್ಯಾಸ ೩ ಹೊಲದಲ್ಲಿ, ಕಟ್ಟುವನು, ಹಾಲಿನ, ಹೊಳೆಗೆ, ಬೇಯುತ್ತದೆ, ಕಾಡನ್ನು ಇವುಗಳಲ್ಲಿ ಪ್ರಕೃತಿ ಪ್ರತ್ಯಯಗಳನ್ನು ವಿಂಗಡಿಸು.

೪ ಕಾಲು + ಇಗೆ, ಬೆಳೆ + ದ + ಅನು, ಓಡು + ವ + ಅದು, ಬೇ (ಇನು) ದ + ಅನು. ಇಲ್ಲಿ ಪ್ರಕೃತಿಪ್ರತ್ಯಯಗಳನ್ನು ನೋಡಿಸಿ ಇಂಥ ಪದನೆಂದು ಹೇಳು.

೫ ಸಂಪೂರ್ಣವಾದ ಅರ್ಥವುಳ್ಳ ಮಾತು ಯೆಷ್ಟು (೨೨ ನೇ ಸೂತ್ರ)

ಉದಾಹರಣೆ.—ಬೆಂಕಿ ಸುಡುತ್ತದೆ. ನಾಯಿ ಮಗನನ್ನು ಕಚ್ಚಿತು. ಮನೆಗೆ ಹೋಗು. ನೀರನ್ನು ಕುಡಿಯುತ್ತಾನೆ.

೫ ಅಭ್ಯಾಸ. ಅಕಳು, ಭಾವಿ, ತಿಮ್ಮನ, ಬಳಿಯ, ಇತ್ತು, ಹುಲ್ಲನ್ನು, ರಂಗನ, ಮೇಯುತ್ತ ಇವುಗಳನ್ನು ಕೂಡಿಸಿ ಒಂದು ವಾಕ್ಯಮಾಡಿ

ನೆನಪಿನಲ್ಲಿಡತಕ್ಕವು.

೧. ಲಿಂಗ—ಗಂಡಸರನ್ನು ಹೆದರಿಸುವುದು, ಪುಲ್ಲಿಂಗ, ಹೆಂಗಸರನ್ನು ಹೇಳುವುದು ಸ್ತ್ರೀಲಿಂಗ, ಉಳಿದವುಗಳು ನಪುಂಸಕಲಿಂಗ.

(ಪುಂ) ಅರಸು, ಮಾವ, (ಸ್ತ್ರೀ) ತಾಯಿ, ಅಕ್ಕ, (ನಪುಂ) ಮನೆ, ಹೊಲ, ಹಸು.

೨. ವಚನ—ಒಂದನ್ನು ತಿಳಿಸುವುದು ಏಕವಚನ, ಇದಕ್ಕಿಂತ ಹೆಚ್ಚಿದುದನ್ನು ಹೇಳುವುವು ಬಹುವಚನ.

(ಏಕ) ಹಣ್ಣು, ಹಸು, ಅಳು (ಬಹು) ಹಣ್ಣುಗಳು, ಹಸುಗಳು, ಅಳುಗಳು.

೩. ವಿಭಕ್ತಿ—ಪ್ರಥಮೆ, ದ್ವಿತೀಯೆ, ತೃತೀಯೆ, ಚತುರ್ಥಿ, ಪಂಚಮಿ, ಷಷ್ಠಿ, ಸಪ್ತಮಿ, ಸಂಬೋಧನೆ, ಎಂಬಿವು— ಇವುಗಳ ಭೇದಗಳನ್ನು ಪ್ರತ್ಯಯುಗಳಿಂದ ತಿಳಿಸುವುದು.

ನಕ್ಷೆ ಬರೆಸುವುದು.

ಪ್ರತಿ ವರ್ಷವೂ ನಡೆಯುವ ಮೈಸೂರು ದೇಶೀಯ ಪರೀಕ್ಷೆಗಳಲ್ಲು, ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೂ ನಕ್ಷೆಬರೆಯುವುದು ಭೂವಿವರಣೆಯ ಪ್ರಶ್ನಪತ್ರಿಕೆಯಲ್ಲಿ ಒಂದುಭಾಗವಾಗಿರುವುದು ನಮ್ಮೆಲ್ಲರಿಗೂ ತಿಳಿದೇ ಇರುವುದಷ್ಟೆ. ಆದರೆ ಈ ಪರೀಕ್ಷೆಗಳಲ್ಲಿ ಪರೀಕ್ಷ್ಯರ ಉತ್ತರಗಳನ್ನು ತಿದ್ದುವ ಪರೀಕ್ಷಕರಿಗೆ ಮತ್ತೊಂದು ಅಂಶವು ಗೊತ್ತಿರುವುದು. ಅದೇನೆಂದರೆ, ಈ ಭಾಗದ ಉತ್ತರವನ್ನು ಕೆಲವರು ಮಾತ್ರ ಬರೆಯುವರು; ಇನ್ನು ಕೆಲವರು ಬರೆದರೂ ಬರೆಯದೆ ಇದ್ದಂತೆಯೇ ಭಾವಿಸಬಹುದು. ಈ ಸ್ಥಿತಿಗೆ ಯಾರು ಕಾರಣವೆಂದು ವಿಚಾರಮಾಡಿದರೆ—ಪತ್ರಿಕೆಯಲ್ಲಿ ಕೇಳಿರುವ ನಕ್ಷೆಯನ್ನು ಬರೆಯದ ಪರೀಕ್ಷ್ಯರು ಕಾರಣವಾಗಿರಬಹುದೆ? ಅಥವಾ ನಕ್ಷೆ ಬರೆಯಲು ನಿಯಮಿಸಿರುವ ಪರೀಕ್ಷಕರು ಕಾರಣವಾಗಿರಬಹುದೆ? ಅಲ್ಲವೆ ನಕ್ಷೆ ಬರೆಯುವುದನ್ನು ಕಲಿಸದ ಉಪಾಧ್ಯಾಯರು ಕಾರಣವಾಗಿರಬಹುದೆ?

ಪ್ರತಿಯೊಬ್ಬ ಪರೀಕ್ಷ್ಯನೂ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕೆಂಬ ಕುತೂಹಲವುಳ್ಳವನಾಗಿರುವುದರಿಂದ ಅವನಿಗೆ ತಿಳಿದ ಅಂಶಗಳನ್ನೆಲ್ಲ ಬರೆಯುವುದು ಅವನ ಸ್ವಭಾವವಾಗಿರುವುದು. ನಕ್ಷೆ ಬರೆಯುವುದನ್ನು ಕಲಿತಿದ್ದರೆ ಅವನೆಂದಿಗೂ ಬರೆಯದೆ ಇರುತಿರಲಿಲ್ಲ. ನಕ್ಷೆ ಬರೆಯುವ ಕೌಶಲವು ಅವನಿಗೆ ಇಲ್ಲದಿರಬಹುದೆಂದು ಯೋಚಿಸಿದರೆ, ಇತರ ವಿಷಯಗಳಲ್ಲೆಲ್ಲ ವಿಶೇಷ ಕೌಶಲವನ್ನು ತೋರ್ಪಡಿಸುವವನು ಈಯೊಂದು ವಿಷಯದಲ್ಲಿ ಮಾತ್ರ ಕೌಶಲವಿಲ್ಲದವನೆಂದು ಹೇಳುವುದು ಹೇಗೆ ತಾನೆ ಸಾಧ್ಯವು. ಆದುದರಿಂದ ಪರೀಕ್ಷೆಯಲ್ಲಿ ಕೊಟ್ಟಿರುವ ನಕ್ಷೆಯನ್ನು ಬರೆಯದಿರಲು ಪರೀಕ್ಷ್ಯನು ಕಾರಣನೆಂದು ಹೇಳುವುದು ನ್ಯಾಯವೆ?

ಪರೀಕ್ಷ್ಯನು ಕಾರಣವಲ್ಲದಿದ್ದರೆ ಬಾಲಕನಿಗೆ ಉಪಯುಕ್ತವಲ್ಲದ ವಿಷಯದಲ್ಲಿ ಪ್ರಶ್ನೆಯನ್ನು ಕೇಳುವ ಪರೀಕ್ಷಕನು ಕಾರಣವಾಗಿರಬಹುದೆ? ಇವನು ವಿದ್ಯಾಭ್ಯಾಸದ ಇಲಾಖೆಯವರು ನಿಯಮಿಸಿರುವ ಪಾಠದ ಪಟ್ಟಿಯನ್ನೇ ಅಧಾರವಾಗಿ ಇಟ್ಟುಕೊಂಡು ಪ್ರಶ್ನೆಗಳನ್ನು ಕೇಳುವನು. ಇಂತಹ ಪಟ್ಟಿಯಲ್ಲಿ ನಕ್ಷೆ ಬರೆಯುವುದನ್ನು ಒಂದುಭಾಗವಾಗಿ ಸೇರಿಸಿರುವರು. ಆದುದರಿಂದ ನಕ್ಷೆ ಬರೆಯುವ ವಿಷಯದಲ್ಲಿ ಪ್ರಶ್ನೆಯನ್ನು ಕೇಳುವುದು ಪರೀಕ್ಷಕನ ತಪ್ಪೆಂದು ಹೇಳಲಾಗುವುದಿಲ್ಲ.

ಆದರೆ ಇಲಾಖೆಯವರು ಇದನ್ನು ಪಾಠದ ಪಟ್ಟಿಯಲ್ಲಿ ಸೇರಿಸದಿರಬಹುದಾಗಿ

ತ್ತಲ್ಲವೆ? ಹೀಗೆ ಹೇಳುವುದಕ್ಕೆ ಮೊದಲು ಇಲಾಖೆಯವರು ಇದನ್ನು ಸೇರಿಸಿರಲು ಕಾರಣಗಳೇನೆಂಬುದನ್ನು ಯೋಚಿಸಬೇಕಾಗುವುದು. ಭೂಗೋಳದಲ್ಲಿರುವ ದೇಶಗಳ ವಿಷಯವನ್ನು ಚೆನ್ನಾಗಿ ತಿಳಿಸುವುದೇ ಭೂವಿವರಣೆಯ ಪಾಠದ ಉದ್ದೇಶವಾಗಿರುವುದು. ಇಂತಹ ದೇಶಗಳ ವಿಷಯವನ್ನು ಮಕ್ಕಳ ಮನಸ್ಸಿನಲ್ಲಿ ಸ್ಥಿರಪಡಿಸಬೇಕಾದರೆ ಮೊದಲು ಆ ದೇಶಗಳ ಆಕೃತಿಯು ಮನಸ್ಸಿನಲ್ಲಿ ನಿಲ್ಲಬೇಕು. ದೇಶಗಳ ಭೂಪಟವನ್ನು ನೋಡುವುದರಿಂದ ಪಾತ್ರ ಅವುಗಳ ಆಕೃತಿಯು ಮನಸ್ಸಿನಲ್ಲಿ ನಿಲ್ಲಲಾರದು. ಅನೇಕವೇಳೆ ನಾವು ಪದಾರ್ಥಗಳನ್ನು ನೋಡಿದರೂ ಅಷ್ಟು ಎಚ್ಚರಿಕೆಯಿಂದ ನೋಡುವುದಿಲ್ಲ. ಆದುದರಿಂದ ಅಂತಹ ಅಂಶಗಳನ್ನು ವರ್ಣಿಸಲು ಯತ್ನಿಸಿದಾಗ ನಮ್ಮ ತಿಳುವಳಿಕೆಯಲ್ಲಿರುವ ನ್ಯೂನತೆಗಳು ಹೊರಪಡುವವು. ನಿದರ್ಶನವಾಗಿ ಒಬ್ಬ ಬಾಲಕನು ಪ್ರತಿನಿತ್ಯವೂ ನೋಡುತಿರುವ ಒಂದು ಬಳಿಕೆಯಾದ ಪಟ್ಟಿಯು ರಕ್ಕೆಯು ಯಾವ ಬಣ್ಣಕ್ಕಿರುವುದೆಂದು ಕೇಳಿದರೆ ಅನೇಕವೇಳೆ ಉತ್ತರ ಹೇಳುವುದು ಅವನಿಗೆ ಅಸಾಧ್ಯವು. ನೋಡಿದ ಅಂಶಗಳನ್ನು ವಾಚಾ ವರ್ಣಿಸುವುದರಲ್ಲೇ ಇಷ್ಟು ತೊಂದರೆಗಳಿದ್ದರೆ ಅವುಗಳನ್ನು ಬರೆಯುವುದರಲ್ಲಿ ಇನ್ನೂ ವಿಶೇಷ ತೊಂದರೆಗಳಿರುವವಲ್ಲವೆ. ಆದುದರಿಂದ ದೇಶದ ಆಕೃತಿಯು ಮಕ್ಕಳ ಮನಸ್ಸಿನಲ್ಲಿ ನಿಲ್ಲಬೇಕಾದರೆ ಅದನ್ನು ಭೂಪಟದಲ್ಲಿ ಎಚ್ಚರಿಕೆಯಿಂದ ನೋಡುವಂತೆ ಮಾಡುವುದಲ್ಲದೆ ಕ್ರಮವಾಗಿ ಬಾಲಕರಿಂದ ಬರೆಸಲೂಬೇಕು. ಮೇಲಾಗಿ ದೇಶಸಂಬಂಧವಾದ ಮುಖ್ಯಾಂಶಗಳೂ ಬಾಲಕರ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲಬೇಕಲ್ಲವೆ? ದೇಶದಲ್ಲಿ ಯಾವಪರ್ವತಗಳು ಎಲ್ಲಿ ಹಬ್ಬಿವೆ, ಇವುಗಳಲ್ಲಿ ಹುಟ್ಟುವ ನದಿಗಳು ಯಾವುವು? ಇವು ಯಾವದಿಕ್ಕಿಗೆ ಹರಿಯುತ್ತವೆ, ಇವುಗಳ ಮೇಲಿರುವ ಪಟ್ಟಣಗಳು ಯಾವುವು, ಒಂದು ಸ್ಥಳವು ಮತ್ತೊಂದು ಸ್ಥಳಕ್ಕೆ ಯಾವದಿಕ್ಕಿನಲ್ಲಿರುವುದು, ಎಷ್ಟು ದೂರದಲ್ಲಿರುವುದು, ಇಂತಹ ಅಂಶಗಳನ್ನೆಲ್ಲ ತಿಳಿವುದು ಭೂಗೋಳಪಾಠದ ಉದ್ದೇಶವಷ್ಟೆ. ಈ ಅಂಶಗಳನ್ನು ಕೆಲವರು ಭೂಪಟ ಮುಂತಾದ ಯಾವಸಹಾಯವೂ ಇಲ್ಲದೆ ಬಾಯಿಪಾಠ ಮಾಡಿಸುವರು, ಹೀಗೆ ಬಾಯಿಪಾಠ ಮಾಡಿದ ಅಂಶಗಳು ಕೆಲವು ದಿವಸಗಳಾದಮೇಲೆ ಸಂಪೂರ್ಣವಾಗಿ ಮರೆತುಹೋಗಬಹುದು. ಅಥವಾ ತಪ್ಪುತಪ್ಪಾಗಿ ಮನಸ್ಸಿನಲ್ಲಿ ನಿಲ್ಲಬಹುದು. ಉತ್ತರದಿಕ್ಕಿನಲ್ಲಿರುವ ಸ್ಥಳವನ್ನು ಬಾಲಕರು ದಕ್ಷಿಣದಿಕ್ಕಿನಲ್ಲಿರುವುದೆಂದು ಹೇಳಬಹುದು. ಭೂವಿವರಣೆಯ ಪಾಠವನ್ನು ಈ ಕ್ರಮದಲ್ಲಿ ಸೋಧಿಸುವುದಕ್ಕಿಂತಲು ಶೋಧಿಸದಿರುವುದೇ ಉತ್ತಮವಾಗಿ ತೋರುವುದು. ಭೂ

ಪಠಗಳಲ್ಲಿ ಇಂತಹ ಅಂಶಗಳನ್ನು ತೋರಿಸಿ ಆಮೇಲೆ ಅವುಗಳನ್ನು ಬಾಲಕರು ನೆನ ಪಿಡುವಂತೆ ಮಾಡುವುದು ವಾಡಿಕೆಯಾಗಿ ಉಪಾಧ್ಯಾಯರು ಅನುಸರಿಸುತಿರುವ ಮಾರ್ಗವು. ಈ ಮಾರ್ಗವು ಮೇಲಿನ ಮಾರ್ಗಕ್ಕಿಂತ ಬಹಳ ಉತ್ತಮವಾದುದೇ ಸರಿ. ಆದರೆ ಬಾಲಕರು ಬರೆಯುವ ಆಕೃತಿಗಳಲ್ಲಿ ಇಂತಹ ಸ್ಥಳಗಳನ್ನು ಗುರ್ತು ಮಾಡಿಸುವುದು ಇನ್ನೂ ಉತ್ತಮವಾದ ಮಾರ್ಗವು. ಭೂವಿವರಣೆಯ ಅಂಶಗಳ ನ್ನು ತಾವು ಬರೆದಿರುವ ಆಕೃತಿಗಳಲ್ಲಿ ಒಂದಾವೃತ್ತಿ ಗುರ್ತು ಮಾಡುವುದರಿಂದ ಅನೇ ಕಾವೃತ್ತಿ ಭೂಪಠದಲ್ಲಿ ನೋಡುವುದಕ್ಕಿಂತಲು ಹೆಚ್ಚು ಪ್ರಯೋಜನವಾಗುವುದು. ಆದುದರಿಂದ ನಕ್ಷೆ ಬರೆವುದನ್ನು ಇಲಾಖೆಯವರು ಪಾಠದಪಟ್ಟಿಯಲ್ಲಿ ಸೇರಿಸಿರುವುದು ಸರ್ವಸಮ್ಮತವಾದುದು.

ಬಾಲಕರು ಪರೀಕ್ಷೆಯಲ್ಲಿ ನಕ್ಷೆ ಬರೆಯದಿರುವುದಕ್ಕೆ ಪರೀಕ್ಷ್ಯರು, ಪರೀಕ್ಷ ಕರು, ಅಥವಾ ಇಲಾಖೆಯವರು ಕಾರಣವಲ್ಲದಿದ್ದರೆ ಮತ್ತಾರು ಕಾರಣವಾಗಿರಬ ಹುದು? ಭೂವಿವರಣೆಯ ಬೋಧಿಸುವ ಉಪಾಧ್ಯಾಯರು ಕಾರಣವಾಗಿರಬಹುದೆ? ಈಗ ಪಾಠಶಾಲೆಗಳಲ್ಲಿ ನಕ್ಷೆ ಬರೆಸುವ ರೀತಿಯನ್ನು ನೋಡಲು ಈ ಸ್ಥಿತಿಗೆ ಉಪಾ ಧ್ಯಾಯರೇ ಕಾರಣವೆಂದು ಒಪ್ಪಬೇಕಾಗುವುದು. ಈಗ ವಾಡಿಕೆಯಾಗಿರುವ ಮಾ ರ್ಗದಲ್ಲಿ ಉಪಾಧ್ಯಾಯರು ಒಂದು ದೇಶದ ನಕ್ಷೆಯನ್ನು ಮನೆಯಲ್ಲಿ ಬರೆದುಕೊಂಡು ಬರಬೇಕೆಂದು ಬಾಲಕರಿಗೆ ನಿಯಮಿಸುವರು. ಇಂತಹ ನಕ್ಷೆಯನ್ನು ತಾವೇ ಬರೆ ಯಲು ಬಾಲಕರಿಗೆ ಶಕ್ತಿಯಿಲ್ಲವಾದುದರಿಂದ ಒಂದು ತೆಳುವಾದ ಕಾಗದವನ್ನು ಭೂ ಪಠದ ಮೇಲಿಟ್ಟು ಆಕೃತಿಯನ್ನು ನಕಲುಮಾಡಿಕೊಂಡು ಬಂದು ಉಪಾಧ್ಯಾಯರಿಗೆ ತೋರಿಸುವರು. ಇದು ಬಾಲಕರ ದೋಷವು ಎಷ್ಟುಮಾತ್ರವೂ ಅಲ್ಲ. ನಕ್ಷೆ ಬರೆ ಯುವುದನ್ನು ಕಲಿಸದ ಉಪಾಧ್ಯಾಯರ ದೋಷವಾಗಿರುವುದು, ಈ ಕ್ರಮದಲ್ಲಿ ನಕ್ಷೆ ಬರೆಯುವುದನ್ನು ಕಲಿಸಿದರೆ ಪರೀಕ್ಷೆಯಲ್ಲಿ ಕೇಳುವ ನಕ್ಷೆಯನ್ನು ಒರೆಯಲು ಬಾಲಕರಿಗೆ ಹೇಗೆತಾನೆ ಶಕ್ತಿಯಿದ್ದೀತು.

ಈ ಕೊರತೆಯನ್ನು ಹೋಗಲಾಡಿಸಲು ಪಾಠಶಾಲೆಯಲ್ಲಿ ಬೋಧಿಸುವ ಇತರ ಪಾಠಗಳಿಗೆ ಹೇಗೆ ಸರಿಯಾದ ಪ್ರಯತ್ನವು ಆವಶ್ಯಕವೋ ಹಾಗೆ ನಕ್ಷೆ ಬರೆಸುವುದ ಕ್ಕೂ ಕ್ರಮವಾದ ಪ್ರಯತ್ನವು ಆವಶ್ಯಕವು. ಭೂವಿವರಣೆಯ ಪಾಠಕ್ಕೆ ವೇಳಾಪ ತ್ರಿಕೆಯಲ್ಲಿ ಕಾಲವನ್ನು ಗೊತ್ತುಮಾಡಿರುವಂತೆ ನಕ್ಷೆ ಬರೆವುದಕ್ಕೂ ಕಾಲವನ್ನು ಗೊತ್ತುಮಾಡಬೇಕು. ಇಂತಹಕಾಲದಲ್ಲಿ ಮುಖ್ಯವಾದ ದೇಶಗಳ ನಕ್ಷೆಗಳನ್ನು

ಬಾಲಕರಿಂದ ಕ್ರಮವಾಗಿ ಬರೆಸುತ ಬರಬೇಕು. ಈ ನಕ್ಷೆಗಳನ್ನು ಬರೆಸುವುದಕ್ಕೆ ಅನೇಕ ಮಾರ್ಗಗಳಿರುವುವು. ಅವುಗಳಲ್ಲಿ ಮುಖ್ಯವಾದ ಎರಡು ಮಾರ್ಗಗಳನ್ನು ಇಲ್ಲಿ ಸೂಚಿಸುವೆವು.

ಒಂದನೆಯ ಮಾರ್ಗದಲ್ಲಿ ಬಾಲಕರು ತರಗತಿಯಲ್ಲಿ ಬರೆಯಬೇಕಾದ ನಕ್ಷೆಯನ್ನು ಭೂಪಠದಮೇಲೆ ಒಂದು ತೆಳುವಾದ ಕಾಗದವನ್ನಿಟ್ಟು ಮನೆಯಲ್ಲಿ ನಕಲುಮಾಡಿಕೊಂಡು ಬರಬೇಕು. ಆಮೇಲೆ ಕಲವು ಚೌಕವಾದ ಮನೆಗಳಾಗುವಂತೆ ಈ ಕಾಗದಕ್ಕೆ ರೂಲುಹಾಕಿಸಬೇಕು. ಅಥವಾ ಕಾಗದವನ್ನು ಮಡಿಸುವುದರಿಂದಲೂ ಇಂತಹ ಮನೆಗಳು ಏರ್ಪಡುವುವು. ಉಪಾಧ್ಯಾಯರೂ ಇಂತಹ ನಕ್ಷೆಯೊಂದನ್ನು ಸಿದ್ಧಪಡಿಸಿಕೊಳ್ಳಬೇಕು. ಚೌಕವಾದ ಮನೆಗಳುಳ್ಳ ಕಾಗದದಲ್ಲಿ ಅಚ್ಚುಹಾಕಿರುವ ನಕ್ಷೆಯನ್ನು ಒದಗಿಸುವುದು ಸಾಧ್ಯವಾದರೆ ಈ ಶ್ರಮವು ತಪ್ಪುವುದು, ನಕ್ಷೆಯು ಕಾಗದಲ್ಲಿರುವಂತೆ ಮತ್ತೊಂದು ಕಾಗದಕ್ಕೆ ರೂಲುಹಾಕಿಸಬೇಕು. ಈ ಕಾಗದದ ಅಷ್ಟಾಗುವ ಮನೆಗಳು ನಕ್ಷೆಯ ಕಾಗದದಲ್ಲಿರುವ ಮನೆಗಳಷ್ಟೇ ಪ್ರಮಾಣವುಳ್ಳವುಗಳಾಗಿರಬೇಕೆಂಬ ಅವಶ್ಯಕವಿಲ್ಲ. ಉಪಾಧ್ಯಾಯರು ಕರೀಹಲಗೆಯಮೇಲೆ ಹೀಗೆ ರೂಲುಹಾಕಿ ಮನೆಗಳನ್ನು ಮಾಡಿಕೊಳ್ಳಬೇಕು. ಆಮೇಲೆ ಇವರು ತಮ್ಮಲ್ಲಿರುವ ಆಕೃತಿಯನ್ನು ನೋಡಿಕೊಂಡು ಒಂದೊಂದು ಮನೆಯಲ್ಲಿರುವ ಆಕೃತಿಯನ್ನು ಕ್ರಮ ಕ್ರಮವಾಗಿ ಹಲಿಗೆಯಲ್ಲಿ ಬರಯುತ ಬರಬೇಕು. ಈ ಕಾಲದಲ್ಲಿ ಬಾಲಕರು ತಮ್ಮಲ್ಲಿರುವ ಆಕೃತಿಯನ್ನೂ, ಉಪಾಧ್ಯಾಯರು ಹಲಿಗೆಯಮೇಲೆ ಬರೆಯುತಿರುವ ಆಕೃತಿಯನ್ನೂ ನೋಡಿಕೊಂಡು ತಾವು ರೂಲುಹಾಕಿ ಇಟ್ಟುಕೊಂಡಿರುವ ಕಾಗದದಲ್ಲಿ ಆಯಾಯ ಮನೆಯಲ್ಲಿರಬೇಕಾದ ಆಕೃತಿಯನ್ನು ಆಯಾಯ ಮನೆಯಲ್ಲಿ ಕ್ರಮಕ್ರಮವಾಗಿ ಬರೆಯುತ ಬರಬೇಕು. ಒಂದೆರಡು ದಿವಸ ಬಾಲಕರು ತಮ್ಮಲ್ಲಿರುವ ಆಕೃತಿಯನ್ನು ನೋಡಿಕೊಂಡು ಬರೆದರೆ ಆಮೇಲೆ ಅದನ್ನು ನೋಡದೆಯೆ ಬರೆಯುವ ಶಕ್ತಿಯುಂಟಾಗುವುದು.

ನಕ್ಷೆ ಬರೆಸುವುದಕ್ಕೆ ಮೇಲೆ ವಿವರಿಸಿರುವ ಮಾರ್ಗವಲ್ಲದೆ ಮತ್ತೊಂದು ಮಾರ್ಗವಿರುವುದು. ಒಂದೊಂದು ದೇಶದ ನಕ್ಷೆ ಬರೆಸುವುದಕ್ಕೂ ರೇಖಾಗಣಿತದ ಒಂದೊಂದು ಆಕೃತಿಯನ್ನು ಆಧಾರವಾಗಿ ಇಟ್ಟುಕೊಳ್ಳಬಹುದು. ಆದರೆ ಕೆಲವು ವೇಳೆ ಒಂದು ನಕ್ಷೆಗೆ ಎರಡುಮೂರು ಆಕೃತಿಗಳ ಸಹಾಯವು ಬೇಕಾಗುವುದು. ತ್ರಿಭುಜ, ಸಮಚತುರ್ಭುಜ, ಆಯ್ತ, ವಿಷಮಚತುರ್ಭುಜ, ಈ ವಿಧವಾದ ಆಕೃತಿಗಳ

ಸಹಾಯದಿಂದ ಅನೇಕ ದೇಶಗಳ ನಕ್ಷೆಯನ್ನು ಸುಲಭವಾಗಿ ಬರೆಸಬಹುದು. ನಿದರ್ಶನವಾಗಿ ಇಂಗ್ಲೆಂಡ್ ದೇಶದ ನಕ್ಷೆಯನ್ನು ಒಂದು ತ್ರಿಭುಜದ ಸಹಾಯದಿಂದ ಬರೆಸಬಹುದು. ಫ್ರಾನ್ಸ್ ದೇಶದ ನಕ್ಷೆಯನ್ನು ಸಮಚತುರ್ಭುಜ ಮತ್ತು ತ್ರಿಭುಜ ಇವುಗಳ ಸಹಾಯದಿಂದ ಬರೆಸಬಹುದು.

ಈಯೆರಡು ಮಾರ್ಗಗಳಲ್ಲಿ ಯಾವ ಮಾರ್ಗವನ್ನು ಕ್ರಮವಾಗಿ ಅನುಸರಿಸಿದರೂ ನಕ್ಷೆಬರೆಯುವುದನ್ನು ಸುಲಭವಾಗಿ ಕಲಿಸಬಹುದು. ಯಾವಕ್ರಮದಲ್ಲೇ ಆಗಲಿ ಮೊದಲು ಸ್ವಲ್ಪ ಶ್ರಮವು ತೋರಬಹುದು, ಒಂದೆರಡು ನಕ್ಷೆಗಳನ್ನು ಬರೆಸಿದತರುವಾಯ ಬರೆಯುವುದು ಅಭ್ಯಾಸವಾಗಿ ಕೆಲಸವು ಸುಲಭವಾಗುವುದು.

ಅಕೃತಿಗಳನ್ನು ಬರೆದ ತರುವಾಯ ದೇಶಕ್ಕೆ ಸಂಬಂಧಪಟ್ಟ ಮುಖ್ಯಾಂಶಗಳನ್ನು ಅದರಲ್ಲಿ ಗುರ್ತುಮಾಡಿಸಬೇಕು. ಒಂದುದಿವಸ ದೇಶದ ಪರ್ವತಗಳು, ನದಿಗಳು ಇವುಗಳನ್ನು ಗುರ್ತುಮಾಡಿಸಬಹುದು. ಮತ್ತೊಂದುದಿವಸ ದೇಶದ ತೀರಪಟ್ಟಣಗಳನ್ನು ಗುರ್ತುಮಾಡಿಸಬಹುದು. ಇನ್ನೊಂದು ದಿವಸ ದೇಶದ ಭಾಗಗಳನ್ನೂ ಆ ಭಾಗಗಳಲ್ಲಿರುವ ಮುಖ್ಯಪಟ್ಟಣಗಳನ್ನೂ ಗುರ್ತುಮಾಡಿಸಬಹುದು. ಈರೀತಿಯಲ್ಲಿ ಗುರ್ತು ಮಾಡಿಸುವುದರಿಂದ ದೇಶದ ಪರ್ವತ, ನದಿ ಮುಂತಾದವುಗಳ ಹೆಸರುಗಳೂ ಅವುಗಳ ಸ್ಥಾನಗಳೂ ಬಾಲಕರ ಮನಸ್ಸಿನಲ್ಲಿ ಸ್ಥಿರಪಡುವುವು. ಇಂತಹ ಹೆಸರುಗಳನ್ನು ಗುರ್ತು ಮಾಡುವಾಗ ಬಾಲಕರು ಅಚ್ಚುಹಾಕಿರುವ ಭೂಪಠವನ್ನು ಪಕ್ಕದಲ್ಲಿಟ್ಟುಕೊಂಡಿರಬೇಕು. M. V.

ವ್ಯವಸಾಯ ಮಾಡುವುದರಲ್ಲಿ ಪರಸ್ಪರ ಸಹಾಯ

ಇಂಡಿಯಾ ದೇಶದ ಹೀನಸ್ಥಿತಿಯು ಪರಿಹಾರವಾಗಬೇಕಾದರೆ ವ್ಯವಸಾಯದಲ್ಲಿರತಕ್ಕ ನ್ಯೂನತೆಗಳು ಪರಿಹಾರವಾಗಬೇಕು. ರಾಜಕೀಯ ವಿಷಯಗಳಲ್ಲಿರತಕ್ಕ ಶ್ರದ್ಧೆಯು ವ್ಯವಸಾಯದ ವಿಷಯದಲ್ಲಿ ಇಲ್ಲದೇ ಇರತಕ್ಕದ್ದನ್ನೂ ನೋಡಿದರೆ ಬಹಳ ವ್ಯಸನವಾಗುತ್ತಿದೆ. ವ್ಯವಸಾಯದಿಂದ ಜೀವಿಸತಕ್ಕವರಿಗೆ ಬೇಕಾದುದು ಸಮಾಧಾನ. ಇದರ ಜತೆಗೆ ಈತಿಬಾಧೆಗಳ ನಿವಾರಣೆಯೂ ಅವಶ್ಯಕವಾದುದು

ಅನ್ನ ವಸ್ತ್ರಗಳಿಗೆ ಬೇಕಾದಷ್ಟು ಸಂಪಾದನೆಯಾಗಿ ಆ ಸಂಪಾದನೆಗೆ ಎಷ್ಟು ಕಾಲವು ಅವಶ್ಯಕವೋ ಅಷ್ಟು ಕಾಲವು ವಿನಿಯೋಗಿಸಲ್ಪಟ್ಟಮೇಲೆ ಕಾಲವೇನಾದರೂ ಉಳಿದಿದ್ದರೆ ಆಕಾಲವನ್ನು ಇತರ ವಿಷಯವಳಲ್ಲಿ ವಿನಿಯೋಗಿಸಬಹುದೆಂದು ಕೆಲವರು ತಾತ್ಪರ್ಯ ಪಡುವರು. ರಾಜಕೀಯ ವಿಷಯಗಳಲ್ಲಿ ಪ್ರವರ್ತಿಸುವುದರಿಂದ ಪ್ರಯೋಜನವಿಲ್ಲವೆಂದು ನಾವು ಹೇಳುವುದಿಲ್ಲ. ಆದರೆ ಈ ಕೆಲಸಗಳನ್ನು ವಿಶೇಷ ಉಪಪನ್ನರಾದವರಿಗೆ ಬಿಟ್ಟು ಸಾಮಾನ್ಯವಾಗಿ ಜನಗಳೆಲ್ಲರೂ ಒಂದೊಂದು ಗುಂಪಾಗಿ ಐಕಮತ್ಯದಿಂದ ವ್ಯವಸಾಯುಕ್ಕೆ ಉಪಯುಕ್ತವಾದ ಕೈಗಾರಿಕೆಗಳಲ್ಲಿ ವಿರಾಮ ಕಾಲದಲ್ಲಿ ಮೆಹನತ್ತು ಮಾಡಿದರೆ, ವ್ಯವಸಾಯದಲ್ಲಿ ಅಗತಕ್ಕ ಉತ್ಪತ್ತಿಯು ಜೊತೆಗೆ ಹೆಚ್ಚಾಗಿ ದ್ರವ್ಯವನ್ನು ಅರ್ಜಿಸಬಹುದು. ಅದರಿಂದ ನಿರೀಕ್ಷಣೆ ಇಲ್ಲದೆ ಉಂಟಾಗತಕ್ಕ ಹೆಚ್ಚು ಖರ್ಚುಗಳಿಗೆ ಅನುಕೂಲ ಮಾಡಿಕೊಂಡಂತಾಗುವುದು. ವ್ಯವಸಾಯುವು ಎಷ್ಟು ಲಾಭಕರವಾಗಿ ಮಾಡಲ್ಪಡಬಹುದೋ ಅಷ್ಟು ಲಾಭಕರವಾಗಿ ನಮ್ಮ ದೇಶದಲ್ಲಿರುವುದಿಲ್ಲ. ವ್ಯವಸಾಯುವು ವೃದ್ಧಿಗೆ ಬರಬೇಕಾದರೆ ವ್ಯವಸಾಯುಕ್ಕೆ ಉಪಯುಕ್ತವಾದ ಕೈಗಾರಿಕೆಗಳೂ ವೃದ್ಧಿಗೆ ಬರಬೇಕು. ಒಂದು ಜಮೀನನ್ನು ಉಳುವುದಕ್ಕೆ ಸಾಮಾನ್ಯವಾದ ನೇಗಲು ಸಾಕು. ಕಲ್ಲುಭೂಮಿಯನ್ನು ಉಳಬೇಕಾದರೆ ಸ್ಟಿಲಿನೇಗಲೇ ಬೇಕು. ಅನಾದಿಯಾಗಿ ಬಂದಿರತಕ್ಕ ವ್ಯವಸಾಯ ಕ್ರಮಗಳೇ ಸರ್ವೋತ್ಕೃಷ್ಟವಾದುವುಗಳೆಂದು ತಿಳಿದುಕೊಂಡು ಅದಕ್ಕಿಂತಲೂ ಹೆಚ್ಚಾಗಿ ಬೆಳೆಯುವುದಕ್ಕೆ ಸಾಧಕವಾದ ಉಪಾಯಗಳೇ ಇಲ್ಲವೆಂದು ತಿಳಿದುಕ್ಕೊಳ್ಳುವುದು ತಪ್ಪು. ಬರೀಕೈಯಲ್ಲಿ ಶತ್ರುನಿಗ್ರಹ ಮಾಡಬೇಕೆಂದು ಪ್ರಯತ್ನಮಾಡತಕ್ಕವನಿಗಿಂತ, ದಂಡವನ್ನು ತೆಗೆದುಕೊಂಡು ಶತ್ರುವಿಗೆ ಅಭಿಮುಖವಾಗತಕ್ಕವನು ಹತ್ತರಷ್ಟು ಬಲವುಳ್ಳವನಾಗುವನು. ಬಂದೂಕ ಪಿರಂಗಿ ಮೊದಲಾದ ಸಹಾಯುವನ್ನು ಹೊಂದಿ ಯುದ್ಧಕ್ಕೆ ಹೋಗತಕ್ಕವನು ಇನ್ನೂ ಬಲಿಷ್ಠನಾಗುವನು. ಹಾಗೆಯೇ ಸಾಮಾನ್ಯವಾದ ವ್ಯವಸಾಯದ ಸಲಕರಣಗಳಿಂದ ವ್ಯವಸಾಯಮಾಡತಕ್ಕವರಿಗಿಂತಲೂ ಶಾಸ್ತ್ರೋಕ್ತವಾದ ಸಲಕರಣಗಳಿಂದ ವ್ಯವಸಾಯ ಮಾಡತಕ್ಕವರು ಹೆಚ್ಚು ಉತ್ಪತ್ತಿಯನ್ನು ಮಾಡುವರು. ಪ್ರತಿಯೊಂದು ಪೈರಿಗೂ ಇಂಥಾ ಗೊಬ್ಬರವನ್ನು ಹಾಕಬೇಕೆಂದು ಶಾಸ್ತ್ರವಿಧಿ ಇರುವುದು. ಅಗತೆ ಮೊದಲಾದವುಗಳನ್ನು ಯಾವರೀತಿಯಲ್ಲಿ ಮಾಡಬೇಕೊ ಅದಕ್ಕೆ ತಕ್ಕ ನಿಯಮಗಳಿರುವುವು. ಯಾವ ವಿಧವಾದ ಆಯುಧಗಳನ್ನು ಉಪಯೋಗಿಸಿದರೆ ಕೆಲಸವು ಚೆನ್ನಾಗಿ ನಡೆಯುವುದೋ ಅಂಥಾ

ಆಯುಧಗಳಿರುವುವು. ಬೀಜಗಳು ಯಾವರೀತಿಯಲ್ಲಿರಬೇಕೋ ಅವುಗಳಿಗೆ ಯಾವ ವಿಧವಾದ ದೋಹದ ಕ್ರಮಗಳನ್ನು ನಡಿಸಬೇಕೊ ಅವುಗಳ ವಿಷಯದಲ್ಲಿಯೂ ವಿಧಿ ಇರುವುದು. ಎಷ್ಟು ಆಳವಾಗಿ ಉತ್ತರೆ ಒಂದೆರಡು ಮಳೆಗಳಾದಾಗ್ಯೂ ಆದರಲ್ಲಿ ನೀರು ವಿಶೇಷವಾಗಿ ನಿಂತು ಪೈರು ಒಣಗದೆ ಇರುವುದಕ್ಕೆ ಅವಕಾಶವಾಗುವುದೋ ಅವುಗಳ ವಿಷಯದಲ್ಲಿಯೂ ನಿಯಮಗಳಿರುವುವು. ಯಾವಯಾವ ಕಾಲಗಳಲ್ಲಿ ವ್ಯವಸಾಯ ಉಪಾಯಗಳನ್ನು ಮಾಡಬೇಕೊ ಅವುಗಳಿಗೂ ವಿಧಿಯು ಇರುವುದು. ಇವುಗಳನ್ನೆಲ್ಲಾ ಕ್ರಮವಾಗಿ ಜರಗಿಸಬೇಕಾದರೆ ಪರಸ್ಪರ ಸಹಾಯದ ಸಂಘಗಳನ್ನು ಮಾಡಿಕೊಂಡು ದ್ರವ್ಯವನ್ನು ಹೇಗೆ ಒದಗಿಸಿಕೊಳ್ಳಬೇಕೋ ಅದಕ್ಕೂ ಉಪಾಯಗಳಿರುವುವು. ಇವುಗಳನ್ನೆಲ್ಲಾ ವ್ಯವಸಾಯ ಮಾಡತಕ್ಕವರು ಸಮಗ್ರವಾಗಿ ತಿಳಿದುಕೊಂಡು ದವಸ ಧಾನ್ಯಗಳನ್ನು ಬೆಳೆಯಬೇಕು; ವಿಶೇಷ ದವಸ ಧಾನ್ಯಗಳನ್ನು ಬೆಳೆದಮಾತ್ರದಿಂದಲೇ ಇಷ್ಟಾರ್ಥಗಳೆಲ್ಲಾ ಚರಿತಾರ್ಥವಾಗುವುದಿಲ್ಲ. ಬೆಳೆದ ದವಸದಲ್ಲಿ ರೈತನಿಗೆ ಜೀವನವಾಗಬೇಕು. ಕಂದಾಯವು ಕಳೆಯಬೇಕು. ಬಟ್ಟೆ ಬರೆಗಳಾಗಬೇಕು. ಹವ್ಯಕವ್ಯಗಳೇ ಮೊದಲಾದವುಗಳೆಲ್ಲಾ ನಡಿಯಬೇಕು. ಬೆಳೆದ ದವಸಗಳ ಜೊತೆಗೆ ಜೀವನಕ್ಕೆ ಬೇಕಾದ ಇತರ ಸಾಮಗ್ರಿಗಳು ಬೇಕು. ಇದಲ್ಲದೆ ವ್ಯವಸಾಯಕ್ಕೂ ಇತರ ಕೆಲಸಗಳಿಗೂ ಮಾಡಿದ ಸಾಲವನ್ನು ತೀರಿಸಬೇಕು. ಇವುಗಳನ್ನೆಲ್ಲಾ ಮಾಡಿಸುವುದಕ್ಕೆ ಉತ್ಪತ್ತಿ ಮಾಡಿದ ದವಸದಲ್ಲಿ ಒಂದು ಭಾಗವು ಮಾರಲ್ಪಡಬೇಕಾಗುತ್ತದೆ. ಹೀಗೆ ಮಾರಿದ್ದರಲ್ಲಿ ಬಂದ ದ್ರವ್ಯವು ಈ ಕೆಲಸಗಳಿಗೆ ಸಾಲದೇ ಹೋಗುವುದುಂಟು. ಇದಕ್ಕೊಸ್ಕರವೇ ವ್ಯವಸಾಯದಿಂದ ಜೀವಿಸತಕ್ಕವರು ವ್ಯವಸಾಯದ ಕೆಲಸವಿಲ್ಲದಕಾಲದಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಕೈಗಾರಿಕೇ ಕೆಲಸಗಳಲ್ಲಿಯೂ ಪ್ರವೇಶವುಳ್ಳವರಾಗಿರಬೇಕು. ಈರೀತಿಯಲ್ಲಿ ಸರ್ವತೋಮುಖವಾಗಿ ಕೆಲಸಮಾಡಿ ಆರ್ಜನೆಯನ್ನು ಮಾಡಿದಹೊರ್ತು ಸುಖವಾಗಿರುವುದಕ್ಕೆ ಆಗುವುದಿಲ್ಲ. ಪ್ರಜ್ಞೆಯು ಸರ್ವತೋಮುಖವಾಗಿ ಪ್ರವೇಶಿಸಬೇಕಾದರೆ ಸ್ವಲ್ಪ ಲೋಕವ್ಯವಹಾರಜ್ಞಾನವೂ ಅವಶ್ಯಕ. ಅಂಥಾ ಲೋಕವ್ಯವಹಾರಜ್ಞಾನಕ್ಕೆ ವಿದ್ಯಾಭ್ಯಾಸವೂ ದೇಶಾಟನವೂ ಯಾವಯಾವ ದೇಶಗಳಲ್ಲಿ ಕೃಷಿ ವಾಣಿಜ್ಯ ಕೈಗಾರಿಕೆಗಳು ಹೇಗೆ ನಡೆಯುವುದೋ ಅದನ್ನು ನೋಡಿ ತಿಳಿದುಕೊಳ್ಳೋಣವೂ ಅವಶ್ಯಕವಾದುದು. ಪಾಶ್ಚಾತ್ಯರಲ್ಲಿ ಕೃಷಿ ವಾಣಿಜ್ಯ ಕೈಗಾರಿಕೆ ಮೊದಲಾದವುಗಳೆಲ್ಲಾ ಕ್ರಮವಾಗಿ ಶಿಕ್ಷಿಸಲ್ಪಡುತ್ತವೆ. ಇವುಗಳಿಗೆ ಪೂರ್ವಭಾವಿಯಾಗಿ ಸಾಮಾ

ನ್ಯ ವಿದ್ಯಾಭ್ಯಾಸವು ಮಾಡಿಸಲ್ಪಡುತ್ತದೆ. ಈ ವಿದ್ಯಾಭ್ಯಾಸ ಗುಣದಿಂದ ಅವರು ಕೃಷಿ ವಾಣಿಜ್ಯಾದಿಗಳಲ್ಲಿಯೂ ಕೂಡ ದಕ್ಷರಾಗುವುದಲ್ಲದೆ ಧನಿಕರಾಗುತ್ತಾರೆ. ನಮ್ಮಲ್ಲಿ ಎಲ್ಲಾ ವೃತ್ತಿಗಳಿಗೂ ವಿದ್ಯಾಭ್ಯಾಸವು ಅವಶ್ಯಕವೆಂಬ ಪ್ರತ್ಯಯವೇ ಉಂಟಾಗಿಲ್ಲ. ಇದರಿಂದಲೇ ನಮಗೆ ಬುದ್ಧಿಯು ಎಲ್ಲಾ ದಿಕ್ಕುಗಳಲ್ಲಿಯೂ ಓಡುವುದಿಲ್ಲ. ಯಾವ ಕೆಲಸಮಾಡಿದರೂ ಆ ಕೆಲಸಗಳೆಲ್ಲಾ ಕುಂಠಿತವಾಗಿಯೇ ಇರುವುವು. ಈ ವಿಷಯವನ್ನು ನಮ್ಮ ದೇಶೀಯರು ಚೆನ್ನಾಗಿ ಪರ್ಯಾಲೋಚಿಸಬೇಕು.

॥ ವನ್ನುಪಾಠ ॥

——:o:——

ಭತ್ತ

ಬೇಕಾದ ಸಾಮಗ್ರಿ:—ಭತ್ತದತೆನೆ, ಕಾಳು, ಅಕ್ಕಿ, ತಾಳು, ಹುಲ್ಲು;

1. ವಿವರಣೆ:—ಹೆಸರು:—ನೆಲ್ಲು (ಭತ್ತ.)

(1) ನಾವು ಎತರಿಂದ ಅಕ್ಕಿಯನ್ನು ಪಡೆವೆವೋ, ಅವಲಕ್ಕಿ ಅರಳು ಮುಂತಾದುವನ್ನು ಎತರಿಂದ ಮಾಡುವೆವೋ ಅದಕ್ಕೆ "ಭತ್ತ" ಎಂದು ಹೆಸರು. ಭತ್ತದ ಪೈರು ಸುಮಾರು 3-4 ಅಡಿ ಎತ್ತರ ಬೆಳೆವುದು. ಕೆಲವು ಕಡೆ 6-7 ಅಡಿ ಎತ್ತರದ ವರೆವಿಗೂ ಬೆಳೆವುದುಂಟು. ಭತ್ತದ ಪೈರು ಮೊದಲು ಹಸಿರಾಗಿದ್ದು, ಬಲಿತ ಮೇಲೆ ಹಳದಿಯ ಬಣ್ಣಕ್ಕೆ ತಿರುಗಿ, ಕಡೆಯಲ್ಲಿ ಕೆಂಪು ಮಿಶ್ರವಾದ ಬಿಳಿಯ ಬಣ್ಣಕ್ಕೆ ಬಂದು, ಕೊಯ್ಲಿಗೆ ಸಿದ್ಧವಾಗುವುದು. ತಾಳುಗಳು ಉದ್ದವಾಗಿ ಎತ್ತರಕ್ಕೆ ಬೆಳೆದು, ಗಿಣ್ಣುಗಳಿಂದ ಕೂಡಿ, ಒಳಗಡೆ ಪೊಳ್ಳಾಗಿ ನೋಟಕ್ಕೆ ರಮ್ಯವಾಗಿರುತ್ತವೆ. ಗಿಣ್ಣುಗಳ ಸುತ್ತಲೂ ಉದ್ದಕ್ಕೂ ಗರಿಗಳು ಬೆಳೆದಿರುತ್ತವೆ. ತುದಿಯಲ್ಲಿ ತೆನೆಗಳಿವೆ ಈ ತೆನೆಗಳಲ್ಲಿ ಒತ್ತಾಗಿ ಕಾಳುಗಳು ಸೇರಿವೆ. ಕಾಳು ಬಲಿತಾಗ ತೆನೆಗಳು ಬಾಗುತ್ತವೆ. ಈ ಕಾಳುಗಳು ತೆನೆಯ ಸಂಬಂಧದಿಂದ ಸೇರಿ, ಮೊದಲು ಕಪ್ಪಾಗಿದ್ದು, ಹಾಲು ಹಿಡಿದನಂತರ ಹಸಿರು ಗಾಯಾಗಿ, ಬಲಿತಮೇಲೆ ಚಿನ್ನದ ಹೊಳಪು ತೋರುವುದು. ಕಾಳುಗಳ ತುದಿಯಿಂದ ಕೂದಿಲಿನಂತೆ ಈಚಿಗೆ ಹೊರಟಿರುತ್ತವೆ. ಇದಕ್ಕೆ ಕೆಲವರು 'ಊಗೆಂದೂ,' ಮತ್ತೆ ಕೆಲವರು 'ಊಬೆಂದೂ' ಕರೆವರು.

(2) ಬಣ್ಣ :—ಹಳದಿಯಾಗಿರುತ್ತದೆ. ಕೆಲವು ಕಪ್ಪು. ಕೆಲವು ಬಿಳಪು. ಕೆಲವು ಕೆಂಪು. ಮತ್ತೆ ಕೆಲವು ಕೆಂಪು ಹಳದಿ ಮಿಶ್ರವಾಗಿಯೂ ಇರುತ್ತದೆ.

(3) ಜಾತಿ:—ದೊಡ್ಡಭತ್ತ (ದೊಡ್ಡಬೈರ), ಚಿಕ್ಕಭತ್ತ (ಚಿಕ್ಕಬೈರ) ಕಡ್ಡಿಸಣ್ಣ, ಕೆಂಬೂತಿ, ಮಲ್ಲಿಗೆರಾಜ, ಪುಟ್ಟರಾಜ, ಸರಸಣಿಸಣ್ಣ, ಏಲಕ್ಕಿಸಣ್ಣ, ಮೊದಲಾದ ಅನೇಕ ಜಾತಿಗಳುಂಟು. ಇವುಗಳಲ್ಲಿ ಕೆಲವು ಬಿತ್ತಿದ 6 ತಿಂಗಳಿಗೂ, ಕೆಲವು 5 ತಿಂಗಳಿಗೂ, ಇನ್ನು ಕೆಲವು 3 ತಿಂಗಳಿಗೂ, ಇನ್ನೂ ಕೆಲವು 2½ ತಿಂಗಳಿಗೂ ಕೊಯ್ಯುವುದಕ್ಕೆ ಸಿದ್ಧವಾಗುತ್ತವೆ. ಭತ್ತದ ಮೇಲಿನ ಹೊಟ್ಟನ್ನು ತೆಗೆದರೆ ಅಕ್ಕಿಯಾಗುತ್ತದೆ. ಅಕ್ಕಿಯಿಲ್ಲದ ನೆಲ್ಲಿಗೆ ಜಳ್ಳೆನ್ನುವರು. ಹೊಟ್ಟು ಎಂತಹ ಬಣ್ಣವಾಗಿದ್ದರೂ ಅಕ್ಕಿಯು ಪ್ರಾಯಶಃ ಬೆಳ್ಳಗಿರುತ್ತದೆ. ಅಕ್ಕಿಯು ಮೇಲಣ ಕೆಂಪು ಧಾತುವಿಗೆ ತವುಡೆನ್ನುವರು. ಇದಿರುವ ಅಕ್ಕಿಯನ್ನು 'ಕೇಸಕ್ಕಿ' ಎನ್ನುವರು. ಭತ್ತದಮೇಲಿನ ಹೊಟ್ಟನ್ನು ತೆಗೆಯುವದಕ್ಕೋಸ್ಕರ ಒನಕೆಗಳಿಂದಲೂ, ಏತಗಳಿಂದಲೂ ಕುಟ್ಟುತ್ತಾರೆ. ಯಂತ್ರಗಳಿಂದಲೂ ಬಿಡಿಸುತ್ತಾರೆ. ಅಕ್ಕಿಯು ಉದ್ದವಾಗಿಯೂ, 2 ಕಡೆ ತುದಿಗಳು ಚೂಪಾಗಿಯೂ, ಗಟ್ಟಿಯಾಗಿಯೂ ಇರುತ್ತದೆ. ಭತ್ತವನ್ನು ಬೇಯಿಸಿ ಅದನ್ನು ಒಣಗಿಸಿ, ಕುಟ್ಟಿದರೆ 'ಕುಸುಬಲಕ್ಕಿ' ಯಾಗುವುದು. ಈತೆರನಾಗಿ ಮಾಡದ ಅಕ್ಕಿಯನ್ನು 'ಹಸಿಯಕ್ಕಿ' ಎನ್ನುವರು.

೫. ವ್ಯವಸಾಯಕ್ರಮ :—ಭತ್ತದ ವ್ಯವಸಾಯಕ್ಕೆ ಶಾಕವೂ ನೀರು ಅತ್ಯವಶ್ಯಕವು. ಭತ್ತದ ಪೈರುಗಳು ಶೀತವಲಯದ ದೇಶಗಳಲ್ಲಿ ಬೆಳೆಯುವುದಿಲ್ಲ. ಗದ್ದೆಗೆ ನೀರು ಹಾಯಿಸಿ, ಉತ್ತು ಹಸಿರೆಲೆಗಳನ್ನು ತುಳಿದು, ಅಥವಾ ಗೊಬ್ಬರ ಹಾಕಿ ಹಲವೆ ಹೊಡೆದು, ಸಮಗಟ್ಟಿ ಮೊಳೆ ಬೀಜಗಳನ್ನು ಚಲ್ಲುತ್ತಾರೆ. ಚಲ್ಲಿದ 4—6 ದಿನಗಳಮೇಲೆ ಪಯಿರು ಮೇಲಕ್ಕೇಳುತ್ತದೆ. ಅನಂತರ ನೀರುಹಾಯಿಸುತ್ತಲಿರಬೇಕು. ಸುಮಾರು ಒಂದು ತಿಂಗಳಿನ ಪೈರುಗಳನ್ನು ನಾಟಿಹಾಕಲು ತೆಗೆಯುತ್ತಾರೆ. ಇದಕ್ಕೆ ಒಟ್ಟಲುಹಾಕುವುದೆನ್ನುವರು.

(a) ಎಳೆ ಪಯಿರನ್ನು ಕಿತ್ತು ಬೇರನ್ನು ತೊಳೆದು, ಮೊದಲೆ ಸಿದ್ಧಪಡಿಸಿರುವ ಗದ್ದೆಗಳಲ್ಲಿ 10 ಅಂಗುಲಕ್ಕೆ 1 ಪಯಿರಿನಂತೆ ನಾಟಿಹಾಕುವರು. ಇದಕ್ಕೆ ಯಾವಾವಾಗಲೂ 4 ಅಂಗುಲಕ್ಕೆ ಕಮ್ಮಿ ಇಲ್ಲದಂತೆ ನೀರಿರಬೇಕು. ಆಗಾಗ ಕಳೆಯನ್ನು ಹೋಗಲಾಡಿಸಬೇಕು. ಮತ ಹೊಯ್ಯುವುದೂ, ಹಿಂಡಿಯನ್ನು ಹಾಕುವುದೂ. ಒಂದು ಗದ್ದೆಯ ನೀರು ಮತ್ತೊಂದು ಗದ್ದೆಗೆ ಹೋಗದಂತೆ ಸೋಡಿಕೊಳ್ಳುವುದೂ,

ಬಹು ಒಳ್ಳೆಯದು. ಆಯಾ ಜಾತಿಯ ಭತ್ತದ ಪಯಿರುಗಳು ಆಯಾ ಕ್ಲಿಪ್ತಕಾಲಕ್ಕೆ ಕೊಯ್ಲಿಗೆ ಸಿದ್ಧವಾಗುವವು. ಈರೀತಿಯಿಂದ ಆಗುವ ಭತ್ತಕ್ಕೆ ನಾಟುಭತ್ತವೆನ್ನುವರು,

(b) ನಾಟಿಹಾಕದೆ, ನೆಲ್ಲನ್ನು ನೀರಿನಲ್ಲಿ ಹಾಕಿದ್ದು ಬಳಿಕ ನೀರನ್ನು ಬಸಿದು, ಭತ್ತವನ್ನು ಮಂಕರಿಗಳಲ್ಲಿ ಹಾಕಿ, ಅದರಮೇಲೆ ಹಸಿಸೊಪ್ಪುಗಳನ್ನು ಮುಚ್ಚಿ ಭಾರವನ್ನು ಹೇರುತ್ತಾ ಬಿಸಿಲಿನಲ್ಲಿಟ್ಟಿದ್ದರೆ 4—6 ದಿನಗಳಲ್ಲಿ ಮೊಳೆ ಒರುವುದು. ಈ ಮೊಳೆಯನ್ನು ಹಸನು ಮಾಡಿದ ಗದ್ದೆಗಳಲ್ಲಿ ಚೆಲ್ಲುತ್ತಾರೆ. ಈ ವಿಧದಿಂದ ಬೆಳೆವ ಭತ್ತಕ್ಕೆ ಮೊಳೆ ಭತ್ತವೆನ್ನುವರು.

(c) ಮತ್ತೆ ಕೆಲವರು ಹಸನು ಮಾಡಿದ ಹೊಲಗಳಲ್ಲಿಯೂ, ಜೌಗುಪ್ರದೇಶಗಳಲ್ಲಿಯೂ, ಕೈಯಿಂದಲೇ ಭತ್ತವನ್ನು ಚಲ್ಲಿ, ಪೈರುಮಾಡುತ್ತಾರೆ. ಇದಕ್ಕೆ ಬರ ಭತ್ತವೆನ್ನುವರು.

ಕೊಯ್ಲಿಗೆ ಬಂದಾಗ, 15—20 ದಿನಗಳ ಮುಂದಾಗಿಯೇ ಭತ್ತದ ಪೈರುಗಳಿಗೆ ನೀರನ್ನು ಹಾಯಿಸದೇ ನಿಲ್ಲಿಸಿಬಿಡುತ್ತಾರೆ, ತೇವವು ಸಾಧಾರಣವಾಗಿ ಇಂಗಿದ ಬಳಿಕ ಕೊಯ್ಯುವದಕ್ಕೆ ಮೊದಲು ಮಾಡುತ್ತಾರೆ. ಕೊಯ್ದು ಹೊರೆಗಟ್ಟಿ, ಭಂಡಿಯ ಮೂಲಕವಾಗಿಯೋ ಹೊತ್ತುಕೊಂಡಾದರೋ ಕಣಗಳಿಗೆ ತಂದು ಮೆದೆ ಹಾಕುತ್ತಾರೆ. ಬಳಿಕ ಕಟ್ಟುಕಟ್ಟುಗಳಾಗಿ ಬಡಿವುದರಿಂದಲೋ, ದನಗಳಿಂದ ತುಳಿಸುವುದರಿಂದಲೋ, ಭತ್ತವನ್ನೂ ಹುಲ್ಲನ್ನೂ ಬೇರೆ ಬೇರೆ ಮಾಡುತ್ತಾರೆ. ಕೆಲವುಕಡೆಯ ರೈತರು ಮೆದೆ ಹಾಕದೆ ಆಗಲೇ ಬಡಿದು ಭತ್ತವನ್ನು ಮಾಡುವರು. ಇನ್ನೂ ಕೆಲವರು ಹಾಗೆ ಮಾಡಿದ ಬಳಿಕ ಆ ಹುಲ್ಲನ್ನು ದನಗಳಿಂದ ತುಳಿಸುತ್ತಾರೆ. ಭತ್ತವನ್ನು ತೂರುವುದರಿಂದ ಜಳ್ಳು ಗಾಳಿಗೆ ಹೋಗಿ ಗಟ್ಟಿಯಾದ ನೆಲ್ಲು ಉಳಿಯುತ್ತದೆ.

3. ಉಪಯೋಗ:—(1) ಅಕ್ಕಿಯು ನಮ್ಮ ಮುಖ್ಯವಾದ ಆಹಾರವು. (2) ಇದರಿಂದ ಅನೇಕ ಭಕ್ಷ್ಯಗಳನ್ನು ಮಾಡುವೆವು. (3) ಅಕ್ಕಿಯನ್ನು ಮರಳಿನೊಂದಿಗೆ ಬೆರಸಿ ಹುರಿದರೆ ಪುರಿಯಾಗುತ್ತದೆ. (4) ಅರಿಸಿನದೊಡನೆ ಸೇರಿಸಿದರೆ ಅಕ್ಷತೆಯಾಗುವುದು. (5) ಇದರ ನುಚ್ಚಿನಿಂದ ಉಪ್ಪಿಟ್ಟನ್ನೂ, ಉಸಲಿಯನ್ನೂ ಮಾಡುತ್ತಾರೆ. (6) ಬೀಸಿದ ಹಿಟ್ಟಿನಿಂದ ರೊಟ್ಟಿ, ದೋಸೆ, ಪೋಟ್ಲೀಸು ಮೊದಲಾದುವುಗಳನ್ನು ಮಾಡುತ್ತಾರೆ. (7) ಹೊಟ್ಟನ್ನು ಒಲೆಗೂ, ಬೆರಣಿಗಳಿಗೂ ಉಪಯೋಗಿಸುತ್ತಾರೆ. (8) ಭತ್ತದಿಂದ ಸಾರಾಯವನ್ನು ಮಾಡುವರು. (9) ಅಕ್ಕಿ

ಯು ತವುಡನ್ನು ಕೋಳಿಗಳಿಗೂ, ಹಂದಿಗಳಿಗೂ, ದನಗಳು ಕುಡಿವ ನೀರಿಗೂ ಉಪ ಯೋಗಿಸುತ್ತಾರೆ. (10) ಹುಲ್ಲು ದನಗಳಿಗೆ ಆಹಾರವಾಗಿರುವುದು. (12) ಕೆಲ ವರು ಈ ಹುಲ್ಲಿನಿಂದ ಟೋಪಿಗಳನ್ನೂ, ಕಾಗದಗಳನ್ನೂ, ಮನೆಗಳಲ್ಲಿನ ಸುರಳಿಗಳ ನ್ನೂ ಮಾಡುವರು. ಹುಲ್ಲನ್ನು ಮನೆಗಳಿಗೆ ಹೊದೆಸುತ್ತಾರೆ. ಅಕ್ಕಿಯನ್ನು ಆಹಾರ ವಾಗಿ ಉಪಯೋಗಿಸುವ ಜನಸಂಖ್ಯೆಯು ಬಹಳ ಹೆಚ್ಚು.

ಭತ್ತಕ್ಕೆ ಇಂಡಿಯಾದೇಶವೂ, ಉತ್ತರ ಅಮೆರಿಕಾಖಂಡವೂ ಜನ್ಮಭೂಮಿ ಎಂದು ವಸ್ತುಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವರು. ಉಪಾಧ್ಯಾಯರು ಮೇಲಿನ ವಿಷಯವನ್ನು ಬಾಲಕರಿಗೆ ಬೋಧಿಸುವಾಗ ಪ್ರದರ್ಶನಕ್ಕಾಗಿ ಸಾಮಾನ್ಯವಾಗಿ ವ ಸ್ತುಗಳನ್ನು ಇಟ್ಟುಕೊಂಡು ಪಾಠವನ್ನು ವಿವರಿಸುವುದು ಒಳ್ಳೆಯದು. ತಾವು ಬೋ ಧಿಸಿದ ವಿಷಯಾನುವಾದಕ್ಕೆ ಸರಿಯಾದ ಸುಲಭಮಾತುಗಳಿಂದ ಪ್ರಶ್ನಿಸಿ, ಅವರಿಂದ ಉತ್ತರಗಳನ್ನು ಹೊಂದುವರೆಂದು ನಂಬಿದೇನೆ.

ಭತ್ತ = ನೆಲ್ಲು = ಶಾಲಿ, ಇವು ಸಮಾನಪದಗಳು.

ಭತ್ತದ ಪಯಿರುಗಳಿಗೂ ಕಬ್ಬು ಜೋಳದ ಪೈರುಗಳಿಗೂ ಇರುವ ಸಾಮ್ಯವೈಷ ಮ್ಯಗಳನ್ನು ಹುಡುಗರಿಂದಲೇ ಹೇಳಿಸುವುದು ಉಪಾಧ್ಯಾಯರ ಮುಖ್ಯ ಕರ್ತವ್ಯವು.

ಎಂ. ಎಸ್. ಶ್ರೀನಿವಾಸೈಯ್ಯಂಗಾರ್,
ಸಿದ್ಧಾಂತಿ ಅ॥ ಮಾ॥ ಅಂ. ವ. ಸ್ಕೂಲ್ ಮಾಲೂರು.

ಭೂಗೋಳಶಾಸ್ತ್ರ.

(ಳಗಿನೇ ಪುಟದ ಶೇಷ.)

1. ನೀರೆಲ್ಲವೂ ಒಂದು ದೊಡ್ಡರಾಶಿಯಾಗಿ ಸಮುದ್ರವಾಗಿರುತ್ತದೆಂದು ಹಿಂದೆ ಹೇಳಲ್ಪಟ್ಟಿತು? ಈ ಸಮುದ್ರಗಳು ಕೆಲವು ಭೂಭಾಗಗಳನ್ನು ದೊಡ್ಡವಾದ ಭೂಭಾಗಗಳ ದೆಸೆಯಿಂದ ಪ್ರತ್ಯೇಕಿಸಿ, ದ್ವೀಪಗಳನ್ನುಂಟುಮಾಡುವುವು. ಉದಾ ಹರಣೆ. ಬ್ರಿಟೆ.

2. ವಿಷುವದ್ರೇಖೆಗೆ (ನಾಡೀ ಮಂಡಲರೇಖೆ) ಉತ್ತರದಲ್ಲಿ ಭೂಭಾಗವು ಅಧಿಕವಾಗಿಯೂ ದಕ್ಷಿಣದಲ್ಲಿ ಜಲಭಾಗವು ಅಧಿಕವಾಗಿಯೂ ಇರುವುದನ್ನು ನಾವು

ಭೂಗೋಳ ಯಂತ್ರದಲ್ಲಿ ನೋಡಬಹುದು. ಲಂಡನ್ ಮತ್ತು ನ್ಯೂಸಿಲಾಂಡ್ ಇರುವ ಸ್ಥಳಗಳನ್ನು ದೃಷ್ಟಿಗೆ ಸರಿಯಾಗಿ ತಿರಿಗಿಸುತ್ತಾ ಬಂದರೆ ಕ್ರಮವಾಗಿ ಭೂ ಭಾಗಜಲಭಾಗಗಳೇ ವಿಶೇಷವಾಗಿ ಕಾಣುವುವು. ಆದುದರಿಂದ ಲಂಡನ್ ಪಟ್ಟಣವು ಭೂಮ್ಯರ್ಧಗೋಳಕ್ಕೆ ಮಧ್ಯದಲ್ಲಿರುವುದರಿಂದ ಬ್ರಿಟನ್ನಿನ ವ್ಯಾಪಾರವನ್ನು ಹೆಚ್ಚಿಸುತ್ತದೆ.

3. ನೀರಿನ ಭಾಗಗಳು ಬಹು ದೊಡ್ಡದಾದ ಭೂಭಾಗಗಳನ್ನು ಕಾಲಕ್ರಮೇಣ ಪ್ರತ್ಯೇಕಿಸುವುದಕ್ಕೆ ಪ್ರಯತ್ನಿಸುವುವು. ಹೀಗೆ ಪ್ರತ್ಯೇಕಿಸಲ್ಪಟ್ಟ ದೊಡ್ಡ ದೊಡ್ಡ ಭೂಭಾಗಗಳಿಗೆ ಖಂಡಗಳೆಂತಲೂ (ಉದಾ = ಆಸ್ಟ್ರೇಲ್ಯ), ಈ ಭೂಭಾಗ್ಗಳ ಮಧ್ಯದಲ್ಲಿರುವ ವಿಸ್ತಾರವಾದ ಜಲಭಾಗಕ್ಕೆ ಸಾಗರ, ಅಥವಾ ಮಹಾ ಸಮುದ್ರವೆಂತಲೂ, ವ್ಯವಹಾರ ವುಂಟು. ಗಟ್ಟಿಯಾದ ಭೂಮಿಯು ಮೇಲ್ಭಾಗದಲ್ಲಿ ಕೆಲವುಕಡೆ ದಿಣ್ಣೆಗಳಿಂದಲೂ. ಕೆಲವುಕಡೆ ಹಳ್ಳಗಳಿಂದಲೂ ಕೂಡಿರುವುದು. ವಿಶಾಲವಾದ ಇಂತಹ ಹಳ್ಳಗಳಿಗೆ ಸಮುದ್ರವೆಂದು ಹೆಸರು. (ಉದಾ—ಅರಾಬಿ ಸಮುದ್ರ) ಹೀಗೆ ಕ್ರಮಕ್ರಮವಾಗಿ ಕೊಲ್ಲಿ, ಖಾರಿ, ಜಲಸಂಧಿ, ಕಡಲ್ಕಾಲುವೆ, ಮುಂತಾದ ಹೆಸರುಗಳಿಂದ ಪ್ರಪಂಚದ ಎಲ್ಲಾ ಕಡೆಗಳಲ್ಲೂ ಆವರಿಸಿಕೊಂಡಿರುವುದು.

ನೀರಿನಿಂದ ಮೇಲೆ ಹೇಳಲ್ಪಟ್ಟಿರುವ ಕಾರ್ಯಗಳಾಗಿರುವುವಲ್ಲದೆ ಸಮುದ್ರ ಮತ್ತು ಸಾಗರಗಳ ದಡದಲ್ಲಿ ಬಿಡಿಬಿಡಿಯಾದ ಸುರುಜುಕಲ್ಲುಗಳೂ, ಮತ್ತು ನೀರಿನಲ್ಲಿ ಮುಳುಗಿರುವ ಕಲ್ಲುಗಳೂ, ಅಲೆಗಳಿಂದ ಬಡಿಯಲ್ಪಟ್ಟು ಸವೆದು ಹೋಗುತ್ತಿವೆ. ಈ ಸವೆದ ಪುಡಿಗಳು ಕ್ರಮೇಣ ಒಟ್ಟಾಗಿ ದೊಡ್ಡ ಬಂಡೆಗಳಲ್ಲಿರುವ ಮೃದುವಾದ ರಂಧ್ರಗಳಲ್ಲಿ ಸೇರುವುವು. ಸಮುದ್ರ ಪ್ರವಾಹ ಬಂದಮೇಳೆಯಲ್ಲಿ ಇವು ಅವುಗಳೊಂದಿಗೆ ಸೇರಿ ಗಿರಗಿರನೆ ತಿರುಗಿ ನಡುಗಲ್ಲುಗಳ ಕೆಲವು ಭಾಗಗಳನ್ನು ಸವೆಯಿಸಿ ಅಲ್ಲಿ ಗುಹೆಗಳನ್ನುಂಟುಮಾಡುವುವು. ಈ ಆಶ್ಚರ್ಯವನ್ನು ಸಮುದ್ರದ ಉಬ್ಬರವಿಲ್ಲದಿರುವ ಸಮಯದಲ್ಲಿ ಕಡಲಿನ ಗುಹೆಗಳನ್ನು ಹೊಕ್ಕು ನೋಡಿದರೆ ಅವುಗಳ ಪಕ್ಕಗಳೂ, ಮೇಲುಭಾಗಗಳೂ, ಸುಣುಪಾಗಿರುವುದನ್ನೂ ಸವೆದು ಗುಂಡಾಗಿ ಬಿದ್ದಿರುವ ಕಲ್ಲುಗಳನ್ನೂ ನೋಡಬಹುದು. ಮುಖ್ಯವಾಗಿ ಭೂಮಿಯಮೇಲ್ಭಾಗಕ್ಕೂ ಸಮುದ್ರತಳಕ್ಕೂ ಇರುವ ಮುಖ್ಯವಾದ ಒಂದು ವ್ಯತ್ಯಾಸವನ್ನು ನಾವು ಜ್ಞಾಪಕದಲ್ಲಿಟ್ಟಿರಬೇಕು. ಅದು ಯಾವುದೆಂದರೆ—ಭೂಮಿಯಲ್ಲಿ ಎತ್ತರವಾದ ಪ್ರದೇಶ ಮೊದಲ್ಗೊಂಡು

ಸಮುದ್ರತೀರದವರೆಗೂ ಕೆಲವು ಭಾಗಗಳು ನಾಶವಾಗುತ್ತಾ ಬರುತ್ತಿದ್ದರೆ ಸಮುದ್ರ ತಳದ ಹೊಸ ವಸ್ತಗಳು ಭರ್ತಿಯಾಗುತ್ತಲೇ ಇರುವುವು. ಇದರಿಂದ ಭೂಮಿಯು ಮೇಲ್ಭಾಗದಲ್ಲಿ ಕೆಲವು ವಸ್ತುಗಳು ಗಳಿತವಾಗುತ್ತ ಬಂದರೆ ಮತ್ತೊಂದುಕಡೆ ಹೊಸ ವಸ್ತುಗಳಿಂದ ಭರ್ತಿಯಾಗುತ್ತಲೇ ಇರುವುದು. ಮಳೆನೀರಿನಿಂದಲೂ, ಪ್ರವಾಹಗಳಿಂದಲೂ ಭೂಮಿಯಮೇಲಿನ ವಸ್ತುಗಳು ಕೊಚ್ಚಿಸಲ್ಪಡುವುದರಿಂದ ಸಮುದ್ರತಳದಲ್ಲಿ ಸೇರುವುದಕ್ಕಿಂತಲೂ, ದಡದ ಸಮೀಪದಲ್ಲಿ ಆಳವಿಲ್ಲದ ಸಮುದ್ರ ಭಾಗಗಳಲ್ಲಿ ಹೆಚ್ಚಾಗಿ ಸೇರಿ ಮರಳುತಿಟ್ಟುಗಳನ್ನೂ ನುರಜುಕಲ್ಲುಗಳ ರಾಶಿಗಳನೂ ಜಮಾಯಿಸುವುದು. ಆಳವಿರುವ ಮಧ್ಯಭಾಗದಲ್ಲಿ ಯಾವವಿಧವಾದ ಆಶ್ಚರ್ಯಗಳನ್ನು ನೋಡುವುದಕ್ಕೂ ಯತ್ನವಿಲ್ಲ. ಹಾಗೆತಿಳಿಯಬೇಕಾದರೆ ಜಲವೇಧಮಾನಗಳನ್ನು ಉಪಯೋಗಿಸಬೇಕು.

ಸಮುದ್ರಕ್ಕೆ ಸಾವಯವ ವಸ್ತುಗಳು ಬಹಳವಾಗಿ ಸೇರಿ ಅಲ್ಲಿರುವ ವಸ್ತುಗಳೊಂದಿಗೆ ಬೆರೆಯುವುವು. ಅದುದರಿಂದ ಅಲ್ಲಿ ಮಣ್ಣು, ಮರಗಳು, ಗುಳ್ಳೆಗಳು, ಹವಳಗಳು, ಗಟ್ಟಿಸ್ರಾಣಿಗಳಮೂಳೆಗಳು, ಪ್ರತಿಸಂವತ್ಸರವೂ ಜಮಾಯಿಸಲ್ಪಡುವುವು. ಶಾಂತಿಸಾಗರದಲ್ಲೂ ಹಿಂದೂಸಾಗರದಲ್ಲೂ ಹವಳದ ಹುಳುಗಳೂ ಮತ್ತು ಗುಳ್ಳೇ ಹುಳುಗಳೂ ಸಮುದ್ರ ನೀರಿನ ಸಂಬಂಧದಿಂದ ಬೊಂತೆಯಾಗಿಯೂ, ಅನೇಕ ಅಡಿಗಳ ದಪ್ಪವಾಗಿಯೂ, ಅನೇಕ ಮೈಲು ಉದ್ದವಾಗಿಯೂ ಇರುವ ಪದಾರ್ಥವನ್ನು ಹೊರಪಡಿಸುತ್ತವೆ. ಇದು ಕೊನೆಗೆ ಗಟ್ಟಿ ಕಲ್ಲುಗಳಾಗುತ್ತವೆ. ಆಸ್ಟ್ರೇಲಿಯದ ಪೂರ್ವಭಾಗದಲ್ಲಿರುವ ಗ್ರೇಟ್ ಬ್ಯಾರಿಯರ್ ರೀಫ್ ಎಂಬುದು ಮೇಲೆಹೇಳಿದರೀತಿಯಲ್ಲಿ ಆಗಿ ಸಾವಿರ ಮೈಲುಗಳ ಉದ್ದವೂ, ನೂರಾರಡಿಗಳ ದಪ್ಪವೂ ಆಗಿರುವುದು. ಈ ಜಂತುಗಳು ಬಹಳವಿದ್ದರೆ ಆಶ್ಚರ್ಯಕರವಾದ ಪ್ರವಾಳ (ಹವಳ) ದ್ವೀಪಗಳು ಸಮುದ್ರಮಧ್ಯದಲ್ಲಿ ಉತ್ಪತ್ತಿಯಾಗುವುವು. ಈ ವಿಷಯಗಳನ್ನು ವಿಶದವಾಗಿ ತಿಳಿಯಲು ಪ್ರಾಕೃತಿಕ ಭೂಗೋಳಶಾಸ್ತ್ರವನ್ನು ಓದಬೇಕು. ಹಾಗೆ ಮಾಡಿದರೆ ನೀರಿನಲ್ಲೂ ಭೂಮಿಯಲ್ಲೂ ನಡೆಯುವ ಅನೇಕ ಆತ್ಯಾಶ್ಚರ್ಯ ವಿಷಯಗಳನ್ನು ತಿಳಿದುಕೊಂಡು ಮಂದಟ್ಟು ಮಾಡಿಕೊಳ್ಳಬಹುದು.

ಎಚ್. ಸೂರ್ಯನಾರಣಪ್ಪ,

ಹೆಡ್‌ಮಾಸ್ಟರು.

ಬುಗ್ಗಿಗಳು ಮತ್ತು ಗುಪ್ತಗಾಮಿನಿಗಳಾದ ನದಿಗಳು.

ಜಲಕ್ಕೆ ಮೂಲಸ್ಥಾನವಾದುದು ಸಾಗರ. ಬಿಸಿಲಿನ ಶಕ್ತಿಯಿಂದ ಈ ಜಲವು ಆವಿಯ ಅವಸ್ಥೆಯನ್ನು ಹೊಂದಿ ಮೇಲಕ್ಕೆ ಏಳುವುದು. ಶೈತ್ಯಸಂಸರ್ಗದಿಂದ ಆಕಾಶದಲ್ಲಿ ಜಲಕಣಗಳ ಅವಸ್ಥೆಯನ್ನು ಹೊಂದಿ ಮೇಘವಾಗಿ ಪರಿಣಮಿಸುವುದು. ಮೇಘಮಂಡಲವನ್ನು ಅತಿಕ್ರಮಿಸಿ ಮೇಲಕ್ಕೆ ಹೋದ ನೀರಿನ ಆವಿಯು ಅಲ್ಲಿನ ಶೈತ್ಯದಿಂದ ಶಿಲಾವಸ್ಥೆಯನ್ನು ಹೊಂದಿ ಆಲಿಕಲ್ಲುಗಳಂತೆ ಪರಿಣಮಿಸುವುವು. ಹೀಗೆ ಅನಿಲಾವಸ್ಥೆಯನ್ನೂ ಜಲಕಣಗಳ ಅವಸ್ಥೆಯನ್ನೂ, ಶಿಲಾವಸ್ಥೆಯನ್ನೂ ಹೊಂದಿದ ಜಲವು ಪುನಃ ಮಳೆಯರೂಪವಾಗಿಯೂ, ಹಿಮದರೂಪವಾಗಿಯೂ, ಆಲಿಕಲ್ಲುಗಳ ರೂಪವಾಗಿಯೂ ಕೆಳಕ್ಕೆ ಬೀಳುವುವು. ಹೀಗೆ ಬಿದ್ದ ಜಲದಲ್ಲಿ ಒಂದು ಪಾಲು ಭೂಮಿಯಮೇಲೆ ಬಿದ್ದು ಮೇಲುಭಾಗದ ನೀರು ನದಿಗಳಾಗಿಯೂ, ಸರೋವರಗಳಾಗಿಯೂ ಪರಿಣಮಿಸುವುವು. ಮತ್ತೊಂದು ಭಾಗವು ಭೂಮಿಯ ಒಳಕ್ಕೆ ಇಳಿದು ಗುಪ್ತಗಾಮಿನಿಗಳಾದ ನದಿಗಳಾಗಿಯೂ, ಬುಗ್ಗಿಗಳಾಗಿಯೂ ಪರಿಣಮಿಸುವುದು. ಸಮುದ್ರದ ನೀರು ನಿರಂತರವಾಗಿ ಆವಿಯರೂಪವಾಗಿ ಏಳುತ್ತಲೂ ಮೇಘದರೂಪವಾಗಿ ಆಕಾಶಮಂಡಲದಲ್ಲಿ ಸಂಚಾರಮಾಡುತ್ತಲೂ ಮಳೆ, ಹಿಮ, ಆಲಿಕಲ್ಲುಗಳ ರೂಪವಾಗಿ ಸಮುದ್ರದ ಮೇಲೂ ಭೂಮಿಯಮೇಲೂ ವರ್ಷಿಸುತ್ತಲೂ, ಭೂಮಿಯಮೇಲೆ ಬಿದ್ದ ನೀರು ನದಿ, ಸರೋವರ, ಗುಪ್ತವಾಹಿನಿಗಳಾದ ನದಿಗಳು ಇವುಗಳ ರೂಪವನ್ನು ವಹಿಸಿ ಸಂಚಾರಮಾಡುತ್ತಲೂ, ಈ ಸಂಚಾರವನ್ನು ಮಾಡುವಾಗ್ಯೆ ಬುಗ್ಗಿಗಳ ಮೂಲಕವಾಗಿಯೂ, ಮನುಷ್ಯರಿಂದ ನಿರ್ಮಿತಮಾದ ಭಾವಿಗಳ ಮೂಲಕವಾಗಿಯೂ ಈಚೆಗೆ ಬರುತ್ತಲೂ ಪುನಃ ನೀರಿನ ಆವಿಯರೂಪವನ್ನು ಹೊಂದಿ ಆಕಾಶಮಾರ್ಗವನ್ನಡರುತ್ತಲೂ ಇರುವುದು. ಈ ಜಲಕಣಗಳಲ್ಲಿ ಒಂದುಕಣವೂ ನಾಶವಾಗುವುದಿಲ್ಲ. ಎಲ್ಲಾಕಡೆಯಲ್ಲಿಯೂ ಸಂಚಾರ ಮಾಡುತ್ತಾ ಪಂಚಭೂತಾತ್ಮಕವಾದ ಅನೇಕ ಪದಾರ್ಥಗಳಲ್ಲಿ ಸೇರುತ್ತಾ ಆ ಪದಾರ್ಥಗಳು ರೂಪಾಂತರವನ್ನು ಹೊಂದಿದಕೂಡಲೇ ಪುನಃ ವಿಸರ್ಜಿಸಲ್ಪಟ್ಟು ಪೂರ್ವಾವಸ್ಥೆಯನ್ನು ಹೊಂದುತ್ತಾ ಇರುವುದು. ಜಲಾಂಶವು ಪ್ರಾಣಿಗಳ ದೇಹವನ್ನು, ಸಸ್ಯಾದಿಗಳ ದೇಹವನ್ನು ಸೇರಿ ಅವುಗಳ ಬೆಳೆವಳಿಕೆಗೂ ಕಾರಣವಾಗುವುದು. ಬಿಸಲಿನ ಮಹಿಮೆಯಿಂದ ಸಮುದ್ರದಲ್ಲಿರತಕ್ಕ ಜಲವೂ ಭೂಮಿಯಮೇಲಕ್ಕೆ ತರಲ್ಪಡುವುದು. ಈರೀತಿಯಲ್ಲಿ

ನಡೆಯುದೇ ಇದ್ದರೆ ಚರಾಚರಾತ್ಮಕವಾದ ಪ್ರಾಣಿವರ್ಗಕ್ಕೂ, ಸಸ್ಯಾದಿಗಳಿಗೂ ಅವಕಾಶವೇ ಇರುತ್ತಿರಲಿಲ್ಲ. ಮೇಘಗಳು, ಬುಗ್ಗಿಗಳು, ನದಿಗಳು ಆಗುತ್ತಿರಲಿಲ್ಲ. ಸೂರ್ಯನ ತೇಜಸ್ಸಿನಿಂದ ದಗ್ಧವಾಗಿ ಪ್ರಪಂಚವೆಲ್ಲಾ ನಷ್ಟವಾಗುತ್ತಿತ್ತು. ರಾತ್ರಿವೇಳೆಯಲ್ಲಿ ಅತ್ಯಂತ ಶೈತ್ಯದ ಮಹಿಮೆಯಿಂದ ಸಮಸ್ತ ಪದಾರ್ಥಗಳೂ ನಾಶವಾಗುತ್ತಿದ್ದುವು. ಸಮುದ್ರದ ನೀರು ಪ್ರಪಂಚದಲ್ಲೆಲ್ಲಾ ಮೇಲೆಹೇಳಿದರೀತಿಯಲ್ಲಿ ಸಂಚಾರ ಮಾಡುತ್ತಾ ಪ್ರಾಣಿಗಳ ಪೋಷಣೆಗೂ, ಸಸ್ಯಾದಿಗಳ ಪೋಷಣೆಗೂ ಸಾಧಕವಾಗಿರುವಂತೆ ಮಾಡಲ್ಪಟ್ಟಿರುವುದರಿಂದ ಈ ಭೂಮಂಡಲವು ಇಷ್ಟು ರಮಣೀಯವಾಗಿರುವುದು. ಇದರಮೇಲೆ ಚಿತ್ರವಿಚಿತ್ರವಾದ ಸಸ್ಯಾದಿಗಳು ಬೆಳೆಯುವುದಕ್ಕೂ, ಈ ಸಸ್ಯಾದಿಗಳನ್ನು ಆಹಾರವನ್ನಾಗಿ ಮಾಡಿಕೊಂಡು ಅನೇಕ ಪ್ರಾಣಿವರ್ಗಗಳು ಬೆಳೆಯುವುದಕ್ಕೂ ಅವಕಾಶವಾಗಿರುವುದು. ಸಾಗರದಿಂದ ಮೇಲಕ್ಕೆ ನೀರಿನ ಆವಿಯಂತೆ ಎದ್ದು ಹಾಗೆ ಏಳುವಾಗ್ಯೆ ಅದೃಶ್ಯವಾಗಿದ್ದು, ಕ್ರಮಕ್ರಮವಾಗಿ ದೃಷ್ಟಿಪಥಕ್ಕೆ ಮೇಘರೂಪವಾಗಿ ಬಂದು ಅನಂತರ ಜಲಾವಸ್ಥೆಯನ್ನೂ, ಶಿಲಾವಸ್ಥೆಯನ್ನೂ ಹೊಂದಿ ಭೂಮಿಯಮೇಲೆ ಬೀಳುವ ಜಲವು ಎಲ್ಲೆಲ್ಲಿ ಹೋಗುವುದು, ಹೇಗೆ ಗುಪ್ತಗಾಮಿನಿಯಾಗಿರುವುದು, ಯಾವರೀತಿಯಲ್ಲಿ ಪುನಃ ಹೊರಗೆ ಬರುವುದು, ಏನಾಶ್ಚರ್ಯವಾದ ಕೆಲಸಗಳನ್ನು ಮಾಡುವುದು, ಸೃಷ್ಟಿ ಸ್ಥಿತಿ ಲಯಗಳಿಗೆ ಹೇಗೆ ಕಾರಣವಾಗುವುದು?

ಕ್ಷೇತ್ರಗಣಿತ.

(1) 25 ಅಡಿಗಳ ಉದ್ದವಾದ ಒಂದು ಏಣಿಯು ಅದರ ಕಾಲುಗಳು ಗೋಡೆಗೆ 7 ಅಡಿಗಳ ದೂರದಲ್ಲಿ ನಿಲ್ಲುವಂತೆ ನಿಲ್ಲಿಸಲ್ಪಟ್ಟಿದೆ. ಏಣಿಯನ್ನು ಭೂಮಿಯಮೇಲೆ ಎಷ್ಟುದೂರ ಎಳೆಯುತ್ತೇವೆಯೋ ಅದರ ಅರ್ಧದಷ್ಟು ಏಣಿಯು ತುದಿಯು ಗೋಡೆಯಿಂದ ಕೆಳಗೆ ಜಿಳಿಯಬೇಕಾದರೆ ಏಣಿಯನ್ನು ಎಷ್ಟುದೂರ ನೆಲದಲ್ಲಿ ಎಳೆಯಬೇಕು?

ರಚನೆ.

ಏಣಿಯು ಮೊದಲು ಗೋಡೆಗೆ ಹೊಂದಿದ ಸ್ಥಳವನ್ನು ಕಂಡುಹಿಡಿಯೋಣ.



AC = 25 ಅಡಿ (ಏಣಿಯುದ್ದ).

BC = 7 ಅಡಿಗಳು.

$(AC)^2 - (BC)^2 = (AB)^2$

$= (25)^2 - (7)^2 = (AB)^2$

$= (625) - 49 = (AB)^2$

$= \sqrt{625 - 49} = 24$ ಅಡಿಗಳು.

∴ A. B ಗಳ ಉದ್ದ 24 ಅಡಿಗಳು.

ಏಣಿಯು ಗೋಡೆಯಿಂದ ಜಾರಿದ ಭಾಗವನ್ನು x ಎಂದು ತಿಳಿದರೆ ನೆಲದಲ್ಲಿ ಎಳೆಯುವುದು 2 x ಆಗಿದೆ.

∴ $(24 - x)^2 + (7 + 2x)^2 = 25^2$

$= 576 + x^2 - 48x + 49 + 4x^2 + 28x = 625$

$= 625 + 5x^2 - 20x = 625$

$5x^2 - 20x = 0$

∴ $5x^2 = 20x$

$x^2 = 4x$

ಗೋಡೆಯಿಂದ ಜಾರಿದುದು 4 ಅಡಿಗಳು. ಆದುದರಿಂದ ನೆಲದಲ್ಲಿ ಎಳೆದುದು 8 ಅಡಿಗಳು.

ಜಿ. ಹನುಮಂತರಾವ್,

ಹೆಡ್ ಮಾಸ್ಟರ್—ನಾಮಗೊಂಡ್ಲು ಸ್ಕೂಲ್.

* ವಿದ್ಯಾದಾಯಿನಿ. *

ಭಾಗ ೧೫.] ಏಪ್ರೆಲ್—೧೯೦೩. [ಸಂಚಿಕೆ ೪.

ಹಸ್ತಕೌಶಲವನ್ನು ಹೆಚ್ಚಿಸುವುದು.

ಪಾಶ್ಚಾತ್ಯರಾಜ್ಯಗಳಿಂದಲೂ ಜಪಾನ್ ದೇಶದಿಂದಲೂ ಇಲ್ಲಿ ಬಂದು ಕೆಲಸ ಮಾಡುವವರಿಗೂ ನಮಗೂ ಒಂದು ದೊಡ್ಡ ವ್ಯತ್ಯಾಸವು ಕಾಣುವುದು. ಅವರು ಯಾವ ಕೆಲಸದಲ್ಲಿ ತೊಡಗಿದರೂ ಅದನ್ನು ಚೆನ್ನಾಗಿ ಮಾಡುವ ಶಕ್ತಿಯನ್ನು ಹೊಂದಿರುವರು. ನಾಚಾವಿಶೇಷ ಹೇಳುವ ಸಾವರ್ಥ್ಯವು ನಮಗಿದ್ದರೂ ಕೆಲಸಗಳನ್ನು ಮಾಡುವುದರಲ್ಲಿ ಅವರಷ್ಟು ಶಕ್ತಿಯು ನಮಗಿಲ್ಲವೆಂಬುದು ಸ್ಪಷ್ಟವಾಗಿರುವುದು. ಅಲ್ಲದೆ ಅನೇಕರು ಕೆಲಸಮಾಡುವುದು ತಮ್ಮ ಘನತೆಗೆ ಕುಂದಕವಾದುದೆಂತಲೂ ಭಾವಿಸುವರು. ಇಂತಹ ಸ್ಥಿತಿಯು ಬಹಳ ಶೋಚನೀಯವಾದುದಲ್ಲವೆ? ದೇಶದ ಏಳಿಗೆಯನ್ನು ಅಪೇಕ್ಷಿಸುವವರೆಲ್ಲರು ಈ ಸ್ಥಿತಿಯನ್ನು ಹೋಗಲಾಡಿಸಲು ಪ್ರಯತ್ನಪಡಬೇಕಲ್ಲವೆ?

ಇಂತಹ ಶೋಚನೀಯಾವಸ್ಥೆಗೆ ಕಾರಣವೇನಾಗಿರಬಹುದು? ನಮ್ಮಲ್ಲಿ ಪೂರ್ವದಲ್ಲಿ ಆಚರಣೆಯಿಲ್ಲದ್ದ ಅಥವಾ ಈಗ ಆಚರಣೆಯಲ್ಲಿರುವ ವಿದ್ಯಾಭ್ಯಾಸವು ಕಾರಣವಾಗಿರಬಹುದೆ? ಪ್ರಾಚೀನ ವಿದ್ಯಾಭ್ಯಾಸಕ್ರಮದಲ್ಲಿ ಶಿಷ್ಯನು ಗುರುಕುಲವಾಸಕ್ಕೆ ಹೋದಮೇಲೆ ಅವರು ಕೆಲವು ದಿವಸಗಳವರೆಗೆ ಅವನಿಗೆ ಕಾವ್ಯ ಮೊದಲಾದ ಸಾಧಾರಣ ಪಾಠಗಳನ್ನು ಬೋಧಿಸಿ ಅಮೇಲೆ ತರ್ಕ ಮೊದಲಾದ ಶಾಸ್ತ್ರಗಳನ್ನು ಬೊಧೀಸುತ್ತಿದ್ದರು. ಇದರಿಂದ ಬುದ್ಧಿಯ ವ್ಯಾಪರಗಳಾದ ಸ್ಮೃತಿ ಊಹೆ ಮುಂತಾದುವು ಬೆಳೆಯುವದಕ್ಕೆ ಅವಕಾಶವಿತ್ತೇ ಹೊರತು ಬಾಲಕರ ಹಸ್ತಕೌಶಲವನ್ನು ವೃದ್ಧಿಗೊಳಿಸಲು ಮಾರ್ಗವಿರಲಿಲ್ಲ. ಈಗ ನಮ್ಮ ಪಾಠಶಾಲೆಗಳಲ್ಲಿ ನಡೆ

ದಲಾದ ಸಾಧಾರಣ ಪಾಠಗಳ ಜೊತೆಯಲ್ಲಿ ಚಿತ್ರ ಬರೆಯುವುದು, ಮರಗೆಲಸ, ಲೋಹಗೆಲಸ ಈ ಪಾಠಗಳನ್ನು ಸೇರಿಸುವರು. ಇಂತಹ ಪಾಠಗಳಿಗೆ ಆವಶ್ಯಕವಾದ ಕಾಲವನ್ನೊದಗಿಸಲು ಇತರ ಪಾಠಗಳಲ್ಲಿ ಸ್ವಲ್ಪ ಸ್ವಲ್ಪ ಭಾಗವನ್ನು ಕಡಿಮೆ ಮಾಡಿರುವರು. ಈ ಪಾಠಗಳನ್ನಿಟ್ಟಿರುವ ಸ್ಥಳಗಳಲ್ಲೆಲ್ಲ ಇವುಗಳಿಂದ ಸಾಧಾರಣ ಪಾಠಗಳಿಗೆ ವಿಶೇಷ ತೊಂದರೆಯುಂಟಾಗಿಲ್ಲವಾದುದರಿಂದ, ಇಂತಹ ತೊಂದರೆಯು ನಮ್ಮ ದೇಶದಲ್ಲೂ ಉಂಟಾಗಿರಲಾರದೆಂದು ಧಾರಳವಾಗಿ ಹೇಳಬಹುದು. ಮ್ಯಾನ್ಯುಅಲ್ ಟ್ರೇನಿಂಗ್ ಪಾಠಶಾಲೆಗಳಲ್ಲಿ ನಡೆಯುವ ಕೆಲಸವನ್ನು ಅಲ್ಲಿ ಬಾಲಕರು ಮಾಡುವ ಪದಾರ್ಥಗಳ ಬೆಲೆಯಿಂದ ನಿರ್ಣಯಿಸುವುದುಂಟು. ಬಾಲಕರ ಹಸ್ತಕುಶಲವನ್ನು ವೃದ್ಧಿಗೊಳಿಸುವುದು ಈ ವಿದ್ಯಾನಿಲಯಗಳ ಉದ್ದೇಶವಾದುದರಿಂದ ಅಲ್ಲಿ ತಯಾರಾಗುವ ನಾನಾನುಗಳ ಬೆಲೆಯಿಂದಲೇ ಈ ನಿಲಯಗಳ ಯೋಗ್ಯತೆಯನ್ನು ನಿರ್ಣಯಿಸುವುದು ಸರಿಯಾಗಿ ಕಾಣುವುದಿಲ್ಲ. ಮಕ್ಕಳ ಹಸ್ತಕೌಶಲವನ್ನು ಹೆಚ್ಚಿಸಲು ಮೊದಲು ಮಾಡುವ ಪ್ರಯತ್ನದಲ್ಲಿ ವಿಶೇಷ ಪದಾರ್ಥಗಳು ನಷ್ಟವಾಗುವವು, ಮತ್ತು ಈ ಕಾಲದಲ್ಲಿ ಮಕ್ಕಳಿಂದ ವಿಶೇಷ ಬೆಲೆಯುಳ್ಳ ಪದಾರ್ಥಗಳನ್ನು ಮಾಡಿಸುವುದೂ ಸಾಧ್ಯವಲ್ಲ. ಬೆಲೆಯಾಗುವ ಪದಾರ್ಥಗಳನ್ನು ಮಾಡಿಸುವುದರಲ್ಲಿ ಮಾತ್ರ ಉಪಾಧ್ಯಾಯರು ತಮ್ಮ ಅವಧಾನವಿಟ್ಟರೆ ಪಾಠಶಾಲೆಯ ಮುಖ್ಯೋದ್ದೇಶವು ನೆರವೇರದೆ ಹೋಗಿ ಆ ನಿಲಯದಿಂದಾಗುವ ಪ್ರಯೋಜನಾಂಶವು ಕಡಿಮೆಯಾಗುವುದು. ಆದುದರಿಂದ ಇಂತಹ ಪಾಠಶಾಲೆಗಳ ಬೆಲೆಯನ್ನು ಅಲ್ಲಿ ತಯಾರಾಗುವ ಒಂದೆರಡು ಬೆಂಚು, ಕುರ್ಚಿ, ಮೇಜು, ಇವುಗಳ ಬೆಲೆಯಿಂದ ನಿರ್ಣಯಿಸುವುದು ಸರಿಯಲ್ಲ. ಅಲ್ಲಿರುವ ಬಾಲಕರಿಗೆ ತಮ್ಮ ಕೈಯನ್ನು ಉಪಯೋಗಿಸುವುದರಲ್ಲಿ ಎಷ್ಟರಮಟ್ಟಿನ ಕೌಶಲವಿರುವುದೆಂಬುದನ್ನು ನೋಡುವುದರಿಂದ ನಿರ್ಣಯಿಸಬೇಕು.

ನಮ್ಮ ದೇಶದ ಪಾಠಶಾಲೆಗಳಲ್ಲಿ ಈ ಪಾಠಗಳನ್ನಿಡಲು ಉಪಾಧ್ಯಾಯರನ್ನು ಹೇಗೆ ಒದಗಿಸಬೇಕೆಂದು ವಿಚಾರ ಮಾಡಿದರೆ—ನಗರಗಳಲ್ಲಿರುವ ದೊಡ್ಡ ದೊಡ್ಡ ಪಾಠಶಾಲೆಗಳಲ್ಲಿ ಈ ಪಾಠಗಳಿಗೆಲ್ಲ ಬೇರೇ ಒಬ್ಬ ಉಪಾಧ್ಯಾಯರನ್ನಿಡುವುದು ಸಾಧ್ಯವು. ಇಂತಹ ಪಾಠಶಾಲೆಗಳಿಗೆ ಮೈಸೂರಿನಲ್ಲಿರುವ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಸುಶಿಕ್ಷಿತರಾದ ಉಪಾಧ್ಯಾಯರನ್ನು ಕರೆಸಬಹುದು. ಅಥವಾ ಇನ್ನೂ ಕುಶಲರಾದ ಉಪಾಧ್ಯಾಯರು ಬೇಕಾದರೆ ಬೊಂಬಾಯಿನಲ್ಲಿರುವ "ವಿಕ್ಟೋರಿಯಾ

ಜೂಬಿಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ " ಎಂಬ ವಿದ್ಯಾಲಯದಲ್ಲಿ ಸುಶಿಕ್ಷಿತರಾದವರನ್ನು ಕರೆಸಬಹುದು. ಸಣ್ಣ ಗ್ರಾಮಗಳಲ್ಲಿರುವ ಪಾಠಶಾಲೆಗಳಿಗೆ ಇಂತಹ ಉಪಾಧ್ಯಾಯರನ್ನೊದಗಿಸುವುದು ಸಾಧ್ಯವಲ್ಲ. ಆದುದರಿಂದ ಅಲ್ಲಿರುವ ಉಪಾಧ್ಯಾಯರೇ ಇತರ ಪಾಠಗಳ ಜತೆಯಲ್ಲಿ ಈ ಕೆಲಸಗಳನ್ನೂ ಮಾಡಿಸಬೇಕಾಗುವುದು. ಈ ಉಪಾಧ್ಯಾಯರು ನಾರ್ಮಲ್ ಸ್ಕೂಲುಗಳಲ್ಲಿ ತಮ್ಮ ಕರ್ತವ್ಯವನ್ನು ಕಲಿಯುತಿರುವಾಗ ಅವರಿಗೆ ಸ್ವಲ್ಪ ಮರಗೆಲಸವನ್ನೂ, ಲೋಹಗೆಲಸವನ್ನೂ ಕಲಿಸುವುದರಿಂದ ಅವರು ತಮ್ಮ ತಮ್ಮ ಪಾಠಶಾಲೆಗಳಿಗೆ ಹೋದಮೇಲೆ ಮಕ್ಕಳಿಂದ ಈ ಕೆಲಸಗಳನ್ನು ಮಾಡಿಸುವ ಶಕ್ತಿಯನ್ನು ಹೊಂದುವರು.

ಯೂರೋಪು ಅಮೇರಿಕಖಂಡಗಳಲ್ಲಿ ಬಾಲಕರಿಗೆ ಹದಿನೂರು ಹದಿನಾಲ್ಕು ವರುಷವಾಗುವವರೆಗೂ ಅವರನ್ನು ಈ ಪಾಠಶಾಲೆಗಳಿಗೆ ಸೇರಿಸುವುದಿಲ್ಲ. ನಮ್ಮ ದೇಶದ ಬಾಲಕರು ಆ ದೇಶಗಳ ಬಾಲಕರಿಗಿಂತಲೂ ಜಾಗ್ರತೆಯಾಗಿ ಪಾಠಶಾಲೆಯನ್ನು ಬಿಡುವುದರಿಂದ ಇವರಿಗೆ ಈ ಪಾಠಗಳನ್ನು ಹತ್ತುವರ್ಷಕ್ಕೇ ಪ್ರಾರಂಭಿಸಬಹುದು. ಆದರೆ ಅಷ್ಟರೊಳಗೆ ಅವರು ದೇಶಭಾಷೆಯಲ್ಲಿ ಎರಡನೆಯ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರಬೇಕು, ಮತ್ತು ಚಿತ್ರ ಬರೆವುದನ್ನೂ ಸ್ವಲ್ಪ ಕಲಿತಿರಬೇಕು. ಲೋಹಗಳಿಗಿಂತಲೂ ಮರವು ಮೃದುಪದಾರ್ಥವಾದುದರಿಂದ ಮೊದಲು ಮರದಲ್ಲಿ ಕೆಲಸಮಾಡಿಸಬೇಕು. ಸ್ವಲ್ಪ ವಯಸ್ಸಾಗಿ ಕೈಗೆ ಶಕ್ತಿಬಂದಮೇಲೆ ಲೋಹದಲ್ಲಿ ಕೆಲಸ ಮಾಡಿಸಬಹುದು.

ಇಂತಹ ಪಾಠಶಾಲೆಗಳಲ್ಲಿ ಓದಿದ ಅನೇಕ ವಿದ್ಯಾರ್ಥಿಗಳು ನಿಪುಣರಾದ ಬಡಗಿ, ಅಥವಾ ಕಮ್ಮಾರರಾಗಬಹುದು. ಆದರೆ ಬರವಣಿಗೆಯನ್ನು ಕಲಿತವರೆಲ್ಲರೂ ಗುಮಾಸ್ತರಾಗುವರೆಂದು ಹೇಳುವುದು ಹೇಗೆ ಸರಿಯಲ್ಲವೋ ಹಾಗೆಯೇ ಈ ನಿಲಯಗಳಲ್ಲಿ ಓದಿದವರೆಲ್ಲರೂ ನಿಪುಣರಾದ ಬಡಗಿ ಅಥವಾ ಕಮ್ಮಾರರಾಗುವರೆಂದು ಹೇಳುವುದು ಸರಿಯಲ್ಲ. ಇಲ್ಲಿ ವಿದ್ಯಾಭ್ಯಾಸ ಮಾಡಿದವರ ವಿಷಯದಲ್ಲಿ ನಾವು ಇಷ್ಟು ಮಾತ್ರ ಹೇಳಬಹುದು, ಇವರು ಮುಂದೆ ಯಾವಕೆಲಸದಲ್ಲಿ ತೊಡಗಿದರೂ ಇವರಿಗುಂಟಾಗಿರುವ ಹಸ್ತಕೌಶಲವು ಆ ಕೆಲಸದಲ್ಲಿ ಇವರಿಗೆ ಸಹಾಯವಾಗುವುದು. ಮತ್ತು ನಮ್ಮ ವಿದ್ವಜ್ಜನರು ಕೈಯಿಂದ ಕೆಲಸ ಮಾಡುವುದರಲ್ಲಿ ತೋರ್ಪಡಿಸುತಿರುವ ಜುಗುಪ್ಸೆಯು ಇಂತಹ ಪಾಠಶಾಲೆಗಳ ಸಹಾಯದಿಂದ ಕ್ರಮಕ್ರಮವಾಗಿ ತೊಲಗಿ ದೇಶವು ವೃದ್ಧಿಹೊಂದಲು ಮಾರ್ಗವಾಗುವುದೆಂದು ನಿಸ್ಸಂಶಯವಾಗಿ ಹೇಳಬಹುದು.

ನಮ್ಮ ದೇಶದಲ್ಲಿ ವಿದ್ಯಾಭ್ಯಾಸವನ್ನು ವೃದ್ಧಿಗೊಳಿಸುವುದರಲ್ಲಿ ಬದ್ಧಕಂಕಣರಾದ ಇನ್‌ಸ್ಪೆಕ್ಟರ್ ಜನರಲ್ ಮೆ॥ ಭಾಭಾಸಾಹೇಬರು ಯೂರೋಪು ಅಮೇರಿಕ ಖಂಡಗಳ ರಾಜ್ಯಗಳಲ್ಲಿ ಸಂಚಾರ ಮಾಡಿ ಇಂತಹ ಪಾಠಶಾಲೆಗಳ ವಿಚಾರವನ್ನೆಲ್ಲ ಶೋಧಿಸಿಕೊಂಡು ಬಂದಿರುವರು. ಇವರು ನಮ್ಮ ಪಾಠಶಾಲೆಗಳಲ್ಲೂ ಈ ಪಾಠಗಳಿಗೆ ಅವಕಾಶವನ್ನು ಕಲ್ಪಿಸಿ ನಮ್ಮ ಬಾಲಕರ ಹಸ್ತಕೌಶಲವನ್ನು ವೃದ್ಧಿಗೊಳಿಸಬೇಕೆಂದು ಇವರನ್ನು ನಾವು ವಿನಯದಿಂದ ಪ್ರಾರ್ಥಿಸುವೆವು. ಎಂ. ವಿ.

ವಿದ್ಯಾಭ್ಯಾಸ.

ಭೂರಚನಾಶಾಸ್ತ್ರದಿಂದಲೂ ಕೈಗಾರಿಕೆ ಕೆಲಸಗಳಿಗೆ ಹೆಚ್ಚು ಸಹಾಯವುಂಟು. ಮುಖ್ಯವಾಗಿ ಇಂಗ್ಲೆಂಡ್ ದೇಶೀಯರಿಗೂ ಗಣಿಗಳುಳ್ಳ ಇತರ ದೇಶದವರಿಗೂ ಅದು ಬಹುಪ್ರಯೋಜನಕಾರಿಯಾಗಿರುವುದು. ಕಬ್ಬಿಣದ ಅದುರು ಕಲ್ಲಿದ್ದಲುಗಳನ್ನು ಅಗಿಯುವುದು, ಚಿನ್ನ ಮುಂತಾದ ಲೋಹಗಳನ್ನು ಹುಡುಕಿ ತೆಗೆಯುವುದು, ವಜ್ರ ಪಚ್ಚೆ ಮೊದಲಾದ ಮಣಿಗಳನ್ನು ಶೋಧಿಸಿ ತೆಗೆಯುವುದು—ಇವೆ ಮೊದಲಾದ ಕೆಲಸಗಳಿಗೆ ಆ ಶಾಸ್ತ್ರಜ್ಞಾನವು ಅಗತ್ಯವಾಗಿ ಬೇಕಾಗುವುದು. ಪುಣ್ಯವಶಾತ್ ಆ ಶಾಸ್ತ್ರವನ್ನು ಕಲಿಸುವ ಪಾಠಶಾಲೆಗಳನ್ನು ಈಚೀಚಿಗೆ ಇಂಗ್ಲೆಂಡಿನಲ್ಲಿಯೂ ಇತರ ದೇಶಗಳಲ್ಲಿಯೂ ಸ್ಥಾಪಿಸಿರುವರು.

ಈಗ ಜೀವಶಾಸ್ತ್ರ ವಿಷಯವು ವಿಚಾರಿಸಲ್ಪಡುವುದು. ಇದು ಮನುಷ್ಯರ ಕಾರ್ಯಗಳಿಗೆ ಸಹಾ ಪ್ರಯೋಜನಕಾರಿಯೆಂದು ಹೇಳಬೇಕಾದುದೇ ಇಲ್ಲ. ಮೇಲೆ ಹೇಳಿದ ಕೈಗಾರಿಕೆ ಕೆಲಸಗಳಿಗೆ ಇದು ಅಷ್ಟು ಪ್ರಯೋಜನವಾದುದಲ್ಲ. ಆದರೆ ನಮಗೆ ಅತ್ಯಾವಶ್ಯಕವಾದ ಆಹಾರಪದಾರ್ಥಗಳನ್ನುತ್ಪಾದನಮಾಡಲಿಕ್ಕೆ ಈ ಶಾಸ್ತ್ರಜ್ಞಾನವು ಅಗತ್ಯವಾಗಿ ಬೇಕಾಗಿರುವುದು. ವೃಕ್ಷಗಳ ಮತ್ತು ಜೀವಜಂತುಗಳ ಸ್ಥಿತಿಗಳಿಗನುಸಾರವಾಗಿ ಭೂವ್ಯವಸಾಯವು ಮಾಡಲ್ಪಡುವುದಾದುದರಿಂದ, ಅವುಗಳ ಸ್ಥಿತಿಗಳನ್ನು ತಿಳಿಸುವ ಶಾಸ್ತ್ರಜ್ಞಾನವು ಕೃಷಿಕೆಲಸಕ್ಕೆ ಅವಶ್ಯಕವೆಂದು ಹೇಳಬೇಕಾದುದೇ ಇಲ್ಲ. ಜೀವಶಾಸ್ತ್ರವನ್ನು ವ್ಯಾಸಂಗಮಾಡದೆ ಇದ್ದಾಗ್ಗೂ ಕೂಡ ಅನೇ

ಕ ರೈತರು ಆ ವಿಷಯಕವಾದ ಕೆಲವು ಸಂಗತಿಗಳನ್ನು ಅನುಭವ ಮಾಡಿಕೊಂಡಿರು ವರು. ಹೇಗೆಂದರೆ —

ಕೆಲವುಬಗೆಯ ಗೊಬ್ಬರಗಳು ಕೆಲವುಬಗೆಯ ವೃಕ್ಷಗಳ ಬೆಳವಣಿಗೆಗೆ ಹೆಚ್ಚು ಪ್ರಯೋಜನಕರವಾಗಿವೆ. ಬೇರೆ ಬೇರೆ ಪೈರುಗಳಿಗೆ ಬೇರೆ ಬೇರೆ ಗುಣಗಳುಳ್ಳ ಭೂ ಮಿಗಳು ಬೇಕು, ಯೋಗ್ಯವಾದ ಮೇವನ್ನು ಹಾಕಿ ಆರೈಕೆಯನ್ನು ತೆಗೆದುಕೊಳ್ಳದಿ ದ್ದರೆ ಎತ್ತು ಕುದುರೆ ಮುಂತಾದ ಪ್ರಾಣಿಗಳು ಚೆನ್ನಾಗಿ ಕೆಲಸಮಾಡಲು ಸಮರ್ಥ ವಾಗುವುದಿಲ್ಲ, ಯಾವ ಯಾವ ಸಂದರ್ಭಗಳಲ್ಲಿ ಕುರಿ ದನ ಮೊದಲಾದವುಗಳಿಗೆ ರೋಗವು ಬರುತ್ತದೆ — ಎಂಬಿವೇ ಮೊದಲಾದ ಸಂಗತಿಗಳನ್ನು ಅನೇಕ ರೈತರು ಬಲ್ಲ ರು. ವೃಕ್ಷ ಜೀವಜಂತುಗಳ ವಿಷಯವಾಗಿ ರೈತರು ಪದೆ ಪದೆ ಹೊಸಹೊಸ ಅನುಭ ವಗಳನ್ನು ಹೊಂದುತ್ತಿರುವರು. ಇಂಥಾ ವಿಷಯಗಳನ್ನು ಚೆನ್ನಾಗಿ ಬಲ್ಲಂಥಾ ರೈತ ರು ಲಾಭವಂತರಾಗುವುದರಲ್ಲಿ ಸಂದೇಹವಿಲ್ಲ. ರೈತರಿಗೆ ಈಗಿರುವ ಇಂಥಾ ಅಲ್ಪ ವಾದ ಅವ್ಯಕ್ತವಾದ ಅಪರಿಷ್ಕೃತವಾದ ಜ್ಞಾನವೇ ಇಷ್ಟರಮಟ್ಟಿಗೆ ಅವರ ಕೆಲ ಸಕ್ಕೆ ಸಹಾಯವಾಗಿರುವಾಗ, ಆ ಶಾಸ್ತ್ರವಿಷಯಕವಾದ ಖಂಡಿತವಾದ ವ್ಯಕ್ತವಾ ದ ಪೂರ್ಣವಾದ ಜ್ಞಾನವು ಅವರಿಗೆ ಇದ್ದುದಾದರೆ ಇನ್ನು ಎಷ್ಟರಮಟ್ಟಿಗೆ ಪ್ರಯೋ ಜನಕಾರಿಯಾಗಬಹುದೆಂದು ವಾಚಕರೇ ಪರ್ಯಾಲೋಚಿಸತಕ್ಕದು.

ಈಗ ಜೀವಶಾಸ್ತ್ರಜ್ಞಾನವು ಯಾವರೀತಿಯಲ್ಲಿ ಪ್ರಯೋಜನಕಾರಿಯಾಗುವು ದೆಂಬುದನ್ನು ಕುರಿತು ಕೆಲವುಸಂಗತಿಗಳು ಇಲ್ಲಿ ವಿಚಾರಮಾಡಲ್ಪಡುವುವು. ಪ್ರಾ ಣಿಗಳ ದೇಹದಲ್ಲಿರುವ ಪದಾರ್ಥಗಳು ದಹಿಸಲ್ಪಡುವುದರಿಂದ ಉಷ್ಣವುಂಟಾಗುತ್ತ ದಾದುದರಿಂದ, ದೇಹದ ಉಷ್ಣವು ಹೆಚ್ಚಾಗಿ ನಷ್ಟವಾಗದಂತೆ ಕಾಪಾಡಿಕೊಂಡದೆ ಯಾದರೆ ಅಧಿಕವಾಗಿ ಆಹಾರ ತೆಗೆದುಕೊಳ್ಳುವ ಅವಶ್ಯಕವಿಲ್ಲವೆಂಬ ಸಂಗತಿಯು ಆ ಶಾಸ್ತ್ರದಿಂದ ಗೊತ್ತಾಗುತ್ತದೆ. ಇದನ್ನು ತಿಳಿದ ರೈತರು, ದನಕರುಗಳು ಕೊ ಬ್ಬುವಂತೆ ಮಾಡಿ ಅದರಿಂದ ಅವುಗಳ ದೇಹೋಷ್ಣವು ಹೆಚ್ಚಾಗಿ ನಷ್ಟವಾಗದಂತೆ ಮಾಡುವುದರಿಂದ, ಅವುಗಳಿಗೆ ಅಧಿಕವಾಗಿ ತಿಂಡಿಹಾಕಬೇಕಾಗಿದ್ದ ಖರ್ಚೇ ಕಡಿ ಮೆಯಾಗುವುದು. ಆ ಶಾಸ್ತ್ರವು ಆಹಾರವಿಷಯದಲ್ಲಿ ಮತ್ತೊಂದು ಸಂಗತಿಯನು ತಿಳಿಸಿಕೊಟ್ಟಿರುವುದು. ಅದೇನೆಂದರೆ — ಒಂದೇಬಗೆಯ ಆಹಾರವನ್ನು ತೆಗೆದುಕೊ ಳ್ಳದೆ ಬಗೆಬಗೆಯ ಪದಾರ್ಥಗಳನ್ನು ಬದಲಾಯಿಸಿ ಬದಲಾಯಿಸಿ ತೆಗೆದುಕೊಳ್ಳುತಾ ಬರುವುದೂ ಒಂದೇ ವಿಧವಾದ ಪದಾರ್ಥವನ್ನು ತಿನ್ನುವುದಕ್ಕೆ ಬದಲಾಗಿ ಅನೇಕ

ವಿಧವಾದ ಪದಾರ್ಥಗಳನ್ನು ಏಕ್ರಮಾಡಿ ತಿನ್ನುವುದೂ ಈ ಎರಡು ಕಾರ್ಯಗಳು ಜೀರ್ಣಶಕ್ತಿನ್ನು ವೃದ್ಧಿಯಗೊಳಿಸಿ ದೇಹವನ್ನು ಪುಷ್ಟಿಮಾಡುವುವು. ಇನ್ನೊಂದು ಮಹಾಪ್ರಯೋಜನವಾದ ವಿಷಯವನ್ನು ಜೀವಶಾಸ್ತ್ರವು ತಿಳಿಸುತ್ತದೆ. ಏನೆಂದರೆ — ವರ್ಷಾವಧಿ ಅನೇಕಸಾವಿರ ಕುರಿಗಳನ್ನು ನಾಯಿಸುವ ಅದರುರೋಗಕ್ಕೆ ಬಂದ ಬಗೆಯ ಹುಳವು ಕಾರಣವಾಗಿರುವುದು; ಇದು ಕುರಿಯ ಮಸ್ತಿಷ್ಕದಲ್ಲಿ ಸೇರಿಕೊಳ್ಳುವುದರಿಂದ ಆ ರೋಗವುಪ್ರಾಪ್ತವಾಗುವುದು; ಕುರಿ ತಲೆ ಬುರುಡೆಯ ಎಲುಬು ಎಲ್ಲಿ ಮೆತ್ತಗಿರುವುದೋ ಅಲ್ಲಿಯೇ ಈ ಹುಳುವು ಇರುವುದೆಂಬುದಕ್ಕೆ ಗುರುತು; ಈ ಹುಳವನ್ನು ಸಕಾಲದಲ್ಲಿ ಆ ಸ್ಥಳದಿಂದ ತೆಗೆದುಹಾಕಿದರೆ ಕುರಿಯು ಬದುಕುತ್ತದೆ. ಈ ವಿಷಯಜ್ಞಾನವು ರೈತರಿಗೆ ಮಹೋಪಕಾರಿಯಾಗಿದೆ. ಇದರಿಂದ ನಾವಿರಾರು ಕುರಿಗಳನ್ನು ಅದರೂ ಬದುಕಿಸಿಕೊಳ್ಳಬಹುದು.

ಈಗ ಸಂಘಶಾಸ್ತ್ರವು ವಿಚಾರಮಾಡಲ್ಪಡುವುದು. ನಾಣ್ಯದ ಚಲಾವಣೆ ಮತ್ತು ಬೆಳೆಯನ್ನು ವಿಚಾರಿಸುವುದು, ಜಿನಸುಗಳ ಧಾರಣೆಯನ್ನು ಗೊತ್ತುಮಾಡಿಕೊಳ್ಳುವುದು, ತುಟಿಪರೀಕ್ಷೆ ಹತ್ತಿ ಕಬ್ಬು ಧಾನ್ಯ ಮುಂತಾದುವುಗಳ ಬೆಳೆ ಆಯಾ ವರ್ಷಗಳಲ್ಲಿ ಎಷ್ಟರಮಟ್ಟಿಗೆ ಆಗುವುದೆಂದು ಅಂದಾಜು ಕಟ್ಟುವುದು, ಯುದ್ಧಪ್ರಸಕ್ತಿಯನ್ನು ಎದುರು ನೋಡುವುದು — ಇವೇ ಮೊದಲಾದ ಕಾರ್ಯಗಳನ್ನು ಮಾಡುವವರಿಗೆ ಈ ಶಾಸ್ತ್ರಜ್ಞಾನವು ಅವಶ್ಯಕವಾಗಿದೆ. ಇಂಥಾ ವಿಷಯಗಳನ್ನೆಲ್ಲಾ ಗೊತ್ತುಮಾಡಿಕೊಂಡು ಅವರು ತಮ್ಮ ತಮ್ಮ ವಾಣಿಜ್ಯವನ್ನು ಕ್ರಮಪಡಿಸಿಕೊಳ್ಳಬೇಕು. ಈ ವಿಷಯಗಳಲ್ಲಿ ಅವರ ವಿಚಾರಣೆಯೂ ಊಹೆಯೂ ಸರಿಯಾಗಿದ್ದರೆ ಲಾಭವೂ ಇಲ್ಲದಿದ್ದರೆ ನಷ್ಟವೂ ಅವರಿಗೆ ಉಂಟಾಗುವುದು. ನಾವಾನುಗಳ ಭರ್ತಿಯು ಎಷ್ಟರಮಟ್ಟಿಗಿರುವುದು, ಖರ್ಚು ಎಷ್ಟರಮಟ್ಟಿಗೆ ಆಗಬಹುದು ಎಂಬುದನ್ನು ರೈತರೂ ಕೈಗೆಲಸದವರೂ ಶಿಲ್ಪಿಗಳೂ ವರ್ತಕರೂ ಪರ್ಯಾಲೋಚಿಸಿ ಅವರವರ ಕಾರ್ಯಗಳನ್ನು ಮಾಡಬೇಕು. ದೇಶಕಾಲಸ್ಥಿತಿಗಳನ್ನೂ ಜನರ ನಡವಳಿಕೆಗಳನ್ನೂ ಸರಿಯಾಗಿ ಪರ್ಯಾಲೋಚಿಸಿ ಅವುಗಳಿಗೆ ತಕ್ಕಂತೆ ಕಾರ್ಯಗಳನ್ನು ಮಾಡುವವರು ಲಾಭಹೊಂದುವುದರಲ್ಲಿ ಸಂದೇಹವಿಲ್ಲ. ಹಾಗಿಲ್ಲದೆ ಅನ್ಯಥಾ ಪ್ರವರ್ತಿಸಿದವರು ನಷ್ಟಕ್ಕೆ ಗುರಿಯಾಗುವರು. ಆದುದರಿಂದ ಮುಖ್ಯವಾಗಿ ವರ್ತಕತನದಲ್ಲಿ ಪ್ರವರ್ತಿಸೆಮವರು ಸಂಘಶಾಸ್ತ್ರವಿಷಯವನ್ನು ಸಾಧ್ಯವಾದ ಮಟ್ಟಿಗೂ ತಿಳಿದುಕೊಂಡಿರಬೇಕು.

ಹೀಗೆ ನಾವಾನುಗಳನ್ನು ಉತ್ಪಾದನಮಾಡುವುದರಲ್ಲಿಯೂ ಸಿವಪಡಿಸುವುದ

ರಲ್ಲಿಯೂ ವಿನಿಮಯ ಮಾಡುವುದರಲ್ಲಿಯೂ ಪ್ರವರ್ತಿಸುವವರಿಗೆ ಮೇಲೆ ಹೇಳಿದ ನಾನಾ ಶಾಸ್ತ್ರಗಳ ಜ್ಞಾನವು ಅವಶ್ಯಕವಾಗಿರುವುದು. ತರ್ಕ ಗಣಿತ ಭೌತಿಕ ಶಾಸ್ತ್ರರಸವಾದ ಜೀವಶಾಸ್ತ್ರ ಮತ್ತು ಸಂಘಶಾಸ್ತ್ರ—ಇವುಗಳ ವಿಷಯವು ಜನರಿಗೆ ತಕ್ಕಮಟ್ಟಿಗಾದರೂ ತಿಳಿದಿರಬೇಕು. ಜೀವನಾರ್ಥವಾಗಿ ಮಾಡುವ ಕಸಬುಗಳಿಗೆಲ್ಲಾ ಈ ಶಾಸ್ತ್ರಗಳ ಜ್ಞಾನವು ಅವಶ್ಯಕ. ಇವುಗಳನ್ನು ಹೆಚ್ಚಾಗಿ ತಿಳಿದಷ್ಟೂ ಹೆಚ್ಚಾಗಿ ಪ್ರಯೋಜನವನ್ನು ಹೊಂದಬಹುದು. ಪುಸ್ತಕಗಳನ್ನು ಓದಿಯೇ ಈ ಶಾಸ್ತ್ರಗಳನ್ನು ಕಲಿಯಬೇಕೆಂದಿಲ್ಲ. ಬೇರೆ ಯಾವವಿಧದಿಂದಲಾದರೂ ಇವುಗಳ ಜ್ಞಾನವನ್ನು ಸಂಪಾದಿಸಬಹುದು. ವಸ್ತುಗಳ ಗುಣಗಳನ್ನೂ ಅವುಗಳನ್ನೊಂದಕ್ಕೊಂದಕ್ಕೆ ಸೇರಿಸುವುದರಿಂದುಂಟಾಗುವ ಫಲಗಳನ್ನೂ ಅವುಗಳ ನಾನಾವಿಧವಾದ ಪರಿಣಾಮಗಳನ್ನೂ ಬದಲಾವಣೆಗಳನ್ನೂ ಬದಲಾವಣೆಗಳನ್ನುಂಟುಮಾಡುವ ರೀತಿಗಳನ್ನೂ ಆ ಬದಲಾವಣೆಗಳ ಗುಣದೋಷಗಳನ್ನೂ ಬದಲಾವಣೆಗಳನ್ನುಂಟುಮಾಡುವುದರಿಂದಾಗುವ ಲಾಭನಷ್ಟಗಳನ್ನೂ ವ್ಯಕ್ತಪಡಿಸಿ, ಜನರು ಅವರವರ ಕಾರ್ಯಗಳನ್ನು ಹೇಗೆ ನಾಧಿಸಿ ಪ್ರಯೋಜನಗಳನ್ನು ಹೊಂದಬೇಕೆಂಬ ಮಾರ್ಗಗಳನ್ನು ಮೇಲೆ ಹೇಳಿದ ಶಾಸ್ತ್ರಗಳು ತೋರಿಸಿಕೊಡುವುವು.

ಈ ವಿಷಯಗಳನ್ನೆಲ್ಲಾ ಅರಿತು ಕೆಲಸಮಾಡುವವನು ಜಯಶಾಲಿಯಾಗುವುದರಲ್ಲಿ ಸಂಶಯವಿಲ್ಲ. ವಿಷಯಜ್ಞಾನವಿಲ್ಲದೆ ಕಾರ್ಯಗಳಲ್ಲಿ ಪ್ರವರ್ತಿಸುವವನು ನಷ್ಟವನ್ನು ಹೊಂದುವುದು ಸಿದ್ಧ. ಬೇರೆ ಬೇರೆ ಕೆಲಸಗಾರರಲ್ಲಿ ಕೆಲವರು ಲಾಭಹೊಂದುವರೆಂತಲೂ ಕೆಲವರು ನಷ್ಟಕ್ಕೆ ಗುರಿಯಾಗುವರೆಂತಲೂ ನಾವು ಆಗಾಗ ಕೇಳುತ್ತಿರುವೆವು. ಹೀಗಾಗಲು ಕಾರಣವೇನು? ಕೆಲವರು ಏತಕ್ಕೆ ಲಾಭವನ್ನು ಹೊಂದಬೇಕು? ಬೇರೆಯವರು ಏತಕ್ಕೆ ನಷ್ಟವನ್ನು ಹೊಂದಬೇಕು? ಅವರವರ ಅದೃಷ್ಟವೆಂದು ಹೇಳಬೇಕೆ? ಹಾಗಲ್ಲ. ಇದಕ್ಕೆ ಕಾರಣವು ವ್ಯಕ್ತವಾಗಿರುವುದು. ಯಾರು ಆಯಾ ವಿಷಯಜ್ಞಾನವುಳ್ಳವರಾಗಿ ತಮ್ಮ ತಮ್ಮ ಕಾರ್ಯಗಳನ್ನು ಸರಿಯಾಗಿ ಮಾಡುವರೋ ಅವರು ಲಾಭವನ್ನು ಹೊಂದುವರು. ಅನ್ಯಥಾ ಪ್ರವರ್ತಿಸುವವರು ನಷ್ಟಕ್ಕೆ ಗುರಿಯಾಗುವರು. ಆದುದರಿಂದ ಜೀವಿಕೆಯನ್ನು ಸಂಪಾದಿಸಲು ಮಾಡಬೇಕಾದ ಕಾರ್ಯಗಳಿಗೆ ಮೇಲೆ ಹೇಳಿದ ಶಾಸ್ತ್ರಗಳ ಜ್ಞಾನವು ಅವಶ್ಯಕವೆಂದು ಹೇಳಬೇಕಾದುದಿಲ್ಲ.

ಹೀಗೆ ಶಾಸ್ತ್ರಜ್ಞಾನವಿಲ್ಲದ ಪ್ರಯುಕ್ತ ಈವರಿಗೆ ಜನರಿಗೆ ಪದೆಪದೆ ಬಹಳ

ನಷ್ಟಗಳು ಸಂಭವಿಸಿರುವುವು. ಇನ್ನು ಮುಂದೆ ಆದಿಲ್ಲದಿದ್ದರೆ ಮತ್ತೂ ಅಧಿಕವಾಗಿ ನಷ್ಟಗಳು ಉಂಟಾಗುವುದರಲ್ಲಿ ಸಂದೇಹವಿಲ್ಲ. ಈಗಿನಸ್ಥಿತಿಯುಲ್ಲಿ ಜೀವನಪದಾರ್ಥಗಳನ್ನು ಸಂಪಾದಿಸಲಿಕ್ಕೆ ಪ್ರಜೆಗಳಲ್ಲಿ ಬಹಳವಾಗಿ ಪೋಟಾಪೋಟಿ ಇರುವುದರಿಂದ ಆ ಪದಾರ್ಥಗಳನ್ನೆಲ್ಲಾ ಶಾಸ್ತ್ರವರಿತೇ ಉತ್ಪಾದನ ಮಾಡಬೇಕಾಗಿರುವುದು. ಹೀಗೆ ಮಾಡುವುದರಿಂದ ವಾಣಿಜ್ಯ ಸಂಘಗಳು ಹೆಚ್ಚಬೇಕಾಗುವುದು. ಇದರಿಂದ ಜನರಿಗೆ ಸುಖಜೀವನಕ್ಕೆ ಮಾರ್ಗವಾಗುವುದು. ಯಾರು ಶಾಸ್ತ್ರರೀತಿಯನ್ನರಿತು ಸರಿಯಾಗಿ ಕೆಲಸ ಮಾಡುವರೋ ಅವರೇ ಈ ಪ್ರಪಂಚದಲ್ಲಿ ಉತ್ಕೃಷ್ಟಸ್ಥಿತಿಗೆ ಬರುವರು. ಹಾಗೆ ಮಾಡದವರು ಹೀನಗತಿಯನ್ನು ಹೊಂದುವರು. ಪ್ರಪಂಚದಲ್ಲಿ ಈಗಿರುವ ಜನರನ್ನು ಪರೀಕ್ಷಿಸಿ ನೋಡಿದರೆ, ಕೆಲವು ಜನಾಂಗದವರು ಉತ್ತಮಸ್ಥಿತಿಯುಲ್ಲಿಯೂ ಕೆಲವರು ಮಧ್ಯಮಸ್ಥಿತಿಯಲ್ಲಿಯೂ ಮಿಕ್ಕ ಜನಾಂಗದವರು ಹೀನಸ್ಥಿತಿಯಲ್ಲಿಯೂ ಇರುವುದು ಕಂಡುಬರುವುದು. ಇದಕ್ಕೆ ಕಾರಣವೇನು? ಇದನು ಗೊತ್ತುಮಾಡಿಕೊಳ್ಳಲು ಹೆಚ್ಚು ಪ್ರಯತ್ನವು ಬೇಕಾಗಿಲ್ಲ. ಬೇರೆ ಬೇರೆ ಜನಗಳಿಗೆ ಶಾಸ್ತ್ರಜ್ಞಾನದಲ್ಲಿ ತಾರತಮ್ಯವಿರುವುದರಿಂದಲೇ ಅವರ ಸ್ಥಿತಿಗಳಲ್ಲಿಯೂ ಹೀಗೆ ಭೇದಗಳಿರುವುದೆಂದು ಹೇಳಬೇಕಾದುದಿಲ್ಲ. (ಸಶೇಷ).

S. V.

ಲೋಕಾನುಭವ.

ಈ ಲೋಕದಲ್ಲಿ ಪಾಮರಜನಗಳಿಗೆ ಆಯಾ ವಸ್ತುಗಳಿಂದಾಗುವ ಪ್ರಯೋಜನದಮೇಲೆ ಆಸೆಯಾಗುವುದಕ್ಕಿಂತಲೂ ಅಲಂಕಾರದಮೇಲೆ ಮೊದಲು ಆಸೆಯಾಗುವುದು. ಚಳಿ ಸೆಕೆಗಳಮ್ಮಂಟುಮಾಡುವ ಗಾಳಿ ಬಿಸಿಲು ಮೊದಲಾದುವುಗಳಿಂದ ತಮ್ಮನ್ನು ಕಾವಾಡಿಕೊಳ್ಳುವ ಉಪಾಯಗಳಲ್ಲಿ ಅಭಿಲಾಷೆ ಹುಟ್ಟುವುದಕ್ಕಿಂತಲೂ ಮೊದಲು, ಬಲುನೋವನ್ನಾದರೂ ಸೈರಿಸಿಕೊಂಡು ಮೈಯಲ್ಲಿ ಸೂಜಿಯಿಂದ ಹಚ್ಚೆಯನ್ನು ಚುಚ್ಚಿಸಿಕೊಳ್ಳುವುದಕ್ಕೆ ಅನೇಕರು ಅತಿಸುವುದು ಪ್ರಸಿದ್ಧವಾಗಿದೆಯೆಷ್ಟೆ! ಈ ವಿಷಯದಲ್ಲಿ ಓರಿನೋಕೊ ಎಂಬ ಅನಾಗರಿಕರಾದ ಪಾಶ್ಚಾತ್ಯರನ್ನು ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು. ಅವರು ತಮ್ಮ ಮೈಯನ್ನು ಪೋಷಿಸಿಕೊ

ಳ್ಳುವುದಕ್ಕಿಂತಲೂ ಅಂಗರಾಗ ಮೊದುಲಾದುವುಗಳಿಂದ ಅಲಂಕರಿಸಿಕೊಳ್ಳುವುದೇ ಮೇಲೆಂದು ತಿಳಿದಿರುವರು. ಮತ್ತು ಅಲ್ಲಿಯ ಹೆಂಗಸರು ಮೈಗೆ ಹೊದ್ದಿಕೆಯಿಲ್ಲದೆಯೇ ಹೊರಗೆ ಸಂಚರಿಸುವುದು ಸ್ವಲ್ಪವೂ ಆಕ್ಷೇಪಕರವಲ್ಲ. ಆದರೆ ಕಾವಿ ಮುಂತಾದ ಬೇರೆಬೇರೆ ತರದ ಧಾತುಗಳಿಂದ ಮಾಡಿದ ಅಂಗರಾಗವೇ ಮೊದಲಾದ ದೇಹಾಲಂಕಾರವಿಲ್ಲದೆಯೇ ಹೊರಗೆ ಹೊರಡುವುದು ಬಲುದೂಷಣೆಗೆ ಆಸ್ಪದವೆನಿಸುವುದು. ದೇಹಪೋಷಣೆಗೆ ಬೇಕಾಗಿರುವ ಬಟ್ಟೆ, ಆಹಾರಪದಾರ್ಥ ಮೊದಲಾದವುಗಳಿಗಿಂತಲೂ ಗಾಜಿನಮಣಿ, ಮೂಳೆಯ ಒಡವೆ ಮೊದಲಾದ ಕೀಳುವಸ್ತುಗಳಿಗೆ ಮೇಲ್ಮೆಯನ್ನೂ ಮುಖ್ಯತೆಯನ್ನೂ ನಾವು ವಾ್ರಯಶಃ ಮೂಢಜನಗಳಲ್ಲಿಕಾಣಬಹುದು.

ಆಫ್ರಿಕಾದೇಶದಲ್ಲಿರುವ ಕೆಲವರು ಬಹುಶ್ರಮದಿಂದ ಸಂಪಾದಿಸಿದ ವ್ಯಾಘ್ರ ಚರ್ಮ ಮೊದಲಾದುದರಿಂದ ಮಾಡಿದ ಕವಚಾದಿಗಳನ್ನು ಉತ್ಸವಗಳಲ್ಲಿ ಸ್ವಜನಗಳ ಗುಂಪಿಗೆ ಹೋಗುವಾಗ ಮಾತ್ರ ಬರಲು ಬೇಸಿಗೆಯಲ್ಲಿಯೂ ಧರಿಸಿಕೊಳ್ಳುವುದರಲ್ಲಿ ಆನಂದಪಡುವರು. ಮಳೆಗಾಲದಲ್ಲಿಯಾದರೊ ಚಳಿಯು ಏಟು ಬಲವಾಗಿದ್ದರೂ ಬಟ್ಟೆಯಿಲ್ಲದೆಯೇ ತಿರುಗಾಡುತ್ತಾರೆ. ಅಂಥಾ ಕವಚಾದಿಗಳನ್ನು ಕಾಪಾಡಿಕೊಂಡಿರುವುದು ಆಯಾ ಉತ್ಸವಸಮಯದ ಉಪಯೋಗಕ್ಕಲ್ಲದೆ ದೇಹಪೋಷಣೆಗಲ್ಲವೆಂಬುದೇ ಅವರ ಮುಖ್ಯೋದ್ದೇಶವು.

ಈರೀತಿಯನ್ನು ವಿಚಾರಮಾಡಲಾಗಿ ಜನಗಳಿಗೆ ಮೊದಲು ತಮ್ಮ ದೇಹವನ್ನು ಅಲಂಕರಿಸಿಕೊಳ್ಳುವುದರಲ್ಲಿಯೂ, ಆಮೇಲೆ ಚಳಿ ಸೆಕೆ ಮುಂತಾದುದರ ತೊಂದರೆಯನ್ನು ತಪ್ಪಿಸಿಕೊಳ್ಳಲು ಬಟ್ಟೆಬರೆಗಳಲ್ಲಿಯೂ ಅಪೇಕ್ಷೆಯು ಉಂಟಾಗುವುದೆಂದು ತಿಳಿಯಬಹುದು. ಪೂರ್ವಕಾಲದವರ ರೀತಿ ಹಾಗಿರಲಿ. ಬಹುನಾಗರಿಕರಾದ ಈಗಿನ ಜನರಿಗೆ ಕೂಡ ಬಟ್ಟೆಗಳ ನುಣುಪು, ಬೇರೆ ಬೇರೆ ಆಕಾರ ಇವು ಮೊದಲಾದುದರ ಸೊಗಸಿನಲ್ಲಿ ಇರುವಷ್ಟು ಆಸೆಯು ಅವುಗಳಿಂದಾಗುವ ಶೈತ್ಯನಿವಾರಣಾದಿ ಪ್ರಯೋಜನಗಳಲ್ಲಿಲ್ಲ. ಮೇಲೆ ಹೇಳಿದ ಸಂಗತಿಗೆ ಇದೂ ಸಹಕಾರಿಯಲ್ಲವೆ !

ಇನ್ನು ಆಂತರಂಗದ ಸ್ಥಿತಿಯನ್ನು ನೋಡಲಾಗಿ ಜನರ ಮನೋಭಾವವೂ ಫಳಕಿನಲ್ಲಿಯೇ ಪರಿಣಮಿಸುತ್ತಿದೆ ಎಂಬುದು ಆಶ್ಚರ್ಯವು. ದೇಹದ ಸುಖವನ್ನುಂಟುಮಾಡುವ ವಿಷಯಗಳ ತಿಳಿವಳಿಕೆಗಿಂತಲೂ, ತಮಗೆ ಪ್ರಶಂಸೆಯನ್ನುಂಟುಮಾಡುವ ತಿಳಿವಳಿಕೆಯೇ ಮೇಲೆಂದು ಜನರು ಎಣಿಸುತ್ತಾರೆ. ಈಗಿನ ವಿದ್ಯಾಭ್ಯಾಸ

ರೂಪವೇ ಜಲಾವಸ್ಥೆಯುಳ್ಳದು. ಎರಡನೇ ರೂಪವೇ ಶಿಲಾವಸ್ಥೆಯುಳ್ಳದು. ಜಲಾವಸ್ಥೆಯಲ್ಲಿ ಮಳೆ ಎನ್ನಿಸಿಕೊಳ್ಳುವುದು. ಶಿಲಾವಸ್ಥೆಯಲ್ಲಿ ಹಿಮವೆನ್ನಿಸಿಕೊಳ್ಳುವುದು. ಭೂಮಿಗೆ ಬಿದ್ದ ಕೂಡಲೆ ನೀರಿನಲ್ಲಿ ಒಂದು ಭಾಗವು ಭೂಮಿಯೊಳಕ್ಕೆ ಮಣ್ಣಿನ ರಂಧ್ರಗಳ ಮಾರ್ಗವಾಗಿ ಪ್ರವೇಶಿಸುವುದು. ಮತ್ತೊಂದು ಭಾಗವು ಹರಿದು ನದಿಯಂತೆ ಪರಿಣಮಿಸಿ ಸಮುದ್ರವನ್ನು ಸೇರುವುದು. ಭೂಮಿಯೊಳಕ್ಕೆ ಪ್ರವೇಶಿಸುವ ಜಲವು ಯಾವ ಪರಿಣಾಮವನ್ನು ಹೊಂದುವುದೋ ಅದನ್ನು ಪರೀಕ್ಷಿಸುವುದು ಅವಶ್ಯಕ. ಭೂಮಿಯೊಳಕ್ಕೆ ಈ ರೀತಿಯಲ್ಲಿ ಪ್ರವೇಶಿಸಿದನೀರು ನಷ್ಟವಾಯಿತೆಂದು ತಿಳಿದುಕೊಳ್ಳತಕ್ಕವರುಂಟು. ಮೇಲುಭಾಗದಲ್ಲಿ ನದಿಗಳ ರೂಪದಿಂದ ಹರಿಯುವ ನೀರಿನೊಡನೆ ಸೇರದೇ ಇದ್ದಾಗ್ಯೂ ಈ ನೀರಿಗೆ ಭೂಮಿಯೊಳಗೆ ಹರಿಯತಕ್ಕ ಗುಪ್ತಗಾಮಿನಿಗಳಾದ ನದಿಗಳನ್ನು ಅನುಸರಿಸಿ ಹರಿಯುವ ಸಂಭವವೂ ಉಂಟಾಗುವುದು. ಈ ನೀರು ಭೂಮಿಯಲ್ಲಿಯೇ ಅಂತರ್ಗತವಾಗಿರುವುದಿಲ್ಲ. ಗುಪ್ತಗಾಮಿನಿಯಾಗಿ ಹರಿದು ಅವಕಾಶವುಳ್ಳ ಸ್ಥಳಗಳಿಂದ ಬುಗ್ಗೆಗಳಾಗಿ ಮೇಲಕ್ಕೆ ಏಳುವುದು. ಸಾಮಾನ್ಯವಾದ ಬುಗ್ಗೆಗಳಿಗೂ, ಮಳೆನೀರಿನಿಂದ ಉಂಟಾಗತಕ್ಕ ಬುಗ್ಗೆಗಳಿಗೂ ಇರತಕ್ಕ ವ್ಯತ್ಯಾಸವು ಎಲ್ಲರಿಗೂ ಗೊತ್ತಾಗಿರುವುದು. ಅನಾವೃಷ್ಟಿಯ ಕಾಲದಲ್ಲಿ ಕೆಲವು ಬುಗ್ಗೆಗಳಿಂದ ಸ್ವಲ್ಪ ನೀರು ಬರುತ್ತಲಿರುವುದು. ಮಳೆಯು ಹುಯ್ದು ಕೂಡಲೆ ವಿಶೇಷವಾಗಿ ಈ ಬುಗ್ಗೆಗಳಿಂದ ನೀರು ಬರುವುದು. ಭಾವಿಗಳಿಂದ ನಾವು ನೀರುಸೇದುವುದು ಎಲ್ಲರಿಗೂ ಗೊತ್ತೇ ಇರುವುದು. ಭೂಮಿಯ ಕೆಳಗೆ ಹರಿಯುವ ನದಿಗಳು ಮೇಲುಭಾಗದಲ್ಲಿಯೇ ಸಿಕ್ಕಿದರೆ ವಿಶೇಷ ಆಳವಿಲ್ಲದ ಭಾವಿಗಳು ಸಾಧ್ಯವಾಗುವುದು. ಅಂಥಾ ನದಿಗೂ ಬಹಳ ಆಳದಲ್ಲಿದ್ದರೆ ಈಗ ಪುದುಚೇರಿಯಲ್ಲಿ ಕಾಣಬರುವ ಆರ್ಟೀಷಿಯನ್ ಭಾವಿಗಳಂತೆ ಅತ್ಯಂತ ಆಳವುಳ್ಳ ಭಾವಿಗಳು ಬುಗ್ಗೆಗಳಂತೆ ಪರಿಣಮಿಸಿ ಪಾತಾಳದಿಂದ ನೀರು ಮೇಲಕ್ಕೆ ಹಾರುವುದು.

ಮಣ್ಣು ಎಷ್ಟು ಗಟ್ಟಿಯಾಗಿದ್ದಾಗ್ಯೂ ಸಂಣ ಸಂಣ ಮರಳುಕಾಳುಗಳುಳ್ಳದಾಗಿಯೂ, ಈ ಕಾಳುಗಳು ಪರಸ್ಪರ ಒಂದಕ್ಕೊಂದು ಸೇರಿಕೊಂಡಿದ್ದಾಗ್ಯೂ ಅವುಗಳ ಮಧ್ಯೆ ಅವಕಾಶವನ್ನು ಹೊಂದಿದುವುಗಳಾಗಿಯೂ ಇರುವುವು. ನದಿಗಳ ಪಾತ್ರಗಳೂ, ಸರೋವರಗಳ ಪಾತ್ರಗಳೂ, ಸಮುದ್ರದ ಪಾತ್ರಗಳೂ, ಇವುಗಳಲ್ಲೆಲ್ಲಾ ಈರೀತಿಯಿಂದ ಅವಕಾಶಗಳಿರುವುವು. ಈ ಅವಕಾಶಗಳಿಂದ ನೀರು ಕೆಳಕ್ಕೆ ಇಳಿಯುವುದು ಸರೋವರಗಳೂ, ನದಿಗಳೂ ಸಮುದ್ರ ಇವುಗಳೆಲ್ಲಾ ನೀರನ್ನು ಸರಪರಾಜು

ಪೂಡುವುವು. ಈ ನೀರಿನೊಡನೆ ಸೂಕ್ಷ್ಮವಾದ ಮಣ್ಣು ಮೊದಲಾದ ಪದಾರ್ಥಗಳು ಸೇರಿರುವುದುಂಟು. ಫ್ರಾನ್ಸು ದೇಶದಲ್ಲಿ ಪ್ರಥಮತಃ ಆರ್ಟೀಷಿಯನ್ ವೆಲ್ ಎಂಬ ಭಾವಿಗಳನ್ನು ತೆಗೆಯುವುದಕ್ಕೆ ಪ್ರಾರಂಭವಾಯಿತು. ಒಂದಡಿ ವ್ಯಾಸವುಳ್ಳ ಕೊರೆಯುವ ಯಂತ್ರದಿಂದ ಭೂಮಿಯನ್ನು ಕೊರೆಯುತ್ತಾರೆ. ಸಾವಿರಾರು ಅಡಿಗಳ ವರೆಗೂ ಬೇಕಾದರೂ ಭೂಮಿಯನ್ನು ಕೊರೆಯುವುದು. ಆಳದಲ್ಲಿ ಹರಿಯತಕ್ಕ ನದಿಯು ಸಿಕ್ಕಿದ ಕೂಡಲೆ ಆ ನೀರು ಅಲ್ಲಿಂದ ಮೇಲಕ್ಕೇಳುವುದು. ಸಾಮಾನ್ಯವಾಗಿ 400 ಅಡಿಗಳಿಂದ ನೀರು ಮೇಲಕ್ಕೇಳುವುದು.

ಆ ಒಳಭಾಗದ ನೀರಿನಲ್ಲಿ ಜಲಚರಗಳು ಕೂಡ ಇರುವುದುಂಟು. ಫ್ರಾನ್ಸ್ ದೇಶದ ಒಂದು ಭಾಗದಲ್ಲಿ ತೆಗೆಯಲ್ಪಟ್ಟ ಒಂದು ಆರ್ಟೀಷಿಯನ್ ಭಾವಿಯಿಂದ ಪ್ರಾಣವುಳ್ಳ ಮೀನುಗಳೂ ಕೂಡ ಮೇಲಕ್ಕೆ ಬಂದುವು. ಬಹಳ ಕೆಳಗೆ ಇರತಕ್ಕಂಥಾ ಭೂಮಿಯು ಶೈತ್ಯವುಳ್ಳದಾಗಿರುತ್ತದೆ. ಅನೇಕ ಕಲ್ಲು ಗಣಿಗಳನ್ನೂ, ಮತ್ತು ಇತರ ಗಣಿಗಳನ್ನೂ ಅಗೆದುಕೊಂಡು ಹೋಗುವಾಗ ನೀರು ಸಿಕ್ಕುವುದು ಎಲ್ಲರಿಗೂ ಅನುಭವಸಿದ್ಧವಾಗಿಯೇ ಇರುವುದಷ್ಟೆ. ಹೊಗೆಯಿಂದ ನಡೆಸಲ್ಪಡತಕ್ಕ ಯಂತ್ರಗಳು ಆಚರಣೆಗೆ ಬರುವುದಕ್ಕೆ ಮುಂಚೆ ಈ ಗಣಿಗಳಲ್ಲಿ ತುಂಬುವ ನೀರನ್ನು ಎತ್ತಿ ಹಾಕುವುದಕ್ಕೆ ಸರಿಯಾದ ಅವಕಾಶವಿಲ್ಲದೆ ಇದ್ದುದರಿಂದ, ಗಣಿಗಳ ಕೆಲಸವೇ ನಡಿಯುತ್ತಲಿರಲಿಲ್ಲ. ಗಣಿಗಳೆಲ್ಲಾ ಮುಳುಗಿ ಹೋಗುತ್ತಿತ್ತು. ಈಗ ಗಣಿಗಳು ಇರತಕ್ಕ ಸ್ಥಳಗಳಲ್ಲೆಲ್ಲಾ ಸ್ಟೀಂ ಪಂಪು ಇರುತ್ತವೆ. ಇವುಗಳ ಸಹಾಯದಿಂದ, ಗುಪ್ತಗಾಮಿನಿಗಳಾದ ನದಿಗಳಿಂದ ಗಣಿಯ ಕಡೆಗೆ ಹರಿಯತಕ್ಕ ನೀರನ್ನೆಲ್ಲಾ ಒಂದುಕಡೆಗೆ ಯಂತ್ರಗಳು ತೆಗೆದುಹಾಕುತ್ತಲಿರುತ್ತವೆ. ಇನ್ನೊಂದುಕಡೆ ಜನಗಳು ಕೆಲಸಮಾಡಿದ ಲೋಹಾದಿಗಳನ್ನು ತೆಗೆಯುತ್ತಲಿರುತ್ತದೆ. ಆಫ್ರಿಕಾ ಖಂಡದಲ್ಲಿ ನೀರು ಸಿಕ್ಕುವುದು ಬಹಳ ಕಷ್ಟ. ಕೈರೋ, ಸೂಯನ್ ಮೊದಲಾದ ಸ್ಥಳಗಳಲ್ಲಿ 50 ಅಡಿ ಅಗೆದರೆ ನೀರು ಸಿಕ್ಕುವುದುಂಟು ಆದರೆ ಸಹಾರ ಎಂಬ ಮರಳು ಕಾಡಿನಲ್ಲಿ ಒಯೇಸೆನ್ ಎಂಬ ಜಲಸಮೃದ್ಧಿಯುಳ್ಳ ಪ್ರದೇಶಗಳಲ್ಲಿ ವಿನಾ, ಇನ್ನೆಲ್ಲಿಯೂ ನೀರು ಸಿಕ್ಕುವುದು ಕೂಡ ಕಷ್ಟ. ಅಲ್ಜೀರಿಯಾದಲ್ಲಿ ಇಂಥಾ ಕೆಲವು ಆರ್ಟೀಷಿಯನ್ ವೆಲ್ಲೆಂಬ ಭಾವಿಗಳನ್ನು ತೆಗೆಸಿರುತ್ತಾರೆ. ಈ ಭಾವಿಗಳ ಸಹಾಯವಿಲ್ಲದೇ ಇದ್ದರೆ ಈ ದೇಶವೆಲ್ಲಾ ಕಾಡಾಗಿ ಪರಿಣಮಿಸುತ್ತಿತ್ತು. ಮಹಾನದಿಯೇ ಮೊದಲಾದ ಇಂಡಿಯಾ ದೇಶದ ಕೆಲವು ನದಿಗಳಲ್ಲಿ ಬಿಸಿಲುಕಾಲದಲ್ಲಿ ನೀರು ಸಿಕ್ಕುವುದಿಲ್ಲ. ಆದರೆ ಆ ನದಿಯ ಪಾತ್ರದಲ್ಲಿ

30—40 ಅಡಿಗಳು ಭಾವಿಯನ್ನು ತೆಗೆದರೆ ಅದು ನೀರಿನಿಂದ ತುಂಬುವುದು. ಮಳೆಯಿಂದಲೇ ನೀರು ಬರಬೇಕೆಂಬ ಆವಶ್ಯಕತೆಯು ಅನೇಕ ಸ್ಥಳಗಳಲ್ಲಿರುವುದಿಲ್ಲ. ಆಫ್ರಿಕಾಖಂಡದ ಅನೇಕ ಭಾಗಗಳಲ್ಲಿ ಮಳೆಯು ಆಗುವುದೇ ಇಲ್ಲ. ಕೆಲವು ಸ್ಥಳಗಳಲ್ಲಿ ಅಪೂರ್ವವಾಗಿ ಆಗುವುದು. ಇಂಥಾ ಸ್ಥಳಗಳಲ್ಲೆಲ್ಲಾ ಯಾವಾಗ್ಯೂ ನೀರು ಸರಪರಾಜು ಮಾಡತಕ್ಕ ಭಾವಿಗಳಿರುವುವು. ಕೆಲವು ಕಡೆಗಳಲ್ಲಿ ಗಣಿಗಳನ್ನು ಎಷ್ಟು ಆಳವಾಗಿ ತೋಡಿದಾಗ್ಯೂ ನೀರು ಬರುವುದಿಲ್ಲ. ಫ್ರಾನ್ಸ್ ಮತ್ತು ಇಟಲೀ ದೇಶಗಳಿಗೆ ಮೌಂಟ್ ಸೆನಿಸ್ ಎಂಬ ತಿಖರದ 5000 ಅಡಿಗಳ ಕೆಳಗೆ ರಂಧ್ರವನ್ನು ಮಾಡಿ ರೈಲನ್ನು ತೆಗೆದುಕೊಂಡು ಹೋಗಿರುವರು ಅಷ್ಟು ಆಳದಲ್ಲಿ ಕೊರೆದಾಗ್ಯೂ ನೀರು ಬರಲಿಲ್ಲ. ಇದರಿಂದಲೇ ಕೆಲವು ಪ್ರದೇಶಗಳಲ್ಲಿ ನೀರು ಬಹಳ ಆಳದಲ್ಲಿರುವುದೆಂದು ಗೊತ್ತಾಗುವುದು. ಅಗ್ನಿಪರ್ವತಗಳು ಇರತಕ್ಕ ಸ್ಥಳಗಳಲ್ಲಿಯೂ ಕೂಡ, ಅಗ್ನಿ ಇರತಕ್ಕ ಪ್ರದೇಶದ ಕೆಳಗೆ ನೀರು ಇರುವುದುಂಟು. ಈ ನೀರಿಗೂ ಅಗ್ನಿಗೂ ಸಂಸರ್ಗವಾಗುವುದರಿಂದ ಸ್ಟೀಂ ಪಂಪಾಗಿ ಅಗ್ನಿಪರ್ವತಗಳಿಂದ ಹೊಗೆ ಮೊದಲಾದವುಗಳು ಹೊರಡುವುದುಂಟು. ಬಂಡೆಗಳೆಲ್ಲಾ ಕರಗುವಷ್ಟು ಬೆಂಕಿಯು ಒಂದು ಕಡೆಯಲ್ಲಿಯೂ, ನೀರು ಅದರ ಪಾರ್ಶ್ವದಲ್ಲಿಯೂ ಇರುವದೂ ಉಂಟು. ಈ ಜಲಭಾಗವು ಭೂಮಿಯಮೇಲೂ ಭೂಮಿಯ ಒಳಗೂ ಇರುವವರಿಗೂ ಪ್ರಾಣಿಗಳಿಗೂ ಸಸ್ಯಾದಿಗಳಿಗೂ ಅವಕಾಶವಿರುವುದು. ಈ ಭಾಗವು ಹೋದ ಪಕ್ಷದಲ್ಲಿ ಇವೆರಡೂ ಇರುವುದಿಲ್ಲ. ಚೆಂದ್ರನಂತೆ ಪ್ರಾಣಿಗಳಿಗೂ ಸಸ್ಯಾದಿಗಳಿಗೂ ಅವಕಾಶವಿಲ್ಲದ ಮಂಡಲವಾಗಿ ಈ ಭೂಮಿಯು ಪರಿಣಮಿಸಬೇಕಾಗುವುದು. ಮಳೆಯು ರೂಪವಾಗಿ ಭೂಮಿಯಮೇಲೆ ಬಿದ್ದು, ಭೂಮಿಯೊಳಕ್ಕೆ ಇಂಗಿದಾಗ್ಯೂ, ಒಂದೊಂದು ಕಡೆಗಳಲ್ಲಿ ಬುಗ್ಗೆಗಳ ರೂಪವಾಗಿ ನೀರು ಮೇಲಕ್ಕೆ ಬಂದಾಗ್ಯೂ ಎಲ್ಲಾ ಕಡೆಗಳಲ್ಲಿಯೂ ಅದು ಬುಗ್ಗೆಯಾಗುವುದಿಲ್ಲ. ಎಲ್ಲಿ ಅವಕಾಶವು ಸಿಕ್ಕುತ್ತದೆಯೋ ಅಂಥಾ ಅವಕಾಶವಿರತಕ್ಕ ಸ್ಥಳದಿಂದ, ನಿಮ್ನವಾದ ಪ್ರದೇಶಗಳು ಎಲ್ಲಿ ಇರುತ್ತವೆಯೋ ಅಲ್ಲಿಮಾತ್ರವೇ ಬುಗ್ಗೆಯುಂಟಾಗುವುದಕ್ಕೆ ಅವಕಾಶವಾಗುವುದು.

ಪೆರ್ಷ ಫಂಡ್.

ಮದರಾಸು ಗೌರ್ನರ್ ಸಾಹೇಬರವರು, ಕಳೆದ ಡಿಸೆಂಬರ್‌ನಲ್ಲಿ ವಿದ್ಯಾಭ್ಯಾಸದ ಕಾರ್ಫರೆನ್ಸನ್ನು ಓರ್ಪ ಮಾಡಿದಾಗ, ಪೆರ್ಷ ಫಂಡಿನ ವಿಷಯದಲ್ಲಿ ಮಾಡಿದ ಉಪನ್ಯಾಸವು ಬಹಳ ಶ್ಲಾಘ್ಯವಾದುದು. ಪಾಠಶಾಲೆಗಳು ಮೂರು ವಿಧಗಳಾಗಿರುವುವು. ಕೆಲವು ಗೌರ್ನಮೆಂಟ್ ಪಾಠಶಾಲೆಗಳು. ಅಲ್ಲಿನ ಉಪಾಧ್ಯಾಯರಿಗೆ ಪೆರ್ಷ ಕ್ಲುಪ್ತವಾಗಿರುತ್ತದೆ. ಮತ್ತೆ ಕೆಲವು ಪಾಠಶಾಲೆಗಳು ಪ್ರೈವೆಟ್ ಕಮಿಟಿಗಳ ಮ್ಯಾನೇಜ್‌ಮೆಂಟಿನಲ್ಲಿರುತ್ತವೆ. ಅವುಗಳಿಗೆ ಗ್ರಾಂಟು ವಗೈರೆಗಳು ಸಲ್ಲುತ್ತವೆ. ಆದರೆ ಅಲ್ಲಿನ ಪಾಠಕರಿಗೆ ಕೆಲಸಮಾಡುವವರಿಗೂ ಸಂಬಳ ಸಲ್ಲುವುದು. ರಿಟೈರಾದ ಮೇಲೆ ಜೀವನಕ್ಕೆ ಮಾರ್ಗವಿಲ್ಲದೇ ಹೋಗುವುದು. ಈ ವಿಷಯವನ್ನು ಕುರಿತು ಗವರ್ನರ್ ಸಾಹೇಬರು ಅಪ್ಪಣೇ ಕೊಡಿಸಿದುದೇನೆಂದರೆ :—

" ಈಗಿನ ಪಾಠಕರು ಮುಂದಿನ ಜನಾಂಗಗಳನ್ನು ತಯಾರು ಮಾಡತಕ್ಕವರು. ಇವರು ಮಾಡತಕ್ಕ ಕೆಲಸವು ಪ್ರಪಂಚದ ವೃದ್ಧಿಗೂ, ನಾಗರೀಕತೆಗೂ, ಅತ್ಯಂತ ಸಹಾಯಕರವಾದುದು. ದೇಶವು ಅಭಿವೃದಿಗೆ ಬರಬೇಕಾದರೆ ಪಾಠಕರು ಸಕಲ ವಿದ್ಯಾವಿಶಾರದರಾಗಿರಬೇಕು. ಅಂಥಾ ಜನಗಳು ಪಾಠಕರಾಗಿ ಸಿಕ್ಕಬೇಕಾದರೆ ಅವರಿಗೆ ಸರಿಯಾದ ಸಂಬಳಗಳನ್ನು ಕೊಡಬೇಕು. ರಿಟೈರಾದ ಕೂಡಲೇ ಪೆರ್ಷನನ್ನು ಕೊಡಬೇಕು. ಸರಕಾರದ ಸ್ಕೂಲುಗಳಲ್ಲಿ ಪೆರ್ಷಗೆ ಏರ್ಪಾಡು ಇರುವುದು. ಇತರ ಸ್ಕೂಲುಗಳಲ್ಲಿ ಏರ್ಪಾಡು ಇರುವುದಿಲ್ಲ. ಅಂಥಾ ಏರ್ಪಾಡನ್ನು ಕಲ್ಪಿಸುವುದು ಅತ್ಯಂತ ಆವಶ್ಯಕವಾದುದು. 1876 ನೇ ಇಸವಿಯಲ್ಲಿ ಒಂದು ರಾಯಲ್ ಕಮಿಷ್ನ್ ಸೇರಿತ್ತು. ಪ್ರತಿಯೊಂದು ಸ್ಕೂಲಿಗೂ, ಒಂದು ಪೆರ್ಷ ಫಂಡ್ ಇರಬೇಕೆಂಬದಾಗಿ ಅವರು ವಿಧಾಯಕ ಮಾಡಿದರು. ಇದು ಆವಶ್ಯಕವಾದುದೆಂದು ಗೌರ್ನಮೆಂಟಿನವರು ಒಪ್ಪಿದರು. ಅದಕ್ಕನುಸಾರವಾಗಿ ಒಂದು ಪೆರ್ಷ ಫಂಡ್ ಏರ್ಪಡಿಸಲ್ಪಟ್ಟಿತು. ಸಮರ್ಥರಾದವರು ಪಾಠಕರಾಗಿರುವುದು ಆವಶ್ಯಕ. ಹಾಗಿಲ್ಲದಿದ್ದರೆ ಪ್ರಪಂಚವೇ ಹೀನಸ್ಥಿತಿಗೆ ಬರುವುದು. ಅಂಥಾವರು ಪಾಠಕರಾಗಿರಬೇಕಾದರೆ ಸರಕಾರದ ಪಾಠಶಾಲೆಗಳಲ್ಲಿರುವಂತೆ ಪೆರ್ಷನಿನ ಏರ್ಪಾಡು ಇಲ್ಲಿಯೂ ಇರಬೇಕು. ಪ್ರೈವೆಟ್ ಸ್ಕೂಲುಗಳು ಈ ಏರ್ಪಾಡನ್ನು ಮಾಡಿಕೊಂಡರೆ ಸಮರ್ಥರಾದ ಪಾಠಕರು ಎಲ್ಲಾ ಸ್ಕೂಲುಗಳಿಗೂ ಸಿಕ್ಕುವರು. ಈ ಫಂಡನ್ನು

ಹೇಗೆ ಏರ್ಪಡಿಸಬೇಕು? ಈ ಸಂಸ್ಥಾನದಲ್ಲಿ ಮದರಾಸು ಟೀಚರುಗಳ ಸಂಘದವರು ಪರ್ಯಾಲೋಚಿಸಿ ಇದನ್ನು ಏರ್ಪಡಿಸಬೇಕು."

ಗವರ್ನರು ಸಾಹೇಬರವರು ಈ ರೀತಿಯಲ್ಲಿ ಮಾಡಿದ ಉಪನ್ಯಾಸವು ಬಹಳ ಯುಕ್ತಿಯುಕ್ತವಾಗಿ ಇದೆ. ಆದರೆ ಈ ಕೆಲಸವನ್ನು ಈ ಪಾತಕಸಂಘದವರು ಮಾಡುವುದಕ್ಕಾಗುವುದಿಲ್ಲ. ಸರಕಾರದವರೇ ಇದಕ್ಕೆ ತಕ್ಕ ಏರ್ಪಾಡನ್ನು ಮಾಡ ಬೇಕು. ಸರಕಾರದವರು ಇಂಥಾ ಕೆಲಸವನ್ನು ಮಾಡುವುದು ಕಷ್ಟ. ಅದಕ್ಕೆ ಅನೇಕ ಪ್ರತಿಬಂಧಕಗಳು ಒರುತ್ತವೆ. ಬ್ರಿಟಿಷ್ ರಾಜ್ಯದಲ್ಲಿ ಈ ವಿಷಯದಲ್ಲಿ ಯಾವ ಏರ್ಪಾಡನ್ನು ಮಾಡಿ ಇಧಾರೆಯೋ ಅದನ್ನು ಇಲ್ಲಿಗೂ ಜಾರಿಗೆ ತರುವುದು ಉತ್ತಮ. ವಿದ್ಯಾಭ್ಯಾಸದ ಖರ್ಚಿಗೆ ವಿನಿಯೋಗಿಸಲ್ಪಡತಕ್ಕ ದ್ರವ್ಯವು ಎಲ್ಲಿ ಯದು. ಪ್ರಜೆಗಳು ಕೊಡತಕ್ಕ ಕಂದಾಯ ವಗೈರೆಗಳಿಂದ ಉತ್ಪತ್ತಿಯಾದುದ ಲ್ಲವೇ? ಸರಕಾರದವರು ಖುದ್ದಾಗಿ ಇಟ್ಟುಕೊಳ್ಳತಕ್ಕ ಸ್ಕೂಲುಗಳ ಖರ್ಚನ್ನೆಲ್ಲಾ ಸರಕಾರದವರೇ ವಹಿಸಿಕೊಳ್ಳುತ್ತಾರೆ. ಪೇಷ್ಕ ವಗೈರೆಗಳನ್ನು ತಾವೇ ಕೊಡು ತ್ತಾರೆ. ಪ್ರೈವೆಟ್ ಸ್ಕೂಲುಗಳಲ್ಲಿ ಆಗತಕ್ಕ ಖರ್ಚಿನಲ್ಲಿ ಒಂದು ಭಾಗವನ್ನು ಮಾತ್ರ ಇವರು ವಹಿಸುವರು. ಮತ್ತೊಂದು ಭಾಗವು ಕಮಿಟಿಗಳ ಮೇಲೆ ಬೀಳುವುದು. ಚಿಂತೆಯಿಲ್ಲ. ಈ ಕಮಿಟಿಯವರು ಪ್ರೈವೆಟ್ ಸ್ಕೂಲುಗಳನ್ನು ಇಡದೇ ಇದ್ದಿದ್ದರೆ ಗೌರ್ನಮೆಂಟಿನವರೇ ಸ್ಕೂಲುಗಳನ್ನು ಇಡಬೇಕಾಗುತ್ತಿರಲಿಲ್ಲವೆ? ಆಂಥಾ ಸಂದರ್ಭ ದಲ್ಲಿ ಖರ್ಚೆಲ್ಲಾ ಗೌರ್ನಮೆಂಟಿನಮೇಲೆ ಬೀಳುತ್ತಿರಲಿಲ್ಲವೇ? ಸ್ಕೂಲುಗಳ ಖರ್ಚಿ ಗೋಸ್ಕರ ಯಾವರೀತಿಯಲ್ಲಿ ಒಂದು ಭಾಗವನ್ನು ಗೌರ್ನಮೆಂಟಿನವರು ವಹಿಸುವರೊ ಅದೇ ರೀತಿಯಲ್ಲಿ ಒಂದು ಫೇಷ್ಕ ಫಂಡನ್ನು ಮಾಡಿ ಅದಕ್ಕೆ ಒಂದು ಭಾಗವನ್ನು ಆ ಪಾತಕರಿಂದ ತೆಗೆದುಕೊಳ್ಳುವಂತೆ ಏರ್ಪಾಡು ಮಾಡಿ, ಮತ್ತೊಂದು ಭಾಗವನ್ನು ಸರಕಾರದವರು ಕೊಟ್ಟು ರಿಪೈರಾದಮೇಲೆ ಪಾತಕರಿಗೆ ಫೇಷ್ಕ ಬರುವಂತೆ ಮಾಡು ವುದು ಆವಶ್ಯಕ. ಈ ವಿಷಯವು ಬ್ರಿಟಿಷ್ ರಾಜ್ಯದಲ್ಲಿ ಪರ್ಯಾಲೋಚನೆಯಲ್ಲಿ ಇದೆ. ವಿಲಾಯತಿಯ ಗೌರ್ನಮೆಂಟಿನವರು ಇದನ್ನು ಜಾರಿಗೆ ತಂದಿರುವಂತೆಯೇ ತೋರುತ್ತದೆ. ಪ್ರಜೆಗಳ ಯೋಗಕ್ಷೇಮಚಿಂತೆಯು ನೇಟೀವ್ ಸಂಸ್ಥಾನಗಳಲ್ಲಿ ಪ್ರಭುಗಳಿಗೆ ಅತ್ಯಂತವಾಗಿ ಬೇಕಾದುದಾಗಿರುತ್ತದೆ. ಈ ಫೇಷ್ಕ ಫಂಡಿಗೆ ಸ್ವೋತ್ಸಾಹವನ್ನುಂಟುಮಾಡಿ ವಿದ್ಯಾಭ್ಯಾಸವು ಅತ್ಯಂತ ಸಮರ್ಪಕವಾಗಿ ನಡೆದು ದೇಶವು ಉನ್ನತಸ್ಥಿತಿಗೆ ಬರುವುದಕ್ಕೂ, ಪ್ರಜೆಗಳು ವಿದ್ಯಾವಿನಯ ಸಂಪನ್ನರಾಗು

ವುದಕ್ಕೂ ತಕ್ಕ ಏರ್ಪಾಡನ್ನು ಮಾಡುವುದು ಎಲ್ಲಾ ನೇಟೀವ್ ಪ್ರಭುಗಳಿಗೂ ಕರ್ತವ್ಯವಾದುದು. ಅನೇಕ ವಿಷಯಗಳಲ್ಲಿ ಗಾಯಕವಾಡ ಮಹಾರಾಜರೇ ಮೊದಲಾದವರು ಮೇಲುಪಜ್ಞೆಯನ್ನು ಹಾಕುತ್ತಲಿದಾರೆ. ಪ್ರಯೋಜನಕರವಾದ ಕಲೆಗಳನ್ನೆಲ್ಲಾ ತಮ್ಮ ದೇಶದಲ್ಲಿ ರೂಢಿಗೆ ಬರುವಂತೆ ಮಾಡುತ್ತಲಿದಾರೆ. ಮಿಲ್ಲುಗಳನ್ನು ಇಟ್ಟು ಕೈಗಾರಿಕೆಗಳು ನಡಿಸುವುದಕ್ಕೆ ಬೇಕಾದ ಪ್ರಯತ್ನವನ್ನು ಮಾಡುತ್ತಲಿದಾರೆ. ಕಲಾಭವನವನ್ನು ಏರ್ಪಡಿಸಿ ಅನೇಕ ಕಲೆಗಳಲ್ಲಿ ಜನಗಳಿಗೆ ಪ್ರವೇಶವನ್ನುಂಟು ಮಾಡುವುದಕ್ಕೆ ತಕ್ಕ ಏರ್ಪಾಡನ್ನು ಮಾಡುತ್ತಲಿದಾರೆ. ವಿದ್ಯಾಭ್ಯಾಸವು ಉಚಿತವಾಗಿಯೂ, ಬಲಾತ್ಕಾರವಾಗಿಯೂ ನಡೆಸುವ ಏರ್ಪಾಡುಗಳನ್ನು ಮಾಡುತ್ತಲಿದಾರೆ. ಈ ಪೆರ್ಷ ಫಂಡನ್ನು ಮಾಡಿ ವಿದ್ಯಾಭ್ಯಾಸದ ಇಲಾಖೆಗೆ ಅತ್ಯಂತ ಸಮರ್ಥರಾದರು ಸಿಕ್ಕುವಂತೆ ಏರ್ಪಾಡು ಮಾಡಬೇಕೆಂದು ಪರ್ಯಾಲೋಚಿಸುತ್ತಲಿರುವುದಾಗಿಯೂ ತಿಳಿಯುಬರುತ್ತಲಿದೆ. ನಮ್ಮ ಖಾವಂದರವರೂ ಈ ಭಾಗಗಳಲ್ಲಿ ಗಾಯಕವಾಡ ಮಹಾರಾಜರವರ ಏರ್ಪಾಡುಗಳಿಗಿಂತಲೂ ಹೆಚ್ಚಾದ ಏರ್ಪಾಡನ್ನು ಮಾಡಬೇಕೆಂಬ ಆಸಕ್ತಿಯುಳ್ಳವರಾಗಿರುತ್ತಾರೆ. ನಮ್ಮ ದೇಶದಲ್ಲಿಯೂ ಉಚಿತವಾದ ವಿದ್ಯಾಭ್ಯಾಸದ ಏರ್ಪಾಡು ಪರ್ಯಾಲೋಚನೆಯಲ್ಲಿರುವುದು. ಶೀಘ್ರದಲ್ಲಿಯೇ ಜಾರಿಗೆ ಬರಬಹುದು. ಪ್ರಜೆಗಳೆಲ್ಲರೂ ಸ್ವಶಕ್ತಿಯಿಂದ ಜೀವಿಸುವುದಕ್ಕೆ ಅರ್ಹರಾಗಬೇಕಾದರೆ ಯೂರೋಪ್, ಅಮೆರಿಕಾ ಖಂಡಗಳಲ್ಲಿ ಏನುಮಾಡುತ್ತಾರೋ ಅದನ್ನು ತಿಳಿದುಕೊಂಡು ಬರಬೇಕೆಂದು ನಮ್ಮ ಇನ್‌ಸ್ಪೆಕ್ಟರ್ ಜನರಲ್ ರವರಾದ ಮೆ॥ ಭಾಭಾ ಸಾಹೇಬರವರನ್ನು ಕಳುಹಿಸಿಕೊಟ್ಟಿದ್ದರು. ಅವರು ಶೀಘ್ರದಲ್ಲಿಯೇ ಈ ವಿಷಯಗಳಲ್ಲಿ ತಕ್ಕ ಏರ್ಪಾಡುಗಳನ್ನು ಮಾಡುವರು. ಜಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಎಂಬಸಕಲಕೈಗಾರಿಕೆಗಳಿಗೂ ಮಾತೃಸ್ಥಾನವಾದಕಲಾಭವನವು ಮೈಸೂರಿನಲ್ಲಿ ಸ್ಥಾಪಿಸಲ್ಪಡುವುದು. ಜನಗಳು ವಿದ್ಯಾಭಿವೃದ್ಧಿಗೋಸ್ಕರ ಏರ್ಪಡಿಸುವ ಕಲಾಭವನಗಳಿಗೂ, ಪಾಠಶಾಲೆಗಳಿಗೂ ಉದಾರವಾದ ಗ್ರಾಂಟುಗಳು ಕೊಡಲ್ಪಡುತ್ತಲಿರುವುವು. ಮೇಲೆ ಹೇಳಿದ ಪೆರ್ಷ ಫಂಡನ್ನು ಸ್ಥಾಪಿಸಿ ಪ್ರೈವೆಟ್ ಸ್ಕೂಲುಗಳೂ ಕೂಡ, ಗೌರ್ನಮೆಂಟ್ ಸ್ಕೂಲುಗಳೊಡನೆ ಪೋಟಾಪೋಟಿಯಿಂದ ಕೆಲಸಮಾಡುವಂತೆ ಏರ್ಪಾಡು ಮಾಡಿದರೆ ನಮ್ಮ ದೇಶವು ಅತ್ಯಂತ ಉನ್ನತಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ. ವಿಲಾಯತಿಯ ರಾಯಲ್ ಕಮಿಷ್ಟನವರು ಈ ವಿಷಯದಲ್ಲಿ ಮಾಡಿರುವ ಏರ್ಪಾಡುಗಳನ್ನು ಪರ್ಯಾಲೋಚಿಸಿ ಮದರಾಸ್,

ಗೌರ್ನರ್ ಸಾಹೇಬರವರು ಸೂಚಿಸುವುದನ್ನು ನೋಡಿ ಈ ಬಾಬಿನಲ್ಲಿ ನಮ್ಮ ಗೌರ್ನಮೆಂಟಿನಲ್ಲಿ ಈ ಏರ್ಪಾಡನ್ನು ಎಷ್ಟುಮಟ್ಟಿಗೆ ಆಚರಣೆಗೆ ತರಬಹುದೊ ಅದನ್ನು ಶ್ರೀಮತ್ ಮಹಾರಾಜರವರುಪರ್ಯಾಲೋಚಿಸಬಹುದು. ಗ್ರಾಮ್ಯಂಟೆಡ್ ಏಡ್ ಸ್ಕೂಲುಗಳ ಪಾಠಕರಿಗೆಲ್ಲಾ ಈಗ ಸದ್ಯಕ್ಕೆ ಗೌರ್ನಮೆಂಟ್ ಲೈಫ್ ಇನ್‌ಷೂರೆನ್ಸಿಗೆ ಸೇರುವುದಕ್ಕೆ ಅವಕಾಶ ಕೊಟ್ಟಾಗ್ಯೂ ಆದರಿಂದ ಎಷ್ಟೋ ಪ್ರಯೋಜನವಾಗುವುದು. ಈ ವಿಷಯವನ್ನು ಅನೇಕ ಪ್ರತಿನಿಧಿಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ಸರಕಾರಕ್ಕೆ ಅನೇಕವೇಳೆ ವಿಜ್ಞಾಪಿಸಿದರು. ಈ ವಿಷಯದಲ್ಲಿ ತಕ್ಕ ಏರ್ಪಾಡುಗಳು ಆಗುವುದೆಂದು ಬಹುಜನ ಪಾಠಕರು ನಿರೀಕ್ಷಿಸುತ್ತಲಿದ್ದಾರೆ,

ಗ ಣಿ ತ .

(1) 115 ಗಂಡಸರು ಅಥವಾ 805 ಹುಡುಗರು 8 ದಿವಸದಲ್ಲಿ 56 ಕೊಳಗ ರಾಗಿಯನ್ನು ಸಂಪಾದಿಸಿದರೆ, 75 ಗಂಡಸರು ಮತ್ತು 55 ಹುಡುಗರು ಸೇರಿ 23 ದಿವಸಗಳಲ್ಲಿ ಎಷ್ಟು ರಾಗಿಯನ್ನು ಸಂಪಾದಿಸುವರು?

ರೀತಿ :—115 ಗಂಡಸರು = 805 ಹುಡುಗರು

$$75 \quad ,, \quad = \frac{805 \times 75}{115} 525 \text{ ಹುಡುಗರು.}$$

ಲೆಕ್ಕದಲ್ಲಿ ಕೊಟ್ಟಿರುವುದು 75 ಗಂಡಸರು ಮತ್ತು 55 ಹುಡುಗರು ಎಂದು. ಆದುದರಿಂದ 525 ಹು. + 55 ಹು. = 580 ಹುಡುಗರು.

ಈಗ ಲೆಕ್ಕವು 805 ಹು. 8 ದಿನದಲ್ಲಿ 56 ಕೊ. ರಾಗಿ ಸಂಪಾದಿಸುತ್ತಾರೆ,

580 ಹು. 23 ದಿ. ಎಷ್ಟು ಸಂಪಾದಿಸುತ್ತಾರೆ

ಎಂದು ಆಯಿತು.

$\therefore$ 8 : 23 :: 56 ಕೊಳಗ ರಾಗಿ.

850 : 580

$$= \frac{56 \times 580 \times 23}{805 \times 8} = 116 \text{ ಕೊಳಗ.}$$

ಅಥವಾ $116 \div 20 = 5$ ಖಂ. 16 ಕೊ. ಸಂಪಾದಿಸುತ್ತಾರೆ.

ಅಭ್ಯಾಸ ಉದಾಹರಣೆ.

(1) 25 ಗಂಡಸರು ಅಥವಾ 75 ಹೆಂಗಸರು 16 ದಿನಗಳಲ್ಲಿ ರೂ. 5—5—4 ಗಳನ್ನು ಸಂಪಾದಿಸಿದರೆ 21 ಗಂಡಸರು ಮತ್ತು 27 ಹೆಂಗಸರು 25 ದಿನಗಳಲ್ಲಿ ಎಷ್ಟು ಸಂಪಾದಿಸುತ್ತಾರೆ?

(ಉತ್ತರ—10 ರೂ.)

(2) 50 ಗಂಡಸರು ಅಥವಾ 75 ಹುಡುಗರು 15 ದಿವಸಗಳಲ್ಲಿ 10 ಪಲ್ಲ ಅಕ್ಕಿಯನ್ನು ಸಂಪಾದಿಸಿದರೆ 35 ಗಂಡಸರು ಮತ್ತು 150 ಹುಡುಗರು 20 ದಿವಸಗಳಲ್ಲಿ ಎಷ್ಟು ಸೇರಕ್ಕಿಯನ್ನು ಸಂಪಾದಿಸುತ್ತಾರೆ?

(ಉತ್ತರ—3600 ಸೇರು.)

(3) 90 ಜನ ಗಂಡಸರು ಅಥವಾ 35 ಜನ ಹೆಂಗಸರು 16 ದಿನದಲ್ಲಿ 10 ಪೌ. 10 ಷಿ. ಸಂಪಾದಿಸಿದರೆ 50 ಜನ ಹೆಂಗಸರು ಎಷ್ಟು ಗಂಡಸರ ಸಹಾಯದಿಂದ 8 ದಿನದಲ್ಲಿ 18 ಪೌ. ಗಳನ್ನು ಸಂಪಾದಿಸುತ್ತಾರೆ?

(ಉತ್ತರ—180 ಗಂಡಸರು.)

(4) 16 ಜನ ಗಂಡಸರಾಗಲೀ 24 ಜನ ಹೆಂಗಸರಾಗಲಿ 6 ದಿನದಲ್ಲಿ ಪೌ. 3—4—5 ಗಳನ್ನು ಸಂಪಾದಿಸುತ್ತಾರೆ. ಆದರೆ 20 ಜನ ಗಂಡಸರು ಎಷ್ಟು ಹೆಂಗಸರ ಸಹಾಯದಿಂದ 30 ದಿನಗಳಲ್ಲಿ ಪೌ. 32—4—2 ಗಳನ್ನು ಸಂಪಾದಿಸುತ್ತಾರೆ?

(ಉತ್ತರ—18 ಜನ ಹೆಂಗಸರ ಸಹಾಯದಿಂದ.)

(2) ಮೇಲುಭಾಗದಲ್ಲಿ ಅಥವಾ ಅಂತರಿಕ್ಷದಲ್ಲಿ ಹಾರಿ ಹೋಗುವ ಗಿಣಿಗಳನ್ನು ಕುರಿತು ನೀವೆಷ್ಟೆಂದು (ನಿಮ್ಮ ಸಂಖ್ಯೆ ಎಷ್ಟೆಂದು) ಕೇಳಿದೊಬ್ಬನಿಗೆ ಅವು, ನಾವು ನಮ್ಮಷ್ಟು ನಮ್ಮರ್ಧ ನಮ್ಮಗಿರ್ದ ನೀನೂ ಕೂಡಿದರೆ 243 ಎಂದು ಹೇಳಿದವು. ಆದರೆ ಅವುಗಳೆಷ್ಟೆಂದು ತಿಳಿಯಬೇಕು?

ರೀತಿ:—

ಗಿಣಿಗಳ ಸಂಖ್ಯೆಯು ಗೊತ್ತಿಲ್ಲವಾದುದರಿಂದ ಆ ಸಂಖ್ಯೆಯು 1 ಎಂದು ಇಟ್ಟುಕೊಳ್ಳೋಣ.

ಆಗ ಲೆಕ್ಕದಲ್ಲಿ ಹೇಳಿದಂತೆ

ನಾವು $= 1$

ನಮ್ಮಷ್ಟು $= 1$

ನಮ್ಮರ್ಧ $= \frac{1}{2}$

ನಮ್ಮಗಿರ್ದ $= \frac{1}{2} \times \frac{1}{2} = \frac{1}{4}$

ಅಂತು ಒಟ್ಟು $2\frac{3}{4}$ ಗೆ ಪ್ರಶ್ನೆಮಾಡಿದವನ ಸಂಖ್ಯೆ 1 ಸೇರಲು 243 ಆಗುತ್ತದೆ,

$2\frac{3}{4} + 1 = 243$

$2\frac{3}{4} = 243 - 1 = 242$

$1 = \frac{242}{11} \times \frac{4}{11} = 88.$

ಆದುದರಿಂದ 1 ಸಂಖ್ಯೆಗೆ $= 88$ ಎಂದು ಆಯಿತು.

1 ಎನ್ನುವದೆ ಗಿಣಿಯು ಗುಂಪಿಗೆ ಸಮವಾಯಿತು.

ಆದುದರಿಂದ ಆ ಗಿಣಿಗಳ ಸಂಖ್ಯೆ $= 88$.

ಅಭ್ಯಾಸ ಉದಾಹರಣೆ.

(1) ನನ್ನಲ್ಲಿರುವ ಸಂದೂಕದಲ್ಲಿ ಕೆಲವು ವಸ್ತುಗಳಿವೆ. ಅವುಗಳಿರಡರಷ್ಟು ಮತ್ತು ಅವುಗಳ ಅರ್ಧದಷ್ಟು ಮತ್ತು ಅವುಗಳ ಮುಕ್ಕಾಲರಷ್ಟಕ್ಕೆ ಅವುಗಳನ್ನೂ ಕೂಡಿಸಿದರೆ ಬರುವುದರಲ್ಲಿ 5 ಪುಸ್ತುಕಗಳನ್ನು ತೆಗೆದರೆ 216 ಪುಸ್ತುಕಗಳಿರುತ್ತವೆ. ಆದರೆ ನನ್ನಲ್ಲಿರುವವು ಎಷ್ಟು?

(ಉತ್ತರ –52 ಪುಸ್ತುಕಗಳು.)

(3) ನನ್ನಲ್ಲಿ ಕೆಲವು ಗೋಲಿಗಳಿವೆ ಅವುಗಳಷ್ಟಕ್ಕೆ, ಅವುಗಳಅರ್ಧ, ಅವುಗಳ $\frac{3}{4}$ ಅವುಗಳ $\frac{3}{8}$ ರ ಮೇಲೆ 10 ಗೋಲಿಗಳನ್ನು ಸೇರಿಸಿದರೆ 240 ಗೋಲಿಗಳಾಗುತ್ತವೆ. ಆದರೆ ನನ್ನಲ್ಲಿರುವ ಗೋಲಿಗಳೆಷ್ಟು?

(ಉ.—80 ಗೋಲಿಗಳು.)

(3) ಒಬ್ಬನು ತನ್ನ ತೋಟದಲ್ಲಿ ನಿಂಬೆಯು ಹಣ್ಣುಗಳನ್ನು 1 ನೆಯಸಾರಿ ಕೆಲವೂ. 2 ನೆಯ ದಪ ಮೊದಲಿನಷ್ಟೂ, 3 ನೇ ಸಾರಿ 1 ಮತ್ತು 2 ನೆಯ ಸಾರಿಕೊಯ್ದಿದದ್ದಕ್ಕಿಂತಲೂ 30 ಹಣ್ಣು ಕದಿಮೆಯಾಗಿಯೂ ಕೊಯ್ದು ಅದಕ್ಕೆ ಪುನಃ 10 ಹಣ್ಣುಗಳನ್ನು ಸೇರಿಸಿದುದರಿಂದ

220 ಆದವು. ಆದರೆ ಮೊದಲು ಕೊಯ್ದ ಹಣ್ಣುಗಳೆಷ್ಟು?

(ಉ.—60 ಹಣ್ಣುಗಳು.)

(3) 24 ಹುಡುಗರೂ 50 ಹೆಂಗಸರೂ 1 ಕೆಲಸವನ್ನು 24 ದಿವಸದಲ್ಲಿ ಮಾಡುವರು. 36 ಹುಡುಗರೂ 32 ಹೆಂಗಸರೂ 2 ರಷ್ಟು ಕೆಲಸವನ್ನು ಎಷ್ಟು ದಿವಸಗಳಲ್ಲಿ ಮಾಡುವರು?

(ಷರಾ) ಒಬ್ಬ ಹುಡುಗನು 2 ದಿನದಲ್ಲಿ ಮಾಡುವ ಕೆಲಸವನ್ನು ಒಬ್ಬ ಹೆಂಗಸು 3 ದಿನದಲ್ಲಿ ಮಾಡುತ್ತಾಳೆ?

ರೀತಿ:—ಒಬ್ಬ ಹುಡುಗನು 2 ದಿನದಲ್ಲಿ 1 ಕೆಲಸವನ್ನು ಮಾಡುತ್ತಾನೆ.

ದಿ. 1 $\frac{1}{2}$

ಒಬ್ಬ ಹೆಂಗಸು 3 ದಿನದಲ್ಲಿ 1 ಕೆಲಸವನ್ನು ಮಾಡುತ್ತಾಳೆ.

ದಿ. 1 $\frac{1}{3}$

$\therefore \frac{1}{2} : \frac{1}{3}$ :: ಹುಡುಗ : ಹೆಂಗಸಿನ ಕೆಲಸಕ್ಕೆ 1 ಹು. : 1 ಹೆಂ. ಬೀಕು

1 : 1 2 : 3

$\therefore$ 2 ಹುಡುಗರಿಗೆ—3 ಹೆಂಗಸರು ಸಮ.

ಈಗ ಲೆಕ್ಕದಂತೆ 2 ಹುಡುಗರಿಗೆ 3 ಹೆಂಗಸರು ಸಮ.

$$24 \qquad \frac{3 \times 24}{2} = 36 \text{ ಹೆಂ.}$$

ಲೆಕ್ಕದಲ್ಲಿರುವುದು 50 ಹೆಂ. ಜುಮ್ಲಾ $36 + 50 = 86$ ಹೆಂ.

ಮತ್ತು 2 ಹುಡುಗರಿಗೆ 3 ಹೆಂ. ಸಮ.

$$36 \qquad \frac{3 \times 36}{2} = 54 \text{ ಹೆಂ.}$$

54 ಹೆಂ. + 32 ಹೆಂ. = 86 ಹೆಂ ಆಯಿತು.

$\therefore$ 86 ಹುಡುಗರು 1 ಕೆಲಸವನ್ನು 24 ದಿನದಲ್ಲಿ ಮಾಡುತ್ತಾರೆ.

86 ,, 2 ,, ಎಷ್ಟು ,,

$\therefore$ 1 : 2 :: 24 ದಿ.

ಆದ್ದರಿಂದ 2 ರಷ್ಟು ಕೆಲಸವನ್ನು 48 ದಿನಗಳಲ್ಲಿ ಮಾಡುತ್ತಾರೆ.

ಬಿ. ಅನಂತಾಚಾರ್.

ನಾವು $= 1$

ನಮ್ಮಷ್ಟ $= 1$

ನಮ್ಮರ್ಧ $= \frac{1}{2}$

ನಮ್ಮಗಿರ್ದ $= \frac{1}{2} \times 2 = \frac{1}{4}$

ಅಂತು ಒಟ್ಟು $2\frac{3}{4}$ ಗೆ ಪ್ರಶ್ನೆಮಾಡಿದವನ ಸಂಖ್ಯೆ 1 ಸೇರಲು

243 ಆಗುತ್ತದೆ,

$2\frac{3}{4} + 1 = 243$

$2\frac{3}{4} = 243 - 1 = 242$

$1 = {}^{2}\frac{4}{1}{}^{2} \times \frac{4}{11} = 88.$

ಆದುದರಿಂದ 1 ಸಂಖ್ಯೆಗೆ $= 88$ ಎಂದು ಆಯಿತು.

1 ಎನ್ನುವದೆ ಗಿಣಿಯ ಗುಂಪಿಗೆ ಸಮವಾಯಿತು.

ಆದುದರಿಂದ ಆ ಗಿಣಿಗಳ ಸಂಖ್ಯೆ $= 88$.

ಅಭ್ಯಾಸ ಉದಾಹರಣೆ.

(1) ನನ್ನಲ್ಲಿರುವ ಸಂದೂಕದಲ್ಲಿ ಕೆಲವು ವಸ್ತುಗಳಿವೆ. ಅವುಗಳೆರಡರಷ್ಟು ಮತ್ತು ಅವುಗಳ ಅರ್ಧದಷ್ಟು ಮತ್ತು ಅವುಗಳ ಮುಕ್ಕಾಲರಷ್ಟಕ್ಕೆ ಅವುಗಳನ್ನೂ ಕೂಡಿಸಿದರೆ ಬರುವುದರಲ್ಲಿ 5 ಪುಸ್ತಕಗಳನ್ನು ತೆಗೆದರೆ 216 ಪುಸ್ತಕಗಳಿರುತ್ತವೆ. ಆದರೆ ನನ್ನಲ್ಲಿರುವವು ಎಷ್ಟು?

(ಉತ್ತರ – 52 ಪುಸ್ತಕಗಳು.)

(3) ನನ್ನಲ್ಲಿ ಕೆಲವು ಗೋಲಿಗಳಿವೆ ಅವುಗಳಷ್ಟಕ್ಕೆ, ಅವುಗಳಅರ್ಧ, ಅವುಗಳ $\frac{3}{4}$ ಅವುಗಳ $\frac{5}{8}$ ರ ಮೇಲೆ 10 ಗೋಲಿಗಳನ್ನು ಸೇರಿಸಿದರೆ 240 ಗೋಲಿಗಳಾಗುತ್ತವೆ. ಆದರೆ ನನ್ನಲ್ಲಿರುವ ಗೋಲಿಗಳೆಷ್ಟು?

(ಉ.—80 ಗೋಲಿಗಳು.)

(3) ಒಬ್ಬನು ತನ್ನ ತೋಟದಲ್ಲಿ ನಿಂಬೆಯ ಹಣ್ಣುಗಳನ್ನು 1 ನೆಯಸಾರಿ ಕೆಲವೂ. 2 ನೆಯ ದಪ ಮೊದಲಿನಷ್ಟೂ, 3 ನೇ ಸಾರಿ 1 ಮತ್ತು 2 ನೆಯ ಸಾರಿಕೊಯಿದದ್ದಕ್ಕಿಂತಲೂ 30 ಹಣ್ಣು ಕಡಿಮೆಯಾಗಿಯೂ ಕೊಯಿದು ಅದಕ್ಕೆ ಪುನಃ 10 ಹಣ್ಣುಗಳನ್ನು ಸೇರಿಸಿದುದರಿಂದ

220 ಆದವು. ಆದರೆ ಮೊದಲು ಕೊಯಿದ ಹಣ್ಣುಗಳೆಷ್ಟು?

(ಉ.—60 ಹಣ್ಣುಗಳು.)

(3) 24 ಹುಡುಗರೂ 50 ಹೆಂಗಸರೂ 1 ಕೆಲಸವನ್ನು 24 ದಿವಸದಲ್ಲಿ ಮಾಡುವರು. 36 ಹುಡುಗರೂ 32 ಹೆಂಗಸರೂ 2 ರಷ್ಟು ಕೆಲಸವನ್ನು ಎಷ್ಟು ದಿವಸಗಳಲ್ಲಿ ಮಾಡುವರು?

(ಷರಾ) ಒಬ್ಬ ಹುಡುಗನು 2 ದಿನದಲ್ಲಿ ಮಾಡುವ ಕೆಲಸವನ್ನು ಒಬ್ಬ ಹೆಂಗಸು 3 ದಿನದಲ್ಲಿ ಮಾಡುತ್ತಾಳೆ?

ರೀತಿ :—ಒಬ್ಬ ಹುಡುಗನು 2 ದಿನದಲ್ಲಿ 1 ಕೆಲಸವನ್ನು ಮಾಡುತ್ತಾನೆ.

ದಿ. 1 $\frac{1}{2}$

ಒಬ್ಬ ಹೆಂಗಸು 3 ದಿನದಲ್ಲಿ 1 ಕೆಲಸವನ್ನು ಮಾಡುತ್ತಾಳೆ.

ದಿ. 1 $\frac{1}{3}$

$\therefore \frac{1}{2} : \frac{1}{3} ::$ ಹುಡುಗ : ಹೆಂಗಸಿನ ಕೆಲಸಕ್ಕೆ 1 ಹು. : 1ಹೆಂ. ಬೇಕು

1 : 1 2 : 3

$\therefore$ 2 ಹುಡುಗರಿಗೆ—3 ಹೆಂಗಸರು ಸಮ.

ಈಗ ಲೆಕ್ಕದಂತೆ 2 ಹುಡುಗರಿಗೆ 3 ಹೆಂಗಸರು ಸಮ.

$$24 \qquad \frac{3 \times 24}{2} = 36 \text{ ಹೆಂ.}$$

ಲೆಕ್ಕದಲ್ಲಿರುವುದು 50 ಹೆಂ. ಜುಮ್ಲಾ $36 + 50 = 86$ ಹೆಂ.

ಮತ್ತು 2 ಹುಡುಗರಿಗೆ 3 ಹೆಂ ಸಮ.

$$36 \qquad \frac{3 \times 36}{2} = 54 \text{ ಹೆಂ.}$$

54 ಹೆಂ. + 32 ಹೆಂ. = 86 ಹೆಂ ಆಯಿತು.

$\therefore$ 86 ಹುಡುಗರು 1 ಕೆಲಸವನ್ನು 24 ದಿನದಲ್ಲಿ ಮಾಡುತ್ತಾರೆ.

86 ,, 2 ,, ಎಷ್ಟು

$\therefore$ 1 : 2 :: 24 ದಿ.

ಆದ್ದರಿಂದ 2 ರಷ್ಟು ಕೆಲಸವನ್ನು 48 ದಿನಗಳಲ್ಲಿ [illegible]

ಬಿ. ಅನಂತಾಚಾರ್.

ಕನ್ನಡ ಗ್ರಂಥಕರ್ತರ ಸಮ್ಮೇಲನವು.

——:o:——

ಈ ವರ್ಷ "ಕರ್ಣಾಟಕ ವಿದ್ಯಾವರ್ಧಕ ಸಂಘ" ದ ವಾರ್ಷಿಕ ಪರೀಕ್ಷೆಯುಸಂಗಡ ತಾರೀಖು ೨—೩ ನೇ ಜೂನ್ ಸರ್ ೧೯೦೩ ನೇ ಇಸವಿ ದಿವಸ "ಕನ್ನಡ ಗ್ರಂಥಕರ್ತರ ಸಮ್ಮೇಲನವನ್ನು" ಕೂಡಿಸುವುದು ಗೊತ್ತಾದದ್ದು ತಮಗೆ ವಿದಿತವಿರುತ್ತದಷ್ಟೇ. ಕನ್ನಡದ ಈಗಿನ ಹೀನಸ್ಥಿತಿಯನ್ನು ತಮಗೆ ಒಡೆದು ಹೇಳಬೇಕಂತಿಲ್ಲ. ಈ ಸಮ್ಮೇಲನವನ್ನು ವಿಜೃಂಭಣೆಯಿಂದ ನೆರವೇರಿಸುವ ಭಾರವು ತಮ್ಮಂಥ ಕನ್ನಡಭಾಷೆಯ ಆಧಾರಸ್ತಂಭರಾದವರನ್ನು ಕೂಡಿರುತ್ತದೆ. ಕಾರಣ ತಾವು ಈ ಸಮಾರಂಭಕ್ಕೆ ತಮ್ಮ ಮಿತ್ರರೊಡನೆ ದಯವಾಡಿ ಬಂದು ಈ ಮಹತ್ಕಾರ್ಯವನ್ನು ನೆರವೇರಿಸುವಿರೆಂದು ಕೋರುತ್ತೇವೆ.

ಕನ್ನಡ ಗ್ರಂಥಕರ್ತರ ಸಮ್ಮೇಲನದ ಮುಂದೆ ಬರುವ ವಿಷಯಗಳು ಯಾವವಂದರೆ:—

೧. ಕನ್ನಡ ನಾಡಿನ ಬೇರೆಬೇರೆ ಭಾಗಗಳಲ್ಲಿ ಕಂಡುಬರುವ ಭಾಷಾಭೇದವು ನಷ್ಟವಾಗುವುದು ಸಂಭವನೀಯವೋ?

೨. ಹಾಗಾದ ಪಕ್ಷದಲ್ಲಿ, ಬೇರೆ ಬೇರೆ ಜನರು ಪ್ರಯೋಗಿಸುವ ಶಬ್ದರಚನೆಯನ್ನೂ ಶಬ್ದಗಳ ರೂಪಸಿದ್ಧತೆಯನ್ನೂ ಕುರಿತು ಆಲೋಚಿಸಿ, ಒಂದೇಬಗೆಯ ರಚನೆಯನ್ನೂ ಸಿದ್ಧತೆಯನ್ನೂ ನೆಲೆಗೊಳಿಸುವುದು.

೩. ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಕರ್ತರ ಗ್ರಂಥಸಂಶೋಧನವೂ ಚರಿತ್ರ ಲೇಖನವೂ.

೪. ಸದ್ಯಸ್ಥಿತಿಗೆ ಅನುಗುಣವಾದ ಗ್ರಂಥಗಳನ್ನು ಅಂದರೆ ಶಾಸ್ತ್ರೀಯ ಮುಂತಾದ ಗ್ರಂಥಗಳನ್ನು ಬರಿಸುವ ಅವಶ್ಯಕತೆ.

೫. ಮೇಲಿನ ೧-೨ ನೇ ಕಲಮುಗಳಿಗೆ ಅನುಸರಿಸಿ ಒಂದು ಕನ್ನಡ ಕೋಶವನ್ನು ಸಿದ್ಧಪಡಿಸುವುದು.

೬. ಕನ್ನಡಿಗರಲ್ಲಿ ಕಂಡುಬರುವ ಸ್ವಭಾಷೆಯ ಔದಾಸೀನ್ಯವನ್ನು ಹೋಗಲಾಡಿಸಿ, ಜನರ ಅಭಿರುಚಿಯನ್ನು ಜಾಗ್ರತೆಗೊಳಿಸುವ ಉಪಾಯಗಳು.

೭. ಪ್ರಾಚೀನ ಕಾವ್ಯಗ್ರಂಥಗಳಲ್ಲಿ ಯಾವ ಗ್ರಂಥಗಳ ಭಾಷಾಶೈಲಿಯನ್ನು ಅನುಸರಿಸುವುದು ಸದ್ಯಃ ಸ್ಥಿತಿಗೆ ಶ್ರೇಯಸ್ಕರವು.

೮. ಶಾಸ್ತ್ರೀಯ ವಿಷಯುಗಳಲ್ಲಿ ಉಪಯೋಗಿಸುವುದಕ್ಕೆ ಬೇಕಾಗುವ ಪಾರಿಭಾಷಿಕ ಶಬ್ದಗಳ ವಿಮರ್ಶನೆಯು,

ತಮ್ಮ ಸೇವಕರು,

ನಾರಾಯಣ ಗುರುನಾಥ ಕರಗುದರಿ ಬಿ. ಎ., ಎಲ್. ಎಲ್. ಬಿ.
ಕ. ವಿ. ವ. ಸಂಘ ಗದಿಗೆಯ್ಯಾ ಹುಚ್ಚಯ್ಯಾ ವಿಭೂತಿ ವಕೀಲ,
ಧಾರವಾಡ. ತಾ|| ೧೪—೪—೦೩. ಕಾರ್ಯದರ್ಶಿಗಳು.

ವಿದ್ಯಾದಾಯಿನಿ.

ಭಾಗ ೧೫.] ಮೇ—೧೯೦೩. [ಸಂಚಿಕೆ ೫.

ಬ್ರಹ್ಮಚರ್ಯಾಶ್ರಮ.

ಈ ಪ್ರಪಂಚದಲ್ಲಿ ಮನುಷ್ಯರು, ಪಶುಗಳು, ಪಕ್ಷಿಗಳು, ಮೃಗಗಳು ಮುಂತಾದ ನಾನಾ ಪ್ರಾಣಿಗಳು ಗುಂಪುಗುಂಪಾಗಿ ಜೀವಿಸುತ್ತಿರುವವಲ್ಲವೆ? ಅವುಗಳಲ್ಲಿ ಮನುಷ್ಯನ ಜೀವನ ಚರಿತ್ರೆಯು ಬಹಳ ಶ್ಲಾಘ್ಯವಾದುದೆಂದು ಹೇಳಬಹುದು. ಏಕೆಂದರೆ ಮನುಷ್ಯನಿಗೆ ಇತರ ಪ್ರಾಣಿಗಳಿಗಿಂತಲೂ ಅತ್ಯುತ್ಕೃಷ್ಟವಾದ ಬುದ್ಧಿಯು ಸಹಾಯವೊಂದುಂಟು. ಈ ಅಪೂರ್ವವಾದ ಬುದ್ಧಿಯ ಬಲದಿಂದಲೇ ಮನುಷ್ಯನು ಪೂರ್ವಾಪರ ವಿಮರ್ಶೆಯನ್ನೂ ಯುಕ್ತಾಯುಕ್ತ ವಿಚಾರವನ್ನೂ ಮಾಡಿ ಎಲ್ಲಾ ಕೆಲಸಗಳನ್ನೂ ಸಾಧಿಸಬಲ್ಲನು. ಬುದ್ಧಿಶಕ್ತಿಯಿಂದಲೇ ಈ ಪ್ರಪಂಚದ ಅನೇಕ ತತ್ವಗಳನ್ನು ಕಂಡುಹಿಡಿದು ಬಹು ಮೇಲಾಗಿ ಬಾಳುತ್ತಿರುವನು. ಹುಟ್ಟಿದ ಲಾಗಾಯಿತು ಅಂತ್ಯದ ವರೆಗೂ ಈ ನಡುವೆ ಇರುವ ಮನುಷ್ಯನ ಬಾಳಿಕೆಯನ್ನು ಜೀವಮಾನವೆನ್ನುವರಷ್ಟೆ.

ನಮ್ಮ ಶರೀರಗಳಿಗೆ ಬಾಲ್ಯ, ಯೌವನ, ವಾರ್ಧಕ್ಯ ಅಂದರೆ ಮುಪ್ಪು ಎಂದು ಮೂರುಸ್ಥಿತಿಗಳುಂಟು ಎಂಬುದು ಎಲ್ಲರಿಗೂ ತಿಳಿದೇಇದೆ. ನಮ್ಮ ಶರೀರವು ಹುಟ್ಟಿದ್ದು ಮೊದಲುಗೊಂಡು ಕ್ರಮಕ್ರಮವಾಗಿ ಬೆಳೆಯುತ ಬೆಳೆಯುತ್ತ ಒಂದು ಉನ್ನತವಾದ ಸ್ಥಿತಿಗೆ ಏರಿ ಆಮೇಲೆ ಕ್ರಮವಾಗಿ ಕ್ಷಯಿಸುತ್ತಾ ಬರುವುದು ಸಹಜವಾಗಿದೆ. ಬುದ್ಧಿಶಕ್ತಿಯೂ ನಮ್ಮ ದೇಹಸ್ಥಿತಿಗೆ ಅನುಸಾರವಾಗಿ ಇರುವುದು. ಬೀಜದಲ್ಲಿಯೇ ವೃಕ್ಷವು ಸೂಕ್ಷ್ಮರೂಪದಿಂದ ಇರುವಹಾಗೆ ಹುಟ್ಟುವಾಗಲೇ ದೇಹದಲ್ಲಿ ಬುದ್ಧಿಶಕ್ತಿಯು ಸೂಕ್ಷ್ಮವಾಗಿದ್ದು ದೇಹವು ಅಭಿವೃದ್ಧಿಗೆ ಬಂದಹಾಗೆಲ್ಲಾ ತಾನೂ ವಿಕಾಸವನ್ನು ಹೊಂದುವುದು. ಆದರೆ ಬುದ್ಧಿ ವಿಕಾಸಕ್ಕೆ ಯದ್ಯಪಿ ಒಳ್ಳೇ

ಉಪಾಧ್ಯಾಯರೂ, ನಮ್ಮ ಸುತ್ತಮುತ್ತಲೂ ಇರುವ ಸಹವಾಸದವರೂ ಕೂಡ ಕಾರಣರು. ಆದರೂ ದೇಹದ ಬೆಳೆವಳಿಗೆಯು ಬಹುಮುಖ್ಯಕಾರಣವು. ದೇಹವು ರಕ್ತಮುಂತಾದ ಸಪ್ತಧಾತುಗಳ ಬಲದಿಂದ ಪುಷ್ಟಿಯುಳ್ಳದ್ದಾಗಿದ್ದರೆ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಎಂಬ ಇಂದ್ರಿಯಗಳೂ ಮತ್ತು ಮೆದಳೂ ಪುಷ್ಟವಾಗಿರುತ್ತವೆ. ಇವುಗಳು ಸರಿಯಾದ ಸ್ಥಿತಿಯುಲ್ಲಿದ್ದರೆ ಬುದ್ಧಿವಿಕಾಸಕ್ಕೆ ಅವಕಾಶವುಂಟು. ಇಂದ್ರಿಯಗಳೂ ಮೆದಳೂ ಸಮರ್ಥವಾಗಿದ್ದರಲ್ಲವೆ ಕ್ರಮಕ್ರಮವಾಗಿ ನಾವು ಬಾಲ್ಯದಿಂದಲೂ ಇವುಗಳ ಮೂಲಕ ಪ್ರಪಂಚದಲ್ಲಿರುವ ವಸ್ತುಗಳ ಪರಿಜ್ಞಾನವನ್ನು ಪಡೆದು ನಾನಾ ವಿಧವಾದ ಸುಖಸಾಧನಗಳನ್ನು ಏರ್ಪಡಿಸಿಕೊಳ್ಳುವುದಕ್ಕೆ ಶಕ್ತರಾಗಬಹುದು.

"ಶರೀರಮಾದ್ಯಂಖಲು ಧರ್ಮಸಾಧನಂ"

ಅಂದರೆ ಈ ಲೋಕದಲ್ಲಿ ನಾವು ಯಾವ ಒಳ್ಳೇ ಕೆಲಸವನ್ನು ಮಾಡುವುದಕ್ಕೂ ಶರೀರವೇ ನಮಗೆ ಮುಖ್ಯ ಸಾಧನವು.

ಈ ಪ್ರಪಂಚವೆಲ್ಲವೂ ಯಾವದೋ ಒಂದು ವಿಧವಾದ ಕಟ್ಟುಪಾಡಿನಿಂದ ನಿಂತಿರುವುದು. ಅದರಂತೆಯೇ ಮನುಷ್ಯನ ಜೀವಮಾನವು ಕೂಡ ಒಂದು ಕಟ್ಟುಪಾಡಿಗೆ ಒಳಗಾಗಿಯೇ ಇರುವುದು. ಆ ಕಟ್ಟುಪಾಡೇ ಧರ್ಮವೆನಿಸುವುದು. ಅಂಥಾ ಕಟ್ಟುಪಾಡಿನ ಅಂದರೆ ಧರ್ಮದ ಬಲದಿಂದಲೇ ಮನುಷ್ಯನ ಜೀವಮಾನದ ಎಲ್ಲಾ ವಿಧವಾದ ನಡವಳಿಕೆಗಳೂ ಒಂದು ಕ್ರಮವನ್ನು ಅನುಸರಿಸುವುದು ಅತ್ಯಾವಶ್ಯಕವು. ಮತ್ತು ನಮ್ಮಗಳ ಪ್ರತಿ ಶರೀರದಲ್ಲಿಯೂ ಜೀವಾತ್ಮವೆಂಬುದೊಂದಿರುವುದಲ್ಲವೆ? ನೀರು ಶುದ್ಧಿ ಅಂದರೆ ಫಿಲ್ಟರು ಮಾಡುವುದರಿಂದ ಪಾರಿಶುದ್ಧ್ಯವನ್ನು ಹೊಂದುವಂತೆ ಜೀವಾತ್ಮನ ಜ್ಞಾನಶಕ್ತಿಯು ನಮ್ಮ ಜೀವಮಾನದ ಒಳ್ಳೇ ನಡತೆಗಳಿಂದ ಮೇಲ್ಮೆಯನ್ನು ಪಡೆಯುವುದು. ಎಲ್ಲಾ ಮನುಷ್ಯನ ಜೀವಮಾನಕ್ಕೂ ಇದೇ ಮುಖ್ಯೋದ್ದೇಶ್ಯವು. ಪ್ರತಿ ಮನುಷ್ಯನ ಜೀವಮಾನವು ಒಳ್ಳೇರೀತಿಯಿಂದ ಕೂಡಿದ್ದರೆ ಅವನ ಜೀವಮಾನವು ಉತ್ತಮವೆನಿಸುವುದು. ದೋಷಗಳಿಂದ ಕೂಡಿದ್ದರೆ ಅವನ ಜೀವಮಾನವು ಕೆಟ್ಟದ್ದು ಎನ್ನಿಸಿಕೊಳ್ಳಲ್ಪಡುತ್ತದೆ. ಆದುದರಿಂದ ಈ ಸೂಕ್ಷ್ಮವನ್ನು ತಿಳಿದೇ ನಮ್ಮ ಪ್ರಾಚೀನರಾದ ತತ್ವಜ್ಞಾನಿಗಳು ಪ್ರತಿಯೊಬ್ಬನೂ ತನ್ನ ದೇಹವನ್ನು ಬಾಲ್ಯದಿಂದಲೂ ಸರಿಯಾಗಿ ರಕ್ಷಿಸಿಕೊಂಡು ಉತ್ತಮವಾದ ಏಳಿಗೆಯನ್ನು ಪಡೆಯಲಿ ಎಂದು ನಮ್ಮ ಜೀವಮಾನವನ್ನು ನಾಲ್ಕುಭಾಗವಾಗಿ ವಿಂಗಡಿಸಿರುವರು.

ಈ ಭಾಗಗಳಿಗೆ ಆಶ್ರಮವೆಂತಲೂ ಮತ್ತೊಂದು ಹೆಸರು. ಅವು ಯಾವವೆಂದರೆ:— ಬ್ರಹ್ಮಚರ್ಯ, ಗೃಹಸ್ಥತೆ, ವಾನಪ್ರಸ್ಥ, ಸನ್ಯಾಸ;

ಬ್ರಹ್ಮಚರ್ಯಾಶ್ರಮ—ಬ್ರಹ್ಮವೆಂದರೆ ವೇದವು. ಬ್ರಹ್ಮಚರ್ಯ್ಯ ಎಂದರೆ ವೇದವನ್ನು ತಿಳಿದುಕೊಳ್ಳಲು ತಕ್ಕ ಆಚರಣೆ. ಅಂದರೆ ಇಂದ್ರಿಯ ನಿಗ್ರಹಪೂರ್ವಕವಾಗಿ ದೇಹದಾರ್ಢ್ಯವನ್ನು ಸಂಪಾದಿಸಿ ವಿದ್ಯಾಭ್ಯಾಸ ಮಾಡುವ ಸ್ಥಿತಿ.

ಗೃಹಸ್ಥತೆ—ಮನೇಮಾಡಿ ಹೆಂಡತಿ ಮಕ್ಕಳು ಮುಂತಾದವರೊಡನೆ ಬಾಳುವುದು.

ವಾನಪ್ರಸ್ಥ—ವಿರಕ್ತಿ ಪೂರ್ಣವನ್ನು ಹಿಡಿಯುವುದು.

ಸನ್ಯಾಸ—ಸರ್ವಸಂಗ ಪರಿತ್ಯಾಗವಾಡಿ ಮೋಕ್ಷಕ್ಕೆ ಸಿದ್ಧನಾಗುವುದು.

ಪ್ರತಿಯೊಬ್ಬನೂ ಈ ನಾಲ್ಕು ಸ್ಥಿತಿಗಳನ್ನೂ ಕ್ರಮವಾಗಿ ಆಶ್ರಯಿಸಿಯೇ ತನ್ನ ಜೀವಮಾನವನ್ನು ಪುಗಿಸಿಕೊಳ್ಳಬೇಕು. ಕ್ರಮವನ್ನು ತಪ್ಪಿ ಒಂದು ಸ್ಥಿತಿಯನ್ನು ಬಿಟ್ಟು ಮತ್ತೊಂದನ್ನು ಆಶ್ರಯಿಸುವುದರಿಂದ ತಕ್ಕ ಫೋಲ್ಮೈಯುಂಟಾಗಲಾರದು. ಒಂದು ಆಶ್ರಮದಲ್ಲಿದ್ದು ಅದರಲ್ಲಿ ನಡೆಸಬೇಕಾದ ನಡೆವಳಿಕೆಗಳನ್ನು ಪೂರ್ಣವಾಗಿ ನಡೆಸಿದಮೇಲೆಯೇ ಅದರ ಮೇಲಣ ಮತ್ತೊಂದಾಶ್ರಮಕ್ಕೆ ಹೋಗಬೇಕು. ಹಾಗೆ ಮಾಡುವುದರಿಂದ ನಮ್ಮಗಳ ಜೀವಮಾನವು ಸರಿಯಾಗಿ ನಡೆಯುವುದಕ್ಕೂ, ನಮ್ಮ ಜೀವಾತ್ಮನ ಜ್ಞಾನಶಕ್ತಿಯು ಹೆಚ್ಚಿ ಪ್ರಕಾಶಿಸುವುದಕ್ಕೂ ನಮ್ಮ ಜನಾಂಗವು ಒಂದು ಸರಿಯಾದ ಕ್ರಮದಿಂದ ಇರುವುದಕ್ಕೂ ಅವಕಾಶವಾಗುವುದು ಆದರೆ ಶ್ರೀ ಶಂಕರಾಚಾರ್ಯರು ಬ್ರಹ್ಮಚರ್ಯಾಶ್ರಮದಿಂದಲೇ ಸನ್ಯಾಸವನ್ನು ಅಂಗೀಕರಿಸಿದರು. ಮತ್ತು ಅಶ್ವತ್ಥಾಮ, ಭೀಷ್ಮ, ಶುಕಮಹರ್ಷಿ, ಹನುಮಂತ ಈ ಮೊದಲಾದವರು ಯಾವಜ್ಜೀವವೂ ಬ್ರಹ್ಮಚಾರಿಗಳಾಗಿಯೇ ಇದ್ದರು. ಆದರೂ ಇದು ಸರ್ವಸಾಧಾರಣವಾದ ಕ್ರಮವಲ್ಲ. ಎಲ್ಲಿಯೋ ಅಪೂರ್ವವಾಗಿ ಕೆಲವು ಮಹಾತ್ಮರಿಗೆ ಮಾತ್ರ ಇದು ಸಲ್ಲುತ್ತದೆ.

ಇನ್ನು ಪೂರ್ವಕಾಲದಲ್ಲಿದ್ದ ಬ್ರಹ್ಮಚರ್ಯಾಶ್ರಮದ ಆಚರಣೆಗಳ ಪೈಕಿ ಮುಖ್ಯವಾದ ಕೆಲವನ್ನು ಈಗ ನೋಡೋಣ:—

ಉಪನಯನ ಎಂದರೆ ಹುಡುಗನನ್ನು ಗುರುವಿನಹತ್ತರಕ್ಕೆ ಸೇರಿಸುವುದು. ಈ ಕರ್ಮದ ಆಚರಣೆಯು ಆಗಾಯಿತು ಬ್ರಹ್ಮಚರ್ಯಾಶ್ರಮವು ಆರಂಭವಾಗುವುದು. ಅಂದಿನಿಂದ ಹುಡುಗನು ವಿದ್ಯಾಭ್ಯಾಸಕ್ಕಾಗಿ ಕಡೆಯ ಪಕ್ಷ ಹನ್ನೆರಡು ವರುಷವಾದರೂ ಗುರುವಿನ ಅಧೀನಮಾಡಲ್ಪಡುತ್ತಿದ್ದನು. ಈ ಬ್ರಹ್ಮಚರ್ಯಾಶ್ರಮವು ಮು

ಗಿವವರೆಗೂ ಅವನು ಗುರುವಿನೊಡನೆಯೇ ಇರಬೇಕು. ಹಾಗೆ ಗುರುವಿನ ಹತ್ತಿರ ವಾಸಮಾಡುವಾಗ ವಿದ್ಯಾರ್ಥಿಯ ಉಡುಪು ಮುಂತಾದವು ಡಂಭವಿಲ್ಲದೆ ಬಹುಸುಲಭವಾಗಿಯೂ, ಸ್ನಾನ ಭೋಜನ ಮೊದಲಾದ ಕೆಲವು ಆಚಾರಗಳು ಸ್ವಲ್ಪ ಕಠಿನವಾಗಿಯೂ ಇದ್ದವು.

ಸೂರ್ಯೋದಯಕ್ಕೆ ಮುಂಚೆಯೇ ಎದ್ದು ಸ್ನಾನಮಾಡಿ ಸೂರ್ಯೋದಯವಾಗುವವರಗೂ ಸಂಧ್ಯಾವಂದನೆ ಮಾಡುತ್ತಿದ್ದನು. ಸೂರ್ಯೋದಯವಾದಮೇಲೂ ನಿದ್ರೆಮಾಡುತ್ತಿದ್ದಲ್ಲಿ, ಅಸ್ತಮಯದ ವರೆಗೂ ಉಪವಾಸವಿರುತ್ತಾ ಜಪಮಾಡುತ್ತಿರಬೇಕು. ಪ್ರತಿದಿನವೂ ಭಿಕ್ಷಾನ್ನವೆತ್ತಿ ಅದನ್ನು ಗುರುವಿನ ಹತ್ತರವಿಟ್ಟು ಗುರುವು ತನಗೆ ಕೊಟ್ಟಷ್ಟನ್ನು ಸಂತೋಷದಿಂದ ಸ್ವೀಕರಿಸಬೇಕು. ವಿದ್ಯೆಯಸ್ಸು ಕಲಿಯುವುದರಿಂದಲೂ, ಗುರುಸೇವೆಯಿಂದಲೂ ಹಗಲನ್ನೆಲ್ಲಾ ಕಳೆದು ಸಾಯಂಕಾಲವಾದ ಕೂಡಲೆ ನಕ್ಷತ್ರ ಕಾಣುವವರಿಗೂ ಸಂಧ್ಯಾವಂದನೆ ಮಾಡಬೇಕು. ಆಮೇಲೆ ಎರಡನೆ ಸಾರಿ ಊಟಮಾಡುವುದು. ಈ ಎರಡು ಊಟಗಳ ನಡುವೆ ಏನನ್ನೂ ತಿನ್ನಕೂಡದು. ಆಹಾರವಿಷಯದಲ್ಲಿ ಮಿತವಾಗಿರಬೇಕೆಂದು ನಿಯಮವಿತ್ತು. ಮದ್ಯ, ಮಾಂಸ, ಗಂಧ, ಪುಷ್ಪ, ವಿಧವಿಧವಾದ ವಸ್ತ್ರಗಳು, ಅಭ್ಯಂಜನ, ಜೂಜು, ವಿನೋದದ ಹರಟೆ, ಸುಳ್ಳು, ಅನ್ಯರಿಗೆ ಬಾಧೆಕೊಡುವುದು, ಪ್ರಾಣಿಗಳನ್ನು ಹಿಂಸಿಸುವುದು, ಸ್ತ್ರೀಯರನ್ನು ನೋಡುವುದು, ಮುಟ್ಟುವುದು ಇವುಗಳನ್ನೆಲ್ಲಾ ವಿದ್ಯಾರ್ಥಿಯು ಸಂಪೂರ್ಣವಾಗಿ ವರ್ಜಿಸಬೇಕು, ಎಲ್ಲಿಯೂ ಒಬ್ಬನೇ ಮಲಗಬೇಕು. ಹೀಗೆ ಇನ್ನೂ ಅನೇಕ ನಿಯಮಗಳು ಹೇಳಲ್ಪಟ್ಟಿವೆ.

ಈರೀತಿಯಾದ ನಿತ್ಯತಟ್ಟೆಳೆಯು ವಿಧಗಳಲ್ಲಿ ನೋಡಲಾಗಿ ಬಹ್ಮಚಾರಿಯಲ್ಲಿ ಕೇವಲ ಸೊಗಸಿನಮೇಲಾಶೆ, ದುಂದುಗಾರತನ, ಅಹಂಕಾರ, ಅಸತ್ಯ. ಪ್ರಾಣಿಹಿಂಸೆ ಮುಂತಾದ ದುರ್ಗುಣಗಳಿಗೆ ಅವಕಾಶವಿಲ್ಲದೆ ಮಿತವ್ಯಯ, ದಂಭವಿಲ್ಲದೆ ಸಾಧಾರಣವಾದರೀತಿ, ಕಷ್ಟಸಹನೆ, ಸತ್ಯ, ಪ್ರಾಣಿಸಾಮಾನ್ಯದಲ್ಲಿ ದಯೆ, ಮುಂತಾದ ಸುಗುಣಗಳು ಉಂಟಾಗಬೇಕೆನ್ನುವುದೇ ಮುಖ್ಯೋದ್ದೇಶ್ಯವಾಗಿ ತೋರುತ್ತದೆ. ಈರೀತಿಯಾದ ತಿದ್ದುಪಾಡಿನಿಂದ ದೇಶದಲ್ಲಿ ಒಳ್ಳೇಬಲಿಷ್ಠರೂ, ತೇಜಸ್ವಿಗಳೂ, ಧೀರರೂ, ಸದ್ಗುಣಸಂಪನ್ನರೂ, ಗೌರವಶಾಲಿಗಳೂ ಆದಜನಗಳು ಉಂಟಾಗುವುದಕ್ಕೆ ತಕ್ಕ ಅವಕಾಶವಾಗಿತ್ತು. ಮೇಲೆಹೇಳಿದಂತೆ ನೃತ್ಯ, ಗೀತ, ವಾದ್ಯ, ಜೂಜು, ವಿನೋದದಹರಟೆ ಸ್ತ್ರೀಸ್ಪರ್ಶ ಮುಂತಾದವನ್ನು ನಿಷೇಧಿಸಿರುವುದಕ್ಕೆ ಮುಖ್ಯೋದ್ದೇಶ್ಯವೇನೆಂದರೆ—ವಿ

ದ್ಯಾರ್ಥಿಯು ತನ್ನನಿಯಮವನ್ನು ಮರೆತು ದುರ್ಮಾರ್ಗಕ್ಕೆ ಹೋಗುವಂತೆ ಆಶೆಯನ್ನುಂ ಟುಮಾಡುವ ದುಸ್ಸಹವಾಸ ಮುಂತಾದವುಗಳನ್ನು ನಿರೋಧಿಸುವುದೇ. ಪೂರ್ವಶಾ ಸ್ತ್ರಗಳಲ್ಲಿ ಬಹ್ಮಚಾರಿಗೆ ಮುಖ್ಯವಾಗಿ ದೇಹದಲ್ಲಿ ಯಾವವಿಧವಾದ ದೋಷಗಳೂ ಉಂಟಾಗಬಾರದೆಂಬ ವಿಷಯವಾಗಿಯೇ ಇಷ್ಟು ಬಲವತ್ತರವಾದ ನಿಯಮಗಳು ಹೇ ಳಲ್ಪಟ್ಟಿವೆ. ವಿದ್ಯಾರ್ಥಿಯು ದೊಡ್ಡವನಾದಮೇಲೆ, ಶಕ್ತಿಯೂ, ತೇಜಸ್ಸೂ, ರೋಗ ವಿಲ್ಲದಿರೋಣವೂ ದೀರ್ಘಾಯುಸ್ಸೂ, ಸತ್ಸಂತಾನಯೋಗ್ಯತೆಯೂ, ಈ ಉತ್ತಮೋ ತ್ತಮವಾದ ಗುಣಗಳೆಲ್ಲವೂ ಸಂಪೂರ್ಣವಾದಇಂದ್ರಿಯ ನಿಗ್ರಹದಿಂದಲೇ ಉಂಟಾಗುತ ವೆ. ಇಂದ್ರಿಯನಿಗ್ರಹವಿಲ್ಲದಿರುವುದರಿಂದ ನಾನಾವಿಧವಾದ ರೋಗವೂ, ಅಕಾಲಮರ ಣವೂ, ಇನ್ನೂ ಇತರವಾದದುಃಖಗಳೂ ಉಂಟಾಗುವುದಕ್ಕೆ ಮಾರ್ಗವಾಗುವುದು.

ಆದುದರಿಂದಲೇ ನಮ್ಮ ಪ್ರಾಚೀನರಾದ ಮಹನೀಯರು ವಿದ್ಯಾರ್ಥಿಯಾದವನಿಗೆ ಮದುವೆ ಯಿಲ್ಲದಿರುವುದನ್ನು ಬಂದು ಮುಖ್ಯನಿಯಮವಾಗಿ ವಿಧಿಸಿರುವರು. ಬ್ರಹ್ಮ ಚಾರಿ ಎಂಬ ಮಾತೇ ವಿವಾಹವಿಲ್ಲದೆ ಜಿತೇಂದ್ರಿಯನಾಗಿರುವವನು ಎಂಬ ಅರ್ಥವನ್ನು ಕೊಡುವಷ್ಟರೂಢವಾಗಿದೆ.

ನಮ್ಮ ಶರೀರವೇ ಒಂದುಗಾಡಿಯು ಕಣ್ಣು ಮೊದಲಾದ ಇಂದ್ರಿಯಗಳೆ ಆ ಗಾಡಿಗೆ ಕಟ್ಟುವ ಕುದುರೆಗಳು. ಮನಸ್ಸೇ ಕುದುರೆಯನ್ನು ಎಳೆದುಕೊಳ್ಳುವ ಲಗಾಮು. ಬುದ್ಧಿಯೇ ಗಾಡೀ ನಡೆಸುವವನು, ಜೀವಾತ್ಮನು ಗಾಡಿಯಲ್ಲಿ ಕುಳಿ ತು ಸವಾರಿ ಮಾಡುವ ಯಜಮಾನನು. ಕುದುರೆಗಳು ಸಾರಥಿಯು ಸ್ವಾಧೀನದಲ್ಲಿದ್ದರೆ ಸರಿಯಾದ ದಾರಿಯಲ್ಲಿ ಹೋಗಬಹುದು. ಇಲ್ಲವಾದರೆ ಗಾಡಿಯೂ, ಸಾರಥಿಯೂ, ಯಜಮಾನನೂ ಬಿದ್ದು ಕಷ್ಟ ಪಡುವುದು ಸಿದ್ಧವೇ. ಅದರಂತೆ ನಮ್ಮಬುದ್ಧಿಯು ಮನಸ್ಸನ್ನು ಎಳೆದುಕೊಂಡು ಕಣ್ಣುಮೊದಲಾದ ಇಂದ್ರಿಯಗಳನ್ನು ಸ್ವೇಚ್ಛೆಯಾಗಿ ಬಿಡದಿದ್ದರೆ ನಮಗೆ ಒಳ್ಳೇದು. ಇಲ್ಲವಾದರೆ ನಮಗೆ ಅಪಾಯವುಸಿದ್ಧವು. ಆದರೆ ಇಂದ್ರಿಯನಿಗ್ರಹವು ಬಹು ಅಸಾಧ್ಯವಲ್ಲವೆ? ಎನ್ನಬಹುದು. ಕಾಯುಪುಷ್ಟಿಯಿಲ್ಲದೆ ಯಾವಾಗಲೂ ಅಶಕ್ತರಾದವರ ಮನಸ್ಸು ಬಹು ಚಂಚಲವಾಗಿರುವುದು. ಮೊದಲಿಂ ದಲೂ ಹುಡುಗರಿಗೆ ತಕ್ಕ ಅಂಗಸಾಧನೆಗಳನ್ನೂ ಉತ್ತಮವಾದ ಆಟಗಳನ್ನೂ ಹೇಳಿ ಕೊಟ್ಟು ದೇಹದಾರ್ಢ್ಯವನ್ನು ಬಹಳ ಎಚ್ಚರಿಕೆಯಾಗಿ ನೋಡಿಕೊಳ್ಳುತ್ತಾ ಸದ್ವಿದ್ಯಾ ಭ್ಯಾಸವನ್ನು ಸರಿಯಾಗಿ ಮಾಡಿಸುತ್ತಿದುದರಿಂದ ಇಂದ್ರಿಯನಿಗ್ರಹವೆಂಬುದು ಸುಲಭಸಾಧ್ಯವಾಗಿತ್ತು.

ಹೀಗೆ ವಿದ್ಯಾರ್ಥಿಯು ವಿದ್ಯಾಭ್ಯಾಸದಲ್ಲಿಯೂ, ಇಂದ್ರಿಯ ನಿಗ್ರಹಪೂರ್ವಕವಾಗಿ ದೇಹದಾರ್ಢ್ಯವನ್ನು ಸಂಪೂರ್ಣವಾಗಿ ಸಂಪಾದಿಸುವದರಲ್ಲಿಯೂ ಬ್ರಹ್ಮಚರ್ಯಾಶ್ರಮವನ್ನು ಕಳೆದು ಗುರುಗಳ ಅನುಮತಿಯನ್ನು ಪಡೆದಮೇಲೆಯೇ ಗೃಹಸ್ಥಾಶ್ರಮ ಸ್ವೀಕಾರಕ್ಕೆ ಅರ್ಹನಾಗುತ್ತಿದ್ದನು. ಪೂರ್ವದಲ್ಲಿ ಚಂದ್ರವಂಶಕ್ಕೆ ತಿಲಕಪ್ರಾಯನಾದ ಶ್ರೀಕೃಷ್ಣನು ಸಾಂದೀಪನನೆಂಬ ಗುರುವಿನಲ್ಲಿದ್ದು 64 ವಿದ್ಯೆಗಳನ್ನೂ ಕಲಿತನು. ಪಾಂಡವರು ದ್ರೋಣಾಚಾರ್ಯರಲ್ಲಿ ಧನುರ್ವೇದ ಮುಂತಾದ್ದನ್ನು ಅಭ್ಯಾಸಮಾಡಿದರು. ಶ್ರೀರಾಮನೂ ಲಕ್ಷ್ಮಣನೂ ವಿಶ್ವಾಮಿತ್ರರಲ್ಲಿ ವಿದ್ಯಾಭ್ಯಾಸಮಾಡಿ ಚಿಕ್ಕ ವಯಸ್ಸಿನಲ್ಲಿಯೇ ಅನೇಕರಾಕ್ಷಸರನ್ನೂ ಓಡಿಸುವಷ್ಟು ಶೂರರಾಗಿದ್ದರು. ಶ್ರೀರಾಮನ ಮಕ್ಕಳಾದ ಲವಕುಶರು ವಾಲ್ಮೀಕಿಮಹರ್ಷಿಗಳಲ್ಲಿ ವಿದ್ಯಾಭ್ಯಾಸಮಾಡುತ್ತಿರುವಾಗ ಶ್ರೀರಾಮನಕಡೆಯಿಂದ ಯಜ್ಞಾಶ್ವವು ಬರಲು, ಅದನ್ನು ನಿರ್ಭಯವಾಗಿ ಹಿಡಿದು ಕಟ್ಟಿಹಾಕಿ, ಅದನ್ನು ಬಿಡಿಸಿಕೊಳ್ಳುವದಕ್ಕಾಗಿ ಬಂದ ಲಕ್ಷ್ಮಣಮುಂತಾದ ಅನೇಕ ವೀರರೊಡನೆ ಅತಿಬಾಲ್ಯದಲ್ಲಿಯೇ ಬಹುಪರಾಕ್ರಮದಿಂದ ಯುದ್ಧಮಾಡಿ ಗೆದ್ದರಲ್ಲವೆ! ಹೀಗೆ ಪೂರ್ವದಲ್ಲಿ ಬ್ರಹ್ಮಚರ್ಯಾಶ್ರಮದ ಪ್ರಭಾವವು ಬಹು ವಿಶೇಷವಾಗಿ ತೋರುತ್ತಿತ್ತು.

ಈಗಿನಕಾಲದ ವಿದ್ಯಾರ್ಥಿಗಳಲ್ಲಿಯಾದರೋ ಮೇಲೆ ಹೇಳಿದ ಬ್ರಹ್ಮಚರ್ಯದ ಅನೇಕ ನಿಯಮಗಳು ಆಚರಣೆಯಲ್ಲಿಯೇ ಇಲ್ಲವು. ಆದುದರಿಂದಲೇ ಅದಕ್ಕೆ ತಕ್ಕಹಾಗೆ ಫಲವೂ ತೋರುತ್ತಿದೆ. ಮೇಲೆಹೇಳಿದ ಬ್ರಹ್ಮಚರ್ಯದ ನಿಯಮಗಳು ಈಗಿನ ಕಾಲದ ವಿದ್ಯಾರ್ಥಿಗಳಿಗೂ ಆಚರಿಸಲು ಸಾಧ್ಯವೇ ಅಲ್ಲದೆ ಅನಾಧ್ಯವಲ್ಲವು. ಆದರೆ ಕಾಲಭೇದದಿಂದ ಜನಗಳ ಸ್ಥಿತಿಯೂ ಬದಲಾಯಿಸುವುದು ಸಹಜವಾದುದರಿಂದ ಕೆಲವು ಆಚರಣೆಗಳಲ್ಲಿ ಈಗಿನಕಾಲಕ್ಕೆ ತಕ್ಕಂತೆ ಕೆಲವು ತಿದ್ದುಪಾಡುಗಳನ್ನು ಮಾಡಿಕೊಳ್ಳಬೇಕು. ಪೂರ್ವಕಾಲದಂತೆ ಈಗ ಬ್ರಹ್ಮಚಾರಿಗಳು ಕೃಷ್ಣಾಜಿನವನ್ನು ಧರಿಸಿ, ಭಿಕ್ಷಾನ್ನವೆತ್ತುತ್ತ ಗುರುಕುಲವಾಸವನ್ನು ಮಾಡುವುದಕ್ಕಾದೀತೆ? ಈಗ ಓದುವುದಕ್ಕೆ ಸ್ಕೂಲುಗಳಿಗೂ, ಪಾಠಶಾಲೆಗಳಿಗೂ ಹೋಗಬೇಕಾಗಿದೆ. ಗುರುಕುಲವಾಸಕ್ಕೆ ಬದಲಾಗಿ ಸ್ಟೂಡೆಂಟ್ಸ್‌ಹೋಮಿನ ವಾಸವಾಗಿದೆ. ಅದೂ ಅನೇಕರಿಗೆ ದುರ್ಲಭವು.

ಈಗ ವಿದ್ಯಾರ್ಥಿಗಳಿಗೆ ಅನ್ನವಸ್ತ್ರಮುಂತಾಗಿ ಎಷ್ಟು ಅನುಕೂಲಗಳು ಹೆಚ್ಚುತ್ತ ಬಂದರೂ ಅವರ ದೇಹದಾರ್ಢ್ಯವು ಕಡಮೆಯಾಗುತ್ತಾ ಹೋಗುತ್ತಿರುವುದು

ಬಹು ವಿಷಾದಕರವಾಗಿದೆ. ಕೆಲವು ವರ್ಷಗಳ ಹಿಂದೆ ನಮ್ಮ ಸರಕಾರದವರು ಈ ದೇಶದ ವಿದ್ಯಾರ್ಥಿಗಳ ಕಣ್ಣುಗಳನ್ನು ಪರೀಕ್ಷಿಸುವದಕ್ಕಾಗಿ ಒಬ್ಬ ಡಾಕ್ಟರನ್ನು ನಿಯಮಿಸಲು ಅವರು ಸ್ಕೂಲುಗಳಿಗೆಲ್ಲಾ ಹೋಗಿನೋಡಿ ನೂರುಮಂದಿ ವಿದ್ಯಾರ್ಥಿಗಳಲ್ಲಿ 25 ಮಂದಿಗೆ ಕೂಡನೇತ್ರಪಾಟವವು ಸರಿಯಾಗಿಲ್ಲವೆಂದು ತಿಳಿಸಿದರಂತೆ. ಅನೇಕರು ಅತಿಚಿಕ್ಕ ವಯಸ್ಸಿನಲ್ಲಿಯೇ ಲಾಂದ್ರಗಳಂತೆ ಕಣ್ಣಿಗೆ ಸುಲೋಚನಗಳನ್ನು ಕಟ್ಟಿಕೊಂಡು ಪೇಚಾಡುತ್ತಿರುವರು. ಇನ್ನೂ ಅನೇಕರಿಗೆ ಶ್ರವಿಯಶಕ್ತಿಯೂ ಕಡಮೆಯಾಗುತ್ತಿದೆ. ಹೀಗೆ ಇಂದ್ರಿಯಗಳ ಶಕ್ತಿ ಕಡಮೆ. ದೇಹದಾರ್ಢ್ಯವಿಲ್ಲ. ಮನಸ್ಸಿನ ಸ್ಥೈರ್ಯವು ಮೊದಲೇ ಇಲ್ಲವಾದರೆ ಇವರ ಪರಿಣಾಮ ಹೇಗೆ? ಇವರು ಈ ಲೋಕದಲ್ಲಿ ಯಾವ ಪುರುಷಾರ್ಥವನ್ನು ಸಾಧಿಸಬಲ್ಲರು ? ಇಂಥವರಿಂದ ಜನಸಮುದಾಯವು ತಾನೆ ಹೇಗೆ ಮೇಲಾದೀತು ? ಕಣ್ಣು ಮೊದಲಾದ ಇಂದ್ರಿಯಗಳ ಪೀಗ ತಡೆಯುವದನ್ನೂ, ದೇಹದಾರ್ಢ್ಯ ಪಡೆಯುವದನ್ನೂ ಬಾಲ್ಯದಿಂದಲೂ ಕ್ರಮವಾಗಿ ಅಭ್ಯಾಸಮಾಡಬೇಕು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ? ಈಗ ಹುಡುಗರು, ನಾಳೆ ದೊಡ್ಡವರು. ಈಗ ಬಾಲಕರಾಗಿದ್ದವರೇ ಸದ್ವಿದ್ಯೆಯಿಂದಲೂ, ಸದಾಚರಣೆಯಿಂದಲೂ ಕೂಡಿ, ಮುಂದೆ ನಮ್ಮದೇಶಕ್ಕೆಲ್ಲಾ ಅಲಂಕಾರಪ್ರಾಯರಾದ ದೊಡ್ಡಮನುಷ್ಯರಾಗಬಹುದಲ್ಲವೆ ? ಲೋಕದಲ್ಲಿ ಸದ್ಗುಣಗಳಿಂದ ಕೂಡಿದ ಮನುಷ್ಯನೇ ಶ್ರೇಷ್ಠನು. ಗುಣಗಳಿಲ್ಲದವನು ಏತಕ್ಕೂ ತರವಲ್ಲ.

ಗುಣಹಾನಿಯಿಂ ದಧೋಗತಿ ।
ಗುಣದಿಂ ಸ್ವರ್ಗಾಪವರ್ಗ ಸುಖಮಕ್ಕುಮೆನಲ್ ॥
ಗುಣಹೀನನಸಿರಿಯಿಂದಂ ।
ಗುಣಿಗಳಬಡತನಮೆ ನಾಡೆಯುಂಲೇಸಲ್ತೆ ॥

ಅಂಥಾ ಸದ್ಗುಣಗಳುಂಟಾಗುವಂತೆ ದೇಹದ ಪಾರಿಶುದ್ಧ್ಯವನ್ನೂ ತಕ್ಕ ವಿದ್ಯಾಭ್ಯಾಸವನ್ನೂ ಸಂಪಾದಿಸದೆ ಕೇವಲ ಶೃಂಗಾರ ಶೇಖರರೂ, ಅಲಂಕಾರ ವಿದ್ಯಾರ್ಥಿಗಳೂ ಆಗಿದ್ದರೆ ಫಲವೇನು ?

ಇದರಿಂದ ಅವರಿಗೆ ಇಹಪರಗಳೆರಡರಲ್ಲಿಯೂ ಮೇಲ್ಮೆಯಾಗಲಾರದು. ಆದುದರಿಂದ ಈಗಿನ ಬಾಲಕರು ಮುಂದೆ ಹೇಳುವ ಮುಖ್ಯಸಂಗತಿಗಳನ್ನು ನೆನಪಿನಲ್ಲಿಟ್ಟಿರಬೇಕು.

1. ಪ್ರತಿವಿದ್ಯಾರ್ಥಿಯು ಜಿತೇಂದ್ರಿಯನಾಗಿಯೂ ದೃಢಾಂಗನಾಗಿಯೂ, ಗುಣಾಢ್ಯನಾಗಿಯೂ ಇರುವದಕ್ಕೆ ಸರ್ವಸಾಹಸವನ್ನೂ ಮಾಡಬೇಕು.

2. ತನಗೂ, ತಾನು ಸೇರುವ ಜನಾಂಗಕ್ಕೂ ಮೇಲ್ಮೆಯುಂಟಾಗುವಂತೆ ಹಿರಿಯರು ಏರ್ಪಡಿಸುವ ವಿದ್ಯೆಯನ್ನು ತಪ್ಪದೆ ಕಲಿಯಬೇಕು.

3. ಪ್ರತಿಯೊಬ್ಬ ವಿದ್ಯಾರ್ಥಿಯೂ ತನಗೆ 20 ವರ್ಷ ವಯಸ್ಸು ಆಗುವ ವರೆಗೂ ಬ್ರಹ್ಮಚರ್ಯಾಶ್ರಮದ ಕಟ್ಟಳೆಗಳನ್ನು ಕ್ರಮವಾಗಿ ಆಚರಿಸಿಯೇ ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕು.

ಈ ಮೂರು ಮುಖ್ಯಭಾಗಗಳಮೇಲೆ ಗಮನಕೊಟ್ಟು, ಮೇಲೆಹೇಳಿದ ಆಹಾರಾದಿ ನಿಯಮಗಳನ್ನು ದೇಶಕಾಲಾನುಗುಣವಾಗಿ ಅನುಸರಿಸಿ, ಸದ್ವಿದ್ಯೆಯನ್ನು ಕಲಿತು, ತನಗೂ ತನ್ನನ್ನು ಹೊಂದುವ ಜನಗಳಿಗೂ, ತನ್ನ ದೇಶದವರೆಲ್ಲರಿಗೂ ಇಹಪರಗಳೆರಡರಲ್ಲಿಯೂ ಶ್ರೇಯಸ್ಸುಂಟಾಗುವಂತೆ ನಮ್ಮ ಭರತಖಂಡದ ಪ್ರತಿಯೊಬ್ಬ ಬಾಲಕನೂ ಬ್ರಹ್ಮಚರ್ಯವನ್ನು ಆಚರಿಸಲಿ" ಎಂದು ಆ ಭಗವಂತನನ್ನು ಪ್ರಾರ್ಥಿಸುತ್ತೇನೆ.

S. R.

ಪರೀಕ್ಷಣ ಶಕ್ತಿಯನ್ನು ಬೆಳೆಸುವುದು.

ಪ್ರತಿನಿತ್ಯವು ನಾವು ಮರ, ಗಿಡ, ಪಶು ಪಕ್ಷಿ ಮೊದಲಾದ ಅನೇಕ ವಸ್ತುಗಳನ್ನು ನೋಡುವೆವು, ಅನೇಕವಿಧವಾದ ಶಬ್ದಗಳನ್ನು ಕೇಳುವೆವು. ಅನೇಕ ಪದಾರ್ಥಗಳನ್ನು ಮುಟ್ಟುವೆವು. ಆದರೆ ಈ ಮರದಎಲೆಗಳ ರಚನೆಏನು? ಆ ಗಿಡದ ಹೂವಿನ ತೊಟ್ಟು ಯಾವ ಬಣ್ಣವುಳ್ಳದ್ದು? ಈಪಕ್ಷಿಯ ರಕ್ಕೆಯಲ್ಲಿ ಯಾವಯಾವ ಬಣ್ಣಗಳು ಮಿಶ್ರವಾಗಿರುವುವು? ಈ ಎರಡು ವಸ್ತುಗಳ ಆಕೃತಿಯಲ್ಲಿರುವ ವ್ಯತ್ಯಾಸವೇನು? ಈ ವಿಧವಾದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಹೇಳುವುದು ಅನೇಕವೇಳೆಗಳಲ್ಲಿ ನಮಗೆ ಅಸಾಧ್ಯವಾಗುವುದು. ಇಂತಹ ಸಂದರ್ಭಗಳಲ್ಲಿ ನಾವು ನೋಡಿದ್ದರೂ ನೋಡಲಿಲ್ಲವೆಂದೂ, ಕೇಳಿದ್ದರೂ ಕೇಳಲಿಲ್ಲವೆಂದೂ, ಮುಟ್ಟಿದ್ದರೂ ಮುಟ್ಟಲಿಲ್ಲವೆಂದೂ, ಭಾವಿಸಬೇಕಾಗುವುದು. ಈ ಅಂಶಗಳನ್ನು ನೋಡುವುದರಿಂದ ಆಗಬೇಕಾದದ್ದೇನೆಂದು ಕೆಲವರು ಆಕ್ಷೇಪಿಸಬಹುದು. ಈ ವಿಧವಾದಅಭಿಪ್ರಾ

ಯುಗಳಿಂದಲೇ ನಮ್ಮದೇಶವು ಶೋಚನೀಯಾವಸ್ಥೆಗೆ ಬಂದಿರುವುದೆಂದು ಆ ಜನರಿಗೆ ನಾವು ಉತ್ತರ ಹೇಳಬೇಕಾಗುವುದು. ಒಂದು ಪ್ರವಾದಸಿದ್ಧವಾದ ಮರದ ಎಲೆಗಳ ರಚನೆಯನ್ನು ಅಥವಾ ಹೂವಿನ ಬಣ್ಣವನ್ನು ನೋಡುವುದರಿಂದ ವಿಶೇಷ ಪ್ರಯೋಜನವಿಲ್ಲದಿರಬಹುದು. ಆದರೆ ಇಂತಹಕೆಲಸಗಳಿಂದ ಪದಾರ್ಥಗಳನ್ನು ಕ್ರಮವಾಗಿ ಪರೀಕ್ಷಿಸಿ ಅವುಗಳ ವಿಷಯದಲ್ಲಿ ನಿಷ್ಕೃಷ್ಟವಾದ ಜ್ಞಾನವನ್ನು ಹೊಂದುವ ಸ್ವಭಾವವು ಉಂಟಾಗುವುದು. ಹೀಗೆ ಹೊಂದಿದ ಜ್ಞಾನವೇ ಮುಂದೆ ವೃದ್ಧಿಹೊಂದಬೇಕಾದ ಊಹೆವೊದಲಾದ ಮನೋವ್ಯಾಪಾರಗಳಿಗೆ ಆಧಾರವಾಗಿರುವುದು. ಸರಿಯಾಗಿ ತಳಹದಿಯನ್ನು ಹಾಕಿ ಕಟ್ಟಿದ ಮನೆಯು ಸ್ಥಿರವಾಗಿನಿಲ್ಲುವಂತೆ ಇಂತಹ ಜ್ಞಾನವೇ ಆಧಾರವಾಗಿರುವ ಊಹೆಯು ಸ್ಥಿರವಾಗಿ ನಿಲ್ಲುವುದು. ನಿಷ್ಕೃಷ್ಟವಲ್ಲದ ಅಂಶಗಳಿಂದ ಊಹಿಸಲ್ಪಟ್ಟ ಅಂಶಗಳು ಬಲವಾದ ತಳಹದಿಯಿಲ್ಲದೆ ಕಟ್ಟಿದಮನೆಯಂತೆ ಅಸ್ಥಿರವಾಗಿರುವುವು.

ಹೀಗೆ ಊಹೆವೊದಲಾದ ಮುಖ್ಯವಾದ ಮನೋವ್ಯಾಪಾರಗಳಿಗೆ ಇಂದ್ರಿಯಗಳಿಂದ ಬರುವ ಜ್ಞಾನವು ಆಧಾರವಾಗಿದ್ದಲ್ಲಿ ಇಂತಹಜ್ಞಾನವು ನಿಷ್ಕೃಷ್ಟವಾಗಿರಬೇಕಲ್ಲವೆ? ಇದನ್ನು ಯಾವರೀತಿಯಲ್ಲಿ ಉಂಟುಮಾಡಬೇಕೆಂದು ಯೋಚಿಸುವುದಕ್ಕೆವೊದಲು ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ವಸ್ತುಗಳ ವಿಷಯದಲ್ಲಿ ಕ್ರಮವಾದ ಜ್ಞಾನವುಂಟಾಗಲು ಕೊರತೆಗಳೇನಿರುವುವೆಂದು ನೋಡಬೇಕಾಗಿರುವುದು.

ಪ್ರಕೃತದಲ್ಲಿ ನಮ್ಮದೇಶದ ವಿದ್ಯಾಭ್ಯಾಸವು ಮುಖ್ಯವಾಗಿ ಪುಸ್ತಕಗಳ ಮೂಲಕ ನಡೆಯುತಿರುವುದು. ಪ್ರಕೃತಿಯನ್ನು ಸಾಕ್ಷಾತ್ತಾಗಿ ಪರೀಕ್ಷಿಸಿ ವಿಷಯಗಳನ್ನು ತಿಳಿಯುವರೂಢಿಯು ತಪ್ಪಿಹೋಗಿರುವುದು. ಪುಸ್ತಕಗಳಲ್ಲಿರುವ ಶಬ್ದಗಳ ಅರ್ಥವನ್ನು ವಿವರಿಸುವಾಗ ಪ್ರಕೃತಿಯು ಸಹಾಯವನ್ನು ತೆಗೆದುಕೊಳ್ಳದೆ ಇರುವುದರಿಂದ ಬಾಲಕರಿಗೆ ಇವು ಅರ್ಥವಿಲ್ಲದ ಶಬ್ದಗಳಾಗಿ ಪರಿಣಮಿಸುವುವು. ಈಶಬ್ದಗಳಿಗೆ ತಕ್ಕ ಪ್ರತಿಮೆಗಳು ಅವರ ಮನಸ್ಸಿನಲ್ಲಿ ಸಾಮಾನ್ಯವಾಗಿ ಉಂಟಾಗುವುದೇಇಲ್ಲ. ಚಕೋರ, ಚಕ್ರವಾಕ, ಚಾತಕ, ವಕುಳ, ಮಂದಾರ ಇವುಗಳನ್ನು ಮೇಲೆಹೇಳಿರುವ ಶಬ್ದಗಳಿಗೆ ನಿದರ್ಶನವಾಗಿ ಕೊಡಬಹುದು. ಬಾಲಕರು ಈ ಶಬ್ದಗಳನ್ನು ಕೇಳಿದಾಗ ಅವರ ಮನಸ್ಸಿನಲ್ಲಿ ಯಾವವಿಧವಾದ ಪ್ರತಿಮೆಯೂ ಉಂಟಾಗುವುದಿಲ್ಲ. ವಕುಳ ವೃಕ್ಷವನ್ನು ಒಬ್ಬ ಬಾಲಕನು ವಕುಳಲತೆಯೆಂದು ಹೇಳಿದುದು ನಮ್ಮ ಅನುಭ

ಕ್ಕೆ ಬಂದಿರುವುದು. ಆದುದರಿಂದ ಪ್ರಕೃತಿಯ ವಿಷಯದಲ್ಲಿ ನಿಷ್ಕೃಷ್ಟವಾದ ಜ್ಞಾನವು ಉಂಟಾಗಬೇಕಾದರೆ ಈಗಿನ ವಿದ್ಯಾಭ್ಯಾಸಕ್ರಮವನ್ನು ಬಹಳಮಟ್ಟಿಗೆ ವ್ಯತ್ಯಾಸಪಡಿಸುವುದು ಅವಶ್ಯಕವೆಂದು ಕಾಣುವುದು.

ಮೊದಲು ಏಳುವರ್ಷಗಳ ವರೆಗೆ ಬಾಲಕರು ಪುಸ್ತಕವನ್ನು ಉಪಯೋಗಿಸುವ ಅವಶ್ಯಕವೇ ಇಲ್ಲವೆಂದು ತೋರುವುದು. ಈಕಾಲದಲ್ಲಿ ಅವರಿಗೆ ವಸ್ತುಗಳನ್ನು ತೋರಿಸಿ ಅವುಗಳ ಹೆಸರನ್ನು ತಿಳಿಸಬೇಕಾಗುವುದು. ಕಿಂಡರ್ ಗಾರ್ಟ್ನ್ ತೋಟದಲ್ಲಿ ಅನೇಕ ಗಿಡ, ಬಳ್ಳಿ, ಹೂವುಗಳಹೆಸರನ್ನು ತಿಳಿಸಲು ಅವಕಾಶವಿರುವುದು. ಊರಿನಹತ್ತಿರ ವಿರುವ ಕೈತೋಟಗಳಿಗೆ ಮಕ್ಕಳನ್ನು ಕರೆದುಕೊಂಡುಹೋಗುವುದರಿಂದ ಇನ್ನೂ ಅನೇಕ ಸಸ್ಯಗಳಹೆಸರನ್ನು ತಿಳಿಸಲು ಅವಕಾಶವು ದೊರೆಯುವುದು. ಮನೆಯಲ್ಲಿ ಉಪಯೋಗಿಸುವ ವಸ್ತುಗಳ ಹೆಸರನ್ನು ಮಕ್ಕಳ ತಾಯಿತಂದೆಗಳು ತಿಳಿಸಬಹುದು. ಅಂಗಡಿ ಬೀದಿಗೆ ಮಕ್ಕಳನ್ನು ಆಗಾಗ್ಗೆ ಕರೆದುಕೊಂಡುಹೋಗಿ ಬೇರೆಬೇರೆ ವಿಧದ ಅಂಗಡಿಯಲ್ಲಿರುವ ವಸ್ತುಗಳಹೆಸರನ್ನು ಕ್ರಮಕ್ರಮವಾಗಿ ತಿಳಿಸುತ ಬರಬಹುದು. ಆಮೇಲೆ ಪುಸ್ತಕವನ್ನು ಉಪಯೋಗಿಸುವಾಗ ನಿದರ್ಶನವನ್ನು ಕೊಡುವುದರಿಂದ ಪುಸ್ತಕದಲ್ಲಿರುವ ಶಬ್ದಗಳ ಅರ್ಥವು ಮಕ್ಕಳಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವುದು. ಈರೀತಿಯಲ್ಲಿ ವಸ್ತುಗಳನ್ನೂ ಅವುಗಳಿಗೆ ತಕ್ಕ ಹೆಸರುಗಳನ್ನೂ ಸಂಬಂಧಿಸಿ ಹೇಳಿಕೊಡುವುದರಿಂದ ಒಂದು ವಸ್ತುವಿನ ಹೆಸರನ್ನು ಕೇಳಿದೊಡನೇ ಅದಕ್ಕೆತಕ್ಕ ಪ್ರತಿಮೆಯು ಸ್ಫೂರ್ತಿಗೆ ಬರುವುದು. ಇಂತಹಳಿಯೆಶಬ್ದಗಳೇ ಮಕ್ಕಳ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವ ಶಬ್ದಗಳಾಗಿರುವವು.

ಆದರೆ ವಸ್ತುಗಳ ಸಹಾಯದಿಂದ ಅವುಗಳಿಗೆ ತಕ್ಕ ಶಬ್ದಗಳನ್ನು ಮಾತ್ರ ತಿಳಿಸುವುದರಿಂದ ಈಗಿನ ವಿದ್ಯಾಭ್ಯಾಸದಲ್ಲಿರುವ ಕೊರತೆಯನ್ನು ಪೂರ್ಣವಾಗಿ ನಾಶಪಡಿಸಿದಂತಾಗಲಾರದು. ಪಾಠಶಾಲೆಯ ತೋಟದಲ್ಲೂ, ಮೇಲೆ ಸೂಚಿಸಿರುವ ಇತರ ಪ್ರದೇಶಗಳಲ್ಲೂ ವಸ್ತುಗಳನ್ನೂ ಅವುಗಳ ಹೆಸರುಗಳನ್ನು ತಿಳಿಸುವಾಗ ಮಕ್ಕಳು ಆ ವಸ್ತುಗಳನ್ನು ಕ್ರಮವಾಗಿ ಪರೀಕ್ಷಿಸುವಂತೆ ಮಾಡಬೇಕು.ಈ ಪರೀಕ್ಷೆಗಳಿಂದಲೇ ಮಕ್ಕಳಿಗೆ ವಸ್ತುಗಳ ವಿಷಯದಲ್ಲಿ ನಿಷ್ಕೃಷ್ಟವಾದ ಜ್ಞಾನವುಂಟಾಗುವುದು. ಈ ಪರೀಕ್ಷೆಗಳನ್ನು ಬಾಲಕರೇ ಮಾಡಬೇಕಲ್ಲದೆ ಉಪಾಧ್ಯಾಯರು ಮಾಡಿ ತೋರಿಸಬಾರದೆಂದು ಹೇಳಬೇಕಾದುದೇ ಇಲ್ಲ. ಇವುಗಳನ್ನು ಮಾಡುವಾಗ ಯಾವ ಯಾವ ಇಂದ್ರಿಯಗಳನ್ನು ಉಪಯೋಗಿಸಬಹುದೋ ಅವುಗಳನ್ನೆಲ್ಲ

ಉಪಯೋಗಿಸುವಂತೆ ಮಾಡಬೇಕು. ನಿದರ್ಶನವಾಗಿ ಮಕ್ಕಳು ಬಂದು ಹಣ್ಣನ್ನು ಪರೀಕ್ಷಿಸುತಿರುವಾಗ ಅದರ ಆಕಾರವನ್ನು ಕಣ್ಣು ಕೈಗಳಿಂದಲೂ, ಬಣ್ಣವನ್ನು ಕಣ್ಣಿನಿಂದಲೂ, ವಾಸನೆಯನ್ನು ಮೂಗಿನಿಂದಲೂ, ರುಚಿಯನ್ನು ನಾಲಗೆಯಿಂದಲೂ, ಪರೀಕ್ಷಿಸುವಂತೆ ಮಾಡಬೇಕು. ಪದಾರ್ಥಗಳನ್ನು ವಿಶೇಷ ಜಾಗರೂಕತೆಯಿಂದ ನೋಡುವ ಅಭ್ಯಾಸವು ಮಕ್ಕಳಿಗಿಲ್ಲವಾದುದರಿಂದ ಅವರು ನೋಡದೆ ಬಿಟ್ಟಿರುವ ಅಂಶಗಳ ಕಡೆಗೆ ಅವರ ದೃಷ್ಟಿಯನ್ನು ಉಪಾಧ್ಯಾಯರು ಎಳೆಯಬೇಕಾಗುವುದು. ಒಂದು ವಸ್ತುವನ್ನು ಮಕ್ಕಳು ಪರೀಕ್ಷಿಸುತಿರುವಾಗ ಅದರ ಜತೆಯಲ್ಲಿ ಅದೇ ಸಮುದಾಯಕ್ಕೆ ಸೇರಿದ ಮತ್ತೊಂದು ವಸ್ತುವನ್ನು ಹೋಲಿಸಿ ಇವೆರಡಕ್ಕೂ ಇರುವ ಸಾಮ್ಯ ವೈಷಮ್ಯವನ್ನು ತಿಳಿಯುವಂತೆ ಮಾಡಬೇಕು. ಇಂತಹ ಹೋಲಿಕೆಯಿಂದಲೆ ಪದಾರ್ಥವಿಷಯಕವಾದ ಜ್ಞಾನವು ನಿಷ್ಕೃಷ್ಟವಾಗುವುದು. ಒಂದು ಗಿಡದ ಎಲೆಯ ರಚನೆಯನ್ನು ಮತ್ತೊಂದು ಗಿಡದ ಎಲೆಯ ರಚನೆಯೊಡನೆ ಹೋಲಿಸುವುದರಿಂದ ಈ ಎರಡು ವಿಧವಾದ ಎಲೆಗಳ ರಚನೆಯೂ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವುದು. ಸ್ವಲ್ಪ ವಯಸ್ಸಾದಮೇಲೆ ಪುಸ್ತಕ ವಿದ್ಯಾಭ್ಯಾಸದೊಡನೆ ತರಗತಿಯಲ್ಲಿ ವಸ್ತುಪಾಠಗಳನ್ನು ಕ್ರಮವಾಗಿ ನಡೆಸುವುದರಿಂದ ಪರೀಕ್ಷಣ ಶಕ್ತಿಯವೃದ್ಧಿಗೆ ಇನ್ನೂ ವಿಶೇಷವಾಗಿ ಅವಕಾಶವು ದೊರಕುವುದು. ಈ ಪಾಠಗಳಲ್ಲಿ ಪರೀಕ್ಷೆಗೋಸ್ಕರ ವಸ್ತುವನ್ನು ಅಥವಾ ಅದರ ಚಿತ್ರವನ್ನು ಉಪಯೋಗಿಸಬೇಕೆಂದು ಹೇಳಬೇಕಾದುದೇ ಇಲ್ಲ. ಈ ಕಾಲದಲ್ಲಿ ಬಾಲಕರೆದುರಿಗೆ ಅವರಿಗೆ ಅಪರಿಚಿತವಾದ ಕೆಲವು ವಸ್ತುಗಳನ್ನೂ ಇಡಬಹುದು. ಇಂತಹ ವಸ್ತುಗಳ ಪರೀಕ್ಷೆಯಲ್ಲಿ ಉಪಾಧ್ಯಾಯರ ಸಹಾಯವು ವಿಶೇಷವಾಗಿ ಬೇಕಾಗುವುದು. ಅನೇಕ ವಸ್ತುಗಳಿರುವ ಒಂದು ಮನೆಯೊಳಕ್ಕೆ ಮಕ್ಕಳನ್ನು ಆಗಾಗ್ಗೆ ಸ್ವಲ್ಪಹೊತ್ತು ಬಿಟ್ಟು ಅನಂತರ ಈಚೆಗೆ ಕರೆದು ಅವರು ನೋಡಿದ ಅಂಶಗಳ ವಿಷಯದಲ್ಲಿ ಪ್ರಶ್ನೆಗಳನ್ನು ಕೇಳುವುದರಿಂದ ವಸ್ತು ಪರೀಕ್ಷೆಯಲ್ಲಿ ಮಕ್ಕಳಿಗೆ ಉಂಟಾಗಿರುವ ಶಕ್ತಿಯನ್ನು ನಿರ್ಣಯಿಸಬಹುದು.

ಇನ್ನೂ ಸ್ವಲ್ಪ ವಯಸ್ಸಾದಮೇಲೆ ಪ್ರಾಕೃತಿಕಶಾಸ್ತ್ರಗಳ ಅಂಶಗಳನ್ನು ಮೇಲೆ ವಿವರಿಸಿರುವ ವಸ್ತುಪಾಠಕ್ರಮದಲ್ಲಿ ತಿಳಿಸುವುದರಿಂದ ಪ್ರಕೃತಿಯಲ್ಲಿರುವ ಸ್ವಾಭಾವಿಕವಾದ ಧರ್ಮಗಳು ಇನ್ನೂ ವಿಶೇಷವಾಗಿ ತಿಳಿದು ವಸ್ತುಗಳನ್ನು ಪರೀಕ್ಷಿಸುವ ಕಾರ್ಯದಲ್ಲಿ ಮಕ್ಕಳಿಗೆ ವಿಶೇಷ ಸಹಾಯವಾಗುವುದು. M. V.

ವಿದ್ಯಾಭ್ಯಾಸ.

ಹೀಗೆ ನಮ್ಮ ಪಾಠಶಾಲೆಗಳಲ್ಲಿ ಮಕ್ಕಳಿಗೆ ಯಾವ ವಿದ್ಯೆಗಳನ್ನು ಕಲಿಸುವುದಿಲ್ಲವೋ ಅವುಗಳೇ ಜೀವನೋಪಯುಕ್ತಗಳಾದ ಪದಾರ್ಥಗಳನ್ನು ಸಂಪಾದಿಸಲು ಅವಶ್ಯವಾಗಿವೆ ಎಂಬುದು ಮೇಲಿನ ವಿಚಾರದಿಂದ ಸ್ಪಷ್ಟವಾಗುವುದು. ಪಾಠಶಾಲೆಗಳಲ್ಲಿ ಬೋಧಿಸುವ ವಿದ್ಯೆಗಳನ್ನು ಕಲಿತು ಮುಗಿಸಿದಬಳಿಕವೇ ಅವರು ಜೀವಿಕೆಗೆ ಬೇಕಾದ ವಿದ್ಯೆಗಳನ್ನು ಬೇರೆಮಾರ್ಗಗಳಿಂದ ಕಲಿಯುವರು. ಈ ರೀತಿಯಾಗಿ ಅವರು ಅವುಗಳನ್ನು ಕಲಿಯದಿದ್ದರೆ ಕೈಗಾರಿಕೆಗಳೆಲ್ಲಾ ಸುತರಾಂ ನಿಂತುಹೋಗುತ್ತಿದ್ದುವು. ಹೀಗೆ ಬೇರೆಮಾರ್ಗಗಳಿಂದ ಆ ವಿದ್ಯೆಗಳು ಬಹುಕಾಲದಿಂದ ಪರಂಪರೆಯಾಗಿ ಸಂಗ್ರಹಿಸಲ್ಪಟ್ಟು ಪ್ರಚಾರವಾಗದಿದ್ದ ಪಕ್ಷದಲ್ಲಿ ಕೈಗಾರಿಕೆಗಳೇ ಇರುತ್ತಿರಲಿಲ್ಲ. ಪಾಠಶಾಲೆಗಳಲ್ಲಿ ನಡೆಸಲ್ಪಡುವ ವಿದ್ಯಾಭ್ಯಾಸ ಕ್ರಮದ ಹೊರತು ಮತ್ತಾವ ಏರ್ಪಾಟೂ ಇಲ್ಲದಿದ್ದರೆ ಈಗ ಇಂಗ್ಲೆಂಡ್ ದೇಶವು ಪೂರ್ವದಲ್ಲಿ ಸಾಮಂತ ರಾಜ್ಯ ಭಾರಕಾಲದಲ್ಲಿ ಇದ್ದ ಅನಾಗರಿಕಸ್ಥಿತಿಯಲ್ಲಿಯೆ ಇರುತ್ತಿತ್ತು.

ಪ್ರಾಕೃತಿಕ ನಿಯಮಗಳ ವಿಷಯದಲ್ಲಿ ಜನರಿಗೆ ಕ್ರಮಕ್ರಮೇಣ ಅಧಿಕ ಅಧಿಕವಾಗಿ ಉಂಟಾದ ಜ್ಞಾನವೂ ಅದರಿಂದ ಪ್ರಕೃತಿಯನ್ನು ತಮಗೆ ಅನುಕೂಲಿಸುವಂತೆ ಸ್ವಾಧೀನಪಡಿಸಿಕೊಳ್ಳಲುಂಟಾದ ಸಾಮರ್ಥ್ಯವೂ ಇವುಗಳಿಂದ ಪೂರ್ವದಲ್ಲಿ ರಾಜರಿಗೂ ಕೂಡ ದೊರಕದ ಸುಖಸಾಮಗ್ರಿಗಳನ್ನು ಈಗ ಬಡವರಾದ ದಿನಗೂಲಿಯುವರೂಕೂಡ ಹೊಂದಲುಂಟಾಗಿರುವ ಸೌಕರ್ಯವೂ ಇನ್ನೂ ಬೇರೆವಿಧವಾದ ಅನುಕೂಲತೆಗಳೂ ನಮ್ಮ ಈಗಿನ ಪಾಠಶಾಲೆಗಳಲ್ಲಿ ಏರ್ಪಡಿಸಿದ ವಿದ್ಯಾಭ್ಯಾಸದಿಂದ ಉಂಟಾಗಲಿಲ್ಲ. ಯಾವ ಜ್ಞಾನದಿಂದ ಇಂಗ್ಲೆಂಡಿನ ಜನರು ಉತ್ಕೃಷ್ಟ ಜನಾಂಗದವರಾದರೋ ಮತ್ತು ಯಾವ ಜ್ಞಾನವು ಅವರ ಜೀವಿಕೆಗೆ ಆಧಾರಭೂತವಾಗಿದೆಯೋ ಆ ಮುಖ್ಯಜ್ಞಾನವನ್ನು ಅವರು ಬೇರೇ ಮಾರ್ಗಗಳಿಂದ ಹೊಂದಿದರೇಹೊರತು ಪಾಠಶಾಲೆಗಳಲ್ಲಿ ಕಲಿಸುವಂಥಾ ವಿದ್ಯೆಗಳಿಂದಲ್ಲ. ಈಗಿನ ಪಾಠಶಾಲೆಗಳ ಅಧಿಕಾರಿಗಳು ಸಂಕೇತವಾದ ಸೂತ್ರಗಳು ವಿನಾ ಮತ್ತಾವುದನ್ನು ಹೇಳಿಕೊಡುವುದಿಲ್ಲ.

ಈಗ ಮನುಷ್ಯಕಾರ್ಯಗಳ ಮೂರನೆಯ ದೊಡ್ಡ ವಿಭಾಗವು ವಿಚಾರಿಸಲ್ಪಡುವುದು. ಇದರವಿಷಯವನ್ನು ನಮ್ಮ ಪಾಠಶಾಲೆಗಳಲ್ಲಿ ಸುತರಾಂ ಕಲಿಸುವುದಿಲ್ಲ. ಅಪೂರ್ವವಾದ ದೈವಯೋಗದಿಂದ ನಮ್ಮ ಪಾಠಶಾಲಾ ಪುಸ್ತಕಗಳೂ ಮತ್ತು ಪರೀಕ್ಷಾ

ಪತ್ರಗಳೂ ಹೊರತಾಗಿ ನಿಕ್ಕ ಗುರುತುಗಳೆಲ್ಲಾ ನಾಶವಾಗಿ ಬಹುಕಾಲವಾದ ಬಳಿಕ, ಪುರಾತನ ವಿಷಯಾನ್ವೇಷಿಯಾದ ಯಾವನಾದರೂ ಒಬ್ಬನು ಆ ಪುಸ್ತಕ ಪತ್ರಿಕೆಗಳನ್ನು ನೋಡಿದರೆ ಅವುಗಳಲ್ಲಿ ದಂಪತಿಗಳಿಗೆ ಹೇಳಲ್ಪಟ್ಟ ಧರ್ಮಗಳನ್ನು ಕಾಣದೆ ಪರಮಾಶ್ಚರ್ಯಪಡದೆ ಇರಲಾರನು. ಈ ಪಾಠಕ್ರಮವು ಬ್ರಹ್ಮಚಾರಿಗಳಿಗೆ ಹೇಳಿದುದಾಗಿರಬೇಕು; ಇದರಲ್ಲಿ ಅನೇಕವಿಷಯಗಳು ಗರ್ಭಿತವಾಗಿರುವುವು; ಮುಖ್ಯವಾಗಿ ಗತಿಸಿಹೋದ ಜನಾಂಗದವರ ವಿಷಯವೂ ಸಹಕಾಲವಾಸಿಗಳಾಗಿದ್ದ ಜನಾಂಗದವರ ವಿಷಯವೂ ಉಕ್ತವಾಗಿವೆ; ಆದರೆ ಇಂಗ್ಲಿಷ್‌ನವರ ಸ್ವಂತವಿಷಯವಿಲ್ಲ; ಮತ್ತು ಮಕ್ಕಳ ಪೋಷಣೆಯನ್ನು ಕುರಿತು ಸ್ವಲ್ಪವೂ ಹೇಳಿಲ್ಲ; ಅವರು ಮಹಾಗೌರವವಾದ ಈ ಕಾರ್ಯದವಿಷಯವಾಗಿ ಏನನ್ನು ಕಲಿಸದೆ ಇರುವಷ್ಟು ಮೂಢರಾಗಿರಲಾರರು; ಆದುದರಿಂದ ಪ್ರಾಯಕವಾಗಿ ಈ ಪಾಠಕ್ರಮವು ಸನ್ಯಾಸಿಗಳಿಗೋಸ್ಕರ ಹೇಳಿದುದಾಗಿರಬಹುದೆಂದು ಆತನು ಪರ್ಯಾಲೋಚಿಸಿ ಸಮಾಧಾನವನ್ನು ಹೊಂದಬಹುದು.

ಮಕ್ಕಳ ಪೋಷಣೆಯನ್ನು ಸರಿಯಾಗಿ ನಡಿಸಿದರೆ ಅವರು ಬದುಕಿಕೊಂಡು ಆರೋಗ್ಯವಾಗಿ ಬೆಳೆದು ಸಂಪನ್ನರಾಗಿ ಬಾಳುವರು. ಹಾಗೆ ಮಾಡದಿದ್ದರೆ ಸತ್ತು ಕೆಟ್ಟು ಹೋಗುವರು. ಇದು ಸರ್ವರಿಗೂ ತಿಳಿದ ವಿಷಯವಾಗಿದೆ. ಈಗ ವಿದ್ಯಾಭ್ಯಾಸ ಮಾಡುವ ಹುಡುಗರೂ ಹುಡುಗಿಯರೂ ಮುಂದೆ ದೊಡ್ಡವರಾಗಿ ಬೆಳೆದು, ತಂದೆ ತಾಯಿಗಳಾಗಿ ಮಕ್ಕಳ ಪೋಷಣ ಕಾರ್ಯವನ್ನು ವಹಿಸಬೇಕಾಗುವುದು. ಹಿಗಿದ್ದಾಗ್ಗೂ ಅವರಿಗೆ ಪಾಠಶಾಲೆಗಳಲ್ಲಿ ಮಕ್ಕಳ ಸಂರಕ್ಷಣ ವಿಷಯವಾಗಿ ಒಂದು ಮಾತನ್ನಾದರೂ ಹೇಳದೇ ಇರುವುದು ಪರಮಾಶ್ಚರ್ಯವಾಗಿಯೂ ಶೋಚನೀಯವಾಗಿಯೂ ಇರುವುದು. ಆದಪ್ರಯುಕ್ತ ಇವರು ಮಕ್ಕಳ ಪೋಷಣೆಯನ್ನು ಉಚಿತವಾಗಿ ಮಾಡದೆ, ಮನಸ್ಸಿಗೆ ಬಂದಂತಾಗಲೀ ಮೂಢಪದ್ಧತಿಯನ್ನನುಸರಿಸಿಯಾಗಲೀ ಆ ಸಂಬಂಧವಾದ ಜ್ಞಾನವಿಲ್ಲದ ದಾಯಿಗಳು ಅಥವಾ ಅಜ್ಜಿಮ್ಮನವರು ಹೇಳಿದ ಪ್ರಕಾರವಾಗಲೀ ಮಕ್ಕಳನ್ನು ಅಯೋಗ್ಯವಾಗಿ ಸಾಕುವರು.

ಹೀಗೆ ಮಾಡುವುದು ಕ್ರೂರ ಕೃತ್ಯವೆಂದು ಹೇಳಬೇಕಾದುದಿಲ್ಲ. ಲೆಕ್ಕವನ್ನರಿಯದವನಾಗಿಯೂ ಲೆಕ್ಕವನ್ನು ಬರೆದಿಟ್ಟುಕೊಳ್ಳಲಿಕ್ಕೆ ಬಾರದವನಾಗಿಯೂ ಇರುವ ಮನುಷ್ಯನು ವರ್ತಕತನ ಮಾಡಲಿಕ್ಕೆ ಹೊರಟರೆ ಜನರು ಅವನೆಂಥಾ ಮೂರ್ಖನು ಎಂದು ಹೇಳುತ್ತಾ ಅವನಿಗೆ ಬಹಳ ನಷ್ಟವಾಗಬಹುದೆಂದು ನಿರೀ

ಷಿಸುವರು. ದೇಹರಚನೆಯನ್ನು ತಿಳಿಯದವನು ಶಸ್ತ್ರ ಚಿಕಿತ್ಸೆಯನ್ನು ಮಾಡಲಿಕ್ಕೆ ಹೊರಟರೆ ಇವನೆಂಥಾ ಧೂರ್ತನುಎಂದು ಆಶ್ಚರ್ಯಪಟ್ಟು ಇನ ಬಳಿಗೆ ಚಿಕಿತ್ಸೆಗಾಗಿ ಹೋಗುವ ರೋಗಿಗಳ ಗತಿ ಏನಾಗುವುದೆಂದುಚಿಂತಿಸುವರು. ಆದರೆ ಮಕ್ಕಳ ಪೋಷಣ ವಿಷಯವನ್ನು ಸ್ವಲ್ಪವೂ ಕಲಿಯದವರಾದ ತಾಯಿತಂದೆಗಳು ಆ ಕಷ್ಟವಾದ ಕೆಲಸವನ್ನು ಮಾಡಲು ಉದ್ಯುಕ್ತರಾದರೆ ಅದನ್ನು ಕುರಿತು ಆಶ್ಚರ್ಯಪಡದೆ ದೆ ಇರುವುದು ಪರಮಾಶ್ಚರ್ಯಕರವಾಗಿದೆ.

ಸಾಮಾನ್ಯವಾಗಿ ಈಗಿನ ರೀತಿಯಲ್ಲಿ ಹತ್ತುಸಾವಿರ ಮಕ್ಕಳು ಸತ್ತರೆ ಲಕ್ಷ ಮಕ್ಕಳು ದುರ್ಬಲ ದೇಹವುಳ್ಳವರಾಗಿ ಬದುಕುವರು, ಕೋಟಿ ಜನರು ದುರ್ಬಲ ದೇಹದೊಡನೆ ದೊಡ್ಡವರಾಗಿ ಬೆಳೆಯವರು. ಈ ಸಂಗತಿಯನ್ನು ಪರ್ಯಾಲೋಚಿಸಿದರೆ, ಜೀವನಿಯಮಗಳನ್ನರಿಯದ ತಾಯಿತಂದೆಗಳು ಮಾಡುವ ಅವಿವೇಕವಾದ ಪೋಷಣೆಯಿಂದ ಎಷ್ಟರಮಟ್ಟಿಗೆ ಕೇಡು ಉಂಟಾಗುವುದೆಂಬುದು ಗೊತ್ತಾಗುವುದು. ಅವರು ಕೊಡುವ ಆಹಾರವು ಅನೇಕ ವೇಳೆಗಳಲ್ಲಿ ಮಕ್ಕಳಿಗೆ ಜನ್ಮಾವಧಿ ಹಾನಿಯುಂಟುಮಾಡುವಂಥಾದ್ದಾಗಿರುವುದು. ಒಂದು ಸರಿಯಾದ ಮಾರ್ಗವಿದ್ದರೆ ಇಪ್ಪತ್ತು ತಪ್ಪಾದ ಮಾರ್ಗಗಳಿರುವುವು. ಹೀಗೆ ಮೂಢ ಪದ್ಧತಿಯು ಪ್ರಕಾರ ಮಾಡುವ ಮಕ್ಕಳ ಸರಾಂಬರಿಕೆಯು ಅವರಿಗೆ ನಾನಾ ವಿಧಗಳಲ್ಲಿ ಕೇಡನ್ನು ಮಾಡುವುದು.

ಮಕ್ಕಳಿಗೆ ಶಾಖವಾಗಿರುವಂತೆ ಮೈ ತುಂಬಾ ಬಟ್ಟೆಯನ್ನು ಸರಿಯಾಗಿ ಹಾಕದೆ ಚಳಿಯಲ್ಲಿ ಹೊರಕ್ಕೆ ಆಡಲಿಕ್ಕೆ ಕಳುಹಿದರೆ ಏನಾಗುವುದು? ಅವರು ಮುಂದಿನ ಬಾಳಿಕೆಗೆ ಬಹು ಕುಂದಕ ಬರುವುದು. ಅವರು ರೋಗದಲ್ಲಿ ಬಿದ್ದು ನರಳುವರು ಅಥವಾ ಕೃಶವಾದ ದೇಹವುಳ್ಳರಾಗಿ ಬೆಳೆಯುವರು, ಅಥವಾ ಸಾಮರ್ಥ್ಯವಿಲ್ಲದವರಾಗುರು, ಅಥವಾ ಮನುಷ್ಯರು ಯೌವನದಲ್ಲಿ ಎಷ್ಟರಮಟ್ಟಿಗೆ ಕಾಯಪುಷ್ಟರಾಗಿಯೂ ಶಕ್ತಿವಂತರಾಗಿಯೂ ಇರಬೇಕೋ ಅಷ್ಟರಮಟ್ಟಿಗೆಅವರಿಲ್ಲದಿರುವರು. ಇದರಿಂದ ಅವರಿಗೆ ಸುಖ ಉಂಟಾಗುವುದಿಲ್ಲ, ಹಿಡಿದಕಾರ್ಯದಲ್ಲಿ ಜಯವು ಲಭಿಸುವದಿಲ್ಲ. ಮಕ್ಕಳಿಗೆ ಒಂದೇಬಗೆಯ ಆಹಾರವನ್ನಾಗಲೀ ಸಾರವಿಲ್ಲದ ಆಹಾರವನ್ನಾಗಲೀ ಕೊಡುವುದರಿಂದೇನಾಗುವುದು? ಇದರಿಂದ ಅವರ ದೇಹಶಕ್ತಿಯೂ ಮನಶ್ಶಕ್ತಿಯೂ ಕಡಿಮೆಯಾಗಿ ಅವರು ಜೀವಚ್ಛವದಂತಾಗುವರು ಮತ್ತು ಬೇಗನೆ ಮೃತ್ಯುವಿನ ಪಾಲಾಗುವರು.

ಕೂಗಾಡುತ್ತಾ ಆಟಿಗಳನ್ನು ಆಡದಂತೆ ಮಕ್ಕಳನ್ನು ತಡೆದರೂ ಅಥವಾ ಯೋಗ್ಯವಾದ ಬಟ್ಟೆಗಳನ್ನು ಹಾಕಿ ಹೊರಕ್ಕೆ ತಿರುಗಾಡಲಿಕ್ಕೆ ಕಳುಹಿಸದೆ ಮನೆಯಲ್ಲಿಯೇ ಇಟ್ಟುಕೊಂಡರೂ ಆರೋಗ್ಯವು ಕೆಟ್ಟು ಅವರು ಸಹಜವಾಗಿ ಯಾವ ಸ್ಥಿತಿಯಲ್ಲಿರಬೇಕೋ ಆ ಸ್ಥಿತಿಯಲ್ಲಿರದೆ ಹೋಗುವರು. ಅನೇಕ ತಾಯಿತಂದೆಗಳು ತಮ್ಮ ಮಕ್ಕಳು ರೋಗದಲ್ಲಿ ಬಿದ್ದು ದುರ್ಬಲರಾದರೆ ಅದು ತಮ್ಮ ದುರ್ದೈವವೆಂದೂ ಈಶ್ವರನು ತಮಗಂಥಾ ದುರವಸ್ಥೆಯನ್ನು ಕೊಟ್ಟನೆಂದೂ ಭಾವಿಸುವರು. ಮುಗ್ಧ ಲೋಕವಾರ್ತೆಯನ್ನನುಸರಿಸಿದವರಾಗಿ ಇಂಥಾ ಕೇಡು ಕಾರಣವಿಲ್ಲದೆ ದೈವಯೋಗದಿಂದ ಉಂಟಾಗುವದೆಂದು ಯೋಚಿಸುವರು. ಇನ್ನು ಕೆಲವರು ತಮ್ಮ ಸ್ವಾಧೀನ ಮೀರಿದ ದೈವತಂತ್ರದಿಂದ ರೋಗಗಳು ಬರುವುವೆಂದು ಭಾವಿಸುವರು. ಇದು ತಪ್ಪಾದ ಅಭಿಪ್ರಾಯ. ಎಷ್ಟೋ ರೋಗ ಕಾರಣಗಳು ಮನುಷ್ಯರ ಧೀನದಲ್ಲಿಯೇ ಇರುವುವು.

ಆ ಕಾರಣಗಳನ್ನು ತಪ್ಪಿಸಿ ರೋಗಗಳು ಬರದಂತೆ ಮಾಡಿಕೊಳ್ಳಲು ಅವರು ಸಮರ್ಥರಾಗಿರುವರು. ಕೆಲವು ರೋಗಗಳು ತಂದೆತಾಯಿಗಳ ದುರ್ನಡತೆಯಿಂದ ಮಕ್ಕಳಿಗೆ ಬರುವುವು. ಬೇರೆ ರೋಗಗಳು ಅವರವರ ದುರ್ನಡತೆಗಳಿಂದಲೇ ಉಂಟಾಗುವುವು. ಸಾಮಾನ್ಯವಾಗಿ ಅನೇಕ ತಾಯಿತಂದೆಗಳು ಆರೋಗ್ಯನಿಯಮಗಳನ್ನೂ ಮಕ್ಕಳ ಪೋಷಣೆಯ ವಿಷಯವನ್ನೂ ಅರಿಯದವರಾಗಿ ಕಷ್ಟಕೆಲಸವಾದ ಮಕ್ಕಳಸಂರಕ್ಷಣ ಭಾರವನ್ನು ವಹಿಸಿ ಯದ್ವಾ ತದ್ವಾ ಆಚರಿಸುವುದರಿಂದಲೇ ಆ ಮಕಳ ದೇಹಸ್ಥಿತಿಯು ಕೆಟ್ಟು ಅವರು ರೋಗಿಗಳಾಗಿಯೂ ದುರ್ಬಲರಾಗಿಯೂ ಬೆಳೆದು ಕಡೆಗೆ ಅಕಾಲ ಮೃತ್ಯುವನ್ನು ಹೊಂದುವರು. ಮೂಢರಾದ ತಾಯಿತಂದೆಗಳು ಇಂಥಾ ಕೇಡುಗಳನ್ನು ತಮ್ಮ ಮಕ್ಕಳಿಗೆ ಮಾತ್ರ ವಲ್ಲದೆ ತಮ್ಮ ಮಕ್ಕಳು ಮುಂತಾದವರಿಗೂ ದುರ್ಬಲವಾದ ದೇಹವನ್ನೂ ದುಃಖವನ್ನೂ ಕೊಡಲು ಕಾರಣರಾಗುವರು. ಹೀಗೆ ಇಂಥವರು ಮಾಡುವ ಅಯೋಗ್ಯವಾದ ಸಂರಕ್ಷಣವು ಮಕ್ಕಳಿಗೆ ಅನೇಕ ಸಂದರ್ಭಗಳಲ್ಲಿ ಅತಿ ಕ್ರೂರವಾಗಿ ಪರಿಣಮಿಸುವುದು.—

S. V.

(ಸಶೇಷ).

ಸ್ಸುವರು. ದೇಹರಚನೆಯನ್ನು ತಿಳಿಯದವನು ಶಸ್ತ್ರ ಚಿಕಿತ್ಸೆಯನ್ನು ಮಾಡಲಿಕ್ಕೆ ಹೊರಟರೆ ಇವನೆಂಥಾ ಧೂರ್ತನುಎಂದು ಆಶ್ಚರ್ಯಪಟ್ಟು ಇನ ಬಳಿಗೆ ಚಿಕಿತ್ಸೆಗಾಗಿ ಹೋಗುವ ರೋಗಿಗಳ ಗತಿ ಏನಾಗುವುದೆಂದುಚಿಂತಿಸುವರು. ಆದರೆ ಮಕ್ಕಳ ಪೋಷಣ ವಿಷಯವನ್ನು ಸ್ವಲ್ಪವೂ ತಿಳಿಯದವರಾದ ತಾಯಿತಂದೆಗಳು ಅ ಕೃಷ್ಟ ವಾದ ಕೆಲಸವನ್ನು ಮಾಡಲು ಉದ್ಯುಕ್ತರಾದರೆ ಅದನ್ನು ಕುರಿತು ಆಶ್ಚರ್ಯಪಡದೆ ಇರುವುದು ಪರಮಾಶ್ಚರ್ಯಕರವಾಗಿದೆ.

ಸಾಮಾನ್ಯವಾಗಿ ಈಗಿನ ರೀತಿಯಲ್ಲಿ ಹತ್ತುಸಾವಿರ ಮಕ್ಕಳು ಸತ್ತರೆ ಲಕ್ಷ ಮಕ್ಕಳು ದುರ್ಬಲ ದೇಹವುಳ್ಳವರಾಗಿ ಬದುಕುವರು, ಕೋಟಿ ಜನರು ದುರ್ಬಲ ದೇಹಸೊಡನೆ ಮೊದ್ದವರಾಗಿ ಬೆಳೆಯವರು. ಈ ಸಂಗತಿಯನ್ನು ಪರ್ಯಾಲೋಚಿಸಿದರೆ, ಜೀವನಿಯಮಗಳನ್ನರಿಯದ ತಾಯಿತಂದೆಗಳು ಮಾಡುವ ಅವಿವೇಕವಾದ ಪೋಷಣೆಯಿಂದ ಎಷ್ಟುರಮಟ್ಟಿಗೆ ಕೇಡು ಉಂಟಾಗುವುದೆಂಬುದು ಗೊತ್ತಾಗುವುದು. ಅವರು ಕೊಡುವ ಆಹಾರವು ಅನೇಕ ವೇಳೆಗಳಲ್ಲಿ ಮಕ್ಕಳಿಗೆ ಜೀರ್ಣವಾಗಿ ಪಾಕ ಯುಂಟುಮಾಡುವಂಥಾದ್ದಾಗಿರುವುದು. ಒಂದು ಸರಿಯಾದ ಮಾರ್ಗವಿದ್ದರೆ ಇಪ್ಪತ್ತು ತಪ್ಪಾದ ಮಾರ್ಗಗಳಿರುವುವು. ಹೀಗೆ ಮೂಢ ಪದ್ಧತಿಯು ಪ್ರಕಾರ ಮಾಡುವ ಮಕ್ಕಳ ಪರಾಂಬರಿಕೆಯು ಅವರಿಗೆ ನಾನಾ ವಿಧಗಳಲ್ಲಿ ಕೇಡನ್ನು ಮಾಡುವುದು.

ಮಕ್ಕಳಿಗೆ ಕಾಯಿಲೆಯಾಗಿರುವಂತೆ ಮೈ ಉಂಟಾ ಬಟ್ಟೆಯನ್ನು ಸರಿಯಾಗಿ ಹಾಕದೆ ಜಳಜಳ್ಳಿಲ್ಲಿ ಹೊರಕ್ಕೆ ಆಡಲಿಕ್ಕೆ ಕಳುಹಿದರೆ ಏನಾಗುವುದು? ಅವರು ಮುಂದಿನ ಗಳಿಗೆಗೆ ಬಹು ಜ್ವರದಿಂದ ಬಳಲುವುದು. ಅವರು ಮೋಡವಿಲ್ಲದ ದಿವಸ ನೆರಳುಬರುವ ಜಾಗದಲ್ಲಿ ಆಡಿದರೆ ಅವರು ಸಣ್ಣ ದೇಹವುಳ್ಳವರಾಗಿ ಬೆಳೆಯುವರು, ಅಥವಾ ಸಾಮಾನ್ಯ ಸ್ವಾಸ್ಥ್ಯವಿಲ್ಲದವರಾಗುವರು, ಅಥವಾ ಮನುಷ್ಯರು ಯೌವನದಲ್ಲಿ ಎಷ್ಟುರಮಟ್ಟಿಗೆ ಕಾಯುವ ಶಕ್ತಿಯುಳ್ಳವರಾಗಿರುವರೋ ಅಷ್ಟುರಮಟ್ಟಿಗೆ ಅವರು ಆಡಲಿಕ್ಕೆ ಬಿಸಿಲಿನಲ್ಲಿ ಕಳುಹಿಸಬೇಕು. ಅವರಿಗೆ ಬಿಸಿಲು ಬಾರದಂತೆ ಮಾಡಬಾರದು. ಮಕ್ಕಳಿಗೆ ಬಿಸಿಲಿನಲ್ಲಿ ಆಡಲಿಕ್ಕೆ ಕಳುಹಿಸಿದಾಗ ಅವರು ಬೆವರಿ ಸ್ನಾನಮಾಡಿದಂತಾಗುವುದು. ಆಗ ಅವರ ಮೈಯನ್ನು ಒರಸಿ ಒಣಗಿಸಿ ಅವರು ಆಡಿದ ಸ್ಥಳಕ್ಕೆ ಕಳುಹಿಸಿದರೆ ಅವರಿಗೆ ಯಾವ ಅಪಾಯವೂ ಆಗುವುದಿಲ್ಲ.

ಕೂಗಾಡುತ್ತಾ ಆಟಿಗೆಗಳನ್ನು ಅಡದಂತೆ ಮಕ್ಕಳನ್ನು ತಡೆದರೂ ಅಥವಾ ಯೋಗ್ಯವಾದ ಬಟ್ಟೆಗಳನ್ನು ಹಾಕಿ ಹೊರಕ್ಕೆ ತಿರುಗಾಡಲಿಕ್ಕೆ ಕಳುಹಿಸದೆ ಮನೆಯಲ್ಲಿಯೇ ಇಟ್ಟುಕೊಂಡರೂ ಆರೋಗ್ಯವು ಕೆಟ್ಟು ಅವರು ಸಹಜವಾಗಿ ಯಾವ ಸ್ಥಿತಿಯಲ್ಲಿರಬೇಕೋ ಆ ಸ್ಥಿತಿಯಲ್ಲಿರದೆ ಹೋಗುವರು. ಅನೇಕ ತಾಯಿತಂದೆಗಳು ತಮ್ಮ ಮಕ್ಕಳು ರೋಗದಲ್ಲಿ ಬಿದ್ದು ದುರ್ಬಲರಾದರೆ ಅದುತಮ್ಮ ದುರ್ದೈವವೆಂದೂ ಈಶ್ವರನು ತಮಗಂಥಾ ದುರವಸ್ಥೆಯನ್ನು ಕೊಟ್ಟನೆಂದೂ ಭಾವಿಸುವರು. ಮುಗ್ಧ ಲೋಕವಾರ್ತೆಯನ್ನನುಸರಿಸಿದವರಾಗಿ ಇಂಥಾ ಕೇಡು ಕಾರಣವಿಲ್ಲದೆ ದೈವಯೋಗದಿಂದ ಉಂಟಾಗುವದೆಂದು ಯೋಚಿಸುವರು. ಇನ್ನು ಕೆಲವರು ತಮ್ಮ ಸ್ವಾಧೀನ ಮೀರಿದ ದೈವತಂತ್ರದಿಂದ ರೋಗಗಳು ಬರುವುವೆಂದು ಭಾವಿಸುವರು. ಇದು ತಪ್ಪಾದ ಅಭಿಪ್ರಾಯ. ಎಷ್ಟೋ ರೋಗ ಕಾರಣಗಳು ಮನುಷ್ಯರ ಧೀನದಲ್ಲಿಯೇ ಇರುವುವು.

ಆ ಕಾರಣಗಳನ್ನು ತಪ್ಪಿಸಿ ರೋಗಗಳು ಬರದಂತೆ ಮಾಡಿಕೊಳ್ಳಲು ಅವರು ಸಮರ್ಥರಾಗಿರುವರು. ಕೆಲವು ರೋಗಗಳು ತಂದೆತಾಯಿಗಳ ದುರ್ನಡತೆಯಿಂದ ಮಕ್ಕಳಿಗೆ ಬರುವುವು. ಬೇರೆ ರೋಗಗಳು ಅವರವರ ದುರ್ನಡತೆಗಳಿಂದಲೇ ಉಂಟಾಗುವುವು. ಸಾಮಾನ್ಯವಾಗಿ ಅನೇಕ ತಾಯಿತಂದೆಗಳು ಆರೋಗ್ಯನಿಯಮಗಳನ್ನೂ ಮಕ್ಕಳ ಪೋಷಣೆಯ ವಿಷಯವನ್ನೂ ಅರಿಯದವರಾಗಿ ಕಷ್ಟಕೆಲಸವಾದ ಮಕ್ಕಳಸಂರಕ್ಷಣ ಭಾರವನ್ನುವಹಿಸಿ ಯದ್ವಾ ತದ್ವಾ ಆಚರಿಸುವುದರಿಂದಲೇ ಆ ಮಕಳ ದೇಹಸ್ಥಿತಿಯು ಕೆಟ್ಟು ಅವರು ರೋಗಿಗಳಾಗಿಯೂ ದುರ್ಬಲರಾಗಿಯೂ ಬೆಳೆದು ಕಡೆಗೆ ಅಕಾಲ ಮೃತ್ಯುವನ್ನು ಹೊಂದುವರು. ಮೂಢರಾದ ತಾಯಿತಂದೆಗಳು ಇಂಥಾ ಕೇಡುಗಳನ್ನು ತಮ್ಮ ಮಕ್ಕಳಿಗೆ ಮಾತ್ರ ವಲ್ಲದೆ ತಮ್ಮ ಮಕ್ಕಳು ಮುಂತಾದವರಿಗೂ ದುರ್ಬಲವಾದ ದೇಹವನ್ನೂ ದುಃಖವನ್ನೂ ಕೊಡಲು ಕಾರಣರಾಗುವರು. ಹೀಗೆ ಇಂಥವರು ಮಾಡುವ ಅಯೋಗ್ಯವಾದ ಸಂರಕ್ಷಣವು ಮಕ್ಕಳಿಗೆ ಅನೇಕ ಸಂದರ್ಭಗಳಲ್ಲಿ ಅತಿ ಕ್ರೂರವಾಗಿಪರಿಣಮಿಸುವುದು.—

S. V.

(ಸಶೇಷ).

ಲಂಡನ್ ಪಟ್ಟಣದ ವಿದ್ಯಾಭ್ಯಾಸ.

ಈ ಪಟ್ಟಣವು ಬ್ರಿಟಿಷ್ ಪ್ರಪಂಚಕ್ಕೆ ರಾಜಧಾನಿಯಾಗಿರುವುದು. ಈ ಪಟ್ಟಣದ ಸುತ್ತಳತೆಯು ೪೦ ಮೈಲಿಗಳಾಗಿರುವುದು. ಒಂದು ಬೀದಿಯಿಂದ ಮತ್ತು ಬೀದಿಗೆ ಹೋಗುವುದಕ್ಕೂ ರೈಲುಗಳು ಹಾಕಿರುವುವು. ಎಲ್ಲಾ ರಸ್ತೆಗಳಲ್ಲಿಯೂ ರೈಲು ಹೋಗತಕ್ಕ ದಾರಿ ಇವುಗಳೆಲ್ಲಾ ಇರುವುವು. ಈ ಪಟ್ಟಣದಲ್ಲಿ ೫೫ ಲಕ್ಷ ಜನಗಳಿರುವರು. ಇಲ್ಲಿನ ವಿದ್ಯಾಭ್ಯಾಸ ಕ್ರಮವು ಪ್ರಪಂಚಕ್ಕೆಲ್ಲಾ ಮೇಲುಪಂಕ್ತಿಯಾಗಿರುವುದು. ಸಾಮಾನ್ಯವಾಗಿ ಎಲ್ಲಾ ಜನಗಳಿಗೂ, ಓದುವುದೂ, ಬರೆಯುವದೂ, ಲೆಖ್ಖಾಚಾರಇಷ್ಟು ಮಟ್ಟಿಗಾದರೂ ಕಡ್ಡಾಯವಾಗಿರಬೇಕೆಂದು ಸರಕಾರದವರಿಗೆ ಉದ್ದೇಶವಾಗಿರುವುದು. ಈ ವಿದ್ಯಾಭ್ಯಾಸದ ವಿಚಾರಣೆಗಳನ್ನು ಮಾಡುವುದಕ್ಕೆ ಒಂದು ಸಂಘವು ಇರುವುದು. ಈ ಸ್ಕೂಲುಗಳ ಮೇಲುವಿಚಾರಣೆಗಳೆಲ್ಲಾ ಈ ಸಂಘಕ್ಕೆ ಸೇರಿದುದು. ಪ್ರೈಮರಿ ವಿದ್ಯಾಭ್ಯಾಸಕ್ಕೆ 375,000,000 ರೂಪಾಯಿ ಗೊತ್ತಾಗಿರುವುದು. ಈ ಪಟ್ಟಣದಲ್ಲಿ 13 ಕಲಾಶಾಲೆಗಳೂ, 3 ಟ್ರೈನಿಂಗ್ ಕಾಲೇಜುಗಳೂ, 8 ಪ್ರೈಮರಿ ಉಪಾಧ್ಯಾಯರನ್ನು ತಯಾರು ಮಾಡತಕ್ಕ ಪಾಠಶಾಲೆಗಳೂ, 12 ಸೆಕಂಡರೀ ಸ್ಕೂಲುಗಳೂ, 370 ರಾತ್ರಿ ಪಾಠಶಾಲೆಗಳೂ, 4 ಯೂನಿವರ್ಸಿಟಿ ಕಾಲೇಜುಗಳೂ 29 ಕುಶಲವಿದ್ಯೆಗಳ ಪಾಠಶಾಲೆಗಳೂ 1 ಟ್ರೈನಿಂಗ್ ಕಾಲೇಜೂ, 57 ಸೆಂಕಡ್ರಿ ಸ್ಕೂಲುಗಳೂ 4 ಕೈಗಾರಿಕೆ ಪಾಠಶಾಲೆಗಳೂ, 2 ತುಂಟುಹುಡುಗರನ್ನು ತಯಾರುಮಾಡತಕ್ಕ ಪಾಠಶಾಲೆಗಳೂ, ಇರುವುದು. ಸಾಮಾನ್ಯವಾಗಿ 11 ಅಥವಾ 12 ವರ್ಷದವರಿಗೂ ವಿದ್ಯಾಭ್ಯಾಸವು ಪ್ರಾಯಕವಾಗಿ ಎಲ್ಲರಿಗೂ ಮಾಡಿಸಲ್ಪಡಬೇಂದು ವಿಧಾಯಕವಾಗಿರುವುದು. ಪಾಠಕರಲ್ಲಿ ಗಂಡಸರಿಗೆ 400 ಪೌಂಡುಗಳವರಿವಿಗೂ ಸಂಬಳಸಲ್ಲುವುದು. ಹೆಂಗಸರಿಗೆ 300 ಪೌಂಡುಗಳವರಿಗೂ ಸಂಬಳ ಸಲ್ಲುವುದು. ನಿಕೃಷ್ಟವಾದ ಸಂಬಳವು 62 ಪೌಂಡುಗಳಿಗಿಂತಲೂ ಕಡಿಮೆಯಾಗಿರುವುದಿಲ್ಲ. ಎಲ್ಲಾ ಸ್ಕೂಲುಗಳಿಗೂ ಆ ಸ್ಕೂಲಿನ ಜನಸಂಖ್ಯೆಗೆ ಅನುಸಾರವಾಗಿ ಆರೋಗ್ಯವಿಧಿಗಳಿಗೆ ಅನುಸಾರವಾದ ಕಟ್ಟಿಡಗಳೂ, ಬೆಂಚು, ಕುರ್ಚಿ, ಡೆಸ್ಕು ಮೊದಲಾದಪದಾರ್ಥಗಳೂ, ಪಾಠ ಹೇಳುವುದಕ್ಕೆ ಬೇಕಾದ ಇತರ ಸಲಕರಣಗಳೂ, ಪುಸ್ತಕಗಳೂ, ಇವುಗಳನ್ನೆಲ್ಲಾ ಕೊಡುವರು. ಇದಕ್ಕಾಗಿ ಪ್ರತ್ಯೇಕವಾದ ಬಡ್ಜಟ್ಟಿನ ಏರ್ಪಾಡುಗಳನ್ನು ಇಟ್ಟಿರುವರು. ಪ್ರಜೆಗಳು ವಿದ್ಯಾವಂತರಾಗಿ ಸ್ವಶಕ್ತಿಯಿಂದ ಜೀವಿಸುವಂತಾ

ದರೆ ಇವರಿಗೋಸ್ಕರ ಮಾಡಲ್ಪಟ್ಟ ಖರ್ಚೆಲ್ಲಾ ಕಂದಾಯವೇ ಮೊದಲಾದ ರೂಪಗಳಿಂದ ಸರಕಾರಕ್ಕೆ ಪುನಃ ಬರುವದೆಂದು ಅವರು ಇಷ್ಟು ಉದಾರವಾದ ಏರ್ಪಾಡುಗಳನ್ನು ಮಾಡಿರುವರು. ಪ್ರೈಮರಿ ವಿದ್ಯಾಭ್ಯಾಸಕ್ಕೆ ಈ ರೀತಿಯಲ್ಲಿ ಮಾಡಲ್ಪಟ್ಟ ಏರ್ಪಾಡಿನಿಂದ ಜನಗಳು ವಿದ್ಯಾವಂತರಾಗಿ ಸ್ವಶಕ್ತಿಯಿಂದ ನಾನಾ ವಿಧವಾದ ಪ್ರೈಮರಿ ಕೈಗಾರಿಕೆಗಳಲ್ಲಿಯೂ ಪ್ರವೇಶವುಳ್ಳವರಾಗಿ 11, 12 ವರ್ಷಗಳಾಗುವುದರೊಳಗಾಗಿ, ಓದು ಬರಹ ಮಾತ್ರವೇ ಅಲ್ಲದೆ ಯಾರ್ಯಾರಿಗೆ ಯಾವಯಾವ ಕಸಬುಗಳಲ್ಲಿ ಇಷ್ಟವಿರುತ್ತದೋ, ಅಂಥವುಗಳಲ್ಲಿಯೂ ಪ್ರವೇಶವನ್ನು ಹೊಂದಿ ಸ್ವಶಕ್ತಿಯಿಂದ ಬದುಕುವ ಮಾರ್ಗವನ್ನು ಹೊಂದುವರು. ಬ್ರಿಟಿಷ್ ಜನರು ಬಹಳ ಉಪಪನ್ನರಾದುದರಿಂದ ಒಂದು ಪಟ್ಟಣದ ಪ್ರೈಮರಿ ವಿದ್ಯಾಭ್ಯಾಸಕ್ಕೆ ಇಷ್ಟದ್ರವ್ಯವನ್ನು ಖರ್ಚುಮಾಡುವರು. ಲಂಡನ್ ಪಟ್ಟಣದಲ್ಲಿ ಶೇಕಡ 90 ಕ್ಕೆ ಕಡಮೆ ಇಲ್ಲದಂತೆ ವಿದ್ಯಾರ್ಥಿನಿಯರೂ ಪ್ರೈಮರಿ ವಿದ್ಯಾಭ್ಯಾಸವನ್ನು ಮಾಡುವರು.

ಸ್ತ್ರೀವಿದ್ಯಾಭ್ಯಾಸ.

ಜರ್ಮನ್ ದೇಶದಲ್ಲಿ ಶೇಕಡ 55 ಜನರಂತೆ ವಿದ್ಯಾವತಿಯರಾಗಿರುತ್ತಾರೆ. ಇವರು ನಾನಾ ವಿಧವಾದ ಕೈಗಾರಿಕೆಗಳನ್ನು ಕಲಿತುಕೊಂಡು ಸ್ವಶಕ್ತಿಯಿಂದ ಜೀವನವನ್ನು ಮಾಡುವರು. ರಷ್ಯಾ ದೇಶದೊಡನೆ ಜರ್ಮನರಿಗೆ ಯುದ್ಧ ನಡಿಯುತ್ತಿದ್ದಾಗ ಇವರು ಎಲಾ ಗಂಡಸರನ್ನೂ ಯುದ್ಧಕ್ಕೆ ಕಳುಹಿಸಿಕೊಟ್ಟು, ವ್ಯವಸಾಯ, ಕೈಗಾರಿಕೆಗಳಿಂದ ದೇಶದ ಹುಟ್ಟುವಳಿಗೆ ನ್ಯೂನತೆ ಬರದಂತೆ ಮಾಡಿಕೊಂಡು ಇದ್ದುದಲ್ಲದೆ ತಮ್ಮ ಗಂಡಸರಿಗೆ ಏನಾದರೂ ಪರಾಜಯವಾದರೆ ತಮ್ಮ ದೇಶವನ್ನು ಕಾಪಾಡಿಕೊಳ್ಳುವುದಕ್ಕೆ ಅಸ್ತ್ರ, ಶಸ್ತ್ರಾಭ್ಯಾಸವನ್ನೂ ಮಾಡುತಲಿದ್ದರು. ಮಕ್ಕಳಿಗೆ ವಿದ್ಯಾವತಿಯಾದ ತಾಯಿಗಿಂತಲೂ, ಹೆಚ್ಚಾದ ಪಾತಕರ್ತ್ಯರೂ ಆಗಲಾರರು. ಜನ್ಮವನ್ನು ಎತ್ತಿದಾರಭ್ಯ ಮಕ್ಕಳು, ಸದಾತಾಯಿಯ ಸಮೀಪದಲ್ಲಿರುವುದರಿಂದ ತಾಯಿ

ಯು ವಿದ್ಯಾವತಿಯಾಗಿಯೂ, ಕಲಾವತಿಯಾಗಿಯೂ ಇದ್ದರೆ ಮಕ್ಕಳನ್ನು ಬಹಳ ಸುಲಭವಾಗಿ ತಯಾರುಮಾಡುವುದರಲ್ಲಿ ಸಂದೇಹವಿಲ್ಲ. ಇದರಿಂದಲೇ ಯಾವದೇ ಶದಲ್ಲಿ ಸ್ತ್ರೀಯರು ವಿದ್ಯಾವತಿಯರಾಗಿರುವರೊ ಅಲ್ಲಿ ಜನಗಳೂ ಕೂಡ ಬಹು ಶೀಘ್ರದಲ್ಲಿ ವಿದ್ಯಾವಂತರಾಗಿ ಆತ್ಮಾವಲಂಬನೆಯುಳ್ಳವರಾಗುವರು. ಈ ವಿಷಯವನ್ನು ಬ್ರಿಟಿಷ್ ಜನಗಳು ಚೆನ್ನಾಗಿ ತಿಳಿದವರು. ಇವರಲ್ಲಿ ಶೇಕಡ ೯೦ ಜನಗಳವರಿಗೂ ಸ್ತ್ರೀಯರು ವಿದ್ಯಾವತಿಯರಾಗಿರುವರು. ಸ್ತ್ರೀಪುರುಷರೆಲ್ಲರೂ ವಿದ್ಯಾವಿನಯ ಸಂಪತ್ತುಗಳುಳ್ಳವರಾದುದರಿಂದ ಇವರಿಗೆ ಈ ಭೂಮಂಡಲದಲ್ಲಿ ಬಹುಭಾಗವು ಸ್ವಾಧೀನಕ್ಕೆ ಬಂದಿರುವುದು. ನಮ್ಮ ದೇಶೀಯರಲ್ಲಿಯೂ ಸ್ತ್ರೀವಿದ್ಯಾಭ್ಯಾಸವು ಒಳ್ಳೇ ಸ್ಥಿತಿಗೆ ಬರಬೇಕಾದರೆ ಏನುಮಾಡಬೇಕು ಎಂದು ಬಹುಜನಗಳು ಪ್ರಶ್ನೆಮಾಡಬಹುದು. ಪ್ರಶ್ನೆಗಳಿಂದಲೂ ಚರ್ಚೆಗಳಿಂದಲೂ ಅಲ್ಪಸ್ವಲ್ಪ ಪ್ರಯೋಜನವಿದ್ದಾಗ್ಯೂ ಕಾರ್ಯತಃ ಕೆಲಸಮಾಡುವುದರಿಂದ ಹೆಚ್ಚು ಪ್ರಯೋಜನ ಉಂಟು. ಪುರುಷರಿಗೆ ವಿದ್ಯಾಭ್ಯಾಸವು ಹೇಗೆ ಅವಶ್ಯಕವೋ ಹಾಗೆಯೇ ಸ್ತ್ರೀಯರಿಗೂ ಕೂಡ ಅವಶ್ಯಕ. ಸ್ತ್ರೀಯರಿಗೆ ಹೆಚ್ಚು ಅವಶ್ಯಕ ವೆಂಬುದಾಗಿಯೂ ಹೇಳಬಹುದು. ಇವರು ಗೃಹಿಣಿಯರಾಗಿ, ಗೃಹಕೃತ್ಯಗಳನ್ನು ನೋಡಿಕೊಳ್ಳುತ್ತಾ ಪ್ರಭುತ್ವ, ಅಧಿಕಾರ ಮೊದಲಾದವುಗಳನ್ನು ನೋಡುವುದಕ್ಕೆ ಬೇಕಾದ ದೇಹಶಕ್ತಿ ಬುದ್ಧಿಶಕ್ತಿಗಳನ್ನು ಗಂಡಸರಿಗೆ ಉಟ್ಟುಮಾಡಿಕೊಡುವುದರಲ್ಲಿ ಬದ್ಧಾದರರಾಗಿರತಕ್ಕವರು. ಆದುದರಿಂದ ಈ ಗೌರವವಾದ ಕೆಲಸವನ್ನು ನಿರ್ವಾಹ ಮಾಡುವುದಕ್ಕೆ ಬೇಕಾದ ವಿದ್ಯೆಗಳನ್ನೆಲ್ಲಾ ಇವರು ತಿಳಿದುಕೊಂಡಿರಬೇಕು. ಇವರು ವಿವೇಕಿಗಳಾಗುವುದು ಮುಖ್ಯವಾದುದರಿಂದ ವಿವೇಕಾಭಿವೃದ್ಧಿಗೆ ಬೇಕಾದ ವಿಷಯಗಳನ್ನು ಇವರಿಗೆ ಕಲಿಸಬೇಕು. ಗೃಹಿಣಿಯರಿಗೆ ಯಾವಯಾವ ಕೆಲಸಗಳು ಸಮಗ್ರವಾಗಿ ತಿಳಿಯಬೇಕೋ ಅದನ್ನು ಪರ್ಯಾಲೋಚಿಸಿದರೆ, ಸ್ತ್ರೀಯರಿಗೆ ಯಾವಯಾವ ಪಾಠಗಳನ್ನು ಹೇಳಬೇಕೊ ಅದು ಗೊತ್ತಾಗುವುದು. ಗೃಹಕೃತ್ಯವನ್ನು ನೋಡುವುದಕ್ಕೆ ಓದುವುದೂ, ಬರೆಯುವುದೂ, ಲೆಖ್ಖಾಚಾರ ಇವುಗಳು ಮುಖ್ಯವಾದುವುಗಳು. ಇವು ಮೂರೂ ಬಂದರೆ ಸಕಲ ಆಯವ್ಯಯಗಳನ್ನೂ ಕ್ರಮವಾಗಿ ತಿಳಿದುಕೊಂಡು ಗೃಹಕೃತ್ಯವನ್ನು ನಡಸುವರು. ಇಷ್ಟು ಮಾತ್ರದಿಂದಲೇ ಗೃಹಕೃತ್ಯಕ್ಕೆ ಬೇಕಾದ ಕೆಲಸಗಳೆಲ್ಲಾ ಆಗುವುದಿಲ್ಲ. ಆಯತಿಯನ್ನು ನೋಡಿಕೊಂಡು ಅದರಲ್ಲಿ ಒಂದು ಭಾಗವನ್ನು ಖರ್ಚುಮಾಡಿ ಜೀವಿಸುತ್ತಾ, ಮತ್ತೊಂದು ಭಾಗವನ್ನು ಸೇವಿಂಗ್ಸ್ ಬ್ಯಾಂಕುಗಳಲ್ಲಿ ಇಟ್ಟು

ಕೊಂಡು ಕಷ್ಟಕಾಲಕ್ಕೆ ಅದು ಬದಗುವಂತೆ ಮಾಡಿಕೊಳ್ಳತಕ್ಕವರೂ ಉಂಟು. ಇವರು ಪರಾಧೀನರಾಗದೆ ಸ್ವತಂತ್ರರಾಗಿ ಬದುಕುವರು. ಇವರೇ ಉತ್ತಮರು. ಬಂದುದನ್ನು ಖರ್ಚುಮಾಡಿಕೊಂಡು ಸಾಲಸೋಲಗಳನ್ನು ಮಾಡಿಕೊಳ್ಳದೇ ಇರತಕ್ಕವರೂ ಉಂಟು. ಇವರಿಗೆ ಖಾಯಿಲೆ ಮೊದಲಾದುವುಗಳು ಸಂಭವಿಸಿದ ಕಾಲದಲ್ಲಿ ಕಷ್ಟಗಳು ಬರುವುವು. ಇವರು ಮಧ್ಯಮರು. ಬಂದುದನ್ನೆಲ್ಲಾ ಖರ್ಚುಮಾಡಿ ಅದೂ ಸಾಲದೆ ಸಾಲವನ್ನೂ ಮಾಡಿಕೊಂಡು ಜೀವಿಸತಕ್ಕವರೂ ಉಂಟು. ಇವರು ಅಧಮರು. ಈ ವಿಷಯಗಳನ್ನೆಲ್ಲಾ ಶ್ರುತಪಡಿಸತಕ್ಕ ಶಾಸ್ತ್ರವು ಮಿತವ್ಯಯಶಾಸ್ತ್ರವೆಂದು ಎನ್ನಿಸಿಕೊಳ್ಳುವುದು. ಇದನ್ನು ಸ್ತ್ರೀಯರು ತಿಳಿದುಕೊಳ್ಳುವುದು ಅತ್ಯಂತ ಆವಶ್ಯಕ. ಇವರು ಈ ವಿಷಯದಲ್ಲಿ ಅಜ್ಞಾನಿಗಳಾಗಿರುವುದರಿಂದ ನಮ್ಮ ದೇಶಕ್ಕೆ ಉಂಟಾಗುತ್ತಲಿರುವ ಅನರ್ಥಗಳು ಬಹಳವಾಗಿರುತ್ತವೆ. ಅನೇಕಕೋಟಿ ಪ್ರಾಣಗಳ ಬೆಲೆಯುಳ್ಳ ಜವಾಹಿರಿಗಳೆಲ್ಲ ಇವರ ಪ್ರೀತ್ಯರ್ಥವಾಗಿ ನಮ್ಮ ದೇಶದ ದ್ರವ್ಯವು ಕೊಳೆಯುತ್ತಲಿರುವುದು. ದ್ರವ್ಯವನ್ನು ವೃದ್ಧಿಮಾಡತಕ್ಕ ಈ ಶಾಸ್ತ್ರವು ನಮ್ಮ ಸ್ತ್ರೀಯರ ಅನುಷ್ಠಾನಕ್ಕೆ ಬಂದರೆ ನಮ್ಮ ದೇಶದ ದಾರಿದ್ರ್ಯವೇ ಹತವಾಗುವುದು. ಆದುದರಿಂದ ಮಿತವ್ಯಯಶಾಸ್ತ್ರವು ಇವರಿಗೆ ತಿಳಿಸಲ್ಪಡಬೇಕು. ಸ್ತ್ರೀಯರು ಶಾರೀರಕ ಧರ್ಮ ಶಾಸ್ತ್ರವನ್ನು ತಿಳಿದುಕೊಂಡು ತಾವೂ ತಮ್ಮ ಮಕ್ಕಳೂ, ಆರೋಗದೃಢಕಾಯರಾಗಿರಬೇಕಾದರೆ ಯಾವಯಾವ ಆರೋಗ್ಯ ವಿಧಿಗಳಿಗೆ ಅನುಸಾರವಾಗಿ ನಡೆದುಕೊಳ್ಳಬೇಕೋ ಅದನ್ನು ತಿಳಿದುಕೊಳ್ಳಬೇಕು. ಆದುದರಿಂದ ಇವರಿಗೆ ಆರೋಗ್ಯಶಾಸ್ತ್ರಜ್ಞಾನವು ಅವಶ್ಯಕವಾದುದು. ಸಾಮಾನ್ಯವಾಗಿ ಇಪ್ಪತ್ತು ವಯಸ್ಸಿನಿಂದ ಮೂವತ್ತು ವಯಸ್ಸಿನೊಳಗಾಗಿ ಅಕಾಲ ಮರಣವನ್ನು ಹೊಂದುವರು ಇದಕ್ಕೆಲ್ಲಾ ಆರೋಗ್ಯವಿಧಿಗಳನ್ನು ತಿಳಿದುಕೊಂಡು ಅನುಷ್ಠಾನಕ್ಕೆ ತಂದುಕೊಳ್ಳದೆ ಇರುವುದೇ ಮುಖ್ಯ ಕಾರಣವಾಗಿರುವುದು. ಹೆಂಗಸರು ಆಹಾರ ವಿಹಾರಗಳಲ್ಲಿ ಶಾರೀರಕ ಧರ್ಮಶಾಸ್ತ್ರವನ್ನನುಸರಿಸಿ ನಡೆದರೆ ಇಂಥಾ ಅನರ್ಥಗಳುಯಾವದಕ್ಕೂ ಅವಕಾಶವಿರುವುದಿಲ್ಲ. ಈ ಆರೋಗ್ಯವಿಧಿಗಳನ್ನು ತಿಳಿದುಕೊಳ್ಳದೇ ಇರುವುದರಿಂದಲೇ ನಮ್ಮ ಸ್ತ್ರೀಯರಲ್ಲಿ ಅನೇಕ ವಿಧವಾದ ರೋಗಗಳೂ ಆದರಿಂದ ಉಂಟಾಗತಕ್ಕ ದೌರ್ಬಲ್ಯ ಅಕಾಲಮರಣ ಮೊದಲಾದವುಗಳೆಲ್ಲಾ ಸಂಭವಿಸುವುವು. ಆರೋಗ್ಯಶಾಸ್ತ್ರವನ್ನು ಅಭ್ಯಾಸಮಾಡುವುದರಿಂದ ಈ ಅನರ್ಥಗಳೆಲಾ ತಪ್ಪುವುವು.

ಸ್ತ್ರೀಯರ ಪಾಠಶಾಲೆಗಳಲ್ಲಿ ಚರಿತ್ರೆ, ಭೂಗೋಳ, ಸಂಗೀತ, ಸಾಹಿತ್ಯ,

ಹೊಲಿಗೆ, ಚಿತ್ರ ಮೊದಲಾದ ಅನೇಕ ವಿದ್ಯೆಗಳು ಕಲ್ಪಿಸಲ್ಪಡುತ್ತಿರುವುವು. ಇವುಗಳೆಲ್ಲಾ ವಿಶೇಷ ಕ್ಲೇಶದಿಂದ ಕಲಿಯುಬೇಕಾದ ವಿದ್ಯೆಗಳಲ್ಲ. ಇವುಗಳ ಜೊತೆಗೆ ಅನೇಕ ಕೈಗಾರಿಕೆಗಳೇ ಮೊದಲಾದ ಕುಶಲ ವಿದ್ಯೆಗಳನ್ನು ಕೂಡ ಉಪಪನ್ನರಾದವರು ಕಲಿಯುಬಹುದು. ಅನುಪನ್ನರಾದವರಿಗೆ ಪಾಕಶಾಸ್ತ್ರ, ಹೊಲಿಗೆ, ಇವೆರಡನ್ನೂ ಕಲಿಸುವುದು ಬಹಳ ಆವಶ್ಯಕವಾದುದು. ಈ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಅವಕಾಶವುಳ್ಳವರು ಇಂಥಾ ಗೌರವವಾದ ಪದವಿಯನ್ನು ಹೊಂದುವದಕ್ಕೆ ತಕ್ಕಪ್ರಯತ್ನ ಮಾಡಿಕೊಳ್ಳಬೇಕು. ಸ್ತ್ರೀವಿದ್ಯಾಭ್ಯಾಸವು ಸಮರ್ಪಕವಾಗಿ ನಡೆಯಬೇಕಾದರೆ ಪಾಠಕರೆಲ್ಲರೂ ಸ್ತ್ರೀಯುರಾಗಿರಬೇಕು. ಗುಜರಾತ್ ದೇಶದಲ್ಲಿ ಬರೀ ಸ್ತ್ರೀಯುರು ಪಾಠಕರಾಗಿರತಕ್ಕ ಪಾಠಶಾಲೆಗಳೆಲ್ಲಾ ಅತ್ಯಂತ ಉತ್ತಮ ಸ್ಥಿತಿಗೆ ಬರುತ್ತಲಿವೆ. ವಯಸ್ಸಾದ ಹೆಂಗರೂ ಕೂಡ ಈ ಪಾಠಶಾಲೆಗಳಿಗೆ ಹೋಗಿ ವಿದ್ಯಾಭ್ಯಾಸವನ್ನು ಮಾಡುತ್ತಲಿದಾರೆ. ಸಾಧ್ಯವಾದ ಮಟ್ಟಿಗೂ ಇಂಥಾ ಸ್ತ್ರೀ ವಿದ್ಯಾಭ್ಯಾಸದ ಪಾಠಶಾಲೆಗಳಲ್ಲಿ ವಿದ್ಯಾವತಿಯುರಾದವರನ್ನು ಏರ್ಪಾಡುಮಾಡುತ್ತಾ ಬರಬೇಕು. ಚರಿತ್ರೆ, ಭೂಗೋಳ, ಇತರವಿಧವಾದ ಭೌತಿಕಾದಿ ಶಾಸ್ತ್ರಗಳೂ ಇವುಗಳಲ್ಲಿ ವಿಶೇಷಶಿಕ್ಷೆಯೂ ಸ್ತ್ರೀಯುರಿಗೆ ಅತ್ಯಂತ ಆವಶ್ಯಕವಾದುದು. ಈ ಶಿಕ್ಷೆಯು ದೇಶಭಾಷೆಯಲ್ಲಿ ಉಪನ್ಯಾಸಗಳ ಪೂರ್ವಕ ಮಾಡಿಸುತ್ತಾ ಬಂದರೆ ಕ್ಲೇಶವಿಲ್ಲದೆ ಸ್ತ್ರೀಯುರಿಗೆ ವ್ಯವಹಾರ ಜ್ಞಾನವೂ, ಶಾಸ್ತ್ರ ಜ್ಞಾನವೂ ಉಂಟಾಗುವುದು. ಇಂಥಾ ಉಪನ್ಯಾಸಗಳನ್ನು ಸ್ತ್ರೀಯುರಿಂದಲೇ ಮಾಡಿಸುವುದು ಅತ್ಯಂತ ಪ್ರಯೋಜನಕಾರಿಯಾದುದು.

ಬುಗ್ಗೆಗಳು.

ಭೂಮಿಯೊಳಕ್ಕೆ ಪ್ರವೇಶಿಸಿದ ನೀರು ಪುನಃ ಮೇಲಕ್ಕೆ ಹೇಗೆಬರುವುದೋ ಅದನ್ನು ತಿಳಿದುಕೊಳ್ಳುವುದು ಆವಶ್ಯಕ. ಪರ್ವತಾಗ್ರದಲ್ಲಿ ಬಿದ್ದ ನೀರು ಮೇಲುಗಡೆಯಿಂದ ಗಿರಿನದಿಗಳಾಗಿ ಕೆಳಕ್ಕೆ ಪ್ರವಹಿಸುವುದೂ ಉಂಟು. ಅಥವಾ ಮಣ್ಣಿನಲ್ಲಿ ಇಂಗಿ ಪರ್ವತದ ಗರ್ಭವನ್ನು ಪ್ರವೇಶಿಸಿ ಗುಪ್ತಗಾಮಿನಿಯಾಗಿ ಹೊರಟು, ಪರ್ವತದ ತಪ್ಪಲಲ್ಲೆಲ್ಲಾದರೂ ಒಂದುಕಡೆ ಮೇಲಕ್ಕೆ ಹೊರಡುವುದೂ ಉಂಟು. ಮರಳೂ, ಕಲ್ಲೂ ಮೊದಲಾದ ಪದಾರ್ಥಗಳ ಮೇಲೆ ಬೀಳತಕ್ಕ ನೀರಿನಲ್ಲಿ ಒಂದು ಭಾಗವು ಮೇಲೆಹರಿದಾಗ್ಯೂ, ಮತ್ತೊಂದು ಭಾಗವು ಇವುಗಳಲ್ಲಿರತಕ್ಕ ರಂಧ್ರಗಳ

ನೂಲಕ ಒಳಕ್ಕೆ ಪ್ರವೇಶಿಸುವುದು. ಪರ್ವತಗಳಲ್ಲಿಯೂ ಮತ್ತು ಬೆಟ್ಟಗಳ ತಪ್ಪಲುಗಳಲ್ಲಿಯೂ ಹೀಗೆ ಪ್ರವೇಶಿಸಿದ ನೀರು ಬುಗ್ಗೆಗಳಾಗಿ ಹರಿಯುವುದನ್ನು ಆ ಪ್ರಾಂತ್ಯದಲ್ಲಿ ಸಂಚಾರಮಾಡತಕ್ಕವರೆಲ್ಲರೂ ನೋಡಿಯೇ ಇರುವರು. ಕೆಲವು ಸಂದರ್ಭಗಳಲ್ಲಿ ಪರ್ವತದ ಅಗ್ರಭಾಗದಲ್ಲಿ ಬಿದ್ದ ಭೂಗರ್ಭಕ್ಕೆ ಇಳಿಯುತಕ್ಕ ನೀರು ಗುಪ್ತಗಾಮಿನಿಯಾದ ಕಾಲುವೆಯಲ್ಲಿ ಬಹಳ ಆಳದವರಿಗೂ ಹೋಗಿ ಅಲ್ಲಿಂದ ಮುಂದಕ್ಕೆ ಹೋಗುವುದಕ್ಕೆ ಸರಿಯಾದ ಅವಕಾಶವನ್ನು ಹೊಂದದೆ ಮೇಲಕ್ಕೆ ಯಾವದಾದರೂ ಒಂದುಸ್ಥಳದಲ್ಲಿ ಏಳುವುದೂ ಉಂಟು. ಭೂಮಿಯಲ್ಲಿ ಕೆಲವುಭಾಗಗಳು ಮರಗಳೂ ಕಲ್ಲೂ ಮೊದಲಾದವುಗಳಿಂದ ವಿಶ್ರವಾಗಿರುತ್ತವೆ. ಹೀಗಿರತಕ್ಕಪ್ರದೇಶಗಳು ಎಲ್ಲಿನವರಿಗೂ ಸಿಕ್ಕುವುದೋ ಆದುವರಿಗೂ ತಡೆಯಿಲ್ಲದೆ ಗುಪ್ತಗಾಮಿನಿಯಾದ ಜಲವು ಪ್ರವಹಿಸುವುದು. ಜೇಡಿಮಣ್ಣು ಅಥವಾ ಬಂಡೆಗಳು ಎಲ್ಲಾದರೂ ಸಿಕ್ಕಿದರೆ ಅಲ್ಲಿ ಇವುಗಳ ಪ್ರವಾಹಕ್ಕೆ ಉಪಕ್ರಮವಾಗುವುದು. ಬೇಸಗೆಯಕಾಲದಲ್ಲಿ ಮೇಲಿನಿಂದ ಬರತಕ್ಕನೀರು ಕಡಿಮೆಯಾಗಿರುವುದರಿಂದಲೂ, ಗುಪ್ತಗಾಮಿನಿಯಾದ ನೀರು ಕ್ರಮಕ್ರಮವಾಗಿ ಭೂಮಿಯಲ್ಲಿ ಅಂತರ್ಗತವಾದ ಶಾಖದಿಂದಲೂ ಹೊರಗಿನ ಶಾಖದಿಂದಲೂ, ರೂಪಾಂತರವನ್ನು ಹೊಂದಿ, ಆವಿಯು ಸ್ವರೂಪದಿಂದ ವಾಯುಮಂಡಲವನ್ನು ಸೇರುವುದರಿಂದಲೂ, ಬೇಸಗೆಯಲ್ಲಿ ಬಾವಿಯು ನೀರು ಕೆಳಕ್ಕೆ ಹೋಗುವಂತೆ ಭೂಮಿಯಲ್ಲಿ ಅಂರ್ಗತವಾದ ನೀರು ಕೆಳಕ್ಕೆ ಹೋಗುವುದು. ಇಂಥಾ ನೀರನ್ನು ಹೊರಗೆಬರುವಂತೆ ಮಾಡುವುದಕ್ಕೆ, ಆರ್ಟೆಷಿಯ್ಯನ್ ಮೇಲ್ ಗಳೆಂಬ ಭಾವಿಗಳನ್ನು ತೋಡುವರು. ಹೀಗೆ ತೋಡಲ್ಪಟ್ಟ ಭಾವಿಗಳಲ್ಲಿ ನೀರು ತಾನಾಗಿಯೇ ಮೇಲಕ್ಕೆ ಪ್ರವಹಿಸುವುದು. ಪರ್ವತಾಗ್ರದಲ್ಲಿ ಬೀಳತಕ್ಕ ನೀರು ಪಾತಾಳಕ್ಕೆ ಹೋದಾಗ್ಯೂ ಇಂಥಾ ಭಾವಿಗಳೆಲ್ಲಾದರೂ ತೆಗೆಯಲ್ಪಟ್ಟರೆ, ಪ್ರಥಮತಃ ನೀರು ಎಷ್ಟು ಎತ್ತರದಿಂದ ಪ್ರವೇಶಿಸುವುದೋ ಅಷ್ಟು ಎತ್ತರದವರಿಗೂ ಇಂಥಾ ಭಾವಿಗಳಮಾರ್ಗವಾಗಿ ಮೇಲಕ್ಕೇಳುವುದು. ಇಂಥಾ ಭಾವಿಯೊಂದು ಪುದುಚೇರಿಯಲ್ಲಿ ಇರುವುದು. ಇದನ್ನು ನೋಡಿದರೆ ಎತ್ತರದಲ್ಲಿ ಬಿದ್ದನೀರು ಅದು ಬಿದ್ದ ಮಟ್ಟದವರಿಗೂ ಹೇಗೆ ಮೇಲಕ್ಕೇಳುವುದೋ ಅದು ಗೊತ್ತಾಗುವುದು. ಭೂಮಿಯೊಳಗೆ ಮಣ್ಣು, ಕಲ್ಲು ಮರಳು ಮೊದಲಾದುವುಗಳು ಇದ್ದರೆ ಅಂಥಾ ಸ್ಥಳಗಳಲ್ಲಿ ಕೆಳಗಿರತಕ್ಕ ಜಲದವರಿಗೂ ರಂಧ್ರವನ್ನು ಕೊರೆದಕೂಡಲೇ ಕೆಳಗಿನಿಂದ ಜಲವು ಮೇಲಕ್ಕೆ ಮೂವತ್ತು ಅತಿಗಳವರಿಗೂ ಏಳುವುದು. ಆರ್ಟೆಷಿಯ್ಯನ್ ಭಾವಿಗಳು ಈ ರೀತಿಯಲ್ಲಿ ಇರತಕ್ಕ

ಸ್ಥಳಗಳಲ್ಲಿ ಮಾತ್ರ ಉಂಟಾಗುವುವು. ಹೀಗೆ ಏಳತಕ್ಕ ನೀರಿನಿಂದ ಅನೇಕ ಸ್ಥಳಗಳಲ್ಲಿ ಜಮೀನಿನ ತರೀ ಸಾಗುವಳಿಯೂ ಕೂಡ ನಡೆಯುವುದು. ಕೆಲವು ಸಮುದ್ರ ತೀರಗಳಲ್ಲಿ ಭೂಗರ್ಭದಿಂದ ಏಳತಕ್ಕ ನದಿಗಳು ಇರುವುವು. ಈ ನದಿಗಳು ಭೂಮಿಯೊಳಗಿನಿಂದ ಸಮುದ್ರದ ನೀರಿರತಕ್ಕ ಸ್ಥಳದಲ್ಲಿ ರಭಸವಾಗಿ ಮೇಲಕ್ಕೇಳುವುದು. ಸುತ್ತುಮುತ್ತಲೂ, ಉಪ್ಪುನೀರು ಇದ್ದಾಗ್ಯೂ ಇದುಏಳತಕ್ಕ ಸಮುದ್ರಭಾಗದಲ್ಲಿ ಮಾತ್ರ ನೀರನ್ನು ತೆಗೆದುಕೊಂಡರೆ ಅದು ಶೀನೀರಾಗುವುದು. ಹಡಗಿನಲ್ಲಿ ಸಂಚಾರಮಾಡತಕ್ಕವರು ಇಂಥಾ ಸ್ಥಳಗಳನ್ನು ಗೊತ್ತುಮಾಡಿಕೊಂಡಿರುವರು. ಕೆಲವು ಪಾ ್ರಂತ್ಯಗಳಲ್ಲಿ ನದಿಗಳು ಇರುವುದಿಲ್ಲ. ಮಳೆಯೂ ಬೀಳುವುದಿಲ್ಲ. ಇಂಥಾ ಸ್ಥಳಗಳಲ್ಲಿ ಕುಡಿಯುವನೀರಿಗೆ ಈ ಬುಗ್ಗೆಗಳೇ ಆಧಾರ. ಮಳೆಯಾಗತಕ್ಕ ಪ್ರಾಂತ್ಯಗಳಲ್ಲಿಯೂ ಕೂಡಾ ಈ ಬುಗ್ಗೆಗಳ ಪ್ರಯೋಜನವು ವಿಶೇಷವಾಗಿರುವುದು. ಭೂಮಿಯಮೇಲೆ ಬಿದ್ದನೀರು ಭೂಮಿಯೊಳಕ್ಕೆ ಇಂಗದೆ ಮೇಲೆಯೇ ಹರಿಯುತ್ತಿದ್ದರೆ ಇಂಥಾ ಬುಗ್ಗೆಗಳಿಗೆ ಅವಕಾಶವಿರುತ್ತಿರಲಿಲ್ಲ. ಭೂವಿಗಳಿಗೂ ನೀರು ದೊರೆಯುತ್ತಿರಲಿಲ್ಲ. ಗುಪ್ತಗಾಮಿನಿಗಳಾದ ನದಿಗಳೂ ಮತ್ತು ಸರೋವರಗಳೂ ಇರುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಮಳೆಯನೀರು ನಿರ್ಮಲವಾಗಿರುತ್ತದೆ. ಅದು ಆಕಾಶದಿಂದ ಕೆಳಕ್ಕೆ ಬೀಳುವಾಗ್ಯೆ ವಾಯುಮಂಡಲದಲ್ಲಿರತಕ್ಕ ಕೆಲವು ಕಶ್ಮಲಗಳನ್ನೂ ಹೊಂದುತ್ತದೆ. ಈ ಕಶ್ಮಲಗಳು ಬಹಳವಾಗಿರುವುದಿಲ್ಲ. ಬಹಳ ನಿರ್ಮಲವಾಗಿ ಕಾಣತಕ್ಕ ನೀರಿನಲ್ಲಿಯೂ ಕಶ್ಮಲಗಳು ಇದ್ದೇಇರುವುವು. ಭೂಮಿಗೆ ಬಿದ್ದನೀರು, ಯಾವ ಭೂಮಿಯನ್ನು ಪ್ರವೇಶಿಸುವುದೋ ಅದರಲ್ಲಿನ ದ್ರವ್ಯಗಳನ್ನು ತೆಗೆದುಕೊಳ್ಳುವುದು. ಇಂಥಾದ್ರವ್ಯವು ಸೇರಿದೆಎಂದು ಗೊತ್ತುಮಾಡುವುದು ಕಷ್ಟವಲ್ಲ. ಸದರೀ ನೀರನ್ನು ಕುದಿಸಿ ಜಲಾಂಶವೆಲ್ಲಾ ಆವಿಯರೂಪವಾಗಿ ಹೋಗುವಂತೆ ಮಾಡಿದರೆ ಅದರಲ್ಲಿ ಮಿಶ ್ರವಾಗಿರತಕ್ಕ ಪದಾರ್ಥಗಳು ಹಿಂದೆಯೆ ಉಳಿಯುವುದು. ಆದುದರಿಂದ ನೀರಿನಲ್ಲಿ ಈ ಪದಾರ್ಥಗಳು ಎಷ್ಟು ಮಟ್ಟಿಗೆ ಇರುವುದೋ ಅದು ಗೊತ್ತಾಗುವುದು. ಸಮುದ್ರದನೀರನ್ನು ಇದೇ ರೀತಿಯಲ್ಲಿ ಮಾಡಿದರೆ ಉಪ್ಪಿನ ಪ್ರಮಾಣವು ಗೊತ್ತಾಗುವುದು. ಹತ್ತುಲಕ್ಷ ಭಾಗಗಳಲ್ಲಿ 32700 ಭಾಗ ಉಪ್ಪು ಇರುವುದೆಂದು ಈರೀತಿಯಲ್ಲಿ ಪರೀಕ್ಷಿಸಿ ಗೊತ್ತುಮಾಡಿರುತ್ತಾರೆ. ಬುಗ್ಗೆಯನೀರನ್ನು ತಂದು ಬಂದು ಪಾತ್ರೆಯಲ್ಲಿ ಇಟ್ಟರೆ ಗುಳ್ಳೆಗಳು ಬರುವುದುಂಟು. ಈ ಗುಳ್ಳೆಗಳಿಗೆ ಕಾರಣವಾದುದೇ ವಾಯುವು. ನೀರಿನಿಂದ ಗುಳ್ಳೆಗಳಂತೆ ಎದ್ದು ಅವುಗಳು ವಾಯುಮಂಡ

ಲವನ್ನು ಸೇರುವುದು. ವಾಯುವಿನ ಅಂಶವು ನೀರಿನಲ್ಲಿರುವಾಗ್ಯೆ ಎಷ್ಟು ರುಚಿಯು ಇರುತ್ತದೋ ಅಷ್ಟು ರುಚಿಯು ಅನಂತರದಲ್ಲಿರುವುದಿಲ್ಲ. ನೀರನ್ನು ಕಾಸಿದರೆ ಅದರಲ್ಲಿರತಕ್ಕ ವಾಯುವು ಹೊರಟುಹೊಗುವುದು. ಅನಂತರದಲ್ಲಿ ನೀರಿನ ರುಚಿಯು ಕಮ್ಮಿಯಾಗುವುದು. ಇದರಿಂದಲೇ ನೀರಿನಲ್ಲಿ ವಾಯು ಮಿಶ್ರವಾಗಿರುವುದೆಂದು ಗೊತ್ತಾಗುವುದು. ವಾಯುವಿನಲ್ಲಿ ಆಕ್ಸಿಜ್ಞ್ ನೈಟ್ರೋಜ್ಞ್ ಕಾರ್ಬನಿಕ್ ಆಸಿಡ, ಎಂಬ ವಾಯುವಿನ ಅಂಶಗಳು ಕೊಳೆತವಾಸನೆಯನ್ನು ಕೊಡತಕ್ಕ "ಸಲ್ಫರೇಷೆಡ್ ಹೈಡ್ರೊಜ್ಞ್" ಎಂಬ ವಾಯುವಿನ ಅಂಶವು ಮಿಶ್ರವಾಗಿರುವುದುಂಟು. ಮೇಲೆಹೇಳಿದ ರೀತಿಯಲ್ಲಿ ನೀರನ್ನು ಕುದಿಸಿ ಆವಿಯುರೂಪವಾಗಿ ಅದನ್ನು ಓಡಿಸುವುದರಿಂದ ಈ ಪದಾರ್ಥಗಳಲ್ಲಿ ಯಾವಯಾವದು ನೀರಿನಲ್ಲಿ ಮಿಶ್ರವಾಗಿರುವುದೋ ಅದು ಗೊತ್ತಾಗುವುದು.

ಗಣಿತ.

(1) 20 ಹುಡುಗರು 15 ಜನ ಹೆಂಗಸರು 1 ಕೆಲಸವನ್ನು 18 ದಿನದಲ್ಲಿ ಮಾಡುತ್ತಾರೆ. 48 ಹುಡುಗರು 30 ಜನ ಹೆಂಗಸರು 2 ರಷ್ಟಾದ ಕೆಲಸವನ್ನು ಎಷ್ಟು ದಿನದಲ್ಲಿ ಮಾಡುತ್ತಾರೆ? ಉತ್ತರ—16 ದಿವಸಗಳು.

(ಷರಾ) ಒಬ್ಬ ಹುಡುಗನು 4 ದಿನದಲ್ಲಿ ಮಾಡುವ ಕೆಲಸವೂ ಒಬ್ಬ ಹೆಂಗಸು 5 ದಿನದಲ್ಲಿ ಮಾಡುವ ಕೆಲಸವೂ ಸಮವು.

(2) 6 ಹುಡುಗರೂ 10 ಜನ ಹೆಂಗಸೂ ಸೇರಿ 1 ಕೆಲಸವನ್ನು 17 ದಿನಗಳಲ್ಲಿ ಮಾಡುತ್ತಾರೆ. ಆದರೆ ಇದರ 2 ರಷ್ಟಾದ ಕಲಸವನ್ನು ಈಗಿನಕ್ಕಿಂತಲೂ 7 ಹೆಚ್ಚು ದಿನದಲ್ಲಿ ಎಷ್ಟು ಜನ ಹೆಂಗಸರ ಸಹಾಯದಿಂದ 8 ಹುಡುಗರು ಮಾಡುತ್ತಾರೆ? ಉತ್ತರ—15 ಹೆಂ.

(ಷರಾ) ಒಬ್ಬ ಹುಡುಗನ 3 ದಿನದ ಕೆಲಸಕ್ಕೆ ಒಬ್ಬ ಹೆಂಗಸಿನ 5 ದಿನದ ಕೆಲಸ ಸಮವು.

(4) 50 ಜನ ಹೆಂಗಸರು 1 ಕೆಲಸವನ್ನು ದಿನ 1 ಕ್ಕೆ 3 ಗಂಟೆ ಹೊತ್ತು ಕೆಲಸ ಮಾಡುತ್ತಾ 24 ದಿನಗಳಲ್ಲಿ ಮುಗಿಸುವರು. 18 ಜನ ಹೆಂಗಸರು 2ರಷ್ಟಾ

ದ ಕೆಲಸವನ್ನು 1 ದಿನಕ್ಕೆ $6\frac{1}{4}$ ಗಂಟೆಯಂತೆ ಕೆಲಸಮಾಡುತ್ತಾ ಎಷ್ಟು ದಿನದಲ್ಲಿ ಮಾಡುತ್ತಾರೆ?

(ಷರಾ) 1 ನೆಯ ಗುಂಪಿನ ಇಬ್ಬರು ಹೆಂಗಸರು 6 ದಿನದಲ್ಲಿ ಮಾಡುವ ಕೆಲಸವನ್ನು 2 ನೆಯ ಗುಂಪಿನ 3 ಜನ ಹೆಂಗಸರು 3 ದಿನದಲ್ಲಿ ಮಾಡುತ್ತಾರೆ?

ರೀತಿ;—

6 ದಿನದಲ್ಲಿ ಕೆಲಸ ಮಾಡಲು 2 ಜನ ಬೇಕು. (I ನೇ ಗುಂಪಿನವರು)

II ನೇ ಗುಂಪಿನ 3 ಜನದ $= 3 \quad \frac{2 \times 6}{3} = 4$ ಜನ (I ನೇ ಗುಂ)

∴ II ನೇ ಗುಂಪಿನ 3 ಜನಕ್ಕೆ I ನೇ ಗುಂಪಿನ 4 ಜನ ಸಮವಾಯಿತು.

∴ 18 ,, $\frac{4 \times 18}{3} = 24$

ಈಗ ಲೆಕ್ಕವು 50 ಜನ. ಹೆಂ—ದಿನ 1 ಕ್ಕೆ 3 ಘಂ. 1 ಕೆಲಸ 24 ದಿನದಲ್ಲಿ ಮಾಡುತ್ತಾರೆ.

24 1 ಕ್ಕೆ $6\frac{1}{4}$—2 ಕೆಲಸ—ಎ.

ಎಂದು ಆಯಿತು.

1 : 2 :: 24 ದಿನಗಳು.

$6\frac{1}{4}$: 3

24 : 50

= 48 ದಿನಗಳು.

ಆದುದರಿಂದ 18 ಜನ ಹೆಂಗಸರು 48 ದಿನಗಳಲ್ಲಿ ಮಾಡುತ್ತಾರೆ.

(1) 24 ಹುಡುಗರು ದಿನ 1 ಕ್ಕೆ 6 ಗಂಟೆ ಕೆಲಸ ಮಾಡುತ್ತಾ 1 ಕೆಲಸವನ್ನು 24 ದಿನಗಳಲ್ಲಿ ಮುಗಿಯಿಸುತ್ತಾರೆ. 36 ಹುಡುಗರು ದಿನ 1 ಕ್ಕೆ 3 ಗಂಟೆ ಕೆಲಸ ಮಾಡುತ್ತಾ 2 ರಷ್ಟಾದ ಕೆಲಸವನ್ನು ಎಷ್ಟು ದಿನಗಳಲ್ಲಿ ಮಾಡುತ್ತಾರೆ? ಉತ್ತರ—48ದಿ.

(ಷರಾ) 1 ನೇ ಗುಂಪಿನ 2 ಹುಡುಗರು 1 ದಿನದಲ್ಲಿ ಮಾಡುವ ಕೆಲಸವನ್ನು 2 ನೇ ಗುಂಪಿನ 3 ಹುಡುಗರು ಎರಡು ದಿನದಲ್ಲಿ ಮಾಡುತ್ತಾರೆ?

(2) 81 ಜನ ಗಂಡಸರು $\frac{3}{4}$ ಕೆಲಸವನ್ನು ದಿನ 1 ಕ್ಕೆ 6 ಗಂಟೆ ಕೆಲಸಮಾಡುತ್ತಾ 24 ದಿನಗಳಲ್ಲಿ ಮಾಡುವರು. 72 ಜನರು 1 ದಿನಕ್ಕೆ ಎಷ್ಟು ಗಂಟೆ ಹೊತ್ತು ಕೆಲಸ ಮಾಡುತ್ತಾ ಪೂರ್ತಿಯಾದ ಕೆಲಸವನ್ನು 48 ದಿನಗಳಲ್ಲಿ ಮುಗಿಯಿಸುವರು? ಉ—9 ಗಂ.

* ವಿದ್ಯಾದಾಯಿನಿ. *

ಭಾಗ ೧೫.] ಜೂನ್—೧೯೦೩. [ಸಂಚಿಕೆ ೬.

ಪಾಠಶಾಲೆಯ ತೋಟ.

ಮಕ್ಕಳು ಓದುವುದಕ್ಕೆ ಸೇರುವ ಸ್ಥಳವನ್ನು ಪಾಠಶಾಲೆಯೆಂದು ವಾಡಿಕೆಯಾಗಿ ನಾವು ಕರೆಯುವೆವಷ್ಟೆ. ಇಂತಹ ಪಾಠಶಾಲೆಯು ತೋಟವೆಂದರೇನು? ಪಾಠಶಾಲೆಗೂ ತೋಟಕ್ಕೂ ಸಂಬಂಧವೇನು? ಎಂದು ಅನೇಕರು ಯೋಚಿಸಬಹುದು. ಪಾಠಶಾಲೆಯಲ್ಲಿ ತೋಟದ ಆವಶ್ಯಕತೆಯೇನು? ಇದನ್ನು ಹೇಗೆ ಮಾಡಿಸಬೇಕು? ಎಂಬ ಅಂಶಗಳನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸಲು ಪ್ರಯತ್ನಪಡುವೆವು.

ಮಕ್ಕಳಿಗೆ ಮಾತುಗಳನ್ನು ಕಲಿಸುವಾಗ ಆ ಮಾತುಗಳಿಗೆ ತಕ್ಕ ವಸ್ತುಗಳನ್ನು ತೋರಿಸುವುದರಿಂದ ಅವುಗಳ ಅರ್ಥವು ಮಕ್ಕಳ ಮನಸ್ಸಿನಲ್ಲಿ ಸ್ಥಿರಪಡುವುದೆಂದು ಹಿಂದಿನ ಸಂಚಿಕೆಯಲ್ಲಿ ಹೇಳಿರುವೆವಷ್ಟೆ. ಈ ವಿಧವಾದ ವಸ್ತುನಿರ್ದೇಶಕ್ಕೆ ಪಾಠಶಾಲೆಯ ತೋಟವು ಒಂದು ಅನುಕೂಲವಾದ ಸಳವು. ಇಲ್ಲಿ ಬೆಳಸುವ ಗಿಡಗಳ ಹೆಸರುಗಳನ್ನೂ, ಅವುಗಳಲ್ಲಿ ಬಿಡುವ ಹೂವು ಕಾಯಿಗಳ ಹೆಸರುಗಳನ್ನೂ ಮಕ್ಕಳಿಗೆ ಸುಲಭವಾಗಿ ತಿಳಿಸಬಹುದಲ್ಲವೆ?

ಉಪಾಧ್ಯಾಯರು ಮಕ್ಕಳ ಮನೋವ್ಯಾಪಾರಗಳ ವೃದ್ಧಿಗೆ ಗಮನ ಕೊಡುವಂತೆ ಇವರ ದೇಹಾರೋಗ್ಯವನ್ನು ವೃದ್ಧಿಗೊಳಿಸುವುದಕ್ಕೂ ತಕ್ಕ ಪ್ರಯತ್ನವನ್ನು ಮಾಡಬೇಕೆಂದು ನಿಸ್ಸಂಶಯವಾಗಿ ಹೇಳಬಹುದಷ್ಟೆ. ಪಾಠಶಾಲೆಯ ತೋಟವು ಇಂತಹ ಪ್ರಯತ್ನದಲ್ಲಿ ಅವರಿಗೆ ವಿಶೇಷ ಸಹಾಯಮಾಡುವುದು. ತಕ್ಕಷ್ಟು ಬಿಸಿಲು ಬೀಳುವ, ನಿರ್ಮಲವಾದ ವಾಯು ಸಂಚಾರ ವಿರುವ ಈ ತೋಟಕ್ಕೆ ಮಕ್ಕಳನ್ನು ನಿತ್ಯವೂ ಕರೆದುಕೊಂಡುಬಂದು ಅವರ ಶಕ್ತಿಗೆ ಅನುಕೂಲವಾದ ಕೆಲಸಗಳನ್ನು ಅಲ್ಲಿ ಕ್ರಮವಾಗಿ ಮಾಡಿಸಿದರೆ ಅವರ ದೇಹಾರೋಗ್ಯವು ಹೆಚ್ಚುವುದರಲ್ಲಿ ಸಂಶಯ

ವಿಲ್ಲವೆಂದು ತೋರುವುದು. ಅಲ್ಲದೆ ಪಾಠಶಾಲೆಯು ಪಾಠವಾದ ನಂತರ ಮಕ್ಕಳನ್ನು ಇಲ್ಲಿಗೆ ನಿತ್ಯವೂ ಕರೆತಂದರೆ ಬಹಳ ಹೊತ್ತು ಓದುವುದರಿಂದುಂಟಾದ ಬೇಸರವು ತೊಲಗಿ ಮನಸ್ಸಿಗೆ ವಿಶ್ರಾಂತಿಯೂ ಹರ್ಷವೂ ಉಂಟಾಗುವುದು. ಮಕ್ಕಳ ದೇಹಾರೋಗ್ಯವು ಕೆಡದಂತೆ ಅದನ್ನು ಕಾಪಾಡಲು ಅವರ ಮನಸ್ಸಿಗೆ ಈ ರೀತಿಯಲ್ಲಿ ಆನಂದವನ್ನುಂಟುಮಾಡುವುದೂ ಆಗಾಗ್ಯೆ ವಿಶ್ರಾಂತಿಯನ್ನು ಕೊಡುವುದೂ ಅತ್ಯಾವಶ್ಯಕವು.

ಮೇಲಾಗಿ ಮಕ್ಕಳು ಮರಗಿಡಗಳ ಬೆಳವಳಿಕೆಯ ರೀತಿಯನ್ನು ತಿಳಿಯುವುದಕ್ಕೆ ವಿಶೇಷ ಕುತೂಹಲವನ್ನು ಸಹಜವಾಗಿರೇ ತೋರ್ಪಡಿಸುವರು. ಸಸ್ಯ ಪರೀಕ್ಷೆಯು ವಿಷಯದಲ್ಲಿರುವ ಈ ಆಸೆಯನ್ನು ತೃಪ್ತಿಪಡಿಸುವುದರಿಂದ ಮುಂದೆ ಅವರು ಕೃಷಿಯಲ್ಲಿ ಔತ್ಸುಕ್ಯವನ್ನು ತೋರ್ಪಡಿಸುವಂತೆ ಮಾಡಬಹುದು. ಮತ್ತು ಮಕ್ಕಳಿಗೆ ಮರಗಿಡಗಳ ವಿಷಯದಲ್ಲಿರುವ ಈ ಕುತೂಹಲವನ್ನು ಅವುಗಳ ವಿಷಯದಲ್ಲಿ ನಿಷ್ಕೃಷ್ಟವಾದ ಜ್ಞಾನವನ್ನುಂಟುಮಾಡುವುದಕ್ಕೂ ಉಪಯೋಗಿಸಬಹುದು. ಮಕ್ಕಳು ಇವುಗಳ ವಿಷಯದಲ್ಲಿ ಸಾಮಾನ್ಯವಾದ ಜ್ಞಾನವನ್ನು ಹೊಂದುವುದರಿಂದ ವಿಶೇಷ ಪ್ರಯೋಜನವಾಗಲಾರದು. ಇವರಿಗೆ ಬಳಕೆಯಾಗಿರುವ ಸಸ್ಯಗಳು ಯಾವಯಾವ ವರ್ಗಗಳಿಗೆ ಸೇರಿದುವು? ಇವುಗಳ ಪತ್ರ, ಕಾಂಡ, ಪುಷ್ಪಗಳ ರೂಪವೇನು? ಇವು ಯಾವ ರೀತಿಯಲ್ಲಿ ಬೆಳೆಯುತ್ತವೆ? ಇವೇ ಮೊದಲಾದ ನಿಷ್ಕೃಷ್ಟವಾದ ಅಂಶಗಳೇ ಮಕ್ಕಳಿಗೆ ಉಪಯುಕ್ತವಾದುವು. ಇಂತಹ ಜ್ಞಾನವೇ ಮಕ್ಕಳಿಗೆ ಅವಶ್ಯವಾಗಿ ಉಂಟಾಗಬೇಕಾದ ಜ್ಞಾನವು. ಇದನ್ನುಂಟುಮಾಡುವುದಕ್ಕೇ ಉಪಾಧ್ಯಾಯರು ವಿಶೇಷ ಪ್ರಯತ್ನ ಪಡಬೇಕಾದುದು. ಈ ಕಾರ್ಯದಲ್ಲಿ ಇವರಿಗೆ ಪಾಠಶಾಲೆಯ ತೋಟವು ವಿಶೇಷ ಸಹಾಯಮಾಡುವುದೆಂದು ಧಾರಾಳವಾಗಿ ಹೇಳಬಹುದು.

ಪಾಠಶಾಲೆಗೆ ಸೇರಿದ ಒಂದು ಸಣ್ಣ ತೋಟದಿಂದ ಇಷ್ಟು ಪ್ರಯೋಜನಗಳುಂಟಾಗುವುದಾದರೆ ಇದನ್ನು ಕ್ರಮವಾದ ರೀತಿಯಲ್ಲಿ ಏರ್ಪಡಿಸಲು ಉಪಾಧ್ಯಾಯರು ಸರಿಯಾಗಿ ಗಮನ ಕೊಡಬೇಕು. ಈ ತೋಟದಲ್ಲಿ ಬೆಳೆಯುವುದಕ್ಕೆ ಬಹಳ ಕಾಲ ಬೇಕಾಗುವ ವಿಶೇಷ ದೊಡ್ಡ ದೊಡ್ಡ ಫಲವೃಕ್ಷಗಳನ್ನು ಬೆಳಸಲು ಯತ್ನಿಸುವುದು ಸಾಧ್ಯವಲ್ಲ. ಇದಕ್ಕೆ ತಕ್ಕಷ್ಟು ಕಾಲವೂ ಸ್ಥಳವೂ ಉಪಾಧ್ಯಾಯರಿಗೆ ದೊರಕಲಾರದು. ಮತ್ತು ತೋಟವು ತತ್ಕಾಲದಲ್ಲಿ ಓದುತ್ತಿರುವ ಮಕ್ಕಳಿಗೆ ವಿಶೇಷ

ಪ್ರಯೋಜನವಾಗದಿರಬಹುದು. ಆದುದರಿಂದ ಮಕ್ಕಳಿಗೆ ಬಳಕೆಯಾಗಿರುವ ಹೂವಿನ ಗಿಡಗಳನ್ನೂ, ಕಾಯಿಪಲ್ಯದ ಗಿಡಗಳನ್ನೂ ಇಂತಹ ತೋಟದಲ್ಲಿ ಬೆಳಸಬೇಕಾಗುವುದು. ಮತ್ತು ಯಾವಯಾವ ಕಾಲದಲ್ಲಿ ಯಾವಯಾವ ಗಿಡವು ಚೆನ್ನಾಗಿ ಬೆಳೆವುದೋ ಆಯಾ ಕಾಲದಲ್ಲಿ ಅದನ್ನು ನಟ್ಟು ಬೆಳೆಸಬೇಕಾಗುವುದು.

ಪ್ರತಿಯೊಂದು ಮಗುವಿಗೂ ಒಂದೊಂದು ಸಣ್ಣ ಪಾತಿಯನ್ನು ಮಾಡಿಕೊಟ್ಟು ಆ ಪಾತಿಯಲ್ಲಿ ಆ ಮಗುವೇ ಗಿಡವನ್ನು ನಟ್ಟು ಬೆಳಸುವಂತೆ ಮಾಡಬೇಕು. ಅಗೆಯುವುದು ಮುಂತಾದ ಶ್ರಮಕರವಾದ ಕೆಲಸವನ್ನು ಸೇವಕರಿಂದ ಮಾಡಿಸಬೇಕು. ಆಮೇಲೆ ಸರಿಯಾದ ಪಾತಿಗಳನ್ನು ಮಕ್ಕಳಿಂದ ಮಾಡಿಸಿ, ಅವುಗಳಿಗೆ ಗೊಬ್ಬರವನ್ನು ಹಾಕಿಸಿ ಬೀಜಗಳನ್ನು ನೆಡಿಸಿ ಪ್ರತಿದಿನವೂ ಒಂದು ಗೊತ್ತಾದ ಕಾಲದಲ್ಲಿ ಮಕ್ಕಳನ್ನು ತೋಟಕ್ಕೆ ಕರೆದುಕೊಂಡು ಬಂದು ಪಾತಿಗಳಿಗೆ ನೀರು ಹಾಕಿಸಬೇಕು. ಬೀಜಗಳು ಮೊಳೆತು ಗಿಡಗಳು ವೃದ್ಧಿಯಾಗುವ ರೀತಿಯನ್ನು ಮಕ್ಕಳು ನೋಡುತ್ತಿರಬೇಕು. ಪ್ರತಿಯೊಂದು ಮಗುವೂ ತನ್ನ ಪಾತಿಯಲ್ಲಿ ಬೆಳೆಯುವ ಗಿಡದ ಪತ್ರ ಕಾಂಡಗಳ ರೂಪವನ್ನು ಪರೀಕ್ಷಿಸಬೇಕು. ಮತ್ತು ಪಕ್ಕದ ಪಾತಿಯಲ್ಲಿ ಬೆಳೆದಿರುವ ಗಿಡಗಳ ಪತ್ರಕಾಂಡಗಳೊಡನೆ ಹೋಲಿಸಬೇಕು. ಹೂ ಬಿಡುವುದಕ್ಕೆ ಪ್ರಾರಂಭವಾಗುತಲೇ ಪ್ರತಿಯೊಂದು ಮಗುವೂ ತನ್ನ ಪಾತಿಯಲ್ಲಿ ಬಿಡುವ ಹೂವಿನ ಬಣ್ಣವನ್ನೂ ವಾಸನೆಯನ್ನೂ ತಿಳಿಯಬೇಕು. ಮತ್ತು ಅದರ ದಳಗಳನ್ನೂ ಕೇಸರಗಳನ್ನೂ ಪರೀಕ್ಷಿಸಬೇಕು. ಮೇಲಾಗಿ ತನ್ನ ಪಾತಿಯಲ್ಲಿರುವ ಹೂವನ್ನು ಇನ್ನೊಂದುಪಾತಿಯಲ್ಲಿರುವ ಹೂವಿನೊಡನೆ ಬಣ್ಣ, ವಾಸನೆ, ದಳ, ಕೇಸರ ಈ ವಿಷಯುಗಳಲ್ಲಿ ಹೋಲಿಸಬೇಕು. ಈ ಗಿಡಗಳಲ್ಲೂ, ಹೂಗಳಲ್ಲೂ ಸಜಾತೀಯವಾದುವು ಯಾವುವು, ವಿಜಾತೀಯವಾದುವು ಯಾವುವು, ಎಂಬುದನ್ನು ತಿಳಿಯುತಿರಬೇಕು. ಕೊನೆಗೆ ಕಾಯಿಯ ವಿಷಯದಲ್ಲೂ ಈ ವಿಧವಾದ ಪರೀಕ್ಷೆಗಳನ್ನು ಮಾಡಬೇಕು. ಈ ಕಾಲದಲ್ಲಿ ಮಕ್ಕಳು ಪಾತಿಯಲ್ಲಿ ಬೆಳೆಯುವ ಕಳೆಯನ್ನು ಕಿತ್ತು ಅದನ್ನು ಚೆನ್ನಾಗಿ ಇಟ್ಟುಕೊಂಡಿರಬೇಕು. ಎಲ್ಲಾ ಪಾತಿಗಳಲ್ಲೂ ಬೆಳೆಯುವ ಗಿಡ, ಹೂವು ಕಾಯಿಗಳ ಹೆಸರುಗಳನ್ನು ಮಕ್ಕಳು ಆಗಾಗ್ಗೆ ಹೇಳುತ್ತಿರಬೇಕು. ಉಪಾಧ್ಯಾಯರು ಮಾರ್ಗದರ್ಶಿಗಳಾಗಿದ್ದುಕೊಂಡು ಪರೀಕ್ಷಿಸುವ ಕಾರ್ಯಗಳನ್ನೆಲ್ಲ ಮಕ್ಕಳಿಂದಲೇ ಮಾಡಿಸುವುದು.

ಈರೀತಿಯಲ್ಲಿ ತೋಟ ಮಾಡಿಸುವುದರಿಂದ ಮೇಲೆ ನಾವು ಸೂಚಿಸಿರುವ ಪ್ರ

ಯೋಜನಗಳೆಲ್ಲವೂ ಉಂಟಾಗಿ ಪಾಠಶಾಲೆಯ ತೋಟದಿಂದಾಗಬೇಕಾದ ಕೆಲಸವು ಪೂರ್ಣವಾಗಿ ನೆರವೇರುವುದರಲ್ಲಿ ಸಂಶಯವಿಲ್ಲವೆಂದು ತೋರುವುದು. ಮುಖ್ಯವಾಗಿ ಉಪಾಧ್ಯಾಯರು ಈ ಕೆಲಸದಲ್ಲಿ ವಿಶೇಷ ಉತ್ಸಾಹವುಳ್ಳವರಾದರೆ ಈ ಕೆಲಸದಿಂದ ಆಗುವ ಪೂರ್ಣಪ್ರಯೋಜನವನ್ನು ಹೊಂದಬಹುದು. M. V.

ವಿದ್ಯಾಭ್ಯಾಸ.

ಹೀಗೆ ಬಹಳ ಜನರಿಗೆ ದೇಹರಕ್ಷಣ ಶಿಕ್ಷಣ ಷಯದಲ್ಲಿ ಬಹಳವಾಗಿ ಮೌಢ್ಯವಿರುವುದು. ಅದೇರೀತಿಯಲ್ಲಿ ಅವರಿಗೆ ಮನಃಶಿಕ್ಷಣ ವಿಷಯದಲ್ಲಿಯೂ ತುಂಬಾ ಮೌಢ್ಯವಿರುವುದು. ಸದಾಚಾರಗಳನ್ನು ಮಕ್ಕಳಿಗೆ ಸರಿಯಾಗಿ ಕಲಿಸುವುದಿಲ್ಲ. ಎಳೇ ಪಾ್ರಯದ ತಾಯಿಯು ತನ್ನ ಮಗುವನ್ನು ಯಾವರೀತಿಯಲ್ಲಿ ಶಿಕ್ಷಣ ಮಾಡುವಳೆಂಬುದನ್ನು ಸರ್ಯಾಲೋಚಿಸಿರಿ. ಸ್ವಲ್ಪ ವರ್ಷಗಳ ಹಿಂದೆ ಅವಳಿನ್ನೂ ಪಾಠಶಾಲೆಯಲ್ಲಿ ಓದುವ ಹುಡುಗಿಯಾಗಿದ್ದಳು. ಆಲ್ಲಿ ಅವಳೇನು ಕಲಿತಳು? ಕೆಲವು ಶಬ್ದಗಳನ್ನೂ ಹೆಸರುಗಳನ್ನೂ ತಾರೀಖುಗಳನ್ನೂ ಕಲಿತಳು. ವಿಷಯಗಳನ್ನು ಪರ್ಯಾಲೋಚಿಸಿ ವಿಚಾರ ಮಾಡಿ ಸರಿಯಾದ ಸಿದ್ಧಾಂತಕ್ಕೆ ಬರುವಂತೆ ಮನಸ್ಸನ್ನು ಅಭ್ಯಾಸ ಮೂಲಕ ಅವಳು ವೃದ್ಧಿಪಡಿಸಿಕೊಳ್ಳಲಿಲ್ಲ. ಮಕ್ಕಳ ಮನಶ್ಶಿಕ್ಷಣ ವಿಷಯವನ್ನು ಸ್ವಲ್ಪವೂ ಕಲಿಯುಲಿಲ್ಲ. ಆ ವಿಷಯದಲ್ಲಿ ತಾನೇ ಒಂದು ಸರಿಯಾದ ಮಾರ್ಗವನ್ನು ಕಂಡುಹಿಡಿಯುವಷ್ಟು ಯೋಗ್ಯತೆಯೂ ಅವಳಿಗೆ ಪಾಠಶಾಲಾ ವಿದ್ಯಾಭ್ಯಾಸದಿಂದ ಉಂಟಾಗಲಿಲ್ಲ.

ಪಾಠಶಾಲೆಯಲ್ಲಿ ಓದುವುದನ್ನು ಬಿಟ್ಟ ಬಳಿಕ ಅವಳು ಕೆಲವು ವರ್ಷಗಳ ಪರ್ಯಂತ ಸಂಗೀತವನ್ನು ವ್ಯವಸಾಯ ಮಾಡುವುದರಲ್ಲಿಯೂ ಕಸೂತಿ ಮುಂತಾದ ನಾಜೂಕು ಕೆಲಸಗಳನ್ನು ಮಾಡುವುದರಲ್ಲಿಯೂ ಕಟ್ಟು ಕಥೆ ಪುಸ್ತಕಗಳನ್ನು ಓದುವುದರಲ್ಲಿಯೂ ಸ್ನೇಹಿತರ ಜತೆ ಸೇರಿಕೊಂಡು ವಿನೋದಾರ್ಥವಾಗಿ ಅಲ್ಲಲ್ಲಿಗೆ ಪ್ರಯಾಣಮಾಡುವುದರಲ್ಲಿಯೂ ಕಾಲವನ್ನು ಕಳೆದಳು. ತಾಯಿಯು ಮಾಡಬೇಕಾದ ಬಹು ಜವಾಬುದಾರಿಯ ಕೆಲಸವಾದ ಮಕ್ಕಳ ಪೋಷಣ ವಿಷಯವನ್ನು ಕುರಿತು ಅವಳು

ಸ್ವಲ್ಪವೂ ಯೋಚಿಸಲಿಲ್ಲ. ಮತ್ತು ಆ ಕೆಲಸವನ್ನು ನಿರ್ವಹಿಸಲಿಕ್ಕೆ ಬೇಕಾದ ಜ್ಞಾನವನ್ನು ಆವಳು ಪಾಠಶಾಲೆಯಲ್ಲಿ ಹೊಂದಲಿಲ್ಲ. ಇಂಥವಳು ಈಗ ಮಕ್ಕಳಪೋಷಣ ಶಿಕ್ಷಣಕಾರ್ಯವನ್ನು ಪಹಿಸಿರುವಳು. ಮನೋವೃತ್ತಿಗಳ ಸ್ವರೂಪವೂ ಅವುಗಳು ವಿಕಾಸವಾಗುವ ಕ್ರಮವೂ ಅವುಗಳಿಂದಾಗುವ ಪ್ರಯೋಜನಗಳೂ ಅವಳಿಗೆ ಸ್ವಲ್ಪವೂ ತಿಳಿಯದು. ವಿಶೇಷವಾಗಿ ಬಲ್ಲವರೂ ಕೂಡ ಸಮಂಜಸವಾಗಿಯೂ ಪರಿಪೂರ್ಣವಾಗಿಯೂ ನಿರ್ವಹಿಸಲು ಕಷ್ಟವಾದ ಮಕ್ಕಳ ಶಿಕ್ಷಣ ಕಾರ್ಯವನ್ನು ಏನೂ ಅರಿಯದ ಅವಳು ವಹಿಸಿರುವಳು.

ಮನೋವ್ಯಾಪಾರಗಳಲ್ಲಿ ಕೆಲವು ಸಂಪೂರ್ಣವಾಗಿ ಕೆಟ್ಟವೆಂತಲೂ ಕೆಲವು ಒಳ್ಳೆಯವೆಂತಲೂ ಅವಳು ಭಾವಿಸಿರುವಳು. ಇದು ತಪ್ಪಾದ ಅಭಿಪ್ರಾಯವೆಂದು ಹೇಳಬೇಕಾದುದಿಲ್ಲ. ಹೀಗೆ ಅವಳಿಗೆ ಮನೋಧರ್ಮಗಳ ಸ್ವರೂಪವು ಗೊತ್ತಿಲ್ಲವಾದ ಪ್ರಯುಕ್ತ, ಅವುಗಳಿಗೆ ತಕ್ಕಂತೆ ಉಪಚಾರ ಮಾಡುವರೀತಿಯೂ ಅವಳಿಗೆ ತಿಳಿಯದು. ಇದರಿಂದ ಹಾನಿಯು ಹೇಗೆ ಬರದೆ ಇದ್ದೀತು? ನಾವು ಪ್ರತಿಕ್ಷಣದಲ್ಲಿಯೂ ನೋಡುತ್ತಿರುವ ಹಾನಿಯು ಮುಗ್ಧತಾಯಿಯರು ಮಾಡುವ ಅವಿವೇಕವಾದ ಉಪಚಾರದಿಂದಲೇ ಉಂಟಾಗುವುದು. ಬೇರೆ ಬೇರೆ ಮನೋವ್ಯಾಪಾರಗಳನ್ನು ಉತ್ತೇಜಿಸುವ ಕಾರಣಗಳು ಯಾವುವು ಅವುಗಳಿಂದಾಗುವ ಫಲಗಳು ಎಂಥವು ಎಂಬುದನ್ನು ಅರಿಯದ ತಾಯಿಯು ಮಕ್ಕಳಗೋಜಿಗೆ ಹೋಗದೆ ಇರುವುದು ಮೇಲು. ಹಾಗಿಲ್ಲದೆ ಅವಳು ಮಕ್ಕಳ ಶಿಕ್ಷಣ ವಿಷಯದಲ್ಲಿ ಪ್ರವರ್ತಿಸಿದರೆ ಅಧಿಕವಾಗಿ ಕೇಡು ಸಂಭವಿಸದೆ ಇರಲಾರದು.

ಸ್ವಾಭಾವಿಕವಾಗಿಯೂ ಆದಾಯಕರವಾಗಿಯೂ ಇರುವಂಥಾ ಮಕ್ಕಳ ಕಾರ್ಯವನ್ನು ಅವಳು ಪ್ರತಿರೋಧಿಸುವಳು. ಹೀಗೆ ಮಾಡುವುದರಿಂದ ಮಕ್ಕಳ ಸೌಖ್ಯವನ್ನು ಹೋಗಲಾಡಿಸುವಳು. ತನ್ನ ಮತ್ತು ಮಕ್ಕಳ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳುವಳು. ತನಗೂ ಮಕ್ಕಳಿಗೂ ಪ್ರೀತಿಯು ತಪ್ಪುವಂತೆ ಮಾಡುವಳು. ಮಕ್ಕಳನ್ನು ಹೆದರಿಸಿ ಬೈದು ಉಬ್ಬಿಸಿ ಶಾಸ್ತಿಸಿ ಅಥವಾ ಆವರಿಗೆ ಲಂಚ ಕೊಟ್ಟು ತನಗೆ ಬೇಕಾದ ಕೆಲಸಗಳನ್ನು ಅವರ ಕೈಯಿಂದ ಮಾಡಿಸುವಳು. ಮಕ್ಕಳ ಅಂತಃಸ್ಥಿತಿ ಹೇಗಾದರೂ ಇರಲಿ, ಅವರು ಬಾಹ್ಯದಲ್ಲಿ ಮಾತ್ರ ತನ್ನ ಮನಸ್ಸಿನಂತೆ ನಡೆದುಕೊಂಡರೆ ಸಾಕೆಂದು ಅಪೇಕ್ಷಿಸುವಳು. ಹೀಗೆ ಮಾಡುವುದರಿಂದ ಪರಸ್ಪರವಾಗಿ ಪ್ರೀತಿಯು ಇರುವುದಕ್ಕೆ ಬದಲಾದಿ ವಂಚನೆಯೂ ಭಯವೂ ಸಾರ್ಥಪದಾಯಣತೆಯೂ

ಉಂಟಾಗುವುವು. ಅವಳು ಮಕ್ಕಳಿಗೆ ಪ್ರಮಾಣಿಕತೆಯನ್ನು ಪದೇಶಿಸುವಳು. ಆದರೆ ತಾನೇ ಸುಳ್ಳುಹೇಳುವಳು.

ಅವಳು ಶಿಕ್ಷಿಸುವೆನೆಂದು ಮಕ್ಕಳನ್ನು ಪದೇ ಪದೇ ಬೆದರಿಸುವಳು. ಆದರೆ ಶಿಕ್ಷೆಯನ್ನು ಮಾಡುವುದಿಲ್ಲ. ಇಂಥಾ ಆಚರಣೆಯಿಂದ ಅವಳೇ ಸುಳ್ಳುಗಾರಳಾಗುವಳು. ಇಂದ್ರಿಯನಿಗ್ರಹವನ್ನು ಮಾಡಿ ಶಾಂತಚಿತ್ತರಾಗಬೇಕೆಂದು ಬೋಧಿಸುವಳು. ಆದರೆ ತಾನೇ ಕೋಪಿಸಿಕೊಂಡು ಮಕ್ಕಳನ್ನು ಬೈಯುವಳು. ಲೋಕದಲ್ಲಿ ಸ್ವಾಭಾವಿಕವಾಗಿ ಒಳ್ಳೆಯ ನಡತೆಯಿಂದ ಸುಖರೂಪವಾದ ಉತ್ತಮ ಫಲವೂ ಕೆಟ್ಟನಡತೆಯಿಂದ ದುಃಖರೂಪವಾದ ಅನಿಷ್ಟಫಲವೂ ಉಂಟಾಗುವುವೆಂದೂ ಈ ನಿಯಮಕ್ಕನುಸಾರವಾಗಿ ಮಾಡುವ ಮಕ್ಕಳ ಶಿಕ್ಷಣವು ಯೋಗ್ಯವಾದುದೆಂದೂ ಅವಳಿಗೆ ಗೊತ್ತಿಲ್ಲ. ಈ ನಿಯಮಕ್ಕನುಸಾರವಾಗಿ ತಾಯಿಯು ಮನೆಯಲ್ಲಿ ಮಕ್ಕಳು ಉಚಿತವಾಗಿ ನಡೆದುಕೊಂಡರೆ ತನ್ನ ಮೆಚ್ಚಿಕೆಯನ್ನು ಪ್ರಕಾಶಮಾಡಿ ಅವರಿಗೆ ಸಂತೋಷವನ್ನುಂಟುಮಾಡಬೇಕು. ಅವರು ಅನುಚಿತವಾಗಿ ನಡೆದುಕೊಂಡರೆ ಅವರನ್ನು ದಂಡಿಸಿ ಸರಿಯಾದ ಮಾರ್ಗಕ್ಕೆ ತರಬೇಕು.

ಈ ವಿಷಯವು ಅವಳಿಗೆ ಗೊತ್ತಿಲ್ಲದೆ ಇರುವುದರಿಂದಲೂ ಮತ್ತು ಮಕ್ಕಳಲ್ಲಿ ತೋರಿಬರುವ ಬೇರೆಬೇರೆ ಮನೋವ್ಯಾಪಾರಗಳು ಯಾವಕಾರಣದಿಂದ ಉಂಟಾಗುವುವೆಂದು ಅವಳು ತಿಳಿಯದೆ ಇರುವುದರಿಂದಲೂ ಮಕ್ಕಳ ವಿಷಯದಲ್ಲಿ ಅವಳು ಮಾಡುವ ವಿಧಿನಿಷೇಧಗಳು ಅಸಂಗತವಾಗಿಯೂ ಕ್ರೂರವಾಗಿಯೂ ಹಾನಿಕರವಾಗಿಯೂ ಇರುವುವು. ಮಕ್ಕಳ ಕುಲಸ್ವಭಾವಾನುಸಾರವಾಗಿ ಪ್ರಕೃತಿಯು ಅವರ ಮನೋಭಿವೃದ್ಧಿಯನ್ನು ಕ್ರಮಪಡಿಸಿ ಸಂರಕ್ಷಿಸದಿದ್ದ ಪಕ್ಷದಲ್ಲಿ ಇಂಥಾ ಮೂಢಳಾದ ತಾಯಿಯು ಯದ್ವಾ ತದ್ವಾ ಮಾಡುವ ಶಿಕ್ಷಣದಿಂದ ಮಕ್ಕಳು ತುಂಬಾ ಕೇಡಿಗೆ ಗುರಿಯಾಗುತ್ತಿದ್ದರೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಆದರೆ ಇಂಥಾ ಕೇಡಿಗೆ ವಿಶೇಷವಾಗಿ ಅವಕಾಶವಾಗದಂತೆ ಪ್ರಕೃತಿಯು ಅವರನ್ನು ಕಾಪಾಡುತ್ತಿರುವುದು.

ಮೇಲೆ ಹೇಳಿದ ರೀತಿಯಲ್ಲಿ ಮಕ್ಕಳಿಗೆ ಸನ್ಮಾರ್ಗೋಪದೇಶವು ಹೇಗೆ ಸಮಂಜಸವಾಗಿ ನಡೆಯುವುದಿಲ್ಲವೋ ಹಾಗೆಯೆ ಬುದ್ಧಿ ವ್ಯವಸಾಯವೂ ತೃಪ್ತಿಕರವಾಗಿ ನಡೆಯುವುದಿಲ್ಲ. ಕೆಲವು ನಿಯಮಗಳಿಗನುಸಾರವಾಗಿ ಬುದ್ಧಿಯು ವಿಕಾಸವಾಗುವುದು. ಈ ನಿಯಮಗಳನ್ನನುಸರಿಸಿ ಮಕ್ಕಳಬುದ್ಧಿಯು ಕ್ರಮೇಣ ವೃದ್ಧಿಹೊಂದುವುದು. ಆದುದರಿಂದ ಈ ನಿಯಮಜ್ಞಾನವಿಲ್ಲದವರು ಬುದ್ಧಿವ್ಯವಸಾಯವಿಷಯದಲ್ಲಿ ಸರಿಯಾ

ಗಿ ಶಿಕ್ಷಣವನ್ನು ಮಾಡಲು ಸಮರ್ಥರಾಗುವುದಿಲ್ಲ. ಬುದ್ಧಿಯು ಹೇಗೆ ವಿಕಾಸವಾ ಗುವುದೆಂಬುದನ್ನು ತಿಳಿಯದೆಅದನ್ನು ಕ್ರಮಪಡಿಸಲುದ್ಯುಕ್ತರಾಗುವುದುಅವಿವೇಕವು. ಮನಶ್ಶಾಸ್ತ್ರವನ್ನರಿಯದ ತಾಯಿತಂದೆಗಳೂ ಉಪಾಧ್ಯಾಯರೂ ಬಹಳ ಹೆಚ್ಚಾಗಿರು ವರು. ಇಂಥವರು ಮಾಡುವ ಮಕ್ಕಳ ಶಿಕ್ಷಣವು ಬಹು ಅನುಚಿತವಾಗಿರುವುದೆಂದು ಹೇಳಬೇಕಾದ ಅವಶ್ಯಕವಿಲ್ಲ.

ಈಗಿನ ಪಾಠಶಾಲೆಗಳಲ್ಲಿ ಮಾಡಿರುವ ವಿದ್ಯಾಭ್ಯಾಸದ ಏರ್ಪಾಡು ಬಹಳ ತಪ್ಪಾಗಿರುವುದು. ಕಲಿಸುವ ವಿಷಯಗಳೂ ಅವನ್ನು ಬೋಧಿಸುವ ರೀತಿಯೂ ಉಚಿತವಾಗಿಲ್ಲ. ಅವಶ್ಯಕವಾದ ವಿಷಯಗಳನ್ನು ಬಿಟ್ಟು ಅನುಪಯುಕ್ತವಾದ ವಿ ಷಯಗಳನ್ನು ಒಲವಂತದಿಂದ ಕಲಿಸುವರು. ಇದಲ್ಲದೆ ಅವುಗಳನ್ನು ಕಲಿಸುವಕ್ರ ಮವೂ ತಪ್ಪಾಗಿರುವುದು. ಪುಸ್ತಕಗಳನ್ನು ಓದುವುದೇ ವಿದ್ಯಾಭಾಸವೆಂದು ಭಾವಿ ಸಿ ಅನೇಕರು ತಮ್ಮಮಕ್ಕಳನ್ನು ಅತಿಚಿಕ್ಕ ವಯಸ್ಸಿನಲ್ಲಿಯೇ ಓದಿಸಲಾರಂಭಿಸುವ ರು. ಇದರಿಂದ ಮಕ್ಕಳಿಗೆ ಬಹಳ ಹಾನಿಯುಂಟಾಗುವುದು. ವಿಷಯಗಳನ್ನು ನಾಕ್ಷಾತ್ತಾಗಿ ಗ್ರಹಿಸುವುದು ಉತ್ತಮವಿದ್ಯಾಭ್ಯಾಸವು. ಪುಸ್ತಕಗಳಿಂದ ಕಲಿಯು ವ ಪದ್ಧತಿಯು ಗೌಣವಾದುದು. ಸಾಕ್ಷಾತ್ತಾಗಿ ಗ್ರಹಿಸಲು ಅವಕಾಶವಿಲ್ಲದಾಗ ಪು ಸ್ತಕದ ಸಹಾಯವನ್ನು ಹೊಂದಬೇಕು. ಈ ಅಭಿಪ್ರಾಯವನ್ನರಿಯದೆ ಅನೇಕ ಉಪಾಧ್ಯಾಯರು ಮಕ್ಕಳಿಂದ ಪುಸ್ತಕಗಳನ್ನೋದಿಸಲು ಬಹು ಆತುರಪಡುವರು.

(ಸಶೇಷ) S. V.

ಕನ್ನಡ ಗ್ರಂಥಕರ್ತರ ಸಮ್ಮೇಳನ.

No I.

ಕರ್ನಾಟಭಾಷಾಭಿವೃದ್ಧಿಗಾಗಿ ಕೆಲವ್ರ ದೊಡ್ಡಮನುಷ್ಯರು ಧಾರ್ವಾಡದಲ್ಲಿ ಸಂಘ ಸೇರಿ ಚರ್ಚಿಸುವುದಾಗಿ ಆ ಸಮ್ಮೇಳನದ ಉದ್ದಿಷ್ಟವಿಷಯಗಳನ್ನು ಅಚ್ಚು ಹಾಕಿಸಿ ಆ ಪತ್ರಿಕೆಗಳನ್ನು ಕರ್ನಾಟಭಾಷಾಭಿಮಾನಿಗಳನೇಕರಿಗೆ ಕಳುಹಿಸಿರುವ

ರಷ್ಟೆ. ಆ ವಿಷಯಗಳನ್ನು ಕುರಿತು ಇಲ್ಲಿ ನಮ್ಮ ವಾಚಕರಿಗೆ ಕೆಲವು ಅಂಶಗಳನ್ನು ತಿಳಿಯಪಡಿಸುತ್ತೇವೆ.

(೧) " ಕನ್ನಡನಾಡಿನ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುವ ಭಾಷಾಭೇದವು ನಷ್ಟವಾಗುವುದು ಸಂಭವನೀಯವೋ?" ಎಂಬ ವಿಷಯದ ವಿಚಾರವು ಬಲು ಅಸಾಧ್ಯವಾಗಿರುವುದು. ಕನ್ನಡನಾಡು ಯಾವುದು ಎಂದಲ್ಲಿ ಈಗ ಕನ್ನಡ ಮಾತನ್ನು ಆಡುವ ಮೈಸೂರು ದೇಶದಿಂದ ಧಾರ್ವಾಡ, ಮಂಗಳೂರು, ಬಿಜಾಪುರ ಡಿಸ್ಟ್ರಿಕ್ಟುಗಳವರಿಗೂ ಇರುವ ದೇಶವನ್ನು ಹೇಳಬಹುದಲ್ಲವೆ? ಪ್ರತಿ ಡಿಸ್ಟ್ರಿಕ್ಟುಗಳಲ್ಲಿಯೂ ಬಹುಕಾಲದಿಂದ ಜನರು ಸಹಜವಾಗಿ ಬೇರೆ ಬೇರೆ ತರದಿಂದ ಸ್ವೇಚ್ಛೆಯಾಗಿ ಮಾತನಾಡುತ್ತಿರುವ ರೀತಿಯು ಬಹಳ ಸುಲಭವಾಗಿ ತಿಳಿಯುಬರುವುದಾದಕಾರಣ ಇಂತಹ ಭಾಷಾಭೇದವು ನಷ್ಟವಾಗುವಸಂಭವವುಂಟೆ? ಎಂದು ಕೇಳುವ ಪ್ರಶ್ನೆಯೇ ಅಸಂಭಾವಿತವಾಗಿರುವುದು. ಈ ವಿಷಯವನ್ನು ಚರ್ಚೆಗೆ ಇಟ್ಟುಕೊಂಡಿರುವುದು ಬೆಟ್ಟವನ್ನು ಅಗೆದು ಇಲಿಯನ್ನು ಹಿಡಿಯುವಂತಿದೆ. ಇದರಿಂದ ಅವರು ಹೇಳುವ ಎರಡನೇ ವಿಷಯಕ್ಕೂ ತಕ್ಕ ಉತ್ತರವಿತ್ತಂತಾಯಿತು.? ಬೇರೆ ಬೇರೆ ಜನರು ಪ್ರಯೋಗಿಸುವ ಶಬ್ದಗಳ ರಚನೆಯನ್ನು ಒಂದೇಬಗೆಯಾಗಿ ನೆಲೆಗೊಳಿಸುವುದು ಹೇಗೆ ಸಾಧ್ಯವು? ಈಗ ನಾಗರಿಕರಾಗಿಯೂ ಇಂತಹ ವಿಷಯಗಳ ವಿಚಾರದಲ್ಲಿ ಶಿಖಾಮಣಿಗಳಾಗಿಯೂ ಇರುವ ಕನ್ನಡಿಗರೆ " ನಡೆದುದೆಮಾರ್ಗಂ ಪದವಿಡಲೊಡರ್ಚಿದುದೆ ಭಂಗಿ " ಎಂಬಂತೆ ನಿರಂಕುಶವಾಗಿ ಪ್ರಯೋಗಿಸುತ್ತಿರುವಲ್ಲಿ ಇವರಿಗೆ ತಡೆಯನ್ನು ಯಾರು ಮಾಡಬಲ್ಲರು? ಇಂತವರ ಶಬ್ದರಚನೆಗಳನ್ನೆಲ್ಲಾ ಏಕವಿಧವಾಗಿ ಮಾಡುವುದು ನಾನಾಮುಖದಿಂದ ಬೀಸುವ ಬಿರುಗಾಳಿಗಳನ್ನು ಒಂದೇ ಚೀಲದಲ್ಲಿ ತುಂಬಿ ಗಂಟುಕಟ್ಟುವ ಕ್ರಮವಾಗಿರುವುದು.

ಇನ್ನು ಮೂರನೆಯ ವಿಷಯವನ್ನು ನೋಡೋಣ? ಪ್ರಾಚೀನ ಗ್ರಂಥಗಳ ಮತ್ತು ಗ್ರಂಥಕರ್ತರ ವಿಚಾರವೇನೋ ಉಚಿತವಾಗಿರುವುದು. ನವೀನ ಗ್ರಂಥಗಳ ಮತ್ತು ಗ್ರಂಥಕರ್ತರ ವಿಚಾರವು ಕಪ್ಪೆಯತಕ್ಕಡಿಯಂತಿರುವದಲ್ಲವೆ?

ನವೀನ ಗ್ರಂಥಕರ್ತರು ಎಂದರೆ ಯಾವಕಾಲದಿಂದೀಚಿನವರು? ಮತ್ತು ಈಗಿನ ಕನ್ನಡಿಗರಲ್ಲಿ ಕೆಲವರ ಭಾಷೆಯು ಕೇಶಿರಾಜನ ಶಬ್ದಮಣಿದರ್ಪಣದ ರೀತಿಯನ್ನು ಅನುಸರಿಸುವುದು. ಇನ್ನು ಕೆಲವರ ಭಾಷೆಯು ಶಬ್ದಾದರ್ಶದ ಸೂತ್ರಗಳಿಗೆ ಆಧಾರವಾಗಿರುವುದು. ಮತ್ತೆ ಕೆಲವರ ಪ್ರಯೋಗವು ಈ ಎರಡಕ್ಕೂ ಮಧ್ಯ

ಸ್ಥಿತಿಯಲ್ಲಿರುವುದು. ಹೀಗಿರುವಲ್ಲಿ ಇಂಥವರ ಗ್ರಂಥಗಳನ್ನು ಶೋಧಿಸುವುದು ಯಾವ ಆಧಾರದಮೇಲೆ ?

4. ಸದ್ಯಸ್ಥಿತಿಗೆ ಅನುಗುಣವಾದ ಗ್ರಂಥಗಳನ್ನು ಅಂದರೆ ಶಾಸ್ತ್ರೀಯಮುಂತಾದ ಗ್ರಂಥಗಳನ್ನು ಬರೆಸುವುದು ಈಗಿನ ಕನ್ನಡಿಗರಿಗೆ ಬಲು ಬೇಕಾದದ್ದು. ಇದೀಗ ಅತ್ಯುಪಯುಕ್ತವಾದ ವಿಷಯವು. ಕನ್ನಡದಲ್ಲಿ ಕೇವಲ ಕಾವ್ಯಗಳು ಮಾತ್ರ ಇರುವವಲ್ಲದೆ ಇಂತಹ ಉತ್ತಮವಾದ ಗ್ರಂಥಗಳು ಅತಿವಿರಳವು. ಪೂರ್ವದ ಕಾವ್ಯಗಳನ್ನು ಓದುವುದರಿಂದ ತಕ್ಕಮಟ್ಟಿಗೆ ಭಾಷಾ ಪರಿಚಯವಾಗುವುದಲ್ಲದೆ ವಾಚಕರಿಗೆ ಯಾವ ಶಾಸ್ತ್ರೀಯವಿಷಯಗಳು ತಿಳಿಯಬರುವುದು? ಆ ಕಾವ್ಯಗಳಲ್ಲಿ, ಅತಿಶಯೋಕ್ತಿ, ಅತ್ಯುಕ್ತಿ, ಉತ್ಪ್ರೇಕ್ಷೆ, ಮುಂತಾಗಿ ಕೇವಲ ಅಭಾಸವಾಗಿಯೂ ಓದುವ ವಿದ್ಯಾರ್ಥಿಗಳಿಗೆ ವ್ಯಾಮೋಹಕರವಾಗಿಯೂ ಇರುವ ಸ್ತ್ರೀವರ್ಣನೆ ಮುಂತಾದವುಗಳೇ ಎಲ್ಲಿನೋಡಿದರೂ ತುಂಬಿರುವವು. ಆದುದರಿಂದ ಸದ್ಯಸ್ಥಿತಿಗೆ ಅಂದರೆ ಈಗಿನ ನವನಾಗರಿಕತೆಗೆ ಭಾಷೆಯಲ್ಲಿಯೂ ವಿಷಯಗಳಲ್ಲಿಯೂ ಅನುಗುಣವಾದ ಗ್ರಂಥಗಳನ್ನು ಬರೆಸುವುದು ಉತ್ತಮೋತ್ತಮ ಕ್ರಮವು.

(5 ನೇ ವಿಷಯವು) 1-2 ನೇ ಕಲಮುಗಳಿಗನುಸರಿಸಿ ಒಂದು ಕನ್ನಡ ಕೋಶವನ್ನು ಸಿದ್ಧಪಡಿಸುವುದು ಮೇಲೆಹೇಳಿದಂತೆ ಕಷ್ಟಸಾಧ್ಯವೇ ಹೊರ್ತು ಪ್ರಯೋಜನಾಂಶವು ಅತ್ಯಲ್ಪವು.

(6 ನೇ ವಿಷಯವು) ಕನ್ನಡಿಗರಿಗೆ ಈಗ ಸ್ವಭಾಷೆಯಲ್ಲಿ ಔದಾಸೀನ್ಯಕ್ಕೆ ಎರಡು ಮುಖ್ಯಕಾರಣಗಳು. ವರ್ಣನಾ ಭಾಗವಿಲ್ಲದೆ ಉತ್ತಮವಾದ ಶಾಸ್ತ್ರೀಯಮುಂತಾದ ಗ್ರಂಥಗಳಿಲ್ಲದಿರುವುದು ಮತ್ತು ಕೇವಲ ಕನ್ನಡಿಗರಿಗೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿಯೂ ಅವಕಾಶಕೊಟ್ಟು ಪ್ರೋತ್ಸಾಹಿಸದಿರುವುದು. ಇವೆರಡರಲ್ಲಿ ಮೊದಲನೆಯದನ್ನು ಪ್ರಜೆಗಳೇ ನಿವಾರಿಸಿಕೊಳ್ಳಬಹುದು. ಎರಡನೆಯದನ್ನು ನಿವಾರಿಸುವುದು ಈಗಿನ ಇಂಗ್ಲಿಷ್ ಪ್ರಪಂಚದಲ್ಲಿ ಅತಿ ದುಷ್ಕರವೆಂದು ಧಾರಾಳವಾಗಿ ಹೇಳಬಹುದು.

(ಏಳನೇವಿಷಯವು) ಪ್ರಾಚೀನ ಕಾವ್ಯಗ್ರಂಥಗಳಲ್ಲಿ ಯಾವ ಗ್ರಂಥಗಳ ಭಾಷಾ ಶೈಲಿಯನ್ನು ಅನುಸರಿಸುವುದು ಸದ್ಯಸ್ಥಿತಿಗೆ ಶ್ರೇಯಸ್ಕರವು ? ಎಂಬ ಪ್ರಶ್ನೆಗೆ ಉತ್ತರವು ಮೇಲೆಹೇಳಿದುದರಲ್ಲಿಯೇ ದೊರೆಯುವುದು. ಆದರೂ ಪಿಷ್ಟಪೇಷಣ ನ್ಯಾಯದಿಂದ ಇನ್ನೊಂದುಸಾರಿಯೂ ನೋಡೋಣ ಹಾಗೆ ಇವರು ಭಾವಾಶೈಲಿ

ಯನ್ನು ಅನುಸರಿಸಿ ಬರೆಸುವ ಪುಸ್ತಕಗಳು ಈಗಿನ ಸ್ಕೂಲುಗಳಲ್ಲಿ ಓದುವ ಬಾಲಕರಿಗೂ ಇತರ ಸಾಮಾನ್ಯಜನಗಳಿಗೂ ಸುಲಭವಾಗಿ ತಿಳಿಯುಬಹುದಾಗಿ ಇರಬೇಕಷ್ಟೆ ಅಂತಹ ಭಾಷಾಶೈಲಿಯು ಪಂಪಭಾರತ ಮೊದಲಾದ ಕೇವಲ ಹಳಗನ್ನಡ ಗ್ರಂಥಗಳನ್ನಾಗಲಿ ಮಹಾಭಾರತ, ತೊರವೆ ರಾಮಾಯಣ ಮೊದಲಾದ ಸ್ವಲ್ಪ ಹೊಸಕನ್ನಡ ಮಿಶ್ರವಾದ ಗ್ರಂಥಗಳಲ್ಲಾಗಲಿ ದೊರೆಯಲಾರದು. ಕಥಾಮಂಜರಿ, ಕಥಾಸಂಗ್ರಹ ಮೊದಲಾದ ಕೇವಲ ಹೊಸಕನ್ನಡದ ಗ್ರಂಥಗಳ ಶೈಲಿಯನ್ನೆ ಅನುಸರಿಸಬೇಕು. ಇದುಕೂಡ ಮೇಲೆಹೇಳಿದಂತೆ ಕನ್ನಡನಾಡಿನ ಎಲ್ಲಾ ಕಡೆಯ ಜನಗಳಿಗೂ ಒಂದೇ ವಿಧವಾಗಿಯೂ ಸುಲಭವಾಗಿಯೂ ತಿಳಿಯುಬಹುದಾದೀತೆ ಎಂಬ ಅಂಶವು ಆಲೋಚಿಸತಕ್ಕುದಾಗಿದೆ.

ಎಂಟನೇ ವಿಷಯವಾದ ಶಾಸ್ತ್ರೀಯ ಸಂಗತಿಗಳಲ್ಲಿ ಉಪಯೋಗಿಸತಕ್ಕ ಪಾರಿಭಾಷಿಕ ಶಬ್ದಗಳ ವಿಮರ್ಶನೆಯು ಅತ್ಯಂತ ಆವಶ್ಯಕವಾದುದೇ ಸರಿ.

ಹೀಗೆ ಭಾಷಾಭಿಮಾನದಿಂದಲೂ ಒಂದುವಿಧದಲ್ಲಿ ಸ್ವದೇಶಕ್ಕೆ ಒಳ್ಳೇದನ್ನು ಮಾಡಬೇಕೆಂದು ಕೋರುವುದು ಸರ್ವಶ್ಲಾಘ್ಯವಾದುದು. S. R.



ಗ್ರಂಥಕರ್ತರ ಸಮ್ಮೇಳನ.

No. II

ಅಯ್ಯಾ—ಇದರಡಿ ಶ್ರುತಪಡಿಸುವ ವಿಷಯವನ್ನು ದಯಮಾಡಿ ತಮ್ಮ ಪತ್ರದಲ್ಲಿ ಪ್ರಕಟಿಸಲು ಅವಕಾಶ ಕೊಡಬೇಕೆಂದು ಬೇಡುತ್ತೇನೆ.

ಈ ತಿಂಗಳು ಪ್ರಾರಂಭದಲ್ಲಿ ಧಾರ್ವಾಡದಲ್ಲಿ ಕನ್ನಡ ಭಾಷಾಭಿಮಾನಿಗಳು ಸೇರಿ ನಡಿಸಿದ ಕಾರ್ಯವನ್ನು ಸಂಕ್ಷೇಪವಾಗಿ ತಿಳಿಸುವೆನು. ಇಲ್ಲಿ ಕನ್ನಡ ವಿದ್ಯಾವರ್ಧಕ ಸಂಘವೆಂದು ಒಂದು ಸಂಸ್ಥೆಯು ಸ್ಥಾಪಿಸಲ್ಪಟ್ಟು ಹದಿನೈದು ವರ್ಷಗಳಿಂದ ಪ್ರಬಲ್ಯ ಸ್ಥಿತಿಯಲ್ಲಿರುವುದು. ಈ ಸಂಘದವರು ಪ್ರತಿ ವರ್ಷದಲ್ಲಿಯೂ ಗ್ರಂಥಕರ್ತರಿಗೂ ವಿದ್ಯಾರ್ಥಿಗಳಿಗೂ ಉಪನ್ಯಾಸಕರಿಗೂ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಗೊಳಿಸುತ್ತಿರುವುದಲ್ಲದೆ ವಾಗ್ಭೂಷಣವೆಂಬ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿರುವುದು. ಈ ಸಂವತ್ಸರ ಈ ಇನಾಮಿನ ಪರೀಕ್ಷೆಯ ಜೊತೆಯಲ್ಲಿಯೇ ಗ್ರಂಥಕರ್ತರ ಸಂಮೇಲನವೆಂಬ ಒಂದು ಸಭೆಯನ್ನು ಕೂಡಿಸಬೇಕೆಂದು

ಪ್ರಯತ್ನಿಸಿ ಕನ್ನಡ ಭಾಷಾಭಿಮಾನಿಗಳಿಗೂ ಪತ್ರಕರ್ತರಿಗೂ ಮೊದಲೇ ಆ ಮುಂ
ತ್ರಣವನ್ನು ಕೊಟ್ಟಿದ್ದು ಎಲ್ಲರಿಗೂ ವಿದಿತವಾಗಿದೆ ಸಂಘದವರೂ ತುಂಬ ಶ್ರಮ
ತೆಗೆದುಕೊಂಡು ಅಲ್ಲಿಗೆ ಬರುವ ಸಭಿಕರ ಅನುಕೂಲಕ್ಕಾಗಿ ಅಗತ್ಯವಾದ ಸಿದ್ಧತೆಗಳ
ನ್ನು ಏರ್ಪಡಿಸಿ ಬಹು ಜನರು ದಯಮಾಡಿಸುವರೆಂದು ನಿರೀಕ್ಷಿಸುತಿದ್ದರು. ದೇಶಾಭಿ
ಮಾನವುಳ್ಳ ಅಲ್ಲಿಯ ಜನರು ತಕ್ಕ ಮಟ್ಟಿಗೆ ದಯಮಾಡಿಸಿದ್ದರು. ಐವತ್ತು ಲಕ್ಷ
ಕ್ಕಿಂತ ಮಿಗಿಲಾದ ಪ್ರಜೆಗಳುಳ್ಳದ್ದಾಗಿಯೂ ತನ್ನಡ ಭಾಷೆಗೆ ತವರು ಮನೆಯಾಗಿ
ಇರುವ ಈ ಮೈಸೂರು ದೇಶದಿಂದ ನಾಲ್ವರು ಪ್ರತಿನಿಧಿಗಳು ಸುಧಾ ಸಭೆಗೆ
ದಯಮಾಡಿಸಲಿಲ್ಲವೆಂಬ ಅಂಶವನ್ನು ಶ್ರುತಪಡಿಸಲು ನಾಚಿಕೆಯಾಗುವುದು ಮುಂ
ದೆಯಾದರೂ ನಮ್ಮವರು ಭಾಷಾಭಿಮಾನವಿಟ್ಟು ಇಂತಹ ಕಾರ್ಯಗಳಿಗೆ ಮುಂದು
ವರಿಯುವರೆಂದು ನಂಬುತ್ತೇನೆ.

ಜೂ೯ ಒಂದನೇ ತಾರೀಖಿನಿಂದ ಸಂಘದ ಇನಾಮಿನ ಪರೀಕ್ಷೆಗಳು ವಿದ್ಯಾ
ರ್ಥಿಗಳ ಉಪನ್ಯಾಸಗಳೂ ನಡೆದವು ೮ ರಾತ್ರಿ ವಿಕ್ಟೋರಿಯಾ ನಾಟಕಶಾಲೆಯಲ್ಲಿ
ಸಭಿಕರಿಗಾಗಿ ರಾಮರಾಜ್ಯವಿಯೋಗವೆಂಬ ನಾಟಕವು ಆಡಿ ತೋರಿಸಲ್ಪಟ್ಟಿತು.
೨ರಡನೆ ತಾರೀಖು ಪ್ರಾತಃಕಾಲ ಸಂಘದ ವಾರ್ಷಿಕ ಮಹಾ ಸಭೆ ನಡೆದು
ಹಿಂದಿನ ವರ್ಷದ ವರದಿಯು ಓದಲ್ಪಟ್ಟಮೇಲೆ ವ್ಯವಸ್ಥಾಪಕ ಸಭಾಸದರ ಹೆಸ
ರುಗಳು ಗೊತ್ತುಮಾಡಲ್ಪಟ್ಟವು. ಆ ಮೇಲೆ ಗ್ರಂಥಕರ್ತರ ಸಂಮೇಲನವು ಕೂ
ಡಿತು. ಕಾರ್ಯದರ್ಶಿಗಳಾದ ಮಹಾರಾಜೇಶ್ರಿ ನಾರಾಯಣರಾವ್ ಕರಿಗುದುರಿ
ಬಿ. ಎ. ಯಲ್. ಯಲ್. ಬಿ. ಯವರು ಸಭಿಕರ ಸ್ವಾಗತ ಭಾಷಣವನ್ನೂ ನಡೆ
ಯಬೇಕಾದ ಸಭಾಕಾರ್ಯಗಳನ್ನೂ ಕುರಿತು ಪ್ರಸ್ತಾಪಿಸಿದರು. ಸಭಿಕರ ಪ್ರಾರ್ಥನೆ
ಯಂತೆ ಮೈಸೂರ್ ಸರ್ಕಾರದ ಕನ್ನಡ ಟ್ರಾನ್ಸ್ಲೇಟರ್ ಮಹಾರಾಜೇಶ್ರಿ ಯುಸ್.
ಜಿ. ನರಸಿಂಹಾಚಾರ್ಯರವರು ಅಗ್ರಾಸನ ವಹಿಸಿ ಕನ್ನಡ ಭಾಷೆಯ ಪೂರ್ವಕಾಲ
ದ ಮತ್ತು ಈಗಿನ ಸ್ಥಿತಿಯನ್ನು ವಿವರಿಸಿ ಬಹು ಸರಸವಾಗಿ ಉಪನ್ಯಾಸ ಮಾಡಿ
ದರು. ಆಮೇಲೆ ನೆರೆದಿದ್ದ ಸಭಿಕರ ಭಾವಚಿತ್ರಗಳು ತೆಗೆಯಲ್ಪಟ್ಟವು ಮಧ್ಯಾಹ್ನಾ
ತ್ಪರ ೨ಘಂನಃ ಸಭೆ ಸೇರಿತು. ಕೆಲವರು ಸಭಿಕರು ಭಾಷಾ ಸುಧಾರಣೆ ವಿಷಯದಲ್ಲಿ
ಬರೆದು ಕಳುಹಿದ ನಿಬಂದಗಳು ಓದಲ್ಪಟ್ಟವು. ಸಾಯಂಕಾಲ ಉಳಿದಿದ್ದ ಕೆಲವು
ವಿದ್ಯಾರ್ಥಿಗಳ ಉಪನ್ಯಾಸಗಳು ನಡೆದು ಆ ದಿನದ ಕೆಲಸ ಪೂರೈಸಿತು. ಮೂರ
ನೇ ತಾರಿಖು ಬೆಳಿಗ್ಗೆ ೪ಘಂನಃ ಸಭೆ ಸೇರಿತು. ಮೊದಲು ನೋಟೀಸ್‌ನಲ್ಲಿ ಪ್ರಕಟಿಸ

ಲ್ಪಟ್ಟಿದ ಪ್ರತಿ ಒಂದು ವಿಷಯದ ಮೇಲೂ ಚರ್ಚೆಗಳು ನಡೆದು ನಿರ್ಣಯಾಂಶಗಳು ಗೊತ್ತುಮಾಡಲ್ಪಟ್ಟವು. ಮಧ್ಯಾಹ್ನಾತ್ಪರ ಉಳಿದಿದ್ದ ಕೆಲವು ಅಂಶಗಳು ಚರ್ಚಿಸಲ್ಪಟ್ಟು ಕೆಲವು ನಿರ್ಣಯಗಳು ತಿರ್ಮಾನಿಸಲ್ಪಟ್ಟವು. ಅವುಗಳ ಸಾರಾಂಶ—ಬೇರೆಬೇರೆ ದೇಶಗಳಲ್ಲಿ ಉಪಯೋಗದಲ್ಲಿರುವ ಕನ್ನಡ ಭಾಷೆಯನ್ನು ಒಂದೇ ರೂಪಕ್ಕೆ ತರಲಿಕ್ಕೆ ಯತ್ನಿಸುವುದು. ಆಗತ್ಯಗ್ರಂಥಗಳಲ್ಲಿ ಅಕ್ಷರ ಸಂಯೋಜನವೂ ಶಬ್ದ ಮತ್ತು ವಾಕ್ಯರಚನೆ ಯೂ ವ್ಯಾಕರಣ ಶುದ್ಧವಾಗಿರುವಂತೆ ಬರೆಯಿಸತಕ್ಕದ್ದು ಇದಕ್ಕಾಗಿ ಒಂದು ಉಪಸಭೆ ನೇಮಿಸಲ್ಪಟ್ಟ ಆ ಸಭಿಕರ ಒಪ್ಪಿಗೆಯಿಂದ ಈ ಮಾದರಿಯಲ್ಲಿ ಕೆಲವು ಪುಸ್ತಕಗಳು ಬರೆಯಿಸಲ್ಪಟ್ಟು ಪಂಡಿತರಿಂದ ಪರಿಶೋಧಿಸಲ್ಪಟ್ಟ ಮೇಲೆ ಸಂಘದಿಂದ ಮುದ್ರಿಸತಕದ್ದು. ಶಾಸ್ತ್ರಗಳಲ್ಲುಪಯೋಗಿಸಲ್ಪಡತಕ್ಕ ಪಾರಿಭಾಷಿಕ ಶಬ್ದಗಳನ್ನು ಈಗ ಬರೆಯಿಸುವುದು ಸಾಧ್ಯವಲ್ಲ. ಬಂಗಾಳಿ ಮತ್ತು ನಾಗರಿ ಸಭೆಯವರು ಈ ಕೆಲಸಕ್ಕೆ ಮೊದಲೇ ಪ್ರಯತ್ನಿಸಿ ಕೆಲಸ ನಡಿಸುತ್ತಿರುವುದರಿಂದಲೂ ಭರತ ಖಂಡದೆಲ್ಲೆಲ್ಲಾ ಒಂದೇ ವಿಧವಾದ ಪರಿಭಾಷಾಪದಗಳು ಇರುವುದು ಉತ್ತಮವಾದ್ದರಿಂದಲೂ ಅವರ ಕಾರ್ಯ ಪೂರೈಸಿದಮೇಲೆ ಅವರನುಮತಿ ಪಡೆದು ದೇಶಭಾಷೆಗೆ ಅಂತಹ ಪದಗಳನ್ನು ಸೇರಿಸಕೊಳ್ಳಬಹುದೆಂತಲೂ ಗೊತ್ತಾಯಿತು. ಬೊಂಬಾಯಿಾ ಮದರಾಸು ಮತ್ತು ಮೈಸೂರು ಸರ್ಕಾರದ ಪಾಠಶಾಲೆಗಳಲ್ಲಿ ಉಪಯೋಗಿಸುವ ಪಾಠಪುಸ್ತಕಗಳಲ್ಲಿ ಏಕರೂಪವಾದ ಪದಸರಣಿ ಇರತಕ್ಕದ್ದು ಆಗತ್ಯವೆಂದು ಗೊತ್ತಾಯಿತು. ತರುವಾಯು ಬೊಂಬಾಯಿ ಮೈಸೂರ್ ಸರ್ಕಾರದವರು ಸಂಘಕ್ಕೆ ಮಾಡುತ್ತಿರುವ ಸಹಾಯಕ್ಕಾಗಿ ಕೃತಜ್ಞತಾಪೂರ್ವಕ ವಂದನೆಗಳು ಸಮರ್ಪಿಸಲ್ಪಟ್ಟವು ಆಮೇಲೆ ಪರೀಕ್ಷೆಯಲ್ಲಿ ಪ್ಯಾಸಾದ ವಿದ್ಯಾರ್ಥಿಗಳಿಗೂ ಗ್ರಂಥಕರ್ತರಿಗೂ ಬಹುಮಾನಗಳು ಕೊಡಲ್ಪಟ್ಟು ಸಭೆ ವಿಸರ್ಜನೆಯಾಯಿತು. ಆ ರಾತ್ರಿ ಸಂಘದಲ್ಲಿ ನೆರೆದಿದ್ದ ಸಭಿಕರಿಗೆಲ್ಲಾ ಭೋಜನವಾಯಿತು. ತರುವಾಯು ಭಾರತನಾಟ್ಯ ಕಲಾಶಾಲೆಯಲ್ಲಿ ಸುಭದ್ರಾ ಹರಣ ನಾಟಕದ ಒಂದು ಅಂಕವು ಆಡಲ್ಪಟ್ಟಿತು. ಮರುದಿನ ಸಭಿಕರು ತಮ್ಮತಮ್ಮ ಸ್ಥಳಗಳಿಗೆ ಪ್ರಯಾಣ ಮಾಡಿದರು.

ನಮ್ಮ ದೇಶದಲ್ಲಿ ಇಂತಹ ಕಾರ್ಯಗಳು ಇದುವರೆಗೆ ಎಂದೂನಡೆದಿಲ್ಲ. ಮುಂದೆಯಾದರೂ ಈ ದೇಶದಲ್ಲಿ ಇಂಥ ಸಂಘವನ್ನು ಏರ್ಪಡಿಸಿ ಆಗಾಗ್ಗೆ ಸಭಾ ಕಾರ್ಯಗಳನ್ನು ಜರಿಗಿಸುತ್ತಾ ಅಲ್ಲಿಯ ಶಾಖೆಗಳಿಗೆ ಈ ಸಂಘದಿಂದ ಒಬ್ಬರಿಬ್ಬರು

ಪ್ರತಿನಿಧಿಗಳನ್ನ ಕಳುಹಿಸಲಿಕ್ಕೆ ಯತ್ನಿಸುವುದು. ಭಾಷೆಯು ಏಳಿಗೆಗೆ ಕಾರಣವಾಗುವುದು. ಇದಕ್ಕಾಗಿನಮ್ಮಲ್ಲಿಯ ಭಾಷಾಭಿಮಾನಿಗಳು ತಕ್ಕ ಸೂಚನೆಗಳನ್ನು ತಮ್ಮ ಪತ್ರಿಕಾ ಮುಖದಿಂದ ತಿಳಿಯಪಡಿಸುವರೆಂದು ನಂಬುತ್ತೇನೆ.

K. R.

ಭೂಮಿಯೊಳಗಿನ ನೀರು.

ಭೂಮಿಯುಮೇಲೆ ನದಿಗಳೂ, ಸರೋವರಗಳೂ, ಇವೇಮೊಲಾದದ ಜಲಾಂಶಗಳು ಹೇಗೆ ಇರುತ್ತವೆಯೋ ಅದೇರೀತಿಯಲ್ಲಿ ಭೂಮಿಯ ಒಳಭಾಗದಲ್ಲಿಯೂ, ಜಲಾಂಶಗಳು ಇರುವುದು ತೋರಿಸಲ್ಪಟ್ಟಿತು. ಭಾವಿಗಳೂ, ಕುಂಟೆಗಳೂ ಮೊದಲಾದುವುಗಳಲ್ಲಿ ಸಿಕ್ಕತಕ್ಕ ನೀರಿನಲ್ಲಿ ಯಾವಯಾವ ಪದಾರ್ಥಗಳು ಮಿಶ್ರವಾಗಿರುವುವೋ ಅದು ಪರೀಕ್ಷಣೀಯವಾಗಿರುವುದು. ಎಲ್ಲಾ ನೀರುಗಳಿಗಿಂತಲೂ ಮಳೆಯು ನೀರು ಸ್ವಲ್ಪ ಹೆಚ್ಚು ಕಡಮೆಯಾಗಿ ಪರಿಶುದ್ಧವಾಗಿರುವುದು. ಮಳೆಯು ಬೀಳುವಾಗ್ಯೆ ವಾಯುಮಂಡಲದಲ್ಲಿರತಕ್ಕ ಕಶ್ಮಲಗಳನ್ನು ವಹಿಸುವದು. ಈ ಕಶ್ಮಲಗಳಲ್ಲಿ ಅನಿಲಾವಸ್ಥೆಯಲ್ಲಿರತಕ್ಕ ಅನೇಕ ಪದಾರ್ಥಗಳು ಇರುವುವು. ಅದು ಭೂಮಿಗೆ ಬಿದ್ದಕೂಡಲೆ ಭೂಮಿಲ್ಲಿರತಕ್ಕ ಅನೇಕ ಪದಾರ್ಥಗಳು ಅದರ ಜೊತೆಯಲ್ಲಿ ಶೇರಿರುವುವು. ಈ ಪದಾರ್ಥಗಳ ಪ್ರಮಾಣವು ಕೆಲವುಕಡೆಗಳಲ್ಲಿ ಹೆಚ್ಚಾಗಿಯೂ ಕೆಲ ಕಡೆಗಳಲ್ಲಿ ಕಡಮೆಯಾಗಿಯೂ ಇರುವುವು. ನೀರಿನಲ್ಲಿ ವಾಯುವು ಕೂಡಾ ಸೇರಿರುವುದು. ಸಾವಿರಭಾಗ ನೀರಿನಲ್ಲಿ ಸುಮಾರು ೧೪ ಭಾಗ ವಾಯುವು ಇರುವುದು. ಈ ಪದಾರ್ಥಗಳನ್ನೆಲ್ಲಾ ಗೊತ್ತು ಮಾಡುವುದು ಕಷ್ಟವಲ್ಲ. ನೀರನ್ನು ಚೆನ್ನಾಗಿ ಕಾಸಿ ಜಲಾಂಶವೆಲ್ಲಾ ಅನಿಲಾವಸ್ಥೆಯನ್ನು ಹೊಂದಿ ಹೊರಟು ಹೋಗುವಂತೆ ಮಾಡಬಹುದು. ಹಾಗೆ ಮಾಡಿದರೆ, ಆ ನೀರಿನಲ್ಲಿ ಯಾವಯಾವ ಪದಾರ್ಥಗಳಿದ್ದುವೋ ಅವುಗಳೆಲ್ಲಾ ಹಿಂದೆ ಉಳಿಯುವವು. ಈ ರೀತಿಯಲ್ಲಿ ಮಳೆಯನೀರನ್ನು ಇತರ ವಿಧವಾದ ನೀರನ್ನೂ ಪರೀಕ್ಷಿಸಿದರೆ ಮಳೆಯ ನೀರಿನಲ್ಲಿ ಕಶ್ಮಲಗಳು ಕಡಮೆಯಾಗಿರುವ ಸಂಗತಿಯು ಸ್ಪಷ್ಟವಾಗುವುದು. ನೀರಿಗೆ ಸೇರತಕ್ಕ ಕಶ್ಮಲಗಳಲ್ಲಿ ಕೆಲವು ಲೋಹಗಳು ಕೂಡಾ ಸೇರುವುದುಂಟು. ಅನೇಕ ರೋಗಗಳಿಗೆ ಕೆಲವು ಲೋಹ

ಗಳಿಂದ ಮಿಶ್ರವಾದ ನೀರು ಔಷಧಿಯಾಗಿ ಪರಿಣಮಿಸುವುದು. ಬುಗ್ಗೆಯಿಂದ ಬರ ತಕ್ಕ ಕೆಲವು ನೀರುಗಳಲ್ಲಿ ಅನೇಕ ವಿಧವಾದ ಧಾತುಗಳು ಸೇರಿರುವುವು. ಅವುಗ ಳನ್ನು ಪರೀಕ್ಷಿಸಿ ಯಾವಯಾವ ರೋಗಗಳಿಗೆ ಯಾವಯಾವ ಬುಗ್ಗೆಯ ನೀರು ಉಪ ಯೋಗವಾಗುವುವೋ ಅವುಗಳನ್ನೂ ಕೂಡಾ ಗೊತ್ತುಮಾಡಿರುವರು. ತಣ್ಣೀರಿನ ಲ್ಲಿ ಈಧಾತುಗಳು ಸೇರುವುದಕ್ಕಿಂತ ಬಿಸಿನೀರಿನಲ್ಲಿ ಕರಗಿ ಸೇರಿಕೊಳ್ಳುವದು ಹೆಚ್ಚು. ಬಿಸಿನೀರು ಬುಗ್ಗೆಗಳು ಅನೇಕ ಪ್ರಾಂತ್ಯಗಳಲ್ಲಿರುವುವು. ಈ ನೀರಿನಲ್ಲಿ ಸ್ನಾನ ಮಾ ಡಿದ ಮಾತ್ರದಿಂದಲೇ ಆರೋಗ್ಯವು ಉಂಟಾಗುವುದು. ಅನೇಕ ಬುಗ್ಗೆಗಳಲ್ಲಿ ಲೋಹಾಂಸಗಳು ಲಕ್ಷಭಾಗ ನೀರಿನಲ್ಲಿ ಇನ್ನೂರು ಭಾಗದವರೆಗೂ ಸೆರಿರುವು ದುಂಟು. ಭೂಗರ್ಭದಲ್ಲಿರತಕ್ಕ ಅನೇಕ ವಿಧವಾದ ಲೋಹಗಳನ್ನು ಈ ಬುಗ್ಗೆ ಗಳು ಮೇಲಕ್ಕೆ ತರುವುವು. ಮಿಾಡರ್ ಎಂಬ ಸ್ಥಳದಲ್ಲಿ ವರ್ಷಕ್ಕೆ ೭೨ ಘನ ಅಡಿ ಇರತಕ್ಕಷ್ಟು ಉಪ್ಪು ಮೇಲಕ್ಕೆ ಬರುವುದು. ಮಳೆಯು ಬೀಳುವಾಗ್ಯೆ ವಾಯು ಮಂಡಲದಲ್ಲಿರತಕ್ಕ ಆಕ್ಸಿಜ್ ಮತ್ತು ಕಾರ್ಬಾನಿಕ್ ಎಂಬ ವಾಯುವಿನ ಅಂಶವನ್ನು ವಿಶೇಷವಾಗಿ ಹೊಂದುವುವು. ಭೂಗರ್ಭದಲ್ಲಿ ಕಾರ್ಬಾನಿಕ್ ಆಸಿಡ್ ಗ್ಯಾಸ್ ಎಂಬ ಅನಿಲಾಂಶವು ವಿಶೇಷವಾಗಿರುವುದು. ಅನೇಕ ಬುಗ್ಗೆಗಳಲ್ಲಿ ಮೇಲಕ್ಕೆ ಬರ ತಕ್ಕ ನೀರಿನ ಜೊತೆಗೆ ಈ ಅನಿಲಾಂಶವು ಮೇಲಕ್ಕೆ ಎದ್ದು ನೀರಿನಲ್ಲಿ ಗುಳ್ಳೆಗಳಂತೆ ಆಗಿ ಒಡೆದು ವಾಯುವಿನ ಜೊತೆಗೆ ಸೇರುವುದು. ಅನೇಕ ಲೋಹಗಳನ್ನು ಕರ ಗಿಸಿ ನೀರಿನ ಜೊತೆಯಲ್ಲಿ ಮಿಶ್ರಮಾಡುವುದಕ್ಕೆ ಈ ಅನಿಲಾಂಶವು ಸಾಧಕವಾಗು ವುದು. ಸುಣ್ಣವನ್ನು ಕರಗಿಸಿ ನೀರಿನಲ್ಲಿ ಸೇರಿಸುವುದಕ್ಕೆ ಇದು ಬಹಳ ಸಾಧಕ ವಾದುದು. ಮಳೆಯ ನೀರು ಭೂಮಿಯೊಳಗೆ ಇಂಗಿ ಕಾರ್ಬಾನಿಕ್ ಆಸಿಡ್ ನೊಡನೆ ಮಿಶ್ರವಾಗಿ ಭೂಗರ್ಭದಲ್ಲಿರತಕ್ಕ ಭಂಡೆಗಳನ್ನು ಯುಗಾಂತರಗಳಿಗೆ ಸಂ ಬಂಧ ಪಟ್ಟ ನಾನಾವಿಧವಾದ ಪ್ರಾಣಿಗಳ ಅಸ್ಥಿಗಳನ್ನೂ ಕರೆಗಿಸಿ ಬುಗ್ಗೆಗಳ ಮೂಲಕವಾಗಿ ಈಚೆಗೆ ತರುತ್ತದೆ. ಇದನ್ನು ಪರಿಶೀಲಿಸಿ ನೋಡಿದರೆ ಒಂದು ಯುಗದಲ್ಲಿ ಪ್ರಾಣಿಗಳ ದೇಹಕ್ಕೆ ಸಂಬಂಧಪಟ್ಟಿದ್ದ ಪದಾರ್ಥಗಳು ಮತ್ತೊಂದು ಯುಗದಲ್ಲಿ ಪ್ರಾಣಿಗಳ ದೇಹಪುಷ್ಟಿಗೆ ಸಾಧಕವಾಗಿ ಹೇಗೆ ಒದಗುವುದೋ ಅದು ಗೊತ್ತಾಗುವುದು. ಈ ನೀರಿನ ಸಹಾಯದಿಂದ ಭೂಗರ್ಭದಲ್ಲಿ ಇರತಕ್ಕ ಪದಾರ್ಥ ಗಳು ಭೂಮಿಯ ಮೇಲಕ್ಕೆ ತರಲ್ಪಟ್ಟು ಉಪಯೋಗಕ್ಕೆ ಒರುವುದು ಗೊತ್ತಾಗು ವುದು. ಕೆಂಟಕಿ ಎಂಬ ಸ್ಥಳದಲ್ಲಿ ಭೂಮಿಯ ಒಳಗೆ ಒಂದು ಗುಹೆಯು ಇರುವು

ಬಿಜ್ಜಂಬೆತ್ತೆಸೆವಇರೆಯು ।
ಸಜ್ಜುಳಮಂ ತೊಣ್ಣುಗೆಡೆವಶುಕ ಸಾರಿಕೆಯುಂ ।
ಸೋಜೆ ಬಲವನ್ದು ತೀಡುವ ।
ತೆಜ್ಜಣಗಾಳಿಯು ಮದೇಮ್ಮನಂಗೊಳಿಸಿದುವೋ ॥

ಎಂದು ಹೇಳಿರುವನು. ಮತ್ತು ಇವನಿಗಿಂತಲೂ ಪ್ರಾಚೀನನಾದ ನಾಗವರ್ಮನೂ ಕೂಡ ಕಾವ್ಯಾವಲೋಕನದಲ್ಲಿ

ಅನುನಾಸಿಕ ಮಕ್ಕುಂಬಜಞ
ಣನಮುಂಗಳೆ.....
.....ಆಱುವ್ವದವರ ವಿಷಯಾಂತರಮಂ ॥

ಎಂದು ಸೂತ್ರವನ್ನು ಹೇಳಿ ಇದೇ ಉದಾಹರಣೆಯನ್ನೇ ಕೊಟ್ಟಿರುವನು. ಆದುದರಿಂದ ಅಚ್ಚಗನ್ನಡದಲ್ಲಿ ಈ ಕವರ್ಗ ಚವರ್ಗ ಪಂಚಮಾಕ್ಷರಗಳಿರುತ್ತವೆಯೆಂದು ಹೇಳೋಣವೆಂದರೆ ಸೂತ್ರಕಾರನು ಹೇಳಿರತಕ್ಕ ಸೂತ್ರದ ಪ್ರಾಮಾಣ್ಯದ ಮೇಲೆ ಅಚ್ಚಗನ್ನಡದಲ್ಲಿ ಈ ಅಕ್ಷರಗಳಿರುತ್ತವೆಯೆಂದು ಹೇಳಬಹುದೇ? ಅಥವಾ ಉದಾಹರಣೆಯಿಂದ ಈ ಅಕ್ಷರಗಳಿರುತ್ತವೆಯೆಂದು ಹೇಳಬಹುದೇ? ಎಂಬ ಸಂದೇಹವು ಬರುವುದು.

ವಿಚಾರ ಮಾಡಿದಲ್ಲಿ ಸರಿಯಾದ ಲಕ್ಷ್ಯವಿಲ್ಲದಿದ್ದಲ್ಲಿ ಸೂತ್ರವನ್ನು ಹೇಳುವುದೂಕೂಡ ಅನವಶ್ಯಕವಾದ ಕಾರಣ ಸೂತ್ರದ ಪ್ರಾಮಾಣ್ಯವು ಲಕ್ಷ್ಯದಿಂದ ಉಂಟಾಗುವುದಾಗಿ ಇಲ್ಲಿ ಕೊಟ್ಟಿರತಕ್ಕ ಲಕ್ಷ್ಯದಲ್ಲಿ ಕಾಣಬರುವ ಈ ಅಕ್ಷರಗಳ ವಿಷಯವನ್ನು ಪ್ರಕೃತದಲ್ಲಿ ವಿಚಾರಮಾಡಬೇಕಾಗಿದೆ.

ಮೇಲೆ ಹೇಳಿರುವ ಬಿಜ್ಜಂಬೆತ್ತೆಸೆವಚ್ಚೆಯು—ಇತ್ಯಾದಿ ಪದ್ಯದಲ್ಲಿ ಕಾಣಬರುವ ಬಿಜ್ಜಂ ಇತ್ಯಾದಿ ಪದಗಳಲ್ಲಿ ಜ ಕಾರವನ್ನು ಬರೆದಿದೆ ಯಾದುದರಿಂದ ಈ ಅಕ್ಷರವೆಂದರೆ ಜ ಕಾರವು ಅಚ್ಚಗನ್ನಡದಲ್ಲಿರುವದೆಂದು ಸಾಧಿಸಬಹುದೇ? ಅಥವಾ ಪ್ರಾಸಸ್ಥಾನದಲ್ಲಿರುವುದರಿಂದ ಈ ಅಕ್ಷರವು ಅಚ್ಚಗನ್ನಡದಲ್ಲಿರುವುದೆಂದು ಸಾಧಿಸಬಹುದೇ ಎಂಬ ಸಂದೆಹವುಂಟಾಗುವುದು.

ಇವುಗಳಲ್ಲಿ ಮೊದಲನೆಯದಾದ ಲೇಖನಪ್ರಾಮಾಣ್ಯವನ್ನೇ ಹಿಡಿದಲ್ಲಿ ಅಕ್ಷರಲೇಖನವೆಲ್ಲವೂ ರೇಖಾಸ್ವರೂಪವಾದುದರಿಂದ ಮನಸ್ಸಿಗೆ ತಿಳಿದಂತೆ ಯಾವದೋ ಎಂದು ಗೆರೆಯನ್ನು ಬರೆದು, ಅದೂಕೂಡ ಒಂದು ಅಕ್ಷರವೆಂದು ಹೇಳಬಹುದಾಗಿ

ಬರುವದು. ಹಾಗಲ್ಲದೆ ಉಚ್ಚಾರ್ಯಮಾಣವಾದ ಧ್ವನಿವಿಶೇಷವನ್ನು, ಕ, ಖ, ಇತ್ಯಾದಿ ರೇಖಾವಿಶೇಷಗಳು ತೋರ್ಪಡಿಸುವದಾದುದರಿಂದ ಜ, ಎಂಬ ರೇಖಾವಿಶೇಷವು ಧ್ವನಿವಿಶೇಷವನ್ನು ಅಂದರೆ ಕವರ್ಗದ ಪಂಚಮಾಕ್ಷರವನ್ನು ತೋರ್ಪಡಿಸುವುದಾಗಿ ಬಿಜ್ಕಂ, ಇತ್ಯಾದಿಗಳಲ್ಲಿ ಕವರ್ಗ ಪಂಚಮಾಕ್ಷರ ವಿಪೆಯೆಂದು ಹೇಳಬೇಕು. ಎಂದಲ್ಲಿ ವಿಚಾರಮಾಡೋಣ.

ರೇಖಾವಿಶೇಷವು ಧ್ವನಿವಿಶೇಷವನ್ನು ತೋರ್ಪಡಿಸುವುದಾದರೂ ಬಿಂಕಂ, ಬಿಜ್ಕಂ, ಎಂದು ಭಿನ್ನಭಿನ್ನವಾಗಿ ಬರೆದಿರತಕ್ಕ ಸಂದರ್ಭದಲ್ಲಿಯೂ ಭಿನ್ನಭಿನ್ನವಾಗಿ ಉಚ್ಚಾರಣೆಯನ್ನು ಮಾಡದೆ ಏಕವಿಧವಾದ ಉಚ್ಚಾರಣೆಯನ್ನೇ ಎಲ್ಲರೂ ಮಾಡುತ್ತಾರಾದುದರಿಂದಲೂ ಮತ್ತು ಭಿನ್ನಭಿನ್ನವಾಗಿ ಉಚ್ಚಾರಣೆ ಮಾಡುವುದೇ ಅಸಾಧ್ಯವಾದುದರಿಂದಲೂ ಅವಶ್ಯವಾಗಿ ಸ್ವೀಕರಿಸಬೇಕೆಂದು ಹಿಂದೆ ಉಸಪಾದಿಸಿದ ಬಿಂದುವಿನಿಂದಲೇ ಬಿಂಕಂ, ಇತ್ಯಾದಿಗಳ ಉಚ್ಚಾರಣೆಯು ಸಿದ್ಧಿಸಿ ಚರಿತಾರ್ಥವಾಗುವಾಗುವಾಗ ಹೆಚ್ಚಾಗಿ ಕವರ್ಗ ಪಂಚಮಾಕ್ಷರವನ್ನು ಸ್ವೀಕರಿಸಬೇಕೆನ್ನುವದಕ್ಕೆ ಸರಿಯಾದ ಆಧಾರವು ತೋರುವದಿಲ್ಲ. ಅಲ್ಲದೆ. ಬಿಂಕಂ. ಇತ್ಯಾದಿಗಳಲ್ಲಿ ಬಿಂದುವಿರಬೇಕೆಂಬ ಭಾವದಿಂದ ಕೇತಿರಾಜನು ಶಬ್ದಮಣಿದರ್ಪಣದಲ್ಲಿ

ಕೆಲವುನಿಜಬಿಂದುಗಳ್ ಕೆಲ।
ಕೆಲವು ವಿಕಲ್ಪಾರ್ಥ ಬಿಂದುಗಳ್ ದ್ವಿತ್ವಂಗಳ್ ॥
ಕೆಲವಾಶಿಥಿಲದ್ವಿತ್ವಂ ।
ಕೆಲವುಭಯಮುಮಾಗಿಕೆಲವುಪದನಱಿವುದವಂ ॥

ಎಂದು ಹೇಳಿರುವನು.

ಒಂದುವೇಳೆ ಇಕ್ಕುಂ, ಇಕ್ಕುಂ ಎಂಬಲ್ಲಿ ಏಕವಿಧವಾಗಿ ಉಚ್ಚಾರಣೆಯಾದರೂ ಭಿನ್ನಭಿನ್ನವಾದ ಲೇಖನವಿರುವಂತೆ ಬಿಂಕಂ, ಇತ್ಯಾದಿಗಳಲ್ಲಿಯೂ ಏಕವಿಧವಾದ ಉಚ್ಚಾರಣೆಗಾಗಿಯೇ ಬಿಜ್ಕಂ ಮತ್ತು ಬಿಂಕಂ, ಎಂದು ಉಭಯಪ್ರಕಾರವಾಗಿ ಲಿಖಿಸುವೆವಾಗಿ ಈಗಲಾದರೂ, ಜಎಂಬ ಅಕ್ಷರವನ್ನು ಸ್ವೀಕರಿಸಬೇಕಾಗುವುದೆಂದು ಹೇಳಿದಲ್ಲಿ ವಿಚಾರಮಾಡೋಣ—

ಹೀಗೆ ಲೇಖನದಲ್ಲಿ ಉಭಯಪ್ರಕಾರವಾದ ಮಾತ್ರಕ್ಕೆ ಅಕ್ಷರದಲ್ಲಿ ಭೇದವೇನು ಬಂದಿತು? ಇರ್ಕಂ ಇತ್ಯಾದಿಗಳನ್ನು ಇರ್ಕ್ಕಂ ಎಂದು ಬರೆದರೂ ರೇಫಕ್ಕೆ ಕಕಾರವು ಸಂಯುಕ್ತವಾಗಿದೆ ಯೆನ್ನಬಹುದೇ ಹೊರತು ಇನ್ನು ಯಾವುದಾದರೂ ಬೇರೆ ಒಂದಕ್ಷರಕ್ಕೆ ಕಕಾರವು ಸಂಯುಕ್ತವಾಗಿದೆ ಯೆಂದು ಹೇಳಬಹುದೇ? ಈ ದೃಷ್ಟಾಂತವು ರೇಫ ಮತ್ತು ಅರ್ಕಾವತ್ತುಗಳೆರಡೂ ಒಂದೇ ಅಕ್ಷರವಾಗಿರುವಂತೆ ಅನುಸ್ವಾರ ಮತ್ತು ಜಇವುಗಳೆರಡೂ ಒಂದೇ ಅಕ್ಷರವೆಂದು ಹೇಳಬೇಕು ಎನ್ನಲು ಸಾಧಕವಾಗಬಹುದೇ ಹೊರತು ಪ್ರತ್ಯೇಕವಾಗಿ ಜಕಾರವೆಂಬ ಒಂದು ಅಕ್ಷರವು ಅಚ್ಚಕನ್ನಡದಲ್ಲಿದೆ ಎನ್ನಲು ಸಾಧಕವಾಗಲಾರದು.

ಕ್ಷೇತ್ರಗಣಿತ.

1. ವ್ಯಾಸವೆಂದರೆ ಎರಡು ತ್ರಿಜ್ಯಗಳ ಮೊತ್ತವೆಂದು ಹೇಳಿದರೆ ದೋಷವೇನು? ಈ ನಿಯಮವು ಅವಸಂದರ್ಭದಲ್ಲಿ ನಿರ್ದೋಷವೆಂದು ಹೇಳಬಹುದು.

2. 25 ಅಡಿಗಳ ಉದ್ದವಾದ ಏಣಿಯೊಂದು ಗೋಡೆಗೆ 7 ಅಡಿ ದೂರದಲ್ಲಿ ಓರೆಯಾಗಿ ನಿಂತಿದೆ. ಏಣಿಯು ತುದಿಯು ಗೋಡೆಗೆ ಹೊಂದಿದ್ದ ಸ್ಥಳದಿಂದ 4 ಅಡಿಗಳು ಜಾರಬೇಕಾದರೆ ನೆಲದಲ್ಲಿ ಗೋಡೆಯುಕಾಲುಗಳನ್ನು ಎಷ್ಟುದೂರ ಹೆಚ್ಚಾಗಿ ಸರಿಯಬೇಕು?

3. ಒಂದು ಕಾಟಕೋನ (ಸುಮಕೋನ) ಸಮದ್ವಿಬಾಹು ತ್ರಿಭುಜದ ಕರ್ಣರೇಖೆಯು 17·91 ಗಜವಾದರೆ ಅದರಸುತ್ತಲೂ ಬೇಲಿ ಹಾಕುವುದಕ್ಕೆ ಗಜ 1 ಕ್ಕೆ $1\frac{1}{2}$ ಆಣೆಯುಂತೆ ಖರ್ಚೆಷ್ಟು?

4. 66 ಗಜ ಸುತ್ಮಳತೆ ಯಿರುವ ಒಂದು ವೃತ್ತಾಕಾರದ ಕಾಗದದಲ್ಲಿ ಆಗುವಷ್ಟು ವರ್ಗಾಕೃತಿಯನ್ನು ಕತ್ತರಿಸಿಕೊಂಡರೆ ಎಷ್ಟು ಕಾಗದವು ವ್ಯರ್ಥವಾಗಿ ಹೋಗುವುದು?

ಜಿ. ಹನುಮಂತರಾವ್

ಆ॥ ಮಾ॥ ಮಂಡಿಕಲ್.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೧ ನೆಯ ಭಾಗಕ್ಕೆ ಶಿವಮೊಗ್ಗಾ ಗೌ॥ ಹೈಸ್ಕೂಲ್ ಹೆಡ್‌ಮಾಸ್ಟರ್ ಮೆ॥ ಯಂ. ಕೃಷ್ಣೈಂಗಾರ್, ಬಿ. ಎ. ಯವರು. ೨ ನೇ ಭಾಗಕ್ಕೆ ಬೆಂಗಳೂರು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ರೆವರೆಂಡ್ ಏ. ಆರ್. ಫುಲ್ಲರ್ ಬಿ. ಎ. ಯವರು.
ಇಂಗ್ಲೀಷು ಬರವಣಿಗೆ ಮತ್ತು ಉಕ್ತಲೇಖನ.	ಚಿತ್ರದುರ್ಗದ ಗೌ॥ ಹೈಸ್ಕೂಲ್ ಹೆಡ್‌ಮಾಸ್ಟರ್ ಮೆ॥ ಆರ್. ರಘುನಾಥರಾವ್ ಬಿ. ಎ. ಯವರು.
ಭಾಷಾಂತರ (ಲೋವರ್ ಸೆಕೆಂಡರಿ ಪರೀಕ್ಷೆಗೆ)	ತುಮಕೂರು ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಎಸ್. ಟಿ. ರಾಘವಾಚಾರ್ ಬಿ. ಎ., ಯವರು.
ಗಣಿತ—ಲೋವರ್ ಸಕೆಂಡರಿ ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಮಾತ್ರ.	ಬೆಂಗಳೂರು ಸೆಂಟರಲ್ ಕಾಲೇಜ್ ರಿಟೈರ್ ಮೆಥಮ್ಯಾಟಿಕ್ಸ್ ಪ್ರೊಫೆಸರಾದ ಮೆ॥ ಆರ್. ವೆಂಕಟರಾಮೈಯ್ಯ, ಬಿ. ಎ. ಯವರು.
ಗಣಿತ—ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ. (ಇಂಗ್ಲೀಷ್ ವಿದ್ಯಾರ್ಥಿಗಳು ಹೊರತು.)	೧ ನೆಯ ಭಾಗಕ್ಕೆ ಚಿಕ್ಕಬಳ್ಳಾಪುರದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಕೆ. ಶ್ರೀನಿವಾಸ ಐಯ್ಯಂಗಾರ್ ಯವರು. ೨ ನೆಯ ಭಾಗಕ್ಕೆ ಕೋಲಾರದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಯಸ್. ವೆಂಕಟರಮಣಾಚಾರ್ ಬಿ. ಎ., ಯವರು.

ಹೀಗೆ ಲೇಖನದಲ್ಲಿ ಉಭಯಪ್ರಕಾರವಾದ ಮಾತ್ರಕ್ಕೆ ಅಕ್ಷರದಲ್ಲಿ ಭೇದವೇನು ಬಂದಿತು? ಇಕ್ಕುಂ ಇತ್ಯಾದಿಗಳನ್ನು ಇಕ್ಕುಂ ಎಂದು ಬರೆದರೂ ರೇಫಕ್ಕೆ ಕಕಾರವು ಸಂಯುಕ್ತವಾಗಿದೆ ಯೆನ್ನಬಹುದೇ ಹೊರತು ಇನ್ನು ಯಾವುದಾದರೂ ಬೇರೆ ಒಂದಕ್ಷರಕ್ಕೆ ಕಕಾರವು ಸಂಯುಕ್ತವಾಗಿದೆ ಯೆಂದು ಹೇಳಬಹುದೇ? ಈ ದೃಷ್ಟಾಂತವು ರೇಫ ಮತ್ತು ಅರ್ಕಾವಕ್ತುಗಳೆರಡೂ ಒಂದೇ ಅಕ್ಷರವಾಗಿರುವಂತೆ ಅನುಸ್ವಾರ ಮತ್ತು ಜಇವುಗಳೆರಡೂ ಒಂದೇ ಅಕ್ಷರವೆಂದು ಹೇಳಬೇಕು ಎನ್ನಲು ಸಾಧಕವಾಗಬಹುದೇ ಹೊರತು ಪ್ರತ್ಯೇಕವಾಗಿ ಜಕಾರವೆಂಬ ಒಂದು ಅಕ್ಷರವು ಅಚ್ಚಕನ್ನಡದಲ್ಲಿದೆ ಎನ್ನಲು ಸಾಧಕವಾಗಲಾರದು.

ಕ್ಷೇತ್ರಗಣಿತ.

1. ವ್ಯಾಸವೆಂದರೆ ಎರಡು ತ್ರಿಜ್ಯಗಳ ಮೊತ್ತವೆಂದು ಹೇಳಿದರೆ ದೋಷವೇನು? ಈ ನಿಯಮವು ಆವಸಂದರ್ಭದಲ್ಲಿ ನಿರ್ದೋಷವೆಂದು ಹೇಳಬಹುದು.

2. 25 ಅಡಿಗಳ ಉದ್ದವಾದ ಏಣಿಯೊಂದು ಗೋಡೆಗೆ 7 ಅಡಿ ದೂರದಲ್ಲಿ ಓರೆಯಾಗಿ ನಿಂತಿದೆ. ಏಣಿಯು ತುದಿಯು ಗೋಡೆಗೆ ಹೊಂದಿದ್ದ ಸ್ಥಳದಿಂದ 4 ಅಡಿಗಳು ಜಾರಬೇಕಾದರೆ ನೆಲದಲ್ಲಿ ಗೋಡೆಯಕಾಲುಗಳನ್ನು ಎಷ್ಟುದೂರ ಹೆಚ್ಚಾಗಿ ಸರಿಯಬೇಕು?

3. ಒಂದು ಕಾಟಕೋನ (ಸುಮಕೋನ) ಸಮದ್ವಿಬಾಹು ತ್ರಿಭುಜದ ಕರ್ಣರೇಖೆಯು 17·91 ಗಜವಾದರೆ ಅದರಸುತ್ತಲೂ ಬೇಲಿ ಹಾಕುವುದಕ್ಕೆ ಗಜ 1 ಕ್ಕೆ $1\frac{1}{2}$ ಆಣೆಯುಂತೆ ಖರ್ಚೆಷ್ಟು?

4. 66 ಗಜ ಸುತ್ತಳತೆ ಯಿರುವ ಒಂದು ವೃತ್ತಾಕಾರದ ಕಾಗದದಲ್ಲಿ ಆಗುವಷ್ಟು ವರ್ಗಾಕೃತಿಯನ್ನು ಕತ್ತರಿಸಿಕೊಂಡರೆ ಎಷ್ಟು ಕಾಗದವು ವ್ಯರ್ಥವಾಗಿ ಹೋಗುವುದು?

ಜಿ. ಹನುಮಂತರಾವ್

ಆ॥ ಮಾ॥ ಮಂಡಿಕಲ್.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೧ ನೆಯ ಭಾಗಕ್ಕೆ ಶಿವಮೊಗ್ಗಾ ಗೌ॥ ಹೈಸ್ಕೂಲ್ ಹೆಡ್‌ಮಾಸ್ಟರ್ ಮೆ॥ ಯಂ. ಕೃಷ್ಣೈಯಂಗಾರ್, ಬಿ. ಎ. ಯವರು. ೨ ನೇ ಭಾಗಕ್ಕೆ ಬೆಂಗಳೂರು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ರೆವರೆಂಡ್ ಏ. ಆರ್. ಫುಲ್ಲರ್ ಬಿ. ಎ. ಯವರು.
ಇಂಗ್ಲೀಷು ಬರವಣಿಗೆ ಮತ್ತು ಉಕ್ತಲೇಖನ.	ಚಿತ್ರದುರ್ಗದ ಗೌ॥ ಹೈಸ್ಕೂಲ್ ಹೆಡ್‌ಮಾಸ್ಟರ್ ಮೆ॥ ಆರ್. ರಘುನಾಥರಾವ್ ಬಿ. ಎ. ಯವರು.
ಭಾಷಾಂತರ (ಲೋವರ್ ಸೆಕೆಂಡರಿ ಪರೀಕ್ಷೆಗೆ)	ತುಮಕೂರು ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಎಸ್. ಟಿ. ರಾಘವಾಚಾರ್ ಬಿ. ಎ., ಯವರು.
ಗಣಿತ—ಲೋವರ್ ಸೆಕೆಂಡರಿ ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಮಾತ್ರ.	ಬೆಂಗಳೂರು ಸೆಂಟರಲ್ ಕಾಲೇಜ್ ರಿಟೈರ್ ಮೆಥಮ್ಯಾಟಿಕ್ಸ್ ಪ್ರೊಫೆಸರಾದ ಮೆ॥ ಆರ್. ವೆಂಕಟರಾಮೈಯ್ಯ, ಬಿ. ಎ. ಯವರು.
ಗಣಿತ—ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ. (ಇಂಗ್ಲೀಷ್ ವಿದ್ಯಾರ್ಥಿಗಳು ಹೊರತು.)	೧ ನೆಯ ಭಾಗಕ್ಕೆ ಚಿಕ್ಕಬಳ್ಳಾಪುರದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಕೆ. ಶ್ರೀನಿವಾಸ ಐಯ್ಯಂಗಾರ್ ಯವರು. ೨ ನೆಯ ಭಾಗಕ್ಕೆ ಕೋಲಾರದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಯಸ್. ವೆಂಕಟರಮಣಾಚಾರ್ ಬಿ. ಎ., ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಅಪ್ಪರ್ ಸೆಕೆಂಡರಿ ಪರೀಕ್ಷೆಗೆ –ರೇಖಾ, ಕ್ಷೇತ್ರ ಮತ್ತು ಬೀಜಗಣಿತ, ಲೋವರ್ ಸೆಕೆಂಡರಿ ಪರೀಕ್ಷೆಗೆ ಕ್ಷ್ರೇತ್ರಗಣಿತ.	ಮೈಸೂರು ಮಹಾರಾಜಾ ಕಾಲೇಜು ಸಹಾಯೋಪಾಧ್ಯಾಯರಾದ ಮೆ॥ ಹೆಚ್. ಆರ್. ಕೃಷ್ಣಮೂರ್ತಿರಾವ್ ಬಿ. ಎ. ಯವರು.
ಕನ್ನಡ ಟೆಕ್ಸ್ಟ್ (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ) ಕನ್ನಡ ಅಡ್ವಾನ್ಸ್ ವ್ಯಾಕರಣ (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ)	ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ರವರ ಆಫೀಸಿನಲ್ಲಿರುವ ಕನ್ನಡ ಟ್ರಾನ್‌ಸ್ಲೇಟರ್ ಮ॥ ರಾ॥ ಎಸ್. ಜಿ. ನರಸಿಹ್ಮಾಚಾರ್ಯರು. ಬೆಂಗಳೂರು.
ಕನ್ನಡ ವ್ಯಾಕರಣ ಲೋವರ್ ಸೆಕೆಂಡರಿ ಪರೀಕ್ಷೆಗೆ)	ಮೈಸೂರು ವೆಸ್ಲಿಯನ್ ಮಿಷನ್ ಸಹಾಯೋಪಾಧ್ಯಾಯರಾದ ಮೆ॥ ಎಂ. ಎ. ರಾಮಾನುಜೈಯ್ಯಂಗಾರ್ ರವರು.
ಕನ್ನಡ ಟೆಕ್ಸ್ಟ್ (ಲೋವರ್ ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಗೌ॥ ಶಾಸನದ ಇಲಾಖೆಯಲ್ಲಿರುವ ಮ॥ ರಾ॥ ಆರ್. ನರಸಿಹ್ಮಾಚಾರ್ ಎಂ. ಎ. ಯವರು.
ಕನ್ನಡ ವಾಕ್ಯರಚನೆ. (ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಮಹಾರಾಣಿ ಕಾಲೇಜು ಸಹಾಯೋಪಾಧ್ಯಾಯರಾದ ಮೆ॥ ಎಂ. ಲಕ್ಷ್ಮೀನಾರಣಪ್ಪ ಬಿ. ಎ. ಯವರು.
ಕನ್ನಡ ಉಕ್ತಲೇಖನ. (ಲೋನರ್ ಸೆಕೆಂಡರಿ ಪರೀಕ್ಷೆಗೆ.)	ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ರವರ ಆಫೀಸಿನಲ್ಲಿರುವ ಮ॥ ರಾ॥ ಸಿ. ವಾಸುದೇವಯ್ಯನವರು.
ಕನ್ನಡ ಬರವಣಿಗೆ. (ಲೋವರ್ ಸೆಕೆಂಡರಿ ಪರೀಕ್ಷೆಗೆ.)	ಮೈಸೂರು ಮಹಾರಾಣಿ ಕಾಲೇಜು ಸಹಾಯೋಪಾಧ್ಯಾನಿಯರಾದ ಶ್ರೀಮತಿ ವೇಂಗಡಮ್ಮನವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಹಿಂದೂಸ್ಥಾನಿ ವ್ಯಾಕರಣ, ಹಿಂದೂಸ್ಥಾನಿ ವಾಕ್ಯರಚನೆ, ಫಾರಷೀಭಾಷಾಪುಸ್ತಕಗಳು ಮತ್ತು ವ್ಯಾಕರಣ. (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ) ಫಾರಷಿ ವ್ಯಾಕರಣ ಮತ್ತು ಉಕ್ತಲೇಖನ ಇತರ ಭಾಷಾಪುಸ್ತಕಗಳು, ಭಾಷಾಂತರ ಮತ್ತು ಹಿಂದೂಸ್ಥಾನಿ ಉಕ್ತಲೇಖನ. (ಲೋವರ್ ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಮಹಾರಾಜಾಕಾಲೇಜು ಹಿಂದೂಸ್ಥಾನಿ ಮುನಷಿ ಹಜರತ್ ಸುಲ್ತಾನ್ ಮಹಮದ್‌ಖಾನ್ ರವರು.
ಹಿಂದೂಸ್ಥಾನಿ ಟೆಕ್ಸ್ಟ್, ಹಿಂದೂಸ್ಥಾನಿ ಮತ್ತು ಪರಿಷಿಯನ್ ಭಾಷೆಯ ಭಾಷಾಂತರ ಮತ್ತು ಇತರ ಭಾಷಾ ಪುಸ್ತಕಗಳು. (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ) ಹಿಂದೂಸ್ಥಾನಿ ಟೆಕ್ಸ್ಟ್, ವ್ಯಾಕರಣ, ವಾಕ್ಯರಚನೆ, ಹಿಂದೂಸ್ಥಾನಿ ಕೈಬರಹ, ಪರಿಷಿಯನ್ ಭಾಷಾಂತರ, ಉಕ್ತಲೇಖನ, ಕೈಬರಹ, (ಲೋವರ್ ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಗೌ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಹಜರತ್ ಗುಲಾಂ ದಸ್ತಗೀರ್ ರವರು.
ಅಪ್ಪರ್ ಸೆಕೆಂಡರಿ ಪರೀಕ್ಷೆಯ ಹಿಂದೂಸ್ಥಾನಿ ಗಣಿತ, ರೇಖಾ ಮತ್ತು ಕ್ಷೇತ್ರಗಣಿತ ಇವುಗಳಿಗೆ.	ಮೈಸೂರು ಗೌ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಹಜರತ್ ಖಾದರ್ ಹುಸೇನ್ ರವರು.

ವಿಷಯಗಳು.	ಮೆಸೂರು ದೇಶೀಯ ಪರೀಕ್ಷೆ.
ಅಪ್ಪರ್ ಸೆಕೆಂಡರಿಯ ಹಿಂದೂಸ್ಥಾನಿ ಚರತ್ರೆ, ಭೂಗೋಳ, ಗಣಿತ, ರೇಖಾ ಮತ್ತು ಬೀಜಗಣಿತ, ಕ್ಷೇತ್ರಗಣಿತ, ವ್ಯವಸಾಯ, ಆರೋಗ್ಯ, ಭೌತಿಕಶಾಸ್ತ್ರ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಯ ಹಿಂದೂಸ್ಥಾನಿ ಭಾಷಾಂತರ, ಗಣಿತ, ಹಿಂದೂದೇಶದ ಚರಿತ್ರೆ, ಭೂಗೋಳ, ನಕ್ಷೆಬರೆಯುವುದು ಆರೋಗ್ಯ ಪಾಕಶಾಸ್ತ್ರ ಮತ್ತು ವ್ಯವಸಾಯಶಾಸ್ತ್ರಗಳಿಗೆ.	ಮೈಸೂರು ಗೌ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಹಜರತ್ ಖಾದರ್ ಹುಸೇನ್ ರವರು.
ಅರಬ್ಬಿ ಟೆಕ್ಸ್‌ಟ್, ವ್ಯಾಕರಣ, ಮತ್ತು ಭಾಷಾಂತರ (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಗೌ॥ ನಾರ್ಮಲ್ ಸ್ಕೂಲ್‌ನಲ್ಲಿರರುವ ಹಜರತ್ ಮೌಲ್ವಿ ಮಜಾರ್ ಹಸನ್ ಖಾನ್ ರವರು.
ಸಂಸ್ಕೃತ ಟೆಕ್ಸ್‌ಟ್ ಮತ್ತು ವ್ಯಾಕರಣ (ಅಪರ್ ಸೆಕೆಂಡರಿ ಪರೀಕ್ಷೆಗೆ) ಲೋವರ್ ಸೆಕೆಂಡರಿ ಪರೀಕ್ಷೆಯ ಸಂಸ್ಕೃತ ಟೆಕ್ಸ್‌ಟ್ ಮತ್ತು ವ್ಯಾಕರಣ, ಭಾಷಾಂತರ, ಕೈಬರಹ, ಉಕ್ತಲೇಖನ.	ಬೆಂಗಳೂರು ಸೆಂಟ್ರಲ್ ಕಾಲೇಜ್ ಸಂಸ್ಕೃತ ಪಂಡಿತರಾದ ವಿಶ್ವೇಶ್ವರ ಶಾಸ್ತ್ರಿಗಳವರು
ಸಂಸ್ಕೃತ ಭಾಷಾಂತರ—(ಅಪ್ಪರ್ ಸೆಕೆಂಡರಿ ಪರೀಕ್ಷೆಗೆ) ವ್ಯಾಕರಣ, ಟೆಕ್ಸ್‌ಟ್ ಮತ್ತು ಭಾಷಾಂತರ, ಉಕ್ತಲೇಖನ, ಕೈಬರಹ. (ಲೋವರ್ ಸೆಕೆಂಡರಿ ಪರೀಕ್ಷೆಗೆ.)	ಕೋಲಾರದ ಡಿ॥ ಗೌ॥ ನಾರ್ಮಲ್ ಸ್ಕೂಲ್ ಹೆಡ್ಮಾಸ್ಟರಾದ ಮೆ॥ ಹೆಚ್. ಕೃಷ್ಣರಾವ್ ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ತೆಲುಗುಭಾಷೆ ಮತ್ತು ಎಲ್ಲಾ ತೆಲುಗು ಗ್ರಂಥಗಳಿಗೆ.	ಮೈಸೂರು ಗೌ॥ ಓರಿಯಂಟಲ್ ಲೈಬ್ರೆರಿ ಕ್ಯೂರೇಟರ್ ಮೆ॥ ಎ. ಮಹದೇವಶಾಸ್ತ್ರಿ ಬಿ. ಎ. ಯವರು.
ಆರೋಗ್ಯಶಾಸ್ತ್ರ (ಅಪ್ಪರ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ)	ಮೈಸೂರು ಮಹಾರಾಣಿ ಕಾಲೇಜು ಸಹಾಯೋಪಾಧ್ಯಾಯರಾದ ಮೆ॥ ಕೆ. ಸಂಜೀವಶೆಟ್ಟಿ ಬಿ. ಎ. ಯವರು. (೧ ನೇ ಭಾಗ ಅಪ್ಪರ್‌ಸೆಕೆಂಡರಿ) ಮತ್ತು ಚನ್ನಪಟ್ಟಣದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಆರ್. ಕೃಷ್ಣೈಯಂಗಾರ್ ಬಿ. ಎ. ಯವರು (೨ ನೇಭಾಗ ಲೋವರ್‌ಸೆಕೆಂಡರಿ)
ವ್ಯವಸಾಯಶಾಸ್ತ್ರ—(ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗಳಿಗೆ)	ಮೈಸೂರು ಗೌ॥ ನಾರ್ಮಲ್‌ಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಕೆ. ನರಸಿಹ್ಮಯ್ಯಂಗಾರ್ ರವರು.
ಭೌತಿಕಶಾಸ್ತ್ರ, ಭೌತಿಕಭೂಗೋಳಶಾಸ್ತ್ರ ಮತ್ತು ಭೂಗೋಳ, ನಕ್ಷೆ, (ಅಪ್ಪರ್ ಸೆಕೆಂಡರಿ ಪರೀಕ್ಷೆ.)	ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿರುವ ಬೋಧಕರಾದ ಮೆ॥ ಸಿ. ಯಂ. ವಿಜಯರಾಘವಾಚಾರ್ ಬಿ. ಎ, ಯವರು.
ಲೋವರ್ ಸೆಕೆಂಡರಿ ಪರೀಕ್ಷೆಯ ಹಿಂದೂ ಚರಿತ್ರೆ, ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಯ ಚರಿತ್ರೆ.	ಲೋವರ್ ಸೆಕೆಂಡರಿ ಪರೀಕ್ಷೆ ಹಿಂದೂ ಚರಿತ್ರೆಯ ೨ ನೇ ಭಾಗಕ್ಕೆ ಹಾಸನದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಎಂ. ಎ. ತಿರುಮಲಾಚಾರ್ ಬಿ. ಎ. ಯವರು, ೧ ನೇ ಭಾಗ ಲೋವರ್‌ಸೆಕೆಂಡರಿ ಹಿಂದೂಚರಿತ್ರೆ, ಇಂಗ್ಲೀಷ್ ಚರಿತ್ರೆಗೆ—ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ರವರ ಆಫೀಸು ಮ್ಯಾನೇಜರ್ ಮೆ॥ ಕೆ. ಸೂರಯ್ಯ ಬಿ. ಎ. ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ನಕ್ಷೆ ಬಗೆಯುವುದು. (ಲೋವರ್ ಸೆಕೆಂಡರಿ ಪರೀಕ್ಷೆ.)	ಮೈಸೂರು ಮಹಾರಾಣಿ ಕಾಲೇಜಿನ ಸಹಾಯೋಪಾಧ್ಯಾಯಿನಿಯರಾದ ಶ್ರೀಮತಿ ಶ್ರೀರಂಗಮ್ಮ ಬಿ. ಎ. ಯವರು.
ಭೂಗೋಳಶಾಸ್ತ್ರ. (ಲೋವರ್ ಸೆಕೆಂಡರಿ ಪರೀಕ್ಷೆ.)	ಚನ್ನಪಟ್ಟಣದ ಹೈಸ್ಕೂಲ್ ಹೆಡ್‌ಮಾಸ್ಟರ್ ಮೆ॥ ಕೆ. ನಾರಣೈಯ್ಯಂಗಾರ್ ಬಿ. ಎ. ಯವರು. ೨ ನೇ ಭಾಗ—ದೇಶೀಯ ಪರೀಕ್ಷೆಗಳ ಆಫೀಸ್ ಮ್ಯಾನೇಜರ್ ಮೆ॥ ಬಿ. ತಿರುಮಲಾಚಾರ್ ಬಿ. ಎ. ಯವರು.
ಪಾಕಶಾಸ್ತ್ರ—ಲೋವರ್ ಸೆಕೆಂಡರಿ ಪರಿಕ್ಷೆ.	ತುಮಕೂರು ಯಂಪ್ರೆಸ್ ಬಾಲಿಕಾ ಪಾಠಶಾಲೆಯ ಹೆಡ್‌ಮಿಸ್ಟ್ರಸ್ ರಾದ ಶ್ರೀಮತಿ ಡಿ. ಸುಬ್ಬಮ್ಮನವರು.
ಕಸೂತಿ ಕೆಲಸ—ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆ.	ಬೆಂಗಳೂರು ಗೌ॥ ಆರ್ಯಬಾಲಿಕಾಪಾಠಶಾಲೆಯ ಹೆಡ್ ಮಿಸ್ಟ್ರಸ್ ರಾದ ಶ್ರೀಮತಿ ಎ. ಲಕ್ಷ್ಮೀದೇವಮ್ಮನವರು.
ಸಂಗೀತ—ಅಪ್ಪರ್ ಸೆಕೆಂಡರಿ ಪರೀಕ್ಷೆ.	ಮೈಸೂರು ಗೌ॥ ಶಾಸನದ ಇಲಾಖೆಯಲ್ಲಿರುವ ಮ॥ ರಾ॥ ಆರ್ ನರಸಿಂಹಾಚಾರ್ ಎಂ. ಎ. ಯವರು.

* ವಿದ್ಯಾದಾಯಿನಿ. *

ಭಾಗ ೧೫.] ಜುಲೈ—೧೯೦೩. [ಸಂಚಿಕೆ ೭.

ವಿದ್ಯಾಭ್ಯಾಸ.

ಮಕ್ಕಳು ಚಿಕ್ಕಂದಿನಲ್ಲಿ ವಸ್ತುಗಳನ್ನು ಆತುರರಾಗಿ ಪರೀಕ್ಷಿಸುತ್ತಾ ಅನೇಕ ವಿಷಯಗಳನ್ನು ತಕ್ಕಮಟ್ಟಿಗೆ ತಾವೇ ಕಲಿಯುವರು. ಇಂಥಾ ಸ್ವಯಂ ವಿದ್ಯಾಭ್ಯಾಸವು ಅವರಿಗೆ ಬಹು ಪ್ರಯೋಜನಕರವಾಗಿರುವುದರಿಂದ, ಪೋಷಕರು ಆ ವಿಷಯದಲ್ಲಿ ಮಕ್ಕಳಿಗೆ ಸರಿಯಾದ ಸಾಹಾಯವನ್ನು ಮಾಡಬೇಕೇ ಹೊರತು ಪ್ರತಿಬಂಧ ಪಡಿಸಬಾರದು. ಆದರೆ ಮುಗ್ಧರಾದ ಅನೇಕ ಪೋಷಕರು ಅವರಿಗೆ ಈ ರೀತಿಯಲ್ಲಿ ಸಹಾಯ ಮಾಡದೆ ಆ ಚಿಕ್ಕ ವಯಸ್ಸಿನಲ್ಲಿ ಅವರಿಗೆ ಗ್ರಾಹ್ಯವಾಗದ ವಿಷಯಗಳನ್ನು ಬಲಾತ್ಕಾರದಿಂದ ಕಲಿಸಲುದ್ಯುಕ್ತರಾಗುವರು. ವಸ್ತುಗಳನ್ನೇ ಸಾಕ್ಷಾತ್ತಾಗಿ ತೋರಿಸುವುದಕ್ಕೆ ಬದಲಾಗಿ ಅವುಗಳ ಗುರುತಾದ ಶಬ್ದಗಳನ್ನು ತಿಳಿಸುವರು. ಮನೆಬೀದಿ ಹೊಲ ತೋಟಗಳಲ್ಲಿ ಇರುವ ವಸ್ತುಗಳನ್ನೂ ಅಲ್ಲಿ ನಡೆಯುತಕ್ಕ ಕಾರ್ಯಗಳನ್ನೂ ತಕ್ಕಮಟ್ಟಿಗೆ ಪರಿಚಿತ ಮಾಡಿಕೊಂಡ ಬಳಿಕ ಮಕ್ಕಳಿಗೆ ಹೊಸ ವಿಷಯಗಳನ್ನು ಪುಸ್ತಕ ಪಠನ ಮುಖಾಂತರ ತಿಳಿಸಿ ಕೊಡುವುದು ಉತ್ತಮವಾದ ಮಾರ್ಗವಾಗಿರುವುದು.

ವಸ್ತುಗಳ ಗುರುತುಗಳಾದ ಶಬ್ದಗಳ ಮೂಲಕ ಉಂಟಾಗುವ ವಿಜ್ಞಾನಕ್ಕಿಂತಿಲೂ ವಸ್ತುಗಳನ್ನು ಸಾಕ್ಷಾತ್ತಾಗಿ ಪರೀಕ್ಷಿಸುವುದರಿಂದುಂಟಾಗುವ ವಿಜ್ಞಾನವು ಶ್ರೇಷ್ಠವಾದುದು. ಮತ್ತು ವಸ್ತುಗಳು ಸಾಕ್ಷಾತ್ತಾಗಿ ತಕ್ಕಮಟ್ಟಿಗೆ ಅನುಭವಕ್ಕೆ ಬಂದ ಒಳಿಕ ಪುಸ್ತಕದಲ್ಲಿರುವ ಶಬ್ದಗಳ ಅರ್ಥವನ್ನೂ ಅಭಿಪ್ರಾಯವನ್ನೂ ಚೆನ್ನಾಗಿ

ಗಿ ಗ್ರಹಿಸಲು ಅವರು ಸಮರ್ಥರಾಗುವರು. ಆದಕಾರಣ ಮಕ್ಕಳಿಂದ ಪುಸ್ತಕವ ನ್ನೋದಿಸುವ ಮೊದಲು ಅವರಿಗೆ ವಸ್ತುಗಳನ್ನೇ ಸಾಕ್ಷಾತ್ತಾಗಿ ಪ್ರದರ್ಶನಮಾಡಿ ವಿವರಿಸಬೇಕು. ಮಕ್ಕಳ ಮನಸ್ಸು ಸಾಕಾದಷ್ಟು ಮಟ್ಟಿಗೆ ನಿಕಾಸವನ್ನು ಹೊಂದಿ ಅವರು ಪುಸ್ತಕವನ್ನೋದಿ ಅರ್ಥವನ್ನು ಗ್ರಹಿಸಲು ಸಮರ್ಥರಾದಮೇಲೆ ಅದನ್ನೋದಿಸಲು ಪ್ರಾರಂಭಿಸಬೇಕು. ಈಗಿನವರು ಅನೇಕರು ಹಾಗೆ ಮಾಡದೆ ಮಕ್ಕಳು ಸತಣಮಾಡಿ ತಿಳಿದುಕೊಳ್ಳಲು ಸಮರ್ಥರಾಗುವುದಕ್ಕೆ ಮೊದಲೇ ಅವರಿಂದ ಪುಸ್ತಕ ಗಳನ್ನೋದಿಸುವರು.

ಸಾಕ್ಷಾತ್ತಾಗಿ ನೋಡತಕ್ಕ ವಸ್ತುಗಳನ್ನು ನೋಡಿಸಿದ ಬಳಿಕ ಮನನ ಮಾಡ ತಕ್ಕ ವಿಷಯಗಳನ್ನು ಮಕ್ಕಳಿಗೆ ತಿಳಿಸಬೇಕು. ಇದೇ ಬುದ್ಧಿ ವ್ಯವಸಾಯದ ಸಹಜ ಕ್ರಮವಾಗಿರುವುದು. ಹೀಗೆ ಮಾಡದೆ ಕೊನೆಗೆ ಹೇಳಿಕೊಡಬೇಕಾದ ವಿಷಯವನ್ನು ಮೊದಲು ಪ್ರಾರಂಭಿಸುವರು. ವ್ಯಾಕರಣವು ಕೊನೆಗೆ ಹೇಳತಕ್ಕ ದ್ದಾಗಿರುವುದು. ಆದರೆ ಅದು ಮೊದಲೇ ಕಲಿಸಲ್ಪಡುವುದು. ಹಾಗೆಯೇ ರಾಜ್ಯ ವಿಭಾಗ ಸಂಬಂಧವಾದ ಭೂಗೋಳಶಾಸ್ತ್ರವು ಕೊನೆಗೆ ಸಂಘ ಶಾಸ್ತ್ರದ ಜತೆಯಲ್ಲಿ ತಿಳಿಸಬೇಕಾದ್ದಾಗಿರುವುದು. ಅದರಲ್ಲಿ ಮಕ್ಕಳಿಗೆ ಸ್ವಾಭಾವಿಕವಾಗಿ ಅಭಿರುಚಿ ಇಲ್ಲದಿದ್ದಾಗ್ಗೂ ಅದನ್ನು ಬಲಮಂತದಿಂದ ಆದಿಯಲ್ಲಿಯೇ ಕಲಿಸಲಾರಂಭಿಸುವರು. ಆದರೆ ಭೂಭಾಗಗಳ ಆ ಕೃತಿಗೆ ಸಂಬಂಧಪಟ್ಟ ಭೂಗೋಳಶಾಸ್ತ್ರದಲ್ಲಿ ಮಕ್ಕಳಿಗೆ ಅಭಿರುಚಿ ಇದ್ದಾಗ್ಗೂ ಅದು ತಕ್ಕಮಟ್ಟಿಗೆ ಗ್ರಾಹ್ಯವಾಗುವ ವಿಷಯವಾದಾಗ್ಗೂ ಅದನ್ನು ಸಕಾಲದಲ್ಲಿ ಯಥೋಚಿತವಾಗಿ ಕಲಿಸುವುದಿಲ್ಲ. ಹೀಗೆ ಇನ್ನೂ ಅನೇಕ ವಿಷಯಗಳನ್ನು ವಿಪರೀತವಾಗಿ ಹೇಳಿಕೊಡಲಾರಂಭಿಸುವರು.

ವಿಷಯಗಳನ್ನು ಯಥಾರೀತಿಯಲ್ಲಿ ಸೂಚಿಸಿ ವಿವರಿಸಿದ ಬಳಿಕ ಅವುಗಳ ಲಕ್ಷಣ ನಿರೂಪಣವನ್ನು ಅವುಗಳಿಗೆ ಸಂಬಂಧಿಸಿದ ವಿಧಿನಿಷೇಧಗಳನ್ನೂ ಅಪವಾದ ಗಳನ್ನೂ ತಿಳಿಸಬೇಕು. ಹಾಗೆಮಾಡದೆ ಮೊದಲೇ ಅವುಗಳನ್ನು ಕಲಿಸಲಾರಂಭಿ ಸುವದು. ಇದಲ್ಲದೆ ಎಲ್ಲವನ್ನೂ ಚಿಕ್ಕ ಮಕ್ಕಳಿಗೆ ಬಾಯಿಪಾಠ ಮಾಡಿಸುವ ದುಷ್ಟ ಪದ್ಧತಿಯೊಂದಿರುವುದು. ಇದರಿಂದ ಅರ್ಥತಾತ್ಪರ್ಯಗಳು ತಿಳಿಯದೆ ಶಬ್ದಗ್ರಹಣವು ಮಾತ್ರ ಉಂಟಾಗುವುದು. ಇಂಥಾ ವಿಪರೀತವಾದ ವಿದ್ಯಾಭ್ಯಾಸ ಪದ್ಧತಿಯಿಂದಾ ಗುವ ಫಲವನ್ನು ಯೋಚಿಸಿರಿ. ವಸ್ತುಗಳನ್ನು ಸ್ವತಃ ಪರೀಕ್ಷಿಸಿ ತಿಳಿದುಕೊಳ್ಳಲಿಕ್ಕೆ

ಮಕ್ಕಳಿಗೆ ಸಹಾಯಮಾಡುವುದಕ್ಕೆ ಬದಲಾಗಿ ಅದಕ್ಕೆ ಅಡ್ಡೀಹಾಕಿ ಬುದ್ಧಿ ಪ್ರಕಾಶವಾಗಲು ವಿಘ್ನಮಾಡುವುದು, ಅರ್ಥಗ್ರಾಹ್ಯವಾಗದಿದ್ದರೂ ಪುಸ್ತಕಗಳನ್ನು ಬಲವಂತದಿಂದ ಓದಿಸುವುದು, ವಿಷಯಗ್ರಹಣ ಸಾಮರ್ಥ್ಯವುಂಟಾಗುವದಕ್ಕೆ ಮೊದಲೇ ವಿಷಯಗಳನ್ನು ಕಲಿಸಿ ಮನಸ್ಸಿಗೆ ಬೇಸರವನ್ನೂ ಗಲಿಬಿಲಿಯನ್ನೂ ಆಯಾಸವನ್ನೂ ಉಂಟುಮಾಡುವುದು, ವಿಶೇಷತ್ವವನ್ನು ಬೋಧಿಸುವುದಕ್ಕೆ ಮೊದಲು ಸಾಮಾನ್ಯತ್ವವನ್ನು ಹೇಳುವುದು, ಇತರರ ಅಭಿಪ್ರಾಯವನ್ನು ಕೇಳುವುದೇ ಹೊರತು ತಾನೇ ವಿಚಾರಮಾಡಿ ತಿಳಿದುಕೊಳ್ಳುವ ಶಕ್ತಿಯುಂಟಾಗದಂತೆ ಮಾಡುವುದು, ಯೋಗ್ಯತೆ ವಿಚಾರವ್ಯಾಸಂಗ ಮಾಡಿಸುವುದು—ಇಂಥಾ ವಿಪರೀತವಾದ ವಿದ್ಯಾಭ್ಯಾಸ ಪದ್ಧತಿಯಿಂದ ಮಕ್ಕಳು ಎಷ್ಟರಮಟ್ಟಿಗೆ ಬುದ್ಧಿವಂತರಾಗಬೇಕೋ ಅಷ್ಟರಮಟ್ಟಿಗೆ ಆಗಲಾರರೆಂಬುದರಲ್ಲಿ ಸಂದೇಹವಿಲ್ಲ.

ಹುಡುಗರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುತ್ತಲೇ ಪುಸ್ತಕಗಳನ್ನು ಮುಚ್ಚಿ ಆಚೆಗೆ ಬಿಸಾಡುವರು. ಪುಸ್ತಕಗಳಲ್ಲಿ ಹೇಳಿರುವ ವಿಷಯಗಳು ಚೆನ್ನಾಗಿ ಮುಂದಟ್ಟಾಗದೆ ಇರುವುದರಿಂದ, ಅವುಗಳಲ್ಲಿ ಹೆಚ್ಚು ಅಂಶವು ಮರತೇ ಹೋಗುವುದು. ಜ್ಞಾಪಕದಲ್ಲಿದ್ದ ವಿಷಯಗಳೂ ಕೂಡ ಅವರಿಗೆ ಪ್ರಯೋಜನಕಾರಿಗಳಾಗಲು ಮಾರ್ಗವಿಲ್ಲ, ಏಕೆಂದರೆ ವಿಜ್ಞಾನವನ್ನು ಯಾವರೀತಿಯಲ್ಲಿ ಪ್ರಯೋಗಮಾಡಬೇಕೆಂಬುದನ್ನು ಅವರಿಗೆ ಕಲಿಸುವುದಿಲ್ಲ. ಯಥಾರ್ಥವಾಗಿ ವಸ್ತುಗಳನ್ನು ಪರೀಕ್ಷಿಸಲಿಕ್ಕೂ ವಿಷಯಗಳನ್ನು ಕುರಿತು ಸ್ವತಃ ಪರ್ಯಾಲೋಚಿಸಿ ಸಮಂಜಸವಾದ ಸಿದ್ಧಾಂತ ಮಾಡಲಿಕ್ಕೂ ಅವರಿಗೆ ಮಾರ್ಗವನ್ನು ತೋರಿಸಿಕೊಡುವುದಿಲ್ಲ. ಇದಲ್ಲದೆ ಪಾಠಶಾಲೆಗಳಲ್ಲಿ ಮಕ್ಕಳಿಗೆ ಹೇಳಿಕೊಡುವ ವಿಷಯಗಳಲ್ಲಿ ಹೆಚ್ಚು ಭಾಗವು ಮುಂದಕ್ಕೆ ಅವರಿಗೆ ಅಲ್ಪ ಪ್ರಯೋಜನವನ್ನುಂಟುಮಾಡುವಂಥಾದ್ದಾಗಿರುವುದು. ಮುಖ್ಯವಾಗಿ ಯಾವುವು ಬೇಕೋ ಯಾವುವು ಸರ್ವದಾ ಬಹು ಪ್ರಯೋಜನಕಾರಿಗಳಾಗಿರುವುವೋ ಅವನ್ನು ಕಲಿಸದೆ ಬಿಟ್ಟುಬಿಡುವರು. ಈ ರೀತಿಯಾದ ವಿದ್ಯಾಭ್ಯಾಸ ಪದ್ಧತಿಯಿಂದ ವೃಥಾ ಶ್ರಮವೇ ಹೊರತು ಪ್ರಯೋಜನಾಂಶವು ಕಡಿಮೆ ಎಂದು ಹೇಳಬೇಕಾದುದಿಲ್ಲ.

ಈಗ ಈ ರೀತಿಯಲ್ಲಿ ಮಾಡುತ್ತಿರುವ ಮಕ್ಕಳ ದೇಹಪೋಷಣ ನೀತಿಶಿಕ್ಷಣ ಮತ್ತು ಬುದ್ಧಿ ವ್ಯವಸಾಯವು ಬಹಳ ಅತೃಪ್ತಿಕರವಾಗಿರುವುವು. ತಾಯಿತಂದೆಗಳ ಮೌಢ್ಯವೇ ಹೆಚ್ಚಾಗಿದಕ್ಕೆ ಕಾರಣವಾಗಿರುವುದು. ಅವರು ಈ ವಿಷಯಗಳನ್ನು

ಅರಿತವರಾಗಿ ಯಥಾಕ್ರಮದಲ್ಲಿ ಮಕ್ಕಳ ಶಿಕ್ಷಣ ರಕ್ಷಣವನ್ನು ಮಾಡಿದ್ದೆಯಾದರೆ ಇಷ್ಟು ಕೊರತೆಗೆ ಆಸ್ಪದ ನಿರುತ್ತಿರಲಿಲ್ಲ. ಅರಿಯದವರು ಮಾಡುವ ಕೆಲಸದ ಫಲ ವೇನಾಗುವುದು? ಅದರಲ್ಲಿಯೂ ಅತಿ ಮುಗ್ಧರಾದವರು ಅತಿ ಕಷ್ಟವಾದ ತೊಡ ಕಾದ ಬಹು ಬುದ್ಧಿವ್ಯಯ ಮಾಡಬೇಕಾದ ಕಾರ್ಯವನ್ನು ಮಾಡತೊಡಗಿದರೆ ಎಂಥಾ ಫಲವು ಪ್ರಾಪ್ತವಾಗುವುದು? ಇಂಥಾ ಸಂದರ್ಭವಲ್ಲಿ ಅನರ್ಥವುಂಟಾಗದೆ ಇರಲಾ ರದೆಂದು ಹೇಳಬೇಕಾದುದಿಲ್ಲ.

ಜೋಡು ಹೊಲಿಯುವುದು ಮನೇ ಕಟ್ಟುವುದು ಹಡಗು ನಡೆಸುವುದು ಯಂತ್ರವನ್ನು ಪಯೋಗಿಸುವುದು ಮೊದಲಾದ ಕೆಲಸಗಳನ್ನು ಮಾಡಿ ತಕ್ಕ ಫಲ ವನ್ನು ಪಡೆಯಬೇಕಾದರೆ ಆಯಾ ವಿಷಯಗಳಲ್ಲಿ ಹೆಚ್ಚು ಕಾಲ ವ್ಯವಸಾಯವನ್ನು ಮಾಡಿ ನಾಕಾದಷ್ಟು ವಿಜ್ಞಾನವನ್ನೂ ರೂಢಿಯನ್ನೂ ಹೊಂದಬೇಕು. ಇದನ್ನು ಎಲ್ಲವರೂ ಒಪ್ಪುವರು. ಆದರೆ ಮಕ್ಕಳ ದೇಹ ಮನಃಶಿಕ್ಷಣ ವಿಷಯದಲ್ಲಿಯೂ ಹೆಚ್ಚಾದ ತಿಳವಳಿಕೆಯೂ ರೂಢಿಯೂ ಬೇಕೆಂಬುದನ್ನು ಅನೇಕರು ಪರ್ಯಾಲೋಚಿ ಸುವುದಿಲ್ಲ. ಇದು ಆಶ್ಚರ್ಯ. ಮಕ್ಕಳ ಶಿಕ್ಷಣವು ಏನೂ ಅರಿಯದವರೂ ಕೂಡ ಮಾಡುವಷ್ಟು ಸುಲಭವಾದ ಕೆಲಸವೆ? ಇದು ಸುಲಭ ಕೆಲಸವೆಂದು ಎಂದಿಗೂ ಹೇಳಲಾಗುವುದಿಲ್ಲ. ಇದು ಬಹು ಕಷ್ಟವಾವ ಕೆಲಸ. ಇವಕ್ಕೆ ಹೆಚ್ಚು ಬುದ್ಧಿ ಯೂ ತಾಳ್ಮೆಯೂ ರೂಢಿಯೂ ಬೇಕು. ಹೀಗಿರುತ್ತಾ ಪಾಠಶಾಲೆಗಳಲ್ಲಿ ಈ ಸಂಬಂ ಧವಾದ ವಿದ್ಯೆಗಳನ್ನು ಸ್ವಲ್ಪಮಟ್ಟಿಗಾದರೂ ಕಲಿಸದೆ ಇರುವುದು ಹುಚ್ಚುತನವಲ್ಲವೆ!

(ಸಶೇಷ.) S. V.

ಮೈಸೂರು ನಾರ್ಮಲ್‌ಸ್ಕೂಲು ಪ್ರವೇಶ.

ಈ ಸ್ಕೂಲಿನ ಅಪ್ಪರ್ ಸೆಕೆಂಡರೀ ತರಗತಿಗೂ, ಪಂಡಿತ ಪರೀಕ್ಷೆಯ ಕಕ್ಷೆಗೂ ಪ್ರತಿ ವರ್ಷವೂ ಈ ದೇಶದ ಹಲವುಕಡೆಗಳಿಂದ ವಿದ್ಯಾರ್ಥಿಗಳು ಸೇರಲು ಬರುತ್ತಾರೆಯಷೆ: ಇವರ್ಷ ಲ್ಲಿ ಅನೇಕರು ಈ ಪರೀಕ್ಷೆಗಳ ತರಗತಿಗಳಲ್ಲಿ ತಾವು

ಓದಬೇಕಾಗಿರುವ ಪಾಠಗಳ ಸ್ಥಿತಿಯನ್ನೂ, ಅವುಗಳನ್ನು ಓದಿ ತಿಳಿದುಕೊಳ್ಳಲು ತಮಗಿರುವ ಶಕ್ತಿಯನ್ನೂ ಮೊದಲು ವಿಚಾರ ಮಾಡಿಕೊಳ್ಳದೆಯೇ ಬಂದು ಸೇರುತ್ತಾರೆ. ಇದು ಸರಿಯಾದ ಕ್ರಮವಲ್ಲ. ಯಾವ ಕಾರ್ಯವನ್ನೂ ಮೊದಲು ಆಲೋಚಿಸದೆ ಮಾಡಕೂಡದಲ್ಲವೆ! ಅಪ್ಪರಸೆಕಂಡರಿ VI ನೇ ತರಗತಿಯಲ್ಲಿ ಓದಲು ಸೇರುವದಕ್ಕೆ ಯದ್ಯಪಿ ಲೋವರ್ ಸೆಕೆಂಡರೀ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಆದರೂ ಲೋವರ್ ಸೆಕಂಡರೀ ಪರೀಕ್ಷೆಯಲ್ಲಿ ತೇರ್ಗಡೆಯಾದೊಡನೆಯೆ ಅಪ್ಪರ್ ಸೆಕೆಂಡರೀ ಪರೀಕ್ಷೆಯ VI ನೇ ತರಗತಿಗೆ ಸೇರಲು ಆಗಲಾರದು. ಒಂದೆರಡು ವರ್ಷಕಾಲ ಕನ್ನಡ, ಸಂಸ್ಕೃತ, ಅಂಕಗಣಿತಗಳಲ್ಲಿ ವ್ಯಾಸಂಗವನ್ನು ಮಾಡಲೇಬೇಕು. ಮೈಸೂರು ನಾರ್ಮಲ್ ಸ್ಕೂಲಿಗೆ ಪ್ರತಿವರ್ಷವೂ ಬರುತ್ತಿರುವ ವಿದ್ಯಾರ್ಥಿಗಳಲ್ಲಿ ಅನೇಕರಿಗೆ ಈ ಮೂರು ಭಾಗಗಳಲ್ಲಿಯೂ ಯೋಗ್ಯತೆಯು ಬಲು ಕಡಮೆಯಾಗಿರುವುದು. ಕನ್ನಡವನ್ನು ಅಕ್ಷರದ ತಪ್ಪಿಲ್ಲದೆ ನೆಟ್ಟಗೆ ಬರೆಯುವುದಕ್ಕೂ ಬರುವುದಿಲ್ಲವು. ಅದರಲ್ಲಿಯೂ ಸಂಸ್ಕೃತದಲ್ಲಿ ದೇವನಾಗರಿಯ ಅಕ್ಷರಗಳನ್ನು ಕೂಡ ಕಲಿತಿರುವುದಿಲ್ಲ. ನಾರ್ಮಲ್ ಸ್ಕೂಲಿಗೆ ಬಂದು ಸೇರಿದಮೇಲೆ ದೇವನಾಗರಿ ಕಾಪಿಯನ್ನೂ ಬರೆಯಲು ಪ್ರಾರಂಭಿಸಬೇಕಾಗಿರುವುದು. ರಾಮಶಬ್ದವು ಮಕಾರಾನ್ತವೆನ್ನುವರು. ಇಂತಹ ಕೊರತೆಯಿಲ್ಲದಂತೆ ಸಾಮಾನ್ಯ ಜ್ಞಾನವನ್ನು ಪಡೆಯುವುದಕ್ಕೂ ಇವರಿಗೆ ತೋರದಿರುವದು ಬಹಳ ಆಶ್ಚರ್ಯವಾಗಿದೆ.

ಪಂಡಿತ ಪರೀಕ್ಷೆಯು ತರಗತಿಗೆ ಸೇರುವರ ವಿಚಾರವನ್ನು ಹೇಳಲಳವಲ್ಲ. ಅವರ ಪಾಡು ಬಹು ಶೋಚನೀಯವಾಗಿದೆ. ಈ ಪರೀಕ್ಷೆಗೆ ಸಂಸ್ಕೃತದಲ್ಲಿ ದೊಡ್ಡ ದೊಡ್ಡ ಅಲಂಕಾರ ಗ್ರಂಥಗಳನ್ನೂ ನಾಟಕಗಳನ್ನೂ ಇಟ್ಟಿರುವರು. ಇದನ್ನು ತಿಳಿದುಕೊಳ್ಳಲು ತಕ್ಕ ಯೋಗ್ಯತೆಯನ್ನು ಪೂರ್ವದಲ್ಲಿ ಸಂಪಾದಿಸಿಕೊಂಡಲ್ಲದೆ ಈ ಪರೀಕ್ಷೆಯು ಸ್ವಲ್ಪವೂ ಸಾಧ್ಯವಾಗುವುದಿಲ್ಲ. ಈ ಯಂಶವನ್ನು ವಿದ್ಯಾರ್ಥಿಗಳು ನೆರವೇರಿಸಿದ ಹೊರತು ಸರ್ಕಾರದವರ ಉದ್ದೇಶವು ಈಡೇರುವುದಿಲ್ಲ. ಎಷ್ಟು ಪ್ರವೇಶ ಪರೀಕ್ಷೆಗಳನ್ನು ಇಟ್ಟರೂ ಫಲವು ಸ್ವಲ್ಪವೂ ತಲೆದೋರಲಾರದು.

ಆದುದರಿಂದ ಮೈಸೂರು ನಾರ್ಮಲ್ ಸ್ಕೂಲಿಗೆ ಓದಲು ಸೇರುವವರು ಅಲ್ಲಿನ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದದೆ, ಉಪಾಧ್ಯಾಯರಿಗೂ ವೃಥಾ ತೊಂದರೆಯನ್ನು ಕೊಟ್ಟು, ತಾವೂ ಅವಮಾನಪಟ್ಟು ಹಿಂದಿರುಗಿ ಹೋಗದಂತೆಯೂ, ಎತ್ತರದಲ್ಲಿರುವ ಹಣ್ಣನ್ನು ಕೊಯ್ದು ಕೊಳ್ಳಲು ಅಪೇಕ್ಷಿಸಿ ಮೇಲಕ್ಕೆ ಕೈ ನೀಡುವ ಗುಜ್ಜಾರಿ ಮನು

ಷ್ಯನಹಾಗೆ ಆಗದಂತೆಯೂ, ಆಯಾ ಪರೀಕ್ಷೆಗಳತರಗತ್ತಿಗಳಲ್ಲಿ ಓದುವುದಕ್ಕೆ ಸೇರಲು ತಕ್ಕ ಯೋಗ್ಯತೆಯನ್ನು ಮೊದಲೇ ಸಂಪಾದಿಸಿಕೊಂಡು ಬಂದು ಸೇರಬೇಕೆಂದು ಇದರಿಂದ ಸೂಚಿಸಿ ಇದೆ.

ಕಥೆ ಹೇಳುವುದು.

ನಮ್ಮ ಮನೆಗಳಲ್ಲಿರುವ ಸಣ್ಣ ಮಕ್ಕಳು ರಾತ್ರಿಯ ಊಟವಾದಮೇಲೆ ದೊಡ್ಡವರನ್ನು ಕಥೆ ಹೇಳಬೇಕೆಂದು ನಿರ್ಬಂಧಿಸುವುದು ಎಲ್ಲರಿಗೂ ಬಳಿಕೆಯಾದ ಅಂಶವು. ಇವರ ಈ ಕೋರಿಕೆಯನ್ನು ನೆರವೇರಿಸುವ ಭಾರವು ಮನೆಯಲ್ಲಿ ಎಲ್ಲರಿಗಿಂತಲೂ ದೊಡ್ಡವರಾದ ಅಜ್ಜಿ ಅಥವಾ ಅಜ್ಜನಮೇಲೆ ಬೀಳುವುದು. ಇವರು ರಾಮಾಯಣ ಮಹಾಭಾರತ, ಪಂಚತಂತ್ರ ಮೊದಲಾದ ಗ್ರಂಥಗಳಿಂದ ಬಂದು ಸಣ್ಣ ಕಥೆಯನ್ನು ಆರಿಸಿಕೊಂಡು ಹೇಳುವರು. ಇದನ್ನು ಮಕ್ಕಳು ವಿಶೇಷ ಆದರದಿಂದ ಕೇಳುವರು. ಈ ಕಾಲದಲ್ಲಿ ಅವರ ಮುಖವು ಸಂತೋಷದಿಂದ ವಿಕಸಿತವಾಗುವುದು.

ಮಕ್ಕಳ ಈ ಅಭಿಲಾಷೆಗೆ ಕಾರಣವೇನು? ಅವರು ಓದುವುದಕ್ಕೆ ಪಾಠಶಾಲೆಗೆ ಬಂದಮೇಲೂ ಈ ಅಪೇಕ್ಷೆಯನ್ನು ನೆರವೇರಿಸುವುದಕ್ಕೆ ಉಪಾಧ್ಯಾಯರು ಪ್ರಯತ್ನ ಪಡಬೇಕೆ? ಯಾವವಿಧದಲ್ಲಿ ಪ್ರಯತ್ನಪಡಬೇಕು? ಈ ಅಂಶಗಳನ್ನು ಇಲ್ಲಿ ಸ್ವಲ್ಪಚರ್ಚಿಸುವೆವು.

ಬಾಲ್ಯದಿಂದಲೂ ಮಕ್ಕಳು ಕೈಕಾಲು ಮೊದಲಾದ ತಮ್ಮ ಅಂಗಗಳನ್ನು ಉಪಯೋಗಿಸಲು ಕುತೂಹಲ ಪಡುವರು. ಓಡುವುದು, ಹಾರುವುದು, ಹತ್ತುವುದು, ಮುಂತಾದ ಆಟಗಳಿಂದ ಈ ಅಭಿಲಾಷೆಯು ತೃಪ್ತಿಹೊಂದುವುದು. ಈವಿಧವಾದ ಚಟುವಟಿಕೆಯನ್ನು ತೋರ್ಪಡಿಸುವುದು ಮಕ್ಕಳ ದೇಹವೊಂದೇಅಲ್ಲ. ಅವರಮನಸ್ಸೂ ಈ ಕಾಲದಲ್ಲಿ ವಿಶೇಷ ಚಟುವಟಿಕೆಯುಳ್ಳದ್ದಾಗಿರುವುದು. ಮನಸ್ಸಿನ ಈ ಚಟುವಟಿಕೆಯು ಮಕ್ಕಳಿಗೆ ಮಾತುಬರುವವರೆಗೂ ಅಷ್ಟುಚೆನ್ನಾಗಿ ಕಾಣಿಸುವುದಿಲ್ಲ. ಮಾತು ಬಂದೊಡನೆಯೆ ಅವರು ಈ ಹಣ್ಣು ಯಾವದು? ಅಕಾಯಿ ಏತಕ್ಕೆ ಉದ್ದವಾಗಿರುವುದು? ಈ ವಿಧವಾದ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸುವರು.

ಅಲ್ಲದೆ ಅವರು ಈ ಕಾಲದಲ್ಲಿ ದೊಡ್ಡವರನ್ನು ಕಥೆಹೇಳಬೇಕೆಂದು ತೊಂದರೆ ಪಡಿಸುವರು. ಈ ಪ್ರಶ್ನೆಗಳೂ, ಕಥೆಗಳನ್ನು ಕೇಳಬೇಕೆಂಬ ಈ ಕುತೂಹಲವೂ ಮನಸ್ಸಿನ ಚಟುವಟಿಕೆಯನ್ನು ಸೂಚಿಸುವವು. ಮನೋ ವ್ಯಾಪಾರಗಳನ್ನು ವೃದ್ಧಿಗೊಳಿಸಲು ಪ್ರಯತ್ನಪಡುವರು ಉಪಾಧ್ಯಾಯರು ಮನಸ್ಸಿನ ಈ ಚಟುವಟಿಕೆಗೆ ಗಮನ ಕೊಡಬೇಕಲ್ಲವೆ ? ಮನಸ್ಸು ಯಾವಮಾರ್ಗಗಳಲ್ಲಿ ಚಟುವಟಿಕೆಯನ್ನು ತೋರ್ಪಡಿಸುವುದೊ ಆಮಾರ್ಗಗಳನ್ನೇ ಅನುಸರಿಸಿ ಅದನ್ನು ವೃದ್ಧಿಗೊಳಿಸಬೇಕು. ಅಂದರೆ ಮಕ್ಕಳು ಕೇಳುವ ಪ್ರಶ್ನೆಗಳಿಗೆ ಸಾಧ್ಯವಾದಮಟ್ಟಿಗೆ ಉತ್ತರಹೇಳಬೇಕು, ಉಪಾಧ್ಯಾಯರೂ ಆವರಿಗೆ ಆಗಾಗ್ಗೆ ಪ್ರಶ್ನೆಗಳನ್ನು ಹಾಕಿ ಉತ್ತರಹೇಳಿಸಬೇಕು. ಮೇಲಾಗಿ ಅವರಲ್ಲಿರುವ ಕಥೆ ಕೇಳಬೇಕೆಂಬ ಅಭಿಲಾಷೆಯನ್ನೂ ತೃಪ್ತಿಪಡಿಸಬೇಕು.

ಇಂತಹ ಕಥೆಗಳಿಂದ ಆಗಬಹುದಾದ ಪ್ರಯೋಜನಗಳು ಅನೇಕವಾಗಿರುವವು. ಮಕ್ಕಳ ನಡತೆಯನ್ನು ತಿದ್ದುವುದರಲ್ಲಿ ಇವು ವಿಶೇಷ ಸಹಾಯಮಾಡುವುವು. ಹರಿಶ್ಚಂದ್ರ, ಶಿಬಿ ಮೊದಲಾದ ಸತ್ಪುರುಷರ ಕಥೆಗಳನ್ನು ಸಂದರ್ಭಾನುಸಾರವಾಗಿ ಹೇಳುವುದರಿಂದ ಮಕ್ಕಳಲ್ಲಿ ಸತ್ಯ, ದಯೆ, ಮೊದಲಾದ ಸುಶೀಲಗಳನ್ನುಂಟುಮಾಡಲು ಸಹಾಯವಾಗುವುದು. ಈ ಸಣ್ಣವಯಸ್ಸಿನಲ್ಲಿ ತಿಳಿಸಿದ ಅಂಶಗಳು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವುವು. ಕಥೆಗಳನ್ನು ಹೇಳುವುದರಿಂದ ಇನ್ನೊಂದು ಪ್ರಯೋಜನವಾಗುವುದು. ಇನ್ನು ಸ್ವಲ್ಪಕಾಲವಾದಮೇಲೆ ಬಾಲಕರು ಓದುವ ಪಾಠಗಳಲ್ಲಿ ಬರುವ ಅನೇಕ ಶಬ್ದಗಳನ್ನು ಈ ಕಥೆಗಳಿಂದ ಬಳಿಕೆಯಾಗುವಂತೆ ಮಾಡಬಹುದು. ನಿದರ್ಶನವಾಗಿ ಚರಿತ್ರೆ, ಭೂವಿವರಣೆ ಈ ಪಾಠಗಳಲ್ಲಿ ಬಹಳವಾಗಿ ಉಪಯೋಗಿಸಲ್ಪಡುವ ಧೊರೆ, ಕೋಟೆ, ಯುದ್ಧ, ನದಿ, ಬೆಟ್ಟ, ಸಮುದ್ರ ಈ ವಿಧವಾದ ಶಬ್ದಗಳನ್ನು ಸರಿಯಾದ ಸಂದರ್ಭಗಳಲ್ಲಿ ಉಪಯೋಗಿಸುವುದರಿಂದ ಇವುಗಳ ಅರ್ಥವು ಮಕ್ಕಳಿಗೆ ತಿಳಿದು ಮುಂದೆ ಇವು ಪಾಠಪುಸ್ತಕಗಳಲ್ಲಿ ಬಂದಾಗ ಪರಿಚಿತ ಶಬ್ದಗಳಾಗಿರುವುವು. ಈ ಯೆರಡು ಪ್ರಯೋಜನಗಳಲ್ಲದೆ ಕಥೆಗಳಿಂದ ಇನ್ನೊಂದು ಪ್ರಯೋಜನವನ್ನು ಹೊಂದಬಹುದು. ಬುದ್ಧಿಯ ವ್ಯಾಪಾರಗಳಲ್ಲೊಂದಾದ ಕಲ್ಪನೆಯನ್ನು ವೃದ್ಧಿಪಡಿಸಲು ಈ ಕಥೆಗಳಿಂದ ವಿಶೇಷ ಸಹಾಯವಾಗುವುದು. ನಮ್ಮ ಕಥೆಗಳಲ್ಲಿ ರಾಮನು ಎತ್ತರವಾದ ಭುಜವುಳ್ಳವನಾಗಿಯೂ, ವಿಶಾಲವಾದ ವಕ್ಷಸ್ಥಳವೂ ನೇತ್ರವೂ ಉಳ್ಳವನಾಗಿಯೂ, ಸೌಮ್ಯವಾದ ಮುಖವುಳ್ಳವನಾಗಿಯೂ ಇದ್ದನು; ಅಥವಾ ಲಂಡನ್‌ಪಟ್ಟಣದ ಬೀದಿಗಳು ವಿಶಾಲವಾಗಿರುವುವು, ಅವುಗಳಿಗೆ

ಕಲ್ಲುಹಾಸಲ್ಪಟ್ಟಿರುವುದು, ಮನೆಗಳು ಬಹಳ ಎತ್ತರವಾಗಿ ಮೂರುನಾಲ್ಕು ಕಕ್ಷ್ಯಗಳಿಂದ ಕೂಡಿರುವುವು ; ಈ ರೀತಿಯಲ್ಲಿ ಜನಗಳನ್ನೂ ಸ್ಥಳಗಳನ್ನೂ ವರ್ಣಿಸುವಾಗ ವರ್ಣನೆಗೆ ತಕ್ಕ ಪ್ರತಿಮೆಗಳನ್ನು ಮಕ್ಕಳು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಬೇಕಾಗುವುದು.

ಕಥೆಹೇಳುವುದರಿಂದ ಈ ರೀತಿಯಲ್ಲಿ ಅನೇಕಪ್ರಯೋಜನಗಳಿರುವುದಾದರೆ ನಾವುಹೇಳುವ ಈ ಕಥೆಗಳಲ್ಲಿ ಯಾವಲಕ್ಷಣಗಳಿರಬೇಕು ? ಇವುಗಳನ್ನು ಯಾವಕ್ರಮದಲ್ಲಿ ಹೇಳಬೇಕು ? ಎಂಬ ಅಂಶಗಳನ್ನು ಯೋಚಿಸಬೇಕಲ್ಲವೆ ? ಕಥೆಯು ಸಂತೋಷ ಜನಕವಾದ ಅಂಶಗಳಿಂದ ಕೂಡಿರಬೇಕೆಂಬುದು ಸ್ಪಷ್ಟವಾಗಿರುವುದು, ಈ ಗುಣವಿಲ್ಲದ ಕಥೆಯಲ್ಲಿ ಮಕ್ಕಳಿಗೆ ಆದರವು ಹುಟ್ಟಲಾರದು. ನುಕ್ಕಳ ನಡತೆಯನ್ನು ತಿದ್ದುವುದು ಕಥೆಹೇಳುವುದರಲ್ಲಿ ಒಂದು ಉದ್ದೇಶವಾದುದರಿಂದ ಕೆಲವು ಕಥೆಗಳಲ್ಲಿ ಯಾವುದಾದರೂ ಒಂದು ನೀತಿಯು ಪ್ರಧಾನರಸವಾಗಿರಬೇಕು. ಸಹೋದರರಿಗೆ ಪರಸ್ಪರಯಿರಬೇಕಾದ ಪ್ರೀತಿಯನ್ನು ತಿಳಿಸುವುದಕ್ಕಾಗಿ ಲಕ್ಷ್ಮಣನ ಕಥೆಯನ್ನು ಹೇಳಬಹುದು, ಪಾತಿವ್ರತ್ಯದ ಮಹಿಮೆಯನ್ನು ತಿಳಿಸಲು ಸಾವಿತ್ರಿಯ ಕಥೆಯನ್ನು ಹೇಳಬಹುದು, ಹೀಗೆ ಒಂದೊಂದು ಕಥೆಯಲ್ಲಿ ಒಂದೊಂದು ಉದ್ದೇಶವಿರಬೇಕು. ಕಥೆಯಲ್ಲಿ ಉಪಯೋಗಿಸುವ ಮಾತುಗಳು ಬಾಲಕರಿಗೆ ಬಳಿಕೆಯಾಗಿರಬೇಕೆಂದು ಹೇಳಬೇಕಾದುದೇ ಇಲ್ಲ, ಕಠಿನ ಪದಗಳನ್ನು ಸೇರಿಸಿ ಮಕ್ಕಳಿಗೆ ತಿಳಿಯದಂತೆ ಕಥೆ ಹೇಳುವುದರಿಂದ ಯಾವ ಪ್ರಯೋಜನವು ತಾನೆ ನೆರವೇರುವುದು ? ಕಲ್ಪನೆಯ ಪ್ರವೃತ್ತಿಗೆ ಅವಕಾಶವಾಗುವಂತೆ ಕಥೆಯಲ್ಲಿ ಕೆಲವು ವರ್ಣನಾ ಭಾಗವೂ ಇರಬೇಕು.

ಇಂತಹ ಕಥೆಯನ್ನು ಮಾತಾಡುವಂತೆ ಹೇಳಬೇಕು. ಆಗಾಗ್ಗೆ ಮಕ್ಕಳಿಗೆ ಪ್ರಶ್ನೆಯನ್ನು ಹಾಕಿ ಕಥೆಯಲ್ಲಿ ಮುಂದೆ ನಡೆಯಬಹುದಾದ ಅಂಶಗಳನ್ನು ಅವರಿಂದ ಹೇಳಿಸಬೇಕು. ಕಥೆಯು ಒಂದು ಭಾಗವು ಮುಗಿದ ಮೇಲೆ ಆ ಭಾಗವು ಮಕ್ಕಳಿಗೆ ತಿಳಿಯಿತೆ ಇಲ್ಲವೆ ಎಂಬುದನ್ನು ಗೊತ್ತುಮಾಡಲು ಪ್ರಶ್ನೆಗಳನ್ನು ಕೇಳಬೇಕು, ಒಂದು ನೀತಿಯನ್ನು ತಿಳಿಸುವ ಉದ್ದೇಶದಿಂದ ಕಥೆಯನ್ನು ಹೇಳಿದರೆ, ಕಥೆಯ ಕೊನೆಯಲ್ಲಿ ಸರಿಯಾದ ಪ್ರಶ್ನೆಗಳಿಂದ ಆ ನೀತಿಯನ್ನು ಸ್ಥಿರಪಡಿಸಬೇಕು. ಕಥೆ ಹೇಳುವ ಕಾಲದಲ್ಲಿ ವಸ್ತು ಅಥವಾ ಚಿತ್ರರೂಪವಾದ ನಿದರ್ಶನಗಳನ್ನು ಕೊಡುವುದು ಸಾಧ್ಯವಾದರೆ ಅವುಗಳನ್ನು ಅತ್ಯಾವಶ್ಯಕವಾಗಿ ಕೊಡಬೇಕು. ಈ ನಿದರ್ಶನಗಳಿಂದ ಮಕ್ಕಳಿಗೆ ಕಥೆಯು ಸುಲಭವಾಗಿ ತಿಳಿಯುವುದಲ್ಲದೆ ಅದರಲ್ಲಿ ಆದರವೂ ಹೆಚ್ಚುವುದು.

ಕಿಂಡರ್ ಗಾರ್ಟ್ನ್ ಆಟಗಳ ಇತರ ಭಾಗಗಳನ್ನು ಕಥೆಯು ಜತೆಯಲ್ಲಿ ಸಂಬಂಧಿಸುವುದರಿಂದ ಮಕ್ಕಳಿಗೆ ಇನ್ನೂ ಹೆಚ್ಚು ಪ್ರಯೋಜನವಾಗುವುದು. ಅದುದರಿಂದ ಕಥೆ ಹೇಳುವಾಗ ಅದಕ್ಕೆ ಅನುಕೂಲವಾಗಿ ಕಿಂಡರ್ ಗಾರ್ಟ್ನ್ ಕರಣಗಳಿಂದ ಯಾವಯಾವ ಆಕೃತಿಗಳನ್ನು ಕಟ್ಟಿಸಬಹುದೊ ಅವುಗಳನ್ನು ಕಟ್ಟಿಸಬೇಕು. ಕಥೆಗೆ ತಕ್ಕ ಚಿತ್ರ ಬರೆಸುವುದು ಸಾಧ್ಯವಾದರೆ ಅದನ್ನು ಬರೆಸಬೇಕು, ಅಥವಾ ಮಣ್ಣಿನಮಾದರಿಯನ್ನು ಮಾಡಿಸುವುದು ಸಾಧ್ಯವಾದರೆ ಮಾಡಿಸಬೇಕು, ತಕ್ಕಹಾಡಿದ್ದರೆ ಅದನ್ನು ಹೇಳಿಕೊಡಬೇಕು. ಹೀಗೆ ಭಾಗಗಳನ್ನು ಪರಸ್ಪರ ಸಂಬಂಧಿಸಿ ಹೇಳಿಕೊಡುವುದರಿಂದ ಮಕ್ಕಳಿಗೆ ಕಥೆಯಲ್ಲಿ ಆದರವೂ ಮನಸ್ಸಿಗೆ ಸಂತೋಷವೂ ಹೆಚ್ಚುವುವು, ಕಥೆಯನ್ನು ಹೇಳುವುದರಿಂದಮಾತ್ರ ಉಂಟಾಗುವ ಪ್ರಯೋಜನಕ್ಕಿಂತಲೂ ಹೆಚ್ಚು ಪ್ರಯೋಜನವಾಗುವುದು.

ಕಥ ಹೇಳುವದಕ್ಕೆ ನಾವು ಅನುಸರಿಸಬೇಕಾದ ಮಾರ್ಗವು ಮುಂದಿನ ಕಥೆಯಿಂದ ತಿಳಿಯುವುದು.

ಕಥೆ:—

ಒಂದೂರಿನಲ್ಲಿ ಸೋಮನೆಂಬ ಒಬ್ಬ ಹುಡುಗನಿದ್ದನು. ಇವನ ತಾಯಿಯು ಹೆಸರು ಭಾಗಮ್ಮ. ಇವರು ಗಾರೆ ಇಟ್ಟಿಗೆಯಿಂದ ಕಟ್ಟಿದ ಆಂದವಾದ ಮನೆಯಲ್ಲಿ ವಾಸಮಾಡುತಿದ್ದರು. ಈ ಮನೆಯ ಮುಂಭಾಗದಲ್ಲಿ ದೊಡ್ಡ ಬಾಗಿಲೂ, ವಿಶಾಲವಾದ ಕಿಟಕಿಗಳೂ ಇದ್ದವು, ಮಧ್ಯದಲ್ಲಿ ವಿಸ್ತಾರವಾದ ಅಂಗಳವಿತ್ತು. (ಕಿಂಡರ್ ಗಾರ್ಟ್ನ್ ಆರನೆಯ ಕರಣದಿಂದ ಬಾಗಿಲು, ಕಿಟಕಿ, ಅಂಗಳವುಳ್ಳ ಮನೆಯನ್ನು ಕಟ್ಟಿಸಬೇಕು.)

ಪ್ರಶ್ನೆ:—ಮನೆಯಮಧ್ಯದಲ್ಲಿ ವಿಶಾಲವಾದ ಅಂಗಳವೂ, ಮುಂಭಾಗದಲ್ಲಿ ದೊಡ್ಡದೊಡ್ಡ ಕಿಟಕಿಗಳೂ ಏಕಿರಬೇಕು?

ಉತ್ತರ:—ಮನೆಯೊಳಕ್ಕೆ ಗಾಳಿ, ಬೆಳಕು ಧಾರಾಳವಾಗಿ ಬರುವುದಕ್ಕಾಗಿ ಹೀಗಿರಬೇಕು.

ಸೋಮನಿಗೆ ಪ್ರಾಣಿಗಳನ್ನು ಸಾಕುವುದರಲ್ಲಿ ಬಲು ಇಷ್ಟವಿದ್ದಿತು. ಒಂದು ದಿನ ಸೋಮನು " ಅಮ್ಮ, ನನಗೆ ಪಾರಿವಾಳದ ಹಕ್ಕಿಗಳನ್ನು ಸಾಕಲು ಬಲು ಆಸೆಯಾಗುವುದು. ಒಂದೆರಡು ಜತೆಯನ್ನು ತರಿಸಿಕೊಡುವೆಯೋ? " ಎಂದು ಭಾಗಮ್ಮನನ್ನು ಕೇಳಿದನು. ಭಾಗಮ್ಮನು " ಅಪ್ಪಾ, ನೀನು ಹಕ್ಕಿಗಳಿಗೆ ಹೊತ್ತುಹೊತ್ತಿ

ಗೆ ತಿಂಡಿಹಾಕಿ ಎಚ್ಚರಿಕೆಯಿಂದ ಸಾಕುವದಾದರೆ ತರಿಸಿಕೊಡುವೆನು" ಎಂದು ಹೇಳಿದಳು.

ಪ್ರಶ್ನೆ:—ಹಕ್ಕಿಗಳಿಗೆ ತಿಂಡಿಯನ್ನು ಸರಿಯಾಗಿ ಹಾಕದಿದ್ದರೆ ಅವುಗಳೇ ನಾಗುವುವು ?

ಉತ್ತರ:—ಅವು ತಿಂಡಿಯಿಲ್ಲದೆ ಸಾಯುವ್ವವು.

ಪ್ರಶ್ನೆ:—ವಾರಿವಾಳದ ಹಕ್ಕಿಗಳಿಗೆ ಯಾವತಿಂಡಿಯನ್ನು ಹಾಕಬೇಕು ?

ಉತ್ತರ:— ರಾಗಿ, ಕಡಲೆ ಮೊದಲಾದ ಕಾಳುಗಳನ್ನು ಹಾಕಬೇಕು.

ಸೋಮನು " ಹಾಗೆಯೇಆಗಲಿ " ಎಂದು ಒಪ್ಪಿಕೊಂಡನು. ಭಾಗಮ್ಮನು ಅವನಿಗೆ ಚೆಲುವಾದ ಎರಡು ಜತೆ ಹಕ್ಕಿಗಳನ್ನು ತರಿಸಿಕೊಟ್ಟು, ಅಂಗಳದಮಧ್ಯದಲ್ಲಿ ಒಂದು ಕಂಬವನ್ನು ನೆಡಿಸಿ ಅದರ ಮೇಲೆ ಹಕ್ಕಿಗಳನ್ನು ಇಡುವುದಕ್ಕೆ ಅನುಕೂಲವಾದ ಗೂಡನ್ನು ಮಾಡಿಸಿಕೊಟ್ಟಳು. (ಆರನೆಯ ಕರಣದ ತುಂಡುಗಳಿಂದ ಒಂದು ಕಂಬವನ್ನೂ ಅದರಮೇಲೆ ಒಂದುಗೂಡನ್ನೂ ಕಟ್ಟಿಸಬೇಕು.)

ಪ್ರಶ್ನೆ:—ಎತ್ತರವಾದ ಕಂಬದಮೇಲೆ ಗೂಡನ್ನೇಕೆ ಮಾಡಿಸಿಕೊಟ್ಟಳು ?

ಉತ್ತರ:—ಗೊತ್ತಿಲ್ಲ.

ಪ್ರಶ್ನೆ:—ಮನೆಗಳಲ್ಲಿ ಇಲಿಗಳನ್ನು ಹಿಡಿಯುವುದಕ್ಕೆ ಹೊಂಚುಹಾಕುವ ಪ್ರಾಣಿ ಯಾವುದು ?

ಉತ್ತರ:—ಬೆಕ್ಕು.

ಪ್ರಶ್ನೆ:—ಗೂಡನ್ನು ನೆಲದಮೇಲಿಟ್ಟು ಬಾಗಿಲನ್ನು ತೆರೆದಿದ್ದರೆ ಬೆಕ್ಕು ಏನು ಮಾಡುವುದು ?

ಉತ್ತರ:—ಹಕ್ಕಿಗಳನ್ನು ತಿಂದುಬಿಡುವುದು.

ಪ್ರಶ್ನೆ:—ಗೂಡನ್ನು ಕಂಬದಮೇಲೆ ಇಟ್ಟಿದ್ದರೋ ?

ಉತ್ತರ:—ಹಕ್ಕಿಗಳು ಬೆಕ್ಕಿಗೆ ಸಿಕ್ಕುವುದಿಲ್ಲ.

ಪ್ರಶ್ನೆ—ಈಗೂಡಿನಲ್ಲಿರುವ ಹಕ್ಕಿಗಳಿಗೆ ಕಾಳನ್ನು ಹೇಗೆಹಾಕುವುದು. ?

ಉತ್ತರ:—ಏಣಿಯನ್ನು ಹಾಕಿ ಅದರಮೇಲೆ ಹತ್ತಿ ಕಾಳುಗಳನ್ನು ಹಾಕಬೇಕು.

ಸೋಮನು ನಿತ್ಯವೂ ಹೀಗೆ ಏಣಿಯನ್ನು ಹಾಕಿಕೊಂಡು ಗೂಡಿಗೆ ಹತ್ತಿ ಹಕ್ಕಿಗಳಿಗೆ ಕಾಳುಹಾಕುತಿದ್ದನು. (ಆರನೆಯ ಕರಣದ ಕಂಬಗಳಂತಿರುವ ತುಂ

ಡುಗಳಿಂದ ಏಣಿಯನ್ನು ಕಟ್ಟಿಸಬೇಕು). ಆಮೇಲೆ ಏಣಿಯನ್ನು ತೆಗೆದಿಡುತಿದ್ದನು. ಒಂದುದಿನ ಇವನು ಏಣಿಯಮೇಲೆ ಹತ್ತಿ ಹಕ್ಕಿಗಳಿಗೆ ಕಾಳುಹಾಕುತಿದ್ದಾಗ ಬೀದಿಯಲ್ಲಿ ವಾದ್ಯಗಳ ಶಬ್ದವು ವಿಶೇಷವಾಗಿರುವ ಒಂದು ಮೆರವಣಿಗೆಯು ಬಂದಿತು. ಈ ಶಬ್ದವನ್ನು ಕೇಳಿದೊಡನೆಯೇ ಸೋಮನು ಏಣಿಯನ್ನು ಹಾಗೆಯೇ ಬಿಟ್ಟು ಬೀದಿಗೆ ಓಡಿಹೋದನು.

ಪ್ರಶ್ನೆ:—ಪಕ್ಷಿಗನ್ನು ತಿನ್ನುವುದಕ್ಕೆ ಹೊಂಚುಹಾಕುತಿದ್ದುದು ಯಾವುದು ?

ಉತ್ತರ:—ಬೆಕ್ಕು.

ಪ್ರಶ್ನೆ:—ಈ ಬೆಕ್ಕಿಗೆ ಪಕ್ಷಿಗಳನ್ನು ಹಿಡಿಯಲು ಈಗ ಯಾವ ಅನುಕೂಲವುಂಟಾಯಿತು ?

ಉತ್ತರ:—ಏಣಿಯಮೇಲೆ ಹತ್ತಿ ಹಕ್ಕಿಗಳನ್ನು ಹಿಡಿಯುವುದು ಸುಲಭವಾಯಿತು.

ಆ ಕೆಟ್ಟ ಬೆಕ್ಕು ಈ ರೀತಿಯಲ್ಲಿ ಏಣಿಯಮೇಲೆ ಹತ್ತಿ ಒಂದು ಹಕ್ಕಿಯನ್ನು ಹಿಡಿದುಕೊಂಡು ಕೆಳಕ್ಕೆ ಧುಮುಕಿತು. ಆಸಮಯಕ್ಕೆ ಸರಿಯಾಗಿ ಅಡಿಗೆಯಮನೆಯಲ್ಲಿ ಕೆಲಸಮಾಡುತ್ತಿದ್ದ ಭಾಗಮ್ಮನು ಈಚೆಗೆ ಬಂದಳು. ಅವಳು ಕೂಡಲೇ ಬೆಕ್ಕನ್ನು ಹೆದರಿಸಿ ಪಾರಿವಾಳವನ್ನು ಬಿಡಿಸಿದಳು. ದೇವರ ಕೃಪೆಯಿಂದ ಪಾರಿವಾಳಕ್ಕೆ ಪ್ರಾಣವು ಹೋಗಿರಲಿಲ್ಲ. ಆದರೇನು, ಅಯ್ಯೋಪಾಪ ! ಅದರ ಮೈಯಲ್ಲಾ ರಕ್ತಮಯವಾಗಿ ನೋಡುವವರಿಗೆ ಬಹಳ ಸಂಕಟವನ್ನುಂಟುಮಾಡುವ ಹಾಗಿತ್ತು. ಮೆರವಣಿಗೆಯು ಹೊರಟುಹೋಗುತಲು ಸೋಮನು ಒಳಕ್ಕೆ ಓಡಿಬಂದನು. ರಕ್ತದಿಂದ ತೊಯ್ದು ನೆಲದಲ್ಲಿ ಹೊರಳಾಡುತಿದ್ದ ಹಕ್ಕಿಯನ್ನು ನೋಡಿ ಸೋಮನು ಗೋಳಾಡುವುದಕ್ಕೆ ಪ್ರಾರಂಭಿಸಿದನು. ಭಾಗಮ್ಮನು " ಅಪ್ಪಾ, ಹಕ್ಕಿಗಳನ್ನು ಕೊಂಡುಕೊಡುವಾಗಲೇ ಅವುಗಳನ್ನು ಎಚ್ಚರಿಕೆಯಿಂದ ಸಾಕಬೇಕೆಂದು ನಾನು ಹೇಳಲಿಲ್ಲವೆ ? ಇನ್ನುಮೇಲಾದರೂ ಅವುಗಳನ್ನು ಸರಿಯಾಗಿ ನೋಡಿಕೊ," ಎಂದು ಹೇಳಿ ಆ ಹಕ್ಕಿಯನ್ನು ಚೆನ್ನಾಗಿ ತೊಳೆದು ಘಾಯಕ್ಕೆ ಮದ್ದು ಹಾಕಿ ವಾಸಿಮಾಡಿದಳು. ಅಂದಿನಿಂದ ಸೋಮನು ಹಕ್ಕಿಗಳಿಗೆ ಕಾಳುಹಾಕಿದಮೇಲೆ ಏಣಿಯನ್ನು ತೆಗೆಯದೆ ಹೊರಗೆ ಹೋಗುತಿರಲಿಲ್ಲ.

ಪ್ರಶ್ನೆ:—ಸಾಕುವ ಪ್ರಾಣಿಗಳ ವಿಷಯದಲ್ಲಿ ನಾವು ಯಾರಂತಿರಬಾರದು ?

ಉತ್ತರ:—ಸೋಮನಂತಿರಬಾರದು.

ಪ್ರಶ್ನೆ:—ಅವುಗಳನ್ನು ಹೇಗೆ ನೋಡಿಕೊಳ್ಳಬೇಕು ?

ಉತ್ತರ:—ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.

ಪ್ರಶ್ನೆ:—ಭಾಗಮ್ಮನಂತೆ ಪ್ರಾಣಿಗಳವಿಷಯದಲ್ಲಿ ಏನನ್ನು ತೋರಿಸಬೇಕು ?

ಉತ್ತರ:—ಕನಿಕರವನ್ನು ತೋರಿಸಬೇಕು.

ಈ ಕ್ರಮದಲ್ಲಿ ಕಥೆಯನ್ನು ಹೇಳುವುದರಿಂದ ನಾವುಮೊದಲು ಸೂಚಿಸಿರುವ ಪ್ರಯೋಜನಗಳುಂಟಾಗುವುವು. ಕಥೆಯನ್ನು ಹೇಳಿದತರುವಾಯ ಬೆಕ್ಕು, ಪಾರಿವಾಳ ಇವುಗಳ ಚಿತ್ರವನ್ನು ಬರೆಸಬೇಕು, ಅಥವಾ ಇವುಗಳನ್ನು ಮಣ್ಣಿನಿಂದ ಮಾಡಿಸಬೇಕು. ಸಾಧ್ಯವಾದರೆ ಈ ಕಥೆಗೆ ತಕ್ಕ ಹಾಡನ್ನೂ ಹೇಳಿಕೊಡಬೇಕು.

M. V.

ಪರ್ವತಗಳು, ಮೈದಾನಗಳು ಮತ್ತು ಕಣಿವೆಗಳು.

ಹಿಮವತ್ಪರ್ವತಾಗ್ರವು ಸಮುದ್ರದ ಮಟ್ಟದಮೇಲೆ ೫॥ ಮೈಲಿಗಳ ಎತ್ತರವಿರುತ್ತದೆ. ಕ್ಯಾಸ್ಪಿಯ್ಯ ಸಮುದ್ರವು ಸಮುದ್ರದ ಮಟ್ಟದ ಕೆಳಗೆ ೩,೦೦೦ ಅಡಿ ಆಳದಲ್ಲಿರುತ್ತದೆ. ಭೂಮಿಯ ಮೇಲುಭಾಗವನ್ನೆಲ್ಲಾ ಪರೀಕ್ಷಿಸಿದರೆ ನಿಮ್ನೋನ್ನತಗಳು ಈ ರೀತಿಯಲ್ಲಿ ವ್ಯತ್ಯಸ್ತವಾಗಿರುತ್ತದೆ. ಈ ಪ್ರಪಂಚದ ಖಂಡಗಳಲ್ಲಿ ಪರ್ವತಶ್ರೇಣಿಗಳಿರುವುವು. ಸಮುದ್ರದಲ್ಲಿ ಅಲೆಗಳು ಏಳುವಾಗ್ಯೆ ನಿಮ್ನೋನ್ನತಗಳು ಹೇಗೆ ಕಾಣುವುದೋಹಾಗೆಯೆ ಭೂಮಿಯಮೇಲೆಯೂ ನಿಮ್ನೋನ್ನತಗಳಾದ ಪ್ರದೇಶಗಳಿರುವುವು. ಪರ್ವತಗಳಲ್ಲಿ ಕೆಲವು ಸಮುದ್ರತೀರದಿಂದ ಬಹಳ ಎತ್ತರವಾಗಿ ಎದ್ದಿರುವುದುಂಟು. ಎಟ್ನ, ವಿಸೂವಿಯಸ್, ಟೆನರೀಫ್ ಮೊದಲಾದ ಪರ್ವತಗಳು ಇಂಥವುಗಳು. ಕೆಲವು ಕಡೆ ಇಂಥಾ ಪರ್ವತಗಳು ನೂರಾರು ಸೇರಿಕೊಂಡು ಗುಂಪಾಗಿಯೂ ಶ್ರೇಣಿಯಾಗಿಯೂ ಇರುವುದುಂಟು. ಯೂರೋಪು ಖಂಡದಲ್ಲಿ ಆಲ್ಪ್ಸ ಎಂಬ ಪರ್ವತಶ್ರೇಣಿಯು ಇಂಥಾದ್ದು. ಫ್ರಾನ್ಸ್, ಜರ್ಮನೀದೇಶಗಳಿಂದ ಜ್ಯೂರಾ ಡಿಸ್ಟ್ರಿಕ್ಟಿಗೆ ಪ್ರವೇಶಿಸಿದರೆ ಪರ್ವತ ಶ್ರೇಣಿಗಳು ಸಮುದ್ರದ ಅಲೆಗಳಂತೆ ಒಂದಾಗುತ್ತಲೊಂದು ಸಿಕ್ಕುವುವು. ಎತ್ತರದಲ್ಲಿ ಕಡಮೆಯಾಗಿರತಕ್ಕ ಶ್ರೇಣಿಗಳಲ್ಲೆಲ್ಲಾ ಸಸ್ಯಾದಿಗಳು ವಿಶೇಷವಾಗಿ ಸಿಕ್ಕುವುವು. ಅಗ್ರಭಾಗಗಳಿಗೆ ಹೋದಹಾಗೆಲ್ಲಾ ಸಸ್ಯಾದಿಗಳು ಕಡಮೆ

ಯಾಗಿ ಕೊನೆಗೆ ಬರಿ ಭಂಡೆಗಳು ಮಾತ್ರ ಸಿಕ್ಕುವುವು. ಈ ಪರ್ವತಗಳ ಅಗ್ರಭಾಗಗಳು ಆಕಾಶವನ್ನು ಸೇರಿಕೊಂಡಿರುವಂತೆ ಕಾಣುವುವು. ಈ ಪರ್ವತ ಶ್ರೇಣಿಯಲ್ಲಿ ಚಿಕ್ಕದಾಗಿಯೂ ದೊಡ್ಡದಾಗಿಯೂ, ಅದಕ್ಕಿಂತ ದೊಡ್ಡದಾಗಿಯೂ ಇರುವ ಪರ್ವತಗಳು ಒಂದಾಗುತ್ತಲೊಂದು ದೃಷ್ಟಿಪಥಕ್ಕೆ ಬೀಳುವುವು. ಪರ್ವತಾಗ್ರದಿಂದ ನೋಡಿದರೆ ಗುಡ್ಡಗಳೂ ಮೈದಾನಗಳೂ ಕಣಿವೆಗಳೂ ಒಂದಕ್ಕಿಂತಲೂ ಒಂದು ಕೆಳಗೆ ನಾನಾ ವಿಧವಾದ ವೃಕ್ಷಗಳಿಂದಲೂ ಪ್ರಾಣಿವರ್ಗದಿಂದಲೂ ಭರಿತವಾಗಿರುವುದು ಗೊತ್ತಾಗುವುದು. ಈ ಪರ್ವತಗಳ ಮೇಲೆ ಸ್ವಲ್ಪ ದೂರಕ್ಕೆ ಹೋದರೆ ನೀರಿನ ಆವಿಯು ಹಿಮವಾಗಿ ಪರಿಣಮಿಸುವ ಪ್ರಾಂತ್ಯಕ್ಕೆ ಹೋಗುವೆವು. ಅಲ್ಲಿಂದ ಸುತ್ತಮುತ್ತಲೂ ನೋಡಿದರೆ ದಿಗಂತಗಳವರೆಗೂ ಅನೇಕ ವಿಧವಾದ ಪದಾರ್ಥಗಳು ದೃಷ್ಟಿಗೆ ಗೋಚರವಾಗುವುವು. ಈ ಪರ್ವತದ ಶಿಖರದಲ್ಲಿ ಬೀಳುವ ಹಿಮವೆಲ್ಲಾ ಒಂದಕ್ಕೊಂದು ಸೇರಿಕೊಂಡು ತಲೆಭಾರವಾಗಿ ಕೆಳಕ್ಕೆ ಉರುಳುವಾಗ್ಯೆ ಭಯಂಕರವಾದ ಶಬ್ದವಾಗುವುದು. ಈ ಹಿಮದ ಗೆಡ್ಡೆಗಳ ಜತೆಯಲ್ಲಿ ಕಲ್ಲುಗಳು ಭಂಡೆಗಳು ಬುಡಸಹಿತವಾಗಿ ಕೀಳಲ್ಪಟ್ಟ ಮರಗಳು ಇವೆಲ್ಲಾ ಉರುಳುವುವು. ಪರ್ವತದ ಮೇಲಿನಿಂದ ಕೆಳಕ್ಕೆ ಉರಳತಕ್ಕ ಕಾಲದಲ್ಲಿ ಕೆಳಕ್ಕೆ ಹೋದಹಾಗೆಲ್ಲಾ ಹಿಮವು ಕರಗಿ ಗಿರಿ ನದಿಗಳಾಗಿ ಪ್ರವಹಿಸುವುದಕ್ಕೆ ಉಪಕ್ರಮವಾಗುವುದು. ಸ್ವಿಟ್ಜರ್ಲೆಂಡಿನ ಕಡೆಗೆ ತಿರುಗಿದರೆ ಹೊಲಗಳು ತೋಟಗಳು ಹಣ್ಣಿನ ತೋಟಗಳು ದ್ರಾಕ್ಷೆ ಬಳ್ಳಿಗಳ ತೋಟಗಳು ಇವುಗಳೆಲ್ಲಾ ಕಾಣುವುವು. ಎತ್ತರವಾದ ಪ್ರದೇಶಗಳಲ್ಲಿ ಭಾರಿ ಮರಗಳು ಬೆಳೆದಿರುವುವು. ಮೇಲಕ್ಕೆ ಹೋದಹಾಗೆಲ್ಲಾ ಸಸ್ಯಾದಿಗಳೂ ಪ್ರಾಣಿಗಳೂ ಬಹಳ ಚಿಕ್ಕವುಗಳಾಗಿರುವುವು. ಗಂಗಾನದಿಯ ಮೈದಾನಗಳಲ್ಲಿ ಬಹಳ ಕೋಮಲವಾಗಿ ಬೆಳೆದಿರತಕ್ಕ ಗಿಡಗಳು ಇರುವುವು. ಹಿಮವತ್ಪರ್ವತದ ಮಧ್ಯಭಾಗಕ್ಕೆ ಹೋದರೆ ಸಮಶೀತೋಷ್ಣ ಪ್ರದೇಶಗಳ ಸಸ್ಯಾದಿಗಳೆಲ್ಲಾ ಸಿಕ್ಕುವುವು.

ಈ ಪರ್ವತಾಗ್ರಕ್ಕೆ ಹೋದರೆ ಶೀತವಲಯದ ಗಿಡಗಳೆಲ್ಲಾ ಸಿಕ್ಕುವುವು. ಪರ್ವತಶ್ರೇಣಿಗಳು ಅನೇಕವಾಗಿರುವುವು. ಇವುಗಳ ಮಧ್ಯೆ ಆಳವಾದ ಕಣಿವೆಗಳಿರುವುವು. ಸ್ವಿಟ್ಜರ್ಲೆಂಡಿನಲ್ಲಿರತಕ್ಕ ಆಲ್ಪ್ಸ ಪರ್ವತಶ್ರೇಣಿಗಳೆರಡೂ ಒಂದರಪಕ್ಕದಲ್ಲೊಂದು ಇರುವುವು. ಇವುಗಳ ಮಧ್ಯೆ ಇರತಕ್ಕ ಕಣಿವೆಗಳಲ್ಲಿ ರೋನ್ ಮತ್ತು ರೈನ್ ನದಿಗಳು ಹರಿಯುವುವು. ಇದಲ್ಲದೆ ಈ ಪರ್ವತಗಳ ಮಧ್ಯದಲ್ಲಿ ಅನೇಕ ಕಣಿವೆಗಳಿರುವುವು. ರಾವಿಲ್, ಜಮ್ಮು, ಗ್ರಿಂಸಲ್ ಎಂಬ ನದಿಗಳು ಈ ಕಣಿವೆಗಳ

ಪೂರ್ವವಾಗಿ ಹರಿಯುವುವು. ಈ ನದೀತೀರಗಳೆಲ್ಲೆಲ್ಲಾ ಕಾಡು ವಿಶೇಷವಾಗಿ ಬೆಳೆದಿರುವುದು. ಆಲ್ಪ್ಸ್ ಬೆಟ್ಟದ ತಿಖರಗಳಲ್ಲಿ ಮೂರು ಬಹಳ ಪ್ರಸಿದ್ಧವಾದುವುಗಳು. ಮೌಂಟ್ ಬ್ಲಾಂಕ್, ಮ್ಯಾಟರ್ ಹಾರನ್, ಮೌಂಟ್ ರೋಜ, ಸೆಂಟ್ ಗಾಥರ್ಡ್ ಎಂಬ ತಿಖರಗಳು ಅತ್ಯಂತ ಮುಖ್ಯವಾದವುಗಳು. ಅಮೆರಿಕಾ ಖಂಡದಲ್ಲಿ ಇದೇ ರೀತಿಯಾದ ಉನ್ನತವಾದ ಪರ್ವತಶ್ರೇಣಿಗಳಿರುವುವು. ರಾಕಿ ಪರ್ವತಗಳು ಉತ್ತರ ಅಮೆರಿಕ ಖಂಡಕ್ಕೆ ಬೆನ್ನು ಮೂಳೆಯಂತೆ ಆಚರಿಸುವುದು. ಇದರ ಉದ್ದವು ೯,೦೦೦ ಮೈಲಿಗಳಾಗುತ್ತದೆ. ದಕ್ಷಿಣ ಅಮೆರಿಕಾದಲ್ಲಿ ಈ ಪರ್ವತವು ವಿಸ್ತರಿಸಿಕೊಂಡಿರುವುದು. ಅಲ್ಲಿ ಈ ಪರ್ವತಕ್ಕೆ ಆಂಡೀಸ್ ಎಂಬದಾಗಿ ಹೆಸರು. ಪ್ರಪಂಚದ ಮೈದಾನಗಳೆಲ್ಲಾ ಪರ್ವತ ಶ್ರೇಣಿಗಳಿಂದ ಆವರಿಸಲ್ಪಟ್ಟಿವೆ. ಉತ್ತರ ಅಮೆರಿಕಾ ಖಂಡದಲ್ಲಿ ರಾಕೀ, ಅಲಿಘನೀ, ಮೆಕ್ಸಿಕೋ ಎಂಬ ಪರ್ವತಗಳ ಮಧ್ಯೆ ಇರತಕ್ಕ ಮೈದಾನವೇ ಜನಗಳ ವಸತಿಗೆ ಯೋಗ್ಯವಾದ ಸಂಯುಕ್ತಸಂಸ್ಥಾನ ಮತ್ತು ಬ್ರಿಟಿಷ್ ಅಮೆರಿಕಾ ಎಂದು ಹೇಳಿಸಿಕೊಳ್ಳುತ್ತವೆ. ಈ ಮೈದಾನಗಳಲ್ಲಿಯೂ ಅಲ್ಲಲ್ಲಿ ಗುಡ್ಡಗಳಿರುತ್ತವೆ. ಮಧ್ಯಪ್ರಾಂತ್ಯದಿಂದ ಸಮುದ್ರಕ್ಕೆ ಸಂಗಮವಾಗುವ ಅನೇಕ ನದಿಗಳಿರುವುವು. ಈ ನದಿಗಳಲ್ಲಿ೪,೦೦೦ ಮೈಲಿಗಳವರಿವಿಗೂ ಹಡಗು ಸಂಚಾರಮಾಡುವುವು. ಅನೇಕಸಾವಿರ ಚದರಮೈಲಿಗಳು ವಿಸ್ತೀರ್ಣ ಉಳ್ಳ ಮೈದಾನಗಳಿರುವುವು. ಇವುಗಳಿಗೆ ಪ್ರೈರೀಸ್ ಅಥವಾ ಸೆವಾನಾಸ್ ಎಂಬದಾಗಿ ಹೇಳುವರು. ಯೂರೋಪ್ ಖಂಡದಲ್ಲಿಯೂ ಮೈದಾನಗಳು ಇದೇರೀತಿಯಲ್ಲಿ ಪರ್ವತ ಶ್ರೇಣಿಗಳಿಂದ ಸುತ್ತುವರಿಯಲ್ಪಟ್ಟಿರುವವು. ಪಶ್ಚಿಮದಿಂದ ಪೂರ್ವದಿಕ್ಕಿಗೆ ವಿಸ್ತರಿಸಿಕೊಂಡಿರತಕ್ಕ ಮೈದಾನವು ೧,೫೦೦ ಮೈಲಿ ಅಗಲವಾಗಿಯೂ ೪;೦೦೦ ಮೈಲಿ ಉದ್ದವಾಗಿಯೂ ಇರುವುದು. ಈ ಮೈದಾನವು ಪಶ್ಚಿಮದಲ್ಲಿ ಎತ್ತರವಾಗಿಯೂ ಪೂರ್ವದಿಕ್ಕಿನಲ್ಲಿ ನಿಮ್ನವಾಗಿಯೂ ಇರುವುದು. ಈ ಪ್ರಪಂಚದಲ್ಲಿರತಕ್ಕ ಡೆಡ್‌ಸೀ ಎಂಬ ಸರೋವರ ವಿನಹ ಎಲ್ಲಾ ಸರೋವರ ಅಥವಾ ಸಮುದ್ರಗಳಿಗಿಂತಲೂ ಕ್ಯಾಸ್ಪಿಯನ್ ಸಮುದ್ರವೇ ಹಳ್ಳದಲ್ಲಿರುವುದು. ಆಸ್ಯಾಖಂಡದ ಮೈದಾನದ ದಕ್ಷಿಣದಿಕ್ಕಿನ ಹಳ್ಳಗಳಲ್ಲಿ ಕ್ಯಾಸ್ಪಿಯನ್ ಮೊದಲಾದ ಸರೋವರಗಳು ಇರುವವು. ಇವುಗಳೆಲ್ಲಾ ಉಪ್ಪುನೀರು ಸರೋವರಗಳು, ಕ್ಯಾಸ್ಪಿಯನ್ ಸಾಗರದಿಂದ ಉತ್ತರಕ್ಕೆ ಇರತಕ್ಕ ಜೇಡೀ ಮಣ್ಣಿನ ಮತ್ತು ಮರಳು ಭೂಮಿಯಲ್ಲಿ ಹುಲ್ಲು ಬೆಳೆಯುವುದು. ಈ ಮೈದಾನಗಳಿಗೆ ಸ್ಟೆಪ್ಪಿಗಳೆಂದು ಹೆಸರು. ಸೈಬೀರಿಯಾದಲ್ಲಿರತಕ್ಕ

ಇಂಥಾ ಮೈದಾನಗಳಿಗೆ ತಂಡ್ರಗಳೆಂದು ಹೆಸರು. ಉತ್ತರ ಆಫ್ರಿಕಾ ಖಂಡದಲ್ಲಿ ಮರಳುಕಾಡುಗಳು ವಿಶೇಷವಾಗಿರುತ್ತವೆ. ಇದರಲ್ಲಿ ಅತ್ಯಂತ ದೊಡ್ಡದಾದ ಕಾಡಿಗೆ ಸಹಾರಾ ಎಂದು ಹೆಸರು. ಈ ಕಾಡಿನ ಕೆಲವು ಭಾಗಗಳಲ್ಲಿ ಮರಳು ಬೆಟ್ಟದಂತೆ ಇರುವುದು. ಪೂರ್ವದಿಕ್ಕಿನಲ್ಲಿ ಈ ಕಾಡು ಸಮುದ್ರದ ಮಟ್ಟಕ್ಕಿಂತಲೂ ೧೫೦ ಅಡಿ ಕೆಳಗೆ ಇರುವುದು. ಈ ಕಾಡಿನ ಕೆಲವುಭಾಗಗಳಲ್ಲಿ ಚೆಲುಮೆಗಳೂ ಸುತ್ತಮುತ್ತಲೂ ಗಿಡಗಳೂ ಇರುವುವು. ಇವುಗಳಿಗೆ ಓಯುಸೆಸ್ ಎಂದು ಹೇಳುತ್ತಾರೆ. ಇವುಗಳುವಿನಾ ಬಾಕೀ ಕಾಡೆಲ್ಲಾ ಮರಳಿನಿಂದ ತುಂಬಲ್ಪಟ್ಟಿರುವುವು. ಈ ಮರಳಿನ ದಿಣ್ಣೆಗಳು ಸ್ಥಳದಿಂದ ಸ್ಥಳಕ್ಕೆ ಗಾಳಿಯ ಬಲದಿಂದ ಸಂಚರಿಸುವುವು. ಈ ಕಾಡಿನಲ್ಲಿ ಕಪ್ಪೆಚಿಪ್ಪುಗಳೇ ಮೊದಲಾದ ಜಲಚರಗಳ ಅಸ್ಥಿಗಳು ಸಿಕ್ಕುವುವು. ಒಂದಾನೊಂದು ಕಾಲದಲ್ಲಿ ಈ ಭಾಗವು ಸಮುದ್ರದ ಕೆಳಗಿತ್ತೆಂದು ಗೊತ್ತಾಗುತ್ತದೆ.

ವ್ಯಾಕರಣಶಾಸ್ತ್ರ.

(೧೩೪ನೇ ಪುಟದ ಶೇಷ.)

ಹಿಂದೆ ಬಿಂಕಂ, ಬಿಙ್ಕಂ, ಎಂದು ಉಭಯಪ್ರಕಾರವಾಗಿ ಲೇಖನವಿದ್ದರೂ ಉಚ್ಚಾರಣೆಯಲ್ಲಿ ಯಾವವಿಧವಾದ ಭೇದವೂ ಇಲ್ಲದುದರಿಂದ ಬಿಂದುವಿನಿಂದಲೇ ಚರಿತಾರ್ಥವಾಗುವಾಗ ಕವರ್ಗ ಚವರ್ಗ ಪಂಚಮಾಕ್ಷರಗಳನ್ನು ಯಾಕೆ ಸ್ವೀಕರಿಸಬೇಕೆಂದು ಒಂದು ಆಕ್ಷೇಪಣೆಯು ಬಂದಿತ್ತಷ್ಟೆ. ಇಲ್ಲಿ ಆವಿಷಯವಾಗಿ ಅಂದರೆ ಉಚ್ಚಾರಣೆಯಲ್ಲಿ ಭೇದವಿಲ್ಲದಿದ್ದರೂ ಭಿನ್ನಭಿನ್ನವಾದ ಲೇಖನವಿರುವಲ್ಲಿ ಭಿನ್ನಭಿನ್ನವಾದ ಅಕ್ಷರಗಳಿರುವುವು, ಎಂದು ಯಾಕೆ ಹೇಳಕೂಡದು ? ಎಂಬ ವಿಷಯವಾಗಿ ವಿಚಾರಮಾಡೋಣ—

ಕರ್ಣಾಟಕ ಭಾಷೆಯಲ್ಲಿ ರೇಫ ಮತ್ತು ಱಕಾರಗಳನ್ನು ಭಿನ್ನಪ್ರಕಾರವಾಗಿ ಉಚ್ಚರಿಸಲು ಆಗದಿದ್ದರೂ ಆ ರೇಫ ಮತ್ತು ಱಕಾರಗಳನ್ನು ಭಿನ್ನಾಕ್ಷರಗಳೆಂದು ಅಂಗೀಕರಿಸಿರುತ್ತಾರೆ. ಮತ್ತು ಗಿರಿಜಾ ಕಲ್ಯಾಣ ಕಾರನಾದ ಹರಿಹರದೇವನು.

ನೋಡುವೊಡೊಂದಕ್ಕರಮದು ।
ಮಾಡುವೊಡುಚ್ಚರಣೆಗರಿದು ಮೂಱುಂತೆಱಿನಂ ॥

ಕೂಡೆಕವಿತತಿ ವಿಚಾರಿಸ ।
ವೇಡದಱಿಂರಳಕುಳಕ್ಷಳಂಗಳನಿದರೊಳ್ ॥

ಎಂದು ಹೇಳಿರುವಂತೆ ರಳ, ಕುಳ, ಕ್ಷಳಗಳಲ್ಲಿ ರಳಕ್ಕೂ ಕುಳಕ್ಕೂ ಉಚ್ಚಾರಣೆಯಲ್ಲಿ ಈಗ ಯಾವದೊಂದು ವಿಧವಾದ ಭೇದವಿಲ್ಲದಿದ್ದರೂ ಪ್ರಾಚೀನರು ಆ ಅಕ್ಷರಗಳನ್ನು ಕರ್ಣಾಟಕ ಭಾಷೆಯಲ್ಲಿ ಅಂಗೀಕರಿಸಬೇಕೆಂದು ಒಪ್ಪುತ್ತಾರೆ. ಹೀಗೆಯೇ ಬಿಂಕಂ, ಬಿಜ್ಕಂ, ಎಂಬದಾಗಿ ಉಭಯಪ್ರಕಾರವಾಗಿ ಬರೆಯುತಕ್ಕ ಮಾತಿನಲ್ಲಿ ಉಚ್ಚಾರಣೆಯಲ್ಲಿ ಭೇದವಿಲ್ಲದಿದ್ದರೂ ಮೇಲೆ ಹೇಳಿರುವಂತೆ ಕವರ್ಗ ಪಂಚಮಾಕ್ಷರವನ್ನೂ ಮತ್ತು ಬಿಂದುವನ್ನೂ ಅಂಗೀಕರಿಸಬೇಕು. ಹೀಗೆಯೇ ಚವರ್ಗ ಪಂಚಮಾಕ್ಷರವನ್ನೂ ಅಂಗೀಕರಿಸಬೇಕಾಗುವುದು. ಆದುದರಿಂದಲೆ ಭಟ್ಟಾ ಕಳಂಕನೂ ಕೂಡ ಶಬ್ದಾನು ಶಾಸನದ ॥ ತದನ್ತ್ಯೋವಾವರ್ಗೆ ॥ ೪೦॥ ಎಂಬ ಸೂತ್ರದ ವ್ಯಾಖ್ಯಾನದಲ್ಲಿ, ಬಿಂಕಂ, ಬಿಜ್ಕಂ, ಎಂದು ಉಭಯಪ್ರಕಾರವಾಗಿಯೂ ಬರೆದಿರುವನು.

ಹೀಗೆ ಕರ್ಣಾಟಕ ಭಾಷೆಯಲ್ಲಿ ರೇಫ ಜಕಾರಗಳಿಗೂ ಱಕಾರ ಮತ್ತು ಳಕಾರಗಳಿಗೂ ಉಚ್ಚಾರಣೆಯಲ್ಲಿ ಭೇದವಿಲ್ಲದಿದ್ದರೂ ಭಿನ್ನ ಭಿನ್ನಾಕ್ಷರಗಳೆಂದು ಅಂಗೀಕರಿಸಿರುವಂತೆ ಬಿಂಕಂ, ಬಿಜ್ಕಂ, ಇತ್ಯಾದಿಯಲ್ಲಿ ಸಬಿನ್ದುಕವಾಗಿಯೂ ಸಾನುನಾಸಿಕವಾಗಿಯೂ ಲೇಖನವಿರುವದರಿಂದ ಅನುಸ್ವಾರವೂ ಮತ್ತು ಕವರ್ಗ ಪಂಚಮಾಕ್ಷರವೂ ಹೀಗೆಯೇ ಚವರ್ಗವಂಚಮಾಕ್ಷರವೂ ಅಚ್ಚಗನ್ನಡದಲ್ಲಿ ಇರುತ್ತವೆಯೆಂದು ಅಂಗೀಕರಿಸಬೇಕು ಎಂದುಹೇಳಿದಲ್ಲಿ ಇಲ್ಲಿಯೂ ನಮ್ಮ ವಿಚಾರವು ಇದ್ದೇಇರುವದು.

ಭಟ್ಟಾ ಕಲಂಕನು ಬಿಜ್ಕಂ, ಬಿಂಕಂ ಎಂಬದಾಗಿ ಉಭಯಪ್ರಕಾರವಾಗಿ ವ್ಯಾಖ್ಯಾನದಲ್ಲಿ ಬರೆದಿದ್ದಮಾತ್ರಕ್ಕೆ ಇವನ ಮಾತಿಗೆ ಪ್ರಾಮಾಣ್ಯವನ್ನು ಕೊಡಲಾಗುವುದಿಲ್ಲ. ಯಾವಕವಿಯೂ, ಸೂಱ್ಪಂ, ಸೂಜ್ಪಿನಂ— ಇತ್ಯಾದಿ ಪ್ರಯೋಗಗಳನ್ನು ಪ್ರಯೋಗಿಸದಿದ್ದರೂ ಮತ್ತು ನೃಪತುಂಗನು ಕವಿರಾಜಮಾರ್ಗವೆಂಬ ಗ್ರಂಥದಲ್ಲಿ

ಸೂಡುವೆನೆಂಬುದಲ್ಲದಣಮಾಗದು ಸೂಱ್ಪಿನಮೋಘಮೆಂಬುದಂ ।
ಕೂಡುವೆನೆಂಬುದಲ್ಲದಿನಿಸಾವುದುಮಾಗದು ಕೂಱ್ಪಿನೆಂಬುದಂ ॥
ಕಾಡುವೆನೆಂಬುದಲ್ಲದೆ ಸುಮಾರ್ಗದೊಳಾಗದುಕಾಱ್ಪಿನೆಂಬುದಂ ।
ಕೊಡುವೆನೆಂಬುದಲ್ಲದಿಡಲಾಗದು ನಿಕ್ಕುವಕೊಱ್ಪಿನೆಂಬುದಂ ॥

ಎಂದು ಸೂಪ್ಪಂ ಇತ್ಯಾದಿಗಳನ್ನು ನಿಷೇಧಿಸಿದ್ದರೂ॥ ಆದಿಷ್ವಾದ್ರ್ಯಃ ॥ ೫೧೪ ॥ ಎಂಬ ಸೂತ್ರದಲ್ಲಿ, ಸೂಪ್ಪಂ–ಸೂಪ್ಪ್ಸನಂ–ಎಂದು ಬರೆದಿರುವದಲ್ಲದೆ॥ ವಾಗಿ॥ ೪ ೫॥ ಇತ್ಯಾದಿ ಸೂತ್ರಗಳಲ್ಲಿ ತನಗೆ ತೋರಿದಂತೆ ತೇಜುಗಳ—ಪಾಟ್ಗಂ—ಮೂಟ್ಗಂ —ಇತ್ಯಾದಿ ಉದಾಹರಣೆಗಳನ್ನು ಬರೆದು ಸೂತ್ರಗಳ ತತ್ವವಾದ ಅರ್ಥವನ್ನು ಕಂಡು ಹಿಡಿಯದೆ ಅಚುಂಬಿತವಾದ ಹಳಗನ್ನಡದ ಭಾಷೆಯನ್ನು ತಯಾರ್ಮಾಡುತ್ತಾನಾಗಿ ಇವನ ಮಾತಿನಲ್ಲಿ ಪ್ರಾಮಾಣ್ಯವು ಹುಟ್ಟುವದು ಕಷ್ಟವಾದುದರಿಂದ ಈ ಭಟ್ಟಾಕಳಂಕನ ಹೇಳಿಕೆಯು ನಮ್ಮ ವಿಚಾರಕ್ಕೆ ಸಾಧಕವಾಗಲಾರದು.

ನೋಡುವೊಡೊಂದಕ್ಕರಮದು ಇತ್ಯಾದಿಯಾಗಿ ಹರಿಹರದೇವನು ಹೇಳಿರುವನಾದರೂ ಶಬ್ದಮಣಿದರ್ಪಣಕಾರನು

ಅತಿಪೀಡನದಿಂ ರೇಫಾ।
ಶ್ರಿತವಾದ ಱಕಾರಮುಂ ಸಮನ್ವುಡಕಾರಾ।
ಶ್ರಿತ ವಾದಱಟನುಂ ॥—ಎಂದೂ

ಕಾವ್ಯವಲೋಕನಕಾರನು

ಲರಡಗ್ರಹಣದಿಳಱಱಾ
ಕ್ಷರ ವ.ಕ್ಕುಂ ಪೀಡನಪ್ರಯತ್ನಾಶ್ರಯದಿಂ॥ ಎಂದೂ

ಹೇಳಿರುವಂತೆ ಸ್ಥಾನೈಕ್ಯವಿದ್ದರೂ ಪ್ರಯತ್ನಭೇದವಿರುವದರಿಂದ ಲಕಾರ ಹುಟ್ಟುತಕ್ಕ ದನ್ತಸ್ಥಾನದಲ್ಲಿ ಪ್ರಯತ್ನಾತಿಶಯದಿಂದ ಳಕಾರವೂ ರೇಫವು ಹುಟ್ಟುವ ಮೂರ್ಧಸ್ಥಾನದಲ್ಲಿ ಪ್ರಯತ್ನಾತಿಶಯದಿಂದ ಱಕಾರವೂ ಡಕಾರವು ಹುಟ್ಟುವ ಮೂರ್ಧಸ್ಥಾನದಲ್ಲಿ ಪ್ರಯತ್ನಾತಿಶಯದಿಂದ ಟಕಾರವೂ ಹುಟ್ಟುವುದರಿಂದ ತತ್ತತ್ಸ್ಥಾನದಲ್ಲಿ ಪ್ರಯತ್ನಭೇದದಿಂದ ಭಿನ್ನ ಭಿನ್ನವಾಗಿ ಈ ಅಕ್ಷರಗಳು ಉಚ್ಚರಿತವಾಗುವುದರಿಂದ ಭಿನ್ನಭಿನ್ನವಾಗಿಯೇ ಶ್ರುತವಾಗಬೇಕು. ಇದೇರೀತಿಯಲ್ಲಿ ತಮಿಳಿನಲ್ಲಿ ಱ ಮತ್ತು ಱಕಾರಗಳನ್ನು ಉಚ್ಚಾರಣೆ ಮಾಡುತ್ತಿರುವರು. ಆ ಭಾಷೆಯಲ್ಲಿ ಱ ಮತ್ತು ಱಕಾರಗಳ ಉಚ್ಚಾರಣೆಯನ್ನು ಸಾಮಾನ್ಯವಾಗಿ ಮಾಡುತ್ತಿದಾರೆ. ಹಾಗೆಯೇ ಲಕಾರಕ್ಕೂ ಳಕಾರಕ್ಕೂ ಉಚ್ಚಾರಣೆಯ ಭೇದವು ಕಾರ್ಣಾಟಕರಲ್ಲಿಯೂ ವಿದಿತವಾಗಿಯೇ ಇರುವದು. ಆದರೆ ಱ ಮತ್ತು ಳಕಾರಕ್ಕೂ ಱ ಮತ್ತು ರೆಫಕ್ಕೂ ಇರತಕ್ಕ ಸೂಕ್ಷ್ಮವಾದ ಉಚ್ಚಾರಣಾ ಭೇದವು ಸರ್ವಸಾಮಾನ್ಯವಾಗಿ ಗೊತ್ತಾಗದ ಮಾತ್ರಕ್ಕೆ ಉಚ್ಚಾರಣೆಯಲ್ಲಿ ಭೇದವಿಲ್ಲವೆನ್ನುವದು ಸರಿಯಾಗಿ ಕಾಣುವದಿಲ್ಲ. ಮು

ತ್ತು ಜನಗಳು ಉಚ್ಚಾರಣೆಯಲ್ಲಿರತಕ್ಕ ಸೂಕ್ಷ್ಮವನ್ನು ತಿಳಿದು ಉಚ್ಚರಿಸುವಷ್ಟು ವಾಗಿಂದ್ರಿಯಪಾಟವವಿಲ್ಲದವರಾಗುತ್ತಾ ಬಂದಿದಾರೆ. ಆದುದರಿಂದಲೆ ವರ್ಣಮಾಲೆಯಲ್ಲಿ ಯ ರ ಲ ವ ಶ ಷ ಸ ಹ ಳ ಕ್ಷ ಱ ಇತಿ—ಎಂದು ಪ್ರಾಚೀನರು ಹೇಳುತ್ತಿರಬಹುದಾದ, ಱ, ಎಂಬ ಅಕ್ಷರದ ಉಚ್ಚಾರಣೆಯನ್ನು ಅರಿಯದೆ ಱ ಮತ್ತು ಇತಿ ಎಂಬ ಎರಡನ್ನೂ ಸೇರಿಸಿ, ರೈತಿ ಯೆಂದು ಈಗ್ಯೆ ಕೊಂಚದಿನಕ್ಕೆ ಮುಂಚೆ ಹೇಳುತ್ತಿದ್ದುದು ಸರ್ವರಿಗೂ ತಿಳಿದಿರಬಹುದು. ಹೀಗೆ ನವೀನರು ಉಚ್ಚಾರಣೆ ಮಾಡಲು ಅಶಕ್ತರಾದ ಮಾತ್ರಕ್ಕೆ ಪ್ರಾಚೀನರು ಆ ಅಕ್ಷರವನ್ನು ಉಚ್ಚಾರಣೆ ಮಾಡುತ್ತಿರಲಿಲ್ಲವೆಂದು ಹೇಳುವದು ಹೇಗೆ? ಆದುದರಿಂದ ಹೊಸಗನ್ನಡದಲ್ಲಿ ರೇಫಕ್ಕೂ ಱಕಾರಕ್ಕೂ ವ್ಯತ್ಯಾಸವಿಲ್ಲದೆ ಈಗ ಉಚ್ಚಾರಣೆ ಮಾಡುವಂತೆ ಹರಿಹರದೇವನ ಕಾಲದಲ್ಲಿಯೇ ಱಱ ಅಂದರೆ ಱಕಾರಕ್ಕೂ ಳಕಾರಕ್ಕೂ ಇರತಕ್ಕ ಉಚ್ಚಾರಣೆಯ ಸೂಕ್ಷ್ಮವು ಗೊತ್ತಿಲ್ಲದೆ ಹೋಗಿತ್ತೆಂದು ಹೇಳಬಹುದೇ ಹೊರತು ಪ್ರಾಚೀನರು ಱಕಾರ ಮತ್ತು ಳಕಾರಗಳನ್ನು ಭಿನ್ನಭಿನ್ನವಾಗಿ ಉಚ್ಚರಿಸುತ್ತಿರಲಿಲ್ಲವೆನ್ನುವದು ದುಸ್ಸಾಧವಾಗಿ ಕಾಣುವುದು. ಆದುದರಿಂದಲೆ ಕೇಶಿಯೇ ಮೊದಲಾದವರು ಱಕಾರ ಮತ್ತು ಳಕಾರಕ್ಕೆ ಭೇದ ತಿಳಿಯುವದಕ್ಕಾಗಿ ಱಱ ಮತ್ತು ಕುಳವೆಂದು ಹೆಸರನ್ನು ಕೊಟ್ಟಂತೆ ಕಾವ್ಯಾಲೋಕನಕಾರನು ಹೆಸರನ್ನು ಕೊಡದೆ ಸಾಮಾನ್ಯವಾಗಿ—

ಲರಡಗ್ರಹಣದೆಳ ಱಱಾ।
ಕ್ಷರ ಮಕ್ಕುಂ ಪೀಡನಪ್ರಯತ್ನಾಶ್ರಯದಿಂ॥ ಎಂದು ಹೇಳಿದಾನೆ.

ಹೀಗೆ ಬಿಜ್ಕಂ—ಬಿಂಕಂ ಎಂಬ ಲೇಖನಗಳಲ್ಲಿ ಎರಡುವಿಧವಾಗಿ ಪ್ರಾಚೀನರು ಉಚ್ಚರಿಸುತ್ತಿದ್ದರೆನ್ನುವದಕ್ಕಾಗಲೀ ಉಚ್ಚರಿಸಬಹುದು ಎನ್ನುವದಕ್ಕಾಗಲೀ ಆಧಾರವೇನೂ ಕಾಣುವುದಿಲ್ಲ. ಹೀಗೆ ಇರುವದರಿಂದ ಅವಶ್ಯವಾಗಿ ಇರಬೇಕಾದ ಬಿಂದುವಿನಿಂದಲೇ ಚರಿತಾರ್ಥವಾಗುವಾಗ ಪಂಚಮಾಕ್ಷರವನ್ನು ಯಾಕೆ ಸ್ವೀಕರಿಸಬೇಕೋ ಗೊತ್ತಿಲ್ಲ. (ಸಶೇಷ.)

ಬೆಕ್ಕು ನರಿಯು.

ಅಭಿನಯಿಸಿ ತೋರಿಸತಕ್ಕ ಕಥೆ.

ಒಂದು ಬೆಕ್ಕು ಕಾಡಿನಲ್ಲಿ ತಿರುಗುತ್ತಿರುವಾಗ ಒಂದು ನರಿಯನ್ನು ಕಂಡಿತು,

ಆಗ ಬೆಕ್ಕು ನರಿಯು ಕ್ಷೇಮಸಮಾಚಾರವನ್ನು ಕೇಳಿದುದಕ್ಕೆ ನರಿ ಇದನ್ನು ಹಾಸ್ಯಮಾಡಿ ನಿನಗೆ ಎಷ್ಟು ಮಾಯೋಪಾಯಗಳು ತಿಳಿಯುವುವು ಎಂದು ಕೇಳಿತು, ಆಗ ಬೆಕ್ಕು ವಿನಯದಿಂದ ಅಯ್ಯಾ, ನನಗೆ ಒಂದೇ ಉಪಾಯ ತಿಳಿಯುವುದು. ಬೇಟೆಯ ನಾಯಿಗಳು ಅಟ್ಟಿಕೊಂಡು ಬಂದರೆ ಮರವನ್ನು ಹತ್ತಿ, ನನ್ನ ಪ್ರಾಣ ಉಳಿಸಿಕೊಳ್ಳುವೆನು ಎಂದಿತು. ಅದಕ್ಕೆ ಬೆಕ್ಕು ನಕ್ಕು, ನನ್ನಲ್ಲಿ ಉಪಾಯಗಳ ಜೀಲವೇ ಇದೆ. ನನ್ನ ಸಂಗಡ ಬಾ, ನಿನಗೂ ಕೆಲವು ಮಾಯೆಗಳನ್ನು ಕಲಿಸುವೆನು, ಎಂದು ಹೇಳಿ ಇದನ್ನು ಸ್ವಲ್ಪ ಮುಂದಕ್ಕೆ ಕರೆದುಕೊಂಡು ಹೋಗುತ್ತಿರುವಷ್ಟರಲ್ಲಿ ಒಬ್ಬ ಬೇಟೆಗಾರನು ಕೆಲವು ನಾಯಿಗಳನ್ನು ಹಿಂದೆ ಕರೆದುಕೊಂಡು ಬಂದನು. ಬೆಕ್ಕು ಆಗಲೇ ಅಲ್ಲಿದ್ದ ಒಂದು ಮರವನ್ನು ಹತ್ತಿ, ಎಲೆಗಳ ನಡುವೆ ಅಡಗಿಕೊಂಡಿತು. ನರಿಗೆ ಉಪಾಯ ತೋರದೆ ಬೇಟೆ ನಾಯಿಗಳ ಕೈಗೆ ಸಿಕ್ಕಿ ಸತ್ತುಹೋಯಿತು.

ಇದನ್ನು ಅಭಿನಯದಿಂದ ಆಡಿಸುವದು.

ಪಾತ್ರಗಳು.—ಇಬ್ಬರು ಹುಡುಗರು, ಅವರಲ್ಲಿ ಗೋಪಾಲನೆಂಬುವನು ಬೆಕ್ಕಿನಂತೆಯೂ ರಾಮನೆಂಬುವನು ನರಿಯಂತೆಯೂ ನಟಿಸುವರು. ಗೋಪಾಲನು ರಾಮನೂ ಎದುರು ಬದುರಾಗಿ ಬರತಕ್ಕುದು, ರಾಮನು ಕೈಗಳನ್ನು ಹಿಂದಕ್ಕಿಟ್ಟು ನೆಲದಕಡೆ ನೋಡುತ್ತ ಬರುವನು. ಗೋಪಾಲನು ಅವನನ್ನು ನೋಡಿ, ಸ್ವಲ್ಪ ಹೊತ್ತು ಅಲ್ಲಿಯೇ ನಿಂತು ತನ್ನಲ್ಲಿ ತಾನೇ ಮಾತನಾಡಿಕೊಳ್ಳುವನು.)

ಗೋಪಾಲ.—(ಬೆಕ್ಕಿನಂತ ಅಭಿನಯಿಸುತ್ತ, ತನ್ನಲ್ಲಿ) "ಇಗೋ ನರಿಯಪ್ಪನವರು. ಇವರು ಬಲು ಜಾಣರು, ಎಲ್ಲರೂ ಇವರನ್ನು ಹೊಗಳುವರು. ಆಗಲಿ ನಾನೂ ಮಾತನಾಡಿ ನೋಡುವೆನು" (ಎಂದು, ರಾಮನ ಕಡೆಗೆ ಬಡಿಹೋಗಿ, ಅವನಿಗೆ ಕೈಮುಗಿದು, ಅತುರದಿಂದ ಹೀಗೆ ಹೇಳುವನು (ಬಹಿರಂಗವಾಗಿ) "ಏನು ಭಾವನವರೇ, ಎಲ್ಲಿಂದ ಬಂದಿರಿ? ಕ್ಷೇಮವೇ! ಪುತ್ತೇನು ವಿಶೇಷ! ನಿಮಗೆ ಈಗ ಸೌಖ್ಯವಷ್ಟೆ"

ರಾಮ.—(ನರಿಯಂತೆ ಅಭಿನಯಿಸುತ್ತ, ಗೋಪಾಲನ ತಲೆಯಿಂದ ಪಾದದ ತನಕ ತಿರುತಿರುಗಿ ನೋಡಿ, ಗದ್ದದಿಂದ ಅಲಕ್ಷ್ಯವಾಗಿ ಮಾತಾಡುವನು) ಬುದ್ಧೀ ತಾವು ಇಲಿಗಳನ್ನು ಬೇಟೆಯಾಡುವ ಪುಣ್ಯಾತ್ಮರು? ನನ್ನ ಕ್ಷೇಮವನ್ನು ಕೇಳಿದರೆ ನಿಮಗೆ ಆಗುವ ಲಾಭವೇನು! ನೀವು ಏನಾದರೂ ಹೊಸದಾಗಿ ಕಲಿತಿರುವಿರಾ! ಎಷ್ಟು ಮಾಯೆಗಳನ್ನು ಬಲ್ಲಿರಿ?"

ಗೋಪಾಲ.—ಬೆಕ್ಕಿನಂತೆ ಕೈಗಳನ್ನು ಜೋಡಿಸಿಕೊಂಡು, ದೈನ್ಯದಿಂದ ಮೆಲ್ಲಗೆ ಹೇಳುತ್ತಾನೆ") ನನಗೆ ಒಂದೇ ಉಪಾಯ ತಿಳಿಯುವುದು, ಬೇಟೆನಾಯಿ ಅಟ್ಟಿಕೊಂಡು ಬಂದರೆ ಮರವನ್ನು ಹತ್ತಿ ಪ್ರಾಣ ಉಳಿಸಿಕೊಳ್ಳುವೆನು."

ರಾಮ—ಇಷ್ಟೇನೇ !! ನನಗೆ ಹಲವು ಉಪಾಯಗಳು ತಿಳಿಯುವುವು. ಅಲ್ಲದೆ ನನ್ನ ಬಳಿ ಬಂದು ಚೀಲದ ತುಂಬ ಮಾಯೆಗಳು ತುಂಬಿವೆ. ನಿನ್ನೆನ್ನು ನೋಡಿದರೆ ವ್ಯಸನವಾಗುತ್ತದೆ. ನನ್ನ ಸಂಗಡ ಬಾ. ನಿನಗೂ ಕೆಲವನ್ನು ಹೇಳಿ ಕೊಡುವೆನು. ಬೇಟೇನಾಯಿಗಳ ದೆಸೆಯಿಂದ ತಪ್ಪಿಸಿಕೊಳ್ಳುವುದಕ್ಕೂ ಉಪಾಯವನ್ನು ಕಲಿಸುವೆನು." (ಎಂದು ಜಂಭವಾಗಿ ಮಾತನಾಡುತ್ತ, ತಲೆಯನ್ನು ಮುಂದಕ್ಕೆ ಇಟ್ಟು ಕೈಗಳನ್ನು ಹಿಂದಕ್ಕೆ ಜಾಚಿ ನಡೆಯುವನು.)

ಗೋಪಾಲ—" ಇಗೋ ಬೇಟೆಗಾರರು ಮತ್ತು ನಾಯಿಗಳು !! ಇಗೋ, ನಾನು ಮರಾ ಹತ್ತುವೆನು." (ಎಂದು ಓಡಿಹೋಗಿ, ಬಂದು ಮೂಲೆಯಲ್ಲಿ ಅಡಗಿ, ಬೇಟೆಗಾರರಿಗೂ ನಾಯಿಗಳಿಗೂ ಎದುರಾಗಿ ನಿಂತಿದ್ದರೂ ಅಪಾಯವಿಲ್ಲದಂತೆ ನಟಿಸುವನು. ಇಷ್ಟರಲ್ಲಿ ದೊಡ್ಡ ಶಬ್ದವಾಗುವುದು. ಆಗ ಭಯಗೊಂಡಂತೆ ಅಭಿನಯಿಸುತ್ತ, (ರಾಮನಕಡೆಗೆ ತಿರುಗಿ)—" ಎಲ್ಲಿ? ನಿನ್ನ ಮಾಯೆಗಳ ಚೀಲವನ್ನು ಈಗಲೇ ಬಿಚ್ಚು. ಒಳ್ಳೇ ಸಮಯ " (ಎಂದು ಹೇಳುವನು.)

ರಾಮ—(ದುಃಖವನ್ನು ನಟಿಸುತ್ತ) ಕೈಬೆರಳುಗಳನ್ನು ಹಿಸಿಕಿಕೊಳ್ಳುತ್ತಿರುವನು. ಅಷ್ಟರಲ್ಲಿ ಬೇಟೆನಾಯಿಗಳು ಬಂದು ಅವನನ್ನು ಸೀಳಹಾಕುವುವು. ಆಗ ಅವನು ನೆಲದಲ್ಲಿ ಬಿದ್ದು ಹೊರಳುತ್ತ, ಸತ್ತವನಂತೆ ಬಿದ್ದಿರುವನು.

ಗೋಪಾಲ—(ರಾಮನ ಅವಜ್ಞತೆಯನ್ನು ನೋಡಿ) " ಏನಯ್ಯ ! ನಿಮ್ಮ ಗತಿ ಹೀಗಾಯಿತು? ನಿಮ್ಮ ಮಾಯೆಯುಚೀಲವೇನಾಯಿತು ! ಕೆಲಸಕ್ಕೆ ಬಂದ ಉಪಾಯಗಳು ಸಾವಿರವಿದರೂ ಒಂದು ವಿದ್ಯೆಗೆ ಸಮವಲ್ಲ. ನೋಡಿ ! " (ಎಂದು ಜಯಹೊಂದಿದಂತೆ ನಟಿಸುತ್ತ, ಜಯಶೀಲನಾದ ಅರಸನಂತೆ ಗಂಭೀರವಾಗಿ ಹೋಗುವನು.)

ಕಥೆಗೆ ಸಂಬಂಧಿಸಿದ ಉಕ್ತ್ಯಲೇಖನ.

ಕೆಲಸಕ್ಕೆ ಬಾರದ ಹಲವು ವಿದ್ಯೆಗಳಿಂದ ಫಲವಿಲ್ಲ. ಲಾಭಕರವಾದ ವಿದ್ಯೆ

ಒಂದೇ ಸಾಕು. ನೋಡು! ಸಾವಿರ ಮಾಯೆಗಳನ್ನು ಕಲಿತಿದ್ದರೂ ನರಿ ಸತ್ತಿತು. ಸಣ್ಣ ವಿದ್ಯೆ ಒಂದನ್ನು ಕಲಿತ ನರಿ ಬದುಕಿಕೊಂಡಿತು.

(ಇದನ್ನು ಹುಡುಗರೆಲ್ಲರಿಂದಲೂ ಬರೆಯಿಸುವುದು.)

ಕೆ. ರಾಮು.

ಗ್ರಂಥವಿಮರ್ಶೆ.

ಕರ್ಣಾಟಕ ಕವಿಚರಿತೆಯೆಂಬ ಗ್ರಂಥದ ಪ್ರಥಮ ಸಂಪುಟವು ಮೈಸೂರ, ಆರ್ಕ್ಯಲಾಜಿಕಲ್ ಡಿಪಾರ್ಟ್‌ಮೆಂಟಿನಲ್ಲಿರುವ, ಮಾ॥ ರಾ॥ ಆರ್. ಎ. ನರಸಿಂಹಾಚಾರ್ ಎಂ. ಎ. ಯವರಿಂದಲೂ, ಮೈಸೂರ ಗವರ್ನಮೆಂಟ್ ವಿದ್ಯಾಭ್ಯಾಸದ ಇಲಾಖೆಯ ಟ್ರಾನ್ಸ್ಲೇಟರಾದ ಮಾ॥ ರಾ॥ ಎಸ್. ಜಿ. ನರಸಿಂಹಾಚಾರ್ಯರಿಂದಲೂ ವಿರಚಿತವಾಗಿರುವುದು. ಈ ಗ್ರಂಥಕಾರರು ಮುದ್ರಿತವಾದ ಒಂದು ಪ್ರತಿಯನ್ನು ದಯವಿಟ್ಟು ನಮ್ಮಲ್ಲಿಗೆ ಕಳುಹಿಸಿಕೊಟ್ಟರು. ಅದಕ್ಕಾಗಿ ನಾವು ತುಂಬಾ ಕೃತಜ್ಞರಾಗಿರುತ್ತೇವೆಯಲ್ಲದೆ ಅತ್ಯಾದರದಿಂದ ಇದನ್ನು ಆಮೂಲಾಗ್ರವಾಗಿ ಪರಿತೀಲಿಸಿದೆವು.

ಈ ಕರ್ಣಾಟಕ ಕವಿಚರಿತೆಯಲ್ಲಿ 1700 ಕ್ಕಿಂತಲೂ ಹೆಚ್ಚಾಗಿ ಗ್ರಂಥನಾಮಧೇಯವನ್ನು ಕೊಟ್ಟಿದೆ. ಆದರೂ ಈ ಪ್ರಥಮ ಸಂಪುಟದಲ್ಲಿ ಖಿಲಗ್ರಂಥಗಳೂ ಸೇರಿ ಸುಮಾರು 160 ಗ್ರಂಥಗಳ ವಿಷಯವನ್ನೂ 200 ಕ್ಕಿಂತಲೂ ಸ್ವಲ್ಪ ಹೆಚ್ಚಾದ ಕವಿಗಳ ವಿಷಯವನ್ನೂ ವಿಚಾರಮಾಡಿ ಬರೆದಿರುತ್ತಾರೆ.

ಈ ಕರ್ಣಾಟಕ ಕವಿಚರಿತೆಯನ್ನು ಚೆನ್ನಾಗಿ ನೋಡಿದಲ್ಲಿ ಕೇಶಿರಾಜನೂ ನೃಪತುಂಗನೂ ಇನ್ನೂ ಇತರರೂ ಹೇಳಿರತಕ್ಕ ಅನೇಕ ಪ್ರಾಚೀನ ಕವಿಗಳ ಗ್ರಂಥಗಳು ಖಿಲವಾಗಿರಬಹುದೆಂಬ ಸಂಗತಿಯು ವಿಶದವಾಗದಿರಲಾರದು.

ಈ ಕರ್ಣಾಟಕ ಕವಿಚರಿತೆಯು ಆದ್ಯಂತಗಳಲ್ಲಿ ಅವತರಣಿಕೆ, ಅನುಬಂಧಗಳೆಂಬ ಭಾಗಗಳು ಸೇರಿಸಲ್ಪಟ್ಟಿರುವುವು. ಇವುಗಳೊಳಗೆ ಅವತರಣಿಕೆಯಲ್ಲಿ ದ್ರಾವಿಡಭಾಷೆ, ಅವುಗಳಲ್ಲೊಂದಾದ ಕರ್ಣಾಟಕಭಾಷೆ, ಕರ್ಣಾಟಕ ಶಬ್ದಾರ್ಥ, ಭಾಷೆಯ ಅವಸ್ಥಾಭೇದ, ಗ್ರಂಥಾರಂಭಕಾಲ, ಗ್ರಂಥಕಾರರಿಗಿದ್ದ ಪ್ರೋತ್ಸಾಹ ಮುಂತಾದ ಕರ್ಣಾಟಕಭಾಷಾವಿಷಯಕ್ಕೆ ಸಂಬಂಧಪಟ್ಟ ಉಪನ್ಯಾಸವನ್ನು ವಿಸ್ತಾರವಾಗಿ ಬರೆದಿರುವರು. ಇದಲ್ಲದೆ ಕವಿಗಳ ವಿಷಯದಲ್ಲಿ ಇದುವರೆವಿಗಿದ್ದ ಭಿನ್ನಾ

ಭಿಪ್ರಾಯಗಳೂ ಉದ್ದಾಮಕವಿಗಳಾಗಿದ್ದರೂ ಅವರ ಹೆಸರು ಕೂಡ ಅನೇಕರಿಗೆ ತಿಳಿದಿರಲಿಲ್ಲವೆಂಬ ಸಂಗತಿಯೂ ಪ್ರಸಿದ್ಧರಾದ ಕವಿಗಳ ಗ್ರಂಥಗಳಲ್ಲಿಯೂ ಕೆಲವು ಗ್ರಂಥದ ನಾಮಧೇಯವು ಕೂಡ ಜನಗಳಿಗೆ ಗೊತ್ತಾಗಿರಲಿಲ್ಲವೆಂಬ ಸಂಗತಿಯೂ ಇದೇ ಪ್ರಕರಣದಲ್ಲಿಯೇ ಸ್ಪಷ್ಟವಾಗಿರುವದು.

ಈ ಅವತರಣಿಕೆಯೆಂಬ ಭಾಗದಲ್ಲಿ ಕರ್ಣಾಟಕಭಾಷೆಗೆ ಸಂಬಂಧಪಟ್ಟ ವಿಷಯವನ್ನು ವಿಸ್ತಾರವಾಗಿ ಉಪನ್ಯಾಸಮಾಡಿದ್ದರೂ ಕರ್ಣಾಟಕವೆಂಬ ಪದದ ಅರ್ಥದ ವಿಷಯದಲ್ಲಿ ಇತರ ಪಂಡಿತರ ಅಭಿಪ್ರಾಯವನ್ನು ಮಾತ್ರ ಹೇಳಿರುವರು. ಕರ್ಣಾಟಕವೆಂಬ ಶಬ್ದಕ್ಕೆ ಈ ಭಾವವನ್ನು ಹೇಳುವುದು ಸಂಗತವೆಂದು ತೋರುವುದು. ವಿಚಾರ ಮಾಡಿದಲ್ಲಿ ತಮಿಳಿನಲ್ಲಿ—ವೆಡುಗರರಿವಾಳರ್ ವಾ ಕರುನಾಡರ್—ಇತ್ಯಾದಿಯಾಗಿ ಕರುನಾಡು ಎಂಬ ಒಂದು ದೇಶವನ್ನು ಹೇಳಿರುವುದಲ್ಲದೆ ತಮಿಳಿನ ಸಕಾರಾದಿ ನಿಘಂಟುವಿನಲ್ಲಿ ಕರು ಎಂಬ ಶಬ್ದಕ್ಕೆ ದಿಣ್ಣೆ ಅಥವಾ ಎತ್ತರ ಎಂಬ ಅರ್ಥವನ್ನು ಹೇಳಿರುವುದರಿಂದ ಕರುನಾಡು ಎಂಬ ಪದಕ್ಕೆ ಎತ್ತರವಾದ ದೇಶವೆಂದರೆ ಮೇಲ್ನಾಡು ಎಂದು ಅರ್ಥವನ್ನು ಕಲ್ಪಿಸಿದಲ್ಲಿ ತಮಿಳರು "ಮೇಲ್ನಾಟಾರ್, ಕೀಳ್ನಾಟಾರ್" ಎಂದರೆ ಮೇಲ್ನಾಡಿನವರು ಕೀಳ್ನಾಡಿನವರು ಎಂಬುದಾಗಿ ಹೇಳುವದೂ ಉಪಪತ್ತಿಂಭಕವಾಗುವದು. ಮತ್ತು ಮೈಸೂರ್ ಎಂಬ ಹೆಸರನ್ನು ಮಹೀಶೂರ ಅಥವಾ ಮಹೀಸುರ ಎಂಬುದಾಗಿಯೂ, ಮಣಲೂರ್ ಎಂಬುದನ್ನು ಮಣಿಪುರವೆಂಬುದಾಗಿಯೂ ಬದಲಾಯಿಸಿಕೊಂಡಿರುವಂತೆ ಮೇಲ್ನಾಡು ಎಂದು ಅರ್ಥವಾಗುವ ಕರುನಾಡು—ಎಂಬ ಪದವನ್ನೇ ಕರ್ಣಾಟವೆಂದು ಬದಲಾಯಿಸಿಕೊಂಡಿರಬಹುದೆಂದು ಕಲ್ಪಿಸಬಹುದಾಗಿಯೂ ಇರುವದು.

ಕರ್ಣಾಟಕ ಕವಿಚರಿತೆಯೆಂಬ ದ್ವಿತೀಯ ಪ್ರಕರಣದಲ್ಲಿ ಸಸುಂತಭದ್ರ, ಕವಿ ಪರಮೇಷ್ಠಿ ಮುಂತಾದ ಕವಿಗಳನ್ನು ಆರಂಭಿಸಿಕೊಂಡು ಕ್ರಮವಾಗಿ ಕ್ರಿಸ್ತಾಬ್ದದ 1400 ರವರೆಗೆ ಆಯಾಯಾ ಕಾಲದಲ್ಲಿದ್ದ ಸುಮಾರು 200 ಜನಕ್ಕಿಂತ ಹೆಚ್ಚಾದ ಕವಿಗಳ ವಿಷಯವನ್ನು ವಿಚಾರಕ್ಕೆ ತೆಗೆದುಕೊಂಡು ನಂಬಬಹುದಾದಷ್ಟು ಮಟ್ಟಿಗೆ ಆಯಾಯ ಕವಿಗಳ ಕಾಲವನ್ನೂ ಅವರವರು ಮಾಡಿರುವ ಗ್ರಂಥಗಳನ್ನೂ ಅವರಿಗಿದ್ದ ಆಪಲಂಬನವನ್ನೂ ಅವರವರ ಜಾತಿ ಮೊದಲಾದುವುಗಳನ್ನೂ ನಿರ್ಧರಿಸಿರುವುದಲ್ಲದೆ ಒಂದೇ ಹೆಸರುಳ್ಳ ಇಬ್ಬರು ಕವಿಗಳಲ್ಲಿ ಯಾರು ಯಾವಕಾಲದಲ್ಲಿದ್ದರೆಂಬಂಶವನ್ನು ಸಾಕಾದಷ್ಟು ನಿದರ್ಶನಗಳಿಂದ ವಿಶದವಾಗಿ ತಿಳಿಯಪಡಿಸಿರುವನು. ಇಷ್ಟೇ

ಅಲ್ಲದೆ ಅನ್ಯಾಯ ಗ್ರಂಥಗಳಲ್ಲಿ ಉದ್ಯಾನ, ರಸಾಲಾದಿವೃಕ್ಷಗಳು ಮುಂತಾದುವುಗಳಮೇಲೆ ಬರೆದಿರತಕ್ಕ ಸಾರವತ್ತಾದ ಕೆಲವು ಪದ್ಯಗಳನ್ನು ತೆಗೆದು ಬರೆದಿರುವುದಲ್ಲದೆ ಕೆಲವು ಕವಿಗಳು ಬರೆದಿರತಕ್ಕ ಏಕಾಕ್ಷರ, ದ್ವ್ಯಕ್ಷರ, ಯಮಕ ಮುಂತಾದ ಶಬ್ದಾಲಂಕಾರದ ಪದ್ಯಗಳನ್ನು ಬರೆದು ಕವಿಗಳ ಯೋಗ್ಯತೆಯನ್ನು ಕನ್ನಡಿಸಿರುವರು.

ಈ ಪ್ರಕರಣದಲ್ಲಿ ಹೇಳಿರತಕ್ಕ ಕವಿಗಳಲ್ಲಿ ಕೆಲವರು ಗ್ರಂಥಕಾರರು. ಕೆಲವರು ಇತರ ಕವಿಗಳಿಂದ ಗೃಹೀತನಾಮಧೇಯರು, ಮತ್ತೆ ಕೆಲವರು ಶಾಸನಲೇಖಕರು, ಇನ್ನು ಕೆಲವರು ಅನೇಕರಿಂದ ಪೂಜ್ಯರೆಂದು ಗಣಿಸಲ್ಪಟ್ಟವರು. ಹೀಗೆ ಯಾವುದಾದರೂ ಒಂದು ವಿಷಯದಲ್ಲಿ ಪ್ರತೀತರಾದವರ ವಿಷಯವು ಹೇಳಲ್ಪಟ್ಟಿರುವುದಲ್ಲದೆ ಸಣ್ಣಸಣ್ಣ ಕವಿಗಳ ವಿಷಯವೂ ಕೂಡ ಬಿಡದೆ ಅಲ್ಲಲ್ಲಿ ವಿಚಾರಮಾಡಲ್ಪಟ್ಟಿರುವುದು. ಹೀಗೆ ಇರತಕ್ಕ ಗ್ರಂಥವೆಲ್ಲವನ್ನೂ ಅತ್ಯಂತವಾಗಿ ನೋಡುವುದೂ ಸರ್ವಜನರಿಗೂ ವೇದ್ಯವಾಗುವಂತೆ ಅವರವರ ಕಾಲ ಮುಂತಾದುವುಗಳನ್ನು ಸಮಂಜಸವಾಗಿರುವಂತೆ ನಿರ್ಧರಿಸುವುದೂ ಕೂಡ ಸಾಮಾನ್ಯವಾದ ಕಾರ್ಯವಲ್ಲವೆಂದು ಎಲ್ಲರೂ ಬಲ್ಲರು. ಇಂತಹ ಗ್ರಂಥವನ್ನು ಕನ್ನಡದಲ್ಲಿ ಇದುವರಿಗೆ ಯಾರೂ ಬರೆದಿಲ್ಲ.

ಆದರೆ ಸರ್ವಜನ ಸಮ್ಮತವಾಗುವಹಾಗೆ ಕವಿಗಳ ಕಾಲ ಮುಂತಾದುವುಗಳನ್ನು ವಿಚಾರ ಮಾಡಿರುವ ಈ ಪ್ರಕರಣದಲ್ಲಿ ಛಂದೋಂಬುಧಿ, ಮತ್ತು ಕರ್ಣಾಟಕ ಕಾದಂಬರಿಯೆಂಬ ಗ್ರಂಥ ದ್ವಯವನ್ನು ಮಾಡಿರುವನೆಂದು ಹೇಳುವ ನಾಗವರ್ಮನ ವಿಚಾರವನ್ನು ನೋಡಿದರೆ ಇನ್ನೂ ಬರೆಯಬೇಕಾದಂಶವಿರುವುದೆಂದು ಕಾಣುವುದು.

ನಾಗವರ್ಮನು ಛಂದೊಂಬುಧಿಯಲ್ಲಿ " ಅರಸಂರಕ್ಕಸಗಂಗಂ । ಗುರುಗಳ್ಗೆಗ ಟ್ಟಿಜಿತಸೇನದೇವರ್ " ॥ ಎಂದು ತನಗೆ ರಾಜನು ರಕ್ಕಸಗಂಗನೆಂದೂ ಅಜಿತಸೇನದೇವರು ಗುರುಗಳೆಂದೂ ಹೇಳಿಕೊಂಡಿದಾನೆ. ಆದರೆ ಅವನೇ ಮಾಡಿದುದೆಂದು ಹೇಳುವ ಕರ್ಣಾಟಕ ಕಾದಂಬರಿಯಲ್ಲಿ ಆ ರಕ್ಕಸಗಂಗನಸುದ್ದಿಯನ್ನಾಗಲೀ ಅಜಿತಸೇನಾಚಾರ್ಯರ ಸುದ್ದಿಯನ್ನಾಗಲೀ ಎತ್ತುವುದಿಲ್ಲ. ಅವನಿಗಿಂತ ಬೇರೆಯಾದ ಭೋಜರಾಜನನ್ನು ಹೊಗಳಿದಾನೆ. ಹೀಗೆ ಒಬ್ಬ ಕವಿಯೇ ಒಂದು ಗ್ರಂಥದಲ್ಲಿ ಒಬ್ಬನನ್ನೂ ಮತ್ತೊಂದು ಗ್ರಂಥದಲ್ಲಿ ಮತ್ತೊಬ್ಬನನ್ನೂ ಸ್ತುತಿಮಾಡಲು ಕಾರಣವೇನೋ ಗೊತ್ತಾಗುವುದಿಲ್ಲವೆಂಬ ಸಂದೇಹವು ವಾಚಕರಿಗೆ ಉಂಟಾಗಬಹುದು.

ಇದಲ್ಲದೆ ಕೇಶವರಾಜ ಚಮೂಪಂ ಶಾಸನವಂ ಪೇಳ್ದಿನಂತದಂ—ಇತ್ಯಾದಿ ಯಾದ ಶಾಸನವು ಸುಮಾರು 1180 ರಲ್ಲಿ ಬರೆದುದೆಂದು 196 ನೇ ಪುಟದಲ್ಲಿಯೂ 1195 ರಲ್ಲಿ ಬರೆದುದೆಂದು 284 ನೇ ಪುಟದಲ್ಲಿಯೂ ಹೇಳಿರುವುದು. ಹೀಗೆ ಒಂದೇ ಶಾಸನವು ಬೇರೆ ಬೇರೆ ಕಾಲದ್ದೆಂದು ಹೇಳುವುದು ಹೇಗೆ? ಎಂಬ ಸಂದೇಹವು ವಾಚಕರಿಗೆ ಉಂಟಾಗಬಹುದು.

ಮೂರನೆ ಪ್ರಕರಣದಲ್ಲಿ ಕ್ರಿಸ್ತಾಬ್ದದ 15 ನೇ ಶತಮಾನ ಮೊದಲ್ಗೊಂಡು 19 ನೇ ಶತಮಾನದವರೆವಿಗೂ ಆಯಾಯಾಕಾಲದಲ್ಲಿದ್ದು ಈಗ ಯಶಶ್ಶರೀರಿಗಳಾಗಿರುವ ಗ್ರಂಥಕಾರರು ಹಳಗನ್ನಡದ ಸರಣಿಯಲ್ಲೂ ಹೊಸಗನ್ನಡದ ಸರಣಿಯಲ್ಲೂ ಬರೆದಿರತಕ್ಕ ಗ್ರಂಥಗಳ ಹೆಸರನ್ನು ಸುಮಾರು 1600 ಕ್ಕಿಂತಲೂ ಹೆಚ್ಚಾಗಿ ಪ್ರತಿಯೊಂದು ಶತಮಾನಕ್ಕೂ ವಿಂಗಡಿಸಿ ಬರೆದು ಅಲ್ಲಲ್ಲಿ ಕೆಲವು ಕವಿಗಳ ಹೆಸರನ್ನೂ ಕೆಲವಕ್ಕೆ ಆ ಗ್ರಂಥದಲ್ಲಿ ಹೇಳಿದ ಕಾಲವನ್ನೂ ಸಹ ಹೇಳಿರುತ್ತಾರೆ.

ಆದ್ಯಂತವಾಗಿ ಈ ಗ್ರಂಥವನ್ನು ನೋಡಿದರೆ ಕರ್ಣಾಟಕಗ್ರಂಥಕಾರರು ಇಷ್ಟು ಜನರಿದ್ದರೆಂದಾಗಲೀ ಇಷ್ಟು ಗ್ರಂಥಗಳಿರುವವೆಂದಾಗಲೀ ಗೊತ್ತಾಗಿರಲಿಲ್ಲವೆಂದೂ ಇದಕ್ಕಾಗಿ ಕರ್ಣಾಟಕ ಭಾಷಾಭಿಮಾನಿಗಳು ಕರ್ಣಾಟಕ ಕವಿ ಚರಿತ್ರಕಾರರ ವಿಷಯದಲ್ಲಿ ಕೃತಜ್ಞರಾಗಿರಬೇಕಾದುದು ಕರ್ತವ್ಯವಾಗಿರುವುದೆಂದೂ ಗುಣಗ್ರಾಹಿಗಳಾದ ಯಾರಿಗೂ ತೋರದಿರಲಾರದು.

ಧರೆಯೊಳಡಂಗೆ ರತ್ನನಿಕರಂತೆಗೆವುಜ್ಜುಗದೊಳ್ಪಸಾತಲಂ।
ಬರೆಗಮಗುಜ್ಜು ಬಿಣ್ಣ ತಿದುಸುಣ್ಣ ತುಸಣ್ಣ ತುತೆಳ್ಳ ತೆಂಬಹೋ ॥
ಪಿರಿದೆನಿಪೆಲ್ಲಮಂತೆಗೆದು ಕಾಲಕೆತಕ್ಕವೊಲೋರಣಕ್ಕೆ ತಂ।
ದಿರಿಸಿ ಜನಕ್ಕೆ ತೋರ್ಪ ಮಣಿಗಾಱರಜಾನ್ಮೈಯನಾರೊಮೆಚ್ಚದರ್ ॥ ೧॥

ಪಿರಿಯರೆನಿಪ್ಪವೇಲ್ಗವಿಗಳಿರ್ಕೆಮ ಪಾಯ್ತುರೆ ಕಾಲಚಕ್ರವಿ।
ಧರೆಯೊಳುರುಳ್ದು ಮಾಸಿಪುಸುಳ್ದುಂಸವೆದುಂ ನವೆದಿರ್ದುಕಾಣದಂ।
ತಿರೆ ಕಡಿವೋದಕಬ್ಬಿಗರುಮಂ ನೆಜಕೆಕಾಣಿಕುವಿಾಚರಿತ್ರಮ।
ಚ್ಚರಿಯೆನಿಪೇಲ್ವುದೇಂ ಕವಿಗೆನೊಲ್ಪೊಡೆಕನ್ನಡಿಯಾಗದಿರ್ಕುಮೇ ॥ ೨॥

* ವಿದ್ಯಾದಾಯಿನಿ. *

ಮದ್ರಾಸಿನಲ್ಲಿ ನಡೆದ ವಿದ್ಯಾಭ್ಯಾಸ ವಿಷಯಕವಾದ ವಸ್ತು ಪ್ರದರ್ಶನ.

ಈ ತಿಂಗಳು ಇಪ್ಪತ್ತುನಾಲ್ಕನೆಯ ತಾರೀಖಿನ ದಿವಸ ಮದ್ರಾಸಿನಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಉಪಯುಕ್ತವಾದ ವಸ್ತುಗಳ ಪ್ರದರ್ಶನವು ಪ್ರಾರಂಭವಾಗಿ ಒಂದು ವಾರದ ವರೆಗೂ ನಡೆಯಿತು. ಮದ್ರಾಸು ಸಕಲವಿದ್ಯಾನಿಲಯದ ಪರೀಕ್ಷಾ ಮಂದಿರವೇ ಈ ಪ್ರದರ್ಶನ ಸ್ಥಾನವಾಗಿತ್ತು. ಹಿಂದೂಸ್ಥಾನದ ಕೆಲವುಕಡೆಗಳಿಂದಲೂ, ಇಂಗ್ಲೆಂಡಿನ ಕೆಲವು ಪ್ರದೇಶಗಳಿಂದಲೂ ವಸ್ತುಗಳು, ಮಾದರಿಗಳು, ಚಿತ್ರಗಳು ಮೊದಲಾದ ನಾನಾವಿಧವಾದ ಪಾಠೋಪಕರಣಗಳು ಬಂದಿದ್ದುವು. ಇವು ಬಹಳ ಶ್ಲಾಘನೀಯವಾಗಿದ್ದುವು. ಈ ಪ್ರದರ್ಶನದ ಪ್ರಾರಂಭಕಾಲದಲ್ಲಿ ಸರ್ ರಾಲ್ಫ್ ಬ್ಲಿಸನ್ ಎಂಬ ಹೈಕೋರ್ಟ್ ಜಡ್ಜಿಗಳು ಅಗ್ರಾಸನವನ್ನು ವಹಿಸಿದ್ದರು. ಮತ್ತು ಘನಹೊಂದಿದ ಹೈಕೋರ್ಟು ವಕೀಲ್ ಮಾ॥ ರಾ॥ ಪಿ. ಎಸ್. ಶಿವಸ್ವಾಮಿ ಐಯ್ಯರವರು ಈ ಪ್ರದರ್ಶನದ ಉದ್ದೇಶವನ್ನು ಕುರಿತು ಉಪನ್ಯಾಸ ಮಾಡಿದರು. ಇವರ ಉಪನ್ಯಾಸ ಸಾರಾಂಶವನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುವೆವು.

ಈ ಪ್ರದರ್ಶನವು ಮುಖ್ಯವಾಗಿ ಸರ್ಕಾರದ ಉದ್ಯೋಗದಲ್ಲಿ ಇಲ್ಲದವರ ಪ್ರೋತ್ಸಾಹದಿಂದ ನಡೆದಿರುವುದು ಬಹಳ ಶ್ಲಾಘನೀಯವಾದುದು. ಮದ್ರಾಸಿನಲ್ಲಿ ಸ್ಥಾಪಿಸಲ್ಪಟ್ಟಿರುವ ಸಕಲ ವಿದ್ಯಾನಿಲಯದಿಂದ ಜನರಿಗೆ ವಿಶೇಷ ಪ್ರಯೋಜನವಾಗಿರುವುದೆಂಬುದನ್ನು ಈ ಪ್ರದರ್ಶನವು ತೋರಿಸುವುದು. ತಮ್ಮ ದೇಶದಲ್ಲಿ ಪ್ರಚಾರ

ವಾಗಿರುವ ವಿದ್ಯಾಭ್ಯಾಸದಲ್ಲಿ ಅನೇಕ ಕೊರತೆಗಳಿರುವುವೆಂತಲೂ, ಇವುಗಳನ್ನು ಹೋಗಲಾಡಿಸಲು ಸರಿಯಾದ ಪ್ರಯತ್ನವನ್ನು ಮಾಡಬೇಕೆಂತಲೂ ಜನರು ಯೋಚಿಸುತಿರುವುದು ಈ ಪ್ರದರ್ಶನದಿಂದ ತಿಳಿಯುವುದು. ಇಂತಹ ಯೋಚನೆಗೆ ಸಕಲ ವಿದ್ಯಾನಿಲಯದಿಂದುಂಟಾದ ವಿದ್ಯಾಭ್ಯಾಸವೇ ಕಾರಣವಾಗಿರುವುದು.

ನಮ್ಮ ಪಾಠಶಾಲೆಗಳಲ್ಲಿ ಸಾಹಿತ್ಯ ಮೊದಲಾದ ಭಾಷಾ ಶಾಸ್ತ್ರಗಳ ಅಭ್ಯಾಸವೇ ಮುಖ್ಯವಾಗಿರುವವರಿಗೂ ಪಾಠಗಳಲ್ಲಿ ಉಪಕರಣಗಳ ಅವಶ್ಯಕತೆಯು ವಿಶೇಷವಾಗಿರಲಿಲ್ಲವಾದುದರಿಂದ ಇಂತಹ ಪ್ರದರ್ಶನಗಳಿಗೆ ಕಾರಣವೇ ಇರಲಿಲ್ಲ. ಆದರೆ ಈಚೀಚಿಗೆ, ಭಾಷಾ ಶಾಸ್ತ್ರಗಳಲ್ಲಿ ವಿಶೇಷ ಕಾಲವನ್ನು ವ್ಯರ್ಥವಾಗಿ ಕಳೆಯುವುದಕ್ಕಿಂತಲೂ ಮಕ್ಕಳು ಪ್ರಾಕೃತಿಕ ಶಾಸ್ತ್ರಗಳಲ್ಲಿ ವಿಶೇಷ ಪರಿಚಯವನ್ನು ಹೊಂದಬೇಕು, ಅವರ ಹಸ್ತಕೌಶಲವೂ ನೇತ್ರಪಾಟವವೂ ಹೆಚ್ಚಬೇಕು. ವಸ್ತು ಪರೀಕ್ಷಣ ಶಕ್ತಿಯು ಅವರಲ್ಲಿ ಚೆನ್ನಾಗಿ ಬೆಳೆಯಬೇಕು ಎಂಬ ಈ ವಿಧವಾದ ಅಭಿಪ್ರಾಯಗಳು ಜನರಲ್ಲಿ ಹೆಚ್ಚುತಿರುವುವು. ಈ ಅಭಿಪ್ರಾಯಗಳಿಗನುಸಾರವಾಗಿ ಪಾಠ ನಡೆಸಬೇಕಾದರೆ ಸರಿಯಾದ ಉಪಕರಣಗಳು ಅತ್ಯಾವಶ್ಯಕವಾಗುವುವು. ಯಾವಯಾವ ಪಾಠಗಳಲ್ಲಿ ಯಾವಯಾವ ಉಪಕರಣಗಳನ್ನು ಉಪಯೋಗಿಸಬೇಕು, ಯಾವರೀತಿಯಲ್ಲಿ ಉಪಯೋಗಿಸಬೇಕು ಇವೇ ಮುಂತಾದ ಅಂಶಗಳನ್ನು ಚೆನ್ನಾಗಿ ತಿಳಿಯಲು ಪಾಶ್ಚಾತ್ಯ ರಾಜ್ಯಗಳಲ್ಲಿ ಇಂತಹ ಪ್ರದರ್ಶನಗಳು ಆಗಾಗ್ಯೆ ನಡೆಯುತಿರುವುವು. ನಮ್ಮ ದೇಶದ ಜನರೂ ಈಗಿನ ವಿದ್ಯಾಭ್ಯಾಸದಲ್ಲಿರುವ ಕೊರತೆಯನ್ನು ತೊಲಗಿಸಲು ಈ ಪ್ರದರ್ಶನವನ್ನು ಏರ್ಪಡಿಸಿದುದು ಬಹಳ ಶ್ಲಾಘನೀಯವಾದುದು. ಇಲ್ಲಿಗೆ ಪಾಠಶಾಲೆಗಳ ಮ್ಯಾನೇಜರುಗಳೂ (ಮೇಲ್ವಿಚಾರಣೆ ಮಾಡುವುವರು); ಉಪಾಧ್ಯಾಯರೂ ಬಂದು ನಾನಾಕಡೆಗಳಿಂದ ಬಂದಿರುವ ಉಪಕರಣಗಳನ್ನು ನೋಡಿ ಇವುಗಳಂತೆ ತಮ್ಮ ಪಾಠಶಾಲೆಗಳಲ್ಲೂ ಏರ್ಪಡಿಸಿಕೊಂಡರೆ ಈ ಪ್ರದರ್ಶನದ ಉದ್ದೇಶವು ಪೂರ್ಣವಾಗಿ ನೆರವೇರುವುದೆಂದು ಹೇಳಬಹುದು. ನಮ್ಮ ಜನರು ಇಂತಹ ಪ್ರದರ್ಶಗಳನ್ನು ಆಗಾಗ್ಯೆ ನಡೆಸಿ ಅವುಗಳ ಮೂಲಕ ನಮ್ಮ ದೇಶದ ವಿದ್ಯಾಭ್ಯಾಸವನ್ನು ವೃದ್ಧಿಗೊಳಿಸಬೇಕೆಂದು ಕೋರುವೆನು. ಈರೀತಿಯಲ್ಲಿ ಮು॥ ರಾ॥ ಶಿವಸ್ವಾಮಿಐಯ್ಯರವರು ಉಪನ್ಯಾಸ ಮಾಡಿದಮೇಲೆ ಅಗ್ರಾಸನವನ್ನು ವಹಿಸಿದ್ದ ಸರ್ ರಾಲ್ಫ್ ಬೆರ್ಸ್ ಸಾಹೇಬರು ಸ್ವಲ್ಪಹೊತ್ತು ಮಾತನಾಡಿದರು.

ಇವರು ಪ್ರದರ್ಶನದ ಉದ್ದೇಶದ ವಿಷಯದಲ್ಲಿ ಉಪನ್ಯಾಸ ಮಾಡಿದ

ಮ॥ರಾ॥ ಶಿವಸ್ವಾಮಿಐಯ್ಯರವರನ್ನು ವಂದಿಸಿ ಇಂಗ್ಲೆಂಡ್ ಮೊದಲಾದ ನಾನಾಕಡೆಗಳಿಂದ ಇಷ್ಟು ಉಪಕರಣಗಳನ್ನು ತರಿಸಿ ಈ ಪ್ರದರ್ಶನವನ್ನು ಏರ್ಪಡಿಸಿದ ಪ್ರದರ್ಶನದ ಕಮಿಟಿಯವರನ್ನು ಬಹಳವಾಗಿ ಶ್ಲಾಘಿಸಿದರು. ಇಲ್ಲಿ ಶೇಖರಿಸಲ್ಪಟ್ಟಿರುವ ಈ ಉಪಕರಣಗಳನ್ನೆಲ್ಲಾ ನೋಡಿದರೆ ನಾವುಗಳೆಲ್ಲರೂ ಬಾಲಕರಾಗಿ ಇವುಗಳಿಂದುಂಟಾಗುವ ಪ್ರಯೋಜನವನ್ನು ಹೊಂದಬೇಕೆಂಬ ಕುತೂಹಲವು ನಮಗೆ ಹುಟ್ಟುವುದೆಂದು ಹೇಳಿದರು. ಅನಂತರ ಪ್ರದರ್ಶನವು ತೆರೆಯಲ್ಪಟ್ಟಿರುವುದೆಂತಲೂ, ಉಪಾಧ್ಯಾಯರೆಲ್ಲರೂ ಅಲ್ಲಿರುವ ವಸ್ತುಗಳನ್ನು ಚೆನ್ನಾಗಿ ನೋಡಿ ಅವುಗಳಿಂದ ಹೊಂದಬಹುದಾದ ಪೂರ್ಣ ಪ್ರಯೋಜನವನ್ನು ಹೊಂದಬೇಕೆಂತಲೂ ತಿಳಿಸಿದರು. ಆಮೇಲೆ ಪ್ರದರ್ಶನದ ಕಮಿಟಿಯ ಅಧ್ಯಕ್ಷರಾದ ಮ॥ರಾ॥ ಮೇಹ್ಯೂ ಸಾಹೇಬರು, ಅಗ್ರಾಸನವನ್ನು ವಹಿಸಿದ್ದಕ್ಕಾಗಿ ಸರ್ ರಾಲ್ಫ್ ಬರ್ಕ್ಲೆ ಸಾಹೇಬರನ್ನೂ ಉಪನ್ಯಾಸಮಾಡಿದ್ದಕ್ಕಾಗಿ ಮ॥ರಾ॥ ಶಿವಸ್ವಾಮಿ ಐಯ್ಯರವರನ್ನೂ ವಂದಿಸಿದರು. ಆಮೇಲೆ ಅಲ್ಲಿ ನೆರೆದಿದ್ದವರೆಲ್ಲರೂ ಆ ದೊಡ್ಡ ಮಂದಿರದಲ್ಲಿ ಶೇಖರಿಸಲ್ಪಟ್ಟಿದ್ದ ವಸ್ತುಗಳನ್ನು ನೋಡಲು ಹೊರಟರು.

ಆ ದೊಡ್ಡ ಮಂದಿರದಲ್ಲಿ ಇಟ್ಟಿದ್ದ ವಸ್ತುಗಳನ್ನೆಲ್ಲಾ ಪೂರ್ಣವಾಗಿ ವರ್ಣಿಸುವಷ್ಟು ಅವಕಾಶವು ನಮಗೆ ಇಲ್ಲವಾದುದರಿಂದ ಅವುಗಳ ವಿಷಯವನ್ನು ಸಂಕ್ಷೇಪವಾಗಿ ತಿಳಿಸುವೆವು. ಅಲ್ಲಿ ಇದ್ದ ವಸ್ತುಗಳನ್ನೆಲ್ಲಾ ಇಂಗ್ಲೆಂಡಿನಿಂದ ಬಂದಿದ್ದ ವಸ್ತುಗಳೆಂತಲೂ ಹಿಂದೂಸ್ಥಾನದ ವಸ್ತುಗಳೆಂತಲೂ ಎರಡು ಗುಂಪಾಗಿ ವಿಂಗಡಿಸಬಹುದಾಗಿತ್ತು. ಇಂಗ್ಲೆಂಡಿನಿಂದ ಬಂದಿದ್ದವಸ್ತುಗಳಲ್ಲೂ ಅಲ್ಲಿನ ಪಾಠಶಾಲೆಗಳಲ್ಲಿ ನಡೆಯುವ ಕೆಲಸಗಳನ್ನು ತೋರಿಸುವ ವಸ್ತುಗಳೆಂತಲೂ, ವರ್ತಕರಿಂದ ಪ್ರದರ್ಶನಕ್ಕಾಗಿ ಕಳುಹಿಸಲ್ಪಟ್ಟ ವಸ್ತುಗಳೆಂತಲೂ ಎರಡು ವಿಧಗಳಿದ್ದುವು. ಇಂಗ್ಲೆಂಡಿನ ಪಾಠಶಾಲೆಗಳಕೆಲಸವನ್ನು ತೋರಿಸುವ ವಸ್ತುಗಳಲ್ಲಿದ್ದ ಮುಖ್ಯವಾದ ವಿಧಗಳು ಯಾವುವೆಂದರೆ;—

1. ಉಪಾಧ್ಯಾಯರು ಕರೀಹಲಗೆಯನ್ನು ಉಪಯೋಗಿಸುವ ರೀತಿಯನ್ನು ತೋರಿಸುವ ಪಠಗಳು. ಈ ಪಠಗಳಲ್ಲಿ ಉಪಾಧ್ಯಾಯರು ಪಾಠಕಾಲದಲ್ಲಿ ಹಲಗೆಯಮೇಲೆ ಬರೆಯುವ ಪ್ರಾಣಿಗಳ ಮತ್ತು ಅವುಗಳ ಭಾಗಗಳನ್ನು ತೋರಿಸುವ ಚಿತ್ರಗಳೂ, ಪಾಠಾಂತ್ಯದಲ್ಲಿ ಪುನರಾವರ್ತನೆ ಮಾಡುವುದಕ್ಕಾಗಿ ಹಲಗೆಯಮೇಲೆ ಬರೆದಿರುವ ಪಾಠಸಾರಾಂಶಗಳೂ ಇದ್ದುವು. ಈ ಚಿತ್ರಗಳಿಂದ ಪಾಠಕಾಲದಲ್ಲಿ ಉಪಾ

ಧ್ಯಾ[illegible]ಗಳನ್ನು ಬರೆಯುವ ಕೌಶಲವನ್ನು ವಿಶೇಷವಾಗಿ [illegible] ಕಾಣುತ್ತಿತ್ತು.

[illegible]ವಾಗಿ ಪ್ರಕೃತಿಯನ್ನು ಪರೀಕ್ಷಿಸುವ ಕ್ರಮ [illegible]ಗಳಿಂದ ಯಾವಕಾಲದಲ್ಲಿ ಯಾವ ಸಸ್ಯಮೊದ [illegible] ಯಾವರೀತಿಯಲ್ಲಿ ಪರೀಕ್ಷಿಸಬೇಕು ಯೆಂಬೀ ಅಂಶ [illegible]ದ್ದುವು.

[illegible] ಪ್ರಕೃತಿಯನ್ನು ಪರೀಕ್ಷಿಸಿದ ಕ್ರಮವನ್ನು ತೋರಿಸುವ ಪುಸ್ತ [illegible] ಪ್ರತಿನಿತ್ಯವೂ ಹೊರಕ್ಕೆ ಹೋದಾಗ, ಭೂಮಿ, ಆಕಾಶ, ಮರ, ಗಿಡ [illegible] ಯಾವರೀತಿಯಲ್ಲಿ ಕಾಣುತಿದ್ದುವು ಎಂಬುದು, ಈ ಪುಸ್ತಕಗ [illegible] ಸುಲಭವಾದ ಭಾಷೆಯಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿತ್ತು. ಅಲ್ಲದೆ ಅವರು ಪರೀಕ್ಷಿಸಿದ ಮರ, ಗಿಡ, ಹೂ, ಪಟ ಇವುಗಳ ಚಿತ್ರಗಳು ಬಣ್ಣಗಳಿಂದ ಅಂದ ವಾಗಿ ಬರೆಯಲ್ಪಟ್ಟಿದ್ದುವು. ಏಳೆಂಟು ವಯಸ್ಸಿನ ಮಕ್ಕಳು ಬರೆದಿದ ಚಿತ್ರಗಳು ನೋಡುವವರಿಗೆ ಆಶ್ಚರ್ಯವನ್ನು ಉಂಟುಮಾಡುವಂತಿದ್ದುವು.

4. ಚಿತ್ರಗಳು.

ನಾಲ್ಕೈದು ವಯಸ್ಸು ಮೊದಲ್ಗೊಂಡು, ಹದಿನೈದು ವಯಸ್ಸಿನ ವರೆಗಿನ ಮಕ್ಕಳು ಬರೆದ ಚಿತ್ರಪುಸ್ತಕಗಳು, ಪಠಗಳು ವಿಶೇಷವಾಗಿದ್ದುವು. ಈ ಚಿತ್ರ ಗಳನ್ನು ಧೂಮ್ರವರ್ಣಕ್ಕಿರುವ ಕಾಗದಗಳಮೇಲೆ ನಾನಾ ಬಣ್ಣವುಳ್ಳ ಶೀಮೆಸುಣ್ಣಗ ಂದ ವಿಶೇಷವಾಗಿ ಬರೆದಿದ್ದರು. ಬಿಳಿಯ ಕಾಗದದಮೇಲೆ ಪೆನ್‌ಸಿಲ್‌ನಿಂದ ಬರೆದ ಚಿತ್ರಗಳು ಬಹಳ ಕಡಮೆಯಾಗಿದ್ದುವು. ಸಸ್ಯಗಳ ಪತ್ರ, ಕಾಂಡ, ಪುಷ್ಪಗಳ ಕಾರವನ್ನೂ, ಪಕ್ಷಿಗಳ ರಕ್ಕೆಗಳ ಬಣ್ಣವನ್ನೂ ಆಕಾರವನ್ನೂ ತೋರಿಸುವ ಚಿತ್ರ ಳೇ ವಿಶೇಷವಾಗಿದ್ದುವು. ನಾಲ್ಕೈದು ವಯಸ್ಸಿನ ಸಣ್ಣಮಕ್ಕಳು ಬರೆದಿದ್ದ ಎಲೆ ಗಳ ಮತ್ತು ಹೂಗಳ ಚಿತ್ರಗಳು, ಅತ್ಯಾಶ್ಚರ್ಯಕರವಾಗಿದ್ದುವು.

5. ಮಕ್ಕಳು ಶೇಖರಿಸಿದ ವಸ್ತುಗಳು,

ಪ್ರಕೃತಿಯನ್ನು ಪರೀಕ್ಷಿಸಲು ಮಕ್ಕಳು ಹೊರಕ್ಕೆ ಹೋದಾಗ ಅವರು ಶೇಖ ರಿಸಿದ ವಸ್ತುಗಳನ್ನು ಕ್ರಮವಾಗಿ ರಟ್ಟುಗಳಿಗೆ ಅಂಟಿಸಿ ಇಟ್ಟಿದ್ದರು. ಪ್ರತಿಯೊಂದು ರಟ್ಟಿನಿಂದಲೂ ಒಂದೊಂದು ವಸ್ತುವಿನ ವಿಷಯವು ಪೂರ್ಣವಾಗಿ ತಿಳಿಯಲು ಅನು

ಕೂಲವಾಗಿತ್ತು. ಒಂದು ಚಿಟ್ಟೆಯ ವಿಷಯವನ್ನು ತೆಗೆದುಕೊಂಡರೆ ಮೊಟ್ಟೆ, ಹರಿಯುವ ಹುಳು, ಕೋಶಕ್ರಿಮಿ, ಚಿಟ್ಟೆ ಈ ರೀತಿಯಾಗಿ ಎಲ್ಲವೂ ತಿಳಿಯುವಂತಿತ್ತು. ಒಂದು ಗಿಡದ ವಿಷಯವನ್ನು ತೆಗೆದುಕೊಂಡರೆ ಅದರ ಎಲೆ, ಹೂ, ಕಾಯಿ, ರೆಂಬೆ, ಇವೆಲ್ಲವೂ ರಟ್ಟಿಗೆ ಅಂಟಿಸಲ್ಪಟ್ಟಿದ್ದುವು. ಪಾಠಶಾಲೆಯು ವಸ್ತುಪ್ರದರ್ಶನ ಶಾಲೆಯಲ್ಲಿಡಲು ಅನುಕೂಲವಾಗುವಂತೆ ಈ ರಟ್ಟುಗಳು ತಯಾರ್ಮಾಡಲ್ಪಟ್ಟಿದ್ದುವು.

6. ಮ್ಯಾನ್ಯುಅಲ್ ಟ್ರೈನಿಂಗ್ ತರಗತಿಗಳಲ್ಲಿ ಮಕ್ಕಳು ಮಾಡಿದ ವಸ್ತುಗಳು.

ಈ ಭಾಗದಲ್ಲಿ ಮರಗಳನ್ನು ಜೋಡಿಸುವ ಕ್ರಮವನ್ನು ತೋರಿಸುವ ವಸ್ತುಗಳೂ, ಕೆತ್ತನೆಯಕೆಲಸ ಮಾಡಿದ ಮರದ ವಸ್ತುಗಳೂ, ನಕಾಶಿ ಕೆಲಸ ಮಾಡಿದ ತಾಮ್ರ, ಹಿತ್ತಾಳೆ ಮೊದಲಾದ ಲೋಹಗಳ ವಸ್ತುಗಳೂ ಇದ್ದುವು. ಮಕ್ಕಳ ಹಸ್ತಕೌಶಲವು ಹೆಚ್ಚಿರುವುದು ಎಂಬ ಅಂಶವು ಈ ವಸ್ತುಗಳಿಂದ ಸ್ಪಷ್ಟವಾಗಿ ಕಾಣುತ್ತಿತ್ತು. ಮೇಲಿನ ತರಗತಿಗಳ ವಿದ್ಯಾರ್ಥಿಗಳು ಲೋಹದಲ್ಲಿ ಮಾಡಿದ್ದ ಕೆಲಸಗಳು ಬಹಳ ಶ್ಲಾಘನೀಯವಾಗಿದ್ದುವು.

7. ಪಾಠಶಾಲೆಯಲ್ಲೂ, ಮನೆಯಲ್ಲೂ ಬಾಲಕರು ಮಾಡುವ ಕೆಲಸಗಳನ್ನು ತೋರಿಸುವ ಪುಸ್ತಕಗಳು.

ಬೀಜಗಣಿತ, ಅಂಕಗಣಿತಗಳ ಲೆಕ್ಕಗಳನ್ನು ಮಕ್ಕಳು ಚಿತ್ತಿಲ್ಲದಂತೆ ಬಹಳ ಚೆನ್ನಾಗಿ ಮಾಡಿದ್ದರು. ಈ ಲೆಖ್ಖಗಳಿಗೆ ತಕ್ಕ ಆಕೃತಿಗಳನ್ನು ಪ್ರಮಾಣಕ್ಕೆ ತಕ್ಕಂತೆ, ಬಹಳ ಚೆನ್ನಾಗಿ ಬರೆದಿದ್ದರು. ಇವುಗಳನ್ನು ಬರೆಯಲು $\frac{1}{16}$ ಇದರ ಅಂಗುಲ ವಿಸ್ತೀರ್ಣದ ಚೌಕನಾದ ಮನೆಗಳುಳ್ಳ ಪುಸ್ತಕಗಳನ್ನು ಉಪಯೋಗಿಸಿದ್ದರು. ರೇಖಾಗಣಿತದ ಆಕೃತಿಗಳನ್ನು ಹೀಗೆಯೇ ಚೆನ್ನಾಗಿ ಬರೆದಿದ್ದರು. ವಸ್ತುಶಾಸ್ತ್ರದ ಪುಸ್ತಕದಲ್ಲಿ ಮಕ್ಕಳು ವಸ್ತುವನ್ನು ಪರೀಕ್ಷಿಸಿದ ಕ್ರಮವನ್ನು ಈ ಪರೀಕ್ಷೆಯಿಂದಾದ ಫಲವನ್ನು ಇದಕ್ಕೆ ಉಪಯೋಗಿಸಿದ ಉಪಕರಣಗಳ ಆಕೃತಿಯನ್ನೂ ಬಹಳ ಅಂದವಾಗಿ ಬರೆದಿದ್ದರು. ಶಕ್ತಿಶಾಸ್ತ್ರದ ಪುಸ್ತಕದಲ್ಲಿ ಆ ಶಾಸ್ತ್ರದ ನಿಯಮಗಳನ್ನು ರುಜುಮಾಡಲು, ಬಾಲಕರು ನಡೆಸಿದ ಪರೀಕ್ಷೆ, ಅದರ ಫಲ, ಅದಕ್ಕಾಗಿ ಉಪಯೋಗಿಸಿದ ಉಪಕರಣಗಳ ಆಕೃತಿ ಇವುಗಳನ್ನು ಸ್ವಲ್ಪವೂ ಚಿತ್ತಿಲ್ಲದಂತೆ ಚೆನ್ನಾಗಿ ಬರೆ

ಧ್ಯಾಯರು ನಿದರ್ಶನಕ್ಕಾಗಿ ಚಿತ್ರಗಳನ್ನು ಬರೆಯುವ ಕೌಶಲವನ್ನು ವಿಶೇಷವಾಗಿ ಹೊಂದಿದ್ದರೆಂಬುದು ಸ್ಪಷ್ಟವಾಗಿ ಕಾಣುತ್ತಿತ್ತು.

೭. ಋತುಧರ್ಮಕ್ಕನುಗುಣವಾಗಿ ಪ್ರಕೃತಿಯನ್ನು ಪರೀಕ್ಷಿಸುವ ಕ್ರಮವನ್ನು ತೋರಿಸುವ ಪಠಗಳು. ಈ ಪಠಗಳಿಂದ ಯಾವ ಕಾಲದಲ್ಲಿ ಯಾವ ಸಸ್ಯವೊದಲಾದುವನ್ನು ಪರೀಕ್ಷಿಸಬೇಕು. ಯಾವರೀತಿಯಲ್ಲಿ ಪರೀಕ್ಷಿಸಬೇಕು ಯೆಂಬೀ ಅಂಶಗಳು ಸ್ಪಷ್ಟವಾಗಿ ಕಾಣುತ್ತಿದ್ದುವು.

೮. ಮಕ್ಕಳು ಪ್ರಕೃತಿಯನ್ನು ಪರೀಕ್ಷಿಸಿದ ಕ್ರಮವೆನ್ನು ತೋರಿಸುವ ಪುಸ್ತಕಗಳು. ಮಕ್ಕಳು ಪ್ರತಿನಿತ್ಯವೂ ಹೊರಕ್ಕೆ ಹೋದಾಗೆ, ಭೂಮಿ, ಆಕಾಶ, ಮರ, ಗಿಡಗಳು, ಮಿಗಪಕ್ಷಿಗಳು ಯಾವರೀತಿಯಲ್ಲಿ ಕಾಣುತಿದ್ದುವು ಎಂಬುದು, ಈ ಪುಸ್ತಕಗಳಲ್ಲಿ ಸುಲಭವಾದ ಭಾಷೆಯಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿತ್ತು. ಅಲ್ಲದೆ ಅವರು ಪರೀಕ್ಷಿಸಿದ ಮರ, ಗಿಡ, ಹೂ, ಪಟ ಇವುಗಳ ಚಿತ್ರಗಳು ಬಣ್ಣಗಳಿಂದ ಅಂದವಾಗಿ ಬರೆಯಲ್ಪಟ್ಟಿದ್ದುವು. ಏಳೆಂಟು ವಯಸ್ಸಿನ ಮಕ್ಕಳು ಬರೆದಿದ ಚಿತ್ರಗಳು ನೋಡುವವರಿಗೆ ಆಶ್ಚರ್ಯವನ್ನು ಉಂಟುಮಾಡುವಂತಿದ್ದುವು.

೪. ಚಿತ್ರಗಳು.

ನಾಲ್ಕೈದು ವಯಸ್ಸು ಮೊದಲ್ಗೊಂಡು, ಹದಿನೈದು ವಯಸ್ಸಿನ ವರೆಗಿನ ಮಕ್ಕಳು ಬರೆದ ಚಿತ್ರಪುಸ್ತಕಗಳು, ಪಠಗಳು ವಿಶೇಷವಾಗಿದ್ದುವು. ಈ ಚಿತ್ರಗಳನ್ನು ಧೂಮ್ರವರ್ಣಕ್ಕಿರುವ ಕಾಗದಗಳಮೇಲೆ ನಾನಾ ಬಣ್ಣವುಳ್ಳ ಶೀಮೆಸುಣ್ಣಗಳಿಂದ ವಿಶೇಷವಾಗಿ ಬರೆದಿದ್ದರು. ಬಿಳಿಯ ಕಾಗದದಮೇಲೆ ಪೆನ್‌ಸಿಲ್‌ನಿಂದ ಬರೆದ ಚಿತ್ರಗಳು ಬಹಳ ಕಡಮೆಯಾಗಿದ್ದುವು. ಸಸ್ಯಗಳ ಪತ್ರ, ಕಾಂಡ, ಪುಷ್ಪಗಳ ಆಕಾರವನ್ನೂ, ಪಕ್ಷಿಗಳ ರೆಕ್ಕೆಗಳ ಬಣ್ಣವನ್ನೂ ಆಕಾರವನ್ನೂ ತೋರಿಸುವ ಚಿತ್ರಗಳೇ ವಿಶೆಲಷವಾಗಿದ್ದುವು. ನಾಲ್ಕೈದು ವಯಸ್ಸಿನ ಸಣ್ಣಮಕ್ಕಳು ಬರೆದಿದ್ದ ಎಲೆಗಳ ಮತ್ತು ಹೂಗಳ ಚಿತ್ರಗಳು, ಅತ್ಯಾಶ್ಚರ್ಯಕರವಾಗಿದ್ದುವು.

೫. ಮಕ್ಕಳು ಶೇಖರಿಸಿದ ವಸ್ತುಗಳು,

ಪ್ರಕೃತಿಯನ್ನು ಪರೀಕ್ಷಿಸಲು ಮಕ್ಕಳು ಹೊರಕ್ಕೆ ಹೋದಾಗ ಅವರು ಶೇಖರಿಸಿದ ವಸ್ತುಗಳನ್ನು ಕ್ರಮವಾಗಿ ರಟ್ಟುಗಳಿಗೆ ಅಂಟಿಸಿ ಇಟ್ಟಿದ್ದರು. ಪ್ರತಿಯೊಂದು ರಟ್ಟಿನಿಂದಲೂ ಒಂದೊಂದು ವಸ್ತುವಿನ ವಿಷಯವನ್ನು ಪೂರ್ಣವಾಗಿ ತಿಳಿಯಲು ಅನು

ಕೂಲವಾಗಿತ್ತು. ಒಂದು ಚಿಟ್ಟೆಯ ವಿಷಯವನ್ನು ತೆಗೆದುಕೊಂಡರೆ ಮೊಟ್ಟೆ, ಹರಿಯುವ ಹುಳು, ಕೋಶಕ್ರಿಮಿ, ಚಿಟ್ಟೆ ಈ ರೀತಿಯಾಗಿ ಎಲ್ಲವೂ ತಿಳಿಯುವಂತಿತ್ತು. ಒಂದು ಗಿಡದ ವಿಷಯವನ್ನು ತೆಗೆದುಕೊಂಡರೆ ಅದರ ಎಲೆ, ಹೂ, ಕಾಯಿ, ರೆಂಬೆ, ಇವೆಲ್ಲವೂ ರಟ್ಟಿಗೆ ಅಂಟಿಸಲ್ಪಟ್ಟಿದ್ದುವು. ಪಾಠಶಾಲೆಯು ವಸ್ತುಪ್ರದರ್ಶನ ಶಾಲೆಯಲ್ಲಿಡಲು ಅನುಕೂಲವಾಗುವಂತೆ ಈ ರಟ್ಟುಗಳು ತಯಾರ್ಮಾಡಲ್ಪಟ್ಟಿದ್ದುವು.

6. ಮ್ಯಾನ್ಯೂಲ್ ಟ್ರೈನಿಂಗ್ ತರಗತಿಗಳಲ್ಲಿ ಮಕ್ಕಳು ಮಾಡಿದ ವಸ್ತುಗಳು.

ಈ ಭಾಗದಲ್ಲಿ ಮರಗಳನ್ನು ಜೋಡಿಸುವ ಕ್ರಮವನ್ನು ತೋರಿಸುವ ವಸ್ತುಗಳೂ, ಕೆತ್ತನೆಯಕೆಲಸ ಮಾಡಿದ ಮರದ ವಸ್ತುಗಳೂ, ನಕಾಶಿ ಕೆಲಸ ಮಾಡಿದ ತಾಮ್ರ, ಹಿತ್ತಾಳೆ ಮೊದಲಾದ ಲೋಹಗಳ ವಸ್ತುಗಳೂ ಇದ್ದುವು. ಮಕ್ಕಳ ಹಸ್ತಕೌಶಲವು ಹೆಚ್ಚಿರುವುದು ಎಂಬ ಅಂಶವು ಈ ವಸ್ತುಗಳಿಂದ ಸ್ಪಷ್ಟವಾಗಿ ಕಾಣುತ್ತಿತ್ತು. ಮೇಲಿನ ತರಗತಿಗಳ ವಿದ್ಯಾರ್ಥಿಗಳು ಲೋಹದಲ್ಲಿ ಮಾಡಿದ್ದ ಕೆಲಸಗಳು ಬಹಳ ಶ್ಲಾಘನೀಯವಾಗಿದ್ದುವು.

7. ಪಾಠಶಾಲೆಯಲ್ಲೂ, ಮನೆಯಲ್ಲೂ ಬಾಲಕರು ಮಾಡುವ ಕೆಲಸಗಳನ್ನು ತೋರಿಸುವ ಪುಸ್ತಕಗಳು.

ಬೀಜಗಣಿತ, ಅಂಕಗಣಿತಗಳ ಲೆಕ್ಕಗಳನ್ನು ಮಕ್ಕಳು ಚಿತ್ತಿಲ್ಲದಂತೆ ಬಹಳ ಚನ್ನಾಗಿ ಮಾಡಿದ್ದರು. ಈ ಲೆಖ್ಖಗಳಿಗೆ ತಕ್ಕ ಆಕೃತಿಗಳನ್ನು ಪ್ರಮಾಣಕ್ಕೆ ತಕ್ಕಂತೆ, ಬಹಳ ಚನ್ನಾಗಿ ಬರೆದಿದ್ದರು. ಇವುಗಳನ್ನು ಬರೆಯಲು $\frac{1}{16}$ ಚದರ ಅಂಗುಲ ವಿಸ್ತೀರ್ಣದ ಚೌಕನಾದ ಮನೆಗಳುಳ್ಳ ಪುಸ್ತಕಗಳನ್ನು ಉಪಯೋಗಿಸಿದ್ದರು. ರೇಖಾಗಣಿತದ ಆಕೃತಿಗಳನ್ನು ಹೀಗೆಯೇ ಚೆನ್ನಾಗಿ ಬರೆದಿದ್ದರು. ವಸ್ತುಶಾಸ್ತ್ರದ ಪುಸ್ತಕದಲ್ಲಿ ಮಕ್ಕಳು ವಸ್ತುವನ್ನು ಪರೀಕ್ಷಿಸಿದ ಕ್ರಮವನ್ನು ಈ ಪರೀಕ್ಷೆಯಿಂದಾದ ಫಲವನ್ನು ಇದಕ್ಕೆ ಉಪಯೋಗಿಸಿದ ಉಪಕರಣಗಳ ಆಕೃತಿಯನ್ನೂ ಬಹಳ ಅಂದವಾಗಿ ಬರದಿದ್ದರು. ಶಕ್ತಿಶಾಸ್ತ್ರದ ಪುಸ್ತಕದಲ್ಲಿ ಆ ಶಾಸ್ತ್ರದ ನಿಯಮಗಳನ್ನು ರುಜುಮಾಡಲು, ಬಾಲಕರು ನಡೆಸಿದ ಪರೀಕ್ಷೆ, ಅದರ ಫಲ, ಅದಕ್ಕಾಗಿ ಉಪಯೋಗಿಸಿದ ಉಪಕರಣಗಳ ಆಕೃತಿ ಇವುಗಳನ್ನು ಸ್ವಲ್ಪವೂ ಚಿತ್ತಿಲ್ಲದಂತೆ ಚೆನ್ನಾಗಿ ಬರೆ

ದಿದ್ದರು. ಈರೀತಿಯಲ್ಲಿ ಅಲ್ಲಿನ ಪಾಠಶಾಲೆಗಳ ಬಾಲಕರ ಕೆಲಸಗಳು ನೋಡುವವರಿಗೆ ಆತ್ಯಾಶ್ಚರ್ಯವನ್ನುಂಟುಮಾಡುವಹಾಗಿದ್ದುವು. ನಮ್ಮ ದೇಶದಲ್ಲೂ ಉಪಾಧ್ಯಾಯರು ತಮ್ಮ ಬಾಲಕರಿಂದ ಕೆಲಸಗಳನ್ನು ಹೀಗೆಯೇ ಮಾಡಿಸಬೇಕೆಂದು ನಾವು ಕೋರುವೆವು.

ಇಂಗ್ಲೆಂಡಿನ ಕೆಲವು ವರ್ತಕರು ವಿದ್ಯಾಭ್ಯಾಸದ ವಿಷಯುಕವಾದ ವಸ್ತುಗಳನ್ನು ಪ್ರದರ್ಶನಕ್ಕಾಗಿ ಕಳುಹಿಸಿದ್ದರು. ಮ್ಯಾಕ್ಮಿಲ್ಲ್, ಲಾಂಗ್‌ಮ್ಯಾನ್ಸ್, ಬ್ಲ್ಯಾಕಿ ಈ ಮೂರು ಸಂಘದವರೇ ಇಂತಹ ವಸ್ತುಗಳನ್ನು ವಿಶೇಷವಾಗಿ ಕಳುಹಿಸಿದ್ದರು. ಈ ವಸ್ತುಗಳಲ್ಲಿ ಪುಸ್ತಕಗಳೇ ಮುಖ್ಯವಾದುವು. ಚರಿತ್ರೆಯಲ್ಲೂ ಭೂವಿವರಣೆಯಲ್ಲೂ ನಾನಾವಿಧವಾದ ಹೊಸಪುಸ್ತುಕಗಳನ್ನು ಇವರು ಪ್ರದರ್ಶನ ಮಾಡಿದರು, ಈ ಪುಸ್ತಕಗಳು ಈಗಿನ ವಿದ್ಯಾಭ್ಯಾಸಕ್ಕೆ ತಕ್ಕಂತೆ ಹೊಸ ಕ್ರಮದಲ್ಲಿ ಪಾಠ ಹೇಳಲು ಅನುಕೂಲವಾಗಿದ್ದುವು. ನಾನಾವಿಧವಾದ ಭೂಪಠದ ಪುಸ್ತಕಗಳು, ಗೋಡೆಗೆ ನೇತುಹಾಕುವ ಭೂಪಠಗಳು, ಅಹೋರಾತ್ರಿಗಳಿಗೂ ಋತುಭೇದಗಳಿಗೂ ಕಾರಣವನ್ನು ತೋರಿಸುವ ಗೋಳಗಳೂ, ಮಾನಸಿಕ ಗಣಿತಕ್ಕನುಕೂಲವಾದ ಪಠಗಳೂ, ಇವೇ ಮೊದಲಾದ ಅನೇಕ ಉಪಕರಣಗಳು ಈ ಸಂಘದವರಿಂದ ಪ್ರದರ್ಶನ ಮಾಡಲ್ಪಟ್ಟುವು.

ಹಿಂದೂಸ್ಥಾನದ ಕೆಲವುಕಡೆಗಳಿಂದ ಮುಖ್ಯವಾಗಿ ಮದ್ರಾಸಾಧಿಪತ್ಯದ ಎಲ್ಲಾ ಭಾಗಗಳಿಂದ ವಸ್ತುಗಳು ಪ್ರದರ್ಶನಕ್ಕಾಗಿ ಕಳುಹಿಸಲ್ಪಟ್ಟಿದ್ದುವು. ಜನರ ವಿದ್ಯಾಭ್ಯಾಸದಲ್ಲಿ ವಿಶೇಷ ಆದರವನ್ನು ಈಗೀಗ ತೋರ್ಪಡಿಸುತಿರುವರೆಂಬುದು, ಈ ವಸ್ತುಗಳಿಂದ ಗೊತ್ತಾಗುತಿತ್ತು. ಇವುಗಳಲ್ಲಿದ್ದ ಮುಖ್ಯವಾದ ವಿಧಗಳು ಯಾವವೆಂದರೆ!—

1. ಕಿಂಡರ್‌ಗಾರ್ಟ್ನ್ ಆಟಗಳಿಗೆ ಸಂಬಂಧಪಟ್ಟ ವಸ್ತುಗಳು— ಮಣ್ಣಿನಿಂದ ಮಾಡಿದ ವಸ್ತುಗಳು, ಮಣಿಗಳನ್ನು ಪೋಣಿಸಿ ಮಾಡಿದ ವಸ್ತುಗಳು, ಹತ್ತಿಯನ್ನು ಅಂಟಿಸಿ ಮಾಡಿದ ವಸ್ತುಗಳು, ಕಾಗದದಿಂದಲೂ ಒಲೇಗರಿಯಿಂದಲೂ ಹೆಣೆದು ಮಾಡಿದ ವಸ್ತುಗಳು, ಬೆಂಡಿನಿಂದಲೂ ಕಾಗದದ ರಟ್ಟಿನಿಂದಲೂ ಮಾಡಿದ ವಸ್ತುಗಳು, ಕಡ್ಡಿಗಳನ್ನು ನಾನಾವಿಧವಾದ ಆಕೃತಿಗಳಲ್ಲಿ ಅಂಟಿಸಲ್ಪಟ್ಟ ರಟ್ಟುಗಳು ಕಾಗದವನ್ನೂ ಬಟ್ಟೆಯನ್ನೂ ಕತ್ತರಿಸಿ ಮಾಡಿದ ಹೂಗಳು, ಇವೇ ಮೊದಲಾದುವು

ಈ ಭಾಗದಲ್ಲಿದ್ದುವು. ಮದ್ರಾಸಿನಲ್ಲಿಡುವ ಉಪಾಧ್ಯಾಯರ ಟ್ರೈನಿಂಗ್ ಸ್ಕೂಲಿನಲ್ಲೂ, ಮದ್ರಾಸಿನ ಕಲಾಶಾಲೆಯಲ್ಲೂ, ಮಂಗಳೂರಿನ ಬೇಸಲ್ ಮಿಷ್ಟ್ ಸೊಸೈಟಿಯಲ್ಲೂ ತಯಾರಾದ ಮಣ್ಣಿನ ಮಾದರಿಗಳು ಬಹಳ ಶ್ಲಾಘ್ಯವಾಗಿದ್ದುವು. ಮದ್ರಾಸಿನ ಕಿಲ್ ಪಾಕ್ ಗರ್ಲ್ಸ್ ಸ್ಕೂಲಿನಲ್ಲಿ ತಯಾರಾದ ಮಣಿಯ ಪಠಗಳು ಬಹಳ ಚನ್ನಾಗಿದ್ದುವು. ತಂಜಾವೂರಿನಿಂದಲೂ ಕೊಯಿಮುತ್ತೂರಿನಿಂದಲೂ ಬಂದಿದ್ದ ಚೆಂಡಿನ ಮತ್ತು ರಟ್ಟಿನ ಮಾದರಿಗಳು, ಉತ್ಕೃಷ್ಟವಾಗಿದ್ದುವು. ಈರೀತಿಯಲ್ಲಿ ಕಿಂಡರ್ ಗಾರ್ಟ್ನ್ ಆಟಗಳ ವಿಷಯದಲ್ಲಿ ಎಲ್ಲಾಕಡೆಯು ಜನರಿಗೂ ಆದರವಿರುವುದು ಕಾಣುತಿತ್ತು.

2 ಚಿತ್ರಗಳು—ಅನೇಕವಿಧವಾದ ಚಿತ್ರಗಳು ನಾನಾಕಡೆಗಳಿಂದ ಬಂದಿದ್ದುವು. ಮದರಾಸ್ ತಿರುವಲ್ಲಿಕ್ಕೇಣಿಯಲ್ಲಿರುವ ಡ್ರಾಯಿಂಗ್ ಮಾಸ್ಟರ್ ಮು॥ ರಾ॥ ವೆಂಕಟ ಸಾಮಿನಾಯಿಡು ಎಂಬವರು ಬಣ್ಣಗಳಿಂದ ಬರೆದಿದ್ದ ಹೂ, ಹಣ್ಣು, ಕಾಯಿಗಳು ಚನ್ನಾಗಿದ್ದುವು. ಇವರು ಕೆಲವು ಜನರ ಭಾವಚಿತ್ರವನ್ನೂ ಚನ್ನಾಗಿ ಬರೆದಿದ್ದರು. ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಿಂದ ಬಂದಿದ್ದ ನಾನಾಬಣ್ಣಿವುಳ್ಳ ಸೀಮೇಸುಣ್ಣದ ಡ್ರಾಯಿಂಗ್‌ಗಳು ಶಾಘ್ಯವಾಗಿದ್ದುವು. ಇದೇವಿಧವಾದ ಇನ್ನೂ ಕನೇಕಚಿತ್ರಗಳು ಪ್ರದರ್ಶನಕ್ಕೆ ಬಂದಿದ್ದುವು. ಬಿಳೀಕಾಗದದಮೇಲೆ ಪೆನ್ಸಿಲ್‌ನಿಂದ ಬರೆದಿದ್ದ ಚಿತ್ರಗಳೂ ನಾನಾಕಡೆಗಳಿಂದ ಬಂದಿದ್ದುವು, ಇಂತಹ ಚಿತ್ರಗಳನ್ನು ಮೈಸೂರಲ್ಲಿರುವ ಗೌರ್ನಮೆಂಟ್ ನಾರ್ಮಲ್‌ಸ್ಕೂಲ್ ವಿದ್ಯಾರ್ಥಿಗಳೂ ಕಳುಹಿಸಿದ್ದರು. ಇವುಗಳು ಚನ್ನಾಗಿದ್ದುದರಿಂದ ಇವಕ್ಕೆ ಕಮಿಟಿಯಿಂದ ಯೋಗ್ಯತಾ ಪತ್ರಿಕೆಯು ಕೊಡಲ್ಪಟ್ಟಿತು. ಈ ರೀತಿಯಲ್ಲಿ ಚಿತ್ರ ಬರೆಸುವುದರಲ್ಲೂ ಅನೇಕ ಪಾಠಶಾಲೆಗಳು, ಉತ್ಸಾಹವನ್ನು ತೋರಿಸುತ್ತಿದ್ದುದು ಸ್ಪಷ್ಟವಾಗಿ ಕಾಣುತಿತ್ತು. ಆದರೆ ಬಣ್ಣದಿಂದಲೂ ನಾನಾಬಣ್ಣಕ್ಕಿರುವ ಸೀಮೇಸುಣ್ಣದಿಂದಲೂ ಚಿತ್ರಬರೆಯುವುದೂ ನಮ್ಮ ಪಾಠಶಾಲೆಗಳಲ್ಲಿ ಈಗೀಗ ಪ್ರಾರಂಭವಾಗಿರುವುದು. ಇಂಗ್ಲೆಂಡಿನ ಪಾಠಶಾಲೆಗಳಲ್ಲಿರುವಂತೆ ಇಲ್ಲೂ ಉತ್ತಮಸ್ಥಿತಿಗೆ ಬರಬೇಕಾದರೆ ಇನ್ನೂ ವಿಶೇಷ ಪ್ರಯತ್ನವು ಬೇಕಾಗಿರುವುದು.

3. ಚರಿತ್ರೆ ಮತ್ತು ಭೂವಿವರಣೆಯ ಪಾಠಗಳ ಉಪಕರಣಗಳು—ಚರಿತ್ರೆಯ ಪಾಠದಲ್ಲಿ ನಿದರ್ಶನಕ್ಕಾಗಿ ಉಪಯೋಗಿಸುವ ಪುರಾತನಕಾಲದ ಕೆಲವು

ದಿದ್ದರು. ಈರೀತಿಯಲ್ಲಿ ಅಲ್ಲಿನ ಪಾಠಶಾಲೆಗಳ ಬಾಲಕರ ಕೆಲಸಗಳು ನೋಡುವವರಿಗೆ ಆತ್ಯಾಶ್ಚರ್ಯವನ್ನುಂಟುಮಾಡುವಹಾಗಿದ್ದುವು. ನಮ್ಮ ದೇಶದಲ್ಲೂ ಉಪಾಧ್ಯಾಯರು ತಮ್ಮ ಬಾಲಕರಿಂದ ಕೆಲಸಗಳನ್ನು ಹೀಗೆಯೇ ಮಾಡಿಸಬೇಕೆಂದು ನಾವು ಕೋರುವೆವು.

ಇಂಗ್ಲೆಂಡಿನ ಕೆಲವು ವರ್ತಕರು ವಿದ್ಯಾಭ್ಯಾಸದ ವಿಷಯಕವಾದ ವಸ್ತುಗಳನ್ನು ಪ್ರದರ್ಶನಕ್ಕಾಗಿ ಕಳುಹಿಸಿದ್ದರು. ಮ್ಯಾಕ್ಮಿಲ್ಲ್, ಲಾಂಗ್‌ಮ್ಯಾನ್, ಬ್ಲಾಕಿ ಈ ಮೂರು ಸಂಘದವರೇ ಇಂತಹ ವಸ್ತುಗಳನ್ನು ವಿಶೇಷವಾಗಿ ಕಳುಹಿಸಿದ್ದರು. ಈ ವಸ್ತುಗಳಲ್ಲಿ ಪುಸ್ತಕಗಳೇ ಮುಖ್ಯವಾದುವು. ಚರಿತ್ರೆಯಲ್ಲೂ ಭೂವಿವರಣೆಯಲ್ಲೂ ನಾನಾವಿಧವಾದ ಹೊಸಪುಸ್ತುಕಗಳನ್ನು ಇವರು ಪ್ರದರ್ಶನ ಮಾಡಿದರು, ಈ ಪುಸ್ತಕಗಳು ಈಗಿನ ವಿದ್ಯಾಭ್ಯಾಸಕ್ಕೆ ತಕ್ಕಂತೆ ಹೊಸ ಕ್ರಮದಲ್ಲಿ ಪಾಠ ಹೇಳಲು ಅನುಕೂಲವಾಗಿದ್ದುವು. ನಾನಾವಿಧವಾದ ಭೂಪಠದ ಪುಸ್ತಕಗಳು, ಗೋಡೆಗೆ ನೇತುಹಾಕುವ ಭೂಪಠಗಳು, ಅಹೋರಾತ್ರಿಗಳಿಗೂ ಋತುಭೇದಗಳಿಗೂ ಕಾರಣವನ್ನು ತೋರಿಸುವ ಗೋಳಗಳೂ, ಮಾನಸಿಕ ಗಣಿತಕ್ಕನುಕೂಲವಾದ ಪಠಗಳೂ, ಇವೇ ಮೊದಲಾದ ಅನೇಕ ಉಪಕರಣಗಳು ಈ ಸಂಘದವರಿಂದ ಪ್ರದರ್ಶನ ಮಾಡಲ್ಪಟ್ಟುವು.

ಹಿಂದೂಸ್ಥಾನದ ಕೆಲವುಕಡೆಗಳಿಂದ ಮುಖ್ಯವಾಗಿ ಮದ್ರಾಸಾಧಿಪತ್ಯದ ಎಲ್ಲಾ ಭಾಗಗಳಿಂದ ವಸ್ತುಗಳು ಪ್ರದರ್ಶನಕ್ಕಾಗಿ ಕಳುಹಿಸಲ್ಪಟ್ಟಿದ್ದುವು. ಜನರ ವಿದ್ಯಾಭ್ಯಾಸದಲ್ಲಿ ವಿಶೇಷ ಆದರವನ್ನು ಈಗೀಗ ತೋರ್ಪಡಿಸುತಿರುವರೆಂಬುದು, ಈ ವಸ್ತುಗಳಿಂದ ಗೊತ್ತಾಗುತಿತ್ತು. ಇವುಗಳಲ್ಲಿದ್ದ ಮುಖ್ಯವಾದ ವಿಧಗಳು ಯಾವವೆಂದರೆ!—

1. ಕಿಂಡರ್‌ಗಾರ್ಟ್ನ್ ಆಟಗಳಿಗೆ ಸಂಬಂಧಪಟ್ಟ ವಸ್ತುಗಳು— ಮಣ್ಣಿನಿಂದ ಮಾಡಿದ ವಸ್ತುಗಳು, ಮಣಿಗಳನ್ನು ಪೋಣಿಸಿ ಮಾಡಿದ ವಸ್ತುಗಳು, ಹತ್ತಿಯನ್ನು ಅಂಟಿಸಿ ಮಾಡಿದ ವಸ್ತುಗಳು, ಕಾಗದದಿಂದಲೂ ಓಲೇಗರಿಯಿಂದಲೂ ಹೆಣೆದು ಮಾಡಿದ ವಸ್ತುಗಳು, ಬೆಂಡಿನಿಂದಲೂ ಕಾಗದದ ರಟ್ಟಿನಿಂದಲೂ ಮಾಡಿದ ವಸ್ತುಗಳು, ಕಡ್ಡಿಗಳನ್ನು ನಾನಾವಿಧವಾದ ಆಕೃತಿಗಳಲ್ಲಿ ಅಂಟಿಸಲ್ಪಟ್ಟ ರಟ್ಟುಗಳು ಕಾಗದವನ್ನೂ ಬಟ್ಟೆಯನ್ನೂ ಕತ್ತರಿಸಿ ಮಾಡಿದ ಹೂಗಳು, ಇವೇ ಮೊದಲಾದುವು

ಈ ಭಾಗದಲ್ಲಿದ್ದುವು. ಮದ್ರಾಸಿನಲ್ಲಿಡುವ ಉಪಾಧ್ಯಾಯರಯರ ಟ್ರೈನಿಂಗ್ ಸ್ಕೂಲಿನಲ್ಲೂ, ಮದ್ರಾಸಿನ ಕಲಾಶಾಲೆಯಲ್ಲೂ, ಮಂಗಳೂರಿನ ಬೇಸಲ್ ಮಿಷ್ಟ್ ಸೊಸೈಟಿಯಲ್ಲೂ ತಯಾರಾದ ಮಣ್ಣಿನ ಮಾದರಿಗಳು ಬಹಳ ಶ್ಲಾಘ್ಯವಾಗಿದ್ದುವು. ಮದ್ರಾಸಿನ ಕಿಲ್ ಪಾಕ್ ಗರ್ಲ್ಸ್ ಸ್ಕೂಲಿನಲ್ಲಿ ತಯಾರಾದ ಮಣಿಯ ಪಠಗಳು ಬಹಳ ಚನ್ನಾಗಿದ್ದುವು. ತಂಜಾವೂರಿನಿಂದಲೂ ಕೊಯಿಮುತ್ತೂರಿನಿಂದಲೂ ಬಂದಿದ್ದ ಚೆಂಡಿನ ಮತ್ತು ರಟ್ಟಿನ ಮಾದರಿಗಳು, ಉತ್ಕೃಷ್ಟವಾಗಿದ್ದುವು. ಈರೀತಿಯಲ್ಲಿ ಕಿಂಡರ್ ಗಾರ್ಟನ್ ಆಟಗಳ ವಿಷಯದಲ್ಲಿ ಎಲ್ಲಾಕಡೆಯು ಜನರಿಗೂ ಆದರವಿರುವುದು ಕಾಣುತಿತ್ತು.

2 ಚಿತ್ರಗಳು—ಅನೇಕವಿಧವಾದ ಚಿತ್ರಗಳು ನಾನಾಕಡೆಗಳಿಂದ ಬಂದಿದ್ದುವು. ಮದರಾಸ್ ತಿರುವಲ್ಲಿಕ್ಕೇಣಿಯಲ್ಲಿರುವ ಡ್ರಾಯಿಂಗ್ ಮಾಸ್ಟರ್ ಮು॥ ರಾ॥ ವೆಂಕಟ ಸಾಮಿನಾಯಿಡು ಎಂಬವರು ಬಣ್ಣಗಳಿಂದ ಬರೆದಿದ್ದ ಹೂ, ಹಣ್ಣು, ಕಾಯಿಗಳು ಚನ್ನಾಗಿದ್ದುವು. ಇವರು ಕೆಲವು ಜನರ ಭಾವಚಿತ್ರವನ್ನೂ ಚನ್ನಾಗಿ ಬರೆದಿದ್ದರು. ಮದ್ರಾಸ್ ಕ್ರೈಸ್ತಿಯನ್ ಕಾಲೇಜಿನಿಂದ ಬಂದಿದ್ದ ನಾನಾಬಣ್ಣಿವುಳ್ಳ ಸೀಮೇಸುಣ್ಣದ ಡ್ರಾಯಿಂಗ್‌ಗಳು ಶಾಘ್ಯವಾಗಿದ್ದುವು. ಇದೇವಿಧವಾದ ಇನ್ನೂ ಕನೇಕಚಿತ್ರಗಳು ಪ್ರದರ್ಶನಕ್ಕೆ ಬಂದಿದ್ದುವು. ಬಿಳೀಕಾಗದದಮೇಲೆ ಪೆನ್‌ಸಲ್‌ನಿಂದ ಬರೆದಿದ್ದ ಚಿತ್ರಗಳೂ ನಾನಾಕಡೆಗಳಿಂದ ಬಂದಿದ್ದುವು, ಇಂತಹ ಚಿತ್ರಗಳನ್ನು ಮೈಸೂರಲ್ಲಿರುವ ಗೌರ್ನಮೆಂಟ್ ನಾರ್ಮಲ್‌ಸ್ಕೂಲ್ ವಿದ್ಯಾರ್ಥಿಗಳೂ ಕಳುಹಿಸಿದ್ದರು. ಇವುಗಳು ಚನ್ನಾಗಿದ್ದುದರಿಂದ ಇವಕ್ಕೆ ಕಮಿಟಿಯಿಂದ ಯೋಗ್ಯತಾ ಪತ್ರಿಕೆಯು ಕೊಡಲ್ಪಟ್ಟಿತು. ಈ ರೀತಿಯಲ್ಲಿ ಚಿತ್ರ ಬರೆಸುವುದರಲ್ಲೂ ಅನೇಕ ಪಾಠಶಾಲೆಗಳು, ಉತ್ಸಾಹವನ್ನು ತೋರಿಸುತ್ತಿದ್ದುದು ಸ್ಪಷ್ಟವಾಗಿ ಕಾಣುತಿತ್ತು. ಆದರೆ ಬಣ್ಣದಿಂದಲೂ ನಾನಾಬಣ್ಣಕ್ಕಿರುವ ಸೀಮೇಸುಣ್ಣದಿಂದಲೂ ಚಿತ್ರಬರೆಯುವುದೂ ನಮ್ಮ ಪಾಠಶಾಲೆಗಳಲ್ಲಿ ಈಗೀಗ ಪ್ರಾರಂಭವಾಗಿರುವುದು. ಇಂಗ್ಲೆಂಡಿನ ಪಾಠಶಾಲೆಗಳಲ್ಲಿರುವಂತೆ ಇಲ್ಲೂ ಉತ್ತಮಸ್ಥಿತಿಗೆ ಬರಬೇಕಾದರೆ ಇನ್ನೂ ವಿಶೇಷ ಪ್ರಯತ್ನವು ಬೇಕಾಗಿರುವುದು.

3. ಚರಿತ್ರೆ ಮತ್ತು ಭೂವಿವರಣೆಯ ಪಾಠಗಳ ಉಪಕರಣಗಳು—ಚರಿತ್ರೆಯ ಪಾಠದಲ್ಲಿ ನಿದರ್ಶನಕ್ಕಾಗಿ ಉಪಯೋಗಿಸುವ ಪುರಾತನಕಾಲದ ಕೆಲವು ಅ

ಯುಧಗಳ ಮಾದರಿಗಳೂ, ಚಿತ್ರಗಳೂ ಪ್ರದರ್ಶನಕ್ಕೆ ಬಂದಿದ್ದುವು. ಮದರಾಸ್ ಮುತ್ತ್ಯಾಲಪೇಟೆ ಹೈಸ್ಕೂಲು ಮಾಸ್ಟರ್ ಆದಿಕೇಶವ ನಾಯಿಡು ಎಂಬುವರು ಪೂರ್ವ ಕಾಲದ ಕೆಲವು ಮುಖ್ಯವಾದ ನಾಣ್ಯಗಳನ್ನು ಸಂಗ್ರಹಿಸಿ ಕಳುಹಿಸಿದ್ದರು. ಭೂ ವಿವರಣೆಯ ಪಾಠದಲ್ಲಿ ಉಪಯೋಗಿಸುವುದಕ್ಕಾಗಿ ಕೆಲವರು ಗೋಳಗಳನ್ನು ತಯಾರು ಮಾಡಿ ಕಳುಹಿಸಿದ್ದರು. ಇನ್ನು ಕೆಲವರು ಭೂಮಿಯು ತನ್ನ ಅಕ್ಷದ ಸುತ್ತಲೂ ಮತ್ತು ಸೂರ್ಯನ ಸುತ್ತಲೂ, ಚಂದ್ರನು ಭೂಮಿಯ ಸುತ್ತಲೂ ಸುತ್ತುವ ರೀತಿಯನ್ನು ತಿಳಿಸುವುದಕ್ಕನುಕೂಲವಾದ ಮಾದರಿಗಳನ್ನು ಕಳುಹಿಸಿದ್ದರು. ಋತುಗಳ ಮೂದ ವ್ಯತ್ಯಾಸವನ್ನು ತಿಳಿಸುವುದಕ್ಕೆ ಅನುಕೂಲವಾದ ಮಾದರಿಯನ್ನೂ, ಚಿತ್ರವನ್ನೂ ಒಬ್ಬಿಬ್ಬರು ಕಳುಹಿಸಿದ್ದರು. ಭೂವಿವರಣೆಯ ಪಾಠದಲ್ಲಿ ಬರುವ ನದಿ, ಬೆಟ್ಟ, ಕೊಲ್ಲಿ ಮುಂತ್ತಾದವುಗಳ ಅರ್ಥವನ್ನು ತಿಳಿಸಲು ಅನುಕೂಲವಾದ ಮಣ್ಣಿನ ಮಾದರಿಯನ್ನು ಒಬ್ಬರು ಕಳುಹಿಸಿದ್ದರು. ನದಿಗಳ ವಿಷಯ, ಪರ್ವತಪ್ರಸ್ತರಣರೀತಿ, ಸರೋವರಗಳ ವಿಷಯ ಮುಂತಾದ ಅಂಶಗಳನ್ನು ತಿಳಿಸಲು ಅನುಕೂಲವಾದ ಮಾದರಿಗಳು ಇರಲಿಲ್ಲ. ಈ ವಿಷಯದಲ್ಲಿ ಜನರು ಇನ್ನೂ ವಿಶೇಷ ಪ್ರಯತ್ನ ಪಡಬೇಕೆಂಬುದು ಇದರಿಂದ ವ್ಯಕ್ತವಾಗುತಿತ್ತು.

4. ಪಾಠಶಾಲೆಯು ವಸ್ತುಪ್ರದರ್ಶನಶಾಲೆಯಲ್ಲಿಡಬಹುದಾದ ಪದಾರ್ಥಗಳು. ಬಾಲಕರು ಶೇಖರಿಸಿದ ಇಂತಹ ವಸ್ತುಗಳು ಕೆಲವು ಕಡೆಗಳಿಂದ ಬಂದಿದ್ದುವು. ಕೊಡಗಿನಿಂದ ಬಂದಿದ್ದ ಈ ವಿಧವಾದ ವಸ್ತುಗಳು ಬಹಳ ಚೆನ್ನಾಗಿದ್ದುವು. ಒಂದೊಂದು ವಿಷಯವನ್ನು ತಿಳಿಸುವುದಕ್ಕನುಕೂಲವಾದ ವಸ್ತುಗಳನ್ನು ಒಂದೊಂದು ರಟ್ಟಿನಲ್ಲಿ ಕ್ರಮವಾಗಿ ಇಟ್ಟಿದ್ದರು. ಪಕ್ಷಿಗಳ ಉಗುರುಗಳು, ಪ್ರಾಣಿಗಳ ಹೊದಿಕೆ, ಮೊಟ್ಟೆಗಳು, ಲೋಹಗಳ ಅದುರುಗಳು, ಬಳಿಕೆಯಾದ ಲೋಹಗಳು ಈ ವಿಧವಾದ ಅಂಶಗಳನ್ನು ತಿಳಿಸಲು ಅನುಕೂಲವಾದ ರಟ್ಟುಗಳಿದ್ದುವು. ಎಲ್ಲಾ ಪಾಠಶಾಲೆಗಳಲ್ಲೂ ಬಾಲಕರು ಇಂತಹ ವಸ್ತುಗಳನ್ನು ಶೇಖರಿಸುವಂತೆ ಪ್ರೋತ್ಸಾಹಿಸಬೇಕೆಂದು ನಾವು ಕೋರುವೆವು.

5. ಕಸೂತಿಯ ಕೆಲಸಗಳು—ಬಾಲಕಿಯರ ಪಾಠಶಾಲೆಗಳಿಂದ ಕೆಲವು ಉತ್ತಮವಾದ ಕಸೂತಿಯ ಕೆಲಸಗಳು ಬಂದಿದ್ದವು. ಇವು ಮುಖ್ಯವಾಗಿ ಯೂರೋಪಿಯರ್ ಬಾಲಕೀಯರ ಪಾಠಶಾಲೆಯಲ್ಲಿ ತಯಾರಾದ ವಸ್ತುಗಳಾಗಿದ್ದುವು. ಸಮ್ಮ

ಬಾಲಕಿಯರ ಪಾಠಶಾಲೆಗಳಲ್ಲೂ ಈ ಕೆಲಸಗಳ ಅಭಿವೃದ್ಧಿಗೆ ಸರಿಯಾದ ಪ್ರಯತ್ನವನ್ನು ಕೈಕೊಳ್ಳುವುದು ಆವಶ್ಯಕವೆಂದು ತೋರುವುದು.

6. ಪ್ರಾಕೃತಿಕ ಶಾಸ್ತ್ರಗಳಿಗೆ ಬೇಕಾದ ಉಪಕರಣಗಳು.

ಮದ್ರಾಸಿನಲ್ಲಿರುವ ಸಿ. ರಾಮಸ್ವಾಮಿನಾಯುಡು ಎಂಬವರು ಈ ಶಾಸ್ತ್ರ ಪಾಠಗಳಲ್ಲಿ ಉಪಯುಕ್ತವಾದ ಉಪಕರಣಗಳನ್ನು ತಯಾರು ಮಾಡಿ ಪ್ರದರ್ಶನ ಮಾಡಿದರು. ಪ್ರದರ್ಶನ ಮಂದಿರದಲ್ಲಿ ಇವುಗಳಿಂದ ಕೆಲಸಮಾಡಿ ಈ ಪಾಠಗಳಲ್ಲಿ ಉಪಯೋಗಿಸಲು ಇವು ಅನುಕೂಲವಾದುವು ಎಂಬುದನ್ನು ಇವರು ಜನರಿಗೆ ತೋರ್ಪಡಿಸುತ್ತಿದ್ದರು. ಇವುಗಳ ಬೆಲೆಯು ಇಂಗ್ಲೆಂಡಿನಿಂದ ನಾವು ತರಿಸುವ ಉಪಕರಣಗಳ ಬೆಲೆಗಿಂತಲೂ ಬಹಳ ಕಡಿಮೆಯಾಗಿದ್ದಿತು. ನಮ್ಮ ಪಾಠಶಾಲೆಗಳ ಉಪಾಧ್ಯಾಯರು ಇಲ್ಲಿಂದ ಉಪಕರಣಗಳನ್ನು ತರಿಸಿಕೊಂಡು ಇವರನ್ನು ಪ್ರೋತ್ಸಾಹಿಸಬೇಕೆಂದು ನಾವು ಕೋರುವೆವು.

7. ಪಾಠಶಾಲೆಗೆ ಬೇಕಾದ ಮರದ ಸಾಮಾನುಗಳು.—ಮುರಗಪ್ಪ ಮೇಸ್ತ್ರಿಯೆಂಬವರು ಪಾಠಶಾಲೆಗೆ ಬೇಕಾದ ಮೇಜು, ಬೆಂಚು ಮೊದಲಾದುವನ್ನು ತಯಾರು ಮಾಡಿ ಪ್ರದರ್ಶನ ಮಾಡಿದರು. ಇವುಗಳಲ್ಲಿ ಕಿಂಡರ್‌ಗಾರ್ಟೆನ್ ಆಟಗಳಿಗೆ ಬೇಕಾದ ಮೇಜು ಬೆಂಚುಗಳು ಬಹಳ ಚೆನ್ನಾಗಿದ್ದುವು. ಉಳಿದ ಸಾಮಾನುಗಳು ಅಷ್ಟು ಅನುಕೂಲವಾಗಿರಲಿಲ್ಲ. ಇವುಗಳ ರಚನೆಯನ್ನು ಸ್ವಲ್ಪ ಬದಲಾಯಿಸಿಕೊಂಡರೆ ಇವು ಉಪಯೋಗಿಸಲು ಅನುಕೂಲವಾಗುವಂತಿದ್ದುವು.

8. ಸ್ಕೂಲು ಕೆಲಸಕ್ಕೆ ಅನುಕೂಲವಾದ ಪಾಠದ ಪಟ್ಟಿಗಳು.—ಪ್ರೈಮರೀ ಸ್ಕೂಲುಗಳಲ್ಲಿ ಪಾಠಗಳನ್ನು ನಡೆಸುವ ಕ್ರಮವನ್ನು ತೋರಿಸುವ ಪಟ್ಟಿಗಳೂ, ಕಿಂಡರ್‌ಗಾರ್ಟೆನ್ ಆಟಗಳನ್ನು ಪರಸ್ಪರ ಸಂಬಂಧಿಸಿಕೊಂಡು ಆಡಿಸುವರೀತಿಯನ್ನು ತೋರಿಸುವ ಪಟ್ಟಿಗಳೂ ಅನೇಕವಾಗಿ ಬಂದಿದ್ದುವು. ಈ ಪಟ್ಟಿಗಳನ್ನು ನೋಡುವುದರಿಂದ ಉಪಾಧ್ಯಾಯರು ವಿಶೇಷ ಪ್ರಯೋಜನವನ್ನು ಹೊಂದುಬಹುದಾಗಿತ್ತು.

ಒಟ್ಟಿನಲ್ಲಿ ಪ್ರದರ್ಶನವು ಬಹಳ ಶ್ಲಾಘ್ಯವಾಗಿಯೂ, ಉಪಾಧ್ಯಾಯರಿಗೆ ಬಹಳ ಉಪಯೋಗಕರವಾಗಿಯೂ ಇದ್ದಿತೆಂದು ನಿಸ್ಸಂಶಯವಾಗಿ ಹೇಳಬಹುದು. ನಮ್ಮ ಪಾಠಶಾಲೆಗಳಲ್ಲಿ ಈಗಿನಕಾಲಕ್ಕನುಗುಣವಾಗಿ ವಿದ್ಯಾಭ್ಯಾಸವನ್ನು ನಡೆಸಲು ಉಪಾಧ್ಯಾಯರು ಪ್ರಯತ್ನಪಡುತ್ತಿರುವುದು ಅಲ್ಲಿ ಪ್ರದರ್ಶನಕ್ಕೆ ಬಂದಿದ್ದ ವಸ್ತುಗಳಿಂದ ಸ್ಪಷ್ಟವಾಗಿ ಕಾಣುತ್ತಿತ್ತು. ಆದರೆ ನಮ್ಮ ವಿದ್ಯಾಭ್ಯಾಸವನ್ನು ಪಾಶ್ಚಾತ್ಯ ರಾಜ್ಯ

ಗಳಲ್ಲಿ ನಡೆಯುತಿರುವ ವಿದ್ಯಾಭ್ಯಾಸದ ಸ್ಥಿತಿಗೆ ತರಲು ಇನ್ನೂ ವಿಶೇಷಪ್ರಯತ್ನವು ಬೇಕೆಂಬುದೂ ಸ್ಪಷ್ಟವಾಗಿಯೇ ಇತ್ತು. ಈ ಪ್ರದರ್ಶನವನ್ನು ನೋಡಲು ಸುಮಾರು ನಾಲ್ಕು ಸಹಸ್ರಮಂದಿ ಸ್ತ್ರೀಯರೂ, ಒಂಬತ್ತು ಸಹಸ್ರಮಂದಿ ಪುರುಷರೂ, ಮದ್ರಾಸು ನಗರದ ಪ್ರೈಮರೀ ಪಾಠಶಾಲೆಗಳಲ್ಲಿ ಓದುವ ಬಾಲಕರೂ ಬಂದಿದ್ದರು. ಮೈಸೂರುದೇಶದಿಂದ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರೇ ಮೊದಲಾದ ಎಲ್ಲಾ ಇನ್‌ಸ್ಪೆಕ್ಟರುಗಳೂ, ಅನೇಕ ಮಂದಿ ಉಪಾಧ್ಯಾಯರೂ ಬಂದಿದ್ದರು. ಮದ್ರಾಸು ಆಧಿಪತ್ಯದ ಎಲ್ಲಾ ಭಾಗಗಳಿಂದಲೂ ಅನೇಕಮಂದಿ ಉಪಾಧ್ಯಾಯರೂ, ಇನ್‌ಸ್ಪೆಕ್ಟರುಗಳೂ ಬಂದಿದ್ದರು. ಇವರೆಲ್ಲರೂ ಅಲ್ಲಿದ್ದ ವಸ್ತುಗಳಲ್ಲಿ ತಮಗೆ ಉಪಯುಕ್ತವಾದುವುಗಳ ವಿಷಯವನ್ನು ಬರೆದುಕೊಳ್ಳುತ್ತಿದ್ದರು. ಇವರು ತಮ್ಮ ಸ್ಥಳಗಳಿಗೆ ಹೋದಮೇಲೆ ತಾವು ಬರೆದುಕೊಂಡ ಅಥವಾ ನೋಡಿದ ಅಂಶಗಳನ್ನು ತಮ್ಮ ತಮ್ಮ ಪಾಠಶಾಲೆಗಳಲ್ಲಿ ಉಪಯೋಗಿಸಿದರೆ ಈ ಪ್ರದರ್ಶನದಿಂದ ಆಗಬೇಕಾದ ಪ್ರಯೋಜನವು ಪೂರ್ಣವಾಗಿ ನೆರವೇರಿತೆಂದು ಹೇಳಬಹುದು. ಆದುದರಿಂದ ಇವರು ತಾವು ತಿಳಿದುಕೊಂಡು ಹೋದ ಅಂಶಗಳನ್ನು ಈ ರೀತಿಯಲ್ಲಿ ಉಪಯೋಗಿಸಬೇಕೆಂಬುದೇ ನಮ್ಮ ಕೋರಿಕೆಯಾಗಿರುವುದು.

ಈ ಪ್ರದರ್ಶನ ಕಾಲದಲ್ಲಿ ಪ್ರತಿದಿವಸವೂ ವಿದ್ಯಾಭ್ಯಾಸ ಸಂಬಂಧವಾದ ಬಂದೊಂದು ವಿಷಯದಲ್ಲಿ ಉಪನ್ಯಾಸವೂ ನಡೆಯಿತು. ಹೀಗೆ ನಡೆದ ಉಪನ್ಯಾಸಗಳು ಯಾವುವೆಂದರೆ :—

1. ಚಿತ್ರ ಬರೆಸುವ ವಿಷಯ.—ಪ್ರೆಸಿಡೆನ್ಸಿ ಕಾಲೇಜ್ ಪ್ರಿನ್ಸಿಪಾಲ್ ಮೆ॥ ಜಿ. ಹೆಚ್. ಸ್ಟೋರ್ಟ್ ಸಾಹೇಬರು ಕೊಟ್ಟುದು.

2. ಕಸೂತೀ ಕೆಲಸ.—ಮೆ॥ ಹೆಂಡರ್‌ಸನ್ ಸಾಹೇಬರ ಮಗಳು ಕೊಟ್ಟುದು.

3. ಬರೆವಣಿಗೆ.—ಮೆ॥ ಎ. ಆರ್ನೋಲ್ಡ್ ಸಾಹೇಬರ ಮಗಳು ಕೊಟ್ಟುದು

4. ಪಾಠಶಾಲೆಯ ವಸ್ತುಪ್ರದರ್ಶನಶಾಲೆ.—ಮ॥ ರಾ॥ ಪಿ. ಟಿ. ಶ್ರೀನಿವಾಸೈಂಗಾರ್ ಎಂ. ಎ. ಎಲ್. ಟಿ. ಯವರು ಕೊಟ್ಟುದು.

5. ಪಾಠಶಾಲೆಯ ಆರೋಗ್ಯವಿಚಾರ.—ಮ॥ ರಾ॥ ಪಿ. ಎಸ್. ಚಂದ್ರಶೇಖರ್ ಎಂ. ಡಿ. ಯವರು ಕೊಟ್ಟುದು.

6. ಪ್ರೈಮರೀ ಸ್ಕೂಲುಗಳಿಗೆ ಬೇಕಾದ ಉಪಕರಣಗಳು.—ಮೆ॥ ಇ. ಡಿ. ಆರ್ಬರ್ ನಾಹೇಬರ ಪತ್ನಿಯು ಕೊಟ್ಟುದು.

7. ಪ್ರೈಮರೀ ಸ್ಕೂಲುಗಳ ಸಂವಿಧಾನ.—ಮದ್ರಾಸು ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ ಮೆ॥ ಎ. ಮೇಹ್ಯೂ ಸಾಹೇಬರು ಕೊಟ್ಟುದು.

ಈ ಉಪನ್ಯಾಸಗಳನ್ನು ಮಕ್ಕಳ ವಿದ್ಯಾಭ್ಯಾಸದಲ್ಲಿ ವಿಶೇಷ ಪರಿಶ್ರಮವುಳ್ಳವರೇ ಕೊಟ್ಟುದರಿಂದ ಇವು ಬಹಳ ಚೆನ್ನಾಗಿದ್ದುವೆಂದು ಹೇಳಬೇಕಾದುದೇ ಇಲ್ಲ. ಇವುಗಳ ವಿಷಯವನ್ನು ಇಲ್ಲಿ ಬರೆಯಲು ಅವಕಾಶವಿಲ್ಲವಾದುದರಿಂದ ಮುಂಬೆ ಬರೆಯುವೆವು.

ಪ್ರದರ್ಶನದ ಕೊನೆಯ ದಿನಸ ಕಮಿಟಿಯ ಸೆಕ್ರಟರಿಗಳಲ್ಲೊಬ್ಬರಾದ ಮೆ॥ ರಾ॥ ಜಿ. ಮಾಣಿಕ್ಯಶೆಟ್ಟಿಯವರು ಪ್ರದರ್ಶನದ ಉದ್ದೇಶವನ್ನೂ, ಅದರಿಂದ ಆಗಬೇಕಾದ ಫಲವನ್ನೂ ವಿಶೇಷವಾಗಿ ವಿವರಿಸಿದರು. ಪ್ರದರ್ಶನಕಾರ್ಯದಲ್ಲಿ ಸಹಾಯ ಮಾಡಿದ ದೊಡ್ಡಮನುಷ್ಯರನ್ನೆಲ್ಲಾ ಬಹಳವಾಗಿ ವಂದಿಸಿದರು. ಅನಂತರ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಿದ್ದವರಲ್ಲಿ ಬಹುಮಾನಗಳನ್ನು ಹೊಂದಿದವರ ಹೆಸರುಗಳನ್ನು ಇವರು ಓದಿದರು. ಅಲ್ಲಿಗೆ ಪ್ರದರ್ಶನವು ಮುಗಿಯಿತು.

M. V.

ವಿದ್ಯಾಭ್ಯಾಸ.

ಅತ್ಯಾವಶ್ಯಕವಾದ ವಿದ್ಯೆಗಳು ಯಾವುವೊ ಅವನ್ನು ಮೊದಲು ಕಲಿಯದೆ ಸಂಗೀತಾದಿ ಕುಶಲ ಕಲೆಗಳ ಅಭ್ಯಾಸದಲ್ಲಿ ಕಾಲಹರಣ ಮಾಡುವುದು ಒಳ್ಳೆಯುದಲ್ಲ. ಇದರಿಂದ ಹಾನಿಯುಂಟಾಗದೆ ಇರಲಾರದು. ಸರಿಯಾದ ವಿಚಾರವಿಲ್ಲದೆ ಯಾವುದೊ ಮಾರ್ಗವನ್ನನುಸರಿಸಿ ಮಕ್ಕಳ ಉಪಚಾರವನ್ನು ಉಚಿತ ರೀತಿಯಲ್ಲಿ ಮಾಡದೆ ಮಕ್ಕಳಿಗೆ ತನ್ನಲ್ಲಿದ್ದ ಪ್ರೀತಿಯನ್ನು ಹೋಗಲಾಡಿಸಿಕೊಂಡು ಅವರನ್ನು ಹಾಳುಮಾಡಿದ ತಂದೆಯು ತಾನು ಮಾಡಿದ ಅನುಚಿತಕಾರ್ಯದಿಂದುಂಟಾದ ವಿಪರೀತ

ಫಲವನ್ನು ನೋಡಿ ಬುದ್ಧಿಬಂದ ಬಳಿಕ, ಅಯ್ಯೋ! ನಾನು ಮೋಸಹೋದೆನು, ಗ್ರೀಕರ ಕಟ್ಟು ಕಥೆಗಳನ್ನೋದುವುದರಲ್ಲಿ ವೃಥಾ ಕಾಲಹರಣ ಮಾಡಿದೆನು, ಅದಕ್ಕೆ ಬದಲಾಗಿ ಮಕ್ಕಳ ಶಿಕ್ಷಣವಿಷಯವನ್ನು ತಿಳಿದುಕೊಂಡಿದ್ದರೆ ಬಹಳ ಪ್ರಯೋಜನವಿತ್ತು, ಇಂಥಾ ಕೇಡಿಗೆ ಅವಕಾಶವಿರುತ್ತಿರಲಿಲ್ಲ ಎಂದು ಮುಂತಾಗಿ ಅವನು ಚಿಂತಿಸದೆ ಇರಲಾರನು.

ಹಾಗೆಯೆ ತಾಯಿಯು ತನ್ನ ಮೊದಲನೆಯ ಮಗುವು ಜ್ವರಬಂದು ಸತ್ತುಹೋಗಲು ಬಹುವ್ಯಸನವನ್ನು ಹೊಂದಿ, ಮಗುವು ಏತಕ್ಕೆ ಹೀಗೆ ಪ್ರಾಣಬಿಟ್ಟಿತು, ಅದಕ್ಕೆ ಏತಕ್ಕೆ ಜ್ವರವು ಬಂದಿತು ಎಂದು ಚಿಂತಿಸುತ್ತಾ ಮಗುವಿನ ಶಕ್ತಿಮೀರಿ ವಿದ್ಯಾವ್ಯಾಸಂಗ ಮಾಡಿಸಿದುದರಿಂದ ತ್ರಾಣಗುಂದಿ ಹೀಗೆ ಜ್ವರಬಂದು ಮರಣವು ಸಂಭವಿಸಿತೊ ಎಂದು ಶಂಕಿಸುತ್ತಿರುವಾಗ, ವೈದ್ಯನು ನಿಶ್ಚಯ, ಅತಿಯಾಗಿ ವಿದ್ಯಾಭ್ಯಾಸ ಮಾಡಿಸಿದುದರಿಂದ ಮಗುವಿನ ಶಕ್ತಿಯು ಕಡಿಮೆಯಾಗಿ ಜ್ವರಬಂದು ಪ್ರಾಣವು ಹೋಯಿತು, ಹಾಗೆ ವ್ಯಾಸಂಗ ಮಾಡದಿದ್ದರೆ ಬದುಕಿಕೊಂಡು ದೀರ್ಘಕಾಲ ಜೀವಿಸಬಹುದಾಗಿತ್ತು ಎಂದು ಹೇಳಲು, ತಾಯಿಯು ಅದನ್ನು ಕೇಳಿ ಬಹು ವ್ಯಸನಾಕ್ರಾಂತಳಾಗಿ, ಅಯ್ಯೋ! ನಾನು ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟ ಡ್ಯಾಂಟೆಯ ಗ್ರಂಥವನ್ನು ಓದುವುದರಲ್ಲಿ ಹೆಚ್ಚು ಕಾಲವನ್ನು ಕಳೆಯುವುದಕ್ಕೆ ಬದಲಾಗಿ ಮಕ್ಕಳ ಪೋಷಣ ವಿಷಯಕವಾದ ಗ್ರಂಥವನ್ನು ವ್ಯಾಸಂಗಮಾಡಿ ಆ ವಿಷಯವನ್ನು ಯಥಾರೀತಿಯಲ್ಲಿ ತಿಳಿದು ನನ್ನ ಮಗುವನ್ನು ಸರಿಯಾಗಿ ಉಪಚರಿಸಿದ್ದರೆ ಅದು ಬದುಕಿಕೊಳ್ಳುತಿತ್ತು, ಅದರ ಮರಣಕ್ಕೆ ನಾನೇ ಕಾರಣ ಎಂದು ಬಹಳವಾಗಿ ಹಂಬಲಿಸದೆ ಇರಲಾರಳು.

ಹೀಗೆ ಮೇಲಿನ ವಿಚಾರದಿಂದ ಮಕ್ಕಳ ಪೋಷಣ ಶಿಕ್ಷಣಕ್ಕೆ ಜೀವವಿಷಯಕವಾದ ನಿಯಮಗಳ ವಿಜ್ಞಾನವು ಅವಶ್ಯಕವೆಂಬುದು ವ್ಯಕ್ತವಾಗುವುದು. ಮಕ್ಕಳನ್ನು ಸರಿಯಾಗಿ ಕಾಪಾಡಬೇಕಾದರೆ ದೇಹಮನಶ್ಶಾಸ್ತ್ರಗಳ ಜ್ಞಾನವು ತಕ್ಕಮಟ್ಟಿಗಾದರೂ ಇರಬೇಕು. ಅದರೆ ಈ ಮಾತನ್ನು ಕೇಳಿ ಅನೇಕರು ನಗಬಹುದು. ಈ ಕಷ್ಟವಾದ ಶಾಸ್ತ್ರಗಳನ್ನು ಎಲ್ಲಾ ತಾಯಿತಂದೆಗಳು ವ್ಯಾಸಂಗ ಮಾಡಬೇಕೆಂಬುದು ಹುಚ್ಚುತನವಲ್ಲವೆ? ಹಾಗೆ ವ್ಯಾಸಂಗ ಮಾಡಲು ಸಾಧ್ಯವೆ? ಎಂದು ಅನೇಕರು ಯೋಚಿಸಬಹುದು. ಈ ಶಾಸ್ತ್ರಗಳನ್ನು ವ್ಯಾಸಂಗ ಮಾಡಲು ಸಾಧ್ಯವಿಲ್ಲವೆಂಬ ಅಭಿಪ್ರಾಯವು ತಪ್ಪು. ಇವನ್ನು ಎಲ್ಲರೂ ಕಲಿಯಬಹುದು. ಅದರೆ ಸರ್ವರೂ ಇದನ್ನು ಸಂಪೂರ್ಣವಾಗಿ ಓದಿ ಪಾರಂಗತರಾಗಿರಬೇಕೆಂದು ನಮ್ಮ ತಾತ್ಪರ್ಯವಲ್ಲ.

ಈ ಶಾಸ್ತ್ರಗಳ ಸಾಮಾನ್ಯ ತತ್ವಗಳನ್ನು ಯಥೋಚಿತವಾಗಿ ತಿಳಿದುಕೊಂಡು ಅದಕ್ಕನುಸಾರವಾಗಿ ನಡೆದರೆ ಸಾಕು. ಇವನ್ನು ಸರ್ವರಿಗೂ ಪಾಠಶಾಲೆಗಳಲ್ಲಿ ಸುಲಭವಾಗಿ ಕಲಿಸಬಹುದು. ಇವನ್ನು ಕಲಿಯಲು ಸಾಧ್ಯವಿಲ್ಲವೆಂಬುದು ತಪ್ಪು.

ವಾಚಕರು ಕೆಳಗಿನ ಸಂಗತಿಗಳನ್ನು ಜ್ಞಾಪಕದಲ್ಲಿಡತಕ್ಕುದು. ಏನಂದರೆ— ಕೆಲವು ನಿಯಮಗಳನ್ನನುಸರಿಸಿ ಮಕ್ಕಳ ದೇಹವೂ ಮನಸ್ಸೂ ವಿಕಾಸವಾಗಿ ಅಭಿವೃದ್ಧಿಯನ್ನು ಹೊಂದುವುವು. ಸ್ವಲ್ಪಮಟ್ಟಿಗಾದರೂ ಈ ನಿಯಮಗಳಿಗನುಸಾರವಾಗಿ ತಾಯಿತಂದೆಗಳು ನಡೆದುಕೊಂಡರೆ ಮಕ್ಕಳು ಬದುಕುವರು, ಇಲ್ಲದಿದ್ದರೆ ಅಕಾಲಮರಣವನ್ನು ಹೊಂದುವುದು ನಿಶ್ಚಯ. ತಕ್ಕಮಟ್ಟಿಗಾದರೂ ಈ ನಿಯಮಗಳನ್ನನುಸರಿಸಿ ನಡೆಯದಿದ್ದರೆ ದೇಹ ಮನೋವಿಕಾಸದಲ್ಲಿ ನ್ಯೂನತೆಯು ಉಂಟಾಗುವುದು ಸತ್ಯ. ಸ್ವಲ್ಪವೂ ಕಡಮೆಯಿಲ್ಲದಂತೆ ಇವುಗಳಿಗನುಸಾರವಾಗಿ ನಡೆದುಕೊಂಡ ಹೊರತು ಮಕ್ಕಳ ಮನಸ್ಸೂ ದೇಹವೂ ಪೂರ್ಣಾಭಿವೃದ್ಧಿಯನ್ನು ಹೊಂದಲು ಅವಕಾಶವಿಲ್ಲ. ಇದು ಅನುಭವಸಿದ್ಧವಾದ ವಿಷಯವು. ಹೀಗಿರುತ್ತಾ ಜನ್ಮಾವಧಿಯಲ್ಲಿ ಯಾವಾಗಲಾದರು ತಾಯಿತಂದೆಗಳಾಗಬಹುದಾದವರೆಲ್ಲರೂ ಈ ನಿಯಮಗಳು ಯಾವುವೆಂಬುದನ್ನು ಗೊತ್ತುಮಾಡಿಕೊಂಡು ಪ್ರಯತ್ನಪೂರ್ವಕವಾಗಿ ಅವುಗಳಿಗನುಸಾರವಾಗಿ ನಡೆಯಬೇಕಾದುದು ಆವಶ್ಯಕವೊ ಅಲ್ಲವೊ ಎಂಬುದನ್ನು ವಾಚಕರೇ ಪರ್ಯಾಲೋಚಿಸತಕ್ಕುದು.

ಇದುವರೆಗೂ ತಾಯಿತಂದೆಗಳು ಮಕ್ಕಳ ವಿಷಯದಲ್ಲಿ ಮಾಡಬೇಕಾದ ಕಾರ್ಯಗಳನ್ನು ಕುರಿತು ವಿಚಾರ ಮಾಡಿದುದಾಯಿತು. ಈಗ ಪೌರರ ಕರ್ತವ್ಯತೆಯು ವಿಚಾರಿಸಲ್ಪಡುವುದು. ಪೌರರ ಕಾರ್ಯಗಳನ್ನು ಸಮಂಜಸವಾಗಿ ಮಾಡಲು ಎಂಥಾ ವಿಜ್ಞಾನವು ಬೇಕೆಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಈ ವಿಷಯವಾಗಿ ಪಾಠಶಾಲಾ ಅಧಿಕಾರಿಗಳು ಪರ್ಯಾಲೋಚಿಸದೆ ತಟಸ್ಥರಾಗಿರುವರೆಂದು ಹೇಳಲಾಗುವುದಿಲ್ಲ. ಪಾಠಶಾಲೆಗಳಲ್ಲಿ ವ್ಯಾಸಂಗ ಮಾಡಿಸುವ ವಿಷಯಗಳ ಪಟ್ಟಿಯಲ್ಲಿ ರಾಜಕೀಯ ಮತ್ತು ಸಾಮಾಜಿಕ ವಿಷಯಗಳಿಗೆ ಹೆಸರು ಮಾತ್ರಕ್ಕಾದರೂ ಸಂಬಂಧಪಟ್ಟ ವಿದ್ಯೆಗಳು ಸೇರಿಸಲ್ಪಟ್ಟಿರುವುವು. ಇವುಗಳಲ್ಲಿ ಮುಖ್ಯವಾದುದು ಚರಿತ್ರೆಯು. ಆದರೆ ಅಲ್ಲಿ ಚರಿತ್ರ ಸಂಬಂಧವಾಗಿ ಹೇಳಿಕೊಡುವ ವಿಷಯವು ಪೌರಕಾರ್ಯಕ್ಕೆ ಸ್ವಲ್ಪವೂ ಮಾರ್ಗದರ್ಶಿಯಾಗಿಲ್ಲ. ಸಾಮಾನ್ಯವಾಗಿ ಪಾಠಶಾಲೆಗಳಿಗೋಸ್ಕರ ಬರೆದಿರುವ ಬಾಲಬೋಧಕವಾದ ಚರಿತ್ರ ಗ್ರಂಥಗಳೂ ಪ್ರೌಢಚರಿತ್ರ ಗ್ರಂಥಗಳೂ

ಪೌರಕಾರ್ಯ ವಿಷಯವಾಗಿ ಸ್ವಲ್ಪವನ್ನೂ ತಿಳಿಸುವುವಾಗಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ.

ಮಕ್ಕಳಿಗೆ ಸಾಮಾನ್ಯವಾಗಿ ರಾಜರ ಚರಿತ್ರೆಯನ್ನು ಕಲಿಸುವರು. ಇದರಲ್ಲಿ ಸಂಘಶಾಸ್ತ್ರ ವಿಷಯವು ಸ್ವಲ್ಪವೂ ಅಡಗಿಲ್ಲ. ಅಸ್ಥಾನದಲ್ಲಿ ನಡೆದ ದಂಗೆ ಮೋಸ ವಂಚನೆ ದ್ರೋಹ ಚಾಡಿ ಕೊಲೆ ಮುಂತಾದುವುಗಳ ವ್ಯಾಸಂಗದಿಂದ ಒಂದು ಜನಾಂಗದವರು ಏಳಿಗೆಗೆ ಬರುವ ಮಾರ್ಗವು ಯಾವುದೆಂಬುದನ್ನು ಗೊತ್ತುಮಾಡಿ ಕೊಳ್ಳಲು ಸಹಾಯವೇನೂ ಇಲ್ಲ. ಮತ್ತು ಈ ಚರಿತ್ರೆಯಲ್ಲಿ ಸಾಮಾನ್ಯವಾಗಿ ಯುದ್ಧಗಳ ವಿಷಯವು ತಿಳಿಸಲ್ಪಡುವುದು. ಇಂಥಾ ಸ್ಥಳದಲ್ಲಿ ಇಂಥಾ ಇಸವಿಯಲ್ಲಿ ಇಂಥಾ ತಿಂಗಳಲ್ಲಿ ಇಷ್ಟನೆಯ ತಾರೀಕಿನಲ್ಲಿ ಒಂದು ಯುದ್ಧವು ನಡೆಯಿತು. ಅಲ್ಲಿ ಸೇರಿದ್ದ ಸೇನಾಪತಿಗಳೂ ಅವರ ಕೈಕೆಳಗಿದ್ದ ಮುಖ್ಯಸ್ಥರೂ ಇಂಥವರು. ಎದರು ಪಕ್ಷದಲ್ಲಿ ಇಂಥಿಂಥವರು ಸೇರಿದ್ದರು. ಉಭಯ ಪಕ್ಷದವರಲ್ಲಿಯೂ ಕಾಲಾಳು ಕುದುರೆ ಫಿರಂಗಿ ಮುಂತಾದವು ಇಷ್ಟಿಷ್ಟಿದ್ದುವು. ಅವರು ವ್ಯೂಹರಚನೆಯನ್ನು ಹೀಗೆ ಹೀಗೆ ಮಾಡಿದ್ದರು. ಭಟರು ಈ ರೀತಿಯಲ್ಲಿ ಕಾದಿದರು. ಒಟ್ಟು ಇಷ್ಟು ಜನರು ಸತ್ತರು; ಇಷ್ಟು ಜನರು ಬದುಕಿದರು. ಇಷ್ಟುಜನರಿಗೆ ಗಾಯವಾಯಿತು. ಇಂಥಾ ಪಕ್ಷದವರು ಜಯಸಿದರು. ಅವರು ಇಷ್ಟುಜನ ಶತ್ರುಗಳನ್ನು ಕೈಸೆರೆ ಹಿಡಿದರು. ಆ ಬಳಿಕ ಈ ರೀತಿಯಲ್ಲಿ ಒಪ್ಪಂದವು ಮಾಡಲ್ಪಟ್ಟಿತು.

ಹೀಗೆ ಇಂಥಾ ವಿಷಯಗಳೇ ಸಾಮಾನ್ಯವಾಗಿ ಚರಿತ್ರೆಗಳಲ್ಲಿ ಬರೆಯಲ್ಪಟ್ಟಿರುವುವು. ಇವುಗಳ ವ್ಯಾಸಂಗದಿಂದ ಪೌರಕಾರ್ಯಕ್ಕೆ ಎಷ್ಟರಮಟ್ಟಿಗೆ ಪ್ರಯೋಜನವಾಗುವುದು? ಇಂಥಾ ಅನೇಕ ಯುದ್ಧಗಳ ವಿಷಯವನ್ನು ಬಹು ಆಸಕ್ತಿಯಿಂದ ಓದಿದಾಗ್ಗೂ ಪೌರಕಾರ್ಯಕ್ಕೆ ಅದರಿಂದಾಗುವ ಪ್ರಯೋಜನವೇನು? ರಾಜಕೀಯಸಭೆಗೆ ಹೊಸದಾಗಿ ಯೋಗ್ಯರಾದ ಜನರನ್ನು ಚುನಾಯಿಸಬೇಕಾದರೆ, ಇಂಥಾ ಚರಿತ್ರೆಯು ವ್ಯಾಸಂಗವು ಪುರಜನರಿಗೆ ಏನಾದರೂ ಸಹಾಯಮಾಡುವಂಥಾದಾಗಿದೆಯೆ? ಆದರೆ ಕೆಲವರು ಈಚರಿತ್ರವಿಷಯಗಳು ಸ್ವಾರಸ್ಯವಾದುವು, ಅವನ್ನೋದುವದರಿಂದ ಆನಂದವುಂಟಾಗುವುದೆಂದು ಹೇಳಬಹುದು. ಸರಿ, ಅವು ಅನೇಕರಿಗೆ ಸ್ವಾರಸ್ಯವಾಗಿರಬಹುದು. ಆನಂದವನ್ನೂ ಉಂಟುಮಾಡಬಹುದು. ಆದರೆ ಅವುಗಳ ವ್ಯಾಸಂಗದಿಂದ ಪೌರಕಾರ್ಯಕ್ಕೆ ಏನೂ ಸಹಾಯವಿರುವಂತೆ ಕಾಣಿಸುವುದಿಲ್ಲ. ಹೀಗಿರುತ್ತಾ ಪೌರಕಾರ್ಯವನ್ನು ಮಾಡಬೇಕಾದವರು ಆದರವಿಷಯವನ್ನು ಸಾಂಗ

ವಾಗಿ ತಿಳಿದುಕೊಳ್ಳುವುದಕ್ಕೆ ಬದಲಾಗಿ, ಇಥಾ ಯುದ್ಧಪ್ರಸಕ್ತಿಯ ವ್ಯಾಸಂಗದಲ್ಲಿ ಕಾಲ ಕಳೆದರೆ, ಅವರು ತಮ್ಮ ಕಾರ್ಯವನ್ನು ಸಮಂಜಸವಾಗಿ ಮಾಡಲು ಎಂದಿಗೂ ಸಮರ್ಥರಾಗಲಾರರೆಂದು ಧಾರಾಳವಾಗಿ ಹೇಳಬಹುದು.

ಪಶೇಷ. S. V.

ಕನ್ನಡದ ವರ್ಣಮಾಲೆ.

ಕರ್ಣಾಟ ಭಾಷೆಯ ಶಬ್ದಮಣಿದರ್ಪಣ ಮುಂತಾದ ವ್ಯಾಕರಣ ಗ್ರಂಥಗಳಲ್ಲಿ ಅಚ್ಚಕನ್ನಡದ ಅಕ್ಷರಗಳು ಇಷ್ಟೆಂದು ಗೊತ್ತಾಗಿ ತಿಳಿಯಲವಕಾಶವಿಲ್ಲ. ಅಲ್ಲಿ ಹೇಳಿರುವ ವರ್ಣಮಾಲೆಯಲ್ಲಿ ಸಂಸ್ಕೃತ ಕನ್ನಡ ಈ ಯೆರಡು ಭಾಷೆಗಳಲ್ಲಿರುವ ಅಕ್ಷರಗಳೂ ಮಿಳಿತವಾಗಿವೆ. ಸಹಜವಾಗಿ ಅಚ್ಚಗನ್ನಡದ ಅಕ್ಷರಗಳನ್ನು ತಿಳಿಸದೆ ಸಂಸ್ಕೃತಾಕ್ಷರಗಳನ್ನು ಏಕೆ ಸೇರಿಸಿರುವರು? ಕರ್ಣಾಟ ಭಾಷೆಯಲ್ಲಿ ಅನೇಕ ಸಂಸ್ಕೃತ ಪದಗಳು ಪ್ರಯೋಗಿಸಲ್ಪಡುವುದರಿಂದ ಆಭಾಷೆಯ ಅಕ್ಷರಗಳನ್ನು ಇಲ್ಲಿ ಹೇಳಬೇಕಾಗಿ ಬಂದಿತು ಎನ್ನಬಹುದು. ಅದು ಸರಿಯಲ್ಲ. ಅಚ್ಚಕನ್ನಡದ ವ್ಯಾಕರಣವನ್ನು ಹೇಳುವುದಕ್ಕೆ ಹೊರಟವರು ಕೇವಲ ಕನ್ನಡದ ಅಕ್ಷರಗಳನ್ನೇ ಹೇಳಬೇಕಲ್ಲದೆ ಸಂಸ್ಕೃತ ಭಾಷೆಯ ಅಕ್ಷರಗಳನ್ನು ಸೇರಿಸುವುದು ಅಪ್ರಕೃತವು. ಅನುಷಂಗಿಕವಾಗಿ ಸಂಸ್ಕೃತ ಶಬ್ದಗಳು ಕನ್ನಡದಲ್ಲಿ ಪ್ರಯೋಗಿಸಲ್ಪಟ್ಟ ಮಾತ್ರಕ್ಕೆ ಆ ಭಾಷೆಯ ಅಕ್ಷರಗಳನ್ನು ಏಕೆ ಹೇಳಬೇಕು.? ಹಾಗೆ ಬಂದುವೇಳೆ ವ್ಯಾಕರಣದಲ್ಲಿ ಆ ಅಕ್ಷರಗಳನ್ನು ಹೇಳಲೇಬೇಕೆನ್ನುವ ಪಕ್ಷದಲ್ಲಿ ಈ ಅಕ್ಷರಗಳನ್ನೇ ಸಂಸ್ಕೃತಶಬ್ದಗಳಿಗೆ ಸಂಬಂಧಪಟ್ಟ ಸನ್ಧಿ, ಸಮಾಸ, ತದ್ಧಿತಮುನ್ತಾದ ಇತರವಿಷಯಗಳನ್ನೂ ಏಕೆ ಹೇಳಕೂಡದಾಗಿತ್ತು. ಅವುಗಳನ್ನು ಸಂಸ್ಕೃತ ವ್ಯಾಕರಣದಿಂದಲೇ ತಿಳಿಯಬಹುದಾದರೆ ಅಕ್ಷರಗಳನ್ನೂ ಅದರಿಂದಲೇ ತಿಳಿಯಬಹುದು. ಇತರ ವಿಷಯಗಳನ್ನು ಕನ್ನಡ ಸಂಸ್ಕೃತಭಾಷೆಗಳೆರಡರಲ್ಲಿಯೂ ಹೋಲಿಸಿ ನೋಡುವಹಾಗೆ ಈ ವರ್ಣಮಾಲೆಯ ಸಂಗತಿಯನ್ನೂ ನೋಡಬಹುದಲ್ಲವೆ!

ಅಚ್ಚಕನ್ನಡದಲ್ಲಿ ಸಹಜವಾಗಿ ಅ ಇ ಉ ಎ ಐ ಒ ಔ ಎನ್ದು ಸ್ವರಗಳೂ ಕಕಾರದಿಂದ ಇಪ್ಪತ್ತೈದು ವರ್ಗೀಯ ವ್ಯಂಜನಗಳೂ, ಯ ರ ಲ ವ ಸ ಹ ಳ ಱ ಱ

ವಿಸರ್ಗ ಎಂಬ ಒಂಬತ್ತು ಅವರ್ಗೀಯ ವ್ಯಂಜನಗಳೂ ಒಟ್ಟು ನಲವತ್ತೈರಡು ಮೂಲವರ್ಣಗಳು.

ಸ್ವರಗಳಲ್ಲಿ ಹ್ರಸ್ವ ದೀರ್ಘ ಪ್ಲುತ ಎಂದು ಮೂರುವಿಧವನ್ನು ಕನ್ನಡದಲ್ಲಿ ಒಪ್ಪಬಹುದು. ಸಂಸ್ಕೃತದಲ್ಲಿ ಸ್ವರಗಳಿಗೆ ಇರುವಂತೆ ಉದಾತ್ತ ಅನುದಾತ್ತ ಸ್ವರಿತ ಅನುನಾಸಿಕ ಅನನುನಾಸಿಕ ಎಂಬ ಭೇದಗಳನ್ನು ಕನ್ನಡದಲ್ಲಿ ಅಂಗೀಕರಿಸಬೇಕಾಗಿಲ್ಲವು.ಸಂಸ್ಕೃತದಲ್ಲಿಯೇ ಮೇಲೆ ಹೇಳಿದ ಉದಾತ್ತಾದಿ ಸ್ವರಭೇದಗಳು ವೇದದಲ್ಲಿ ಕಂಡುಬರುವಪಲ್ಲದೆ ಲೋಕಭಾಷೆಯಲ್ಲಿ ಕಾಣಬರುವದಿಲ್ಲವಾಗಿ ಸಾಮಾನ್ಯ ಭಾಷೆಯಾದ ಈ ಕನ್ನಡದಲ್ಲಿ ಆ ಭೇದಗಳನ್ನು ಇಟ್ಟುಕೊಂಡು ಶಬ್ದಪ್ರಯೋಗವನ್ನು ಮಾಡುವಷ್ಟು ಅವಕಾಶ ವೆಲ್ಲಿಯುದು ?

ಮೇಲೆ ಅ, ಇ, ಉ, ಎ. ಒ, ಎಂದು ಸಾಮಾನ್ಯವಾಗಿ ನಿರ್ದೇಶಿಸಿರುವುದರಿಂದ ಪ್ರತಿಯೊಂದು ಸ್ವರದಲ್ಲಿಯೂ ಹ್ರಸ್ವ, ದೀರ್ಘ, ಪ್ಲುತ ಎಂಬ ಮೂರು ವಿಧಗಳನ್ನೂ ತಿಳಿಯಬಹುದು. ಐ, ಔ, ಎಂಬ ಎರಡು ಸ್ವರಗಳಿಗೆ ಹ್ರಸ್ವವಿಲ್ಲ. ದೀರ್ಘಪ್ಲುತ ಎಂಬೆರಡೇ ಭೇದಗಳಿವೆ. ವ್ಯಂಜನಗಳಲ್ಲಿ ಕ್ಕ ಮುಂತಾದ ಸಜಾತೀಯ ಸಂಯುಕ್ತಾಕ್ಷರಗಳಿರುವಂತೆ ಸ್ವರಗಳಲ್ಲಿ ದೀರ್ಘ ಪ್ಲುತಗಳನ್ನು ಸಂಯುಕ್ತ ಸ್ವರಗಳೆನ್ನಬಹುದು. ಆದುದರಿಂದಲೇ ಇವುಗಳನ್ನು ಸೇರಿಸದೆಯೇ ಮೇಲಿನಂತೆ ಮೂಲವರ್ಣಗಳನ್ನು ಹೇಳಬೇಕು. ಆದರೆ ಐ, ಔ ಗಳೂ ಸಂಯುಕ್ತಸ್ವರಗಳಾದುದರಿಂದ ಮೂಲವರ್ಣಗಳಲ್ಲಿ ಹೇಗೆ ಸೇರತಕ್ಕವು ? ಎನ್ನಕೂಡದು. ಅವರ್ಣ ಏಕಾರಗಳಿಗೂ, ಅವರ್ಣ ಓಕಾರಗಳಿಗೂ ಸಂಧಿಯಾಗಿ ಐ ಔ ಗಳು ಸಂಧ್ಯಕ್ಷರಗಳೆಂದು ಸಂಸ್ಕೃತದಲ್ಲಿ ವ್ಯವಹರಿಸಲ್ಪಡಬಹುದಾದರೂ, ಕನ್ನಡದಲ್ಲಿ ಅಸಂಧಿಯೇ ಇಲ್ಲದೆ ಸಹಜವಾಗಿ ಐ ಔ ಕಾರಗಳು ಅಚ್ಚಗನ್ನಡದ ಶಬ್ದಗಳಲ್ಲಿ ಸೇರಿರುವವು.— ಐದೆ, ಐಕಿಲ್, ಔಡು, ಕೌಂಪುಳ್ ಇವು ಮುನ್ತಾದೆಡೆಗಳಲ್ಲಿ ನೋಡಬಹುದು.

ಶ್ರೀಕಾಸ್ತನೀನೇ ಸಲೆಗೆ।
ಲ್ದೈ ಕಸ್ತುವನಮಲ ಮುಕ್ತಿ ಸತಿಯೊಳ್ಸೈರೆದಾ॥
ನ್ತೈಕಿಡದ ಸುಖಮನುಳಿದ।
ರ್ಗೀಕೃತ್ಯಮನಾಳ್ಯ ಮಜಿವೆನಾನದರೊಳವಂ॥

ಇವು ಮುನ್ತಾದೆಡೆಗಳಲ್ಲಿ ನೋಡಬಹುದು. ಹೀಗೆಯೇ ಏ, ಓ ಕಾರಗಳೂ ಸಂಸ್ಕೃತದಲ್ಲಿ ಸಂಧ್ಯಕ್ಷರಗಳೆನಿಸಿಕೊಂಡರೂ, ಕನ್ನಡದಲ್ಲಿ ಸಹಜವಾಗಿರುವವು.

ಏಱು, ಬೇಸಱು, ಬೌಳಿ, ಒರಣ,

ಏನಯ್ಯುಖಡ್ಗಧಾರೆಯ ।
ಜೀನೆಯ್ಯುಂ ನಕ್ಕುವನ್ತೆ..... ॥

ಪಂಪರಾಮಾಯಣ.

ಪೋದಭವದೊಂದು ಕುಲಬಲ ।
ವೈದುಷ್ಯವಿನೀತತಾದಿಗುಣಗಣಮಿನ್ದೇ ॥
ನಾದುಡೊ ನೀನದರನ್ದಮ ।
ನದರಿಪೋಮನದೆ ಮಱೆದಪೊಪೇಳ್ಮಗನೇ ॥

ಶಬ್ದಾನುಶಾಸನ.

ಇವು ಮೊದಲಾದೆಡೆಗಳಲ್ಲಿ ನೋಡಬಹುದು. ಕನ್ನಡದಲ್ಲಿ ವಿಸರ್ಗವಿಲ್ಲವೆಂದು ವ್ಯಾಕರಣಕಾರರು ಹೇಳುತ್ತಾರೆ. ಆದರೆ ಅಃ, ಚಿಃ, ಉಃ ಎಂಬ ಕೆಲವು ಅವ್ಯಯಗಳಲ್ಲಿ ಕಾಣಬರುವುದರಿಂದ ವಿಸರ್ಗವನ್ನು ಅಂಗೀಕರಿಸಬೇಕು. ಈ ವಿಸರ್ಗಕ್ಕೆ ಕಕಾರ ಖಕಾರಗಳು ಪರದಲ್ಲಿದ್ದಾಗ ಜಿಹ್ವಾಮೂಲೀಯವೆಂತಲೂ, ಪಫಕಾರಗಳು ಪರವಾಗಿ ಬಂದಾಗ ಉಪಧ್ಮಾನೀಯವೆಂತಲೂ ಬೇರೆ ಹೆಸರು. ಅನುಸ್ವಾರವನ್ನು ಬೇರೆ ವರ್ಣವೆಂದು ಅಂಗೀಕರಿಸಲಾಗುವುದಿಲ್ಲ. ಅನುಸ್ವಾರವು ಬರವಣಿಗೆಯಲ್ಲಿ ಬೇರೆಯಾಗಿ ಕಾಣುವುದಲ್ಲದೆ ಉಚ್ಚಾರಣೆಯಲ್ಲಿ ಮಕಾರ ಅಥವಾ ವರ್ಗಪಂಚಮಾಕ್ಷರವೇ ಆಗಿದೆ. ಉಚ್ಚಾರಣೆಯ ಕ್ರಮವನ್ನು ವಾಚಕರು ಸಾವಧಾನವಾಗಿ ಪರೀಕ್ಷಿಸಿ ನೋಡಬೇಕು. ಅದನ್ನು ಬರೆದು ತೋರಿಸಲಾಗುವುದಿಲ್ಲ. ನೋಡಿದಮ್, ತಾಮ್, ಕಡಲಮ್, ಇವು ಮುಂತಾದ ಪದಾಂತದಲ್ಲಿ ತೋರುವ ಅಕ್ಷರವು ಮಕಾರವಲ್ಲದೆ ಬೇರೆ ಅಲ್ಲ. ಇದನ್ನೇ ಸೊನ್ನೆಯೆಂಬ ಅಕಾರದಿಂದ ಬರೆಯುವರಲ್ಲದೆ ಉಚ್ಚಾರಣೆಯಲ್ಲಿ ಭೇದವೇ ಇಲ್ಲ. ಬಿಜ್ಜ, ಬೆಡಙ್ಗ, ಅಞೆ, ಸಞ್ಜೆ, ಗಣ್ಟ, ಗಣ್ಡ, ಪನ್ತ, ತನ್ದೆ, ಪೆಮ್ಪು, ಬಮ್ಬಲ ಇವು ಮುಂತಾದ ಶಬ್ದಗಳ ಮಧ್ಯದಲ್ಲಿರುವದು ಉಚ್ಚಾರಣೆಯನ್ನು ನೋಡಲಾಗಿ ಆಯಾವರ್ಗದ ಪಞ್ಚಮಾಕ್ಷರಗಳಲ್ಲದೆ ಬೇರೆ ಅಲ್ಲ. ಳಕಾರ ಲಕಾರಗಳು ಉಚ್ಚಾರಣೆಯಲ್ಲಿಯೂ, ಸ್ವರೂಪದಲ್ಲಿಯೂ ಭಿನ್ನವಾಗಿರುವುದರಿಂದ, ಬೇರೆ ಬೇರೆಎಂದು ಒಪ್ಪಬಹುದು, ಆದರೆ ಳಕಾರವನ್ನು ಕುಳ, ಕ್ಷಳವೆಂದು ಎರಡು ವಿಧವಾಗಿ ವಿಂಗಡಿಸುವುದರಲ್ಲಿ ಅಷ್ಟು ಔಚಿತ್ಯವು ತೋರುವುದಿಲ್ಲ. ಏಕೆಂದರೆ ಇವೆರಡೂ ಉಚ್ಚಾರಣೆಯಲ್ಲಿಯೂ ಸ್ವರೂಪದಲ್ಲಿಯೂ ಒಂದೇ ಆಗಿದೆ, ಆದರೆ ಜಲ

= ಜಳ, ಎಂದು ತದ್ಭವವಾಗುವಾಗ ಸಂಸ್ಕೃತ ಶಬ್ದದ ಲಕಾರಸ್ಥಾನದಲ್ಲಿ ಬರುವ ಳಕಾರವನು ಕ್ಷಳವೆಂದು ಹೇಳೋಣವೆಂದರೆ ಆಕಾಶ = ಆಗಸ ಮುಂತಾದೆಡೆಗಳಲ್ಲಿ ಆಗುವ ಕಕಾರ ಸಕಾರ ಮುಂತಾದವುಗಳನ್ನು ಬೇರೇ ಹೆಸರಿನಿಂದ ಕರೆಯಬಹುದಲ್ಲವೇ!

ಅಷ್ಟು, ಇಷ್ಟು, ಎಷ್ಟು ಮೊದಲಾದ ಶಬ್ದಗಳನ್ನು ಕೆಲವು ನವೀನ ಗ್ರಂಥಗಳಲ್ಲಿ ನೋಡಬಹುದಾದ್ದರಿಂದ ಷಕಾರವನ್ನೂ ವರ್ಣಮಾಲೆಗೆ ಸೇರಿಸಿಕ್ಕೊಳ್ಳಬೇಕಾಗಿದೆ.

ವಾಚಕಶಕ್ತಿ.

ಪೂರ್ವದಲ್ಲಿ ವಿದ್ಯಾರ್ಥಿಗಳಿಗೆ ಓದು ಬರಹಗಳನ್ನು ಕಲಿಸುವುದಕ್ಕೆ ಮಠಗಳೆಂಬುದಾಗಿ ಪಾಠಶಾಲೆಗಳಿದ್ದುವು. ಅಲ್ಲಿನ ಉಪಾಧ್ಯಾಯರುಗಳು ಓದು ಬರಹಗಳನ್ನು ಕಲಿಸುವುದರಲ್ಲಿ ವಿಶೇಷ ಮೇಹನತ್ತುವಾಡುತ್ತಿದ್ದರು. ವಾಚಕ ಪಾಠವೆಂಬುದಾಗಿಯೇ ಒಂದು ಪಾಠವು ನಡೆಯುತ್ತಿತ್ತು. ಯಾವಗ್ರಂಥಗಳನ್ನು ಕೊಟಾಗ್ಯೂ ಅದನ್ನು ಧಾರಾಳವಾಗಿ ಓದುವುದಕ್ಕೆ ವಿಶೇಷಗಮನವು ಕೊಡಲ್ಪಡುತ್ತಿತ್ತು. ಹೀಗೆ ಓದುವುದರಲ್ಲಿ ಅರ್ಥವನ್ನು ಗೊತ್ತುಮಾಡಿಕೊಳ್ಳುವುದರಲ್ಲಿಯೂ, ಉದ್ಯೋಗವು ಮಾಡಲ್ಪಡುತ್ತಿತ್ತು. ಅರ್ಥವತ್ತಾಗಿ ಓದುವುದನ್ನು ತಿಳಿದುಕೊಂಡು ಅನೇಕ ಗ್ರಂಥಗಳನ್ನು ಓದುತ್ತಾ ಜನರು ಸುಲಭವಾಗಿ ವಾಚಕಶಕ್ತಿಯನ್ನು ಪುರಾಣವ್ಯುತ್ಪತ್ತಿಯನ್ನೂ ಹೊಂದುತ್ತಾ ಕ್ರಮಕ್ರಮವಾಗಿ ಪಂಡಿತರು ಆಗುತ್ತಿದ್ದರು. ಕೆಲವು ಗ್ರಂಥಗಳನ್ನು ಪದೇಪದೇ ಓದುವುದರಿಂದ ಅದು ಮುಖಸ್ಥವಾಗುತ್ತಿತ್ತು. ಈರೀತಿಯಲ್ಲಿ ರಾಮಾಯಣ, ಭಾರತ ಭಾಗವತ, ಮೊದಲಾದ ಗ್ರಂಥಗಳನ್ನು ಬಹುಜನಗಳು ವಾಚೋವಿಧೇಯವಾಗಿ ಹೇಳುತ್ತಲೂ ಇದ್ದರು. ಇದರಿಂದ ವಿದ್ಯಾರ್ಥಿಗಳಿಗೆ ಪಾಂಡಿತ್ಯವೂ, ವ್ಯವಹಾರ ಜ್ಞಾನವೂ, ಧರ್ಮಾ ಧರ್ಮ ವಿವೇಕವೂ ಎಲ್ಲಾ ಲಭ್ಯವಾಗುತ್ತಿತ್ತು. ನಮ್ಮ ಧರ್ಮಗಳು ಶ್ಲೋಕರೂಪವಾಗಿರುವುದರಿಂದ ಗಟ್ಟಿಮಾಡಿ ಬಾಯಲ್ಲಿ ಒಪ್ಪಿಸುವುದಕ್ಕೆ ಅನುಕೂಲವಾಗಿರುವುದು. ಈ ಅನುಕೂಲ್ಯದ ಪ್ರಯೋಜನವನ್ನು ನಮ್ಮ ಪೂರ್ವಿಕರಂತೆ ನಾವು ಹೊಂದದೇ ಇರುವುದು

ತಪ್ಪು. ಪೂರ್ವಿಕರಲ್ಲಿ ಅಂತ್ಯಾಕ್ಷರಗಳೆಂದು ಹೇಳುತ್ತಿದ್ದರು, ಅಂತ್ಯಾಕ್ಷರಗಳೆಂದರೆ ಒಬ್ಬ ಮನುಷ್ಯನು ಯಾವದಾದರೊಂದು ಶ್ಲೋಕವನ್ನು ಹೇಳಿ ಪೂರೈಸಿದಕೂಡಲೇ ಆಶ್ಲೋಕದ ಅಂತ್ಯಾಕ್ಷರವನ್ನು ಇನ್ನೊಂದು ಶ್ಲೋಕದ ಮೊದಲಕ್ಷರವನ್ನಾಗಿ ಮಾಡಿಕೊಂಡು ಶ್ಲೋಕಗಳನ್ನು ಹೇಳುವುದು. ಹೀಗೆ ಹೇಳುವುದರಲ್ಲಿ ವಿದ್ಯಾರ್ಥಿಗಳು ಪೂರ್ವಕಾಲದಲ್ಲಿ ಅತ್ಯಂತ ಸಮರ್ಥರಾಗಿರುತ್ತಿದ್ದರು. ಬಹಳ ಬುದ್ಧಿಶಾಲಿಗಳಲ್ಲಿ; ಈ ಅಂತ್ಯಾಕ್ಷರ ಪಂಧವು 8–10 ದಿವಸಗಳಾದಾಗ್ಯೂ ಶ್ಲೋಕಗಳ ಪತನವು ಮುಗಿಯುತ್ತಿರಲಿಲ್ಲ. ಕೊಸೆಗೆ ಗೆದ್ದವನಿಗೆ ವಿಶೇಷ ಬಹುಮಾನಗಳು ಮಾಡಲ್ಪಡುತ್ತಿದ್ದುವು. ಈಗ ಆರೀತಿಯಾದ ಪೋಟಾ ಪೋಟಿಯು ಪತನವು ಅಪೂರ್ವವಾಯಿತು. ಚನ್ನಾಗಿ ವಾಚಕಶಕ್ತಿಯುಳ್ಳವರೂ ಕೂಡ ಸಿಕ್ಕುವುದು ಕಷ್ಟ. ಇಂಥಾದ್ದರಲ್ಲಿ ಲಘ್ವಂತರ ಶ್ಲೋಕಗಳನ್ನು ಮುಖಸ್ಥವಾಗಿಟ್ಟುಕೊಂಡು ಅಂತ್ಯಾಕ್ಷರವನ್ನು ಹೇಳತಕ್ಕವನನ್ನು ಎಲ್ಲಿಂದ ತರುವುದು ಆದಾಗ್ಯೂ ವಿದ್ಯಾರ್ಥಿಗಳು ಈ ವಿಫವಾದ ಪೋಟಾ ಪೋಟಿಗೆ ಪ್ರಯತ್ನಮಾಡುವುದು ಅತ್ಯಂತ ಆವಶ್ಯಕ. ಭೋಜರಾಜನ ಕಾಲದಲ್ಲಿ ಈರಾಜನ ದ್ವಾರಪಾಲಕರು ಕೂಡಾ ವಿಕಸಂಧ್ಯಗಾ್ರಹಿಗಳಾಗಿದ್ದರು. ಭೋಜನು ಒಳ್ಳೇ ಕವಿತ್ವಗಳಿಗೆ ಆಕ್ಷರಲಕ್ಷಗಳನ್ನು ಕೊಡುತ್ತಾನೆಂದು ಒಬ್ಬ ಮಹಾಕವಿಯು ಅನೇಕ ಶ್ಲೋಕಗಳನ್ನು ಮಾಡಿಕೊಂಡು ಬರೆದು ಭೋಜರಾಯನು ಸಭಾಸೆಯಲ್ಲಿ ಹಣವಿಲ್ಲವೆಂದು ವಿಚಾರಪಟ್ಟುದನ್ನು ನೋಡಿ ದ್ವಾರಪಾಲಕನು ಈ ಪಂಡಿತನಿಗೆ ಅಕ್ಷರ ಲಕ್ಷನನ್ನು ಕೊಡತಕ್ಕುದನ್ನು ನಾನು ತಪ್ಪಿಸುತ್ತೇನೆಂದು ಹೇಳಿದನು. ಅದು ಹೇಗೆಂದು ಕೇಳಲು ಶೀಘ್ರದಲ್ಲಿಯೇ ತಮಗೆ ಗೊತ್ತಾಗಬಹುದೆಂದು ಹೇಳಿದನು. ಅಷ್ಟರೊಳಗಾಗಿ ಆ ಪಂಡಿತನು ಬರಲು ಈ ದ್ವಾರಪಾಲಕನು ಸದರೀ ಪಂಡಿತನಿಗೆ ಅರಮನೆಯ ನಿಯಮವನ್ನು ತಿಳಿಸುವಂತೆ ಹೊಸಶ್ಲೋಕಗಳಿಗೆ ಮಾತ್ರ ಬಹುಮಾನವು ಕೊಡಲ್ಪಡುವುದೆಂಬುದಾಗಿಯೂ, ಗ್ರಂಥಾಂತರಗಳಿಂದ ಸಂಗ್ರಹಿಸಲ್ಪಟ್ಟ ಶ್ಲೋಕಗಳಿಗೆ ಅಕ್ಷರ ಲಕ್ಷವು ದೊರೆಯುವುದಿಲ್ಲವೆಂಬುದಾಗಿಯೂ, ಇದು ಹೊಸದು ಇದು ಹಳೇದು ಎಂಬುದಾಗಿ ಗೊತ್ತುಮಾಡುವ ಅಧಿಕಾರವು ತನ್ನದೆಂಬುದಾಗಿಯೂ ಹೇಳಿದನು. ಈ ನ್ಯಾಯವನ್ನು ಒಪ್ಪಿಕೊಂಡನು. ಸಭೆಯಲ್ಲಿ ಆತನು ಮಾಡಿದ್ದ ಬಹು ಶ್ಲೋಕ ಪರಿಮಿತವಾದ ನವರಸ ಗರ್ಭಿತವಾದ ಗ್ರಂಥವು ಓದಲ್ಪಟ್ಟಿತು. ಸಮಸ್ತ ಪಂಡಿತರೂ ಕೂಡಾ ತಲೆದೂಗುವಂತೆ ಈ ಗ್ರಂಥವು ಇತ್ತು. ಮಹಾರಾಜನು ಅತ್ಯಂತ ಸಂತುಷ್ಟನಾದನು. ಈ ಮಧ್ಯೆ ಈ ದ್ವಾ

ರಪಾಲಕನು ಈ ಗ್ರಂಥವು ನನಗೆ ವಾಚೋ ವಿಧೇಯವಾಗಿರುವುದು. ಅದನ್ನು ನಾನು ಹೇಳುತ್ತೇನೆ, ಅದರಮೇಲೆ ಅಕ್ಷರಲಕ್ಷವನ್ನು ಕೊಡಬೇಕೆಂದು ಪ್ರಭುಗಳಿಗೆ ತೋರಿದರೆ ಕೊಡಬಹುದೆಂದು ಹೇಳಿದನು. ಪಂಡಿತಶ್ರೇಷ್ಠನು ಓದಿದಗ್ರಂಥವನ್ನೇ ತಾನು ಬಾಯಿಯಲ್ಲಿ ಹೇಳಿದನು. ಆಗ ಆ ಪಂಡಿತನು ಅತ್ಯಂತ ವಿಸ್ಮಿತನಾಗಿ ಈ ಗ್ರಂಥವನ್ನು ನಾನು ರಚಿಸಿದೆನೆಂದು ತಿಳಿದುಕೊಂಡಿದ್ದೆನು. ಈಗತನ್ನ ಕವನದಲ್ಲಿಯೇ ತನಗೆ ಅನುಮಾನ ಉಂಟಾಗಿರುವುದು. ಈ ಗ್ರಂಥವು ಪೂರ್ವದ ಮಹಾಕವಿಕೃತವೆಂದೂ, ಇದು ನನ್ನಿಂದ ರಚಿಸಿದುದಲ್ಲವೆಂದೂ ಈ ದ್ವಾರಪಾಲಕನು ಹೇಳುವ ಪಕ್ಷದಲ್ಲಿ ಈ ಗ್ರಂಥರಚನೆಗಾಗಿ ನನಗೆ ಬಹುಮಾನ ಅವಶ್ಯಕವಿಲ್ಲವೆಂದು ವಿಜ್ಞಾಪಿಸಿದನು. ಆಗ ಭೋಜನು ಈ ಮಹಾಕವಿಯ ಶಕ್ತಿಯನ್ನೂ ತನ್ನ ದ್ವಾರಪಾಲಕನ ಏಕಸಂಧ್ಯಗ್ರಾಹಿತ್ವವನ್ನೂ ನೋಡಿ ಪರಮಾಶ್ಚರ್ಯಪಟ್ಟು ಸದರೀ ಪಂಡಿತನಿಗೂ ತನ್ನ ದ್ವಾರಪಾಲಕನಿಗೂ, ಅವರ ಪಾಂಡಿತ್ಯಕ್ಕೆ ಅನುರೂಪವಾದ ಬಹುಮಾನಗಳನ್ನು ಮಾಡಿದನು. ಬಾಲ್ಯದಲ್ಲಿಯೇ ವಾಚಕ ಶಕ್ತಿಯನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಿ ಅವಿಚ್ಛಿನ್ನವಾಗಿ ಒಳ್ಳೇ ಗ್ರಂಥಗಳನ್ನು ದಿನಕ್ಕೆ 2. 3 ಘಂಟೆಗಳಾದರೂ ವ್ಯಾಸಂಗಮಾಡುತ್ತಾ ಬಂದರೆ ಅಂಥಾವರು ಕೆಲವು ವರುಷಗಳಲ್ಲಿಯೇ ಭೋಜನ ದ್ವಾರಪಾಲಕನಂತೆ ಏಕಸಂಧ್ಯಗ್ರಾಹಿಗಳಾಗುವುದು ಬಹಳ ಸುಲಭ. ಅನೇಕರು ಓದತಕ್ಕ ಗ್ರಂಥಗಳನ್ನು ಸರಿಯಾಗಿ ಅರ್ಥವನ್ನೂ ಅಭಿಪ್ರಾಯವನ್ನೂ ತಿಳಿದುಕೊಳ್ಳದೆ ಓದುತ್ತಾರೆ. ಅದರಿಂದ ಅಷ್ಟು ವಿಶೇಷ ಪ್ರಯೋಜನವಾಗುವುದಿಲ್ಲ. ಅರ್ಥವತ್ತಾಗಿ ಒಂದು ಗ್ರಂಥವನ್ನಾದರೂ, ಪೂರ್ತಿಯಾಗಿ ಓದಿ ಗಟ್ಟಿಮಾಡಿ ಅನಂತರ ಇತರಗ್ರಂಥಗಳನ್ನು ಅಭಿಪ್ರಾಯದ ಮೇಲೆ ದೃಷ್ಟಿಯಿಟ್ಟುಕೊಂಡು ಓದಿದಾಗ್ಯೂ, ಪ್ರಯೋಜನವುಂಟಾಗುವುದು. ಆದರೆ ಅರ್ಥದಮೇಲೂ ಅಭಿಪ್ರಾಯಗಳಮೇಲೂ, ಸಮಗ್ರವಾದ ಗಮನವನ್ನು ಕೊಡದೆ ಓದತಕ್ಕುದು ವಿಶೇಷಪ್ರಯೋಜನ ಕಾರಿಯಾಗುವುದಿಲ್ಲ. ಅರ್ಥವತ್ತಾಗಿ ಓದತಕ್ಕುದು ಕಾರ್ಯಕಾರಿಯಾಗುವುದು. ವಾಚಕಶಕ್ತಿಯ ಮೇಲೆ ದೃಷ್ಟಿಯನ್ನಿಟ್ಟ ಓದತಕ್ಕವರು, ಅರ್ಥದಮೇಲೆಯೂ ದೃಷ್ಟಿಯನ್ನಿಡುತ್ತಾ ಬಂದರೆ ವಾಚಕಶಕ್ತಿಯನ್ನೂ ಪಾಂಡಿತ್ಯವನ್ನೂ ಕೂಡಾಹೊಂದಬಹುದು. ಇದಕ್ಕೆ ವಿದ್ಯಾರ್ಥಿಗಳು ಗಮನಪನ್ನು ಕೊಡಬೇಕು.

ಪಾಠಕರ ಕರ್ತವ್ಯ.

ಯಾವಕೆಲಸವನ್ನು ಚನ್ನಾಗಿ ಮಾಡಬೇಕಾದರೂ ಆಕೆಲಸವನ್ನು ಪೂಡುವು

ದರಲ್ಲಿ ಶಿಕ್ಷಿತನಾಗಬೇಕು. ಅಶಿಕ್ಷಿತನಾದವನು ಶಿಕ್ಷಿತನಂತೆ ಚನ್ನಾಗಿ ಕೆಲಸಮಾಡ ಲಾರನು. ಕೆಲವ್ರಜನ ಪಾಠಕರು ವಿಶೇಷ ಪ್ರಜ್ಞೆಯುಳ್ಳವರಾಗಿರುನರು ವಿದ್ಯಾರ್ಥಿಗಳ ಯೋಗ್ಯತೆಯುನ್ನರಿತು, ಅವರ ಮನಸ್ಸನ್ನು ಆಕರ್ಷಿಸಿ ತಿಳಿದುಕೊಳ್ಳುವುದರಲ್ಲಿ ಅವರಿಗೆ ಶ್ರದ್ಧೆಯನ್ನುಂಟುಮಾಡಿ ಹೇಳಿದ ವಿಷಯವನ್ನು ಮರೆವುದು ಕೂಡ ಅನಾಧ್ಯವಾಗುವಂತೆ ಮಾಡುವರು. ಅಂಥಾ ಪಾಠಕರು ದೊರೆಯುವುದೇ ಅಸಾಧ್ಯ. ಅಂಥಾವರಲ್ಲಿ ಶಿಷ್ಯರು ಅತ್ಯಂತ ಭಕ್ತಿಯಿಂದ ನಡೆದುಕ್ಕೊಳ್ಳುತ್ತಾ, ವಿಶೇಷ ವೃದ್ಧಿಗೆ ಬರುವರು. ಇಂಥಾ ಪಾಠಕರು ವಿದ್ಯಾರ್ಥಿಗಳಲ್ಲಿ ಪುತ್ರನಿರ್ವಿಶೇಷವಾದ ಪ್ರೀತಿಯುನ್ನು ಇಟ್ಟುಕೊಂಡಿರುವರು. ವಿದ್ಯಾರ್ಥಿಗಳೂ ಕೂಡಾ ಈ ಪಾಠಕರಲ್ಲಿ ಪಿತೃನಿರ್ವಿಶೇಷವಾದ ಪ್ರೀತಿಯುನ್ನಿಟ್ಟಿರುವರು. ಇಂಥಾ ಪಾಠಕರಲ್ಲಿ ಸಾಮದಾನಗಳು ವಿನಾ, ಭೇದದಂಡಗಳಿಗೆ ಅವಕಾಶವೇ ಇರುವುದಿಲ್ಲ.

ಕೆಲವ್ರಜನ ಪಾಠಕರು ಬಹಳ ದರ್ಪದಿಂದ ನಡೆದುಕೊಳ್ಳುತ್ತಾ ವಿದ್ಯಾರ್ಥಿಗಳನ್ನು ದಂಡೋಪಾಯದಿಂದ ಮಾತ್ರವೇ ಕೆಲ್ಸವನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುವರು. ವಿದ್ಯಾರ್ಥಿಗಳನ್ನು ಹತೋಟಿಯುಲ್ಲಿಟ್ಟುಕೊಳ್ಳುವುದಕ್ಕೆ ಮಾತ್ರ ಇವರಿಗೆ ಸಾಧ್ಯವಾಗುವುದು. ಪಾಠಗಳನ್ನು ಉರು ಹೊಡೆಸುವುದೂಕೂಡಾ ಇವರಿಂದ ಆಗಬಹುದು. ಪರಸ್ಪರ ಪ್ರೀತಿಯಿಂದ ತಿಳಿಯುಬರಬೇಕಾದ ಅಂಶಗಳು ವಿದ್ಯಾರ್ಥಿಗಳಿಗೆ ಇವರಿಂದ ತಿಳಿಯುವಂತಾಗಲಾರದು. ವಿದ್ಯಾರ್ಥಿಗಳನ್ನು ಮಿತ್ರರಂತೆ ಭಾವಿಸಿ ಅವರು ಕೇಳತಕ್ಕ ಪ್ರಶ್ನೆಗಳಿಗೆ ಸಮಾಧಾನಗಳನ್ನು ಹೇಳುತ್ತಾ ಬಂದರೆ ಎಷ್ಟು ಪ್ರಯೋಜನವಾಗಬಹುದೋ ಅಷ್ಟು ಪ್ರಯೋಜನವು ಧೂರ್ತರಾದ ಪಾಠಕರಿಂದ ವಿದ್ಯಾರ್ಥಿಗಳಿಗೆ ಎಂದಿಗೂ ಲಭ್ಯವಾಗುವುದಿಲ್ಲ.

ಪ್ರೀತಿಯಿಂದ ಪ್ರೀತಿಯು ಹುಟ್ಟುವುದು. ವಿದ್ಯಾರ್ಥಿಗಳಲ್ಲಿ ಅಭಿಮಾನವನ್ನಿಟ್ಟು ಪಾಠಗಳಲ್ಲಿ ಅವರಿಗೆ ಶ್ರದ್ಧೆಯನ್ನು ಹುಟ್ಟಿಸಿ, ಸೋಮಾರಿಗಳ ವಿಷಯದಲ್ಲಿ ತಿರಸ್ಕಾರವನ್ನು ತೋರಿಸಿ ಅಂಥವರನ್ನೇ ಪ್ರತ್ಯೇಕವಾಗಿ ಕರೆದುಕೊಂಡು ಹೋಗಿ ಏಕಾಂತವಾಗಿ ಹೆಚ್ಚು ಮೆಹನತ್ತು ಮಾಡಬೇಕೆಂದು ಹಿತೋಪದೇಶ ಮಾಡತಕ್ಕ ಪಾಠಕನು ಹಿತಚಿಂತಕನೆಂದು ವಿದ್ಯಾರ್ಥಿಗಳಿಂದ ಭಾವಿಸಲ್ಪಡುತ್ತಾನೆ. ಧೂರ್ತನಾದ ಉಪಾಧ್ಯಾಯನ ಪರಾಕ್ರಮದಿಂದ ಆಗದೇ ಇರತಕ್ಕ ಕೆಲಸಗಳೆಲ್ಲಾ ಈತನ ಉಪಾಯದಿಂದಲೇ ನಡೆಯುವುದು. ಆದುದರಿಂದಲೇ ಉಪಾಯದಿಂದಾಗತಕ್ಕ ಕೆಲಸಗಳು ಪರಾಕ್ರಮದಿಂದ ಆಗುವುದಿಲ್ಲವೆಂಬ ಗಾಧೆಯ ಹುಟ್ಟನ್ನು ಸಮ್ಗ್ರವಾಗಿ

ಪರ್ಯಾಲೋಚಿಸಿ ವಿದ್ಯಾರ್ಥಿಗಳನ್ನು ಇತರರಂತೆ ಭಾವಿಸಿ ಲಾಘವಕ್ಕೆ ಮಾತ್ರ ಅವ ಕಾಶ ಕೊಡದೇ ನಡೆದುಕೊಳ್ಳುತ್ತಾ ಬಂದರೆ ಪಾಠವನ್ನು ಹೇಳುವುದರಲ್ಲಿ ತಾವು ಮಾಡತಕ್ಕ ಮೆಹನತ್ತು ಸಾರ್ಥಕವಾಗುವುದು.

ಉಪಾಧ್ಯಾಯನು ವಿದ್ಯಾರ್ಥಿಗಳಿಂದ ಧರ್ಮಿಷ್ಠನಾದ ಪ್ರಭುವಿನಂತೆ ಗಣಿಸ ಲ್ಪಡಬೇಕು. ಇವನು ತಾನು ಹೇಳತಕ್ಕ ಧರ್ಮಗಳನ್ನು ತನ್ನ ಅನುಷ್ಠಾನದಲ್ಲಿ ಟ್ಟುಕೊಂಡಿರಬೇಕು. ಅನುಷ್ಠಾನದಲ್ಲಿ ಒಂದುವಿಧವಾಗಿಯೂ ಉಪದೇಶದಲ್ಲಿ ಮತ್ತೊಂದು ವಿಧವಾಗಿಯೂ ಇರಕೂಡದು. ಈರೀತಿಯಲ್ಲಿರತಕ್ಕ ಉಪಾಧ್ಯಾ ಯನ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಅಕೃತ್ರಿಮವಾದ ಭಕ್ತಿಯು ಹುಟ್ಟುವುದು. ಇಂಥಾ ಭಕ್ತಿಯುಳ್ಳವರು ಅತನ ಮೇಲುಪಜ್ಞೆಯನ್ನು ಅನುಷ್ಠಾನಕ್ಕೆ ತಂದು ಕೊಳ್ಳುವರು. ಯಾವ ಪಾಠಕನು ವಿದ್ಯಾರ್ಥಿಗಳ ಭಕ್ತಿಗೆ ಪಾತ್ರನಾಗಿಯೂ ಅವರಿಗೆ ವಿದ್ಯಾವಿಷಯ ಸಂಪತ್ತುಗಳಲ್ಲಿ ಮೇಲುಪಜ್ಞೆ ಪ್ರಾಯನಾಗುವುದಕ್ಕೆ ಅರ್ಹರಾಗಿಯೂ ಇರುವನೋ ಅತನೇ ಪಾಠಕನಾಗಿರುವುದಕ್ಕೆ ಯೋಗ್ಯತೆಯುಳ್ಳ ವನು. ಎಲ್ಲಾ ಪಾಠಕರೂ ಇಂಥಾ ಅರ್ಹತೆಯನ್ನು ಸಂಪಾದಿಸಿಕೊಳ್ಳಬೇಕು.

ಗಣಿತಶಾಸ್ತ್ರ ವಿಚಾರ.

ಗಣಿತಶಾಸ್ತ್ರವು ಲೋಕದಲ್ಲಿ ಸಮಸ್ತ ವಿಷಯಗಳಿಗೂ ಮುಖ್ಯಆಧಾರವಾಗಿ ರುತ್ತದೆ. ಲೌಕಿಕ ವ್ಯಾಪಾರಾದಿಗಳು ಯಾವಶಾಸ್ತ್ರದಿಂದಲೇ ವ್ಯವಸ್ಥೆಮಾಡಲ್ಪ ಟ್ಟಿನೆ—ಪಾ ್ರಯಶಃ ಎರಡು—ನಾಲ್ಕು – ಎಂಟು ಎಂಬ ಸಂಖ್ಯೆಗಳನ್ನು ಕೆಲವುಮ ಟ್ಟಿಗೆ—ತಿಳಿದುಕೊಂಡರೂ ಕಡೇವರಿವಿಗೂ ಹೇಳಲಾರದೆ ಹೋಗುವರು. ಪೂರ್ವ ದಲ್ಲಿ ಅನೇಕರು ತಾವು ಕೊಟ್ಟು ತೆಗೆದುಕೊಳ್ಳುವ ಲೆಖ್ಖಾಚಾರ ವಿಷಯಗಳಲ್ಲಿ ಕಲ್ಲು ಗಳನ್ನಾಗಲಿ—ಬೀಜಗಳನ್ನಾಗಲಿ ಇಟ್ಟುಕೊಂಡು ಪರಿಷ್ಕರಿಸಿಕೊಳ್ಳುತ್ತಿದ್ದರಂತೆ. ಈಗ ಎಷ್ಟೋಮಟ್ಟಿಗೆ ಉತ್ತಮವೆಂದು ಹೇಳಲು ಅವಶ್ಯವಿಲ್ಲ. ಈ ಶಾಸ್ತ್ರವು ಮೇಧಾ ಶಕ್ತಿಯನ್ನು ವೃದ್ಧಿಪಡಿಸುವದು. ಪ್ರತಿಯೊಬ್ಬನಲ್ಲಿಯೂ ಯಾವಿಧವಾದ ಶಕ್ತಿಯಿರುತ್ತದೆ. ಅದನ್ನೆ ಅದನ್ನು ವೃದ್ಧಿಪಡಿಸದ ವಿನಹ, ಅದು ಪ್ರಕಾರಕ್ಕೆ ಬರಲಾ ರದು-ಅದುದರಿಂದಲೇ ಚಿಕ್ಕವಯಸ್ಕರಾದ ಹುಡುಗರಿಗೆ ಸಂಖ್ಯಾ ಸಂಬಂಧ ಉದಾಹರಣೆ

ಗಳನ್ನು ತೋರಿಸಿಕೊಟ್ಟು, ಪುನಹ ಅಂಥವುಗಳನ್ನೇ ಬಾಲಕರು, ಆಲೋಚಿಸಿ ಹೇಳುವಂತೆಯೂ ಸ್ವಲ್ಪ ದೊಡ್ಡವಾದವುಗಳನ್ನ ಸ್ಲೇಟಿನ ಮುಖಾಂತರ ಮಾಡಿಸು ವಂತೆಯೂ ಉಪಾಧ್ಯಾಯರು ಪ್ರಯತ್ನಿಸಿದರೆ ಬಾಲಕರು ದೊಡ್ಡವರಾದ ಹಾಗೆಲ್ಲಾ ಅವರ ಮೇಧಾ ಶಕ್ತಿಯು ವೃದ್ಧಿಯಾಗುತ್ತಾ ಬರುವುದು. ಉಪಾಧ್ಯಾಯನು ಮೊದಲು ಯಾವ ವಿಷಯವಾದ ಉದಾಹರಣೆಯನ್ನು ತೋರಿಸುವನೋ, ಅಂಥವುಗ ಳನ್ನೇ ಪುನಹ ಪ್ರಶ್ನೆಮಾಡಬೇಕೇ ವಿನಹ ಬೇರೆವಿಧ ಪ್ರಶ್ನೆ ಹಾಕಬಾರದು. ಹೀಗೆ ಎಲ್ಲಾವಿಧಿಗಳು ಅವರಿಗೆ ತಿಳಿದನಂತರ, ಎಲ್ಲವನ್ನು ಮಿಶ್ರಮಾಡಬಹುದು. ಆದರೆ ಕೂಡಲೆ—ಅವರ ಬುದ್ಧಿಯು ಗಲಿಬಿಲಿ ಆಗುವಂತೆ ಮಾಡಬಾರದು—ಎರಡೆರಡನ್ನೇ ಮಿಶ್ರಮಾಡುತ್ತಾ ನಂತರ ನಾಲ್ಕುವಿಧ ವಾದ ನಿಯಮಗಳನ್ನು ಶೇರಿಸಿದರೂ—ಊ ಹಿಸುವ ಶಕ್ತಿಯುಂಟಾಗಿರುವದು—ಇದೇ ರೀತಿಯಲ್ಲಿಯೇ ಒಂದೊಂದೇ ವಿಧವಾದ ನಿಯಮವನ್ನು ಅದೇ ವಿಧವಾದ ಉದಾಹರಣೆಗಳೊಂದಿಗೆ ಬರೆಯಲ್ಪಡುವುದು—

ಮೆನೋಗಣಿತ—(ಸಂಕಲನ)

[Infant A. B. ಮತ್ತು 1 ನೇ ತರಗತಿಗಳಲ್ಲಿ ಮಾತ್ರವೇ ಉಪಯೋಗಿಸತಕ್ಕವುಗಳು]

1 ಪ್ರಶ್ನೆ. ಸಂಕಲನ ವಂದರೇನು?

ಉತ್ತರ—ಕೊಡಲ್ಪಟ್ಟ 2—3 ಸಂಖ್ಯೆಗಳನ್ನು (ಅಥವಾ ಅನೇಕ ಸಂಖ್ಯೆಗಳನ್ನು) ಸೇರಿಸಿ ಒಂದು ಸಂಖ್ಯೆಯನ್ನು ಮಾಡಿಡುವುದಕ್ಕೆ ಹೆಸರು. ಉದಾಹರಣೆ—4+5 ಇವುಗಳನ್ನು ಶೇರಿಸಿದರೆ 9 ಆಗುವದು]

2 ಪ್ರಶ್ನೆ. ಸೇರಿಸಲ್ಪಟ್ಟ ಸಂಖ್ಯೆಗೆ ಏನಂದು ಹೆಸರು?

ಉತ್ತರ—ಅವುಗಳ ಒಟ್ಟೆಂದು ಹೆಸರು. ಉದಾಹರಣೆ—ಮೇಲೆ ಹೇಳಲ್ಪಟ್ಟ 9 ಎಂಬುವದು. (4+5) ಎಂಬುವುಗಳ ಒಟ್ಟು) + = ಉಪಾಧ್ಯಾಯರು ಈ ಗುರ್ತುಗಳನ್ನು ಬೋರ್ಡಿನ ಮೇಲೆ ಬರೆಯುತಕ್ಕುದು.

3 ಪ್ರಶ್ನೆ. + ಈ ಗುರ್ತಿಗೆ ಹೆಸರೇನು? ಏನನ್ನು ತಿಳಿಸುವುದು?

ಉತ್ತರ—ಇದಕ್ಕೆ ಪ್ಲಸ್ ಎಂದು (ಕನ್ನಡದಲ್ಲಿ ಸಂಕಲನ ಚಿಹ್ನೆ ಅಥವಾ ಕೂಡುವ ಗುರ್ತು) ಹೆಸರು. ಎರಡುಸಂಖ್ಯೆಗಳ ಮಧ್ಯದಲ್ಲಿಟ್ಟರೆ ಅವುಗಳನ್ನು ಕೂಡಿಸಬೇಕೆಂದು ತಿಳಿಸುತ್ತದೆ. ಉದಾ, (4+5) = 9

4 ಪ್ರಶ್ನೆ. = ಈ ಗುರ್ತಿನ ಹೆಸರೇನು? ಯಾವ ಅರ್ಥವನ್ನು ಸೂಚಿಸು

ಪರ್ಯಾಲೋಚಿಸಿ ವಿದ್ಯಾರ್ಥಿಗಳನ್ನು ಇತರರಂತೆ ಭಾವಿಸಿ ಲಾಘವಕ್ಕೆ ಮಾತ್ರ ಅವ ಕಾಶ ಕೊಡದೇ ನಡೆದುಕೊಳ್ಳುತ್ತಾ ಬಂದರೆ ಪಾತವನ್ನು ಹೇಳುವುದರಲ್ಲಿ ತಾವು ಮಾಡತಕ್ಕ ಮಹನತ್ತು ಸಾರ್ಥಕವಾಗುವುದು.

ಉಪಾಧ್ಯಾಯನು ವಿದ್ಯಾರ್ಥಿಗಳಿಂದ ಧರ್ಮಿಷ್ಠನಾದ ಪ್ರಭುವಿನಂತೆ ಗಣಿಸ ಲ್ಪಡಬೇಕು. ಇವನು ತಾನು ಹೇಳತಕ್ಕ ಧರ್ಮಗಳನ್ನು ತನ್ನ ಅನುಷ್ಠಾನದಲ್ಲಿ ಟ್ಟುಕೊಂಡಿರಬೇಕು. ಅನುಷ್ಠಾನದಲ್ಲಿ ಒಂದುವಿಧವಾಗಿಯೂ ಉಪದೇಶದಲ್ಲಿ ಮತ್ತೊಂದು ವಿಧವಾಗಿಯೂ ಇರಕೂಡದು. ಈರೀತಿಯಲ್ಲಿರತಕ್ಕ ಉಪಾಧ್ಯಾ ಯನ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಅಕೃತ್ರಿಮವಾದ ಭಕ್ತಿಯು ಹುಟ್ಟುವುದು. ಇಂಥಾ ಭಕ್ತಿಯುಳ್ಳವರು ಅತನ ಮೇಲುಪಬ್ತಿಯನ್ನು ಅನುಷ್ಠಾನಕ್ಕೆ ತಂದು ಕೊಳ್ಳುವರು. ಯಾವ ಪಾತಕನು ವಿದ್ಯಾರ್ಥಿಗಳ ಭಕ್ತಿಗೆ ಪಾತ್ರನಾಗಿಯೂ ಅವರಿಗೆ ವಿದ್ಯಾವಿಷಯ ಸಂಪತ್ತುಗಳಲ್ಲಿ ಮೇಲುಪಬ್ತಿ ಪ್ರಾಯನಾಗುವುದಕ್ಕೆ ಅರ್ಹರಾಗಿಯೂ ಇರುವನೋ ಅತನೇ ಪಾತಕನಾಗಿರುವುದಕ್ಕೆ ಯೋಗ್ಯತೆಯುಳ್ಳ ವನು. ಎಲ್ಲಾ ಪಾತಕರೂ ಇಂಥಾ ಅರ್ಹತೆಯನ್ನು ಸಂಪಾದಿಸಿಕೊಳ್ಳಬೇಕು.

ಗಣಿತಶಾಸ್ತ್ರ ವಿಚಾರ.

ಗಣಿತಶಾಸ್ತ್ರವು ಲೋಕದಲ್ಲಿ ಸಮಸ್ತ ವಿಷಯಗಳಿಗೂ ಮುಖ್ಯಆದಾರವಾಗಿ ರುತ್ತದೆ. ಲೌಕಿಕ ವ್ಯಾಪಾರಾದಿಗಳು ಯಿಾಶಾಸ್ತ್ರದಿಂದಲೇ ವ್ಯವಸ್ಥೆಮಾಡಲ್ಪ ಟ್ಟಿವೆ—ಪಾತ್ರಯಶಕಿ ಎರಡು—ನಾಲ್ಕು—ಎಂಟು ಎಂಬ ಸಂಖ್ಯೆಗಳನ್ನು ಕೆಲವುಮ ಟ್ಟಿಗೆ—ಕಿಳಿದುಕೊಂಡರೂ ಕಡೇಪಕ್ಷಿಗೂ ಹೇಳಲಾರದೆ ಹೋಗುವರು. ಪೂರ್ವ ದಲ್ಲಿ ಅನೇಕರು ತಾವು ಕೊಟ್ಟು ತೆಗೆದುಕೊಳ್ಳುವ ಲೆಖ್ಖಾಚಾರ ವಿಷಯಗಳಲ್ಲಿ ಕಲ್ಲು ಗಳನ್ನಾಗಲಿ—ಬೀಜಗಳನ್ನಾಗಲಿ ಇಟ್ಟುಕೊಂಡು ಪರಿಷ್ಕರಿಸಿಕೊಳ್ಳುತ್ತಿದ್ದರಂತೆ. ಈಗ ಎಷ್ಟೋಮಟ್ಟಿಗೆ ಉತ್ತಮವೆಂದು ಹೇಳಲು ಅವಶ್ಯವಿಲ್ಲ. ಈ ಶಾಸ್ತ್ರವು ಮೇಧಾ ಶಕ್ತಿಯನ್ನು ವೃದ್ಧಿಪಡಿಸುವದು. ಪ್ರತಿಯೊಬ್ಬನಲ್ಲಿಯೂ ಯಿಾವಿಧವಾದ ಶಕ್ತಿಯಿರುತ್ತದೆ. ಆದರೆ ಆದನ್ನು ವೃದ್ಧಿಪಡಿಸದ ವಿನಹ, ಅದು ಪ್ರಕಾಶಕ್ಕೆ ಬರಲಾ ರದು-ಆದುದರಿಂದಲೇ ಚಿಕ್ಕವಯಸ್ಕರಾದ ಹುಡುಗರಿಗೆ ಸಂಖ್ಯಾ ಸಂಖ್ಯಾ ಉದಾಹರಣೆ

ಗಳನ್ನು ತೋರಿಸಿಕೊಟ್ಟು, ಪುನಹ ಅಂಥವುಗಳನ್ನೇ ಬಾಲಕರು, ಆಲೋಚಿಸಿ ಹೇಳುವಂತೆಯೂ ಸ್ವಲ್ಪ ದೊಡ್ಡವಾದವುಗಳನ್ನು ಸ್ಲೇಟಿನ ಮುಖಾಂತರ ಮಾಡಿಸುವಂತೆಯೂ ಉಪಾದ್ಯಾಯರು ಪ್ರಯತ್ನಿಸಿದರೆ ಬಾಲಕರು ದೊಡ್ಡವರಾದ ಹಾಗೆಲ್ಲಾ ಅವರ ಮೇಧಾ ಶಕ್ತಿಯು ವೃದ್ಧಿಯಾಗುತ್ತಾ ಬರುವುದು. ಉಪಾಧ್ಯಾಯನು ಮೊದಲು ಯಾವ ವಿಷಯವಾದ ಉದಾಹರಣೆಯನ್ನು ತೋರಿಸುವನೋ, ಅಂಥವುಗಳನ್ನೇ ಪುನಹ ಪ್ರಶ್ನೆಮಾಡಬೇಕೇ ವಿನಹ ಬೇರೆವಿಧ ಪ್ರಶ್ನೆ ಹಾಕಬಾರದು. ಹೀಗೆ ಎಲ್ಲಾವಿಧಿಗಳು ಅವರಿಗೆ ತಿಳಿದನಂತರ, ಎಲ್ಲವನ್ನು ಮಿಶ್ರಮಾಡಬಹುದು. ಆದರೆ ಕೂಡಲೆ—ಅವರ ಬುದ್ಧಿಯು ಗಲಿಬಿಲಿ ಆಗುವಂತೆ ಮಾಡಬಾರದು—ಎರಡೆರಡನ್ನೇ ಮಿಶ್ರಮಾಡುತ್ತಾ ನಂತರ ನಾಲ್ಕುವಿಧವಾದ ನಿಯಮಗಳನ್ನು ಶೇರಿಸಿದರೂ—ಊಹಿಸುವ ಶಕ್ತಿಯುಂಟಾಗಿರುವದು—ಇದೇ ರೀತಿಯಲ್ಲಿಯೇ ಒಂದೊಂದೇ ವಿಧವಾದ ನಿಯಮವನ್ನು ಅದೇ ವಿಧವಾದ ಉದಾಹರಣೆಗಳೊಂದಿಗೆ ಬರೆಯಲ್ಪಡುವುದು—

ಮನೋಗಣಿತ—(ಸಂಕಲನ)

[Infant A. B. ಮತ್ತು 1 ನೇ ತರಗತಿಗಳಲ್ಲಿ ಮಾತ್ರವೇ ಉಪಯೋಗಿಸತಕ್ಕವುಗಳು]

1 ಪ್ರಶ್ನೆ. ಸಂಕಲನ ವಂದರೇನು?

ಉತ್ತರ—ಕೊಡಲ್ಪಟ್ಟ 2—3 ಸಂಖ್ಯೆಗಳನ್ನು (ಅಥವಾ ಅನೇಕ ಸಂಖ್ಯೆಗಳನ್ನು) ಸೇರಿಸಿ ಒಂದು ಸಂಖ್ಯೆಯನ್ನು ಮಾಡಿಡುವುದಕ್ಕೆ ಹೆಸರು. ಉದಾಹರಣೆ—4+5 ಇವುಗಳನ್ನು ಶೇರಿಸಿದರೆ 9 ಆಗುವದು]

2 ಪ್ರಶ್ನೆ. ಸೇರಿಸಲ್ಪಟ್ಟ ಸಂಖ್ಯೆಗೆ ಏನಂದು ಹೆಸರು?

ಉತ್ತರ—ಅವುಗಳ ಒಟ್ಟೆಂದು ಹೆಸರು. ಉದಾಹರಣೆ—ಮೇಲೆ ಹೇಳಲ್ಪಟ್ಟ 9 ಎಂಬುವದು. (4+5) ಎಂಬುವುಗಳ ಒಟ್ಟು) + = ಉಪಾದ್ಯಾಯರು ಈ ಗುರ್ತುಗಳನ್ನು ಜೋಡಿಸಿದ ಮೇಲೆ ಬರೆಯತಕ್ಕುದು.

3 ಪ್ರಶ್ನೆ. + ಈ ಗುರ್ತಿಗೆ ಹೆಸರೇನು? ಏನನ್ನು ತಿಳಿಸುವುದು?

ಉತ್ತರ—ಇದಕ್ಕೆ ಪ್ಲಸ್ ಎಂದು (ಕನ್ನಡದಲ್ಲಿ ಸಂಕಲನ ಚಿಹ್ನೆ ಅಥವಾ ಕೂಡುವ ಗುರ್ತು) ಹೆಸರು. ಎರಡುಸಂಖ್ಯೆಗಳ ಮಧ್ಯದಲ್ಲಿಟ್ಟರೆ ಅವುಗಳನ್ನು ಕೂಡಿಸಬೇಕೆಂದು ತಿಳಿಸುತ್ತದೆ. ಉದಾ, (4+5)=9

4 ಪ್ರಶ್ನೆ. = ಈ ಗುರ್ತಿನ ಹೆಸರೇನು? ಯಾವ ಅರ್ಥವನ್ನು ಸೂಚಿಸು

ತ್ಯದೆ. ಇದಕ್ಕೆ ಈಕ್ವೆಲ್ಸ್ (ಅಥವಾ ಕನ್ನಡದಲ್ಲಿ ಸಮಾನಾರ್ಥಕ ಚಿಪ್ಪೆ) ಎಂದು ಹೆಸರು. ಕೆಲವು ಅಂಕೆಗಳು ಈ ಗುರ್ತಿನ ಮುಂದಿರುವುದಕ್ಕೆ ಸಮವೆಂದು ತಿಳಿಸುತ್ತದೆ. ಉದಾ—(4+5+3=12 ಅಂದರೆ 4, 5, 3 ಇವುಗಳು 12 ಕ್ಕೆ ಸಮ ಎಂದು)

5 ಪ್ರಶ್ನೆ—ಈ ಕೆಳಗಿನವುಗಳು ಒಟ್ಟು ಎಷ್ಟು ?

5+ 6, +7+6, +3+9, 4+5, 2+7, 10+5
12+7, 15+5, 3+16, 3+8. 5+11, 17+3,
11+7, 14+3, 10+7, 12+5, 9+8, 7+11,
14+5, 12+3, 11+9, 5+8 7+9, 13+17,
17+21, 30+16, 14+37,

6 ಪ್ರಶ್ನೆ—ನನ್ನಲ್ಲಿ 18 ಗುಂಡಿಗಳಿವೆ ಪುನಃ 22 ಗುಂಡಿಗಳನ್ನು ಕೊಂಡರೆ ಎಷ್ಟಾಗುವುದು. (40)

7—ರಾಮನ ಹತ್ತರ 11 ಕುದುರೆಗಳಿವೆ 35 ಕುದುರೆ ಮರಿಗಳು ಇವೆ. ಎಲ್ಲಾ ಶೇರಿ ಎಷ್ಟಾಗುವುವು ? (46)

8—ಒಬ್ಬನು 13 ಮೈಲ್ ದೂರವಿರುವ ಒಂದು ಹಳ್ಳಿಗೆ ಹೋಗುತ್ತಾನೆ. ಪುನಹ ವಾಪಸು ಬಂದರೆ ಎಷ್ಟು ಮೈಲು ನಡೆದಂತಾಯಿತು. (26)

9—ನಾನು 18 ರೂ ಗಳನ್ನು ದಾನಮಾಡಿದ ತರುವಾಯು, 32 ರೂ ಗಳನ್ನು ಉಳಿಸಿಕೊಳ್ಳುವೆನು. ಆದರೆ ಮೊದಲು ನನ್ನಲ್ಲಿದ್ದ ರೂ ಎಷ್ಟು ? (50)

10—ರಾಮನ ಹತ್ತರ 18 ಗೋಲಿಗಳಿವೆ ಕೃಷ್ಣನಹತ್ತರ 25 ಗೋಲಿ ಹೆಚ್ಚಾಗಿವೆ. ಆದರೆ ಕೃಷ್ಣನಲ್ಲಿರುವುವೆಷ್ಟು ? (43)

11—ಪ್ರಶ್ನೆ ನಾನು 23 ಕಾಸುಗಳಿಗೆ 1 ಪುಸ್ತಕವನ್ನು ಕೊಳ್ಳುತ್ತೇನೆ. ಅದನ್ನು ಮಾರುವುದರಿಂದ 15 ಕಾಸು ಲಾಭವಾಯಿತು. ಆದನ್ನೆಷ್ಟಕ್ಕೆ ಮಾರಿದೆನು. (37)

12—ಒಂದು ಸ್ಕೂಲಿನ 1 ನೇ ತರಗತಿಯಲ್ಲಿ 10 ಹುಡುಗರು 2 ನೇ ತರಗತಿಯಲ್ಲಿ 24 3 ನೇ ತರಗತಿಯಲ್ಲಿ 16 ಹು ಇದಾರೆ. ಸ್ಕೂಲಿನ ಒಟ್ಟು ಸಂಖ್ಯೆ ಎಷ್ಟು ? (50)

* ವಿದ್ಯಾದಾಯಿನಿ

ಭಾಗ ೧೫೫.] ಸೆಪ್ಟಂಬರ್.—೧೯೦೩. [ಸಂಜಿಕೆ ೯

ವಿದ್ಯಾಭ್ಯಾಸ.

ಜನರಿಗೆ ಅಭಿರುಚಿಯಾಗಿರುವ ಪದಾರ್ಥಗಳೆಲ್ಲಾ ಪ್ರಯೋಜನ ಕರವಾಗಿರುತ್ತವೆಂದು ಹೇಳಲಾಗುವುದಿಲ್ಲ. ಕೆಲವರ ಅಭಿರುಚಿಯು ವಿಚಿತ್ರವಾಗಿ ಪರಿಣಮಿಸುವುದು. ಒಬ್ಬನಿಗೆ ಒಂದು ಬಗೆಯ ಬುರುಡೆಯಲ್ಲಿ ಬಹಳವಾಗಿ ಅಭಿರುಚಿಯಿರುವುದು. ಅದರ ತೂಕದಷ್ಟು ಚಿನ್ನವನ್ನು ಪ್ರತಿಯಾಗಿ ಕೊಟ್ಟಾಗ್ಯೂ ಆ ಬುರುಡೆಯನ್ನವನು ಇತರರಿಗೆ ಕೊಡನು. ಮತ್ತೊಬ್ಬನಿಗೆ ಒಡದ ಮಡಿಕೆ ಓಡಿನಲ್ಲಿ ಬಹು ಪ್ರೀತಿಯಿರುವುದು. ಎಷ್ಟು ವರಹಗಳನ್ನು ಕೊಟ್ಟಾಗ್ಯೂ ಅದನ್ನವನು ಬೇರೆಯವರಿಗೆ ಕೊಡುವುದಿಲ್ಲ. ಕೆಲವರು ಗತಿಸಿದ ಪ್ರಸಿದ್ಧರಾದ ಕೊಲೆಗಾರರ ಕೂದಿಲು ಹಲ್ಲು ಮುಂತಾದ ದೇಹಶೇಷಗಳಿಗೆ ಬಹು ಬೆಲೆಯನ್ನಾದರೂ ಕೊಟ್ಟು ಕೊಂಡುಕೊಳ್ಳುವರು. ಹೀಗೆ ಅನೇಕರಿಗೆ ಬೇರೆ ಬೇರೆ ವಸ್ತುಗಳಲ್ಲಿ ವಿಚಿತ್ರವಾದ ಅಭಿರುಚಿಯು ಕಂಡುಬರುವುದು. ಮತ್ತು ಅಮೂಲ್ಯವಸ್ತುಗಳನ್ನು ಹೊಂದಿದರೆ ಆವರು ತೃಪ್ತರಾಗುವರು.

ಆದರೆ ಈ ವಸ್ತುಗಳು ಅವವರಿಗೆ ತೃಪ್ತಿಪಡಿಸುವಂಥವಾದಾಗ್ಯೂ ಜನಸಾಮಾನ್ಯಕ್ಕೆ ಬೆಲೆಯುಳ್ಳವಾಗುವುವೆ? ಮನುಷ್ಯವರ್ಗಕ್ಕೆ ಇವುಗಳಿಂದ ಏನುಪ್ರಯೋಜನ? ಇವು ಮನುಷ್ಯರಿಗೆ ಆವಶ್ಯಕವಾದ ವಸ್ತುಗಳೆಂದು ಯಾರೂ ಹೇಳಲಾರರು. ಪರಿಪೂರ್ಣವಾದ ಜೀವಿಕೆಗೆ ಇವು ಪ್ರಯೋಜನಕರವಾದುವೆಂದು ಯಾರೂ ಒಪ್ಪಲಾರರು. ಕೆಲವು ಚರಿತ್ರ ವಿಷಯಗಳೂ ಇವುಗಳಿಗೆ ಸದೃಶವಾಗಿರುವುವು. ಆ ಚರಿತ್ರ ವಿಷಯಗಳು ಕೆಲವರ ಅಭಿರುಚಿಗೆ ತೃಪ್ತಿಕರವಾಗಿದ್ದರೂ ಅವು ಪೌರಕಾ

ರ್ಯಗಳಿಗೆ ಮಾರ್ಗದರ್ಶಿಗಳಾಗಿಲ್ಲವಾದುದರಿಂದ, ಅವು ನಿಷ್ಪ್ರಯೋಜನವಾದುವೆಂದು ಖಂಡಿತವಾಗಿ ಹೇಳಬಹುದು. ಮೊದಲು ತಿಳಿಸಿದಂತೆ ಮನುಷ್ಯರ ಪರಿಪೂರ್ಣ ಜೀವನಕ್ಕೆ ಯಾವುವು ಸಹಾಯವನ್ನು ಮಾಡುವುವೋ ಅವೇ ಬೆಲೆಯುಳ್ಳ ಪದಾರ್ಥಗಳಾಗಿರುವುವು. ಆದಪ್ರಯುಕ್ತ ಈಗ ಪಾಠಶಾಲೆಗಳಲ್ಲಿ ಹೇಳಿಕೊಡುವ ರಾಜರ ಹೆಸರು ಜನನ ಮರಣ ಮುಂತಾದುವುಗಳ ತಾರೀಕು ಮೊದಲಾದ ಚರಿತ್ರ ವಿಷಯಗಳು ಪೌರಕಾರ್ಯಕ್ಕೆ ಪ್ರಯೋಜನಕಾರಿಗಳಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು.

ನೆರಮನೆಯ ಬಿಕ್ಕೊಂದು ನಿನ್ನೆ ದಿವಸ ಕೂಗಿತು ಎಂದು ನಿಮಗೆ ಯಾರಾದರು ಹೇಳಿದ್ದೆಯಾದರೆ, ಆದೇನು ನಿಷ್ಪ್ರಯೋಜನವಾದ ವರ್ತಮಾನವೆಂದು ತಟ್ಟನೆ ಎನ್ನುವಿರಿ. ಆ ಬಿಕ್ಕು ಕೂಗಿದ್ದು ಸತ್ಯ. ಅದು ಯಥಾರ್ಥವಾಗಿ ನಡೆದ ಸಂಗತಿಯಾಗಿರುವುದು. ಅದನ್ನು ಏತಕ್ಕೆ ನಿಷ್ಪ್ರಯೋಜನವೆಂದು ಹೇಳುವಿರಿ? ಆ ವರ್ತಮಾನದಿಂದ ಪರಿಪೂರ್ಣ ಜೀವಿಕೆಗೆ ಯಾವ ಸಹಾಯವೂ ಇಲ್ಲವಾದುದರಿಂದ ಹಾಗೆ ಹೇಳುವಿರಲ್ಲವೆ? ಇದರಂತೆಯೇ ಮೇಲಿನ ಚರಿತ್ರ ವಿಷಯಗಳನ್ನು ಕುರಿತು ವಿಚಾರ ಮಾಡಿರಿ. ಅವು ನಿಮ್ಮ ಪರಿಪೂರ್ಣ ಜೀವನಕ್ಕೆ ಏನಾದರೂ ಸಹಾಯ ಮಾಡುವುವೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ನೋಡಿರಿ. ಆವೆಲ್ಲಾ ಯಥಾರ್ಥವಾಗಿ ನಡೆದ ಸಂಗತಿಗಳು. ಆದಾಗ್ಯೂ ಬಿಕ್ಕಿನ ಕೂಗಿನ ವದಂತಿಯಂತೆ ಅವುಗಳಿಂದ ಪರಿಪೂರ್ಣವಾದ ಜೀವಿಕೆಗೆ ಸಹಾಯವೇನೂ ಇರುವಂತೆ ಕಾಣುವುದಿಲ್ಲ. ಆದುದರಿಂದ ಅವುಗಳೂ ನಿಷ್ಪ್ರಯೋಜನವಾದುವುಗಳೆಂದು ಒಪ್ಪಿಕೊಳ್ಳಬೇಕಾಗುವುದು. ವಿನೋದವಾಗಿ ಕಾಲ ಕಳೆಯಲು, ಬೇಕಾದರು ಅವನ್ನು ಓದಬಹುದೇ ಹೊರತು ಅಂಥಾ ಚರಿತ್ರ ವಿಷಯಗಳಿಂದ ಪೌರಕಾರ್ಯಕ್ಕೆ ಪ್ರಯೋಜನವಿಲ್ಲ.

ಯಾವುವು ಜನರಿಗೆ ಉಪಯುಕ್ತಗಳಾದ ವಿಷಯಗಳೋ ಅವು ಹಳೆಯ ಚರಿತ್ರ ಗ್ರಂಥಗಳಲ್ಲಿ ಬರೆಯಲ್ಪಟ್ಟಿಲ್ಲ. ಈಗೀಗ ಈಚಿನ ಚರಿತ್ರಕಾರರು ಅಂಥಾ ವಿಷಯಗಳನ್ನು ಕುರಿತು ಬರೆಯಲಾರಂಭಿಸಿರುವರು. ಪೂರ್ವದಲ್ಲಿ ರಾಜರು ಮುಖ್ಯರಾಗಿಯೂ ಪ್ರಜೆಗಳು ಅಲ್ಪರಾಗಿಯೂ ಭಾವಿಸಲ್ಪಟ್ಟುದರಿಂದ, ಹಳೆಯ ಚರಿತ್ರ ಗ್ರಂಥಗಳಲ್ಲಿ ರಾಜರ ಕಾರ್ಯಗಳನ್ನೇ ಹೆಚ್ಚಾಗಿ ಪ್ರಕಾಶಪಡಿಸುತ್ತಿದ್ದರೇ ಹೊರತು ಪ್ರಜೆಗಳ ಕಾರ್ಯಗಳನ್ನು ಪ್ರಸಿದ್ಧಿಗೆ ತರುತ್ತಿರಲಿಲ್ಲ. ಆದರೆ ಈಗ ರಾಜನ ಕ್ಷೇಮಕ್ಕಿಂತಲೂ ಪ್ರಜೆಗಳ ಕ್ಷೇಮವೇ ಮುಖ್ಯವಾದುದೆಂದು ಎಣಿಸಲ್ಪಡುವುದರಿಂದ, ಈ

ಗಿನ ಚರಿತ್ರಕಾರರು ಪ್ರಜೆಗಳು ಏಳಿಗೆಗೆ ಬರುವ ಮಾರ್ಗವನ್ನು ಕುರಿತು ವಿಶೇಷವಾಗಿ ಬರೆಯಲಾರಂಭಿಸಿರುವರು. ಜನಾಂಗದವರ ಸಹಜವಾದ ಚರಿತ್ರೆಯೇ ತಿಳಿಯಬೇಕಾದ ಮುಖ್ಯ ವಿಷಯವಾಗಿರುವುದು.

ಒಂದು ಜನಾಂಗವು ಹೇಗೆ ಬೆಳೆದು ಸ್ಥಾಪಿತವಾಯಿತೆಂಬ ವಿಷಯವನ್ನು ತಿಳಿಯಲು ಸಹಾಯವಾದ ಸಂಗತಿಗಳೆಲ್ಲಾ ನಮಗೆ ಬೇಕಾಗಿರುವುವು. ಇವುಗಳಲ್ಲಿ ಸರಕಾರಿಯ ವಿಷಯವೂ ಗರ್ಭಿತವಾಗಿರಬೇಕು. ಆದರೆ ಸರಕಾರಿ ಅಧಿಕಾರಿಗಳನ್ನು ಕುರಿತು ಹೆಚ್ಚು ಸಂಗತಿಗಳು ಬೇಕಾಗಿಲ್ಲ. ಸರಕಾರದ ರಚನೆ. ನೀತಿ. ನ್ಯಾಯ ಅಡಳಿತದ ಕ್ರಮ ದುರಾಗ್ರಹ ಅನ್ಯಾಯ ಮುಂತಾದ ಸಂಗತಿಗಳು ವಿಶೇಶವಾಗಿ ರತಕ್ಕುದು. ಮುಖ್ಯ ಸರಕಾರದವರ ವಿಷಯಮಾತ್ರವಲ್ಲದೆ ಸ್ಥಳೀಯ ಅಧಿಕಾರಿಗಳ ಮತ್ತು ಅವರ ಶಾಖೆಗಳ ವಿವರವು ಸಾಧ್ಯವಾದ ಮಟ್ಟಿಗೂ ವ್ಯಕ್ತವಾಗಿರಬೇಕು. ಮತಸಂಬಂಧವಾದ ವಿಷಯಗಳೂ ಸರಕಾರಿಯ ವಿಷಯಗಳ ಜತೆಯಲ್ಲಿ ವಿಶದವಾಗಿ ವಿವರಿಸಲ್ಪಡಬೇಕು. ಮತಸ್ಥಾಪನೆಯಾದ ರೀತಿ, ಮತಾಧಿಕಾರ, ಮತಕ್ಕೂ ಸರಕಾರಕ್ಕೂ ಇರುವ ಸಂಬಂಧ, ಮತಾಚಾರಪೂಜೆ ಪುನಸ್ಕಾರ ಹವ್ಯ ಕವ್ಯ ಮುಂತಾದ ವಿಷಯಗಳು ಯಥಾರ್ಥವಾಗಿ ಉಕ್ತವಾಗಿರಬೇಕು.

ಇದಲ್ಲದೆ ಒಂದುಜಾತಿಯವರಿಗೆ ಮತ್ತೊಂದು ಜಾತಿಯವರ ಮೇಲಿರುವ ಅಧಿಕಾರವೂ ಒಬ್ಬರಿಗೊಬ್ಬರು ಮರ್ಯಾದೆಯನ್ನು ತೋರಿಸುವ ವಿಧವೂ ಪರಸ್ಪರವಾಗಿ ಸಂಭೋಧಿಸುವರೀತಿಯೂ ಜನರಿಗಿರುವ ಬಿರುದಾಂಕಿತಗಳೂ ಮುಂತಾದವುಗಳು ವಿವರಿಸಲ್ಪಡಬೇಕು. ಪ್ರಜೆಗಳು ಮನೆಯೊಳಗೂ ಹೊರಗೂ ಆಚರಿಸುವ ಸಂಪ್ರದಾಯಗಳು ಯಾವುವು, ಸ್ತ್ರೀಪುರುಷರು ಪರಸ್ಪರವಾಗಿ ಹೇಗೆ ನಡೆದುಕೊಳ್ಳುವರು, ತಂದೆತಾಯಿ ಮಕ್ಕಳುಗಳಿಗೆ ಎಂಥಾ ಸಂಬಂಧವಿರುವುದು ಎಂಬುದನ್ನೂ ತಿಳಿಸಬೇಕು. ಜನರ ಮತ ಭಕ್ತಿ ಯಂತ್ರ ತಂತ್ರ ಮುಂತಾದವುಗಳನ್ನು ಪ್ರಕಟಮಾಡಬೇಕು. ಆಬಳಿಕ ಜನರ ಕೈಗಾರಿಕೆ ಕೆಲಸಗಳು ಯಾವುವೆಂಬುದನ್ನು ವಿವರಿಸಬೇಕು. ಅವರು ಯಾವವಿಧದಲ್ಲಿ ಕೆಲಸಮಾಡುವರು, ವಾಣಿಜ್ಯವು ಹೇಗೆನಡೆಸಲ್ಪಡುವುದು, ಸ್ವಾಮಿ ಭೃತ್ಯರಿಗೆ ಎಂಥಾ ಸಂಬಂಧವಿರುವುದು, ಆ ಮುದುರಪ್ಪುಗಳಾಗುವ ಸರಕುಗಳು ಯಾವುವು, ಅವನ್ನು ಯಾವರೀತಿಯಲ್ಲಿ ಯಾರು ವಿನಿಮಯ ಮಾಡುವರು, ಮತ್ತು ಜಲಾವಣೆಯಲ್ಲಿರುವ ಸಾಮ್ಯಮುಂತಾದವು ಯಾವುವೆಂಬುದನ್ನು ವ್ಯಕ್ತಪಡಿಸಬೇಕು. ಬಹುಒದಿ ವ್ಯಯಮಾಡಿ ಮಾಡಬೇಕಾದ ಕೈಗಾರಿಕೆ

ಗಳು ಯಾವುವಾದರೂ ಉಂಟೋ ಅವುಚೆನ್ನಾಗಿ ನಾಜೋಕಾಗಿ ಮಾಡಲ್ಪಡುವುವೋ ಇಲ್ಲವೋ ಎಂಬುದನ್ನೂ ತಿಳಿಸಬೇಕು.

ಆಮೇಲೆ ಜನರು ಎಷ್ಟರಮಟ್ಟಿಗೆ ಬುದ್ಧಿವಂತರಾಗಿದ್ದರೆಂಬುದನ್ನು ವಿವರಿಸಬೇಕು. ಎಂಥಾ ವಿದ್ಯೆಗಳನ್ನು ಯಾವ ಯಾವ ಜಾತಿಯವರು ಎಷ್ಟರಮಟ್ಟಿಗೆ ಕಲಿತಿದ್ದರು, ಶಾಸ್ತ್ರಗಳಲ್ಲಿಯೂ ದರ್ಶನಗಳಲ್ಲಿಯೂ ಎಷ್ಟರಮಟ್ಟಿಗೆ ಅಭಿವೃದ್ಧಿಹೊಂದಿದ್ದರು ಎಂಬುದನ್ನೂ ತಿಳಿಸಬೇಕು. ಇದಲ್ಲದೆ ಕುಶಲ ಕಲೆಗಳಲ್ಲಿ ಅವರಿಗೆ ಎಷ್ಟರಮಟ್ಟಿಗೆ ಅಭಿರುಚಿಯಿದ್ದಿತು, ಶಿಲ್ಪತಕ್ಷಣ ಬಣ್ಣಹಾಕುವುದು ಚಿತ್ರಲೇಖನ ವಸ್ತ್ರ ಮಾಡುವುದು ಕಟ್ಟಿ ಕಥೆಬರೆಯುವುದು ಸಂಗೀತ ಸಾಹಿತ್ಯ ಮುಂತಾದವುಗಳಲ್ಲಿ ಎಷ್ಟರ ಮಟ್ಟಿಗೆ ನಿಪುಣರಾಗಿದ್ದರೆಂಬುದನ್ನೂ ವಿವರಿಸತಕ್ಕುದು. ಜನರು ಪ್ರತಿದಿನದಲ್ಲಿಯು ಸಾಮಾನ್ಯವಾಗಿ ಮಾಡುತ್ತಿದ್ದ ಕೆಲಸಗಳನ್ನೂ ಅವರ ಆಹಾರ ಮನೆಯ ಸ್ಥಿತಿ ವಿನೋದ ಆಟಪಾಟ ಮುಂತಾದುವನ್ನೂ ವಿಶದಪಡಿಸಬೇಕು.

ಅವರ ನಡತೆಯು ಎಂಥಾದ್ದಾಗಿದ್ದಿತು, ಅವರ ಸದಾಚಾರವು ಯಾವುದು ದುರಾಚಾರವು ಯಾವುದು ಎಂಬುದನ್ನೂ ಪ್ರಕಾಶಮಾಡಬೇಕು. ಅವರ ಕಾನೂನುಗಳು ವಿಧಿನಿಷೇಧಗಳು ಸಂಪ್ರದಾಯಗಳು ಗಾದೆಗಳು ಶಾಸನಗಳು ಮೊದಲಾದುವು ಹೇಗಿದ್ದುವೆಂದನ್ನು ಗೊತ್ತುಮಾಡಿಕೊಳ್ಳಬೇಕು. ಇವೇ ಮೊಲಾದ ಸಂಗತಿಗಳನ್ನು ಯಥಾಕ್ರಮವಾಗಿಯೂ ವಿಶದವಾಗಿಯೂ ವಿವರಿಸಿ ಅವುಮೊದಲು ಹೇಗಿದ್ದುವು ಆಮೇಲೆ ಹೇಗೆಬದಲಾಯಿಸುತ್ತಾಬಂದುವು ಹೀಗಾಗಲು ಕಾರಣವೇನು ಎಂಬುದನ್ನು ಸೂಚಿಸತಕ್ಕುದು. ಇಥಾ ಪೂರ್ವವೃತ್ತಾಂತಗಳೇ ನಮಗೆ ಪೌರಕಾರ್ಯ್ಯಗಳನ್ನು ಕ್ರಮಪಡಿಸಿಕೊಳ್ಳಲು ಸಹಾಯುಮಾಡುವ್ರವು. ಈ ರೀತಿಯಾದ ಸಂಘವಿವರಣೆಯೇ ಉಪಯುಕ್ತವಾದ ಚರಿತ್ರ ವಿಷಯವಾಗಿರುವುದು. ಜನಾಂಗದವರ ಈ ವಿಧವಾದ ಜೀವಿಕೆಗಳನ್ನು ವಿವರಿಸಿ ಅವುಗಳ ಗುಣದೋಷಗಳನ್ನು ವ್ಯಕ್ತಪಡಿಸುವುದೇ ಚರಿತ್ರಕಾರರ ಮುಖ್ಯವಾದ ಕೆಲಸವಾಗಿರುವ್ರದು. ಇಂಥಾ ಚರಿತ್ರವಿಷಯಗಳೇ ಜನಾಂಗಗಳ ಹಾನಿವೃದ್ಧಿಗಳಿಗೆ ಕಾರಣವನ್ನು ತೋರಿಸಿ ಉತ್ತಮಗತಿಯನ್ನುಹೊಂದಲು ಮಾಡಬೇಕಾದ ಪೌರಕಾರ್ಯ್ಯಗಳಿಗೆ ಮಾರ್ಗದರ್ಶಿಗಳಾಗಿರುವುವು.

ಮೇಲೆಹೇಳಲ್ಪಟ್ಟ ಚರಿತ್ರಾರ್ಹವಿಷಯಗಳನ್ನುಮಾತ್ರ ಗೊತ್ತುಮಾಡಿಕೊಂಡರೆಸಾಲದು. ಅವುಗಳೊಂದಿಗೆ ದೇಹಮನಶ್ಶಾಸ್ತ್ರಗಳ ಜ್ಞಾನವೂ ಇರಬೇಕು. ಆಶಾಸ್ತ್ರಗಳಜ್ಞಾನವಿಲ್ಲದೆ ಚರಿತ್ರಸಂಗತಿಗಳ ಸಂಗ್ರಹದಿಂದ ಪ್ರಯೋಜನವಿಲ್ಲ.

ಆ ಶಾಸ್ತ್ರಗಳ ಜ್ಞಾನವಿಲ್ಲದ ಹೊರತು ಸಂಘಗಳಲ್ಲಿನಡೆಯುವ ಕಾರ್ಯ ಕಾರಣ ಭಾವಗಳನ್ನು ತಿಳಿಯಲಾಗುವುಲ್ಲ. ಚೆನ್ನಾಗಿ ಮನುಷ್ಯ ಸ್ವಭಾವಜ್ಞಾನವುಳ್ಳವರೇ ಸಂಘದಲ್ಲಿ ನಡೆಯುತಕ್ಕ ನಾನಾ ವಿಧಸಂಘಟಿಗಳ ಸಂಬಂಧಗಳನ್ನು ತಿಳಿಯಲು ಸಮರ್ಥರಾಗುವರು. ಸಂಘದಲ್ಲಿ ಸಂಭವಿಸುವ ಅಲ್ಪನಿಷಯಗಳನ್ನು ತಿಳಿಯಬೇಕಾದರೂ ಕೂಡ ಮನುಷ್ಯದೇಹ ಮನಸ್ಸುಗಳಸ್ವಭಾವವು ಗೊತ್ತಿರಬೇಕಾಗುತ್ತದೆ. ಹೀಗಿರುತ್ತಾ ಸಂಘದಲ್ಲಿನಡೆಯುವ ವಿಶೇಷಸಂಗತಿಗಳ ಸಂಬಂಧಗಳನ್ನು ತಿಳಿಯಬೇಕಾದರೆ ದೇಹಮನಶ್ಶಾಸ್ತ್ರಗಳಲ್ಲಿ ಅಧಿಕವಾದ ಪರಿಚಿತಿಯು ಅವಶ್ಯಕವಾಗಿರುವುದು.

(ಸಶೇಷ). S. V.

ಕಿಂಡರ್‌ಗಾರ್ಟ್ನ್ ಮತ್ತು ಮ್ಯಾನ್ಯೂಲ್ ಟ್ರೇನಿಂಗ್.

ಕಿಂಡರ್‌ಗಾರ್ಟ್ನ್ ಎಂಬುದು ಸಣ್ಣ ಮಕ್ಕಳ ಶಿಕ್ಷಣ ಮಾರ್ಗವಷ್ಟೆ. ನಮ್ಮ ದೇಶದ ಪಾಠಶಾಲೆಗಳ ಸಣ್ಣ ಮಕ್ಕಳ ತರಗತಿಗಳಲ್ಲಿ ಈ ಮಾರ್ಗದಲ್ಲಿರುವ ನ್ಯೂನತೆಗಳನ್ನೂ ಅವುಗಳನ್ನು ಕ್ರಮಪಡಿಸುವ ರೀತಿಯನ್ನೂ ನಾವು ಈ ಮಾಸಪತ್ರಿಕೆಯ ಸಂಚಿಕೆಗಳಲ್ಲಿ ಆಗಾಗ್ಗೆ ತಿಳಿಸುತ್ತಲೇ ಇರುವೆವಷ್ಟೆ. ಮತ್ತು ಬಾಲಕರ ಮನೋವ್ಯಾಪಾರಗಳನ್ನು ವೃದ್ಧಿಗೊಳಿಸುವಂತೆ ಅವರ ಹಸ್ತಕೌಶಲವನ್ನು ನೇತ್ರಪಾಟವನ್ನೂ ಹೆಚ್ಚಿಸುವುದು ಅವಶ್ಯಕವೆಂಬುದನ್ನೂ ಈ ಕೆಲಸವನ್ನು ನೆರವೇರಿಸುವುದಕ್ಕೆ ಪಾಶ್ಚಾತ್ಯರಾಜ್ಯಗಳಲ್ಲಿಟ್ಟಿರುವ ಮ್ಯಾನ್ಯೂಲ್ ಟ್ರೇನಿಂಗ್ ಪಾಠಶಾಲೆಗಳಲ್ಲಿ ನಡೆಯುವ ಕೆಲಸದ ಸ್ವರೂಪವೇನೆಂಬುದನ್ನೂ ಹಿಂದಿನ ಸಂಚಿಕೆಯೊಂದರಲ್ಲಿ ವಿವರಿಸಿರುವೆವಷ್ಟೆ. ಈ ವಿಷಯಗಳನ್ನು ಪರಿಶೋಧಿಸುವುದಕ್ಕಾಗಿ ನಮ್ಮ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ಲರಾದ ಮೆ॥ ಭಾಭಾನಾಹೇಬರು ಇಂಗ್ಲೆಂಡ್ ಮುಂತಾದ ಯೂರೋಪ್ ಖಂಡದ ರಾಜ್ಯಗಳಲ್ಲೂ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲೂ ಸಂಚಾರ ಮಾಡಿಕೊಂಡು ಬಂದು ತಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಿದ್ದರ ಮೇಲೆ ಅವರು ಕಿಂಡರ್ ಗಾರ್ಟ್ನ್ ಆಟಗಳನ್ನು ಕ್ರಮಪಡಿಸಲು ಇಂಗ್ಲೆಂಡಿನಿಂದ ಮಿಸ್ ಲ್ಯಾಟರ್ ಎಂಬುವರನ್ನೂ, ಮ್ಯಾನ್ಯೂಲ್ ಟ್ರೇನಿಂಗ್ ಪಾಠಗಳನ್ನು ನಮ್ಮ ಸ್ಕೂಲುಗಳಲ್ಲಿ ಇಡಲು ಅನುಕೂಲಿಸುವಂತೆ ಉಪಾಧ್ಯಾಯರನ್ನು ಸಿದ್ಧ

ಪಡಿಸಲು ಅಮೇರಿಕಾದಿಂದ ಡಾಕ್ಟರ್ ಲಾರ್ಸರ್ಟ್ ಸಾಹೇಬರನ್ನೂ ಕರೆಸಿರುವರು. ಇವರಿಬ್ಬರೂ ಅವರವರ ಕೆಲಸಗಳಲ್ಲಿ ವಿಶೇಷ ನೈಪುಣ್ಯವನ್ನು ಹೊಂದಿರುವರೆಂದು ಹೇಳಬೇಕಾದುದೇ ಇಲ್ಲ. ಮಿಸ್. ಲ್ಯಾಟರ್ ಎಂಬುವರು ಅನೇಕವರುಷಗಳಿಂದಲೂ ಲಂಡನ್ ನಗರದಲ್ಲಿ ಪ್ರಸಿದ್ಧವಾದ ಒಂದು ದೊಡ್ಡ ಕಿಂಡರ್ ಗಾರ್ಟನ್ ಸ್ಕೂಲಿಗೆ ಮುಖ್ಯೋಪಾಧ್ಯೇಯಿನಿಯರಾಗಿರುವರು. ಮತ್ತು ಇವರು ಕಿಂಡರ್ ಗಾರ್ಟನ್ ಶಿಕ್ಷಣ ಕ್ರಮಕ್ಕೆ ಸಂಬಂಧವಾದ ಅನೇಕ ಪುಸ್ತಕಗಳನ್ನು ಬರೆದಿರುವರು. ಡಾಕ್ಟರ್ ಲಾರ್ಸರ್ಟ್ ಸಾಹೇಬರು ಸಂಯುಕ್ತ ಸಂಸ್ಥಾನದ ಬಾಸ್ಟನ್ ನಗರದ ಒಂದು ದೊಡ್ಡ ಮ್ಯಾನ್ಯುಅಲ್ ಟ್ರೇನಿಂಗ್ ಪಾಠಶಾಲೆಯ ಅಧ್ಯಕ್ಷರಾಗಿರುವರು. ಇವರೂ ಮ್ಯಾನ್ಯುಅಲ್ ಟ್ರೇನಿಂಗ್ ವಿಷಯದಲ್ಲಿ ಅನೇಕ ಒಳ್ಳೇ ಪುಸ್ತಕಗಳನ್ನು ಬರೆದಿರುವರು. ಇವರಿಬ್ಬರೂ ತಮ್ಮ ತಮ್ಮ ಕೆಲಸಗಳನ್ನು ಈ ತಿಂಗಳು 10 ನೇ ತಾರೀಖಿನಿಂದ ಬೆಂಗಳೂರಲ್ಲಿ ಪ್ರಾರಂಭಿಸುವರು. ಕಿಂಡರ್ ಗಾರ್ಟನ್ ವಿಷಯಕವಾದ ಶಿಕ್ಷಣವು ಶೇಷಾದ್ರಿ ರಸ್ತೆಯಲ್ಲಿರುವ ಮೆ॥ ಕಾಂತರಾಜೇ ಅರಸಿನವರ ಬಂಗಲೆಯಲ್ಲಿ ನಡೆಯುತ್ತಿರುವುದು. ಮ್ಯಾನ್ಯುಅಲ್ ಟ್ರೇನಿಂಗ್ ಕೆಲಸವು ಹೊಸದಾಗಿ ಕಟ್ಟಿರುವ ಶೇಷಾದ್ರಿ ಮೆಮೋರಿಯಲ್ ಹಾಲಿನಲ್ಲಿ ನಡೆಯುತಿರುವುದು. ಈ ಎರಡು ವಿಷಯಗಳಲ್ಲೂ, ಕೆಲಸವು ಯಾವರೀತಿಯಲ್ಲಿ ನಡೆಯುತ್ತಿರುವುದು ಎಂಬುದನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸುವೆವು.

ಕಿಂಡರ್ ಗಾರ್ಟನ್.

ಉಪಾಧ್ಯಾಯರಿಗೆ ಈ ಶಿಕ್ಷಣ ಕ್ರಮದಲ್ಲಿ ವಿಷಯವಾಗಿ ಉಪನ್ಯಾಸವನ್ನು ಮಾಡುವುದಕ್ಕೆ ಮೊದಲು, ಅವರು ಆ ಉಪನ್ಯಾಸಗಳಲ್ಲಿ ಕೇಳಿದ ಅಂಶಗಳನ್ನು ಪ್ರತ್ಯಕ್ಷವಾಗಿ ನೋಡುವುದಕ್ಕೂ ಅದರಂತೆ ತಾವು ಆಚರಿಸುವುದಕ್ಕೂ ಅನುಕೂಲವಾದ ಒಂದು ಪಾಠಶಾಲೆ ಯಿರಬೇಕಷ್ಟೆ, ಮಿಸ್. ಲ್ಯಾಟರ್ ಎಂಬುವರು ಬೆಂಗಳೂರಲ್ಲಿರುವ ಗೌರ್ನಮೆಂಟ್ ಗರ್ಲ್ಸ್ ಸ್ಕೂಲನ್ನು ಇಂತಹ ಪಾಠಶಾಲೆಯಾಗಿ ಸಿದ್ಧಪಡಿಸುವರು. ಅವರು ತಮ್ಮ ಕ್ರಮಕ್ಕೆ ಅನುಕೂಲವಾದ ಒಂದು ವೇಳಾ ಪತ್ರಿಕೆಯನ್ನು ಸಿದ್ಧಪಡಿಸಿ ಅದರಂತೆ ಈ ಪಾಠಶಾಲೆಯಲ್ಲಿ ಪಾಠಗಳನ್ನು ನಡೆಸುತಿರುವರು. ಈ ವೇಳಾಪತ್ರಿಕೆಯ ಪ್ರಕಾರ ಮಕ್ಕಳು ಬೆಳಿಗ್ಗೆ 7—30 ಗೆ ಪಾಠಶಾಲೆಗೆ ಒರುವರು. 7—30 ರಿಂದ 40 ರವರಿಗೆ ತರಗತಿಯಲ್ಲಿ ಉಪಾಧ್ಯಾಯರು ಹಾಜರಿಯ

ನ್ನು ತಗೆದುಕೊಳ್ಳುವರು. 7 ..40 ರಿಂದ 8 ರವರಿಗೆ ಮಕ್ಕಳೆಲ್ಲರೂ ಸ್ಕೂಲಿನ ಹಾಲಿನಲ್ಲಿ ಸೇರುವರು. ಅಲ್ಲಿ ಮಿನ್. ಲ್ಯಾಟರವರು ಪಿಯಾನೋ ವಾದ್ಯದಲ್ಲಿ ಮಧುರವಾದ ಗಾನಗಳನ್ನು ನುಡಿಸುವರು. ಈ ಗಾನಗಳನ್ನು ಮಕ್ಕಳು ಹಾಡುವರು. ಎಂಟು ಘಂಟೆಗೆ ಸರಿಯಾಗಿ ಮಕ್ಕಳು ಗಾನಕ್ಕೆ ಸರಿಯಾಗಿ ನಡೆಯುತ ಕ್ರಮವಾದ ರೀತಿಯಲ್ಲಿ ತಮ್ಮ ತಮ್ಮ ತರಗತಿಗಳಿಗೆ ಹೋಗುವರು. ಮಕ್ಕಳು ಪಾಠಶಾಲೆಗೆ ನಿತ್ಯವೂ ಬರುವಾಗ ತಮಗೆ ದೊರೆತ ಹೂಗಳನ್ನು ತರಬೇಕೆಂಬ ನಿಯಮವಿರುವುದು. ಎಂಟರಿಂದ 8—25 ರ ವರಿಗೆ ಪ್ರತಿತರಗತಿಯಲ್ಲೂ ಕೆಲವು ಮಕ್ಕಳು ಈ ಹೂಗಳನ್ನು ನೀರಿರುವ ಪಾತ್ರೆಗಳಲ್ಲಿ ಅಂದವಾಗಿಡುವರು, ಒಬ್ಬಿಬ್ಬರು ಹೊರಗೆ ಹೋಗಿ ದಿವಸದ ವಾಯುಗುಣವನ್ನು ಪರೀಕ್ಷಿಸುವರು, ಇನ್ನು ಕೆಲವರು ಪಾಠಶಾಲೆಯೊಳಗಿರುವ ಗಿಡಗಳಿಗೆ ನೀರು ಯೆರೆಯುವರು. ಕೆಲವರು ಪಾಠಶಾಲೆಯೊಳಗಿಟ್ಟಿರುವ ಪಕ್ಷಿಗಳು ಮೊದಲಾದ ಪ್ರಾಣಿಗಳಿಗೆ ಆಹಾರವನ್ನು ಕೊಡುವರು, ಉಳಿದವರಲ್ಲಿ ಒಬ್ಬಿಬ್ಬರು ಕ್ಯಾಲೆಂಡರ್ ಕೆಲಸವನ್ನು ಮಾಡುವರು. ಈ ಕೆಲಸಗಳಲ್ಲಿ ನಿರತರಾದರೆ ಉಳಿದವರೆಲ್ಲರೂ ಚಿತ್ರ ಬರೆಯುತಿರುವರು. ಕ್ಯಾಲೆಂಡರಿನಲ್ಲಿ ಪ್ರತಿಯೊಂದು ದಿನಕ್ಕೂ ಒಂದೊಂದು ಮನೆ ಯಿರುವುದು. ಆ ಮನೆಯಲ್ಲಿ ಒಂದು ಮಗುವು ಆದಿವಸಕ್ಕೆ ಸಂಬಂಧವಾದ ವಿಶೇಷಾಂಶವನ್ನು ಚಿತ್ರರೂಪದಲ್ಲಿ ಬರೆಯುವುದು. ನಿದರ್ಶನವಾಗಿ ಆಕಾಶದಲ್ಲಿ ಸೂರ್ಯನು ಆದಿವಸ ಚೆನ್ನಾಗಿ ಪ್ರಕಾಶಿಸುತ್ತಿದ್ದರೆ ಮಗುವು ಸೂರ್ಯನ ಚಿತ್ರವನ್ನು ಬರೆಯುವುದು, ಮೋಡವು ಮುಚ್ಚಿಕೊಂಡು ಮಳೆಬರುವಂತಿದ್ದರೆ ಆ ಮೋಡವನ್ನು ಆದರಿಂದ ಬರುವ ಮಳೆಯನ್ನೂ ಬರೆಯುವುದು.

ಈ ಕೆಲಸಗಳೆಲ್ಲಾ ಆದಮೇಲೆ ಮಕ್ಕಳು ಪ್ರಕೃತಿಯನ್ನು ಪರೀಕ್ಷಿಸಲು ಹೊರಗೆ ಹೊರಡುವರು. ಈ ಕಾಲದಲ್ಲಿ ಅವರು ಒಂದು ಗಿಡವನ್ನು ಅಥವಾ ಪ್ರಕೃತಿಗೆ ಸೇರಿದ ಯಾವುದಾದರೂ ಒಂದು ಅಂಶವನ್ನು ಕ್ರಮವಾಗಿ ಒಂದೆರಡು ವಾರಗಳ ವರಿಗೆ ಪರೀಕ್ಷಿಸುವರು. ಈ ಕೆಲಸವು ಬಹಳ ಮುಖ್ಯವಾದುದು. ಈ ವಾರಗಳಲ್ಲಿ ಪಾಠಶಾಲೆಯಲ್ಲಿ ನಡೆಯುವ ಇತರಕೆಲಸಗಳಿಗೆಲ್ಲ ಇದೇ ಆಧಾರವಾಗುವುದು. ತಾವು ಪರೀಕ್ಷಿಸಿದ ಪದಾರ್ಥಕ್ಕೆ ಸಂಬಂಧಪಟ್ಟ ಅಂಶಗಳನ್ನೆಲ್ಲ ಅವರು ಕ್ರಮವಾಗಿ ಬರಿದಿಡುವರು. ಆಮೇಲೆ ಚಿತ್ರ ಬರೆಯುವಾಗ ಪ್ರಕೃತಿಯನ್ನು ಪರೀಕ್ಷಿಸುವಾಗ ತಾವು ನೋಡಿದ ವಿಷಯದ ಚಿತ್ರವನ್ನು ವಿವಿಧವಾದ ಬಣ್ಣವುಳ್ಳ ಕೀಪೋಸುಣಗಳಿಂದ ಅಥವಾ ಬ್ರುಷ್ಷಿನಿಂದ ಕಾಗದದಮೇಲೆ ಬರೆಯುವರು. ಜೇಡಿಮಣ್ಣಿ

ನಿಂದ ಮಾಡುವಾಗ ಮೇಲೆ ಪರೀಕ್ಷಿಸಿದ ವಸ್ತುವಿನ ಭಾಗಗಳ ಮಾದರಿಗಳನ್ನು ಮಾಡುವರು. ನಿದರ್ಶನವಾಗಿ ಒಂದು ಗಿಡವನ್ನು ಪರೀಕ್ಷಿಸುತಿದ್ದರೆ ಈ ಮಣ್ಣಿನಲ್ಲಿ ಅದರ ಎಲೆ, ಹೂ, ಕಾಯಿ, ರೆಂಬೆ ಇವುಗಳ ಮಾದರಿಗಳನ್ನು ಮಾಡುವರು. ಈರೀತಿಯಲ್ಲಿ ಪ್ರಕೃತಿಯನ್ನು ಪರೀಕ್ಷಿಸುವ ಕಾರ್ಯಕ್ಕೂ ಉಳಿದ ಕೆಲಸಗಳಿಗೂ ಸಂಬಂಧವನ್ನು ಕಲ್ಪಿಸುವರು.

ಕಿಂಡರ್ ಗಾರ್ಟ್ನ ಕರಣಗಳಿಂದ ಮಕ್ಕಳು ಆಟಗಳನ್ನು ಆಡುವುದೂ ಈ ಪಾಠಶಾಲೆಯಲ್ಲಿ ನಡೆಯುವ ಒಂದು ಮುಖ್ಯ ಕೆಲಸವಾಗಿರುವುದಷ್ಟೆ. ಈ ಆಟಗಳಲ್ಲಿ ಒಂದು ಕರಣದ ಆಟಕ್ಕೂ ಇನ್ನೊಂದು ಕರಣದ ಆಟಕ್ಕೂ ಸಂಬಂಧವನ್ನು ಕಲ್ಪಿಸುವರು. ನಾಲ್ಕನೆಯ ಕರಣದಲ್ಲಿ ಆಡುವಾಗ ಮಕ್ಕಳು ಪಾರಿವಾಳದ ಹಕ್ಕಿಗಳ ಗೂಡುಗಳನ್ನು ಮಾಡಿದರೆ, 13 ನೇ ಕರಣದಿಂದ ಆಡುವಾಗ ಕಾಗದವನ್ನು ಮಡಿಸಿ ಅಥವಾ ಕತ್ತರಿಸಿ ಪಾರಿವಾಳದ ಹಕ್ಕಿಗಳನ್ನು ಮಾಡಿ ಈ ಗೂಡುಗಳಲ್ಲಿಡುವರು, ಅಥವಾ ಜೇಡೀ ಮಣ್ಣಿನಿಂದ ಈ ಹಕ್ಕಿಗಳನ್ನು ಮಾಡಿ ಅದರೊಳಗೆ ಇಡುವರು. ಇಂದವಾದ ಚಿತ್ರಪಠಗಳನ್ನು ತೆಗೆದುಕೊಂಡು ಅವುಗಳ ವಿಷಯದಲ್ಲಿ ಮಾತನಾಡುವುದೂ ಪ್ರತಿ ದಿವಸವೂ ನಡೆಯುವ ಒಂದು ಪಾಠವಾಗಿರುವುದು. ಈ ಚಿತ್ರಪಠಗಳ ಪಾಠಕ್ಕೂ, ಚಿತ್ರ ಬರೆವುದಕ್ಕೂ, ಕರಣಗಳ ಆಟಕ್ಕೂ ಸಂಬಂಧವನ್ನು ಕಲ್ಪಿಸುವರು. ಹಸುವಿನ ಚಿತ್ರವನ್ನಿಟ್ಟುಕೊಂಡು ಅದರ ವಿಷಯವಾಗಿ ಮಕ್ಕಳ ಸಂಗಡ ಮಾತನಾಡಿದರೆ, ಚಿತ್ರಬರೆಯುವ ಪಾಠದಲ್ಲಿ ಆ ಹಸುವಿನ ಚಿತ್ರವನ್ನು ಬರೆಯುವರು. ಕಡ್ಡಿಗಳಿಂದ ಆಡುವಾಗ ಹಸುಗಳನ್ನು ಕೂಡುವ ದೊಡ್ಡಿಯನ್ನು ಕಟ್ಟುವರು. ಜೇಡಿಯಿಂದ ಆಡುವಾಗ ಹಸುವಿನ ಮಾದರಿಯನ್ನು ಮಾಡುವರು. ಈರೀತಿಯಲ್ಲೂ ಆಟಗಳಿಗೆ ಪರಸ್ಪರ ಸಂಬಂಧವನ್ನು ಕಲ್ಪಿಸುವರು. ಇವರು ಪ್ರತಿದಿವಸವೂ ಸಣ್ಣಮಕ್ಕಳನ್ನು ಸ್ವಲ್ಪಹೊತ್ತು ಮರಳಿನಲ್ಲಿ ಆಡುವುದಕ್ಕೆ ಬಿಡುವರು. ಈ ಕಾಲದಲ್ಲಿ ಮಕ್ಕಳು ಮರಳಿನಲ್ಲಿ ನಾನಾ ವಿಧವಾದ ಆಕೃತಿಗಳನ್ನು ರಚಿಸುವರು. ಅಥವಾ ಗುಡ್ಡೆಗಳನ್ನು ಮಾಡಿ ಅವುಗಳಮೇಲೆ ಸಣ್ಣ ರೆಂಬೆಗಳನ್ನು ನೆಟ್ಟು ಗಿಡವನ್ನು ಮಾಡುವರು.

ಮಕ್ಕಳು ಹಾಡುಗಳನ್ನು ಹೇಳಿಕೊಂಡು ಅವುಗಳಿಗೆ ತಕ್ಕಂತೆ ಆಡುವುದೂ ಇವರ ಕ್ರಮದ ಇನ್ನೊಂದು ಭಾಗವಾಗಿರುವುದು. ಇಂತಹ ಆಟಕ್ಕೆ ಒಂದು ನಿದರ್ಶನವನ್ನು ಇಲ್ಲಿ ಕೊಡುವೆವು. ತರಗತಿಯಲ್ಲಿರುವ ಮಕ್ಕಳಲ್ಲಿ ಇಬ್ಬರು ವಿನಪಾ

ಉಳಿದವರೆಲ್ಲರೂ ಒಬ್ಬರಕೈಯನ್ನು ಒಬ್ಬರು ಹಿಡಿದುಕೊಂಡು ವೃತ್ತಾಕಾರದಲ್ಲಿ ನಿಲ್ಲುವರು. ಈ ವೃತ್ತವು ಒಂದು ಗೂಡು, ಆಗೂಡಿನೊಳಕ್ಕೆ ಒಂದು ಮಗುವು ಹೋಗುವುದು, ಇದು ಇಲಿಯು. ಗೂಡನ್ನು ಮಾಡಿರುವ ಮಕ್ಕಳಲ್ಲಿ ಒಂದು ಅಕ್ಕಿ, ಇನ್ನೊಂದು ತುಪ್ಪ, ಮತ್ತೊಂದು ಬೆಲ್ಲ, ಹೀಗೆ ಈ ಮಕ್ಕಳು ನಾನಾ ತಿಂಡಿಯು ಪದಾರ್ಥಗಳಾಗುವುವು. ಇಲಿಯು ಈ ತಿಂಡಿಗಳನ್ನು ತಿನ್ನುವಂತೆ ನಟಿಸುವುದು. ಹೊರಗಡೆಯಲ್ಲಿ ಉಳಿದಿರುವ ಒಂದು ಮಗುವು ಬೆಕ್ಕು. ಈ ಬೆಕ್ಕು ಒಳಗಿರುವ ಇಲಿಯನ್ನು ಹಿಡಿಯಲು ಹೊಂಚು ಹಾಕುತಿರುವುದು. ಈ ಕಾಲದಲ್ಲಿ ವೃತ್ತಾಕಾರವಾಗಿ ನಿಂತಿರುವ ಮಕ್ಕಳೆಲ್ಲರೂ ಈ ಆಟಕ್ಕೆ ತಕ್ಕ ಹಾಡನ್ನು ಹೇಳುತಿರುವರು. ಆ ಮೇಲೆ ಇಲಿಯು ಒಂದಾವರ್ತಿ ಹೊರಗೆಬರುವುದು. ಬೆಕ್ಕು ಇದನ್ನು ಅಟ್ಟಿಕೊಂಡು ಹೋಗಿ ಹಿಡಿಯುವುದು. ಅನಂತರ ಇನ್ನೆರಡು ಮಕ್ಕಳು ಬೆಕ್ಕು ಇಲಿಗಳಾಗುವರು. ಹೀಗೆ ಆಟವು ನಡೆಯುವುದು. ಪ್ರತಿದಿನವೂ ಇಂತಹ ಅನೇಕ ಆಟಗಳನ್ನು ಆಡಿಸುವರು.

ಇವರ ಪಾಠಕ್ರಮದಲ್ಲಿ ಕಥೆ ಹೇಳುವುದೂ ಒಂದು ಭಾಗವಾಗಿರುವುದು. ಇಂತಹ ಕಥೆಗಳಲ್ಲಿ ಕಲ್ಪನೆಯು ಬೆಳವಳಿಕೆಗೆ ಅವಕಾಶ ವಿರುವಂತೆ ವರ್ಣನೆಯೇ ಹೆಚ್ಚಾಗಿರುವುದು. ಮಕ್ಕಳಿಗೆ ಬೇಸರಿಕೆಯಾಗುವಂತೆ ಧರ್ಮಬೋಧನೆಯು ವಿಶೇಷವಾಗಿಲ್ಲ. ಮೇಲಾಗಿ ಓದುವುದು, ಬರವಣಿಗೆ, ಅಂಕಗಣಿತ ಇವುಗಳನ್ನು ಕಲಿಸುವುದಕ್ಕೂ ವೇಳಾ ಪತ್ರಿಕೆಯಲ್ಲಿ ಅವಕಾಶ ವಿರುವುದು.

ಯಾವ ತರಗತಿಗೂ ಪಾಠಕಾಲವು ಅರ್ಧಘಂಟೆಗಿಂತಲೂ ಹೆಚ್ಚಾಗಿಲ್ಲ. ಮಧ್ಯೆ ಮಧ್ಯೇ ಹತ್ತು ಹದಿನೈದು ನಿಮಿಷಗಳ ವಿರಾಮವು ಸಿಕ್ಕುವುದು. ಈ ಕಾಲದಲ್ಲಿ ಮಕ್ಕಳು ಉಪಾಧ್ಯಾಯರ ಜತೆಯಲ್ಲಿ ಕ್ರಮವಾದರೀತಿಯಲ್ಲಿ ಹೊರಗೆ ಹೋಗಿ ಬರುವರು. ದಿವಸದ ಕೊನೆಯಲ್ಲಿ ಅಂದರೆ 4—50 ನಿಮಿಷಕ್ಕೆ ಮಕ್ಕಳೆಲ್ಲರೂ ಹಾಲಿನಲ್ಲಿ ಸೇರುವರು. ಮಿಸ್. ಲ್ಯಾಟರವರು ಸ್ವಲ್ಪ ಹೊತ್ತು ಪಿಯಾನ ನುಡಿಸುವರು. ಆಮೇಲೆ ಮಕ್ಕಳೆಲ್ಲರೂ ಉಪಾಧ್ಯಾಯರನ್ನು ವಂದಿಸಿ ಪಿಯಾನೋ ಗಾನಕ್ಕೆ ಸರಿಯಾಗಿ ನಡೆಯುತ ಮನೆಗೆ ಹೊರಡುವರು. ಈ ಅಂಶಗಳಿಂದ ಪಾಠಶಾಲೆಯು ಕೆಲಸವು ಯಾವರೀತಿಯಲ್ಲಿ ನಡೆಯಬೇಕೆಂದು ಮಿಸ್. ಲ್ಯಾಟರವರು ಉದ್ದೇಶಿಸಿರುವರೆಂಬುದು ಸ್ಪಷ್ಟಪಡುವುದು. ಅವರ ವೇಳಾ ಪತ್ರಿಕೆಯಂತೆ ಈಗ ಪಾಠಶಾಲೆಯಲ್ಲಿ ಕ್ರಮವಾಗಿ ಕೆಲಸ ನಡೆಯುತಿರುವುದು. ಅಕ್ಟೋಬರ್

೨ನೆಯ ತಾರೀಕಿನಿಂದ ಕಂಡರ್ ಗಾರ್ಟ್ನ್ ವಿಷಯಕವಾದ ಉಪನ್ಯಾಸಗಳು ಪ್ರಾರಂಭವಾಗುವವು. ಇವುಗಳನ್ನು ಕೇಳಲು ದೇಶದ ಅನೇಕ ಕಡೆಗಳಿಂದ ಉಪಾಧ್ಯಾಯರು ಸೇರುವರು. ಮಿಸ್. ಲ್ಯಾಟಿರವರು ಬೆಂಗಳೂರಲ್ಲಿ 13 ಉಪನ್ಯಾಸಗಳನ್ನೂ, ಮೈಸೂರಲ್ಲಿ 17 ಉಪನ್ಯಾಸಗಳನ್ನೂ ಮಾಡುವರು. ಇವುಗಳಿಂದ ದೇಶದ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರಯೋಜನ ವಾಗಬಹುದೆಂದು ನಿಸ್ಸಂಶಯವಾಗಿ ಹೇಳಬಹುದು.

ಮ್ಯಾನೂಲ್ ಟ್ರೇನಿಂಗ್ ತರಗತಿ.

ಈ ತರಗತಿಗೆ ಮೈಸೂರು ದೇಶದ ಅನೇಕ ಪಾಠಶಾಲೆಗಳಿಂದ ಉಪಾಧ್ಯಾಯರು ಬಂದು ಸೇರಿರುವರು. ಇವರಲ್ಲನೇಕರು ಬಾಲಕರ ಶಿಕ್ಷಣದಲ್ಲಿ ವಿಶೇಷ ಅನುಭವವನ್ನು ಹೊಂದಿರುವರು. ಡಾಕ್ಟರ್ ಲಾರ್ನ್ ಸಾಹೇಬರು ತಮ್ಮ ಕೆಲಸವನ್ನು ಕ್ರಮವಾಗಿ ಪ್ರಾರಂಭಿಸುವುದಕ್ಕೆ ಮೊದಲು ಅಲ್ಲಿ ಸೇರಿದ್ದ ಉಪಾಧ್ಯಾಯರನ್ನು ಕುರಿತು ಈ ರೀತಿಯಲ್ಲಿ ಮಾತನಾಡಿದರು.

" ನಿಮ್ಮ ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರು ಇಲ್ಲಿನ ಪಾಠಶಾಲೆಗಳಲ್ಲಿ ಮ್ಯಾನೂಲ್ ಟ್ರೇನಿಂಗ್ ಪಾಠವನ್ನಿಡಲು ಅನುಕೂಲಿಸುವಂತೆ ಉಪಾಧ್ಯಾಯರನ್ನು ಶಿಕ್ಷಿಸಲು ನನ್ನನ್ನು ಕರೆಸಿರುವರು. ಈ ಕೆಲಸವನ್ನು ತಿಳಿಯುವುದಕ್ಕಾಗಿ ಇಲ್ಲಿಗೆ ಬಂದಿರುವ ನಿಮಗೆ ನಾನು ಅತ್ಯಂತ ಸಂತೋಷದಿಂದ ಸುಖಾಗಮನವನ್ನು ಬಯಸುವೆನು. ಇಲ್ಲಿ ಸೇರಿರುವ ನೀವುಗಳೆಲ್ಲರೂ ಮಕ್ಕಳನ್ನು ಶಿಕ್ಷಿಸುವುದರಲ್ಲಿ ಅನುಭವವುಳ್ಳವರಾದುದರಿಂದ ನನ್ನ ಕೆಲಸವು ಬಹಳ ಸುಲಭವಾಗಿರುವುದು. ಮ್ಯಾನ್ಯೂಲ್ ಟ್ರೇನಿಂಗ್ ಪಾಠದಿಂದ ಬಾಲಕರ ವಿದ್ಯಾಭ್ಯಾಸಕ್ಕೆ ಏನು ಪ್ರಯೋಜನ ? ಅದು ಮಕ್ಕಳ ಹಸ್ತಕೌಶಲವನ್ನೂ ನೇತ್ರಪಾಟವನ್ನೂ ಹೇಗೆ ಹೆಚ್ಚಿಸುವುದು, ಬುದ್ಧಿಶಕ್ತಿಯನ್ನು ಹೇಗೆ ವೃದ್ಧಿಗೊಳಿಸುವುದು ? ಈ ವಿಷಯಗಳನ್ನು ಕುರಿತು ನಾನು ಪ್ರತಿನಿತ್ಯವೂ ನಿಮ್ಮ ಸಂಗಡ ಮಾತನಾಡುವೆನು. ಮನಶ್ಶಾಸ್ತ್ರದ ಮುಖ್ಯ ತತ್ವಗಳನ್ನು ತೆಗೆದುಕೊಂಡು ಅವುಗಳಿಗೂ ಮ್ಯಾನ್ಯೂಲ್ ಟ್ರೇನಿಂಗ್ ಪಾಠಗಳಿಗೂ ಇರುವ ಸಂಬಂಧವನ್ನು ತೋರ್ಪಡಿಸುವೆನು. ನೀವು ಇಲ್ಲಿ ಸರಿಯಾದ ಅನುಭವವನ್ನು ಹೊಂದಿದ ಮೇಲೆ ನಿಮ್ಮ ನಿಮ್ಮ ಪಾಠಶಾಲೆಗಳಲ್ಲಿ ಈ ಪಾಠವನ್ನು ನಡೆಸಲು ಅನುಕೂಲವಾಗುವುದು. ಇಂತಹ ಪಾಠಗಳನ್ನು ಜೋ

ಧಿಸುವುದಕ್ಕೆ ಮಕ್ಕಳನ್ನು ಚೆನ್ನಾಗಿ ತಿಳಿದಿರುವ ಸ್ವದೇಶೀಯ ಉಪಾಧ್ಯಾಯರೇ ಉತ್ತಮವೆಂದು ನನಗೆ ತೋರುವುದು.

1. ಮರಗೆಲಸ. 4, 5, 6 ನೇ ಫಾರಂಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಬೋಧಿಸಲು ಅನುಕೂಲವಾದ ಮರಗೆಲಸ, ಇದಕ್ಕೆ ಸಹಾಯವಾದ ಚಿತ್ರ ಬರೆಯುವುದು, ಇವು ಇಲ್ಲಿ ನಮ್ಮಕೆಲಸದ ಒಂದು ಭಾಗವಾಗಿರುವುವು. ಈಗ ನಿಮ್ಮಲ್ಲಿರುವ ವಿದ್ಯಾಭ್ಯಾಸದಲ್ಲಿ ಮಕ್ಕಳ ಹಸ್ತಕೌಶಲವನ್ನು ಹೆಚ್ಚಿಸುವುದಕ್ಕೆ ಮಾರ್ಗವಿಲ್ಲವಾದುದರಿಂದ ಅವರು ಪಾಠಶಾಲೆಯನ್ನು ಬಿಟ್ಟುಹೋದಮೇಲೆ ಅವರಕೈಯನ್ನು ಸರಿಯಾಗಿ ಉಪಯೋಗಿಸಲಾರರು. ಮ್ಯಾನುಅಲ್ ಟ್ರೇನಿಂಗ್ ಪಾಠವನ್ನು 4 ನೇ ಫಾರಂಗಿಂತಲೂ ಸಣ್ಣತರಗತಿಗಳಲ್ಲಿಡಬಹುದು, ಆದರೆ ಈ ತರಗತಿಗಳಲ್ಲಾದರೂ ಇಡುವುದು ಅತ್ಯಾವಶ್ಯಕವು. ನೀವು ಇಲ್ಲಿ ಮಾಡುವ ಕೆಲಸಗಳಲ್ಲಿ ಸುಲಭವಾದುವೆ ಮೊದಲು, ಕಷ್ಟವಾದುವು ಅಮೇಲೆ, ಹೀಗೆ ಒಂದು ಕ್ರಮವಿರುವುದು. ವಿಶೇಷ ಕೌಶಲವನ್ನು ತೋರ್ಪಡಿಸುವವರು ಬೇಗ ಮುಂದಕ್ಕೆ ಹೋಗಲು ಅವಕಾಶವಿರುವುದು. ಗೊಡೆಗಳನ್ನು ಹೆಣೆಯುವುದು, ಕಾಗದದ ಕೆಲಸ ಇವುಗಳಿಗಿಂತಲೂ ಮಕ್ಕಳ ಹಸ್ತಕೌಶಲವನ್ನು ಹೆಚ್ಚಿಸಲು ಮರಗೆಲಸವೇ ಉತ್ತಮವೆಂದು ನನಗೆ ತೋರುವುದು.

2. ಮ್ಯಾನ್ಯುಅಲ್ ಟ್ರೇನಿಂಗಿನ ಮುಖ್ಯ ತತ್ವಗಳನ್ನು ತಿಳಿಸುವುದು.

ವಿದ್ಯಾಭ್ಯಾಸದ ಮುಖ್ಯತತ್ವಗಳೇ ಮ್ಯಾನ್ಯುಅಲ್ ಟ್ರೇನಿಂಗಿನ ಮುಖ್ಯ ತತ್ವಗಳೂ ಆಗಿರುವುದರಿಂದ ಮಕ್ಕಳ ವಿದ್ಯಾಭ್ಯಾಸವನ್ನು ಕ್ರಮವಾದ ರೀತಿಗೆ ತರಲು ಬಹಳ ಶ್ರಮಪಟ್ಟಿರುವ ಕೊಮೀನಿಯಸ್, ರೂಸೆಸ್ಸಿ, ಪೆಸ್ಟಲಾಟ್ಸಿ, ಫ್ರೋಬೆಲ್ ಮುಂತಾದ ದೊಡ್ಡ ಉಪಾಧ್ಯಾಯರು ಅನುಮೋದಿಸಿದ ಅಂಶಗಳಿಗೂ ಮ್ಯಾನ್ಯುಅಲ್ ಟ್ರೇನಿಂಗಿಗೂ ಇರುವ ಸಂಬಂಧವನ್ನು ಆಗಾಗ್ಗೆ ತಿಳಿಸುತ್ತಿರುವೆನು.

3. ಮ್ಯಾನ್ಯುಅಲ್ ಟ್ರೇನಿಂಗಿನ ಚರಿತ್ರೆಯನ್ನು ವಿವರಿಸುವುಮು.

ಈಪಾಠದ ತತ್ವಗಳು ಎಲ್ಲಾ ಕಡೆಯಲ್ಲೂ ಒಂದೇ ಆಗಿದ್ದರೂ ಈ ತತ್ವಗಳನ್ನು ಆಚರಣೆಗೆ ತರುವ ಮಾರ್ಗಗಳು ದೇಶ ಪದ್ಧತಿಗೂ, ಜನಗಳ ಅನುಕೂಲಕ್ಕೂ ತಕ್ಕಂತೆ ಒಂದೊಂದು ಕಡೆಯಲ್ಲಿ ಒಂದೊಂದು ವಿಧವಾಗಿರುವುವು. ಈತತ್ತಗಳನ್ನು ತಿಳಿದುಕೊಂಡಮೇಲೆ, ನಿಮ್ಮದೇಶಕ್ಕನುಗುಣವಾಗಿ ಅವುಗಳನ್ನು ಆಚರಣೆಗೆ ತರುವ ಮಾರ್ಗವನ್ನು ನೀವೇ ಗೊತ್ತುಮಾಡಬೇಕೆಂಬುದು ನನ್ನ ಮತವು. ಈ

ಉಪನ್ಯಾಸಗಳಲ್ಲಿ ನಾನು ಅಮೇರಿಕ, ಸ್ವೀಡ್ಸ್, ಜರ್ಮನಿ, ಡೆನ್‌ಮಾರ್ಕ್ ಈ ರಾಜ್ಯಗಳಲ್ಲಿ ಮ್ಯಾನ್ಯುಅಲ್ ಟ್ರೇನಿಂಗ್ ಯಾವರೀತಿಯಲ್ಲಿ ಪ್ರಚಾರದಲ್ಲಿರುವುದು ಎಂಬುದನ್ನು ತಿಳಿಸುವೆನು.

4. ಶಾರೀರಕ ಶಾಸ್ತ್ರಕ್ಕೂ ಮ್ಯಾನ್ಯುಅಲ್ ಟ್ರೇನಿಂಗಿಗೂ ಇರುವ ಸಂಬಂಧ.

ಈ ಭಾಗದಲ್ಲಿ ಮಕ್ಕಳ ಶರೀರದ ಶಕ್ತಿಗಳನ್ನು ಹೆಚ್ಚಿಸುವುದಕ್ಕೂ ಅವರ್ತ ಆರೋಗ್ಯವನ್ನು ಕಾಪಾಡುವುದಕ್ಕೂ ಮ್ಯಾನ್ಯುಅಲ್ ಟ್ರೇನಿಂಗಿನಿಂದ ಎಷ್ಟರಮಟ್ಟಿಗೆ ಸಹಾಯವಾಗುವುದು ಎಂಬುದನ್ನು ನಾನು ತಿಳಿಸುವೆನು.

5. ಮ್ಯಾನ್ಯುಅಲ್ ಟ್ರೇನಿಂಗಿಗೆ ಉಪಯೋಗವಾದ ಕಸಬುಗಳು.

ಬೆತ್ತದಿಂದ ಹೆಣೆಯುವುದು, ಗೂಡೆಗಳನ್ನು ಮಾಡುವುದು, ಕಾಗದದ ಕೆಲಸ ಇವೇ ಮುಂತಾದ ಕಸಬುಗಳಲ್ಲಿಯೂ ಯಾವು ಯಾವುವು ಹಸ್ತಕೌಶಲವನ್ನು ಹೆಚ್ಚಿಸುವುದರಲ್ಲಿ ಎಷ್ಟರಮಟ್ಟಿಗೆ ಸಹಾಯಮಾಡುವುವು ಎಂಬುದನ್ನು ನಾನು ನಿಮಗೆ ತಿಳಿಸುವೆನು.

6. ಆಯುಧಗಳು ಮತ್ತು ಅವುಗಳ ಉಪಯೋಗ.

ಮ್ಯಾನ್ಯುಅಲ್ ಟ್ರೇನಿಂಗಿನಲ್ಲಿ ಉಪಯೊಗಿಸುವ ಪ್ರತಿಯೊಂದು ಆಯುಧವನ್ನೂ ತೆಗೆದುಕೊಂಡು ಅದನ್ನು ಉಪಯೋಗಿಸುವ ರೀತಿಯನ್ನೂ, ಅದರಿಂದ ಹಸ್ತಕೌಶಲವನ್ನು ಹೆಚ್ಚಿಸುವುದಕ್ಕೆ ಆಗುವ ಸಹಾಯವನ್ನೂ ತಿಳಿಸುವೆನು.

7. ಅನುಭವ.

ಕೊನೆಗೆ ಮಕ್ಕಳ ತರಗತಿಯೊಂದನ್ನೇರ್ಪಡಿಸಿ ನೀವು ತಿಳಿದಿರುವ ಅಂಶಗಳನ್ನು ಆಚರಣೆಗೆ ತರಲು ಅವಕಾಶವನ್ನು ಕಲ್ಪಿಸುವೆನು.

ಇಲ್ಲಿನ ಕೆಲಸದಿಂದ ನಿಮಗೂ, ನನಗೂ ಒಳ್ಳೆಯ ಹೆಸರುಬರುವಂತೆ ನೀವು ಉತ್ಸಾಹದಿಂದ ಕೆಲಸಮಾಡಬೇಕೆಂದು ನಾನು ಕೋರುವೆನು"

ಡಾಕ್ಟರ್ ಲಾರ್ಸ್ ಸಾಹೇಬರು ಈ ರೀತಿಯಲ್ಲಿ ಉಪನ್ಯಾಸ ಮಾಡಿ ತಮ್ಮ ಕೆಲಸವನ್ನು ಪ್ರಾರಂಭಿಸಿದರು. ಈ ಕೆಲಸದಲ್ಲಿ ನಡೆಯುವ ವಿಶೇಷಾಂಶಗಳನ್ನು ಮುಂದಿನ ಸಂಚಿಕೆಗಳಲ್ಲಿ ಆಗಾಗ್ಗೆ ತಿಳಿಸುವೆವು.

(158 ನೆಯ ಪುಟದ ಶೇಷ.)

ಇದುವರಿವಿಗೂ, ಬಿಙ್ಕಂ ಬಿತ್ತೈಸೆ ವಞ್ಚೈಯ, ಇತ್ಯಾದಿ ಪದ್ಯದಲ್ಲಿ ಇರುವ ಲ್ಕಂ ಖನದಲ್ಲಿ ಕವರ್ಗ ಪಂಚಮಾಕ್ಷರವು ಅಚ್ಚಕನ್ನಡದಲ್ಲಿದೆ ಯೆಂಬ ಸಾಧನೆಗೆ ಅವ ಕಾಶವಿಲ್ಲವೆಂದು ತಕ್ಕಮಟ್ಟಿಗೆ ಉಪಪಾದಿಸಿದುದಾಯ್ತು. ಇನ್ನು ಮೇಲೆ ಪದ್ಯದ ಪ್ರತಿ ಯೊಂದು ಪಾದದಲ್ಲಿಯೂ ಮೊದಲನೇ ಸ್ವರಕ್ಕೂ ಎರಡನೇ ಸ್ವರಕ್ಕೂ ನಡುವೆ ಏಕ ವಿಧವಾಗಿ ಇರಬೇಕಾದ ಪಾ ್ರಸಾಕ್ಷರವನ್ನು ಹಿಡಿದು ವಿಚಾರಮಾಡೋಣ:—

ಈ ಪದ್ಯದಲ್ಲಿ ಅಂದರೆ, ಬಿಙ್ಕಂ ಬಿತ್ತೈಸೆವಞ್ಚೈಯ—ಇತ್ಯಾದಿ ಪದ್ಯದಲ್ಲಿ ಎರಡನೆಯ ಪಾದದಲ್ಲಿ ಇರತಕ್ಕ ಸಙ್ಯುಳಮಂ ಎಂಬಲ್ಲಿ

॥ ವಾಪದಾನ್ತಸ್ಯ ॥ ೮—೪—೫೮॥ ಎಂಬ ಪಾಣಿನೀಯ ಸೂತ್ರವನ್ನು ಅನುಸರಿಸಿ ವಿಕಲ್ಪವಾಗಿ ಕವರ್ಗ ಪಂಚಮಾಕ್ಷರವು ಬಂದಿರುವುದು. ಮತ್ತು ಅದು ಪ್ರಾಸಸ್ಥಾನದಲ್ಲಿರುವುದು. ಆದುದರಿಂದ ಮಿಕ್ಕ ಮೂರುಪಾದದಲ್ಲಿಯೂ ಪ್ರಥಮ ದ್ವಿತೀಯ ಸ್ವರಗಳ ಮಧ್ಯದಲ್ಲಿ ಸಮಾನಾ ಕಾರಕವಾದ ವರ್ಣವಿರಬೇಕಾದ ಕಾರಣ ಬಿಙ್ಕಂ, ಇತ್ಯಾದಿಗಳಲ್ಲಿಯೂ ಸಙ್ಯುಳಮಂ ಎಂಬಲ್ಲಿರುವಂತೆ ಕವರ್ಗಪಂಚಮಾಕ್ಷರವಿರಬೇಕು ಆದುದರಿಂದ ಅಚ್ಚಗನ್ನಡದಲ್ಲಿ ಕವರ್ಗ ಪಂಚಮಾಕ್ಷರ ವಿದೆಯೆಂದು ಹೇಳಬಹುದು. ಎಂದಲ್ಲಿ ಇಲ್ಲಿಯೂ ವಿಚಾರ ಮಾಡಬೇಕಾದ ಅಂಶವು ಇದ್ದೇ ಇರುವುದು—

ಈ ಬಿಂಕಂ ಬಿತ್ತೈಸೆವಂಚೆಯ—ಇತ್ಯಾದಿ ಪದ್ಯದಲ್ಲಿ, ಸಙ್ಯುಳಮಂ ಎಂಬಲ್ಲಿ ಙಕಾರ ಮತ್ತು ಕಕಾರಗಳೆರಡೂ ಸಂಯುಕ್ತವಾಗಿರುವುದರಿಂದ ಇಂಥಾ ಸಂಯು ಕ್ತಾಕ್ಷರವೇ ಮಿಕ್ಕ ಮೂರುಪಾದದಲ್ಲಿಯೂ ಇರಬೇಕೆಂದು ಹೇಳಬೇಕಾದರೆ ಸಂ ಯುಕ್ತಾಕ್ಷರ ಪ್ರಾಸದಲ್ಲಿ ಸಮಾನಾಕಾರಕವಾದ ವರ್ಣವಿರಬೇಕೆಂಬ ನಿಯಮ ವಿದ್ದಲ್ಲಿ ಆಗ್ಯೆ ಪ್ರತಿಯೊಂದು ಪಾದದಲ್ಲಿಯೂ ಸಂಯುಕ್ತವಾದ ಙಕಾರ ಮತ್ತು ಕಕಾರಗಳಿರಬೇಕಾದುದರಿಂದ ಅಚ್ಚಗನ್ನಡದಲ್ಲಿ ಙಕಾರ ವಿದೆಯೆಂದು ಸಾಧಿಸಬ ಹುದು. ಹಾಗಿಲ್ಲದೆ ಇದ್ದಲ್ಲಿ ಅಚ್ಚಗನ್ನಡದಲ್ಲಿ ಙಕಾರವನ್ನು ಅಂಗೀಕರಿಸಬೇಕೆಂದು ಹೇಳುವುದು ಕಷ್ಟವಾಗುವುದು. ಆದುದರಿಂದ ಪ್ರಕೃತದಲ್ಲಿ ಸಂಯುಕ್ತಾಕ್ಷರವು ಪ್ರಾ ಸಸ್ಥಾನದಲ್ಲಿ ಬಂದಾಗ ಸ್ವಲ್ಪಮಟ್ಟಿಗೆ ವ್ಯತ್ಯಾಸವಾಗಿರತಕ್ಕ ಕೆಲವು ಪ್ರಾಚೀನ ಪದ್ಯಗಳನ್ನು ಕೊಟ್ಟರೆ ಇದನ್ನು ನೋಡಿದಲ್ಲಿ ಈ ಸಾಧನೆಗೆ ಅವಕಾಶ ವಿರುವದು. ಅಥವಾ ಇಲ್ಲವೆಂಬಂಶವು ವಾಚಕರಿಗೆ ಗೊತ್ತಾಗುವುದು.

(1) ಕನ್ಯಕೆವಜ್ರಬಾಹುಗನುರೂಪೆಗಡಂಕುಡುವಂಗಡಂಜಗ ।
ನ್ಯಾನ್ಯನೆನಿಪ್ಪುದಾತ್ತನಿಭವಾಹನವಲ್ಲಭನಿಂತದನ್ಯಸಾ ॥
ಮಾನ್ಯಮೆ ನಮ್ಮಕೊಳ್ಕೊಡೆಗೆ ತಕ್ಕೆಡೆಯುಂ ಸಮಕಟ್ಟಕೊಟ್ಟನೆಂ ।
ದುನ್ನತಚಿತ್ತನೊಪ್ಪೆನುಡಿದಂಪ್ರಿಯಮಂ ವಿಜಯಾಂಗನಾಪ್ರಿಯಂ ॥
(ಪಂಪರಾಮಾಯಣಂ)

ಇಲ್ಲಿ—ನ್ಯ—ಎಂಬ ಪ್ರಾಸಾಕ್ಷರಕ್ಕೆ ಬದಲಾಗಿ ನಾಲ್ಕನೆಯ ಪಾದದಲ್ಲಿ —ನ್ನ—ಎಂಬ ಸಂಯುಕ್ತಾಕ್ಷರವಿರುವುದು.

(5) ಡೊಕ್ಕನೆ ಸುರಗಿಯೊಳುರಮಂ ।
ಬಿಕ್ಕನೆ ಬಿರಿಯಿಱುದು ಬರಿಯನಗಲೊತ್ತಿ ಮನಂ ॥
ಕೊಕ್ಕರಿಸದೆ ಬಗಸಿರೆಯಿನ ।
ಳುರ್ಕೆಯೆ ಮೊಗೆಮೊಗೆದು ನೆತ್ತರಂಪವನಸುತಂ (ವಿಕ್ರಮಾರ್ಜುನವಿ
ಜಯಂ)

ಇಲ್ಲಿ ಕ್ಕ ಎಂಬ ಪ್ರಾಸಸ್ಥಾನದಲ್ಲಿ ರ್ಕ ಎಂದು ನಾಲ್ಕನೆ ಪಾದದಲ್ಲಿರುವುದು.

(3) ತರ್ಕೈಯ್ಸಿ ಸುರಿವ ತೆಱದಿಂ ।
ದುರ್ಕಂಬುಗಳೆಱಿಗಿರೋಮರೋಮಕ್ಕೆ ನೆಳಲ್ ॥
ನೆಕ್ಕು ಚಳಿಲ್ ಚಕ್ಕು ದೊಗಲ್ ।
ದೂಕ್ಕೆನೆ ನಾಂಟಿದುವರಾತಿಭಟರವಯವಮಂ ॥ (ಜಗನ್ನಾಥವಿಜಯಂ)

ಇಲ್ಲಿ—ರ್ಕ—ಎಂಬ ಪಾಸಿನಲ್ಲಿ. ಕ್ಕ. ಎಂದು ಇದೆ—

(4) ಪತ್ತಿಪ್ರವಾದಫಲಕಮ । ನತ್ಯುಗ್ರಗ್ರಾಹನಿವಹಸಂಕ್ಷೋಭಿತದೋಳ್ ॥
ಮತ್ತೀರತ್ನಾಕರದೋಳ್ । ಪುತ್ರಿಕೆಯೆನೆಬಿಟ್ಟಿಳಿಂತು ಬಾಟ್ಟುದೆಚೋದ್ಯಂ-
(ಕವಿರಾಜಮಾರ್ಗಂ)

ಇಲ್ಲಿ ಪ್ರಾಸಿನಲ್ಲಿ ತಕಾರಕ್ಕೆ ಭಿನ್ನ ಭಿನ್ನವಾದ ಅಕ್ಷರಗಳು ಸಂಯುಕ್ತವಾಗಿರುವದು.

(5) ಉದ್ಧತರಿಪು ಕೃತಭಂಗಮ ।
ನುದ್ಧವನಿಂಗಿತದಿನಱಿದುಪಱಿಯದತೆಱದಿಂ ॥
ದುದ್ಧೂತಭ್ರುಕುಟಿಯಿನಂ ।
ದುದ್ಧುರತೇಜಂ ಮುರಾರಿಬಿಸಗೊಳಲಾಗಳ್—(ಜಗನ್ನಾಥವಿಜಯಂ)

ಇಲ್ಲಿ—ದ್ಧ—ಎಂಬ ಪ್ರಾಸಿನಲ್ಲಿ—ದ್ದ—ಎಂದು ಮೂರನೆ ಪಾದದಲ್ಲಿರುವದು.

ಇದಲ್ಲದೆ ಸಾನುನಾಸಿಕಾಕ್ಷರಕ್ಕೂ ಸಬಿಂದುಕಾಕ್ಷರಕ್ಕೂ ಪ್ರಾಸಿಲ್ಲವೆಂದು ಹೇಳಲಾಗುವುದಿಲ್ಲ—ಇದರಡಿಯಲ್ಲಿರತಕ್ಕ ಪದ್ಯಗಳನ್ನು ನೋಡಿದರೆ ಈ ಅಂಶವೂ ಸ್ಪಷ್ಟವಾಗುವುದು—

(1) ಪಾಣ್ಬನೆಱೆದುಯ್ಯೆನಿನ್ನಕು ।
ಟುಂಬಿನಿಯುಂ ಕಾದೆಯಿಲ್ಲ ರಾಮಾಕೃತಿಯಿಂ ॥
ನೀಂಬಱಿಕ ವಾಯುಪುತ್ರಕ ।
ನಿಂಬಱಿಯಲ್ಕೈದೆ ಪಗೆಯನಿಕ್ಕುವದರಿದೇ—(ಜಗನ್ನಾಥವಿಜಯಂ)

ಇಲ್ಲಿ—ಣ್ಬ—ಎಂಬ ಪ್ರಾಸಿನಲ್ಲಿ ಸಬಿಂದುಕವಾದಕ್ಷರವಿರುವುದು.

(2) ಕಣ್ಬರಿಗೆಟ್ಟು ಕಾಮನಿಸೆ ನಾಂಟುವವೊಗಣಿಯಿಂ ಒಟಿಲ್ದುನೀಂ ।
ಬಂಬಲಬಾಡಿದಪ್ಪೆದೊರೆಕೊಳ್ಳದವಸ್ತುಗಿದೇಕವಸ್ಥೆಯಿಂ ॥
ಮಾಣ್ಬಿಸಜಾಕ್ಷಿ ಮುನ್ನ ಕನಸಿಂದಮೆ ಕಂಡನನಿಂದುಚಿತ್ರದೋಳ್ ।
ಕಾಣುದೆ ಸಾಲ್ವುದಾರಱಿವರೆತ್ತಣ ಚೆನ್ನಿಗನಾವನೆಂಬುದಂ- (ಜಗನ್ನಾಥ ವಿಜಯಂ)

ಇಲ್ಲಿಯೂ—ಣ್ಬ—ಎಂಬ ಪ್ರಾಸಿನಲ್ಲಿ ಸಬಿಂದುಕವಾದ ಬಕಾರವು ದ್ವಿತೀಯ ಪಾದದಲ್ಲಿದೆ

ಹೀಗೆ ಸಂಯುಕ್ತಾಕ್ಷರದ ಪ್ರಾಸನ್ನು ನೋಡಿದರೆ ಭಿನ್ನ ಭಿನ್ನ ಸಂಯುಕ್ತಾಕ್ಷರಗಳಿಗೆ ಪ್ರಾಸನ್ನು ಅನೇಕರು ಹೇಳಿರುವುದಲ್ಲದೆ ಸಾನುನಾಸಿಕಾಕ್ಷರಕ್ಕೂ ಸಬಿಂದುಕಾಕ್ಷರಕ್ಕೂ ಪ್ರಾಸನ್ನು ಹೇಳಿರುವುದರಿಂದ ಹೀಗೆಯೆ ಬಿಜ್ಜಂ ಬೆತ್ತೆಸೆವ ಇತ್ಯಾದಿಯಲ್ಲಿಯೂ ಸಾನುನಾಸಿಕಕ್ಕೂ ಸಬಿಂದುಕಕ್ಕೂ ಪ್ರಾಸವಿದ್ದರೂ ಬಾಧಕವಿಲ್ಲವೆಂದು ಹೇಳಬಹುದಾದ ಕಾರಣ ಈ ಪ್ರಾಸದಿಂದ ಕವರ್ಗ ಪಂಚಮಾಕ್ಷರವಾಗಲೀ ಹೀಗೆಯೆ ಚವರ್ಗಪಂಚಮಾಕ್ಷರವಾಗಲೀ ಅಚ್ಚಗನ್ನಡದಲ್ಲಿದ್ದೇ ಇರಬೇಕೆಂದು ಹೇಳಲಾಗುವದಿಲ್ಲ—

ಒಂದುವೇಳೆ ಕೆಲವರು ಮೇಲೆಹೇಳಿದ-ಪಾಣ್ಬನೆಱೆದುಯ್ಯೆ-ಇತ್ಯಾದಿ ಪದ್ಯಗಳಲ್ಲಿ ಸಂಯುಕ್ತಾಕ್ಷರಕ್ಕೆ ಪ್ರಾಸೇವಿನಹ ಸಬಿಂದುಕಕ್ಕೂ ಸಾನುನಾಸಿಕಕ್ಕೂ ಪ್ರಾಸೇ ಇಲ್ಲವಾದ ಕಾರಣ ಬಿಜ್ಜಂ ಬೆತ್ತೆಸೆವಱ್ಗೆ ಯ—ಇತ್ಯಾದಿ ಪದ್ಯದಲ್ಲಿಯೂ ಸಾನುನಾಸಿಕವನ್ನೇ ಸ್ವೀಕರಿಸಬೇಕೇ ಹೊರತು ಸಬಿಂದುಕವನ್ನು ಸ್ವೀಕರಿಸಕೂಡದೆಂದಲ್ಲಿ ವಿಚಾರ ಮಾಡೋಣ—

(1) ಕನ್ಯಕೆವಜ್ರಬಾಹುಗನುರೂಪೆಗಡಂಕುಡುವಂಗಡಂಜಗ ।
ನ್ಯಾನ್ಯನೆನಿಪ್ಪುದಾತ್ತನಿಭವಾಹನವಲ್ಲಭನಿಂತದನ್ಯಸಾ ॥
ಮಾನ್ಯಮೆ ನಮ್ಮಕೊಳ್ಕೊಡೆಗೆ ತಕ್ಕೆಡೆಯುಂ ಸಮಕಟ್ಟುಕೊಟ್ಟನೆಂ ।
ದುನ್ನತಚಿತ್ತನೊಪ್ಪೆನುಡಿದಂಪ್ರಿಯಮಂ ವಿಜಯಾಂಗನಾಪ್ರಿಯಂ ॥
(ಪಂಪರಾಮಾಯಣಂ)

ಇಲ್ಲಿ—ನ್ಯ—ಎಂಬ ಪ್ರಾಸಾಕ್ಷರಕ್ಕೆ ಬದಲಾಗಿ ನಾಲ್ಕನೆಯ ಪಾದದಲ್ಲಿ —ನ್ನ—ಎಂಬ ಸಂಯುಕ್ತಾಕ್ಷರವಿರುವುದು.

(5) ಡೊಕ್ಕನೆ ಸುರಗಿಯೊಳುರಮಂ ।
ಬಿಕ್ಕನೆ ಬಿರಿಯಿಱಿದು ಬರಿಯನಗಲೊತ್ತಿ ಮನಂ ॥
ಕೊಕ್ಕರಿಸದೆ ಬಗಸಿರೆಯಿನ ।
ಳುರ್ಕೆಯೆ ಮೊಗೆಮೊಗೆದು ನೆತ್ತರಂಪವನಸುತಂ (ವಿಕ್ರಮಾರ್ಜುನವಿ
ಜಯಂ)

ಇಲ್ಲಿ ಕ್ಕ ಎಂಬ ಪ್ರಾಸಸ್ಥಾನದಲ್ಲಿ ರ್ಕ ಎಂದು ನಾಲ್ಕನೆ ಪಾದದಲ್ಲಿರುವುದು.

(3) ತರ್ಕೈಯ್ಸಿ ಸುರಿವ ತೆಱದಿಂ ।
ದುರ್ಕಂಬುಗಳಿಱಿಗಿರೋಮರೋಮಕ್ಕೆ ನೆಳಲ್ ॥
ನೆಕ್ಕು ಚಳಿಲ್ ಚಕ್ಕು ದೊಗಲ್ ।
ದೊಕ್ಕನೆ ನಾಂಟಿದುವರಾತಿಭಟರವಯವಮಂ ॥ (ಜಗನ್ನಾಥವಿಜಯಂ)

ಇಲ್ಲಿ—ರ್ಕ—ಎಂಬ ಪಾಸಿನಲ್ಲಿ. ಕ್ಕ. ಎಂದು ಇದೆ—

(4) ಪತ್ತಿಪ್ರಮಾದಫಲಕಮ । ನತ್ಯುಗ್ರಗ್ರಾಹನಿವಹಸಂಕ್ಷೋಭಿತದೋಳ್ ॥
ಮತ್ತೀರತ್ನಾಕರದೋಳ್ । ಪುತ್ರಿಕೆಯೆನೆಬಿಟ್ಟಿಳಿಂತು ಬಾಲ್ದುದೆಜೋದ್ಯಂ-
(ಕವಿರಾಜಮಾರ್ಗಂ)

ಇಲ್ಲಿ ಪ್ರಾಸಿನಲ್ಲಿ ತಕಾರಕ್ಕೆ ಭಿನ್ನ ಭಿನ್ನವಾದ ಅಕ್ಷರಗಳು ಸಂಯುಕ್ತವಾಗಿರುವದು.

(5) ಉದ್ಧತರಿಪು ಕೃತಭಂಗಮ ।
ನುದ್ಧವನಿಂಗಿತದಿನಱಿದುಮಱಿಯುದತೆಱದಿಂ ॥
ದುದೂತಭ್ರಕುಟಿಯಿನಂ ।
ದುದ್ಧುರತೇಜಂ ಮುರಾರಿಬೆಸಗೊಳಲಾಗಳ್—(ಜಗನ್ನಾಥವಿಜಯಂ)

ಇಲ್ಲಿ—ದ್ಧ—ಎಂಬ ಪ್ರಾಸಿನಲ್ಲಿ—ದ್ದ—ಎಂದು ಮೂರನೆ ಪಾದದಲ್ಲಿರುವದು.

ಇದಲ್ಲದೆ ಸಾನುನಾಸಿಕಾಕ್ಷರಕ್ಕೂ ಸಬಿಂದುಕಾಕ್ಷರಕ್ಕೂ ಪ್ರಾಸಿಲ್ಲವೆಂದು ಹೇಳಲಾಗುವುದಿಲ್ಲ—ಇದರಡಿಯಲ್ಲಿರತಕ್ಕ ಪದ್ಯಗಳನ್ನು ನೋಡಿದರೆ ಈ ಅಂಶವೂ ಸ್ಪಷ್ಟವಾಗುವುದು—

(1) ಪಾಣ್ಬನೆಲ್ದೊಯ್ಯೆನಿನ್ನಕು ।
ಟುಂಬಿನಿಯುಂ ಕಾದೆಯಿಲ್ಲ ರಾಮಾಕೃತಿಯಿಂ ॥
ನೀಂಬಲ್ಕಿಕ ವಾಯುಪುತ್ರಕ ।
ನಿಂಬಕ್ಕಿಯಲ್ಕ್ಕೈದೆ ಪಗೆಯನಿಕ್ಕುವದರಿದೇ—(ಜಗನ್ನಾಥವಿಜಯಂ)

ಇಲ್ಲಿ—ಣ್ಬ—ಎಂಬ ಪ್ರಾಸಿನಲ್ಲಿ ಸಬಿಂದುಕವಾದಕ್ಷರವಿರುವುದು.

(2) ಕಣ್ಬರಿಗೆಟ್ಟು ಕಾಮನಿಸೆ ನಾಂಟುವಪೂಗಣೆಯಿಂ ಒಲಿಲ್ದುನೀಂ ।
ಬಂಬಲಬಾಡಿದಪ್ಪೆದೊರೆಕೊಳ್ಳದವಸ್ತುಗಿದೇಕವಸ್ಥೆಯಿಂ ॥
ಮಾಣ್ಬಿಸಜಾಕ್ಷಿ ಮುನ್ನ ಕನಸಿಂದಮೆ ಕಂಡನನಿಂದುಜಿತ್ರದೋಳ್ ।
ಕಾಣುದೆ ಸಾಲ್ವುದಾರಜುವರೆತ್ತಣ ಚೆನ್ನಿಗನಾವನೆಂಬುದಂ- (ಜಗನ್ನಾಥ ವಿಜಯಂ)

ಇಲ್ಲಿಯೂ—ಣ್ಬ—ಎಂಬ ಪ್ರಾಸಿನಲ್ಲಿ ಸಬಿಂದುಕವಾದ ಬಕಾರವು ದ್ವಿತೀಯ ಪಾದದಲ್ಲಿದೆ

ಹೀಗೆ ಸಂಯುಕ್ತಾಕ್ಷರದ ಪ್ರಾಸನ್ನು ನೋಡಿದರೆ ಭಿನ್ನ ಭಿನ್ನ ಸಂಯುಕ್ತಾಕ್ಷರಗಳಿಗೆ ಪ್ರಾಸನ್ನು ಅನೇಕರು ಹೇಳಿರುವುದಲ್ಲದೆ ಸಾನುನಾಸಿಕಾಕ್ಷರಕ್ಕೂ ಸಬಿಂದುಕಾಕ್ಷರಕ್ಕೂ ಪ್ರಾಸನ್ನು ಹೇಳಿರುವುದರಿಂದ ಹೀಗೆಯೆ ಬಿಜ್ಕಂ ಬೆತ್ತೆಸೆವ ಇತ್ಯಾದಿಯಲ್ಲಿಯೂ ಸಾನುನಾಸಿಕಕ್ಕೂ ಸಬಿಂದುಕಕ್ಕೂ ಪ್ರಾಸವಿದ್ದರೂ ಬಾಧಕವಿಲ್ಲವೆಂದು ಹೇಳಬಹುದಾದ ಕಾರಣ ಈ ಪ್ರಾಸದಿಂದ ಕವರ್ಗ ಪಂಚಮಾಕ್ಷರವಾಗಲೀ ಹೀಗೆಯೆ ಚವರ್ಗಪಂಚಮಾಕ್ಷರವಾಗಲೀ ಅಚ್ಚಗನ್ನಡದಲ್ಲಿದ್ದೀ ಇರಬೇಕೆಂದು ಹೇಳಲಾಗುವದಿಲ್ಲ—

ಒಂದುವೇಳೆ ಕೆಲವರು ಮೇಲೆಹೇಳಿದ-ಪಾಣ್ಬನೆಲ್ದೊಯ್ಯೆ-ಇತ್ಯಾದಿ ಪದ್ಯಗಳಲ್ಲಿ ಸಂಯುಕ್ತಾಕ್ಷರಕ್ಕೆ ಪ್ರಾಸವಿನಹ ಸಬಿಂದುಕಕ್ಕೂ ಸಾನುನಾಸಿಕಕ್ಕೂ ಪ್ರಾಸ ಇಲ್ಲವಾದ ಕಾರಣ ಬಿಜ್ಕಂ ಬೆತ್ತೆಸೆವಶ್ರೀ ಯ—ಇತ್ಯಾದಿ ಪದ್ಯದಲ್ಲಿಯೂ ಸಾನುನಾಸಿಕವನ್ನೇ ಸ್ವೀಕರಿಸಬೇಕೇ ಹೊರತು ಸಬಿಂದುಕವನ್ನು ಸ್ವೀಕರಿಸಕೂಡದೆಂದಲ್ಲಿ ವಿಚಾರ ಮಾಡೋಣ—

ಈ ಮಾತನ್ನು ಹೇಳಬೇಕಾದರೆ ವರ್ಗಾಕ್ಷರದ ಹಿಂದೆ ಇರುವ ಬಿಂದುವು ವರ್ಗ ಪಂಚಮಾಕ್ಷರಸ್ವರೂಪವಾದುದರಿಂದ ವರ್ಗಪಂಚಮಾಕ್ಷರವನ್ನು ಹೇಳಬೇಕೇ ಹೊರತು ಬಿಂದುವನ್ನು ಹೆಳತಕ್ಕುದಲ್ಲವೆಂಬ ಭಾವದಿಂದ ಹೇಳಬಹುದು. ಹಾಗೆ ಯಿದ್ದ ಪಕ್ಷದಲ್ಲಿ ಇದರಡಿಯಲ್ಲಿ ಕೊಟ್ಟಿರತಕ್ಕ ಶಬ್ದಾಲಂಕಾರದ ಶ್ಲೋಕಗಳನ್ನು ನೋಡಿದರೆ ಈ ವಿಷಯವು ವಿದಿತವಾಗಬಹುದು.

ದ್ವ್ಯಕ್ಷರಿ—

ಕಲಿ ಕೊಂಕಲ್ಕೆ ಕಲಂಕಂ । ಕೆಲಕ್ಕೆ ಕೊಲಿಕ್ಕೆ ಲಕ್ಕೆ ಲೆಕ್ಕಕ್ಕಲ್ಲಂ ॥ ಕಲಿ ಕೊಲಲೆ ಕಲಲ್ಕಕ್ಕುಂ ಕುಲಕಕ್ಕುಂ । ಕಲಿ ಕಲಂಕೆ ಕೊಲಂಕಂ—

(ಕವಿಚರಿತೆ—ವರ್ದ್ಧಮಾನ ಪುರಾಣಂ)

ಇಲ್ಲಿ ಬಿಂದುವಿರತಕ್ಕ ಸ್ಥಳದಲ್ಲಿ ಪಂಚಮಾಕ್ಷರವನ್ನು ಹೇಳಿದರೆ ತ್ರ್ಯಕ್ಷರವಾಗುವುದು. (ದ್ಯ್ವಕ್ಷರ ವಲ್ಲವಾಗುವುದು.) ಮತ್ತು ಮುಂದೆ ಹೇಳಿರುವ ಗತಪ್ರತ್ಯಾಗತ ಪದ್ಯದಲ್ಲಿಯೂ ಹೀಗೆಯೇ ಇರುವುದು.

ಕುಂದಿನಿಂದೆಚ್ಚನದುಬಂ । ಟೆಂದಮಲ್ಲದೆನಿಂದುಕುಂ ॥ ಕುಂದಿನಿಂದೆಲ್ಲ ಮದಟಂ ಬಂದುನಚ್ಚದೆ ನಿಂದಿಕುಂ—

ಇತ್ಯಾದಿ ಶಬ್ದಾಲಂಕಾರದ ಪದ್ಯಗಳಲ್ಲಿ ವರ್ಗಾಕ್ಷರದ ಹಿಂದೆಯೂ ಬಿನ್ದು ವಿರುವದಾದುದರಿಂದ ಅಂಥಾ ಬಿಂದುವೇ ಪಾಣ್ಬನೆಱೆದುಯ್ಯೆ ಇತ್ಯಾದಿಪದ್ಯಗಳ ಪ್ರಾಣಾಕ್ಷರದಲ್ಲಿ ಇರಬೇಕಾದ ಕಾರಣ ಬಿಂಕಂ ಬೆತ್ತೆಸೆವಂಚೆಯು ಇತ್ಯಾದಿ ಪದ್ಯಗಳಲ್ಲಿಯೂ ಬಿನ್ದುವಿನಿಂದಲೇ ಚರಿತಾರ್ಥವಾಗುವಾಗ ಪಂಚಮಾಕ್ಷರವನ್ನು ಯಾಕೆ ಸ್ವೀಕರಿಸಬೇಕೆಂಬ ಆಕ್ಷೇಪಣೆಗೆ ಸಮಾಧಾನವೇ ಇಲ್ಲದಿರುವುದು.

ಹೀಗೆ—ಪಂಚಮಾಕ್ಷರಗಳೊಳಗೆ ಮಕಾರ ಣಕಾರಗಳು ಅಚ್ಚಗನ್ನಡಗಳಾದ, ಮನೆ, ಮಣೆ ಇತ್ಯಾದಿ ಪದಗಳಲ್ಲಿರುವಂತೆ ಕವರ್ಗ ಚವರ್ಗ ಪಂಚಮಾಕ್ಷರಗಳು ಅಸಂಯುಕ್ತವಾಗಿ ಅಚ್ಚಗನ್ನಡದ ಯಾವಪದದಲ್ಲಿಯೂ ಇಲ್ಲದೇ ಇದ್ದರೂ ಸಂಯುಕ್ತವಾಗಿಯಾದರೂ ಇರುವದೇನೋ ಎಂದು ನೋಡಿದರೆ ಅಜ್ಜಂ ಇತ್ಯಾದಿಗಳಂತೆ ಸಂಯುಕ್ತಾಕ್ಷರದಲ್ಲಿ ಉತ್ತರಾವಯವವಾಗಿಯೂ, ಸಿಕ್ಕದೆ ಪಾಣ್ಬಂ ವಾಜ್ಮಯಂ, ಇತ್ಯಾದಿಗಳಂತೆ ಅನ್ಯವರ್ಗಾಕ್ಷರದೊಂದಿಗೆ ಸಂಯುಕ್ತವಾಗಿ ಯಾದರೂ ಸಿಕ್ಕದೆ, ಒಂದುವೇಳೆ ಸ್ವಸ್ವವರ್ಗಾಕ್ಷರದೊಂದಿಗೆ ಪುನರ್ವಾವಯವವಾಗಿ ಸಂಯುಕ್ತವಾಗಿದೆಯೆಂದು ಹೇಳೋಣವೆಂದರೆ ಹಾಗೆಹೇಳಬಹುದಾದ ಬಿಜ್ಕಂ, ಅಷ್ಟೆ ಇತ್ಯಾ

ದಿಗಳಲ್ಲಿ ಕೆಲವು ನಿಜಬಿಂದುಗಳ ಇತ್ಯಾದಿ ಕೇಶಿರಾಜನ ಸಮ್ಮತಿಯು ಇರುವದರಿಂದಲೂ ಏಂಸೈವು ಇತ್ಯಾದಿಗಳ ಸಿದ್ಧಿಗಾಗಿ ಬಿಂದುವನ್ನು ಅವಶ್ಯ ವಾಗಿ ಸ್ವೀಕರಿಸಬೇಕಾದುದರಿಂದಲೂ ಬಿಂದುವಿನಿಂದಲೇ ಚರಿತಾರ್ಥವಾಗುವದರಿಂದ ಇಲ್ಲಿ— ಅನುನ್ವಾರವನ್ನೇ ಅಂದರೆ ಬಿಂಕಂ, ಅಂಚೆ—ಇತ್ಯಾದಿಯಾಗಿ ಬರೆಯಬಹುದಾದ್ದರಿಂದ ಅವಶ್ಯವಾಗಿ ವರ್ಗಪಂಚಮಾಕ್ಷರವೇ ಇರಬೇಕು ಎಂದು ನಿರ್ಧರಿಸಲಾಗದೆ ಒಂದುವೇಳೆ ಬಿಂಕಂ—ಇತ್ಯಾದಿಗಳಲ್ಲಿ ಸಬಿಂದು ಕಕ್ಕೂ ಸಾನುನಾಸಿಕಕ್ಕೂ ಉಚ್ಚಾರಣೆಯಲ್ಲಿ ವ್ಯತ್ಯಾಸವಿರುವುದೇನೋ ಯೆಂದರೆ ಅಂಥಾ ವ್ಯತ್ಯಾಸವೇನೂ ಇಲ್ಲದ್ದರಿಂದ ಉಚ್ಚಾರಣೆಯಿಂದಲೂ ನಿರ್ಧರಿಸಲ್ಪಡದೆ ಶಬ್ದಾನುಶಾಸನ ಸೂತ್ರಕಾರನೆಂದು ಹೇಳಿಕೊಳ್ಳುವ ಭಟ್ಟಾ ಕಳಂಕನ ಮಾತಿನಲ್ಲಿಯೂ ಆಪ್ತಾಮಾಣ್ಯಗ್ರಹವುಂಟಾಗಿ ಕೇಶಿರಾಜನ ಮಾತಿನಮೇಲೆಯೂ ಅಚ್ಚಗನ್ನಡದಲ್ಲಿ ಆ ಅಕ್ಷರಗಳಿರುತ್ತವೆ ಯೆಂದು ಮೊದಲು ಸಾಧಿಸಿ ಅಮೇಲೆ ಸೂತ್ರವನ್ನು ಬರೆಯಬೇಕಾಗಿತ್ತೆಂದು ಆಕ್ಷೇಪಣೆ ಬರಲು ತತ್ಸಾಧನೆಗಾಗಿ ಕೇಶಿರಾಜನೂ ನಾಗವರ್ಮನೂ ಕೊಟ್ಟಿರತಕ್ಕ ಪದ್ಯದಲ್ಲಿ ಲೇಖನವನ್ನು ಮತ್ತು ಪ್ರಾಸನ್ನೂ ವಿಚಾರಮಾಡಿ ಅಲ್ಲಿಯೂ ಸಾಧಿತವಾಗದೆ, ಎಲ್ಲೆಲ್ಲಿ ಈ ವರ್ಗ ಪಂಚಮಾಕ್ಷರಗಳಿವೆ ಯೆನ್ನಬಹುದೊ ಅಲ್ಲೆಲ್ಲಾ ಬಿಂದುವಿನಿಂದಲೆ ಚರಿತಾರ್ಥ ವಾಗುವದಾದ ಕಾರಣ ಅಚ್ಚಗನ್ನಡದಲ್ಲಿ ಈ ಅಕ್ಷರಗಳು ಇರುತ್ತವೆ ಯೆಂದು ನಿರ್ಧರಿಸಲು ಅಸಾಧ್ಯವಾಗಿ ಕೆಶೀರಾಜನು ಹೇಳಿರತಕ್ಕ

ತಿಳಿದೇಶೀಯಮನ್ಯೆದಂ।

ಕಳೆ ನೀಂ ಋಇವರ್ಣಶಷವಿಸರ್ಗ $X_{\text{ಕ}}$ ಪಿ. ॥

ಕ್ಷಳನಂ ನಾಲ್ವತ್ತೇಱಾ।

ಯ್ತುಳಿಶುದ್ಧಗೆಯಚ್ಚಕನ್ನಡಕ್ಕೀ ಕ್ರಮದಿಂ—ಎಂಬಸೂತ್ರದ

ಮೇಲೆ ವಿಸರ್ಗವನ್ನು ಸೇರಿಸಬೇಕಾಗಿತ್ತೆಂದು ಹಿಂದೆ ಹೇಳಿದ ಆಕ್ಷೇಪಣೆಯ ಜೊತೆಗೆ ಈ ಎರಡಕ್ಷರಗಳನ್ನೂ ತೆಗೆದುಹಾಕಬೇಕಾಗಿತ್ತೆಂಬ ಮತ್ತೊಂದಾಕ್ಷೇಪಣೆಯು ಬರುವುದು—

(ಸಶೇಷ)

ಈ ವಿಷಯವನ್ನು ಹೇಳಬೇಕಾದರೆ ವರ್ಗಾಕ್ಷರದ ಹಿಂದೆ ಇರುವ ಬಿಂದುವು ವರ್ಗ ಪಂಚಮಾಕ್ಷರಸ್ವರೂಪವಾದುದರಿಂದ ವರ್ಗಪಂಚಮಾಕ್ಷರವನ್ನು ಹೇಳಬೇಕೇ ಹೊರತು ಬಿಂದುವನ್ನು ಹೆಳತಕ್ಕುದಲ್ಲವೆಂಬ ಭಾವದಿಂದ ಹೇಳಬಹುದು. ಹಾಗೆ ಯಿದ್ದ ಪಕ್ಷದಲ್ಲಿ ಇದರಡಿಯಲ್ಲಿ ಕೊಟ್ಟಿರತಕ್ಕ ಶಬ್ದಾಲಂಕಾರದ ಶ್ಲೋಕಗಳನ್ನು ನೋಡಿದರೆ ಈ ವಿಷಯವು ವಿದಿತವಾಗಬಹುದು.

ದ್ವ್ಯಕ್ಷರಿ—

ಕಲಿ ಕೊಂಕಲ್ಕೆ ಕಲಂಕಂ । ಕೆಲಕ್ಕೆ ಕೋಲಿಕ್ಕೆ ಲಕ್ಕೆ ಲೆಕ್ಕಕ್ಕಲ್ಲಂ॥ ಕಲಿ ಕೊಲಲೆ ಕಲಲ್ಕಕ್ಕುಂ ಕುಲಕಕ್ಕುಂ । ಕಲಿ ಕಲಂಕೆ ಕೊಲಂಕಂ—

(ಕವಿಚರಿತೆ—ವರ್ಧಮಾನ ಪುರಾಣಂ)

ಇಲ್ಲಿ ಬಿಂದುವಿರತಕ್ಕ ಸ್ಥಳದಲ್ಲಿ ಪಂಚಮಾಕ್ಷರವನ್ನು ಹೇಳಿದರೆ ತ್ರ್ಯಕ್ಷರವಾಗುವುದು. (ದ್ಯ್ವಕ್ಷರ ವಲ್ಲವಾಗುವುದು.) ಮತ್ತು ಮುಂದೆ ಹೇಳಿರುವ ಗತಪ್ರತ್ಯಾಗತ ಪದ್ಯದಲ್ಲಿಯೂ ಹೀಗೆಯೇ ಇರುವುದು.

ಕುಂದಿನಿಂದೆಚ್ಚನದುಬಂ । ಟಂದಮಲ್ಲದೆನಿಂದುಕುಂ ॥ ಕುಂದಿನಿಂದೆಲ್ಲ ಮದಟಂ ಬಂದುನಚ್ಚದೆ ನಿಂದಿಕುಂ—

ಇತ್ಯಾದಿ ಶಬ್ದಾಲಂಕಾರದ ಪದ್ಯಗಳಲ್ಲಿ ವರ್ಗಾಕ್ಷರದ ಹಿಂದೆಯೂ ಬಿನ್ದು ವಿರುವದಾದುದರಿಂದ ಅಂಥಾ ಬಿಂದುವೇ ಪಾಣ್ಬನೆಲೊದುಯ್ಯೆ ಇತ್ಯಾದಿಪದ್ಯಗಳ ಪ್ರಾಣಾಕ್ಷರದಲ್ಲಿ ಇರಬೇಕಾದ ಕಾರಣ ಬಿಂಕಂ ಬೆತ್ತೆಸೆವಂಚೆಯು ಇತ್ಯಾದಿ ಪದ್ಯಗಳಲ್ಲಿಯೂ ಬಿನ್ದುವಿನಿಂದಲೇ ಚರಿತಾರ್ಥವಾಗುವಾಗ ಪಂಚಮಾಕ್ಷರವನ್ನು ಯಾಕೆ ಸ್ವೀಕರಿಸಬೇಕೆಂಬ ಆಕ್ಷೇಪಣೆಗೆ ಸಮಾಧಾನವೇ ಇಲ್ಲದಿರುವುದು.

ಹೀಗೆ—ಪಂಚಮಾಕ್ಷರಗಳೊಳಗೆ ಮಕಾರ ಣಕಾರಗಳು ಅಚ್ಚಗನ್ನಡಗಳಾದ, ಮನೆ, ಮಣೆ ಇತ್ಯಾದಿ ಪದಗಳಲ್ಲಿರುವಂತೆ ಕವರ್ಗ ಚವರ್ಗ ಪಂಚಮಾಕ್ಷರಗಳು ಅಸಂಯುಕ್ತವಾಗಿ ಅಚ್ಚಗನ್ನಡದ ಯಾವಪದದಲ್ಲಿಯೂ ಇಲ್ಲದೇ ಇದ್ದರೂ ಸಂಯುಕ್ತವಾಗಿಯಾದರೂ ಇರುವದೇನೋ ಎಂದು ನೋಡಿದರೆ ಅಜ್ಞಂ ಇತ್ಯಾದಿಗಳಂತೆ ಸಂಯುಕ್ತಾಕ್ಷರದಲ್ಲಿ ಉತ್ತರಾವಯವವಾಗಿಯೂ, ಸಿಕ್ಕದೆ ಪಾಣ್ಬಂ ವಾಜ್ಮಯಂ, ಇತ್ಯಾದಿಗಳಂತೆ ಅನ್ಯವರ್ಗಾಕ್ಷರದೊಂದಿಗೆ ಸಂಯುಕ್ತವಾಗಿ ಯಾದರೂ ಸಿಕ್ಕದೆ, ಬಂದುವೇಳೆ ಸ್ವಸ್ವವರ್ಗಾಕ್ಷರದೊಂದಿಗೆ ಪೂರ್ವಾವಯವವಾಗಿ ಸಂಯುಕ್ತವಾಗಿದೆಯೆಂದು ಹೇಳೋಣವೆಂದರೆ ಹಾಗೆಹೇಳಬಹುದಾದ ಜಿಜ್ಞಂ, ಅಜ್ಞೆ ಇತ್ಯಾ

ದಿಗಳಲ್ಲಿ ಕೆಲವು ನಿಜಬಿಂದುಗಳ ಇತ್ಯಾದಿ ಕೇಶಿರಾಜನ ಸಮ್ಮತಿಯು ಇರುವದರಿಂದಲೂ ಏಂಸೈಪು ಇತ್ಯಾದಿಗಳ ಸಿದ್ಧಿಗಾಗಿ ಬಿಂದುವನ್ನು ಅವಶ್ಯ ವಾಗಿ ಸ್ವೀಕರಿಸಬೇಕಾದುದರಿಂದಲೂ ಬಿಂದುವಿನಿಂದಲೇ ಜರಿತಾರ್ಥವಾಗುವದರಿಂದ ಇಲ್ಲಿ— ಅನುನ್ವಾರವನ್ನೇ ಅಂದರೆ ಬಿಂಕಂ, ಅಂಚೆ—ಇತ್ಯಾದಿಯಾಗಿ ಬರೆಯಬಹುದಾದ್ದರಿಂದ ಅವಶ್ಯವಾಗಿ ವರ್ಗಪಂಚಮಾಕ್ಷರವೇ ಇರಬೇಕು ಎಂದು ನಿರ್ಧರಿಸಲಾಗದೆ ಒಂದುವೇಳೆ ಬಿಂಕಂ—ಇತ್ಯಾದಿಗಳಲ್ಲಿ ಸಬಿಂದು ಕಕ್ಕೂ ಸಾನುನಾಸಿಕಕ್ಕೂ ಉಚ್ಚಾರಣೆಯಲ್ಲಿ ವ್ಯತ್ಯಾಸವಿರುವುದೇನೋ ಯೆಂದರೆ ಅಂಥಾ ವ್ಯತ್ಯಾಸವೇನೂ ಇಲ್ಲದ್ದರಿಂದ ಉಚ್ಚಾರಣೆಯಿಂದಲೂ ನಿರ್ಧರಿಸಲ್ಪಡದೆ ಶಬ್ದಾನುಶಾಸನ ಸೂತ್ರಕಾರನೆಂದು ಹೇಳಿಕೊಳ್ಳುವ ಭಟ್ಟಾ ಕಳಂಕನ ಮಾತಿನಲ್ಲಿಯೂ ಅಪ್ರಾಮಾಣ್ಯಗ್ರಹವುಂಟಾಗಿ ಕೇಶಿರಾಜನ ಮಾತಿನಮೇಲೆಯೂ ಅಚ್ಚಗನ್ನಡದಲ್ಲಿ ಆ ಅಕ್ಷರಗಳಿರುತ್ತವೆ ಯೆಂದು ಮೊದಲು ಸಾಧಿಸಿ ಆಮೇಲೆ ಸೂತ್ರವನ್ನು ಬರೆಯಬೇಕಾಗಿತ್ತೆಂದು ಆಕ್ಷೇಪಣೆ ಬರಲು ತತ್ಸಾಧನೆಗಾಗಿ ಕೇಶಿರಾಜನೂ ನಾಗವರ್ಮನೂ ಕೊಟ್ಟಿರತಕ್ಕ ಪದ್ಯದಲ್ಲಿ ಲೇಖನವನ್ನು ಮತ್ತು ವ್ಯಾಸನ್ನೂ ವಿಚಾರಮಾಡಿ ಅಲ್ಲಿಯೂ ಸಾಧಿತವಾಗದೆ, ಎಲ್ಲೆಲ್ಲಿ ಈ ವರ್ಗ ಪಂಚಮಾಕ್ಷರಗಳಿವೆ ಯೆನ್ನಬಹುದೊ ಅಲ್ಲೆಲ್ಲಾ ಬಿಂದುವಿನಿಂದಲೆ ಜರಿತಾರ್ಥ ವಾಗುವದಾದ ಕಾರಣ ಅಚ್ಚಗನ್ನಡದಲ್ಲಿ ಈ ಅಕ್ಷರಗಳು ಇರುತ್ತವೆ ಯೆಂದು ನಿರ್ಧರಿಸಲು ಅಸಾಧ್ಯವಾಗಿ ಕೆಶೀರಾಜನು ಹೇಳಿರತಕ್ಕ

ತಿಳಿದೇಶೀಯಮನ್ಯೆದಂ।

ಕಳೆ ನೀಂ ಋಇವರ್ಣಶಷವಿಸರ್ಗ $X_{\text{ಕ}}$ ಪಿ॥

ಕ್ಷಳನಂ ನಾಲ್ವತ್ತೇಱಾ।

ಯ್ತಳಿಶುದ್ಧಗೆಯುಚ್ಚಕನ್ನಡಕ್ಕೀ ಕ್ರಮದಿಂ—ಎಂಬಸೂತ್ರದ

ಮೇಲೆ ವಿಸರ್ಗವನ್ನು ಸೇರಿಸಬೇಕಾಗಿತ್ತೆಂದು ಹಿಂದೆ ಹೇಳಿದ ಆಕ್ಷೇಪಣೆಯ ಜೊತೆಗೆ ಈ ಎರಡಕ್ಷರಗಳನ್ನೂ ತೆಗೆದುಹಾಕಬೇಕಾಗಿತ್ತೆಂಬ ಮತ್ತೊಂದಾಕ್ಷೇಪಣೆಯು ಬರುವುದು—

(ಸಶೇಷ)

ಮನೋರ್ಗಣಿತ-(ಸಂಕಲನ).

13 A ಯು 4 ಹಣ್ಣುಗಳನ್ನು B ಯು 8 ಹಣ್ಣುಗಳನ್ನು C ಯು A+B ಗಳಷ್ಟು ತಿಂದರೆ C ಯು ತಿಂದ ಹಣ್ಣೆಷ್ಟು ? 12

14 ಒಂದು ಪುಟ್ಟಯಲ್ಲಿ 45 ಮಾವಿನಹಣ್ಣು ಇವೆ. ಇದಕ್ಕಿಂತಲೂ 15 ಹಣ್ಣು ಜಾಸ್ತಿಯಾಗಿ ಕಿತ್ತಲೆಹಣ್ಣುಗಳಿವೆ. ಅದರಲ್ಲಿರುವ ಕಿತ್ತಲೇಹಣ್ಣೆಷ್ಟು? 60

15 ಒಂದು ಕುರಿಮಂದೆಯಲ್ಲಿ ಮೊದಲನೇ ದಿನ 58 ಮರಿಗಳು, 2ನೇ ದಿನ 36 ಮರಿಗಳು, 3ನೇ ದಿನ 6 ಮರಿಗಳು ಹುಟ್ಟಿದವು. ಒಟ್ಟು ಮರಿಗಳೆಷ್ಟು? 100

16 ಒಬ್ಬ ಹುಡುಗನು 7 ಪುಸ್ತಕಕ್ಕೆ 11 ಕಾಸುಗಳನ್ನೂ, 1 ಸ್ಲೇಟಿಗೆ 23 ಕಾಸುಗಳನ್ನೂ ಕೊಟ್ಟುಕೊಂಡ ತರುವಾಯು 6 ಕಾಸು ಉಳಿಸಿಕೊಂಡನು. ಅವನಲ್ಲಿದ್ದುದೆಷ್ಟು? 40

17 5 ಕುದುರೆ, 2 ಕೋಳಿಗಳಿಂದ ಎಷ್ಟು ಕಾಲುಗಳಾಗುವುವು ? 24

18 A ಯು ಒಬ್ಬನಿಗೆ 19 ಅಕಳುಗಳನ್ನೂ ಇನ್ನೊಬ್ಬನಿಗೆ 31 ಅಕಳುಗಳನ್ನೂ ಮಾರಿದ ತರುವಾಯು 90 ಅಕಳುಗಳು ಉಳಿದಿದ್ದುವು. ಆದರೆ ಎಷ್ಟು ಅಕಳಿದ್ದುವು? 140

19 ಒಬ್ಬನು ತನ್ನ ಹೆಂಡತಿಗೆ 21 ರೂ. ಗಳನ್ನೂ ಇಬ್ಬರು ಮಕ್ಕಳಿಗೆ ಪ್ರತಿಯೊಬ್ಬನಿಗೆ 20 ರೂ. ನಂತೆಯೂ ತನ್ನ ತಮ್ಮನಿಗೆ ಹೆಂಡತಿಗಿಂತ 9 ರೂ. ಜಾಸ್ತಿಯಾಗಿ ಕೊಟ್ಟನು. ಅವನಲ್ಲಿದ್ದ ರೂ. ಗಳೆಷ್ಟು? 91

20 ನಾನು 15 ಚರಿತ್ರೆಗಳನ್ನೂ 40 ಭೂವಿವರಣೆಗಳನ್ನೂ ಚರಿತ್ರೆಯ ಎರಡರಷ್ಟು ವ್ಯಾಕರಣಗಳನ್ನೂ ಕೊಂಡೆನು. ಕೊಂಡ ಪುಸ್ತಕಗಳೆಷ್ಟು? 75

21 ಜಾರ್ಜ ಎಂಬುವನು 1884 ರಲ್ಲಿ ಹುಟ್ಟಿದನು. ಅವನ 16 ವಯಸ್ಸಿನಲ್ಲಿ ಯಾವ ಇಸವಿ ಬರುವುದು? 1900.

22 ಸ್ಕೂಲಿನಲ್ಲಿ 50 ಬ್ರಾಹ್ಮಣಹುಡುಗರು ಅವರಿಗಿಂತ 15 ಜಾಸ್ತಿಯಾಗಿ ಮಹಮ್ಮದಿಯ ಹುಡುಗರು ಇದ್ದಾರೆ. ಸ್ಕೂಲಿನ ಒಟ್ಟು ಹುಡುಗರೆಷ್ಟು? 115.

23 ರಂಗನಿಗೆ ಈಗ 15 ವರುಷ. ಅವನು ಹುಟ್ಟುವಾಗ ಅವನ ತಂದೆಗೆ 36 ವರುಷ. ಈಗ ಅವನ ತಂದೆ ವಯಸ್ಸು ಎಷ್ಟು? 51.

24 ಒಂದು ಜೀಲದಲ್ಲಿ 40 ಸೇರು ಅಕ್ಕಿ ಯಿದೆ. ಇನ್ನೊಂದರಲ್ಲಿ ಅದಕ್ಕಿಂತಲೂ

20 ಸೇರು ಜಾಸ್ತಿಯಾಗಿ ಬೇಳೆಯಿದೆ. ಎಲ್ಲಾ ಸೇರಿ ಎಷ್ಟಾಯಿತು? 100.

25 1 ಹುಡುಗನಿಗೆ 1 ದಿನಕ್ಕೆ 5 ಆ. ಕೂಲಿ. ಹೆಂಗಸಿಗೆ 9 ಆ. ಗಂಡಸಿಗೆ 11 ಆಣೆ. 2 ದಿನಕ್ಕೆ ಇವರ ಕೂಲಿ ಎಷ್ಟಾಗುತ್ತೆ? 50.

26 ನಾನು 42 ರೂ. ಗೆ 1 ಪೆಟ್ಟಿಗೆಯನ್ನು ಕೊಂಡು 18 ರೂ. ಲಾಭಕ್ಕೆ ಮಾರಿದೆನು. ಎಷ್ಟಕ್ಕೆ ಮಾರಿದೆನು? 60.

27 ರಾಮನು 50 ಗೋಲಿಗಳನ್ನು ಗೆದ್ದನು. ಭೀಮನು ಅವನಿಗಿಂತಲೂ 20 ಗೋಲಿಗಳನ್ನು ಜಾಸ್ತಿಯಾಗಿ ಗೆದ್ದರೆ ಇಬ್ಬರೂ ಗೆದ್ದ ಗೋಲಿಗಳೆಷ್ಟು? 120

28 ನಾನು A ಗೆ 27 ರೂ. ಗಳನ್ನು B ಗೆ 33 ರೂ. ಗಳನ್ನು C ಗೆ 40 ರೂ. ಗಳನ್ನು ಸಾಲ ಕೊಟ್ಟೆ ತರುವಾಯ 100 ರೂ. ಉಳಿದವು. ಮೊದಲಿದ್ದ ರೂ. ಗಳೆಷ್ಟು? 200.

29 ರಾಮನು 44 ಮೈಲು ದೂರ ನಡೆದನು. ಈಗ ನಡೆದುದಕ್ಕಿಂತಲೂ 12 ಮೈಲು ಜಾಸ್ತಿ ನಡೆಯಬೇಕಾಗಿತ್ತು. ಅದರೆ ಎಷ್ಟು ಮೈಲಾಗುತ್ತೆ? 100.

30 ಒಬ್ಬನು 1 ನೇ ಕಂತಿನಲ್ಲಿ 33 ರೂ. ಸಾಲಾ ತೀರಿಸಿದನು. ಈಗ ತೀರಿಸಿದುದಕ್ಕಿಂತಲೂ 14 ರೂ. ಜಾಸ್ತಿಯಾಗಿ ಕೊಡಬೇಕಾಗಿದ್ದರೆ ಅವನ ಸಾಲ ವೆಷ್ಟು? 80.

ಮನೋಗಣಿತ (ಗುಣಾಕಾರ)

ಪ್ರಶ್ನೆ—1 ಗುಣಾಕಾರವೆಂದರೇನು?

ಉತ್ತರ (ಯಾವದಾದರೂ ಒಂದು ಸಂಖ್ಯೆಯನ್ನು ಅನೇಕಾವೃತ್ತಿ ಕೂಡುವುದಕ್ಕೆ ಬದಲಾಗಿ ಒಂದೇ ಸರ್ತಿಗೆ ಅದರ ಒಟ್ಟನ್ನು ಹೇಳುವಕ್ರಮಕ್ಕೆ ಹೆಸರು)

ಪ್ರಶ್ನೆ—2.—ಗುಣಾಕಾರವು ಸಂಕಲನಕ್ಕೆ ಹ್ಯಾಗೆ ಸಂಬಂಧಿಸುವುದು?

ಉ—(ಗುಣಾಕಾರವು ಅನೇಕಾವರ್ತಿ ಸಂಕಲನಮಾಡುವುದಕ್ಕೆ ಬದಲಾಗಿ ಅದರ ಕೆಲಸವನ್ನು ಸುಲಭದಲ್ಲಿಯೇ ತಿಳಿಸುತ್ತದೆ)

ಉದಾಹರಣೆ $4+4+4+4+4=20$ ಆಗುವುದು.

ಅದರೆ 4 ನಾಲ್ಕು 5 ಐದಲು $=20$ ಇಪ್ಪತ್ತು.

× ಈ ಗುರ್ತನ್ನು ಉಪಾಧ್ಯಾಯರು ಬೋರ್ಡಿನ ಮೇಲೆ ಬರೆದು ತೋರಿಸ ಬೇಕು.

ಪ್ರ—3 × ಈ ಗುರ್ತಿನ ಹೆಸರೇನು ? ಯಾವ ಅರ್ಥವನ್ನು ಸೂಚಿಸುತ್ತದೆ.

ಉ—(ಇದಕ್ಕೆ ಇಂಟು ಅಥವಾ ಕನ್ನಡದಲ್ಲಿ ಗುಣಕ ಚಿಹ್ನೆ ಯೆಂದು ಹೆಸರು. ಇದನ್ನು ಎರಡು ಅಂಕೆಗಳ ಮಧ್ಯದಲ್ಲಿಟ್ಟರೆ ಒಂದನ್ನು ಮತ್ತೊಂದರಿಂದ ಗುಣಿಸಬೇಕೆಂದು ತಿಳಿಸುತ್ತದೆ) 5×4

ಗುಣಾಕಾರದಲ್ಲಿ ಗುಣ್ಯ, ಗುಣಕ, ಗುಣಕಲಬ್ಧ, ಅಪವರ್ತನ. ಇವುಗಳ ಅರ್ಥವನ್ನು ತಿಳಿಯತಕ್ಕದ್ದು.

ಪ್ರ—4—ಗುಣ್ಯವೆಂದರೇನು ?

ಉ—(ಗುಣಾಕಾರದಲ್ಲಿ ಗುಣಿಸಿಕೊಳ್ಳಲ್ಪಡುವ ಸಂಖ್ಯೆಗೆ ಹೆಸರು. ಉದಾಹರಣೆ 9×4 ಈಗ 9 ನ್ನು ನಾಲ್ಕರಿಂದ ಗುಣಿಸಬೇಕು—9 ಕ್ಕೆ ಗುಣ್ಯವೆಂದು ಹೆಸರು)

ಪ್ರ—5—ಗುಣಕವೆಂದರೇನು ?

ಉ—(ಒಂದು ಸಂಖ್ಯೆಯನ್ನು ಗುಣಿಸುವ ಸಂಖ್ಯೆಗೆ ಹೆಸರು. ಈಗ ಮೇಲಿನ ಉದಾಹರಣೆಯುಲ್ಲಿರುವ 4 ಕ್ಕೆ ಗುಣಕವೆಂದು ಹೆಸರು)

ಪ್ರ—6—ಗುಣಕಲಬ್ಧವೆಂದರೇನು ?

ಉ—ಗುಣಿಸಿ ಬಂದನಂತರ ಬರುವ ಸಂಖ್ಯೆಗೆ ಲಬ್ಧವೆಂದು ಹೆಸರು. ಉದಾಹರಣೆಗಾಗಿ $9 \times 4 = 36$ ಎಂಬುವದು ಅವುಗಳ ಲಬ್ಧವೆಂದು ಹೆಸರು)

ಪ್ರ—7—ಅಪವರ್ತನ ವೆಂದರೇನು ?

ಉ—(ಲಬ್ಧಕ್ಕೆ ಗುಣ್ಯ—ಗುಣಕಗಳೇ ಅಪವರ್ತನಗಳಾಗುವವು. ಈಗ 36 ಕ್ಕೆ 9, 4 ಅಪವರ್ತನಗಳಾಗಿರುವವು)

8 ಪ್ರಶ್ನೆ—ಈ ಕೆಳಗಿನವುಗಳನ್ನು ಪ್ರಶ್ನೆ ಮಾಡಿ.

4 ನಾಲ್ಕು 3 ಮೂರ್ಲು 8×7 9×5 6×6 4×6 8×9 9×8 8×4 12×5 9×7 11×3 11×8 12×7 12×9 15×8 15×9 16×8 16×4 9×2 10×5 2×9 4×4

9 ಪ್ರಶ್ನೆ—ಈ ಕೆಳಗಿನವುಗಳ ಗುಣಲಬ್ಧವೆಷ್ಟು ?

13 ಮತ್ತು 4. 14 ಮತ್ತು 5. 17 ಮತ್ತು 7. 15 ಮತ್ತು 8. 16 ಮತ್ತು 9. 17 ಮತ್ತು 8. 14 ಮತ್ತು 8. 18 ಮತ್ತು 6.

19 ಮತ್ತು 6.

10 ಪ್ರಶ್ನೆ—ಈ ಕೆಳಗಿನವುಗಳ ಗುಣಕ ಲಬ್ಧವೆಷ್ಟು?

2.4 ಮತ್ತು 5— 3.4 ಮತ್ತು 5— 2.7 ಮತ್ತು 3—

5.3 ಮತ್ತು 5— 2.9 ಮತ್ತು 4— 1.6 ಮತ್ತು 7—

4.3 ಮತ್ತು 9— 4.5 ಮತ್ತು 2.

11. 19 ರ 12 ರಷ್ಟಕ್ಕೆ ಯಾವ ಸಂಖ್ಯೆಯು ಸಮನಾಗುವುದು?

12. ಯಾವ ಸಂಖ್ಯೆಯು 21 ರ 11 ಕ್ಕೆ ಸಮನಾಗುತ್ತದೆ

13. 12 ನ್ನು ಅದೇ ಸಂಖ್ಯೆಯಿಂದ ಗುಣಿಸಿ, 200ರಲ್ಲಿ ಕಳೆದರೆ ಉಳಿಯುವುದೆಷ್ಟು?

14. 13 ರ 9 ರಷ್ಟನ್ನು 150 ರಲ್ಲಿ ಕಳೆದರೆ ಉಳಿಯುವುದೆಷ್ಟು?

15. 14 ರ 5 ರಷ್ಟಕ್ಕೆ ಎಷ್ಟು ಸೇರಿಸಿದರೆ 100 ಆಗುತ್ತೆ?

16. 8 ರ 6 ರಷ್ಟಕ್ಕೂ, 7 ರ 8 ರಷ್ಟಕ್ಕೂ ಇರುವ ವ್ಯತ್ಯಾಸವೆಷ್ಟು?

17. 20×8 ರಲ್ಲಿ, 16×5 ರಷ್ಟನ್ನು ಕಳೆದರೆ ಉಳಿಯುವುದೆಷ್ಟು?

18. ಒಬ್ಬ ಮುನಷಿಯು ಒಂದು ಘಂಟೆಗೆ 7 ಕಾಗದ ಬರೆದರೆ, 12 ಘಂಟೆಗೆಷ್ಟು ಬರೆಯುವನು?

19. ಒಂದು ಜೀಲದಲ್ಲಿ 8 ಗೋಲಿಗಳಿವೆ. 16 ಜೀಲಗಳಿಂದೆಷ್ಟಾಗುವುವು?

20. 1 ಗಜಕ್ಕೆ 3 ಅಡಿಗಳಾದರೆ 14 ಗಜ ಉದ್ದ ಹಗ್ಗವು ಎಷ್ಟು ಅಡಿ ಇರುವುದು?

21. 1 ಗಜಕ್ಕೆ 1 ಅಡಿ, 1 ಅಡಿಗೆ 12 ಇಂಚುಗಳಾದರೆ 3 ಗಜಕ್ಕೆ ಇಂಚುಗಳೆಷ್ಟು?

22. 5 ಗೋಲಿಗಳಿಗೆ 1 ಚಂಡು ಬರುತ್ತದೆ. 15 ಚಂಡುಗಳನ್ನು ಕೊಳ್ಳಬೇಕಾದರೆ ಎಷ್ಟು ಗೋಲಿಗಳಿರಬೇಕು?

23. 1 ಅಕಳಿಗೆ 4 ಕುರಿಗಳು ಸಮ. 1 ಕುರಿಗೆ 5 ರೂ. ಆದರೆ 1 ಅಕಳ ಕ್ರಯ ವೆಷ್ಟು?

24. 1 ವಾರಕ್ಕೆ 7 ದಿನಗಳು. 12 ವಾರಕ್ಕೆಷ್ಟು ದಿನಗಳಾಗುವುವು?

25. 1 ಕುರಿಗೆ 7 ರೂ. ಆದರೆ 28 ಕುರಿಗೆ ಕ್ರಯವೆಷ್ಟು?

26. ಒಬ್ಬನು ದಿನಕ್ಕೆ 12 ಮೈಲ್ ನಡೆಯುತ್ತಾನೆ. 14 ದಿನಗಳಲ್ಲಿ ಎಷ್ಟು ಮೈಲ್ ಹೋಗಬಹುದು?

27. ಒಂದು ಎತ್ತಿಗೆ 22 ರೂ. ಗಳು ಕ್ರಯವಾದರೆ 6 ಎತ್ತುಗಳ ಕ್ರಯವೆಷ್ಟು?

28. ಒಂದು ಪೆಟ್ಟಿಗೆಯಲ್ಲಿ 30 ಚಾಕುಗಳಿವೆ- 12 ಪೆಟ್ಟಿಗೆಗಳಿಂದ ಎಷ್ಟು ಆಗುವುವು?

29. ಒಂದು ಹಳ್ಳಿಯಲ್ಲಿ 32 ಮನೆಗಳಿವೆ. ಒಂದು ಮನೆಯಲ್ಲಿ 7 ಜನ ಇದ್ದರೆ ಆ ಊರಲ್ಲಿರುವ ಜನಗಳೆಷ್ಟು?

30. ಒಂದು ಹೊನೇಸೊಪ್ಪಿನ ಕಟ್ಟಿಗೆ 23 ರೂ. ಗಳು ಆದರೆ 6 ಕಟ್ಟಿಗೆ ಕ್ರಯವೆಷ್ಟು?

31. ಒಂದು ಪೆನ್ಸಲಿಗೆ 8 ಕಾಸು ಆದರೆ 50 ಪೆನ್ಸಲಿಗಳ ಕ್ರಯವೆಷ್ಟು?

32. ಒಬ್ಬ ಶೆಟ್ಟಿಯು 1 ಬಾಲಜೋಳಕ್ಕೆ 3 ಆಣೆ ಮೇರೆ 100 ಬಾಲಜೋಳ ಕೊಂಡರೆ ಎಷ್ಟು ಆಣೆ ಕೊಡಬೇಕು?

33. ಒಬ್ಬ ತೋಟಗಾರನು 20 ಸಾಲು ತೆಂಗಿನಗಿಡಗಳನ್ನು ನೆಟ್ಟನು. ಸಾಲು ಒಂದಕ್ಕೆ 25 ಗಿಡಗಳಿದ್ದರೆ ಆ ತೋಟದಲ್ಲಿದ್ದ ಗಿಡಗಳೆಷ್ಟು?

34. ಒಂದು ಚೀಲ ಕಾಪಿಗೆ 40 ರೂಪಾಯಿ. 50 ಚೀಲಕ್ಕೆ ಕ್ರಯವೆಷ್ಟು!

35. ಮನೆ 1 ಕ್ಕೆ 5 ರೂ. ಕಂದಾಯ ಕೊಡುತ್ತಾರೆ. ಒಂದೂರಿನಲ್ಲಿ 200 ಮನೆಗಳಿವೆ. ಆ ಊರಿನ ಕಂದಾಯದ ಹುಟ್ಟುವಳಿ ಎಷ್ಟು?

36. ಒಂದು ಸ್ಕೂಲಿನಲ್ಲಿ 24 ಬೆಂಚುಗಳಿವೆ. ಬೆಂಚು 1 ಕ್ಕೆ 6 ಹುಡುಗರು ಕೂತುಕೊಳ್ಳುತ್ತಾರೆ. ಆ ಸ್ಕೂಲಿನಲ್ಲಿದ್ದ ಹುಡುಗರೆಷ್ಟು?

37. ಒಂದು ಪುಟ್ಟಿಯಲ್ಲಿ 15 ಕ್ಕೆ 4 ಚಮ್ಮಿಯಾಗಿ ಮಾವಿನಹಣ್ಣುಗಳಿವೆ. ಇಂಥಾ 25 ಪುಟ್ಟಿಗಳಿಂದ ಎಷ್ಟು ಹಣ್ಣಾಗುವುವು?

38. ಒಬ್ಬ ಹುಡುಗನು ನಿಮಿಷಕ್ಕೆ 5 ಗಜ ದೂರ ನಡಿಯುವನು. 1 ಘಂಟೆಗೆ ಎಷ್ಟು ದೂರ ನಡೆಯಬಹುದು?

39. ಒಂದು ಸ್ಕೂಲಿನಲ್ಲಿ 3 ತರಗತಿಗಳಿವೆ. ತರಗತಿ 1 ಕ್ಕೆ 4 ಭಾಗ ಮಾಡಿದಾರೆ. ಒಂದು ಭಾಗಕ್ಕೆ 5 ಹುಡುಗರು ಯಿದ್ದರು. ಆದರೆ ಆ ಸ್ಕೂಲಿನಲ್ಲಿದ ಹುಡುಗರೆಷ್ಟು ಜನ?

40. ಒಬ್ಬ ಹುಡುಗನು 1 ದಿನಕ್ಕೆ 5 ಲೆಖ್ಖದಂತೆ 3 ವಾರಕ್ಕೆ ಎಷ್ಟು ಲೆಖ್ಖಗಳನ್ನು ಕಲಿಯುವನು?

ವೀಣಾ, ಬಿಷ್ಟಪ್ಪ.
ಆ॥ ವಾ॥ ಗೌ॥ ಕನ್ನಡ ಸ್ಕೂಲ್,
ಚಿತ್ರದುರ್ಗ.

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ವಿಷಯಗಳು.

ಲೋವರ್ ಸೆಕೆಂಡರೀ ಪರೀಕ್ಷೆಗೆ ವ್ಯಾಕರಣ:—ಈ ಪರೀಕ್ಷೆಗೆ ಓದುವಂತೆ ಶಬ್ದಾದರ್ಶ ಎಂಬ ಪುಸ್ತಕವನ್ನು ವ್ಯಾಕರಣ ಗ್ರನ್ಥವಾಗಿ ಸರಕಾರದಿಂದ ನೇಮಿಸಲ್ಪಟ್ಟಿದೆ ಯಷ್ಟೆ! ಆದರೆ ಈ ಪರೀಕ್ಷೆಗೆ ಪ್ರತಿವರ್ಷದಲ್ಲಿಯೂ ಪ್ರಾಯಶಃ ರಾಜಶೇಖರ, ಜೈಮಿನಿ ಭಾರತ ಇಂಥಾ ಗ್ರಂಥಗಳ ಭಾಷೆಯಂತಿರುವ ಹಳಗನ್ನಡದ ಶೈಲಿಯ ಗ್ರಂಥಗಳನ್ನೇ ಆರಿಸಿ ಇಡುವರು. ಇಂತಹ ಗ್ರಂಥಗಳ ಭಾಷೆಯನ್ನು ತಕ್ಕಮಟ್ಟಿಗಾದರೂ ತಿಳಿಯಲಿಕ್ಕೆ ಶಬ್ದಾದರ್ಶವು ಸಾಲದು. ಏಕೆಂದರೆ ಶಬ್ದಾದರ್ಶದಲ್ಲಿ ಕೇವಲ ಹೊಸಕನ್ನಡದ ವ್ಯಾಕರಣವೇ ಹೇಳಲ್ಪಟ್ಟಿದೆ. ಯಾವಭಾಷೆಯನ್ನು ತಿಳಿಯಬೇಕಾದರೂ ಅದಕ್ಕೆ ತಕ್ಕ ವ್ಯಾಕರಣವನ್ನು ತಿಳಿಯದೆ ಅದು ಸಾಧ್ಯವಾಗಲಾರದು. ವಿದ್ಯಾರ್ಥಿಗಳು ತಕ್ಕ ಮಟ್ಟಿಗೆ ಹಳಗನ್ನಡದ ವ್ಯಾಕರಣವನ್ನೂ ಓದಬೇಕೆನ್ನುವ ಪಕ್ಷದಲ್ಲಿ ಪರೀಕ್ಷೆಯ ವ್ಯಾಕರಣ ಭಾಗದಲ್ಲಿ ಹಳಗನ್ನಡದ ಪ್ರಶ್ನೆಗಳನ್ನೂ ಕೇಳುವುದಿಲ್ಲ. ಆದುದರಿಂದ ಈ ಕೊರತೆಯನ್ನು ಸರಕಾರದವರು ಸರಿಮಾಡಬೇಕಾಗಿ ತೋರುತ್ತೆ.

ಅಪ್ಪರ್ ಸೆಕಂಡರೀಪರೀಕ್ಷೆ:—ಈ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದವರಿಗೆ ಸಿವಿಲ್ ಕೋರ್ಟುಗಳಲ್ಲಿ ಅಮೀನಾ ಕೆಲಸವನ್ನು ಕೊಡುವಂತೆ ಸರ್ಕಾರದವರು ಈಗ ಎರಡು ವರ್ಷಗಳಿಂದಲೂ ನಿಯಮ ಮಾಡಿ ಅದರಂತೆ ಯಥೋಚಿತ ನಡೆಸುತ್ತಲೂ ಇದಾರೆಯಷ್ಟೆ? ಆದರೆ ಉಪಾಧ್ಯಾಯರಾಗಿರಲು ಅರ್ಹರಾದ ಹಲವುಮಂದಿಯು ಬೇರೆ ಇಲಾಖೆಗೆ ಹೋಗಲು ಬಲು ಹಾರೈಸುತ್ತಿರುವರು. ಇದರಿಂದ ಒಳ್ಳೇ ಬುದ್ಧಿಶಾಲಿಗಳಾದ ಉಪಾಧ್ಯಾಯರು ಇಲ್ಲದೆ ಈ ಇಲಾಖೆಗೆ ಕ್ರಮಕ್ರಮವಾಗಿ ಕೊರತೆಯಾಗುವುದಿಲ್ಲವೆ?

ಕರ್ಣಾಟಕ ಪಂಡಿತಪರೀಕ್ಷೆ:—ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಈ ಪರೀಕ್ಷೆಗೆ ಓದಲು ಇದುವರೆಗೆ ಎರಡು ವರ್ಷಕಾಲ ಅವಧಿಯಿದ್ದುದನ್ನು ಇನ್ನು ಮೇಲೆ ಸರ್ಕಾರದವರು ಮೂರು ವರ್ಷ ಮಾಡಿರುವರು. ಈ ಏರ್ಪಾಡು ತಕ್ಕಮಟ್ಟಿಗೆ ಅನುಕೂಲವಾದುದೇ ಸರಿ. ಆದರೆ ಇದಕ್ಕೆ ಓದಲು ಪ್ರವೇಶಿಸುವರ ಶಕ್ತಿಯನ್ನು ಮಾತ್ರ ನೋಡಬೇಕಾಗಿರುವುದು ಬಲುಕಷ್ಟವು. ಪ್ರಾಚೀನ ಪದ್ಧತಿಯಂತೆ ನಾಟಕಾದ್ಯವಾದ ಸಾಹಿತ್ಯದ ವ್ಯುತ್ಪತ್ತಿಯುಳ್ಳವರಿಗೆ ಈ ಪರೀಕ್ಷೆಯ ಪಾಠಗಳನ್ನು ಓದಲು

ಪ್ರವೇಶಿಸುವುದಕ್ಕೆ ಸಾಧ್ಯವಲ್ಲದೆ ಕಾವ್ಯಪಾಠವನ್ನೇ ಮೊದಲಿಂದ ಆರಂಭಿಸುವವರಿಗೆ ಈ ಮೂರು ವರ್ಷಗಳುತಾನೆ ಹೇಗೆ ಸಾಕಾಗುವುದು?

ವ್ಯಾನ್ಯೂಲ್‌ಟ್ರೈನಿಂಗ್ :—ಇಲ್ಲಿನ ಜನಗಳಿಗೆ ಈ ಹೆಸರಿನ ಒಂದುಬಗೆಯಾದ ಕೈಗಾರಿಕೆಯ ಶಿಕ್ಷಣಕ್ರಮವನ್ನು ತಿಳಿಸುವುದಕ್ಕಾಗಿ ಅಮೇರಿಕಾದಿಂದ ಒಬ್ಬ ವಿದ್ಯಾವಂತನನ್ನೂ, ಕಿಂಡರ್‌ಗಾರ್ಟೆನ್ನನ್ನು ತಿಳಿಸುವುದಕ್ಕಾಗಿ ಇಂಗ್ಲೆಂಡಿನಿಂದ ಒಬ್ಬ ವಿದ್ಯಾವತಿಯನ್ನೂ ಮೆ॥ ಬಾಬಾಸಾಹೇಬರು ನಮ್ಮ ಸರಕಾರದವರ ಮೂಲಕ ಅನೇಕ ಸಹಸ್ರ ರೂಪಾಯಿಗಳನ್ನು ಖರ್ಚುಮಾಡಿಸಿ ಕರೆಸಿರುವರು. ಈ ವಿದ್ವಾಂಸರಿಬ್ಬರೂ ಈಗ ಹದಿನೈದು ದಿನದಿಂದ ಬೆಂಗಳೂರಲ್ಲಿ ತಮ್ಮ ವಿದ್ಯೆಗಳನು ಬೋಧಿಸುತ್ತಿರುವರು. ನಾಳೆ ನವೆಂಬರ್ ತಿಂಗಳಲ್ಲಿ ಮೈಸೂರಿಗೆ ಬಂದು ಇಲ್ಲಿಯೂ ಬೋಧಿಸುವರು. ಈ ಬೋಧನದ ವಿಷಯಗಳನ್ನು ಇನ್ನೊಂದುಸಾರಿ ವಿಶದವಾಗಿ ನಮ್ಮ ವಾಚಕರಿಗೆ ತಿಳಿಯಪಡಿಸುವೆವು.

ಮೈಸೂರು ಎಗ್ಜಿಬಿಷನ್ (ವಸ್ತುಪ್ರದರ್ಶನ)—ಕೈಗಾರಿಕೆ, ವ್ಯವಸಾಯ, ವಿದ್ಯಾಭ್ಯಾಸ ಇವುಗಳಿಗೆ ಸಂಬಂಧಪಟ್ಟ ವಿಷಯಗಳ ಪ್ರದರ್ಶನ ಮಹೋತ್ಸವವು ಈ ನವರಾತ್ರಿಯ ಉತ್ಸವದಲ್ಲಿ ರಾಜಧಾನಿಯಲ್ಲಿ ನಡೆಯುತ್ತಿರುವದಷ್ಟೆ! ಇವುಗಳಲ್ಲಿ ವಿದ್ಯಾಭ್ಯಾಸದ ವಸ್ತುಪ್ರದರ್ಶನವು ಓರಿಯಂಟಲ್ ಲೈಬ್ರರಿಯಲ್ಲಿ ನಡೆಯುವುದು. ಇದರಲ್ಲಿ ಸ್ವದೇಶ ಪರದೇಶಗಳಲ್ಲಿ ನಾನಾಸ್ಥಲಗಳಿಂದ ಚಿತ್ರ, ವಸ್ತು ಪಾಠಕ್ರಮ ಮುಂತಾದವು ಬಂದಿರುವುವು. ಇಂಗ್ಲೆಂಡಿನಿಂದ ಎಂಟು ಹತ್ತು ವರ್ಷಗಳ ವಯಸ್ಸಿನ ಬಾಲಕರು ಬರೆದಿರುವ ಭೂಪಟದ ನಕ್ಷೆಗಳೂ, ಕೈಬರೆವಣಿಗೆಗಳೂ, ಗಣಿತ ಮಾಡಿರುವ ಕ್ರಮಗಳೂ, ವಸ್ತುಚಿತ್ರಗಳೂ ಬಹಳ ಆಶ್ಚರ್ಯಕರಗಳಾಗಿವೆ. ನಮ್ಮ ದೇಶದ ಬಾಲಕರು ಹಾಗೆ ಕುಶಲತೆಯನ್ನು ಎಂದಿಗೆ ಪಡೆವರೋ ನೋಡಬೇಕು. ನಮ್ಮವರು ಕೆಲಸವನ್ನು ಆರಂಭಿಸುವುದೇ ದುರ್ಘಟ. ಒಂದುವೇಳೆ ಆರಂಭಿಸಿದರೂ ಅದರಲ್ಲಿ ಇನ್ನೂ ಮುಂದಕ್ಕೆ ಮೇಲ್ಮೆಯನ್ನು ಪಡೆಯಬೇಕೆಂಬ ಆಶೆಯೇ ಇವರಿಗೆ ಕಡಮೆ. ಈ ಆಲಸ್ಯವನ್ನು ದೂರವಾಗಿ ತೊಲಗಿಸಿದಲ್ಲದೆ ಇವರಿಗೆ ಅಭಿವೃದ್ಧಿಕರವಾದ ಉದ್ಯೋಗಗಳಲ್ಲಿ ಪ್ರವೇಶಿಸಲಾಗುವುದಿಲ್ಲ.

* ವಿದ್ಯಾದಾಯಿನಿ *

(A MONTHLY JOURNAL.)

ಭಾಗ ೧೫.] ಅಕ್ಟೋಬರ್.—೧೯೦೭. [ಸಂಚಿಕೆ ೧೦.

ಮೈಸೂರು ಸಂಸ್ಥಾನದ ದಿವಾನರವರು ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮಾಡಿದ ಉಪನ್ಯಾಸ.

ವಿದ್ಯಾಭ್ಯಾಸ.

ಈ ಸಂಸ್ಥಾನದಲ್ಲಿ ವಿದ್ಯಾಶಾಲೆಗಳ ಸಂಖ್ಯೆಯು 4,093 ರಿಂದ 3,392 ಕ್ಕೆ ಇಳಿಯಿತು. ಈಪ್ರಕಾರ ಕಡಮೆಯಾದುದು ಸರ್ಕಾರಿ ಶಾಲೆಗಳಲ್ಲಿ ಅಲ್ಲ.

ಹೀನಸ್ಥಿತಿಯಲ್ಲಿರುವರಿಗೆ ವಿದ್ಯಾರ್ಥಿವೇತನಗಳು.

ಹೀನಸ್ಥಿತಿಯಲ್ಲಿರುವ ಜನರ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲಗಳನ್ನು ಮಾಡಿಕೊಡುವುದಕ್ಕಾಗಿ, ಅದರಲ್ಲಿಯೂ ಮುಖ್ಯವಾಗಿ ಲಂಬಾಣಿ ಮತ್ತು ಬೇಗಾರಿ ವಿದ್ಯಾರ್ಥಿಗಳಿಗಾಗಿ ತಿಂಗಳಿಗೆ ಎರಡೆರಡು ರೂಪಾಯಿನಂತೆ 8 ವಿದ್ಯಾರ್ಥಿ ವೇತನಗಳನ್ನು ಮಂಜೂರ್ಮಾಡಲಾಯಿತು. ಸೆಂಟ್ರಲ್ ಕಾಲೇಜಿನಲ್ಲಿಯೂ, ಮಹಾರಾಜರ ಕಾಲೇಜಿನಲ್ಲಿಯೂ ಓದುವ ಶಿವಮೊಗ್ಗ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ 5 ರೂಪಾಯಿನ ಡಿಸ್ಟ್ರಿಕ್ಟ್ ವಿದ್ಯಾರ್ಥಿ ವೇತನಗಳ ಸಂಖ್ಯೆಯನ್ನು 10 ರಿಂದ 12 ಕ್ಕೆ ಹೆಚ್ಚಿಸಿತು. ಇಂಜನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾರ್ಥಿ ವೇತನಗಳ ಸಂಗಡ 10 ಟೆಕ್ನಿಕಲ್ ಯಾ ಶಿಲ್ಪ ವಿದ್ಯಾರ್ಥಿ ವೇತನಗಳನ್ನೂ ಕೂಡ ಕೊಡಲಾಯಿತು.

ವಿದ್ಯಾಭ್ಯಾಸ.

ವಿದ್ಯಾಭ್ಯಾಸದ ಇಲಾಖೆಯ ಕೆಲಸದ ಕ್ರಮದಲ್ಲಿ ಮುಖ್ಯವಾದ ಅನೇಕ ಒದಲಾವಣೆಗಳನ್ನು ಜಾರಿಗೆ ತರಲಾಯಿತು. ಸ್ಕೂಲುಗಳ ಇನ್‌ಸ್ಪೆಕ್ಟಿಂಗ್ ಆಫೀಸರುಗಳ ಆಚರಣೆಯ ಬಗ್ಗೆ ನಿಬಂಧನೆಗಳ ತಿದ್ದುಪಾಟಾದ ಕೋಡನ್ನು ಮಂಜೂರ್ಮಾಡಲಾಯಿತು. ಒಂದು ಟೆಕ್ಸ್ಟ್ ಬುಕ್ ಕಮಿಟಿ ಯಾ ಸಭೆಯನ್ನು ಏರ್ಪಡಿ

ಸಿತು. ಹೊಸ ಯೂನಿವರ್ಸಿಟಿ ರೆಗ್ಯುಲೇಷ್ಯನ್‌ಗಳ ನಿಯಮಗಳಿಗನುಸಾರವಾಗಿ ಸಂಸ್ಥಾನದಲ್ಲಿನ ಕಾಲೇಜುಗಳ ಏರ್ಪಾಟಿನ ತಿದ್ದುಪಾಟು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಗಣಿತಶಾಸ್ತ್ರದಲ್ಲಿ ಎಕ್ಸ್‌ಪೆರಿಮೆಂಟಲ್ ಟೀಚಿಂಗ್ ಎಂಬ ಬೋಧನೆಯನ್ನು ಕುರಿತು ಉಪನ್ಯಾಸಗಳನ್ನು ಕೇಳಿಬರುವುದಕ್ಕೆ ಮದರಾಸಿಗೆ ಕೆಲವು ಪ್ರೊಫೆಸರ್ ಯಾ ಪಂಡಿತರುಗಳನ್ನೂ ಉಪಾಧ್ಯಾಯರನ್ನೂ ಕಳುಹಿಸಿ ಇತ್ತು. ಈಚೆಗೆ ಮದರಾಸಿನಲ್ಲಿ ನಡೆದ ವಿದ್ಯಾಸಂಬಂಧವಾದ ಪ್ರದರ್ಶನವನ್ನು ಹೋಗಿ ನೋಡಲು ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್, ಜನರಲ್‌ರವರನ್ನೂ, ಕೆಲವು ಉಪಾಧ್ಯಾಯರನ್ನೂ ಕೂಡ ಕಳುಹಿಸಿ ಇತ್ತು.

ಗ್ರಾಮ ಸ್ಕೂಲ್‌ಮಾಸ್ಟರುಗಳ ಸಂಬಳವನ್ನು ಹೆಚ್ಚಿಸುವುದು.

ಗ್ರಾಮ ಸ್ಕೂಲು ಮಾಸ್ಟರುಗಳ ಸಂಬಳವನ್ನು ಕನಿಷ್ಠಪಕ್ಷ 10 ರೂಪಾಯಿಗೆ ಹೆಚ್ಚಿಸುವುದರ ಅವಶ್ಯಕತೆಯು ಬಹುಕಾಲದಿಂದ ಸರ್ಕಾರದವರಿಗೆ ಗೊತ್ತಾಗಿತ್ತು. ಗತವರ್ಷದಲ್ಲಿ ಸರ್ಕಾರದವರು ಈ ವಿಷಯವನ್ನು ಚೆನ್ನಾಗಿ ಯೋಚಿಸಿ 10 ರೂಪಾಯಿಗೆ ಕಡಮೆಯಾಗಿ ಸಂಬಳವಿರುವ ಎಲ್ಲಾ ಸ್ಕೂಲು ಮಾಸ್ಟರುಗಳಿಗೂ ಪ್ರಥಮತಃ ಒಂದು ರೂಪಾಯಿ ಸಂಬಳವನ್ನು ಹೆಚ್ಚಿಸಿ ಒಂದೆರಡು ವರ್ಷದೊಳಗೆ ಅವರ ಸಂಬಳವನ್ನು 10 ರೂಪಾಯಿವರೆಗೆ ಹೆಚ್ಚಿಸುವಂತೆ ಈಗ ಹುಕುಂ ಕೊಟ್ಟಿರುತ್ತಾರೆ.

ದೇಶಭಾಷಾ ಪ್ರೈಮರಿ ತರಗತಿಗಳಲ್ಲಿ ಫೀಜನ್ನು ತೆಗೆದುಹಾಕುವುದು.

ಗ್ರಾಮ ಸ್ಕೂಲುಗಳಲ್ಲಿ ಫೀಜು ತೆಗೆದುಹಾಕುವುದು ಸರ್ಕಾರದವರ ಆಲೋಚನೆಯಲ್ಲಿದ್ದ ಮತ್ತೊಂದು ಮುಖ್ಯ ವಿಷಯವಾಗಿತ್ತು. ಬಾಲವಿದ್ಯಾಭ್ಯಾಸದ ಪ್ರಯೋಜನವು ಹಳ್ಳಿಗಾಡಿನಲ್ಲಿರುವ ಕೇವಲ ಬಡಜನಗಳಿಗೂ ಉಂಟಾಗುವಂತೆ ಗ್ರಾಮದ ಬಾಲಶಿಕ್ಷೆಯ ಸ್ಕೂಲುಗಳ ಕೀಳ್ಪಟ್ಟ ಮತ್ತು ಮೇಲ್ಪಟ್ಟ ಪ್ರಾಥಮಿಕ ಯಾ ಮೊದಲಿನ ತರಗತಿಗಳಲ್ಲಿ ಸ್ಕೂಲು ಫೀಜು ವಸೂಲಾತಿಯನ್ನು ತೆಗೆದುಹಾಕಬೇಕೆಂದು ನಿಶ್ಚಯಿಸಲಾಯಿತು.

ಕೆಂಡರ್‌ಗಾರ್ಟ್ನ್ ಮತ್ತು ಹಸ್ತಕೌಶಲ.

ಕೆಂಡರ್‌ಗಾರ್ಟ್ನ್ ಮತ್ತು ಹಸ್ತಕೌಶಲದ ಉಪದೇಶಕ್ಕೆ ಸಂಬಂಧಪಟ್ಟು ಈಚೆಗೆ ಮತ್ತೊಂದು ಬಹಳ ವಿಶೇಷವಾದ ಏರ್ಪಾಡನ್ನು ಸರ್ಕಾರದವರು ಮಂಜೂರ್ಮಾಡಿರುತ್ತಾರೆ. ಬಾಲಕರ ವಿದ್ಯಾಭ್ಯಾಸ ಕ್ರಮದಲ್ಲಿ ನೋಡಿ ತಿಳಿದುಕೊಳ್ಳುವ ಶಕ್ತಿಯನ್ನೂ, ನೋಡಿದುದನ್ನು ಸರಿಯಾಗಿ ವಿವರಿಸುವ ಶಕ್ತಿಯನ್ನೂ, ಪ್ರಬಲಿಸಿ ತರಬೇತು ಮಾಡುವುದೇ ವಿದ್ಯಾಭ್ಯಾಸಕ್ರಮದ ಮುಖ್ಯ ಉದ್ದೇಶವಾಗಿರತಕ್ಕುದು. ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಈ ಉದ್ದೇಶವು ನೆರವೇರದೇ ಇರುವುದರಿಂದ ಈ ಕೊರತೆಯನ್ನು ನಿವಾರಿಸಿ ನವೀನಶಾಸ್ತ್ರದ ಎಲ್ಲಾ ಶಾಖೆಗಳ ಅಭ್ಯಾಸಕ್ಕೆ ಅತ್ಯವಶ್ಯವಾಗಿರುವ ಮೇಧಾಶಕ್ತಿಗಳನ್ನು ಅಭಿವೃದ್ಧಿಪಡಿಸುವುದೇ

ಈಚೆಗೆ ಸರ್ಕಾರದವರು ಮಂಜೂರ್ಮಾಡಿದ ಏರ್ಪಾಡಿನ ಉದ್ದೇಶವಾಗಿದೆ. ಕಿಂಡರ್‌ಗಾರ್ಟ್ನಿನಲ್ಲಿ ನಿಪುಣೆಯಾದ ಒಬ್ಬ ಇಂಗ್ಲಿಷ್ ಲೇಡಿಯವರನ್ನೂ, ಹಸ್ತ ಕೌಶಲದ ತರಬೇತಿನಲ್ಲಿ ನಿಪುಣರಾದ ಒಬ್ಬ ಅಮೆರಿಕಾ ದೇಶೀಯರನ್ನೂ ಆರು ತಿಂಗಳವರೆಗೆ ಇಲ್ಲಿ ಕೆಲಸಮಾಡುವ್ದಕ್ಕಾಗಿ ಸಂಪಾದಿಸಲಾಯಿತು. ಇವರು ಕಿಂಡರ್‌ಗಾರ್ಟ್ನಿನ ವಿಧಾನಗಳಲ್ಲಿಯೂ ಸೃಷ್ಟಿಯಲ್ಲಿರುವ ವಸ್ತುಗಳ ಸ್ವಭಾವ ವನ್ನು ತಿಳಿದುಕೊಳ್ಳುವುದರಲ್ಲಿಯೂ, ಪಾಠಶಾಲೆಗಳಿಗೆ ಸಂಬಂಧಪಟ್ಟು ತೋಟಗಳ ನ್ನು ಮಾಡುವುದರಲ್ಲಿಯೂ ನಾನಾ ತರದ ಹಸ್ತಕೌಶಲದ ಕೆಲಸಗಳನ್ನು ಮಾಡು ವುದರಲ್ಲಿಯೂ, ಇಲ್ಲಿನ ಉಪಾಧ್ಯಾಯುರನ್ನು ತರಬೇತು ಮಾಡುವುದಲ್ಲದೆ ಈ ವಿಷ ಯಗಳಲ್ಲಿಯೂ, ನಕ್ಷೆ ಬರೆಯುವುದರಲ್ಲಿಯೂ, ಚಿತ್ರ ಬರೆಯುವುದರಲ್ಲಿಯೂ, ಎರೆ ಮಣ್ಣಿನಲ್ಲಿ ಮಾದರಿಗಳನ್ನು ಮಾಡುವುದರಲ್ಲಿಯೂ, ಉಪದೇಶ ಕ್ರಮವನ್ನು ಏರ್ಪಡಿಸುವರು. ಆರುಮಂದಿ ಮ್ಯಾನ್ಯುಯಲ್ ಟ್ರೇನಿಂಗ್ ಯಾ ಹಸ್ತಕೌಶಲದ ತರಬೇತಿನ ಮತ್ತು ಆರ್ಟ್ ಯಾ ಕಲೆಯ ಇನ್‌ಸ್ಪೆಕ್ಟರುಗಳನ್ನು ಕೂಡ ಹಂಗಾಮಿ ಯಾಗಿ ಇಡಲಾಗುವುದು. ಈ ಏರ್ಪಾಡಿಗೆಲ್ಲಾ ಸುಮಾರು 45,000 ರೂಪಾಯಿ ಮುಟ್ಟುವುದು.

ಸ್ತ್ರೀವಿದ್ಯಾಭ್ಯಾಸ.

ಸ್ತ್ರೀ ವಿದ್ಯಾಭ್ಯಾಸವು ಏಕರೀತಿಯಾಗಿ ವೃದ್ಧಿಹೊಂದುತ್ತಿದೆ. ಗತವರ್ಷ ದಲ್ಲಿ ಮಹಾರಾಣಿ ಕಾಲೇಜಿನ ಒಬ್ಬ ಬ್ರಾಹ್ಮಣ ಉಪಾಧ್ಯಾಯೆಯು ಬಿ. ಎ. ಡಿಗ್ರಿ ಪರೀಕ್ಷೆಯ ಚರಿತ್ರಶಾಖೆಯಲ್ಲಿಯೂ, ಒಬ್ಬ ಯೂರೇಷಿಯರ್ ಸ್ತ್ರೀಯು ಎಫ್. ಎ. ಪರೀಕ್ಷೆಯಲ್ಲಿಯೂ, ಮತ್ತು ಒಬ್ಬ ಬ್ರಾಹ್ಮಣಸ್ತ್ರೀಯು ಮೆಟ್ರಿಕ್ಯುಲೇಷನ್ ಪರೀಕ್ಷೆ ಯಲ್ಲಿಯೂ ತೇರ್ಗಡೆಯಾದರು.

ಕಸಬುದಾರಿ ಪಾಠಶಾಲೆಗಳು.

ಸಂಸ್ಥಾನದಲ್ಲಿನ ಕೈಗಾರಿಕೆಯ ಮತ್ತು ವ್ಯಾಪಾರದ ಪಾಠಶಾಲೆಗಳಲ್ಲಿ ಒಳ್ಳೇ ಕೆಲಸವು ನಡಿಯಿತು. ಅವುಗಳ ಪೈಕಿ ಕೆಲವುಗಳ ಸೂಪರಿಂಟೆಂಡೆಂಟರನ್ನು ಕಲ್ಕತ್ತಾವಿನಲ್ಲಿ ನಡೆದ ಕೈಗಾರಿಕೆಯ ಪ್ರದರ್ಶನವನ್ನು ನೋಡಲು ಕಳುಹಿಸಿ ಇತ್ತು.

ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸ್ ಎಂಬ ಶಾಸ್ತ್ರ ಪಾಠಶಾಲೆಯ ಕಟ್ಟಡಗಳನ್ನು ಕಟ್ಟುವ ಕೆಲಸವನ್ನು ಜಾಗ್ರತೆಯಾಗಿ ಪ್ರಾರಂಭಿ ಸುತ್ತದೆ. ಎಂಬ ಸಮಾಚಾರವನ್ನು ಕೇಳಲು ನಿಮಗೆ ಸಂತೋಷವಾಗಬಹುದು. ಮತ್ತು ಈ ಕೆಲಸಕ್ಕಾಗಿ ಸರ್ಕಾರದವರು ವಾಗ್ದಾನ ಮಾಡಿರುವ 5 ಲಕ್ಷ ರೂಪಾ ಯಿನ ಪೈಕಿ 2 ಲಕ್ಷ ರೂಪಾಯಿಗೆ ಜವಾ ಖರ್ಚು ಅಂದಾಜಾ ಪಟ್ಟಿಯಲ್ಲಿ ಏರ್ಪಾ ಡು ಮಾಡಿ ಇದೆ.

ಮೈಸೂರಲ್ಲಿ
ನವರಾತ್ರಿ ಮಹೋತ್ಸವದಲ್ಲಿ ನಡೆವ ವಿದ್ಯಾಭ್ಯಾಸವಿಷಯಕವಾದ ವಸ್ತುಪ್ರದರ್ಶನ.

ಪ್ರತಿ ವರ್ಷದಲ್ಲಿಯೂ ನವರಾತ್ರಿ ಮಹೋತ್ಸವದಲ್ಲಿ ಮೈಸೂರಲ್ಲಿ ನಡೆಯುವ ಅಂಶಗಳೆಲ್ಲ ನಮ್ಮ ವಾಚಕರಿಗೆ ತಿಳಿದೇ ಇರುವುವಷ್ಟೆ. ಈ ವರ್ಷ ಇವುಗಳ ಜತೆಗೆ ದೇಶೋನ್ನತಿಗೆ ಮುಖ್ಯವಾದ ಇನ್ನೆರಡು ವಿಶೇಷಾಂಶಗಳು ನಡೆದುವು. ಇವು ಯಾವುವೆಂದರೆ—

(1) ವ್ಯವಸಾಯ ಮತ್ತು ಕೈಗಾರಿಕೆಯ ವಿಷಯಕವಾದ ವಸ್ತುಪ್ರದರ್ಶನ.

(2) ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನ.

ಈ ಯಿರಡು ಪ್ರದರ್ಶನಗಳೂ ತೆರೆಯಲ್ಪಡುವ ಕಾಲದಲ್ಲಿ ನಮ್ಮ ಶ್ರೀಮನ್ಮಹಾರಾಜ ಕೃಷ್ಣರಾಜವೊಡೆಯರ್ ಬಹದೂರ್ ಜಿ. ಸಿ. ಎಸ್. ಐ. ರವರು ದಯವಿಟ್ಟು ಅಗ್ರಾಸನವನ್ನು ಅಲಂಕರಿಸಿದ್ದರು. ಈ ಪ್ರದರ್ಶನಗಳಲ್ಲಿ ಎರಡನೆಯುದಾದ ವಿದ್ಯಾಭ್ಯಾಸವಿಷಯಕವಾದ ವಸ್ತುಪ್ರದರ್ಶನವನ್ನು ಸಂಕ್ಷೇಪವಾಗಿ ವಿವರಿಸುವುದೇ ಪ್ರಕೃತದಲ್ಲಿ ನಮ್ಮ ಉದ್ದೇಶವಾಗಿರುವುದು.

ಈ ಪ್ರದರ್ಶನವು ಅಕ್ಟೋಬರ್ ತಿಂಗಳು 18 ನೇ ತಾರೀಖಿನಲ್ಲಿ ಪ್ರಾರಂಭವಾಗಿ 24 ರವರೆಗೂ ನಡೆಯಿತು. ಓರಿಯಂಟಲ್ ಲೈಬ್ರರಿ ಇರುವ ಜೂಬಿಲೀ ಹಾಲ್ ಕಟ್ಟಡವೇ ಪ್ರದರ್ಶನ ಮಂದಿರವಾಗಿತ್ತು. ಈ ಪ್ರದರ್ಶನದ ಕಮಿಟಿಯ ಅಧ್ಯಕ್ಷರಾದ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಮೆ॥ ಭಾ ಭಾ ಸಾಹೇಬರು ಪ್ರದರ್ಶನವನ್ನು ತೆರೆಯುವ ಕಾಲದಲ್ಲಿ ಶ್ರೀಮನ್ ಮಹಾರಾಜರವರ ಸನ್ನಿಧಿಯಲ್ಲಿ ಮುಂದಿನ ಅಂಶಗಳನ್ನು ವಿಜ್ಞಾಪಿಸಿದರು.

ಮಹಾಸ್ವಾಮಿಯವರೇ—

"ನವರಾತ್ರಿ ಉತ್ಸವ ಕಾಲದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನವೂ ಒಂದಾಗಿರಬೇಕೆಂಬುದು ಕಳೆದ ಆಗಸ್ಟು ತಿಂಗಳು ಕೊನೆಯ ವಾರದಲ್ಲಿ ನನಗೆ ಹೊಳೆಯಿತು. ಆ ವಾರದಲ್ಲಿ ಮದ್ರಾಸು ವಿದ್ಯಾಭ್ಯಾಸದ ಇಲಾಖೆಯವರು ಹಿಂದೂಸ್ಥಾನದಲ್ಲಿ ಮೊದಲನೆಯುದಾದ ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನವನ್ನು ನಡೆಸಿದರು. ಅಲ್ಲಿದ್ದ ವಸ್ತುಗಳಲ್ಲಿ ಇಂಗ್ಲೆಂಡಿನ ಸ್ಕೂಲ್ ಬೋರ್ಡಿನಿಂದಲೂ, ಲಂಡನ್ ಕೌಂಟಿ ಕೌನ್ಸಿಲ್‌ನಿಂದಲೂ ಕಳುಹಿಸಲ್ಪಟ್ಟಿದ್ದ ಇಂಗ್ಲೀಷ್ ಸ್ಕೂಲು ವಿದ್ಯಾರ್ಥಿಗಳ ಕೆಲಸವನ್ನು ತೋರಿಸುವ ವಸ್ತುಗಳೇ ಜನರ ಮನಸ್ಸನ್ನು ವಿಶೇಷ ಆಕರ್ಷಿಸುವ ವಸ್ತುಗಳಾಗಿದ್ದುವು. ನಮ್ಮ ದಿವಾನರವರು ಈ ಪ್ರದರ್ಶನವನ್ನು ನೋಡಿಕೊಂಡು ಬಂದರು. ಎಲ್ಲಾ ಇನ್‌ಸ್ಪೆ

ಕ್ಟಿಂಗ್ ಆಫೀಸರುಗಳೂ, ಮತ್ತೂ ಕೆಲವು ಮಂದಿ ಉಪಾಧ್ಯಾಯರೂ ಈ ಪ್ರದರ್ಶನವನ್ನು ನೋಡಿಕೊಂಡು ಬರುವಂತೆ ಪ್ರಭುಗಳ ಸರ್ಕಾರದವರು ದಯವಿಟ್ಟು ಅಪ್ಪಣೇ ಕೊಡಿಸಿದರು. ನಮ್ಮಲ್ಲಿ ನಡೆಸಬೇಕೆಂದು ಉದ್ದೇಶಿಸಿರುವ ಪ್ರದರ್ಶನಕ್ಕಾಗಿ ಇಂಗ್ಲೆಂಡಿನಿಂದ ಬಂದಿದ್ದ ವಸ್ತುಗಳಲ್ಲಿ ಕೆಲವನ್ನು ಅಥವಾ ಎಲ್ಲವನ್ನೂ ಕೊಡಲು ಸಾಧ್ಯವೆ? ಯೆಂದು ಮದ್ರಾಸು ಸರ್ಕಾರದವರನ್ನು ಕೇಳಬೇಕೆಂದು ದಿವಾನರವರು ನನಗೆ ಹೇಳಿದರು. ಮದ್ರಾಸು ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಡೈರಕ್ಟರವರು ನನ್ನ ಪ್ರಾರ್ಥನೆಯನ್ನು ಆದರದಿಂದ ನೆರವೇರಿಸಿದರು. ಯೂರೋಪಿನಲ್ಲೂ, ಅಮೇರಿಕದಲ್ಲೂ ಅನೇಕ ಸ್ಕೂಲುಗಳನ್ನು ನೋಡಲು ನನಗೆ ವಿಶೇಷ ಸಹಾಯ ಮಾಡಿದ್ದ ಇಂಗ್ಲೆಂಡ್ ಸ್ಕೂಲ್ ಬೋರ್ಡಿನವರು ತಮ್ಮ ಅನುಜ್ಞೆಯನ್ನು ತಂತಿಯ ಮೂಲಕ ತಿಳಿಸಿದರು. ಈ ಬೋರ್ಡಿನವರು ಮದ್ರಾಸಿಗೆ ಕಳುಹಿಸಿದ ವಸ್ತುಗಳಲ್ಲಿ ಕೆಲವು ಮುಖ್ಯವಾದುವು ಮದ್ರಾಸನ್ನು ಸಕಾಲಕ್ಕೆ ತಲಪಲಿಲ್ಲವಾದುದರಿಂದ, ಅವು ಮೈಸೂರಿನಲ್ಲಿ ಪ್ರಥಮತಃ ಪ್ರದರ್ಶಿಸಲ್ಪಡುವುವು. ಮದ್ರಾಸಿನಿಂದ ಬಂದ ಬ್ರಿಟಿಷ್ ವಸ್ತುಗಳಲ್ಲದೆ ನಾನು ಇಂಗ್ಲೆಂಡಿಗೆ ಹೋಗಿದ್ದಾಗ ಲಂಡನ್ ಕೌಂಟಿ ಕೌನ್ಸಿಲ್ ನವರು ನಮ್ಮ ಇಲಾಖೆಗೆ ಕೊಟ್ಟ ಮ್ಯಾನ್ಯುಅಲ್ ಟ್ರೇನಿಂಗ್ ವಸ್ತುಗಳನ್ನೂ, ಲೀಡ್ಸ್ ಮತ್ತು ಬ್ರಾಡ್ ಫರ್ಡಿನವರು ಕೊಟ್ಟ ಚಿತ್ರಗಳನ್ನೂ ಮಾದರಿಗಳನ್ನೂ, ಇಂಗ್ಲೆಂಡಿನಲ್ಲಿ ಪ್ರಕೃತಿಯನ್ನು ಪರೀಕ್ಷಿಸುವ ಕಾರ್ಯವನ್ನು ಮೇಲ್ವಿಚಾರಿಸುವ ಇನ್ಸ್ಪೆಕ್ಟರ್ ನೆಃ ಟಿ. ಎಸ್. ಡಿಮಾಂಡ್ ಸಾಹೇಬರು ಕೊಟ್ಟ ಮಾದರಿಗಳನ್ನೂ ಚಿತ್ರಗಳನ್ನೂ, ನಾನು ಈ ಪ್ರದರ್ಶನದಲ್ಲಿ ಇಡಿಸಿರುವೆನು.

ಕಳೆದ ಇಪ್ಪತ್ತೊಂದು ವರ್ಷಗಳಲ್ಲಿ ಯೂರೋಪ್ ಮತ್ತು ಅಮೇರಿಕದ ವಿದ್ವಾಂಸರು ಸಣ್ಣ ಮಕ್ಕಳ ವಿದ್ಯಾಭ್ಯಾಸ ಕ್ರಮವನ್ನು ಯಾವರೀತಿಯಲ್ಲಿ ಬದಲಾಯಿಸಿರುವರು, ಈ ಮಕ್ಕಳಿಗೆ ಬಾಲ್ಯದಿಂದಲೂ ವಸ್ತುಗಳನ್ನು ಕ್ರಮವಾಗಿ ಪರೀಕ್ಷಿಸುವುದನ್ನೂ ಮತ್ತೂ ತಾವು ನೋಡಿ ತಿಳಿದ ಅಂಶಗಳನ್ನು ವಾಕ್ಯರೂಪದಲ್ಲೂ, ಚಿತ್ರರೂಪದಲ್ಲೂ ಬರೆಯುವುದನ್ನೂ ಹೇಗೆ ಕಲಿಸುವರು, ಪ್ರಕೃತಿಯನ್ನು ಪರೀಕ್ಷಿಸುವುದು ಮಕ್ಕಳ ವಿದಾಭ್ಯಾಸಕ್ಕೆಲ್ಲ ಹೇಗೆ ಆಧಾರವಾಗಿರುವುದು, ಬಾಲಕರ ಹಸ್ತಕೌಶಲವೂ ನೇತ್ರಪಾಟವವೂ ಮೊದಲು ಕಿಂಡರ್ ಗಾರ್ಟ್ನಿನಲ್ಲೂ ಆಮೇಲೆ ವ್ಯವಸಾಯ ಪಾಠಶಾಲೆಗಳಲ್ಲೂ ಮ್ಯಾನ್ಯುಅಲ್ ಟ್ರೇನಿಂಗ್ ಪಾಠಶಾಲೆಗಳಲ್ಲೂ ಯಾವರೀತಿಯಲ್ಲಿ ವೃದ್ಧಿಹೊಂದುವುದು, ವಸ್ತುಗಳನ್ನು ಕ್ರಮವಾಗಿ ಪರೀಕ್ಷಿಸುವ ಶಕ್ತಿ, ಸರಿಯಾದ ಊಹನ ಶಕ್ತಿ, ಸರಿಯಾಗಿ ವೃದ್ಧಿಹೊಂದುವ ಶರೀರ, ಒಳ್ಳೇ ರೀತಿಯಲ್ಲಿ ಉಪಯೋಗಿಸಲ್ಪಡುವ ಚೆಟುವಟಿಕೆ ಇವುಗಳನ್ನು ಹೇಗೆ ಉಂಟುಮಾಡಬೇಕು, ಈ ವಿಧವಾದ ಅಂಶಗಳು ಈ ಪ್ರದರ್ಶನದಿಂದ ನಮ್ಮ ಉಪಾಧ್ಯಾಯರಿಗೆ ತಿಳಿಯಬಹುದೆಂದು ನಾನು ನಿರೀಕ್ಷಿಸುವೆನು.

ಪ್ರಭುಗಳ ಅನುಜ್ಞೆಯಿಂದ ಇಲ್ಲಿರುವ ವಸ್ತುಗಳಲ್ಲಿ ಮುಖ್ಯವಾದುವು ಯಾವುವು ಎಂಬುದನ್ನು ಸ್ವಲ್ಪ ವಿಜ್ಞಾಪಿಸುವೆನು. ಪ್ರಕೃತಿಯನ್ನು ಪರೀಕ್ಷಿಸುವ ಕಾರ್ಯದಲ್ಲಿ ಬರೆದ ಚಿತ್ರಗಳು, ಜೇಡಿಯ ಮಾದರಿಗಳು, ಹೊಲಿಗೆ, ಕಸೂತಿ, ಮನೆಕೆಲಸಕ್ಕೆ ಸಂಬಂಧವಾದ ವಸ್ತುಗಳು, ಪಾಠಶಾಲೆಯು ಬಾಲಕರು ಮಾಡಿದ ಸಂಚಾರದ ವಿಷಯವನ್ನು ತೋರಿಸುವ ಪುಸ್ತುಕಗಳು, ಪಾಠಶಾಲೆಯ ಕೆಲಸದ ವಿಷಯವನ್ನು ತಿಳಿಸುವ ಪುಸ್ತಕಗಳು, ಲಂಡನ್ ಕೌಂಟಿ ಕೌನ್ಸಿಲ್ ಸ್ಕೂಲುಗಳ ವೇಳಾಪತ್ರಿಕೆಗಳು, ಪ್ರಾಕೃತಿಕ ಶಾಸ್ತ್ರಗಳನ್ನು ತಿಳಿಸಲು ಅನುಕೂಲವಾದ ಪಟ್ಟಿಗಳು ಇವು ಇಂಗ್ಲೆಂಡಿನಿಂದ ಬಂದ ವಸ್ತುಗಳಲ್ಲಿ ಬಹಳ ಮುಖ್ಯವಾದುವು. ಇವುಗಳಲ್ಲದೆ ಲಂಡನ್ ಮ್ಯಾನ್ಯುಅಲ್ ಟ್ರೈನಿಂಗ್ ಪಾಠಶಾಲೆಗಳಿಂದಲೂ, ಬಾಸ್ಟನ್ ನಾರ್ಮಲ್ ಸ್ಕೂಲಿನಿಂದಲೂ, ಬಂದಿರುವ ಮರದ ಮತ್ತು ಲೋಹದ ಮಾದರಿಗಳು ಅನೇಕವಾಗಿರುವವು. ವೀರರಾಜ ಪೇಟೆಯ ಮಾದರಿ ಪಾಠಶಾಲೆಯಿಂದಲೂ, ಕೊಡಗಿನ ಇತರ ಪಾಠಶಾಲೆಗಳಿಂದಲೂ, ಬಂದಿರುವ ಕೈಕೆಲಸದ ವಸ್ತುಗಳು ಹಿಂದೂಸ್ಥಾನದ ಪಾಠಶಾಲೆಗಳಲ್ಲಿ ಬಾಲಕರು ಎಷ್ಟರ ಮಟ್ಟಿಗೆ ಕೆಲಸಮಾಡಬಲ್ಲರು ಎಂಬುದನ್ನು ತೋರಿಸುವುವು. ಮೈಸೂರಿನ ಹಿಂದೂಸ್ಥಾನಿ ಗರಲ್ ಸ್ಕೂಲಿನಿಂದ ಬಂದಿರುವ ವಸ್ತುಗಳು ಆ ಸ್ಕೂಲು ಪ್ರಸ್ತುತದಲ್ಲಿಯೇ ಬಹಳ ಅಭಿವೃದ್ಧಿಗೆ ಬರಬಹುದೆಂಬುದನ್ನು ಸೂಚಿಸುವುವು. ಮೈಸೂರು ನಾರ್ಮಲ್ ಸ್ಕೂಲಿನಿಂದ ಉತ್ಕೃಷ್ಟವಾದ ಚಿತ್ರಗಳೂ, ಮಣ್ಣಿನ ಮಾದರಿಗಳೂ ಬಂದಿರುವುವು. ಅನೇಕ ಗರಲ್ ಸ್ಕೂಲುಗಳೂ ತಾಲ್ಲೂಕು ಮತ್ತು ಹೋಬಳಿ ಸ್ಕೂಲ್‌ಗಳೂ, ಕಾಲವು ಅತ್ಯಲ್ಪವಾದಾಗ್ಯೂ ವಿಶೇಷ ಅಭಿವೃದ್ಧಿಯನ್ನು ಸೂಚಿಸುವ ವಸ್ತುಗಳನ್ನು ಕಳುಹಿಸುವುವು. ಉತ್ಕೃಷ್ಟವಾದ ವಸ್ತುಗಳನ್ನು ಕಳುಹಿಸಿರುವ ಕೆಲವರಿಗೆ ಯೋಗ್ಯತಾ ಪತ್ರಿಕೆಗಳನ್ನು ಕೊಡಬೇಕೆಂದು ಯೋಚಿಸಲ್ಪಟ್ಟಿರುವುದು.

ಮಹಾರಾಜ ರವರ ಕಾಲೇಜು ಹಾಲಿನಲ್ಲಿ ಈ ಪ್ರದರ್ಶನದ ಸಂಬಂಧದಲ್ಲೇ ಕೆಲವು ಉಪನ್ಯಾಸಗಳೂ ನಡೆಯುವುವು. ವಿದ್ಯಾಭ್ಯಾಸ ಸಂಬಂಧವಾದ ವಿಷಯಗಳಲ್ಲಿ ವ್ಯಾಬಿಕ್ ಲ್ಯಾಂಟರ್ನ್ ಪ್ರದರ್ಶನವು ಮೂರು ರಾತ್ರಿಗಳಲ್ಲಿ ನಡೆಯುವುದು. ಕಿವುಡ ಮೂಗರಿಗೂ, ಕುರುಡರಿಗೂ, ವಿದ್ಯಾಭ್ಯಾಸ ಕ್ರಮವನ್ನು ತೋರಿಸುವ ತರಗತಿಗಳು ಎರಡು ಮಧ್ಯಾಹ್ನ ಗಳಲ್ಲಿ ನಡೆಯುವುವು.

ಈ ಕಾರ್ಯದಲ್ಲಿ ಮೈಸೂರು ವಿದ್ಯಾಭ್ಯಾಸದ ಇಲಾಖೆಗೆ ವಿಶೇಷ ಸಹಾಯ ಮಾಡಿರುವ ಇಂಗ್ಲೆಂಡಿನ ಸ್ಕೂಲ್ ಬೋರ್ಡಿಗೂ, ಲಂಡನ್ ಕೌಂಟಿ ಕೌನ್ಸಿಲ್‌ಗೂ ಇಂಗ್ಲೆಂಡು ಮತ್ತು ಮದರಾಸಿನ ವಿದ್ಯಾಭ್ಯಾಸದ ಅಧಿಕಾರಿಗಳಿಗೂ ಮಹಾಸ್ವಾಮಿಯವರ ಅನುಜ್ಞೆಯಿಂದ ನನ್ನ ಅತ್ಯುತ್ತಮವಾದ ವಂದನೆಯನ್ನು ಅರ್ಪಿಸುವೆನು.

ಕಾಲವು ಅಲ್ಪವಾಗಿದ್ದಾಗ್ಯೂ ಆಷ್ಟರಲ್ಲಿಯೇ ಈ ಪ್ರದರ್ಶನದ ಕಾರ್ಯವು

ಸರಿಯಾಗಿ ನೆರವೇರಲು ವಿಶೇಷ ಸಹಾಯ ಮಾಡಿರುವ ಮೆ. ಡೆ ಹಾಂ ಸಾಹೇಬರ ವರನ್ನು ಇವರ ಪತ್ನಿಯವರನ್ನು, ಫೋಷಾ ಹೆಂಗಸರು ಪ್ರದರ್ಶನಮಂದಿರಕ್ಕೆ ಬಂದಾಗ ಮೇಲ್ವಿಚಾರಣೆ ನೋಡಿಕೊಳ್ಳಲು ಒಪ್ಪಿರುವ ಸ್ತ್ರೀಯರನ್ನು, ಸೆಕ್ರೆಟರಿ ಯವರಾದ ಮೆ. ರಾ. ರಾಮಸ್ವಾಮೈಯ್ಯಂ ನವರನ್ನು ಇವರ ಅಸಿಸ್ಟೆಂಟರುಗಳನ್ನು, ಪ್ರದರ್ಶನದ ಕಮಿಟಿಯ ಇತರ ಮೆಂಬರುಗಳನ್ನು ನಾನು ವಂದಿಸುವೆನು.

ಪ್ರದರ್ಶನವು ತೆರೆಯಲ್ಪಟ್ಟಿ ತೆಂಬದಾಗಿ ಕೃಪೆಯಿಟ್ಟು ನುಡಿಯಬೇಕೆಂದು ನಾನು ಮಹಾಸ್ವಾಮಿಯವರನ್ನು ಪ್ರಾರ್ಥಿಸುವೆನು. ಬಹಳ ಮುಖ್ಯವಾದ ಅನೇಕ ಕಾರ್ಯಗಳಿರುವ ಈ ಉತ್ಸವ ಸಮಯದಲ್ಲಿ ಈ ಪ್ರಾತಃಕಾಲದ ಕೆಲಸಕ್ಕಾಗಿ ಸ್ವಾಮಿಯವರು ಅವಕಾಶವನ್ನು ಕಲ್ಪಿಸಿಕೊಂಡು ಇಲ್ಲಿಗೆ ದಯಮಾಡಿದುದಕ್ಕೆ ನಮ್ಮಗಳ ಮೇಲೆ ಪ್ರಭುಗಳಿಗಿರುವ ಪೂರ್ಣ ಕೃಪೆಯೇ ಕಾರಣವಾಗಿರುವುದು. ಈ ದಿವಸ ಪ್ರಾತಃ ಕಾಲ ಇಲ್ಲಿರುವವರೆಲ್ಲರೂ ಪ್ರದರ್ಶನವನ್ನು ನೋಡುವರು. ಮಧ್ಯಾಹ್ನ ಮೂರು ಘಂಟೆಯಮೇಲೆ ಸಮಸ್ತ ಜನರಿಗೂ ಪ್ರದರ್ಶನವನ್ನು ನೋಡಲು ಅವಕಾಶವು ಕೊಡಲ್ಪಡುವುದು.”

ಮೆ॥ ಭಾಭಾ ಸಾಹೇಬರವರು ಈ ವಿಜ್ಞಾಪನೆಯನ್ನು ಓದಿದಮೇಲೆ ಶ್ರೀಮನ್ಮಹಾರಾಜರವರು ಮುಂದಿನ ವಾಕ್ಯಗಳನ್ನು ಅಪ್ಪಣೆ ಕೊಡಿಸಿದರು:—“ಮೆ ॥ ವಿಲಿಯಂಸ್ ಸಾಹೇಬರೇ, ಮತ್ತು ಮಹನೀಯರೆ—ಈ ಪ್ರದರ್ಶನದ ಉತ್ಪತ್ತಿ ಮತ್ತು ಸ್ವಭಾವದ ವಿಷಯದಲ್ಲಿ ಮೆ॥ ಭಾಭಾ ಸಾಹೇಬರುಮಾಡಿರುವ ವರ್ಣನೆಯು ಆ ವಿಷಯದಲ್ಲಿ ನಾನು ಕೆಲವು ಮಾತುಗಳಿಗಿಂತಲೂ ಹೆಚ್ಚನ್ನು ಹೇಳುವ ಅವಶ್ಯಕತೆಯನ್ನು ತಪ್ಪಿಸಿರುವುದು. ಇಂಗ್ಲೆಂಡ್ ದೇಶದ ಮತ್ತು ಇತರ ರಾಜ್ಯಗಳ ಪ್ರೈಮರಿ ಪಾಠಶಾಲೆಗಳಲ್ಲಿ ಆಚರಣೆಯಲ್ಲಿರುವ ಕ್ರಮಗಳನ್ನು ಅಲ್ಲಿ ನಡೆಯುವ ಕೆಲಸದ ಸ್ವರೂಪವನ್ನು ತಿಳಿಸಲು ಮೆ॥ ಭಾಭಾ ಸಾಹೇಬರು ಅತ್ಯುತ್ತಮವಾದ ಪದಾರ್ಥ ಸಮುದಾಯವನ್ನು ಜತೆಗೊಳಿಸಿರುವರೆಂಬುದು ಸ್ಪಷ್ಟವಾಗಿ ಕಾಣುವುದು. ಇಲ್ಲಿರುವ ವಸ್ತುಗಳನ್ನು ನೋಡುವುದರಿಂದ ವಿದ್ಯಾಭ್ಯಾಸದ ಇಲಾಖೆಯ ಅಧೀಸರುಗಳೂ, ಉಪಾಧ್ಯಾಯರೂ ವಿಶೇಷ ಪ್ರಯೋಜನವನ್ನು ಹೊಂದುವುದರಲ್ಲೂ, ವಿದ್ಯಾಭ್ಯಾಸದ ವಿಷಯದಲ್ಲಿ ವಿಶೇಷ ಆಸಕ್ತಿಯುಳ್ಳ ನಾವುಗಳೆಲ್ಲರೂ ಅನೇಕ ಉತ್ತಮವಾದ ಹೊಸ ಅಭಿಪ್ರಾಯಗಳನ್ನು ಶೇಖರಿಸುವುದರಲ್ಲೂ ಸಂಶಯ ವಿಲ್ಲವೆಂದು ನನಗೆ ತೋರುವುದು. ಮದ್ರಾಸು ವಿದ್ಯಾಭ್ಯಾಸದ ಇಲಾಖೆಯವರು ಆದರ ಪೂರ್ವಕವಾಗಿ ಮಾಡಿದ ಸಹಾಯಕ್ಕೆ ನಾವು ಕೃತಜ್ಞರಾಗಿರುವೆವು. ಇಷ್ಟು ಸ್ವಲ್ಪ ಕಾಲದಲ್ಲೇ ಇಷ್ಟು ಜೆನ್ನಾಗಿ ಈ ಪ್ರದರ್ಶನವನ್ನು ಏರ್ಪಡಿಸಿದ ಮೆ॥ ಭಾಭಾ ಸಾಹೇಬರನ್ನು, ಮೆ॥ ಡೆ ಹಾಂ ಸಾಹೇಬರನ್ನೂ, ಇವರಿಗೆ ಸಹಾಯ ಮಾಡಿದ ಇತರರನ್ನೂ ನಾನು ವಿಶೇಷ ಶ್ಲಾಘಿಸುವೆನು. ಈ ಪ್ರದರ್ಶನವು ತೆರೆಯಲ್ಪಟ್ಟಿತೆಂದು ನಾನು ಹೇಳುವೆನು.

ಈ ಪ್ರದರ್ಶನವು ಇಷ್ಟು ಚೆನ್ನಾಗಿ ನಡೆದುದನ್ನು ನೋಡಿ ವರ್ಷೇ ವರ್ಷೇ ನವರಾತ್ರಿಯು ಕಾಲದಲ್ಲಿ ಇಂತಹ ಪ್ರದರ್ಶನವು ನಡೆಯಬೇಕೆಂದು ಕೋರುವೆನು. ”

ಅನಂತರ ಶ್ರೀಮನ್ಮಹಾರಾಜರವರು ಪ್ರದರ್ಶನ ಮಂದಿರಕ್ಕೆ ದಯಮಾಡಿಸುಮಾರು ಒಂದೂವರೆ ಘಂಟೆಯವರೆಗೂ ಅಲ್ಲಿದ್ದ ವಸ್ತುಗಳನ್ನೆಲ್ಲ ಚೆನ್ನಾಗಿ ಪರಾಂಬರಿಸಿ ದಯಮಾಡಿಸಿದರು.

ಅಲ್ಲಿ ಶೇಖರಿಸಲ್ಪಟ್ಟಿದ್ದ ವಸ್ತುಗಳನ್ನು ಮದ್ರಾಸಿನ ಪ್ರದರ್ಶನದಲ್ಲಿದ್ದಂತೆ ಎರಡು ಭಾಗವಾಗಿ ವಿಂಗಡಿಸಿದ್ದರು. ಮೊದಲನೆಯ ಭಾಗದಲ್ಲಿ ಇಂಗ್ಲೆಂಡ್ ಅಮೇರಿಕ ಮೊದಲಾದ ಪ್ರದೇಶಗಳಿಂದ ಬಂದಿದ್ದ ವಸ್ತುಗಳಿದ್ದುವು. ಎರಡನೆಯ ಭಾಗದಲ್ಲಿ ನಮ್ಮ ದೇಶದ ಪಾಠಶಾಲೆಗಳಿಂದ ಬಂದಿದ್ದ ವಸ್ತುಗಳಿದ್ದುವು.

ಈ ಯೆರಡು ಭಾಗಗಳಲ್ಲಿದ್ದ ವಸ್ತುಗಳನ್ನು ಇಲ್ಲಿ ಸ್ವಲ್ಪ ಮಟ್ಟಿಗೆ ವಿವರಿಸುವೆವು. ಅನ್ಯದೇಶಗಳಿಂದ ಬಂದಿದ್ದ ವಸ್ತುಗಳಲ್ಲಿದ್ದ ಮುಖ್ಯವಾದವುಗಳು ಯಾವುವೆಂದರೆ—

(1) ಪ್ರಕೃತಿಯನ್ನು ಪರೀಕ್ಷಿಸುವ ಕಾರ್ಯದಲ್ಲಿ ಮಕ್ಕಳು ಬರೆದ ಚಿತ್ರಗಳು.

ಈ ವಿಷಯದಲ್ಲಿ ಮಕ್ಕಳು ನಾನಾ ವಿಧವಾದ ಗಿಡಗಳ ಮತ್ತು ಹೂಗಳ ಚಿತ್ರಗಳನ್ನು ಬರೆದಿದ್ದರು. ಇವುಗಳಲ್ಲಿ ಕೆಲವು ಮದ್ರಾಸು ಪ್ರದರ್ಶನವಾದ ಮೇಲೆ ಬಂದುದರಿಂದ ಇಲ್ಲಿ ಮೊದಲು ಪ್ರದರ್ಶನಮಾಡಲ್ಪಟ್ಟುವು. ಇದೇ ವಿಷಯವಾಗಿ ಬಾಲಕರು ಬರೆದಿದ್ದ ಛಾಕ್ ಡ್ರಾಯಿಂಗ್ ಪುಸ್ತಕಗಳೂ ಅನೇಕವಾಗಿದ್ದುವು.

(2) ಇಂಗ್ಲೆಂಡಿನ ಹೈಸ್ಕೂಲ್ ಕೆಲಸವನ್ನು ತೋರಿಸುವ ಪುಸ್ತಕಗಳು

ಅಂಕಗಣಿತ, ಬೀಜಗಣಿತ, ರೇಖಾಗಣಿತ, ಇವುಗಳಲ್ಲಿ ಹೊಸಕ್ರಮಕ್ಕನುಗುಣವಾಗಿ ಮಾಡಿದ ಕೆಲಸವನ್ನು ತೋರಿಸುವ ಪುಸ್ತಕಗಳು, ಪ್ರಾಕೃತಿಕ ಶಾಸ್ತ್ರಗಳಲ್ಲಿ ಹೊಸಕ್ರಮಕ್ಕನುಸಾರವಾಗಿ ಮಕ್ಕಳು ನಡೆಸಿದ ಪರೀಕ್ಷೆಗಳ ಫಲವನ್ನು ತೋರಿಸುವ ಪುಸ್ತಕಗಳು, ಚರಿತ್ರೆ ಭೂಗೋಳ ಪಾಠಗಳಲ್ಲಿ ಬಾಲಕರು ಮಾಡಿದ ಕೆಲಸಗಳನ್ನು ತೋರಿಸುವ ಪುಸ್ತಕಗಳು, ಬಾಲಕರು ಬರೆದ ವಾಕ್ಯರಚನೆಯು ಪುಸ್ತಕಗಳು, ಇವೇ ಈ ಭಾಗದಲ್ಲಿದ್ದ ಮುಖ್ಯವಾದ ವಸ್ತುಗಳು.

(3) ಟಿಪ್ಪಣಿಗಳು ಮತ್ತು ರೆಕಾರ್ಡುಗಳು.

ಪಾಠಶಾಲೆಯ ಕೆಲಸದ ಪಟ್ಟಿಗಳು, ಕರೀ ಹಲಗೆಯಲ್ಲಿ ಬರೆಯಬೇಕಾದ ಅಂಶಗಳನ್ನು ತೋರಿಸುವ ಪಟ್ಟಿಗಳು, ಪಾಠದ ಟಿಪ್ಪಣಿಗಳು ಇವು ಇನ್ನೊಂದು ಭಾಗದಲ್ಲಿ ಇಡಲ್ಪಟ್ಟಿದ್ದುವು.

(4) ವಸ್ತು ಪಾಠದ ಉಪಕರಣಗಳು

ಕಾಕ್ಸ್ ಮತ್ತು ಕಂಪೆನಿ ಯವರು ತಯಾರು ಮಾಡಿದ ವಸ್ತು ಪಾಠದ ಪತ

ಗಳು ಇವುಗಳಲ್ಲಿ ಮುಖ್ಯವಾದುವು. ಒಂದೊಂದು ವಸ್ತುವಿನ ವಿಷಯವನ್ನು ಪೂರ್ಣವಾಗಿ ತಿಳಿಸುವುದಕ್ಕನು ಕೂಲವಾದ ಪದಾರ್ಥಗಳು ಒಂದೊಂದು ಪಠ್ಯದಲ್ಲಿ ಇಡಲ್ಪಟ್ಟಿದ್ದುವು.

(೫) ಮೈಸೂರು ದೇಶದ ಕಿಂಡರ್ ಗಾರ್ಟ್ನ್ ಶಿಕ್ಷಣ ಕ್ರಮವನ್ನು ಸರಿಪಡಿಸಲು ಬಂದಿರುವ ಮಿಸ್. ಲ್ಯಾಟಿರವರು ಇಟ್ಟಿದ್ದ ವಸ್ತುಗಳು.

ಇವರ ಇನ್‌ವಿಕ್ಟ ಯೆಂಬ ಪಾಠಶಾಲೆಯಲ್ಲಿ ನಡೆಯುವ ಕೆಲಸವನ್ನು ತೋರಿಸುವ ಪಾಠದ ಪಟ್ಟಿಯೊಂದಿತ್ತು. ಈ ಪಟ್ಟಿಯಿಂದ ಪ್ರಕೃತಿ ಪರೀಕ್ಷೆಯು, ಹೇಗೆ ಈಗಿನ ಸಣ್ಣ ಮಕ್ಕಳ ವಿದ್ಯಾಭ್ಯಾಸದಲ್ಲಿ ಮುಖ್ಯವಾದ ಪಾಠವಾಗಿರುವುದೆಂಬುದು ಸ್ಪಷ್ಟವಾಗಿ ಕಾಣುತಿತ್ತು. ಪ್ರಕೃತಿ ಪರೀಕ್ಷೆಯನ್ನು ಕ್ರಮವಾಗಿ ನಡೆಸಲು ಯಾವ ಕ್ರಮವನ್ನು ಅನುಸರಿಸಬೇಕೆಂಬುದನ್ನು ತೋರಿಸಲು ಬ್ರಾಡ್ ಬೀನ್ ಯೆಂಬ ಬಂದು ದ್ವಿದಳ ಧಾನ್ಯದ ವಿಷಯದಲ್ಲಿ ಈ ಪಾಠವನ್ನು ನಡೆಸುವಾಗ ಉಪಾಧ್ಯಾಯರು ಸಿದ್ಧಪಡಿಸಿದ ಟಿಪ್ಪಣಿ, ಚಿತ್ರಗಳು, ಬಾಲಕರು ಬರೆದ ಚಿತ್ರಗಳು ಇವುಗಳೆಲ್ಲವೂ ಕ್ರಮವಾಗಿ ಇಡಲ್ಪಟ್ಟಿದ್ದುವು. ಈ ಕಾರ್ಯವನ್ನು ಮಕ್ಕಳು ಯಾವರೀತಿಯಲ್ಲಿ ಮಾಡುವರೆಂಬುದನ್ನು ತೋರಿಸುವ ಫೋಟೋ ಚಿತ್ರಗಳೂ ವಿಶೇಷವಾಗಿದ್ದುವು. ಮಕ್ಕಳು ರಜಾ ಕಾಲಗಳಲ್ಲಿ ಗ್ರೀನಿಚ್ ಪಾರ್ಕ್ ಮೊದಲಾದ ಸ್ಥಳಗಳಿಗೆ ಹೋಗಿ ನೋಡಿದ ಅಂಶಗಳನ್ನು ಚಿತ್ರರೂಪದಲ್ಲಿ ಬಹಳ ಚೆನ್ನಾಗಿ ಬರೆದಿಟ್ಟಿದ್ದರು. ಪ್ರತಿನಿತ್ಯವೂ ತರಗತಿಯಲ್ಲಿ ಮಕ್ಕಳು ಬರೆದ ಎರಡು ಕ್ಯಾಲಂಡರ್ ಪಠಗಳು ಇಡಲ್ಪಟ್ಟಿದ್ದುವು. ಈ ವಸ್ತುಗಳಿಂದ ಈಗಿನ ಕ್ರಮಕ್ಕನುಸಾರವಾಗಿ ಸಣ್ಣಮಕ್ಕಳ ಶಿಕ್ಷಣವನ್ನು ಯಾವ ರೀತಿಯಲ್ಲಿ ನಡೆಸಬೇಕೆಂಬುದು ಚೆನ್ನಾಗಿ ಕಾಣುತಿತ್ತು.

(೬). ಮ್ಯಾನ್ಯೂಲ್ ಟ್ರೇನಿಂಗಿಗೆ ಸಂಬಂಧಪಟ್ಟ ವಸ್ತುಗಳು. ಇಂಗ್ಲೆಂಡಿನಲ್ಲಿ ಮ್ಯಾನ್ಯೂಲ್ ಟ್ರೇನಿಂಗ್ ಕೆಲಸದಲ್ಲಿ ಬಾಲಕರು ಮಾಡಿದ ವಸ್ತುಗಳು ಅನೇಕವಾಗಿದ್ದುವು. ನಮ್ಮ ದೇಶದಲ್ಲಿ ಮ್ಯಾನ್ಯೂಲ್ ಟ್ರೇನಿಂಗ್ ಪಾಠವನ್ನು ಇಡಲು ಬಂದಿರುವ ಡಾಕ್ಟರ್ ಲಾರ್ಸನ್ ಸಾಹೇಬರು ಇಟ್ಟಿದ್ದ ಅನೇಕ ವಸ್ತುಗಳು ಇದ್ದುವು. ಇದರಲ್ಲಿ ಮೂರುವರ್ಷಗಳಲ್ಲಿ ಬಾಲಕರಿಂದ ಯಾವಯಾವ ವಸ್ತುಗಳನ್ನು ಮಾಡಿಸಬಹುದೋ ಅವುಗಳೆಲ್ಲವೂ ಕ್ರಮವಾಗಿ ಇಡಲ್ಪಟ್ಟಿದ್ದುವು. ಈ ವಸ್ತುಗಳನ್ನು ಮಾಡುವಾಗ ಮಕ್ಕಳು ಯಾವರೀತಿಯಲ್ಲಿ ನಿಲ್ಲಬೇಕೆಂಬುದನ್ನು ತೋರಿಸುವ ಪಠಗಳೂ ಅನೇಕವಾಗಿದ್ದುವು. ಕ್ರಮವಾಗಿ ನಿಂತು ಕೆಲಸಮಾಡದೇ ಇರುವುದರಿಂದಾಗುವ ಕೇಡುಗಳನ್ನು ತೋರಿಸುವ ಪಠಗಳೂ ಕೆಲವಿದ್ದುವು. ಮ್ಯಾನ್ಯೂಲ್ ಟ್ರೇನಿಂಗಿನ ಉದ್ದೇಶವನ್ನು ತೋರಿಸುವ ಪುಸ್ತಕಗಳೂ ಇಡಲ್ಪಟ್ಟಿದ್ದುವು.

ಇನ್ನೊಂದು ಭಾಗದಲ್ಲಿ ನಮ್ಮ ದೇಶದಿಂದ ಬಂದಿದ್ದ ವಸ್ತುಗಳೆಲ್ಲವೂ ಕ್ರಮವಾಗಿ ಇಡಲ್ಪಟ್ಟಿದ್ದುವು. ಇವುಗಳಲ್ಲಿ ಮುಖ್ಯವಾದುವನ್ನು ಇಲ್ಲಿ ಸೂಚಿಸುವೆವು.

(1) ಮೈಸೂರು ನಾರ್ಮಲ್ ಸ್ಕೂಲಿನಿಂದ ಅತ್ಯುತ್ತಮವಾದ ಚಿತ್ರಗಳೂ, ಮಣ್ಣಿನ ಮಾದರಿಗಳೂ ಬಂದಿದ್ದುವು. ಡ್ರಾಯಿಂಗ್ ಮಾಸ್ಟರ್ ಮು॥ ರಾ॥ ಜಗದೀಶಂ ಯೆಂಬುವರು ಬರೆದಿದ್ದ ಚಾಕ್ ಡ್ರಾಯಿಂಗ್ ಗಳೂ, ವಿದ್ಯಾರ್ಥಿಗಳು, ಬರೆದಿದ್ದ ಪೆನ್ಸಿಲ್ ಮತ್ತು ಚಾಕ್ ಡ್ರಾಯಿಂಗ್ ಗಳೂ ಬಹಳ ಶ್ಲಾಘ್ಯವಾಗಿದ್ದುವು. ವಸ್ತುಪಾಠಗಳನ್ನು ಜೋಡಿಸಲು ವಿದ್ಯಾರ್ಥಿಗಳು ಬರೆದಿದ್ದ ಟಿಪ್ಪಣಿಗಳೂ ಚಿತ್ರಗಳೂ ಚೆನ್ನಾಗಿದ್ದುವು. ವಿದ್ಯಾರ್ಥಿಗಳು ಮಣ್ಣಿನಲ್ಲಿ ಮಾಡಿದ ಕಾಯಿಪಲ್ಯಗಳು ಚೆನ್ನಾಗಿದ್ದುವು. ಕಥೆಗಳಿಗೆ ವಸ್ತುರೂಪವಾದ ನಿದರ್ಶನವನ್ನು ಕೊಡುವುದಕ್ಕಾಗಿ ಡ್ರಾಯಿಂಗ್ ಮಾಸ್ಟರು ಮಾಡಿದ್ದ ಮಾದರಿಗಳು ಬಹಳ ಶ್ಲಾಘ್ಯವಾಗಿದ್ದುವು. ಕಾಗೆ, ನರಿ, ತೋಳ, ಕೊಕ್ಕರೆ, ಈ ಕಥೆಗಳ ಸಾರಾಂಶವು ಬಹಳ ಸ್ಪಷ್ಟವಾಗಿಕಾಣುವಂತಿತ್ತು.

(2) ಮೈಸೂರಲ್ಲಿರುವ ಗೌರ್ನಮೆಂಟ್ ಇಂಡ್ರಸ್ಟ್ರಿಯಲ್ ಸ್ಕೂಲಿನಿಂದ ಬಹಳ ಶ್ಲಾಘ್ಯವಾದ ಚಿತ್ರಗಳೂ, ಮಣ್ಣಿನ ಮಾದರಿಗಳೂ ಬಂದಿದ್ದುವು. ಬ್ರಷ್ ಕೆಲಸದ ಚಿತ್ರಗಳೂ, ಚಾಕ್ ಡ್ರಾಯಿಂಗ್ ಗಳೂ, ಪೆನ್ಸಿಲ್ ಕೆಲಸದ ಚಿತ್ರಗಳು ಅನೇಕವಾಗಿದ್ದುವು. ಬಣ್ಣ ಹಾಕುವುದನ್ನು ತೋರಿಸುವುದಕ್ಕಾಗಿ ಬಾಲಕರು ಬರೆದಿದ್ದ ಚಿತ್ರಗಳು ಚೆನ್ನಾಗಿದ್ದವು.

(3) ಮೈಸೂರು ಇಂಜನಿಯರಿಂಗ್ ಸ್ಕೂಲಿನಿಂದ ಉತ್ತಮವಾದ ಕಟ್ಟಡಗಳ ಪ್ಲಾನ್ ಮುಂತಾದ ಚಿತ್ರಗಳು ಬಂದಿದ್ದುವು. ಈ ಸ್ಕೂಲಿನವರು ಕಳುಹಿಸಿದ ಮೈಸೂರು ದೇಶದ ರಿಲೀಫ್ ಮ್ಯಾಪ್ ಬಹಳ ಚೆನ್ನಾಗಿತ್ತು.

(4) ಮಹಾರಾಣಿ ಕಾಲೇಜಿನವರು ಕಳುಹಿಸಿದ್ದ ಚಾಕ್ ಡ್ರಾಯಿಂಗ್ ಗಳು ಚೆನ್ನಾಗಿದ್ದುವು, ಕೆಲವರು ಉತ್ತಮವಾದ ಭೂಪಠಗಳನ್ನು ಬರೆದಿದ್ದರು. ಈ ಸ್ಕೂಲಿನ ಡ್ರಾಯಿಂಗ್ ಮಾಸ್ಟರಾದ ಮು॥ ರಾ॥ ಕೇಶವಯ್ಯ ನವರು ಬರೆದಿದ್ದ ಭಾವ ಚಿತ್ರಗಳು ಬಹಳ ಚೆನ್ನಾಗಿದ್ದುವು. ಇವರು ಮಿನರ್ವಾ ಯೆಂಬ ಚಾಕ್ ಡ್ರಾಯಿಂಗನ್ನು ಬಹಳ ಶ್ಲಾಘ್ಯವಾಗಿ ಬರೆದಿದ್ದರು.

(5) ಕೊಡಗಿನ ಸ್ಕೂಲುಗಳಿಂದ ಮದ್ರಾಸು ಪ್ರದರ್ಶನಕ್ಕೆ ಬಂದಿದ್ದ ವಸ್ತುಗಳೆಲ್ಲವು ಇಲ್ಲಿಯೂ ಬಂದಿದ್ದುವು. ಇವುಗಳ ವಿಷಯವನ್ನು ಹಿಂದಿನ ಸಂಚಿಕೆಯಲ್ಲಿ ವಿವರಿಸಿರುವುದರಿಂದ ಇಲ್ಲಿ ಬರೆಯಬೇಕಾದುದಿಲ್ಲ.

(6) ಅನೇಕ ಗರ್ಲ್ಸ್ ಸ್ಕೂಲುಗಳಿಂದ ಕಸೂತಿಯ ಕೆಲಸಗಳು ಬಂದಿದ್ದುವು. ಈ ಭಾಗದಲ್ಲಿ ಇನ್ನೂ ವಿಶೇಷವಾದ ಅಭಿವೃದ್ಧಿಗೆ ಅವಕಾಶ ವಿರುವುದು.

(7) ಭೂಗೋಳ ಪಾಠದಲ್ಲಿ ಮೈಸೂರು ದೇಶದ ಕೈಗಾರಿಕೆಯ ವಿಷಯವನ್ನು ತಿಳಿಸಲು ಆಯಾಯ ಭಾಗಗಳಲ್ಲಿ ಆಯಾಯ ಕೈಗಾರಿಕೆಯ ಪದಾರ್ಥಗಳನ್ನು

ಅಂಟಿಸಿದ್ದ ಭೂಪಠಗಳು ಮೈಸೂರು ವಿಕ್ಟೋರಿಯ ಗರ್ಲ್ಸ್ ಸ್ಕೂಲಿನಿಂದಲೂ, ನಾರ್ಮಲ್ ಸ್ಕೂಲಿನಿಂದಲೂ ಬಂದಿದ್ದುವು. ಇವು ಶ್ಲಾಘ್ಯವಾಗಿದ್ದುವೆಂದು ಹೇಳ ಬೇಕಾದುದೇ ಇಲ್ಲ.

(8) ಕಿಂಡರ್ ಗಾರ್ಟ್ನ್ ಆಟಗಳಲ್ಲಿ ಮಕ್ಕಳು ಮಾಡಿದ ವಸ್ತುಗಳೂ ಚಿತ್ರ ಗಳೂ ಅನೇಕವಾಗಿದ್ದುವು, ಕಾಗದದ ಬೀಸಣಿಗೆಗಳು, ಗಿಡಗಳು ಇವು ಚೆನ್ನಾಗಿದ್ದುವು. ಬೆಂಗಳೂರು ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಿಂದ ಬಂದಿದ್ದ ಕಾಗದ ವನ್ನು ಮಡಿಸಿ ಮಾಡಿದ ಪದಾರ್ಥಗಳು ಚೆನ್ನಾಗಿದ್ದುವು.

(9) ಮೈಸೂರಲ್ಲಿರುವ ಕಿವುಡ ಮೂಗರ ಸ್ಕೂಲಿನಿಂದ ಅನೇಕ ಉತ್ತಮ ವಾದ ವಸ್ತುಗಳು ಬಂದಿದ್ದುವು. ಜೊಂಡಿನ ಮಂದಲಿಗೆಗಳು, ಒಳ್ಳೇ ಚಕ್ ಬಟ್ಟೆ ಗಳು, ತೆಂಗಿನ ನಾರಿನ ಜಂಖಾನಗಳು, ಬೆತ್ತದ ತಟ್ಟೆಗಳು, ಮಣಿಯ ಪರದೆಗಳು ಇವುಗಳೆಲ್ಲವೂ ಆ ಸ್ಕೂಲಿನಿಂದ ಬಂದಿದ್ದುವು.

(10) ಮೇಲ್ಕೋಟೆ ಸ್ಕೂಲಿನಿಂದ ಬಂದಿದ್ದ ವಸ್ತುಪಾಠದ ಪಠಗಳು, ಭೂ ಗೋಳ ಪಾಠದಲ್ಲಿ ಉಪಯೋಗಿಸಲು ಅನುಕೂಲವಾದ ಮಣ್ಣಿನ ಮಾದರಿಯು ಬಹಳ ಚೆನ್ನಾಗಿದ್ದುವು.

ಅತ್ಯಲ್ಪ ಕಾಲದಲ್ಲಿ ನಮ್ಮ ದೇಶದ ಪಾಠಶಾಲೆಗಳು ಇಷ್ಟು ವಸ್ತುಗಳನ್ನು ಕಳುಹಿಸಿದುದು ಆಶ್ಚರ್ಯಕರವಾಗಿತ್ತು. ಈ ವಸ್ತುಗಳಿಂದ ಈ ಪಾಠಶಾಲೆಯ ಉಪಾ ಧ್ಯಾಯರಿಗೆ ವಿದ್ಯಾಭ್ಯಾಸದ ಅಭಿವೃದ್ಧಿಯ ವಿಷಯದಲ್ಲಿರುವ ಬಹಳವಾದ ಆಸ ಕ್ತಿಯು ಸ್ಪಷ್ಟವಾಗಿ ಕಾಣುತ್ತಿತ್ತು. ಈ ಪ್ರದರ್ಶನವನ್ನು ನೋಡಲು ಸರ್ಕಾರದ ವರು ದಯವಿಟ್ಟು ಎಲ್ಲಾ ಇನ್‌ಸ್ಪೆಕ್ಟರುಗಳನ್ನೂ, ಹೈಸ್ಕೂಲು ಹೆಡ್ಮಾಸ್ಟರುಗಳನ್ನೂ ಕೆಲವು ಅಸಿಸ್ಟೆಂಟ್ ಮಾಸ್ಟರುಗಳನ್ನೂ, ಇಂಗ್ಲೀಷ್ ಮತ್ತು ಕನಡ ಲೋವರ್ ಸೆಕಂಡರಿ ಸ್ಕೂಲ್ ಹೆಡ್ಮಾಸ್ಟರುಗಳನ್ನೂ, ನಾರ್ಮಲ್ ಸ್ಕೂಲ್ ಹೆಡ್ಮಾಸ್ಟರುಗಳನ್ನೂ ಅನೇಕ ಹೋಬಳಿ ಸ್ಕೂಲ್ ಮಾಸ್ಟರುಗಳನ್ನೂ ಕರೆಸಿದ್ದರು. ಇವರು ಈ ಪ್ರದರ್ಶ ನದಲ್ಲಿದ್ದ ವಸ್ತುಗಳನ್ನು ನೋಡಿ ಅವುಗಳ ವಿಷಯದಲ್ಲಿ ಟಿಪ್ಪಣಿಗಳನ್ನು ಬರೆದುಕೊಂ ಡರು. ಇದರಿಂದ ದೇಶದ ವಿದ್ಯಾಭ್ಯಾಸವು ಅಭಿವೃದ್ಧಿಗೆ ಬರಲು ಸಂಶಯವಿ ಲ್ಲವೆಂದು ತೋರುವುದು. ಈ ಪ್ರದರ್ಶನದ ಸಂಬಂಧವಾಗಿ ಅನೇಕ ಉತ್ತಮವಾದ ಉಪನ್ಯಾಸಗಳೂ, ಮ್ಯಾಜಿಕ್ ಲ್ಯಾಂಟರ್ನ್ ಪ್ರದರ್ಶನಗಳೂ ನಡೆದುವು. ಈ ಉಪನ್ಯಾಸಗಳ ವಿಷಯವನ್ನು ಮುಂದಿನ ಸಂಚಿಕೆಗಳಲ್ಲಿ ತಿಳಿಸುವೆವು.

———:o:———

ಅಕ್ಟೋಬರ್ 30 ನೇ ತಾರೀಖಿನ ದಿನ ಮ್ಯಾನ್ಯುಅಲ್ ಟ್ರೇನಿಂಗ್ ತರಗ ತಿಗೆ ಇಂಗ್ಲೆಂಡಿನಿಂದ ಒಬ್ಬರು ದೊಡ್ಡ ಮನುಷ್ಯರು ಬಂದಿದ್ದರು. ಇವರು ಹಿಂ ದೂಸ್ಥಾನದ ಏಳಿಗೆಯಲ್ಲಿ ವಿಶೇಷ ಆಸಕ್ತಿಯುಳ್ಳವರಾದುದರಿಂದ ಇವರು ಬಂದಾಗ

ನಡೆದ ವಿಷಯವನ್ನು ತಿಳಿಸುವುದು ಅವಶ್ಯಕವು. ಇಂಗ್ಲೆಂಡಿನ ಪಾರ್ಲಿಮೆಂಟ ಮೆಂಬರಾದ ಮೆ॥ ಕೆರ್ ಹಾರ್ಡಿ ಎಂಬುವರೇ ಆದಿವಸ ಬಂದಿದ್ದ ದೊಡ್ಡಮನುಷ್ಯರು. ಇವರು ಪಾರ್ಲಿಮೆಂಟಿನಲ್ಲಿ ಲೇಬರ್ ಪಾರ್ಟಿ ಯೆಂಬ ಸಂಘಕ್ಕೆ ಮುಖಂಡರು. ಇವರು ಬೆಂಗಳೂರಿಗೆ ಬಂದೊಡನೆಯೇ ಅಲ್ಲಿ ಮ್ಯಾನ್ಯೂಲ್ ಟ್ರೇನಿಂಗ್ ತರಗತಿ ತೆರುವುದನ್ನು ಕೇಳಿ ಕೂಡಲೇ ಅದನ್ನು ನೋಡುವುದಕ್ಕೆ ಬಂದರು. ಅಲ್ಲಿ ಸುಮಾರು ಅರ್ಧ ಘಂಟೆಯ ವರೆಗೂ ಉಪಾಧ್ಯಾಯರು ಕೆಲಸ ಮಾಡುವುದನ್ನು ನೋಡಿದರು. ಮತ್ತು ಅವರು ಮಾಡಿ ಇಟ್ಟಿದ್ದ ಪದಾರ್ಥಗಳನ್ನು ನೋಡಿದರು. ಇದರಿಂದ ಅವರಿಗೆ ವಿಶೇಷ ತೃಪ್ತಿಯಾಯಿತು. ಅನಂತರ ಸುಮಾರು ಹದಿನೈದು ನಿಮಿಷಗಳ ವರೆಗೆ ಮುಂದೆ ಹೇಳುವ ರೀತಿಯಲ್ಲಿ ಮಾತನಾಡಿದರು.

" ಮಹನೀಯರೆ—ನಾನು ಬೆಂಗಳೂರಿಗೆ ಬಂದೊಡನೆಯೇ ಇಲ್ಲಿ ಡಾಕ್ಟರ್ ಲಾರ್ಜ್ ಸಾಹೇಬರು ಒಂದು ಮ್ಯಾನ್ಯೂಲ್ ಟ್ರೇನಿಂಗ್ ತರಗತಿಯನ್ನು ನಡೆಸುವುದನ್ನು ಕೇಳಿ ಅದನ್ನು ನೋಡಲು ಬಂದೆನು. ನೀವು ಕೆಲಸಮಾಡುವ ರೀತಿಯನ್ನೂ, ಮಾಡಿ ಇಟ್ಟಿರುವ ಪದಾರ್ಥಗಳನ್ನೂ ನೋಡಿ ನನಗೆ ಬಹಳ ತೃಪ್ತಿಯಾಯಿತು. ಈ ವಿಧವಾದ ಕೆಲಸದಲ್ಲಿ ನಾನು ಬಹಳ ದಿವಸಗಳಿಂದಲೂ ನಿರತನಾಗಿರುವೆನು. ನಿಮಗೂ ಈ ಕೆಲಸದಲ್ಲಿ ಇಷ್ಟವಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಈಗ ಹಿಂದೂಸ್ಥಾನಕ್ಕೆ ಭಾಷಾ ಶಾಸ್ತ್ರಗಳ ವಿದ್ಯಾಭ್ಯಾಸಕ್ಕಿಂತಲೂ ಕೈಗಾರಿಕೆಯ ವಿದ್ಯಾಭ್ಯಾಸವು ವಿಶೇಷವಾಗಿ ಆವಶ್ಯಕವಾಗಿರುವುದು. ಕಾರ್ಯದಲ್ಲಿ ಪ್ರಯುಕ್ತವಾಗದ ಅಭಿಪ್ರಾಯಗಳಲ್ಲಿ ನನಗೆ ಅಭಿರುಚಿಯಿಲ್ಲ, ಈ ಅಭಿಪ್ರಾಯಗಳನ್ನು ಕಾರ್ಯದಲ್ಲಿ ಉಪಯೋಗಿಸಲು ಪ್ರಯತ್ನ ಪಡುವುದೇ ನನ್ನ ಮತವಾಗಿರುವುದು. ಹಿಂದೂಸ್ಥಾನದಲ್ಲಿ ಸ್ವಾಭಾವಿಕವಾದ ಅನೇಕ ಅನುಕೂಲಗಳಿರುವುವು. ಮತ್ತು ಅನೇಕ ಕೈಗಾರಿಕೆಗಳು ಹಿಂದೆ ಇಲ್ಲಿ ಉತ್ತಮಸ್ಥಿತಿಯಲ್ಲಿದ್ದುವು. ಈಗ ಇವು ಹೀನಸ್ಥಿತಿಯಲ್ಲಿರುವುದು ಬಹಳ ಶೋಚನೀಯವಾದ ಅಂಶವು. ನಿಮ್ಮಿಂದ ಈ ಕೈಗಾರಿಕೆಗಳು ಅಭಿವೃದ್ಧಿಗೆ ಬರಲು ಪ್ರೋತ್ಸಾಹ ಉಂಟಾಗಿ ದೇಶೋನ್ನತಿಗೆ ಸಹಾಯವಾಗಬೇಕೆಂದು ನಾನು ಕೋರುವೆನು. ಮೈಸೂರು ಸಂಸ್ಥಾನದವರು ಮ್ಯಾನ್ಯೂಲ್ ಟ್ರೇನಿಂಗನ್ನು ಮೊದಲು ಹಿಂದೂಸ್ಥಾನಕ್ಕೆ ತಂದುಗಕ್ಕಾಗಿ ನಾನು ಬಹಳ ಸಂತೋಷ ಪಡುವೆನು. ಹೀಗೆಯೇ ಇತರ ಸಂಸ್ಥಾನಗಳೂ ಬ್ರಿಟಿಷ್ ರಾಜ್ಯಗಳೂ, ಈ ಪಾಠವನ್ನು ತಮ್ಮ ರಾಜ್ಯಗಳಲ್ಲಿ ಇಡಬೇಕೆಂದು ನಾನು ಕೋರುವೆನು. ಇಂಗ್ಲೆಂಡಿಗೆ ನಾನು ಹೋದಮೇಲೆ ಹಿಂದೂ ಸ್ಥಾನದ ವಿಷಯವನ್ನು ಮಾತನಾಡುವಾಗ ಅಲ್ಲಿನ ಜನರಿಗೆ ಬೆಂಗಳೂರಲ್ಲಿರುವ ಮ್ಯಾನ್ಯೂಲ್ ಟ್ರೇನಿಂಗ್ ತರಗತಿಯ ವಿಷಯವನ್ನು ತಿಳಿಸುವೆನು. ನಿಮ್ಮ ಕೆಲಸದಲ್ಲಿ ನಿಮಗೆ ದೇವರು ಸರಿಯಾದ ಫಲವನ್ನು ಕೊಡಬೇಕೆಂದು ನಾನು ದೇವರನ್ನು ಪ್ರಾರ್ಥಿಸುವೆನು. "

ಮೈಸೂರಿಂದ ಬಂದಿರುವ ಮು॥ ರಾ॥ ವೆಂಕಟ ಸುಬ್ಬಯ್ಯನವರು ಮುಂದಿನ ಉತ್ತರವನ್ನು ಕೊಟ್ಟರು:—"ತಾವು ದಯವಿಟ್ಟು ಬೆಂಗಳೂರಿಗೆ ಬಂದೊಡನೆಯೇ ಮ್ಯಾನ್ಯೂಲ್ ಟ್ರೇನಿಂಗ್ ತರಗತಿಗೆ ಬಂದುದಕ್ಕಾಗಿಯೂ, ನಮ್ಮ ಕೆಲಸದ ವಿಷಯದಲ್ಲಿ ತಾವು ಹೇಳಿದ ಅಭಿಪ್ರಾಯಕ್ಕಾಗಿಯೂ ಮ್ಯಾನ್ಯೂಲ್ ಟ್ರೇನಿಂಗ್ ತರಗತಿಯ ಪರವಾಗಿ ನಾನು ತಮ್ಮನ್ನು ವಂದಿಸುವೆನು. ತಮ್ಮ ಹೇಳಿಕೆಯಲ್ಲಿ ತಾವು ಸೂಚಿಸಿರುವ ಅಭಿಪ್ರಾಯವನ್ನು ನೆರವೇರಿಸಲು ಪ್ರಯತ್ನ ಪಡುವುದೇ ತಾವು ತೋರಿಸಿರುವ ದಯೆಗೆ ನಾವು ಕೊಡುವ ಪ್ರತಿಫಲವಾಗಿರುವುದು. ತಮ್ಮನ್ನು ನೋಡಿದ ಈ ದಿವಸವನ್ನು ನಾವು ಸುದಿವಸವೆಂದು ಎಣಿಸುವೆವು; ಈ ದಿವಸದ ಸ್ಮರಣೆಯು ಯಾವಾಗ್ಗೂ ನಮಗೆ ಸಂತೋಷವನ್ನುಂಟುಮಾಡುವುದು."

—:o:—

ಕಿಂಡರ್ ಗಾರ್ಟ್ನ್ ಶಿಕ್ಷಣ ಕ್ರಮವನ್ನು ಸರಿಪಡಿಸಲು ಈ ಸಂಸ್ಥಾನಕ್ಕೆ ಮಿಸ್ ಲ್ಯಾಟರ್ ಎಂಬುವರನ್ನೂ, ಮ್ಯಾನ್ಯೂಲ್ ಟ್ರೇನಿಂಗ್ ಪಾಠವನ್ನಿಡಲು ಡಾಕ್ಟರ್ ಲಾರ್ಸ್ಸ್ ಸಾಹೇಬರನ್ನು ಸರ್ಕಾರದವರು ಕರೆಸಿರುವರಷ್ಟೆ. ಕಿಂಡರ್ ಗಾರ್ಟ್ನ್ ಕಾಲವಾದಮೇಲೆ ಮಕ್ಕಳು ಮರಗೆಲಸವನ್ನು ಪ್ರಾರಂಭಿಸಲು ಸ್ವಲ್ಪಕಾಲ ಬೇಕಾಗುವುದು. ಅವರ ಅಂಗಗಳಿಗೆ ಬಲಬರುವುದಕ್ಕೆ ಮೊದಲು ಅಂದರೆ ಹತ್ತು ಹನ್ನೊಂದು ವಯಸ್ಸಿನವರೆಗೆ ಅವರ ಹಸ್ತಕೌಶಲವನ್ನು ಹೆಚ್ಚಿಸಲು ಯಾವುದಾದರೂ ಒಂದು ಏರ್ಪಾಡಿರಬೇಕಷ್ಟೆ. ಕಾಗದಗಳನ್ನೂ, ರಟ್ಟುಗಳನ್ನೂ ಕತ್ತರಿಸಿ ನಾನಾವಿಧವಾದ ಆಕೃತಿಗಳನ್ನು ಮಾಡುವುದೇ ಈ ವಯಸ್ಸಿನಲ್ಲಿ ಬಾಲಕರಿಂದ ಮಾಡಿಸಬಹುದಾದ ಕೆಲಸವಾಗಿರುವುದು. ಮಕ್ಕಳಿಂದ ಈ ಕೆಲಸವನ್ನು ಸರಿಯಾಗಿ ಮಾಡಿಸ ಬೇಕಾದರೆ ಉಪಾಧ್ಯಾಯರು ಶಿಕ್ಷಿತರಾಗಬೇಕಷ್ಟೆ, ಈ ಭಾಗದಲ್ಲಿ ಇವರಿಗೆ ಟ್ರೇನಿಂಗ್ ಕೊಡಲು ಸರ್ಕಾರದವರು ಮಿಸ್. ಬ್ರೌನ್ ಎಂಬುವರನ್ನು ನಿಯಮಿಸಿರುವರು. ಇವರು ಬೊಂಬಾಯಿ ಅಧಿಪತ್ಯದ ಕೊಲ್ಹಾಪುರದಲ್ಲಿ ಇದೇ ಕೆಲಸವನ್ನು ಮಾಡುತಿರುವರು. ಡಾಕ್ಟರ್ ಲಾರ್ಸ್ಸ್ ಸಾಹೇಬರು ಅಧ್ಯಕ್ಷರಾಗಿರುವ ಬಾಸ್ಟ್ನ ನಗರದ ಮ್ಯಾನ್ಯೂಲ್ ಟ್ರೇನಿಂಗ್ ಪಾಠಶಾಲೆಯಲ್ಲಿ ಇವರು ಶಿಕ್ಷಿತರಾದವರು. ಇವರು ಎರಡು ವಾರಗಳ ವರೆಗೆ ಮಾತ್ರ ಬೆಂಗಳೂರಲ್ಲಿದ್ದು ಮ್ಯಾನ್ಯೂಲ್ ಟ್ರೇನಿಂಗ್ ತರಗತಿಯಲ್ಲಿರುವ ಉಪಾಧ್ಯಾಯರಿಗೆ ರಟ್ಟಿನ ಕೆಲಸವನ್ನು ಕಲಿಸುವರು. ಇವರು ನವಂಬರ್ 1 ನೇ ತಾರೀಖಿನಿಂದ ಕೆಲಸಮಾಡುತಿರುವರು. ಇವರ ಕೆಲಸವು ಬಹಳ ಶ್ಲಾಘ್ಯವಾಗಿರುವುದು.

ವ್ಯಾಕರಣಶಾಸ್ತ್ರ

(205 ನೇ ಪುಟದ ಶೇಷ)

ಅಚ್ಚ ಗನ್ನಡದಲ್ಲಿ ಕವರ್ಗ ಚವರ್ಗ ಪಂಚಮಾಕ್ಷರಗಳಿರುವವೇ ? ಯೆಂಬ ವಿಚಾರದಲ್ಲಿ ಹಿಂದೆ—ತಿಳಿದೇಶೀಯಮನ್ಯೈದಂ—ಇತ್ಯಾದಿಯಾದ ಶಬ್ದಮಣಿದರ್ಪಣದ ಸೂತ್ರದ ಮೇಲೆ ಹೇಳಿದ ದೂಷಣೆಯನ್ನು ವಾರಣೆ ಮಾಡಬೇಕಾಗಿದೆಯಾಗಿ ಆ ದೂಷಣೆಯನ್ನು ವಾರಣೆ ಮಾಡಬೇಕಾದರೆ ಶಬ್ದಾನು ಶಾಸನದ ಮೇಲೆಯೂ ಇತರ ಗ್ರಂಥಗಳ ಮೇಲೆಯೂ ಹೇಳಿದ ದೂಷಣೆಯನ್ನು ವಾರಣೆಮಾಡಬೇಕಾದ ಕಾರಣ ಶಬ್ದಾನು ಶಾಸನದ ಮೇಲೆ ಹೇಳಿದ ದೋಷವನ್ನು ವಾರಣಿಮಾಡುವದು ಸಾಧ್ಯವೇ ? ಯೆಂಬಂಶವನ್ನು ಮೊದಲು ವಿಚಾರಮಾಡಿ ನೋಡೋಣ—

ಹಿಂದೆ॥ ಮೊನಸ್ಸ್ವರೆ ॥77॥ ಎಂಬ ಕರ್ಣಾಟಕ ಶಬ್ದಾನುಶಾಸನದ ಸೂತ್ರವು ಪದಾಂತ ವಿಷಯಕವಿದಂ—ಅಂದರೆ ಪದಾನ್ತದಲ್ಲಿ ಪ್ರವರ್ತಿಸುವುದು. ಎಂಬ ಜ್ಞಾಪನ ಬಲದಿಂದ ಪದಾನ್ತ ವಿಷಯಕ ವೆಂದು ಹೇಳಿದರೂ—ವಿಷ್ಣುವಕ್ಕುಮ್ + ಈತಂ, ಇವರ್ತಾಮ್ + ಅಸುರರ್, ವಿಷ್ಣುವಿಂದಮ್ + ಈಲೋಕಂ-ಇತ್ಯಾದಿಗಳಲ್ಲಿ ಪದಾನ್ತವಾದ ಮಕಾರ ವಿರುವುದರಿಂದ ಈ ॥ ಮೋನಸ್ಸ್ವರೆ ॥77॥ ಎಂಬ ಸೂತ್ರವನ್ನನುಸರಿಸಿ ನಕಾರಾದೇಶವು ಬರಬೇಕಾಗುವುದು ಎಂದು ಆಕ್ಷೇಪಿಸಿದೆಯಲ್ಲವೇ? ಈ ಆಕ್ಷೇಪಣೆಯು ವ್ಯಾಖ್ಯಾಕಾರನ ಅಭಿಪ್ರಾಯದ ಮೇಲೆ ಬರುವುದೇ ಹೊರತು ಸೂತ್ರದ ಮೇಲೆ ಬರಲಾರದು—ಸರಿಯಾಗಿ ನೋಡಿದಲ್ಲಿ ಸೂತ್ರಗಳು ದೋಷಾಕ್ರಾನ್ತ ವಾಗದನ್ತೆ ಸೂತ್ರಿಸಲ್ಪಟ್ಟಿವೆ. ಮುಂದಿನ ವಿಚಾರವನ್ನು ನೋಡಿದರೆ ಈ ಸೂತ್ರಗಳ ಮೇಲೆ ಹಿಂದೆ ಹೇಳಿದ ಆಕ್ಷೇಪಣೆಯು ಹತ್ತುವದಿಲ್ಲವೆಂಬಂಶವೂ ಮೇಧಾವಿಯಾದ ಯಾರೋ ಒಬ್ಬನು ಬರೆದ ಶಬ್ದಾನುಶಾಸನದ ಸೂತ್ರವನ್ನು ಭಟ್ಟಾ ಕಳಂಕನು ಅಪಹರಿಸಿ ತನ್ನ ಹೆಸರನ್ನಿಟ್ಟುಕೊಂಡಿರುತ್ತಾನೆ ಯೆಂಬಂಶವೂ ವಿದಿತವಾಗದಿರಲಾರದು—

ಪ್ರಕೃತದಲ್ಲಿ ॥ ಮೋನಸ್ಸ್ವರೆ ॥ 77 ॥ ಎಂಬ ಸೂತ್ರವು ಪದಾನ್ತ ವಿಷಯಕ ವೆಂದು ಹೇಳದೆ—ಮ್—ಅಮ್—ಇಮ್—ಅತ್ತಣಿಮ್—ಎಂಬ ಸುಪ್ರತ್ಯಯದಲ್ಲಿಯೂ, ಮತ್ತು—ಅಮ್—ಎಂಬ ತಿಙ್ಪ್ರತ್ಯಯದಲ್ಲಿಯೂ ಪ್ರವರ್ತಿಸುವುದೇ ಹೊರತು ಮಿಕ್ಕ ಸ್ಥಳದಲ್ಲಿ ಪ್ರವರ್ತಿಸುವುದಿಲ್ಲವೆಂದು ಹೇಳಿದಲ್ಲಿ—ವಿಷ್ಣುವಕ್ಕುಮ್ + ಈತಂ-ಇತ್ಯಾದಿಗಳ ಮೇಲೆ ಹೇಳಿದ ಯಾವ ಆಕ್ಷೇಪಣೆಯೂ ಬರುವುದಿಲ್ಲ—

ಈ ॥ ಮೋನಸ್ಸ್ವರೆ ॥ 77 ॥ ಎಂಬ ಸೂತ್ರವು ಹಿಂದೆ ಹೇಳಿದ ಐದು ಸ್ಥಳದಲ್ಲಿ ಮಾತ್ರವೇ ಪ್ರವರ್ತಿಸುವುದು ಎಂದು ಹೇಳುವುದಕ್ಕೆ ಇದೇ ಶಬ್ದಾನುಶಾಸನದ

॥ ನಕ್ಸ್ವರೆ ॥ 260 ॥ ಎಂಬ ಸೂತ್ರದಲ್ಲಿ ಮಾಡಿರತಕ್ಕ ನಗ್ವಿಧಾನವು ಜ್ಞಾಪಕವಾಗಿರುವದು—ಈ ವಿಷಯವು ಮುಂದಿನ ವಿಚಾರವನ್ನು ನೋಡಿದರೆ ವಿಶದವಾಗುವದು—

ಈ ॥ ನಕ್ಸ್ವರೆ ॥ 260 ॥ ಎಂಬ ಸೂತ್ರದ ಪ್ರಕರಣದಲ್ಲಿ ॥ ಅತೋಮಗ್ಗೆದ್ದಿರಿ ॥ 257 ॥ ಗಳಿ ॥258 ॥ ನಪ್ಯಮಿಚ ಬಹುಳಂ ॥ 259 ॥ ನಕ್ಸ್ವರೆ ॥260॥ ದಗಿಮಾದೌನಪಿ ॥ 261 ॥ ಎಂಬ ಸೂತ್ರಗಳಿರುವುವು. ಇವುಗಳಲ್ಲಿ ॥ ಅತೋಮಗ್ಗೆದ್ದಿರಿ ॥ 257 ॥ ಎಂಬ ಸೂತ್ರವನ್ನು ಮೊದಲು ಮಾಡಿಕೊಂಡು ॥ ನಪ್ಯಮಿಚ ಬಹುಳಂ ॥ ಎಂಬ ಸೂತ್ರದವರಿಗೂ ಅಕಾರಾಂತ ಶಬ್ದಕ್ಕೆ ಅಯಾಯ ಪ್ರತ್ಯಯಗಳು ಪರವಾದಾಗ ಮಗಾಗಮವನ್ನೂ ॥ ನಕ್ಸ್ವರೆ ॥ 260 ॥ ಎಂಬ ಸೂತ್ರದಿಂದ ಸ್ವರಾದಿಯಾದ ವಿಭಕ್ತಿ ಪ್ರತ್ಯಯವು ಪರವಾದಾಗ ಅಕಾರಾನ್ತಪುಂಸ್ತ್ರೀಲಿಂಗ ಶಬ್ದಗಳಿಗೆ ನಗಾಗಮವನ್ನೂ ವಿಧಾನ ಮಾಡಿ ಜಿನನಂ, ಅಕ್ಕನಂ–ಇತ್ಯಾದಿ ರೂಪಸಿದ್ಧಿಯನ್ನು ಮಾಡಿರುತ್ತಾನೆ—॥ ಮೋನಸ್ಸ್ವರೆ ॥ 77 ॥ ಎಂಬ ಸೂತ್ರವು ಹಿಂದೆ ಹೇಳಿದ ಐದು ಸ್ಥಳದಲ್ಲಿ ಅಲ್ಲದೆ ಸರ್ವ ಮಕಾರದಲ್ಲಿಯೂ ಪ್ರವರ್ತಿಸುವ ಪಕ್ಷದಲ್ಲಿ ॥ ನಕ್ಸ್ವರೆ ॥ 260 ಎಂಬ ಸೂತ್ರದಲ್ಲಿ ನಕಂ ಎಂಬ ಅಗಮವನ್ನು ವಿಧಾನಮಾಡದಿದ್ದರೂ ಈ ರೂಪವು ಸಿದ್ಧಿಸುವುದು—ಅಂದರೆ ॥ ಅತೋ ಮಗ್ಗೆದ್ದಿರಿ ॥ 257 ॥ ಗಳಿ ॥ 258 ॥ ನಪ್ಯಮಿಚ ಬಹುಳಂ ॥ 259 ॥ ಸ್ವರೇ ॥ 260 ॥ ದಗಿಮಾದೌನಪಿ ॥ 261 ॥ ಎಂದು ಸೂತ್ರನ್ಯಾಸವನ್ನು ಮಾಡಿದ್ದಲ್ಲಿ ಅಕ್ಷರ ಲಾಘವವೂ ಅಲ್ಲದೆ ॥ ಮೋನಸ್ಸ್ವರೆ ॥ 77 ॥ ಎಂಬ ಸೂತ್ರವು ಸರ್ವಮಕಾರದಲ್ಲಿಯೂ ಪ್ರವರ್ತಿಸುವ ಪಕ್ಷದಲ್ಲಿ ಈಗ ನ್ಯಾಸಮಾಡಿದ ಸೂತ್ರದಂತೆ ಮಗಾಗಮವು ಬಂದಿರತಕ್ಕ ಜಿನ+ಮಂ+ಇಮಂ ಎಂಬಲ್ಲಿಯೂ ಪ್ರವರ್ತಿಸಿ ಮಗಾಗಮದಮಕಾರವನ್ನೂ ನಕಾರವನ್ನಾಗಿ ಮಾಡಿ ಜಿನನಂ ಇತ್ಯಾದಿ ರೂಪವನ್ನು ಸಿದ್ಧಿಮಾಡಿಕೊಡುವದು—ಹೀಗಾಗಿ ॥ ನಕ್ಸ್ವರೆ ॥ 260 ॥ ಎಂಬ ಸೂತ್ರದಲ್ಲಿ ನಗ್ವಿವಿಧಾನವು ವ್ಯರ್ಥವಾಗುವುದು. ವ್ಯರ್ಥವಾಗಿ ಹಿಂದೆ ಹೇಳಿದಂತೆ ॥ ಮೋನಸ್ಸ್ವರೆ ॥ 77 ॥ ಎಂಬ ಸೂತ್ರವು ಮಂ, ಅಮಂ, ಇಮಂ, ಅತ್ತಣಿಮಂ—ಎಂಬ ಸುಪ್ಪ್ರತ್ಯಯ ಮತ್ತು ಅಮಂ, ಎಂಬ ತಿಪ್ಪ್ರತ್ಯಯ - ಇವುಗಳಲ್ಲಿ ಮಾತ್ರವೇ ಪ್ರವರ್ತಿಸುವುದು. ಎಂಬಂಶವನ್ನು ಜ್ಞಾಪನಮಾಡಿಕೊಡುವದು. ಹೀಗೆ ॥ ಮೋನಸ್ಸ್ವರೆ ॥ 77 ॥ ಎಂಬ ಸೂತ್ರವು ಈ ಸ್ಥಳದಲ್ಲಿ ಮಾತ್ರ ಪ್ರವರ್ತಿಸುವದರಿಂದ, ಜಿನ+ಮಂ+ಅಮಂ—ಇತ್ಯಾದಿಗಳಲ್ಲಿ ಪ್ರವರ್ತಿಸದೆ ಅನಿಷ್ಟ ರೂಪವು ಸಿದ್ಧಿಸೀತು—ಆದ್ದರಿಂದಲೇ ಈಗಿರುವಂತೆ ಸೂತ್ರವನ್ನು ನ್ಯಾಸ ಮಾಡಬೇಕಾಯ್ತು—ಈ ಜ್ಞಾಪನದಿಂದ ಅನಿಷ್ಟ ರೂಪವು ವಾರಣೆಯಾಗತಕ್ಕ ಕ್ರಮವನ್ನೂ ಹೇಳಿದೆ. ಹೀಗೆ ಅನ್ಯಥಾ ಸಿದ್ಧಿ, ವ್ಯರ್ಥಂ, ವ್ಯರವಾಗಿ ಜ್ಞಾಪನ, ಸ್ವಾಂಶದಲ್ಲಿ ಚಾರಿತಾರ್ಥ್ಯಂ ಅನ್ಯಸ್ಥಳದಲ್ಲಿ ಪ್ರಯೋಜನಂ

ಎಂಬ ಪಂಚಾಂಗವೂ ಬರುವ ಈ ಜ್ಞಾಪನನ್ನು ಸೂತ್ರಕಾರನೆಂದು ಹೇಳಿಕೊಳ್ಳುವ ಭಟ್ಟಾಕಳಂಕನು ಬರೆದಿದ್ದರೆ ಚನ್ನಾಗಿತ್ತು—

ಇನ್ನು " ಮಶ್ಚ್ರುತೆಸ್ಸಂಸ್ಕೃತೊ ವಿಷಯಃ " ಎಂಬಿದು ನಿಜವಾಗಿದ್ದರೆ ನಕಾರವು ಹೇಗೆ ಬಂತು ? ಎಂಬ ಆಕ್ಷೇಪಣೆಗೆ ಗುರಿಯಾದ ॥ ನಪಿವಾ ॥ 78॥ ಎಂಬ ಸೂತ್ರವೂ ಕೂಡ ॥ ನಪ್ಯಮಿಚ ಬಹುಳಂ ॥ 259 ॥ ಎಂಬ ಸೂತ್ರದಲ್ಲಿ ॥ ಅಮಿಚ ಬಹುಳಂ ಎಂದು ಅಮ್ಮಿನಲ್ಲಿ ಬಹುಳ ಗ್ರಹಣಮಾಡಿರುವದರಿಂದ ಪ್ರಥಮೆಯ ಮಕಾರದಲ್ಲಿ ಮಾತ್ರ ಪ್ರವರ್ತಿಸುವದು—ಎಂದು ಜ್ಞಾಪಿತವಾಗುವದು ಮಿಕ್ಕ ಮಕಾರದಲ್ಲಿ ಹಿಂದಿನ ಸೂತ್ರಕ್ಕೆ ವಿಷಯವಾದ ಕಡೆ ನಕಾರವು ಬರುವದು. ಎಂದು ಪುನಶ್ಚ ಹೇಳಬೇಕಾಗಿಲ್ಲ. ಹೀಗಾದಲ್ಲಿ ಹಿಂದೆ ಮಾಡಿದ ಆಕ್ಷೇಪಣೆಯು ಹತ್ತುವದಿಲ್ಲ. ಅನಿಷ್ಟರೂಪವೂ ಸಿದ್ಧಿಸುವುದಿಲ್ಲ—

ಆದರೆ ॥ ನಪ್ಯಮಿಚ ಬಹುಳಂ ॥ 259 ॥ ಎಂಬ ಸೂತ್ರದಲ್ಲಿ, ಅಮಿಚ ಎಂದು ಹೇಳದಿದ್ದರೆ ನಪುಂಸಕ ಲಿಂಗದಲ್ಲಿ ಅಮ್ ಎಂಬ ಸುಪ್ರತ್ಯಯವು ಪರವಾದಾಗ ಮಗಾಗಮವನ್ನು ಎಲ್ಲಿಯೂ ವಿಧಾನಮಾಡದ್ದರಿಂದ—ನೆಲನಂ, ಜಲಮಂ. ಇತ್ಯಾದಿ ರೂಪಗಳು ಸಿದ್ಧಿಸಲಾರದಾದ ಕಾರಣ ತತ್ಸಿದ್ಧಿ ಗಾಗಿ ॥ ನಪ್ಯಮಿಚ ಬಹುಳಂ 259 ॥ ಎಂದು ಸೂತ್ರಿಸುವದು ಅವಶ್ಯವೆಂದು ಹೇಳಬಹುದು ಅದರೂ ಸೂತ್ರಗಳನ್ನು ಮುಂದೆ ಹೇಳತಕ್ಕ ರೀತಿಯಿಂದ ನ್ಯಾಸಮಾಡಿದ್ದರೆ ಅಂದರೆ ॥ ಅತೋನಗ್ಸಿದ್ಧಿರಿ ॥ 257 ॥ ಗಳಿ॥ 258 ॥ ನಪಿಬಹುಳಂ ॥ 259 ॥ ಸ್ವರೆ ॥ 260 ॥ ನಪಿಮಕ್ ॥ 261 ॥ ದಗಿಮಾದೌ ॥ 262॥ ಎಂದು ಸೂತ್ರವನ್ನು ನ್ಯಾಸಮಾಡಿದ್ದಲ್ಲಿ ಸೂತ್ರಸಂಖ್ಯೆಯು ಅಧಿಕವಾದರೂ ಸೂತ್ರಾಕ್ಷರವು ಅಧಿಕವಾಗದೆ ನಪ್ಯಮಿಚ ಬಹುಳಂ ॥ 259 ॥ ಎಂಬ ಸೂತ್ರದಲ್ಲಿ, ಅಮಿಚ—ಎಂಬುದು ಇಲ್ಲದ್ದರಿಂದ ಲಾಘವವೂ ಬರುವದಲ್ಲದೆ, ಅಮಿಚ ಬಹುಳಂ. ಎಂದು ಅನ್ವಯಿಸಬೇಕಾದ ಗೌರವೂ ಇಲ್ಲದೆ ಇರುವ್ದದಲ್ಲದೆ, ಈಗ ಹೇಳಿದ ನಪುಂಸಕ ಲಿಂಗದಲ್ಲಿ ಸ್ವರಾದಿ ವಿಭಕ್ತಿ ಪ್ರತ್ಯಯವಾದ—ಅಮ್ ಎಂಬ ದ್ವಿತೀಯಾ ಪ್ರತ್ಯಯವೂ, ಎ-—ಎಂಬ ಸಂಬೋಧನ ಪ್ರಥಮಾ ಪ್ರತ್ಯಯವೂ ಸ್ವರಾದಿಯಾದ್ದರಿಂದ ॥ ನಪಿಮಕ್ ॥261॥ ಎಂಬ ಸೂತ್ರದಂತೆ ಮಗಾಗವು ಬಂದಲ್ಲಿ ॥ ನಪಿವಾ ॥ 78 ॥ಎಂಬ ಸೂತ್ರದಂತೆ ವ್ಯವಸಿತವಾಗಿ ಮಕಾರಕ್ಕೆ ಕೆಲವುಕಡೆ ನಕಾರ ಮಾತ್ರ ಬರುವದರಿಂದ—ನಲನಂ, ನೆಲನೇ, ಬೆಟ್ಟಮಂ, ಬೆಟ್ಟಮೇ, ಜಲಮಂ, ಜಲಮೇ, ಇತ್ಯಾದಿ ರೂಪಗಳು ಸಿದ್ಧಿಯಾಗುವ ಕಾರಣ ॥ ನಪ್ಯಮಿಚ ಬಹುಳಂ ॥ 259 ॥ ಎಂಬ ಸೂತ್ರದಲ್ಲಿ—ಅಮಿಚ ಎಂಬುದರ ಗ್ರಹಣವು ವ್ಯರ್ಥವಾಗಿರುವದು—

ಈಮೇಲೆ ಹೇಳಿದ ರೀತಿಯಲ್ಲಿ ॥ಅತೋನಗ್ಗೆದ್ದಿರಿ॥257॥ ಇತ್ಯಾದಿಯಾದ ಸೂತ್ರಗಳನ್ನು ನ್ಯಾಸ ಮಾಡಿದಲ್ಲಿ ಹಿಂದೆ ॥ ಮೋನಸ್ವರೆ ॥77॥ ಎಂಬ ಸೂತ್ರವು, ಮಂ, ಇತ್ಯಾದಿ ಪಂಚ ಸ್ಥಳದಲ್ಲಿ ಪ್ರವರ್ತಿಸುವುದು ಎಂಬ ಜ್ಞಾಪನಕ್ಕೆ ಅವಕಾಶವಿಲ್ಲ ವಾದುದರಿಂದ ಗ್ರಂಥಸ್ಥವಾಗಿರುವಂತೆಯೇ ಸೂತ್ರನ್ಯಾಸವಿರಬೇಕು. ಎಂದು ಆಶಂಕಿಸಿದಲ್ಲಿ ವಿಚಾರಮಾಡೋಣ.—

ಹಿಂದೆ ಹೇಳಿದ ಜ್ಞಾಪನವು ॥ ಅತೋನಗ್ಗೆದ್ದಿರಿ ॥257॥ ಇತ್ಯಾದಿಯಾದ ಸೂತ್ರನ್ಯಾಸದಲ್ಲಿಯೂ ಸಿದ್ಧಿಸುವುದು. ಹೇಗೆಂದರೆ—॥ಮೋನಸ್ವರೆ॥77॥ ಎಂಬ ಸೂತ್ರವು ಮೇಲೆ ಹೇಳಿದ ಪಂಚಸ್ಥಳದಲ್ಲಿ ಅಲ್ಲದೆ ಎಲ್ಲಾ ಮಕಾರದಲ್ಲಿಯೂ ಪ್ರವರ್ತಿಸುವುದು ಎಂದು ಸೂತ್ರಕಾರನ ಅಭಿಪ್ರಾಯವಾಗಿರುವ ಪಕ್ಷಕ್ಕೆ ಈಗನ್ಯಸ್ತವಾದಂತೆ ಸೂತ್ರಗಳನ್ನು ಹೇಳದೆ ॥ಅತೋಮಗ್ಗೆದ್ದಿರಿ॥257॥ಗಳಿ॥258॥ ನಪಿ ಬಹುಳಂ॥259॥ಸ್ವರೆ॥260॥ನಪಿ॥261॥ದಗಿವಾದೌ॥262॥ ಎಂದು ಸೂತ್ರನ್ಯಾಸ ಮಾಡಬಹುದಾಗಿತ್ತು. ಹಾಗೆ ಮಾಡಿದ್ದಲ್ಲಿ ॥ನಪಿಮಕ॥261॥ ಎಂಬ ಸೂತ್ರದಲ್ಲಿ ಮಕ ಎಂಬ ಅನುಪ್ಪೂರ್ವಿಯಿಲ್ಲದ ಲಾಘವವಿಲ್ಲದೆ ಅಕಾರಾಸ್ತ ಪುಲ್ಲಿಂಗದಲ್ಲಿ ಸ್ವರಾದಿಯಾದ ಸುಪ್ರತ್ಯಯವು ಪರವಾದಾಗ॥ಸ್ವರೆ॥260॥ ಎಂಬ ಸೂತ್ರದಿಂದ ಮಗಾಗಮವು ಬಂದರೂ॥ಮೋನಸ್ವರೆ ॥77॥ ಎಂಬ ಸೂತ್ರವು ಸರ್ವ ಮಕಾರದಲ್ಲಿಯೂ ಪ್ರವರ್ತಿಸುವಕಾರಣ ರಾಮನಂಇತ್ಯಾದಿರೂಪಸಿದ್ಧಿಯಾಗುವಾಗ॥ಅತೋನಗ್ಗೆದ್ದಿರಿ॥257॥ ಎಂದು ನಗ್ವಿಧಾನವು ವ್ಯರ್ಥವಾಗಿ ॥ ಮೋನಸ್ವರೆ ॥77॥ ಎಂಬ ಸೂತ್ರವು, ಮಂ, ಇತ್ಯಾದಿ ಪಂಚಸ್ಥಳದಲ್ಲಿ ಮಾತ್ರ ಪ್ರವರ್ತಿಸುವುದು. ಎಂಬ ಜ್ಞಾಪನವನ್ನು ಸಿದ್ಧಿಮಾಡಿಕೊಡುವುದು. ಆದ್ದರಿಂದಲೇ ಲಾಘವವಿದ್ದರೂ ಮಗ್ವಿಧಾನ ಮಾಡದೆ ॥ಅತೋನಗ್ಗೆದ್ದಿರಿ॥257॥ ಎಂದು ನಗ್ವಿಧಾನ ಮಾಡಿದೆಯೆಂದು ನಗ್ವಿಧಾನಕ್ಕೆ ಚಾರಿತಾರ್ಥ್ಯವು ಬರುವುದು.

ಹೀಗೆ ಜ್ಞಾಪನೀಯಾಂಶದ ಜ್ಞಾಪನವೂ ಆಗಿ ಸರ್ವೇಷ್ಟರೂಪಸಿದ್ಧಿಯೂ ಆಗಿ ಅನಿಷ್ಟರೂಪವನ್ನು ಸಿದ್ಧಿಮಾಡದೆ ಲಾಘವವೂ ಬರತಕ್ಕ ॥ಅತೋನಗ್ಗೆದ್ದಿರಿ॥257॥ ಗಳಿ॥258॥ನಪಿಬಹುಳಂ॥259॥ಸ್ವರೆ॥269॥ನಪಿಮಕ॥261॥ ದಗಿವಾದೌ ॥ 262॥ ಇತ್ಯಾಕಾರಕವಾದ ಸೂತ್ರನ್ಯಾಸದಿಂದ ಚರಿತಾರ್ಥವಾಗುವಾಗ॥ನಪ್ಯಮಿಚಬಹುಳಂ ॥259॥ ಎಂಬ ಸೂತ್ರದಲ್ಲಿ ಅಮಿಚ, ಎಂಬುದರ ಗ್ರಹಣವು ವ್ಯರ್ಥವಾಗುವುದು. ಆದನೆ ಸೂತ್ರಕಾರರ ವಚನವು ವ್ಯರ್ಥವಾಗಲಾರದಾದಕಾರಣ ವ್ಯರ್ಥವಾದ ಅಮಿಚ, ಎಂಬುದರ ಗ್ರಹಣವು 'ಮ್', ಎಂಬತಕ್ಕ ಪ್ರತ್ಯಯಸ್ವರೂಪವಾದ ಮಕಾರದಲ್ಲಿ ಮಾತ್ರವೇ ॥ನಪಿವಾ ॥78॥ ಎಂಬ ಸೂತ್ರವು ಪ್ರವರ್ತಿಸುವದು. ಎಂದು ಜ್ಞಾಪನವನ್ನು ಮಾಡಿ ಕೊಡುವದು. ಆದ್ದರಿಂದಲೇ, ನೆಲಸಂ, ನೆಲನೇ, ಜಲಮಂ, ಜಲವೇ, ಇತ್ಯಾದಿ ರೂಪಸಿದ್ಧಿಯಾಗದಕಾರಣ॥ನಪ್ಯಮಿಚಬಹುಳಂ॥259॥ ಎಂದು ಹೇಳಬೇಕಾಯಿತು.

ಹೀಗಾಗಿ ॥ನಪಿವಾ॥78॥ ಎಂಬ ಸೂತ್ರವು 'ಮ್' ಎಂಬ ಸುಪ್ರತ್ಯಯದಲ್ಲಿ ಮಾತ್ರ ಪ್ರವರ್ತಿಸುವದಾದ ಕಾರಣ ವೃಕ್ಷದಿಂ + ಉದಿರ್ದು—ಇತ್ಯಾದಿ ಸ್ಥಳದಲ್ಲಿ ಪ್ರವರ್ತಿಸದೆ ಪ್ರವರ್ತಿಸುವದಕ್ಕೆ ಅರ್ಹವಾದ ॥ಮೋನಸ್ವರೆ॥77॥ ಎಂಬ ಸೂತ್ರವು ಪ್ರವರ್ತಿಸಿ ನಕಾರವನ್ನು ಸಿದ್ಧಮಾಡಿಕೊಡುವದು. ಜ್ಞಾಪಿತಾಂಶದಲ್ಲಿ ಸೂಚಿಸದ ವಿಕ್ಕ ಸ್ಥಳದಲ್ಲಿ ಅಂದರೆ ವೃಕ್ಷದಿಂದ ಮ್ + ಉದಿರ್ದು, ಇತ್ಯಾದಿಗಳಲ್ಲಿ ಈ ॥ಮೋನಸ್ವರೆ॥77॥ ಎಂಬ ಸೂತ್ರವು ಪ್ರವರ್ತಿಸುವುದಿಲ್ಲವಾಗಿ ಮಕಾರವು ವ್ಯತ್ಯಾಸವಾಗದೆ ವೃಕ್ಷದಿಂದಮುದಿರ್ದು, ಇತ್ಯಾದಿ ರೂಪಸಿದ್ಧಿಯಾಗುವದು.

ಮಾನಸಗಣಿತ.

ಸರಳಬಡ್ಡಿ.

ವಿವರಣೆ.—ಬಡ್ಡಿಯು ಲೆಕ್ಕದಲ್ಲಿ ಕೊಟ್ಟ ಹಣಕ್ಕೆ ಅಸಲು ಎಂತಲೂ, ನೂರಕ್ಕೆ ಇಂತಿಷ್ಟು ಬಡ್ಡಿ ಎಂಬುದಕ್ಕೆ ದರವೆಂತಲೂ, ನೂರಕ್ಕೆ ಸೇಕಡ ಎಂತಲೂ, ಎಷ್ಟು ದಿನಗಳ ವರೆಗೆ ಬಡ್ಡಿಯು ಲೆಕ್ಕಿಸಲ್ಪಡುವದೋ ಅದಕ್ಕೆ ಕಾಲವೆಂತಲೂ ಅಸಲೂ ಬಡ್ಡಿಯೂ ಕೂಡಿದ ಹಣಕ್ಕೆ ಮೊತ್ತವೆಂತಲೂ ಹೆಸರು.

ಉದಾ:—500 ರೂಪಾಯಿಗಳನ್ನು ನೂರಕ್ಕೆ ವರ್ಷಕ್ಕೆ 12 ರೂ. ಯಂತೆ ಬಡ್ಡಿ ಗೊತ್ತುಮಾಡಿಕೊಂಡು 4 ವರುಷಗಳಾದಮೇಲೆ ಕೊಡಬೇಕಾದರೆ ಮೊತ್ತ, ಎಷ್ಟು?

100 ರೂ. ಗೆ	1 ವರುಷಕ್ಕೆ	12 ರೂ.	$\frac{500\times4\times12}{100}=240+500$
500	,,	60 ರೂ.	$=740$ ರೂ.
,,	4	240 ರೂ.	

ಅಸಲು $500+$ ಬಡ್ಡಿ $240=740$ ರೂ. ಮೊತ್ತ.

ಸಮೀಕರಣಗಳು.—

೧ $\text{ಬಡ್ಡಿ}=\frac{\text{ಅಸಲು}\times\text{ದರ}\times\text{ಕಾಲ}}{100}=\frac{500\times12\times4}{100}=240$ ರೂ.

೨ $\text{ಅಸಲು}=\frac{\text{ಬಡ್ಡಿ}\times100}{\text{ದರ}\times\text{ಕಾಲ}}=\frac{240\times100}{12\times4}=500$ ರೂ.

೩ $\text{ದರ}=\frac{\text{ಬಡಿ}\times100}{\text{ಅಸಲು}\times\text{ಕಾಲ}}=\frac{240\times100}{500\times4}=12$ ರೂ. ದರ.

೪ $\text{ಕಾಲ}=\frac{\text{ಬಡ್ಡಿ}\times100}{\text{ಅಸಲು}\times\text{ದರ}}=\frac{240\times100}{500\times12}4$ ವರುಷ.

೫ $\text{ಮೊತ್ತ}=\text{ಅಸಲು}+\text{ಬಡ್ಡಿ}=500+240=740$ ರೂ.

ಅಭ್ಯಾಸಗಳು (1)

ಈ ಕೆಳಗಿನ ಲೆಕ್ಕಗಳಲ್ಲಿ ಒಂದು ವರುಷದ ಬಡ್ಡಿಯನ್ನು ಮುಖತಃ ಹೇಳಿರಿ.

1. ಸೇಕಡ 5 ರಂತೆ 400 ರೂಪಾಯಿಗಳಿಗೆ 1 ವರುಷದ ಬಡ್ಡಿ ಎಷ್ಟು ?
2. ಸೇ 8 ರಂತೆ 650 ರೂ. ಗಳಿಗೆ
3. ಸೇ $7\frac{1}{2}$ ರಂತೆ 1200 ಪೌಂಡುಗಳಿಗೆ
4. ಸೇ 5 ರಂತೆ 478 ಪೌಂ. 10 ಷಿ ಗಳಿಗೆ
5. ಸೇ 6 ರಂತೆ 325 ರೂ. 8 ಆ. ಗಳಿಗೆ
6. ಸೇ 12 ರಂತೆ 750 ಪೌಂಡುಗಳಿಗೆ

(2) ಬಡ್ಡಿಯನ್ನು ಕಂಡುಹಿಡಿಯಿರಿ.

1. ಸೇ 4 ರಂತೆ 250 ರೂ. ಗಳಿಗೆ 4 ವರುಷಕ್ಕೆ ಬಡ್ಡಿ ಎಷ್ಟು ?
2. ಸೇ 8 ರಂತೆ 600 ರೂ. 5 ವರುಷಕ್ಕೆ
3. ಸೇ $6\frac{1}{4}$ ರಂತೆ 400 ಪೌಂಡಿಗೆ 6 ವರುಷಕ್ಕೆ
4. ಸೇ $8\frac{1}{3}$ ರಂತೆ 800 ರೂ. ಗೆ 9 ವರುಷಕ್ಕೆ
5. ಸೇ 5 ರಂತೆ 622 ಪೌಂ. 10 ಷಿ. ಗಳಿಗೆ 4 ವರುಷಕ್ಕೆ
6. ಸೇ 10 ರಂತೆ 150 ರೂ ಗಳಿಗೆ 3 ವರುಷಕ್ಕೆ ಪೊತ್ತೆಷ್ಟು ?

ಕೆಳಗಣ ಲೆಕ್ಕಗಳಲ್ಲಿ ದರ, ಕಾಲ, ಅಸಲು ಮುಂತಾದುದನ್ನು ಹೇಳಿರಿ.

1. ಸೇ 8 ರಂತೆ 600 ರೂ. ಗಳಿಗೆ 240 ರೂ. ಬಡ್ಡಿಯಾಗಲು ಎಷ್ಟು ವರುಷ ಬೇಕು ?

———:o:———

ಗಣಿತ.

1. (a) $\frac{(\frac{1}{8}+2\frac{3}{4} \text{ ರ } 1\frac{3}{11})-\frac{1}{6} \text{ ರ } 4\frac{1}{2}+\frac{7}{8}+\frac{3}{4})}{(4\frac{1}{3}-3\frac{1}{6})\div(1\frac{1}{3}-1\frac{1}{5})}$ ರ 7 ಷಿ. 9 ಪೆನ್ನಿಗ ಗಳೆಷ್ಟು ?

   (b) ·062435 ರ 100 ಪೌಂಡ್, + 7·1375 ರ 10 ಷಿ. + 1·356 ರ 7 ಷಿ. 6 ಪೆ. + 2·784 ರ $2\frac{1}{2}$ ಪೆನ್ನಿಗಳೆಷ್ಟು ?

2. 1 ಹಂಪ್ಶೈಟ್‌ಷೇಟ್ ಟೀ ಎಲೆಯು ಬೆಲೆಯು 252 ರೂ. 10 ಆ. 8 ಕಾಸುಗಳಾಗುತ್ತದೆ. 1 ಮೂಟೆಗೆ 2 ಹಂ. 1 ಕ್ವಾ. 13 ಪೌಂ. ಗಳ ಟೀಯನ್ನು ಕಟ್ಟಿದರೆ ಇಂಥಾ 7 ಮೂಟೆಗಳ ಬೆಲೆಯನ್ನು ರೂಢಿ ಗಣಿತದಿಂದ ತಿಳಿಸಿರಿ.

3. 76 ಅಡಿಗಳ ಉದ್ದವೂ, 29 ಅಡಿಗಳ ಅಗಲವೂ, ಇರುವ 1 ಕೊಠ ಡಿಯ ಮಾಳಿಗೆಗೆ 14 ಅಡಿ. 6 ಅಂ. ಉದ್ದವೂ, $9\frac{1}{2}$ ಅಂಗುಲ ಅಗಲ ವೂ ಇರುವ ತೇಗಿನ ಹಲಗೆಗಳನ್ನು ಹಾಸಲು 1 ಹಲಗೆಗೆ 3 ರೂ.

8 ಅ. ಗಳಂತೆ ಖರ್ಚಿಷ್ಟು ?

4, 13 ಹಂ. 2 ಕ್ವಾ. 19 ಪೌಂ. ಭಾರವಿರುವ ಮೂಟೆಯನ್ನು 35 ಮೈಲ್ ರೈಲ್ವೆಯಲ್ಲಿ ಕಳುಹಿಸಲು 4 ಪೌಂ. 17 ಷಿ. 6 ಪೆನ್ನಿಗಳು ಛಾರ್ಜ್ ಕೊಡಬೇಕಾದರೆ ಇದೇ ದೂರಕ್ಕೆ 41 ಹಂ. 1 ಪೌಂ ಮೂಟೆಗೆ ಏನು ಕೊಡಬೇಕಾಗುವುದು?

5. ಒಬ್ಬನಿಗೆ ಇಂಗ್ಲೆಂಡಿನಲ್ಲಿ 450 ಪೌಂ. 14 ಷಿ. 6 ಪೆ. ಸಾಲವಿದೆ. ಇವನು ಇಂಡಿಯಾದಲ್ಲಿ ಉದ್ಯೋಗಸ್ಥನಾಗಿರುವುದರಿಂದ ತನ್ನ ಸಾಲಕ್ಕೆ 3380 ರೂ. 7 ಅ. 0 ಕಾ. ಗಳನ್ನು ಮಾತ್ರ ಕಳುಹಿಸಿದಾನೆ. ಇಂಗ್ಲೆಂಡಿನಲ್ಲಿ 2 ಶಿಲ್ಲಿಂಗ್‌ಗಳ ಬೆಲೆಯು ಇಂಡಿಯಾದ 1 ರೂಪಾಯಿಗೆ ಸಮವಾದರೆ ಈ ಸಾಲಗಾರನು ಇನ್ನೆಷ್ಟು ಪೌಂಡುಗಳನ್ನು ಕಳುಹಿಸಬೇಕು? ಮತ್ತು ಇದು ಒಟ್ಟು ಸಾಲದ ಎಷ್ಟನೇ ಭಾಗವಾಗಿರುತ್ತದೆ?

6. ಶೇಕಡಾ $5\frac{1}{3}$ ಬಡ್ಡಿಮೇರೆಗೆ £ 183—2—$11\frac{1}{2}$ ಹಣವು £ 427—6—$10\frac{5}{6}$ ಮೊತ್ತವಾಗಲು ಕಾಲವೆಷ್ಟು :

Pandit—B, R. Srinivasachariar
Bagepalli.

———:o:———

ಕನ್ನಡ 3 ನೇ ಪುಸ್ತಕದ ಟಿಪ್ಪಣಿ.

೧ ಕವಿತೆ – ಪದ್ಯ, ಲವಲವಿಕೆ—ಕುತೂಹಲ, ಸರಳ—ಸುಲಭ, ಈಡೇರು—ನೆರವೇರು.

ಒಂದನೇ ಎರಡನೇ ಪುಸ್ತಕಗಳಿಂದ ನೀವು ಕಲಿತ ಮುಖ್ಯವಿಷಯಗಳಾವುವು? ಅವುಗಳು, ನೀನು, ಇದ್ದೀರಿ, ಕೆಲವು, ವರ್ಣನೆ, ಇವು ಯಾವ ವಾಚಕಗಳು?

೨ ಇಂದಿಗೂ—ಇದುವರಿಗೂ, ವಟ್ಟೆ—ತೆರಿಗೆ, ಕ್ಷುಲ್ಲಕ—ನೀಚರು, ನಿರ್ದಯನು—ದಯೆಯಿಲ್ಲದವನು (ಪದ್ಯದ ತಾತ್ಪರ್ಯ) ನೀನು ಸುಳ್ಳಾಡಬೇಡ, ಜನರಲ್ಲಿ ಕಳ್ಳನೆನಿಸಿಕೊಳ್ಳಬೇಡ, ಸೋಮಾರಿಯಾಗಬೇಡ, ಗುರು, ತಾಯಿ, ತಂದೆಗಳ ಮಾತುಗಳಲ್ಲಿ ಒಳ್ಳೇ ತನ ಬಿಡಬೇಡ, ಪ್ರಾಣಿಗಳಲ್ಲಿ ದಯೆಯಿಲ್ಲದಿರಬೇಡ, ನೀಚರಸಂಗದಲ್ಲಿರಬೇಡ, ಕೆಡಬೇಡ, ಬಡವರಿಗೆ ತೊಂದರೆ ಕೊಡಬೇಡ, ಆಡಿದ ಮಾತು ತಪ್ಪಬೇಡ, ಕೆಟ್ಟವರಮಾತನ್ನು ನಂಬಬೇಡ, ಕೆಟ್ಟಮಾರ್ಗ ಹಿಡಿಯಬೇಡ, ಇತರರಬಡವೆಗೆ ಆಶಿಸಬೇಡ, ಇತರರ ಒಡವೆಗೆ ಆಶಿಸಬೇಡ, ಒಳ್ಳೇ ಗುಣಗಳನ್ನು ಬಿಟ್ಟು ಕೆಡಬೇಡ ॥ ೨ ॥ ಈ ಕಥೆಯಿಂದ ಯಾವ ನೀತಿಯನ್ನು ಕಲಿಯಬಹುದು? ಹಚ್ಚಿಸಿ, ಬೀಳುವುದು, ಮಾತು, ನನ್ನ ಇವು ಯಾವ ವಾಚಕಗಳು?

೩ ಆರವೇಇಲ್ಲ—ತಿಳುವಳಿಕೆಯಿಲ್ಲ, ಹೆರವರು—ಇತರರು, ಹವಣಿಸದೆ—ಪ್ರಯತ್ನಿಸದೆ. ಈ ಕಥೆಯು ತಾತ್ಪರ್ಯವೇನು? ಇಂಥವನು, ಈತನು, ಇವುಗಳಲ್ಲಿ, ಸ್ವರ, ವ್ಯಂಜನಗಳನ್ನು ವಿಂಗಡಿಸು, ಈ ಪಾಠದಲ್ಲಿನ ನಾಲ್ಕು ಕ್ರಿಯಾಪದಗಳನು ಹೇಳು.

೪ ಸಲುವಾಗಿ—ಓಸ್ಕರ, ಬಕ್ಕರಿಕೆ—ಮಣ್ಣಿನ ಬಕ್ಕರಿ (ಪಾತ್ರೆ) ಅದುವಾಗಿ—ದುರ್ಬಲವಾಗಿ, ದೀನಸ್ವರ—ಕರುಣೆ ಹುಟ್ಟುವಂತೆ ಕೂಗುವುದು, ನಿಜಗುಣಿಯು ತನ್ನ ಬುತ್ತಿಯನ್ನು ಯಾರು ಯಾರಿಗೆ ಕೊಟ್ಟನು, ? ಸಿಗಿಲೊಲ್ಲದು. ಇದ್ದಷ್ಟು, ಕೂಳಿಲ್ಲ, ಹೊಕ್ಕಿದೇನೆ, ಇವುಗಳನ್ನು ಬಿಡಿಸಿರಿ. ಇತ್ತ, ಬೇಡಿಕೊಂಡನು, ದಂಡೆಗೆ, ನಿನಗೆ, ಬಂದನು, ಇವು ಯಾವ ವಾಚಕಗಳು ?

೫. ಹೂಲಿ—ಗದ್ದಲ, ವ್ಯರ್ಥ—ಸುಮ್ಮನೆ, ಪರಮರಿಕೆ—ಆರಯಿಕೆ ಈ ಕಥೆಯ ಸಾರಾಂಶ ವೇನು ? ನನ್ನ ಗತಿ ನೆಟ್ಟಗಾಗುತಿರಲಿಲ್ಲ, ಹೆಡಮುರಿ ಕಟ್ಟಿರಿ ಇವುಗಳ ಅರ್ಥವೇನು. ಈ ಪಾಠದಲ್ಲಿನ ನಾಲ್ಕು ನಾಮಪದಗಳನ್ನೂ ಮೂರು ಕ್ರಿಯಾಪದಗಳನ್ನೂ ಆರಿಸಿ ಹೇಳಿರಿ.

೬. ಉತ್ತರ ಕ್ರಿಯೆ—ಸತ್ತವರಿಗೆ ಮಾಡತಕ್ಕ ಕರ್ಮ, ಸನ್ಮಾನಿಸಿ—ಮರ್ಯಾದೆ ಮಾಡಿ, ಹದಿನೇಳು ಆನೆಗಳನ್ನು ಮೂವರು ಹೇಗೆ ಹಂಚಿಕೊಂಡರು ? ಯಾರ ಜಾಣತನದಿಂದ ಈಪಾಲು ನಡೆಯಿತು ? ಬುದ್ಧಿಗೆ ಹರಿಯದ ಮಾತು ಎಂದರೇನು ? ನಿಮ್ಮ ಮೂವರ ಪಾಲಿಗೆ ಎಷ್ಟು ಆನೆಗಳು ಬಂದುವು? ಇಲ್ಲಿನ ಪದಗಳಿಗೆಲ್ಲ ವಾಚಕಗಳನ್ನು ಹೇಳಿರಿ.

೭. ಪಡಿಗೆ—ಹಕ್ಕೆ, ಪಶ್ಚಾತ್ತಾಪ—ಮಾಡಿದ ತಪ್ಪಿಗೆ ವ್ಯಸನಪಡುವುದು ಈ ಪಾಠದಿಂದ ತಿಳಿಯುವ ನೀತಿ ಯಾವುದು? ಸರ್ವಜ್ಞನು ಯಾರು? ನನಗೆ ಪಾಠದ ಅಂಜಿಕೆ ಹುಟ್ಟಿತು. ಇಲ್ಲಿ ಕರ್ತೃ ಕ್ರಿಯಾಪದಗಳನ್ನು ಹೇಳಿರಿ.

೮. ತರಳರು—ಹುಡುಗರು, ದಿಂಡೆ—ಪುದಿಸಿದವಳು, ಪಂಥ—ಛಲ, ಓಲೆ—ಪತ್ರ, ಕುಂತಿ ಗಾಂಧಾರಿಯರು ಯಾರು? ಅರ್ಜುನನು ಯಾವ ಆನೆಯನ್ನು ತರಿಸಿದನು? ಏತಕ್ಕೆ? ಇನ್ನಿಂಥ ಮಾತನ್ನಾಡಬೇಡ. ಇಲ್ಲಿ ಕರ್ತೃ, ಕರ್ಮ, ಕ್ರಿಯೆಗಳನ್ನು ವಿಂಗಡಿಸಿರಿ. ಪೋಗು, ಗಂಡ, ಜಾಣೆ, ಬರೆದು ಇವು ಯಾವ ವಾಚಕಗಳು.

೯. ಉಬ್ಬಿಗೆ—ತಿಟ್ಟ, (ದಿಣ್ಣೆ) ಜಡಪಡಿಸುತ್ತಿರು-ಒದ್ದಾಡುತ್ತಿರು, ಸಂತಾಪ-ದುಃಖ, ಕನಿಕರ--ದಯೆ, ಹೋರು—ಬಿಲ, ಯಾವತ್ತು—ಎಲ್ಲಾ, ಇಲಿಯು ಸಿಹ್ಮಕ್ಕೆ ಮಾಡಿದ ಪ್ರತ್ಯುಪಕಾರವೇನು? ಅಲ್ಪಜಂತು, ತನ್ನ ಹೋರು, ಬಲೆಯ ಹಗ್ಗ. ಇಲ್ಲಿರುವ ವಿಶೇಷಣಗಳು ಯಾವುವು?

೧೦. ಗಬ್ಬ— ಬಸಿರು, ಚಿನಿವಾಲ—ನಾಣ್ಯದ ವ್ಯಾಪಾರಿ, ನಿರುತ್ತರನು—ಉತ್ತರವಿಲ್ಲದವನು, ಅಂದೇ— ಆದಿನವೇ, ಚಿನಿವಾಲನು ಮೋಸಹೋದುದು

ಹೇಗೆ? ಹತ್ತು—ಹೊತ್ತು, ಮನೆ—ಮಾನೆ, ಮನ—ಮಾನ. ಇವುಗಳ ಅರ್ಥ ಭೇದವೇನು? ತಮ್ಮ ಹಂಡೆಯನ್ನು ತಂದಿದೇನೆ. ಇಲ್ಲಿ ಕರ್ತೃ, ಕರ್ಮ, ಕ್ರಿಯೆ, ಗಳು ಯಾವುವು? ಇದೇ ವಾಕ್ಯವನ್ನು ಕರ್ಮಾರ್ಥದಲ್ಲಿ ಪ್ರಯೋಗಿಸಿರಿ.

೧೧. ಪ್ರಾಮಾಣಿಕ—ನಿಜವನ್ನಾಡುವನು, ತುಸು—ಕೆಲವು, ಭರ—ಹೆಚ್ಚಿಗೆ, ನಾಡು—ದೇಶ, ವರ್ತಕನು ತೋರಿಸಿದ ಪ್ರಾಮಾಣಿಕತೆ ಏನು? ಇದರಿಂದ ಅವನ ವಂಶಸ್ಥರಿಗೆ ಆದ ಫಲವೇನು? ಹುಡುಗನು—ಮಕ್ಕಳು, ಇವುಗಳ ಸ್ತ್ರೀ ಲಿಂಗರೂಪಗಳು ಯಾವುವು? ಒಮ್ಮಿಂದೊಮ್ಮೆ—ಎಲ್ಲೆಲ್ಲಿ, ಇವು ಯಾವ ಸಂಧಿ ಗಳು?

೧೨. ದೇಗುಲ—ಗುಡಿ, ಒಮ್ಮೊಲೆ—ಒಂದೇಸಾರಿ, ಹಗ್ಗು—ತಗ್ಗು, ಕಷ್ಟ-ಕಷ್ಟ, ಬಿತ್ತಿದ್ದನ್ನು ಬೆಳಕೊ. ಈ ಗಾದೆಯ ಅರ್ಥವೇನು? ಬಡತನ, ಹಂಚಿಕೆ, ಪಟ್ಟ, ಣಸೆಟ್ಟಿ, ನಾಲ್ವರು, ಇವು ಯಾವ ವಾಚಕಗಳು? ಈ ಕಥೆಯನ್ನು ಸಂಗ್ರಹವಾಗಿ ಹೇಳಿ.

೧೩. ಕ್ಷಮಾಗುಣ—ತಾಳ್ಮೆ, ಗೆಳತಿ—ಸಂಗಾತಿ, ಮಾನ್ಯ—ಮನ್ನಿಸತಕ್ಕದ್ದು, ಒತ್ತೊಟ್ಟಿಗೆ—ಒಂದುಕಡೆಗೆ, ಭಾನುಮತಿ, ದ್ರೌಪದಿ, ಚಿತ್ರಸೇನ, ಭೀಮ, ಇವರು ಯಾರು? ಸುಖದುಃಖಗಳು ದೈವಾನುಸಾರ ಬರುವವು. ಈ ವಾಕ್ಯದ ತಾತ್ಪರ್ಯ ವೇನು? ಈ ಕಥೆಯಲ್ಲಿರುವ ನಾಮಪದಗಳಲ್ಲಿ ರೂಢನಾಮಗಳನ್ನೂ ಅಂಕಿತನಾಮಗಳನ್ನೂ ಕಂಡುಹಿಡಿಯಿರಿ.

೧೪. ಕಂದ—ಮಗು, ಧನಿ—ಒಡೆಯ, ಅರಸನು ನ್ಯಾಯತೀರಿಸುವುದರಲ್ಲಿ ತೋರಿದ ಜಾಣತನವೇನು? ಕೊಡಿಸುತ್ತೇನೆ, ಕೊಡುತ್ತೇನೆ, ಆಳಹತ್ತಿದಳು, ಅತ್ತಳು, ಇವುಗಳ ಅರ್ಥಭೇದವೇನು?

೧೫. ಬೇರೂರು—ಬೇರೆ ಊರು, ಉತ್ಕೃಷ್ಟ—ಶ್ರೇಷ್ಠ, ಹಿಂಬದಿ—ಹಿಂದುಗಡೆ, ಅವಸ್ಥೆ—ಸ್ಥಿತಿ, ಈ ಕಥೆಯಿಂದ ಏನು ತಿಳಿಯಬಹುದು? ಪಾಠದ ಕೊನೆಯ ವಾಕ್ಯದ ಪದಗಳಿಗೆಲ್ಲ ವಾಚಕ ಹೇಳಿರಿ?

೧೬. ಚಂಚು—ಕೊಕ್ಕು, ಮರುಗುತ್ತ—ದುಃಖಿಸುತ್ತ, ಕುನಸು—ಮೋಸ ಕೃತ್ಯ, ಲಕ್ಷ್ಯ—ಗುರಿ, ಈ ಕಥೆಯನ್ನು ಸಂಗ್ರಹವಾಗಿ ಹೇಳಿರಿ. ಮೇಜವಾನಿ, ಸೀಕರಣಿ, ಹೂಜಿ, ಡೌಲು, ಇವುಗಳ ಅರ್ಥವೇನು?

೧೭. ತಲ್ಲಣ—ಭಯ, ಹೊಣೆಗಾರ—ಜಾಮೀರ್ದಾರ, ಗೋಷ್ಠಿ—ಮಾತು ದೇವರು ಎಲ್ಲರನ್ನೂ ರಕ್ಷಿಸುವನೆಂಬುದಕ್ಕೆ, ನಾಲ್ಕು ದೃಷ್ಟಾಂತ ಕೊಡಿ. ಯಾವ ಕೆಲಸಗಳನ್ನು ಮಾಡಬಾರದು. ಶಾಂತಿಯ. ಮೇರಗಳಿಗೆ. ವಸ್ತುವ. ತುದಿಯಲ್ಲಿ, ಇವು ಯಾವ ಲಿಂಗವಿಭಕ್ತಿಗಳಲ್ಲಿವೆ.

೧೮. ಪ್ರವಾಸ—ದೇಶಸಂಚಾರ, ಕುತನಿ—ಪಟ್ಟುಬಟ್ಟಿ, ಗುಂಡಾರ—ಡೇರೆ ಕಲೆಕ್ಟರ ಕೆಲಸವೇನು? ಬೆಳಗಾವಿ, ಮನೆ. ಒಳ್ಳಾರಿ. ಡೇರೆ. ಕುದುರೆ, ಇವು ಎಂಥ

ನಾಮವಾಚಕಗಳು? ಈ ಪಾಠದಲ್ಲಿನ ಆರು ಕ್ರಿಯಾಪದಗಳನ್ನಾರಿಸಿ ಹೇಳಿರಿ.

೧೯. ಸ್ವಚ್ಛತೆ—ನೈರ್ಮಲ್ಯ, ಸವಕಳಿ—ಸಮೆಯುವುದು, ಹರಿಗಳು—ಚರಂಡಿಗಳು, ಮೋರಿಗಳು—ನೇತುವೆ, ಛಿದ್ರ—ರಂಧ್ರ, ಜಳಕ—ಸ್ನಾನ, ಸ್ನಾನಮಾಡುದೇಕೆ? ಸರ್ವನಾಮವೆಂದರೇನು? ಈ ಪಾಠದಲ್ಲಿರುವ ಸರ್ವನಾಮಗಳನ್ನು ಹೇಳು.

೨೦. ನಿಕ್ಷೇಪ—ನೆಲದಲ್ಲಿ ಸಿಕ್ಕಿದ ಹಣ, ಎಳಸುವುದು—ಅಪೇಕ್ಷಿಸುವುದು, ಹನುಮರಡ್ಡಿ. ಗೋವಿಂದರಡ್ಡಿ. ಇವರು ಪ್ರಾಮಾಣಿಕರೆಂದು ಹೇಗೆ ಹೇಳುವಿರಿ? ಅಧಿಕಾರಿಯು ನ್ಯಾಯ ತೀರಿಸಿದ್ದು ಹೇಗೆ? ಗುಣವಾಚಕವೆಂದರೇನು? ಕೆಲವು ಗುಣವಾಚಕಗಳನ್ನು ಹೇಳಿರಿ?

೨೧. ಪ್ರಾಪ್ತಿ—ಸಂಪಾದನೆ, ಜಾಲಗಾರ—ಬಲೆಬೀಸುವವನು, ಸೋಜಿಗ—ಆಶ್ಚರ್ಯ, ಅವಿಾರ—ದೊರೆ, ಬಾಗಿಲು ಕಾಯುವನು. ಕೋರಿದ್ದೇನು? ಇದರ ಫಲವೇನಾಯಿತು? ಸಂಕ್ಷೇಪವಾಗಿ ಹೇಳಿರಿ.

೨೨. ಸೊಕ್ಕು—ಗರ್ವ, ಸ್ವಸ್ಥ—ಸುಖ, ಕಸು—ಬಲ, ಜಾಳಗೆ—ಬಲೆ, ಗುಂಗಾಡಿಯು ಸಾವಿಗೆ ಕಾರಣವೇನು? ಈ ನಿನ್ನ ಜಾಳಿಗೆಯನ್ನು ಲೆಕ್ಕಿಸುವೆನೆ? ಇಲ್ಲಿ ಕರ್ತೃ. ಕರ್ಮ. ಕ್ರಿಯೆಗಳನ್ನು ವಿಂಗಡಿಸಿರಿ?

೨೩. ಈ ಹಾಡು—ಈ ಸ್ಥಿತಿ, ನಾಡು—ದೇಶ, ಖೇದ—ವ್ಯಸನ. ಇದು ಯಾರ ಕಥೆ? ಇಲ್ಲಿ ಹೇಳಿರುವ ಹುಡುಗನು ಯಾವಸತ್ಯವನ್ನಾಡಿದನು? ಅದರ ಫಲವೇನಾಯಿತು? ಒಂದು ದೊಡ್ಡ ನಾಡಿಗೆ ಮುಖ್ಯಾಧಿಕಾರಿ ಯಾವನು. ಇಲ್ಲಿರುವ ಪದಗಳಿಗೆಲ್ಲ ವಾಚಕಗಳನ್ನು ಹೇಳಿರಿ.

೨೪. ಅನಿವಾರ-ತಡೆಯುಕೂಡದ, ಸಂತುಷ್ಟ-ಸಂತೋಷಪಟ್ಟವನು. ಸಬಕ್ತಗೀನನು ಯಾರು? ಇವನ ಮಗ ಸುಲ್ತಾನ್ ಮಹಮ್ಮದನ ಕಥೆಯನ್ನು (ಚರಿತೆಯಲ್ಲಿ ಓದಿದ್ದರೆ) ಹೇಳಿರಿ ಈ ಪಾಠದಲ್ಲಿನ ಅವ್ಯಯಗಳದ್ನು ವಿಂಗಡಿಸಿ ಹೇಳಿರಿ.

೨೫. ಅಸಮ—ಸಮನಿಲ್ಲದ, ದಶಕಂಠನು-ಹತ್ತು ತಲೆಯುಳ್ಳವನು (ರಾವಣ) ಚೂಡಕ—ತಲೆಯುಲ್ಲಿ ಧರಿಸಿರುವ ಮಣಿ, ಶರನಿಧಿ—ಸಮುದ್ರ (ಶರ—ನೀರು) ಸುಯಿಲು—ಉಸುರು, ಈ ಕವಿತೆಯು ತಾತ್ಪರ್ಯವನ್ನು ಹೇಳಿರಿ. ಬಿನ್ನಹ—(ತತ್ಸಮ) ವಿಜ್ಞಾಪನ. ಮೊದಲನೆಯ ಪದ್ಯದಲ್ಲಿ ಕರ್ತೃ, ಕರ್ಮ, ಕ್ರಿಯೆಗಳನ್ನು ಕಂಡು ಹಿಡಿಯಿರಿ.

೨೬. ಹಂಚಿಕೆ—ಉಪಾಯ, ಚಂದ—ಉತ್ತಮ, ಈ ಕಥೆಯಿಂದ ತಿಳಿಯುವ ನೀತಿ ಯಾವುದು? ಬೇಕೆಂತ, ಇಟ್ಟಿತ್ತು. ಇವು ಯಾವ ಸಂಧಿಗಳು, ಸೂತ್ರವೇನು.

೨೭. ಶಿಕ್ಷಣ—ವಿದ್ಯಾಭ್ಯಾಸ, ಸುಶಿಕ್ಷಿತ—ಚೆನ್ನಾಗಿ ಕಲಿಸಲ್ಪಟ್ಟ, ಅನರ್ಥ—ಕೇಡು, ಔರಣದಿಂದ—ಒಪ್ಪವಾಗಿ. ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬುದೇಕೆ? ಕಂಡೆನು, ಬಡಿಯಿತು, ಕಲಿಸುವಳು. ಈ ಕ್ರಿಯಾಪದಗಳು ಯಾವ ಧಾತುಗಳಿಂದ ಹುಟ್ಟಿವೆ? ಇವು ಯಾವಕಾಲ ಲಿಂಗ ವಚನಗಳಲ್ಲಿವೆ?

೩೪. ಸಂಗ್ರಹಮಾಡು—ಸೇರಿಸಿಡು, ನೀಗು—ಕಳೆಯಿಕೊಳ್ಳುವುದು, ಎಚ್ಚರ—ಜಾಗ್ರತೆ, ಸೋಮಾರಿಗಳಿಗೆ ಆಗುವ ನಷ್ಟವೇನು. ಇರುವೆಗಳು ಬುದ್ಧಿಯುಳ್ಳವೆಂಬುದು ಹೇಗೆ? ಹೋದನು ಎಂಬ ಕ್ರಿಯೆಯನ್ನು ವರ್ತಮಾನ ಭವಿಷ್ಯದ್ರೂಪಗಳಲ್ಲಿ ಹೇಳಿ.

೩೫. ತಳಮಳಿಸು—ಸಂಕಟಪಡು, ರಂಜಣಿಗೆ—ದೊಡ್ಡ ಪಾತ್ರೆ, ಅಗ್ಗಾಲ—ಬೇಸಗೆ, ದಯಾಳು—ದಯೆಯುಳ್ಳವನು. ಅರವಟ್ಟಿಗೆಯು ಉಪಯೋಗವೇನು? ಸಮಾಸವೆಂದರೇನು. ಸಾಲು ಗಿಡ, ಕೆರೆ ಭಾವಿಗಳು. ಇವು ಯಾವ ಸಮಾಸಗಳು?

೩೬. ಹೇಂಟೆ—ಹೆಣ್ಣು ಕೋಳಿ, ಮೀಳಿಗೆ—ಸಂತಾನ, ಎಡತಾಕುವುದು—ಮೇಲೆ ಬೀಳುವುದು, ಪರವಿ—ಲಕ್ಷ್ಯ. ಈ ಮಹಮ್ಮದನ ಬಯಕೆಗಳು ಯಾವುವು? ಅವು ಏನಾದುವು? ಕೆಲವು ದಿವಸ. ಹತ್ತು ರೂಪಾಯಿ. ಸಣ್ಣ ವ್ಯಾಪಾರ ಇವು ಯಾವ ಸಮಾಸಗಳು?

೩೭. ಉದಾಸೀನ—ಬೇಸರವುಳ್ಳವನು, ಹುರುಪು—ಉತ್ಸಾಹ, ಚಿಕ್ಕೆ—ನಕ್ಷತ್ರ ಇನ್ನೊಮ್ಮೆ ಯತ್ನಮಾಡು ಎಂಬ ನೀತಿಯು ಈ ಹುಡುಗರಿಗೆ ಹೇಗೆ ದೃಷ್ಟಾಂತಕ್ಕೆ ಬಂತು? ಹಿಡಿದ ಕೆಲಸವನ್ನು ಹಾಗೆಯೇ ಸಾಗಿಸಿರಿ, ಈ ಪದಗಳು ಯಾವ ಯಾವ ವಾಚಕಗಳಾಗಿವೆ?

೩೮. ಭವಭಂಗ—ಪಾಸಗಳನ್ನು ಕಳೆಯುವವನು, ಗಳಿಸಿಕೊಂಡವ—ಸಂಪಾದಿಸಿಕೊಳ್ಳುವನು, ಪಿಸುಣಿಗ—ಲೋಭಿ, ನಿಷ್ಠೆವಂತರು—ಆಚಾರ ಶೀಲರು, ತನು—ಶರೀರ, ಜಾಣರು ಯಾರು? ಮೂರ್ಖರು ಯಾರು? ನೀನಲ್ಲದೆ ಸಲಹುವರಿಲ್ಲವೆಂಬುದಕ್ಕೆ ಯಾವ ಕಾರಣವು ಕೊಡಲ್ಪಟ್ಟಿದೆ? ಸತ್ಯಗುಣವನು ಕೊಟ್ಟು ಸಲಹೆನ್ನನು ಈ ವಾಕ್ಯದಲ್ಲಿ ಯಾವಪದಗಳಿವೆ?

೩೯. ಮಿಕ್ಕಿಲ್ಲ—ವಿಾರಿಲ್ಲ, ತಡವಿಲ್ಲ—ಮುಟ್ಟಿಲಿಲ್ಲ, ಸವಿ—ಹಿತ, ಮತಿ—ಬುದ್ಧಿ, ಜತೆಯುಂತೆ ಮತಿ ಎಂಬ ಗಾದೆ ಯಾತರಿಂದ ಹುಟ್ಟಿದೆ? ಈ ಕಥೆಯನ್ನು ಸಂಗ್ರಹಿಸಿ ಬರೆಯಿರಿ.

೪೪. ದುರಬಾಲ ಬೀಳುವನು—ದಮ್ಮಯ್ಯಗುಡ್ಡೆ ಹಾಕುವನು, ದಾವತಿಮಾಡಿ—ಕಷ್ಟಪಟ್ಟು, ಲಾವಣಿ—ಗುತ್ತಿಗೆ, ಈ ಕಥೆಯಿಂದ ತಿಳಿಯತಕ್ಕದ್ದೇನು? ಈ ಪಾಠದಲ್ಲಿರುವ ಸಮಾಸ ಪದಗಳನ್ನು ಹೇಳಿರಿ.

೪೫. ಉಡುಗಿ—ಗುಡಿಸಿ, ದನದ ಹಕ್ಕೆ—ಕೊಟ್ಟಿಗೆ, ಮನೆಯು ಹೇಗಿರಬೇಕೆಂಬುದನ್ನು ಈ ಪಾಠದಿಂದ ಕಲಿಯಬಹುದು? ಬೇನೆ ಬರಲಿಕ್ಕೆ ಕಾರಣವೇನು? ನನ್ನ ಮಾತು ನನಗೆ ತಿಳಿಯಲೊಲ್ಲದು. ಇಲ್ಲಿನ ಪದಗಳಿಗೆ ವಾಚಕ ಹೇಳಿರಿ.

೪೬. ತೇಜ—ಕಾಂತಿ, ವಿಮಾನ—ಆಕಾಶದಲ್ಲಿ ಸಂಚರಿಸುವ ರಥ, ಸೌಮ್ಯತನ—ಸಾಧು ಸ್ವಭಾವ, ನೇಗಣ್ಣಿ—ಓರಗಿತ್ತಿ, ಉತ್ತಮ ಸ್ತ್ರೀಯರು ಹೇಗೆ ನಡೆದುಕೊಳ್ಳಬೇಕು? ಎಂಥ, ಮುಡಿಯೋಣ, ನನಗೆ, ಇವು ಯಾವ ವಾಚಕಗಳು?

(ಸಶೇಷ)

* ವಿದ್ಯಾದಾಯಿನಿ *

(A MONTHLY JOURNAL.)

ಭಾಗ ೧೫.] ನವಂಬರ್.—೧೯೦೩.. [ಸಂಚಿಕೆ ೧೧

ದಸರಾ ಮಹೋತ್ಸವದಲ್ಲಿ ನಡೆದ ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನದ ಸಂಬಂಧದಲ್ಲಿ ಮಿಸ್. ಲ್ಯಾಟರವರು ಮಾಡಿದ ಉಪನ್ಯಾಸ.

ಈದಿವಸ ಇಲ್ಲಿ ನಾನು ವಿದ್ಯಾಭ್ಯಾಸವೆಂಬ ದೊಡ್ಡ ವಿಷಯವನ್ನು ಕುರಿತು ಮಾತನಾಡಬೇಕೆಂದು ಹೇಳಿದುದು ನನಗೆ ಬಹಳ ಗೌರವವನ್ನು ಕೊಟ್ಟಂತಾಗಿರುವುದು. ಆದರೆ ನಾನು ಇಲ್ಲಿಗೆ ವಿದೇಶಿಯಾದುದರಿಂದ ಇಲ್ಲಿನ ಜನಗಳ ಸ್ವಭಾವವೂ ಮತ್ತು ಇಲ್ಲಿ ಪೂರ್ವದಿಂದಲೂ ಆಚರಣೆಯಲ್ಲಿರುವ ವಿದ್ಯಾಭ್ಯಾಸಕ್ರಮವೂ ನನಗೆ ಪರಿಚಿತವಾದುವುಗಳಲ್ಲ. ಆದರೆ ಮನುಷ್ಯನ ಸಹಜವಾದ ಸ್ವಭಾವಗಳು ಪ್ರಪಂಚದಲ್ಲೆಲ್ಲಾ ಒಂದೇ ವಿಧವಾಗಿರುವುವು. ಆದುದರಿಂದ ಈ ಸ್ವಭಾವವನ್ನು ತಿದ್ದುವ ಕ್ರಮಗಳು ಎಲ್ಲಾಕಡೆಯಲ್ಲೂ ಒಂದೇವಿಧವಾಗಿರಬೇಕೆಂದು ಹೇಳಬಹುದಲ್ಲವೆ? ಆದರೆ ಈ ಕ್ರಮಗಳನ್ನು ಆಚರಣೆಗೆ ತರುವಾಗ ಆಯಾಯ ದೇಶಕ್ಕೆ ಅನುಕೂಲವಾದ ಕೆಲವು ವ್ಯತ್ಯಾಸಗಳನ್ನು ಮಾಡಿಕೊಳ್ಳಬೇಕಾಗುವುದು. ನಮ್ಮೆಲ್ಲರಿಗೂ ಅನುಕೂಲವಾದ ವಿದ್ಯಾಭ್ಯಾಸ ಕ್ರಮವು ಸಾಮಾನ್ಯವಾಗಿ ಎಲ್ಲಕಡೆಯಲ್ಲೂ ಒಂದೇ ಎಂಬ ಅಭಿಪ್ರಾಯವೇ ನನಗೆ ಇಲ್ಲಿ ಮಾತನಾಡಲು ಧೈರ್ಯವನ್ನು ಕೊಟ್ಟಿರುವುದು.

ಪ್ರಕೃತಿ ಪರೀಕ್ಷೆಯನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಆಧಾರವಾಗಿಟ್ಟುಕೊಳ್ಳಬೇಕೆಂದು ಉಪಾಧ್ಯಾಯರು ಯೋಚಿಸುತ್ತಿರುವುದು ನಮ್ಮ ವಿದ್ಯಾಭ್ಯಾಸಕ್ರಮಗಳ

ಮೇಲೆ ಒಂದು ದೊಡ್ಡ ತರಂಗವು ಪ್ರವಹಿಸುತಿರುವುದಕ್ಕೆ ಚಿಹ್ನೆಯಾಗಿರುವುದು. ನಮ್ಮ ಸುತ್ತಲೂ ಇರುವ ಪದಾರ್ಥಗಳ ಮೇಲೆ ನಮಗೆ ಆದರವು ಹೆಚ್ಚಾಗುತಿರುವುದೇ ಈ ವಿಧವಾದ ಅಭಿಪ್ರಾಯಕ್ಕೆ ಕಾರಣವೆಂದು ತೋರುವುದು. ಇದು ಹೇಗಾದರೂ ಇರಲಿ, ಪ್ರಕೃತಿಯು ನಮಗೆ ಸದಾ ದೂತರನ್ನು ಕಳುಹಿಸುತಿರುವುದು. ನಮಗೆ ಇಷ್ಟವಿರಲಿ ಇಲ್ಲದಿರಲಿ ಪ್ರಕೃತಿಯು ಸದಾ ನಮ್ಮ ಸಹಚಾರಿಣಿಯಾಗಿರುವುದು. ಪ್ರಕಾಶ, ಅಂಧಕಾರ, ಸೂರ್ಯ, ಚಂದ್ರ, ಮಳೆ, ಗಾಳಿ, ಪಕ್ಷಿಗಳು, ಹೂಗಳು, ಮರದಿಂದ ಬೀಳುವ ಎಲೆಗಳು, ಇವೆಲ್ಲವೂ ನಮಿಗೆ ಸೇರಿದುವು. ನಮ್ಮ ಊಹೆಗಳಿಗೆಲ್ಲಾ ಇವೇ ಆಧಾರವಾಗಿರುವುವು. ಸುತ್ತಲೂ ಇರುವ ಈ ಪದಾರ್ಥಗಳಲ್ಲಿ ವಿಶೇಷ ಮಮತೆಯನ್ನುಳ್ಳವನೇ ಸುಖಿಯೆಂದು ಹೇಳಬಹುದು. ವಿಶೇಷ ಫಲವತ್ತಾದ ಈ ಹಿಂದೂಸ್ಥಾನದಲ್ಲಿ ಪ್ರಕೃತಿ ಪರೀಕ್ಷೆಗೆ ಅಪರಿಮಿತವಾದ ಅವಕಾಶವಿರುವುದು. ಈದೇಶದ ಜನರಿಗೆ ಕಲ್ಪನೆಯೂ ವಿಶೇಷವಾಗಿರುವುದು. ಇಂತಹ ಕಲ್ಪನೆಯು ಪ್ರಕೃತಿಯಲ್ಲಿ ಜನರಿಗೆ ಪ್ರೀತಿಯನ್ನು ಹುಟ್ಟಿಸಲು ಕಾರಣವಾಗಿರುವುದು. ಪ್ರಕೃತಿ ಪರೀಕ್ಷೆಯನ್ನೇ ವಿದ್ಯಾಭ್ಯಾಸಕ್ಕೆ ಆಧಾರವಾಗಿಟ್ಟುಕೊಳ್ಳಬೇಕೆಂದು ಯೋಚಿಸುತಿರುವ ಸಮಯದಲ್ಲಿ ಪ್ರಾಕೃತಿಕ ಶಾಸ್ತ್ರಗಳ ಅಭ್ಯಾಸಕ್ಕೆ ಅನುಕೂಲವಾದ ಒಂದು ದೊಡ್ಡ ವಿದ್ಯಾನಿಲಯವು ನಿಮ್ಮ ದೇಶದಲ್ಲಿ ಸ್ಥಾಪಿಸಲ್ಪಡುತಿರುವುದು ಬಹಳ ಸಂತೋಷಕರವಾಗಿರುವುದು. ಮುಂದೆ ಇವೆರಡಕ್ಕೂ ಕೇವಲ ಸಮೀಪವಾದ ಸಂಬಂಧವು ಉಂಟಾಗಬಹುದೆಂದು ನಾವು ಯೋಚಿಸಬಹುದಲ್ಲವೆ?

ಪ್ರಕೃತಿ ಪರೀಕ್ಷೆಯಂದರೆ ನಮ್ಮ ಅಭಿಪ್ರಾಯವೇನು. ಕೆಲವು ಹೂಗಳನ್ನೂ, ಗಿಡಗಳನ್ನೂ, ಮರಗಳನ್ನೂ, ಪರೀಕ್ಷಿಸುವುದು ಮಾತ್ರ ಪ್ರಕೃತಿ ಪರೀಕ್ಷೆಯ ಉದ್ದೇಶವೆಂದು ಹೇಳುವ ವಾಡಿಕೆಯುಂಟು. ಆದರೆ, ಪ್ರಕೃತಿ ಪರೀಕ್ಷೆಯ ಪರಮೋದ್ದೇಶವು ಇದಲ್ಲ. ಮಗುವಿಗೆ ಆದರ ಸುತ್ತಲೂ ಇರುವ ಪದಾರ್ಥಗಳಲ್ಲಿ ಒಂದುಗಿಡ, ಅಥವಾ ಒಂದು ಪ್ರಾಣಿಯ ವಿಷಯವನ್ನು ವಿಶೇಷವಾಗಿ ತಿಳಿಸುವುದು ಪ್ರಕೃತಿ ಪರೀಕ್ಷೆಯ ಉದ್ದೇಶವಲ್ಲ. ಪ್ರಕೃತಿಯ ವಸ್ತುಗಳಲ್ಲಿ ಪ್ರೀತಿಯನ್ನು ಹುಟ್ಟಿಸುವುದೇ ಈ ವಿಧವಾದ ವಿದ್ಯಾಭ್ಯಾಸಕ್ಕೆ ಉದ್ದೇಶವಾಗಿರುವುದು. ಪ್ರೀತಿಪಾತ್ರವಾದ ವಸ್ತುವಿಗೆ ಹಿತವಾದ ಕಾರ್ಯವನ್ನು ಮಾಡುವುದು ಮನುಷ್ಯನ ಸ್ವಭಾವವಾದುದರಿಂದ ಮಕ್ಕಳು ತಾವು ಪ್ರೀತಿಸುವ ಮರಗಿಡಗಳ, ಮತ್ತು ಪ್ರಾಣಿಗಳ, ವಿಷಯದಲ್ಲಿ ಆದರದಿಂದ ಕೆಲಸಮಾಡುವರು. ಅವರು ಹೀಗೆ ಕೆಲಸಮಾಡು

ತಿರುವಾಗ ಮುಂದೆ ನಡೆಯುವ ಕ್ರಮವಾದ ವಿದ್ಯಾಭ್ಯಾಸಕ್ಕೆ ಆಧಾರವಾದ ಅನೇಕ ಅಂಶಗಳನ್ನು ಕಲಿಯುವರು. ಈ ಕೆಲಸಗಳಿಂದ ಅವರಿಗೆ ವಿಶೇಷ ಸಂತೋಷವುಂಟಾಗಿ ಅದರಲ್ಲಿ ಆದರದಿಂದ ನಿರತರಾಗುವರು. ಹೀಗೆ ಕೆಲಸಮಾಡುತಿರುವಾಗ ಅವರು ಪ್ರತಿದಿವಸವೂ ಹೊಸ ಅಂಶಗಳನ್ನು ಇತರರ ಸಹಾಯವಿಲ್ಲದೆ ಕಲಿಯುವರು. ಲಂಡ್ನ ನಗರದಲ್ಲಿರುವ ನಮ್ಮ ಸ್ಕೂಲಿನ ಮಕ್ಕಳು ಪಾಠಶಾಲೆಯ ಕಾಲದಲ್ಲಿ ಅವಕಾಶವು ದೊರೆತಾಗಲೆಲ್ಲಾ ತೋಟದಲ್ಲಿರುವ ಪಾತಿಗಳಲ್ಲಿ ನೆನ್ನೆಗಿಂತಲೂ ಈ ದಿವಸ ಏನು ವಿಶೇಷ ವಿರುವುದೆಂದು ಆದರದಿಂದ ಪರೀಕ್ಷಿಸುವುದು ನನ್ನ ಅನುಭವದಲ್ಲಿರುವ ಅಂಶವು. ಈ ಮಕ್ಕಳು ತೋಟಕ್ಕೆ ಹೋಗಿ ಬಂದು ಅಲ್ಲಿನ ವಿಶೇಷಾಂಶಗಳನ್ನು ನನಗೆ ತಿಳಿಸುವಾಗ ಅವರ ಮುಖದಲ್ಲುಂಟಾಗುವ ಸಂತೋಷ ಸೂಚಕವಾದ ವಿಕಾಸವನ್ನು ನೋಡಿ ಇವರಿಗೆ ಪ್ರಾಕೃತಿಕ ಶಾಸ್ತ್ರವನ್ನು ಅಥವಾ ದೇವರ ಮಹಿಮೆಯನ್ನು ತಿಳಿಸಲು ಪ್ರಕೃತಿ ಪರೀಕ್ಷೆಗಿಂತಲೂ ಉತ್ತಮವಾದ ಬೇರೇ ಉಪಾಯವಿಲ್ಲವೆಂದು ನಾನು ಊಹಿಸಿರುವೆನು. ಮಕ್ಕಳು ಈ ಸಣ್ಣ ವಯಸ್ಸಿನಲ್ಲಿ ತಮ್ಮ ಸುತ್ತಲೂ ಇರುವ ಪದಾರ್ಥಗಳ ವಿಷಯವನ್ನು ಪರೀಕ್ಷಿಸುವುದು ಅತ್ಯಾವಶ್ಯಕವು. ಏಕೆಂದರೆ ಈ ಕಾಲದಲ್ಲಿ ಅವರು ತಿಳಿದ ಅಂಶಗಳು ಅವರ ಮನಸ್ಸಿನಲ್ಲಿ ಬಹಳ ದಿವಸಗಳ ವರೆಗೂ ಸ್ಥಿರವಾಗಿ ನಿಲ್ಲುವುವು. ಈ ವಿಷಯದಲ್ಲಿ ಫ್ರೂಬೆಲ್ಲನು ಹೇಳುವುದೇನೆಂದರೆ, "ಮಗುವಿಗೆ ಪ್ರಕೃತಿಯು ವಸ್ತುಗಳಲ್ಲಿರುವ ಸಹಜವಾದ ಆಶೆಯು. ಅವುಗಳ ವಿಷಯದಲ್ಲಿ ಕಾರ್ಯ್ಯಾಪೇಕ್ಷೆಯನ್ನು ಹುಟ್ಟಿಸುವುದು, ಪ್ರಕೃತಿ ವಿಷಯಕವಾದ ಕೆಲವು ಅಂಶಗಳನ್ನು ತಿಳಿಯುವುದರಿಂದಮಾತ್ರ ಈ ಯಾಸೆಯು ತೃಪ್ತಿಹೊಂದುವುದಿಲ್ಲ. ಇಂತಹ ಅಂಶಗಳಿಗೆಲ್ಲಾ ಕಾರಣವನ್ನು ತಿಳಿಯುವುದಕ್ಕೂ ಈ ಯಾಶೆ ಮಗುವನ್ನು ಪ್ರೇರಿಸುವುದು. ಕೊನೆಗೆ ಎಲ್ಲಾ ಅಂಶಗಳಿಗೂ ಪರಮ ಕಾರಣನಾದ ದೇವರ ಮಹಿಮೆಯನ್ನು ತಿಳಿಯುವುದಕ್ಕೂ ಈ ಆಶೆಯೇ ಆಧಾರವಾಗುವುದು." ಆದುದರಿಂದ ಪ್ರಕೃತಿ ಪರೀಕ್ಷೆಯು ಪಾಠವು ಮಕ್ಕಳ ಪಾಠಶಾಲೆಯಲ್ಲಿ ಬಹಳ ಮುಖ್ಯವಾದ ಪಾಠವಾಗಿರಬೇಕೆಂಬುದು ನನ್ನ ಮತವು. ಉಳಿದ ಪಾಠಗಳೆಲ್ಲಾ ಇದಕ್ಕೆ ಅಂಗಗಳಾಗಿರಬೇಕು. ಇಂತಹ ಪರೀಕ್ಷೆಯಲ್ಲಿ ಮಕ್ಕಳು ತಿಳಿದ ಅಂಶಗಳನು ಶೀಮೇಸುಣ್ಣ ಮತ್ತು ಕಾಗದ ಮರದ ಇಟ್ಟಿಗೆಗಳು, ಬಣ್ಣ ಮತ್ತು ಬ್ರಷ್ ಇಂತಹ ಪದಾರ್ಥಗಳ ಸಹಾಯದಿಂದಲೂ ಸ್ಥೂಲರೂಪದಲ್ಲಿ ಇತರರಿಗೆ ತೋರ್ಪಡಿಸುವಂತೆ ಅವಕಾಶವನ್ನು ಕಲ್ಪಿಸಬಹುದು. ತಾವು ನೋಡಿರುವ ವಸ್ತುಗಳಿಗೆ ಸಂಬಂಧವಾದ

ವಿಶೇಷಾಂಶಗಳನ್ನು ತಿಳಿಯಬೇಕೆಂದು ಅವರಿಗೆ ಕುತೂಹಲವು ಹುಟ್ಟಿದಾಗ ಆ ವಿಷಯದಲ್ಲಿ ಇತರರು ಬರೆದಿರುವ ಪುಸ್ತಕಗಳನ್ನೂ ಕೊಡಬಹುದು.

ಮಕ್ಕಳಿಗೆ ಪ್ರಕೃತಿ ಪರೀಕ್ಷೆಯಲ್ಲಿ ವಿಶೇಷವಾದ ಆದರವನ್ನು ಹುಟ್ಟಿಸುವುದಕ್ಕೆ ಉಪಾಯವೇನು? ಪಾಠಶಾಲೆಯ ಹೊರಗಡೆಯಲ್ಲಿ ತೋಟ ಮಾಡಿಸುವುದೇ ಈ ಉದ್ದೇಶವನ್ನು ನೆರವೇರಿಸುವುದಕ್ಕೆ ಉತ್ತಮವಾದ ಮಾರ್ಗವಾಗಿರುವುದು. ತೋಟ ಮಾಡುವುದಕ್ಕಿಂತಲೂ ಸಂತೋಷಕರವಾದ, ಅಥವಾ ಆರೋಗ್ಯಕರವಾದ ಕೆಲಸವೇ ಇಲ್ಲ. ನೆಲವನ್ನು ಅಗೆದು ಸಿದ್ಧಪಡಿಸುವುದು, ಅಲ್ಲಿ ಬೀಜವನ್ನು ನೆಡುವುದು ಅಲ್ಲಿ ಬೆಳೆಯುವ ಮರಗಿಡಗಳನ್ನು ಆದರದಿಂದ ಪೋಷಿಸುವುದು, ತೋಟದ ಗಿಡಗಳ ಬೆಳವಳಿಕೆಗೆ ಅನುಕೂಲ ಅಥವಾ ಪ್ರತಿಕೂಲವಾದ ಮಳೆ, ಗಾಳಿ, ಬಿಸಿಲು ಇಂತಹ ಅಂಶಗಳನ್ನು ತಿಳಿಯುವುದು, ಈ ಕಾರ್ಯಗಳಲ್ಲೆಲ್ಲಾ ಮಕ್ಕಳಿಗೆ ವಿಶೇಷ, ಕುತೂಹಲವಿರುವುದು. ಆದರೆ ನಮ್ಮಲ್ಲಿ ಎಲ್ಲರಿಗೂ ತೋಟ ಮಾಡಿಸುವುದಕ್ಕೆ ಸಾಕಾದಷ್ಟು ಅನುಕೂಲಗಳು ಇಲ್ಲದಿರಬಹುದು. ಆದರೂ ಕೆಲವು ಗಿಡಗಳನ್ನಾದರೂ ಇಟ್ಟುಕೊಂಡು ಅವುಗಳನ್ನು ಕ್ರಮವಾಗಿ ಪರೀಕ್ಷಿಸುವುದು, ಪ್ರತಿಯೊಬ್ಬನಿಗೂ ಸಾಧ್ಯವೆಂದು ತೋರುವುದು. ಮೇಲಾಗಿ ನಮ್ಮ ಸುತ್ತಲೂ ಕಾಗೆ, ಗುಬ್ಬಿ, ಮೊದಲಾದ ಪಕ್ಷಿಗಳು ಸದಾ ಇದ್ದೇ ಇರುವುವು. ಮಕ್ಕಳು ಇವುಗಳನ್ನು ಪರೀಕ್ಷಿಸುವಂತೆ, ಮಾಡುವುದು ಶ್ರಮಸಾಧ್ಯವಲ್ಲ. ಈರೀತಿಯಲ್ಲಿ ಹೊರಗಿನ ವಸ್ತುಗಳಲ್ಲಿ ಮಕ್ಕಳಿಗೆ ಕುತೂಹಲವನ್ನು ಹುಟ್ಟಿಸುವುದರಿಂದ ನ್ವಾಭಿಮಾನವು ಸ್ವಲ್ಪ ಕಡಮೆಯಾಗುವದು ಮತ್ತು ಬಾಲ್ಯದ ಸ್ಮೃತಿಯು ಸಂತೋಷ ಜನಕವಾಗುವದು. ಈ ಕಾರ್ಯಕ್ಕೆ ಪ್ರಕೃತಿಯಲ್ಲಿ ವಿಶೇಷ ಪ್ರೀತಿಯುಳ್ಳ ಮಕ್ಕಳ ಶಿಕ್ಷಣದಲ್ಲಿ ಕುಶಲನಾದ ಉಪಾಧ್ಯಾಯನು ಬೇಕೆಂದು ಹೇಳಬೇಕಾದುದೇ ಇಲ್ಲ. ಇವನು ಮಕ್ಕಳಲ್ಲಿ ಅನ್ಯ ತಾಪವುಳ್ಳವನಾಗಿಯೂ ಪ್ರತಿಯೊಂದು ಹೂವಿನಲ್ಲೂ, ಪ್ರಾಣಿಯಲ್ಲೂ, ಕಾಣುವ ದೇವರ ಮಹಿಮೆಯನ್ನು ಮಕ್ಕಳು ತಿಳಿಯುವಂತೆ ಮಾಡಲು ಶಕ್ತನಾಗಿಯೂ ಇರಬೇಕು. ತೋಟ ಮಾಡಿಸುವುದಕ್ಕೆ ವಿಶೇಷ ಕಾಲವೂ, ಶ್ರಮವೂ ಬೇಕೆಂದು, ನೀವು ಯೋಚಿಸಬಹುದು. ಆದರೆ, ಮಕ್ಕಳ ದೈಹಿಕ, ಮಾನಸಿಕ, ಶಕ್ತಿಗಳು ಕ್ರಮವಾಗಿ ಬೆಳೆಯುವಂತೆ ಮಾಡಲು ಈ ಕೆಲಸವು ಸಾಧಕವಾಗುವುದರಿಂದ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವು ಇದ್ದೇ ಇರುವುದು.

ಪಾಠಶಾಲೆಯಲ್ಲಿ ತೋಟದ ಅವಶ್ಯಕತೆಯನ್ನು ಸ್ವಲ್ಪಮಟ್ಟಿಗೆ ತಿಳಿಸಿದೆನು. ಈ ವಿಷಯದಲ್ಲಿ ನಾನು ಇಗ್ಲೆಂಡಿನಲ್ಲಿ ನಮ್ಮ ಪಾಠಶಾಲೆಯಲ್ಲಿ ಮಾಡುತ್ತಿರುವ ಪ್ರಯತ್ನ ವೇನೆಂಬುದನ್ನು ಸ್ವಲ್ಪ ವಿವರಿಸುವೆನು. ನಮ್ಮ ತೋಟವು 80 ಅಡಿ ಉದ್ದ 8 ಅಡಿ ಅಗಲವುಳ್ಳದ್ದು. ಇದರಲ್ಲಿ ಹೂಗಳನ್ನು ಬೆಳೆಸುವುದಕ್ಕೆಂತಲೂ, ಕಾಯಿಪಲ್ಯಗಳನ್ನು ಬೆಳೆಸುವುದಕ್ಕೆಂತಲೂ ಎರಡು ಭಾಗಗಳಿರುವುವು. ಪ್ರತಿಯೊಂದು ಭಾಗದಲ್ಲೂ 18 ಸಣ್ಣ ಪಾತಿಗಳಿರುವುವು. ಈ ತೋಟವು ಯಾವದೊಂದು ತರಗತಿಗೆ ಮಾತ್ರ ಸೇರಿದುದಲ್ಲ. ಒಟ್ಟು ಪಾಠಶಾಲೆಗೆ ಸೇರಿದುದು. ಪ್ರತಿಯೊಂದು ಪಾತಿಯಲ್ಲೂ ಇಬ್ಬರು ಮಕ್ಕಳು ಕೆಲಸಮಾಡುವರು. ಅವಶ್ಯಕವಾದಾಗ ಇವರು ತಮ್ಮ ಸಹಪಾಠಿಗಳ ಸಹಾಯವನ್ನು ಕೇಳಿಕೊಳ್ಳುವರು. ತೋಟದಲ್ಲಿ ಕೆಲಸಮಾಡಲು ಅವಕಾಶವಿಲ್ಲದ ಮಕ್ಕಳು, ಪಾಠಶಾಲೆಯ ಕಿಟಕಿಗಳಲ್ಲಿ ಹೂವಿನ ಕುಂಡಗಳನ್ನಿಟ್ಟು ಅವುಗಳಲ್ಲಿ ಗಿಡಗಳನ್ನು ಹಾಕಿ ಬೆಳಸುವರು. ಈ ಗಿಡಗಳನ್ನು ನೋಡಿಕೊಳ್ಳುವುದಕ್ಕೂ ತರಗತಿಯಲ್ಲಿ ಹೂಗಳನ್ನು ಕ್ರಮವಾಗಿ ಇಡುವುದಕ್ಕೂ ತರಗತಿಯಲ್ಲಿಟ್ಟಿರುವ ಪ್ರಾಣಿಗಳನ್ನು ನೋಡಿಕೊಳ್ಳುವುದಕ್ಕೂ ನಾವು ಪ್ರತಿದಿವಸವೂ 20 ನಿಮಿಷಗಳ ಕಾಲಕೊಡುವೆವು. ಪಾಠಶಾಲೆಯ ಹೊರಗಡೆಯಲ್ಲಿ ತೋಟಮಾಡಿಸುವುದಕ್ಕೆ ವಾರಕ್ಕೆ ಕನಿಷ್ಠ ಪಕ್ಷ 45 ನಿಮಿಷಗಳ ಕಾಲವನ್ನು ಕೊಡುವೆವು. ಈ ಕೆಲಸ ಮಾಡುವಾಗ ಒಬ್ಬ ಉಪಾಧ್ಯಾಯನು 8-10 ಮಕ್ಕಳನ್ನು ಮಾತ್ರ ಕ್ರಮವಾಗಿ ನೋಡಿಕೊಳ್ಳುವುದು ಸಾಧ್ಯವು. ಉಳಿದವರು ತಮ್ಮ ತರಗತಿಯಲ್ಲಿ ಬೇರೆ ಕೆಲಸಗಳನ್ನು ಮಾಡುತಿರುವರು. ಆದರೆ ಎಲ್ಲರಿಗೂ ತೋಟದ ಕೆಲಸವನ್ನು ಮಾಡುವುದಕ್ಕೆ ಅವಕಾಶವು ದೊರೆಯುವಂತೆ ನಾವು ಎಚ್ಚರಿಕೆಯಿಂದ ನೋಡಿಕೊಳ್ಳುವೆವು. ತೋಟದ ಕೆಲಸವನ್ನು ಕೆಲವು ಮಕ್ಕಳು ಮಾಡುವಾಗ ಉಳಿದವರು ತರಗತಿಯಲ್ಲಿ ಇದ್ದುಕೊಂಡು ಆದಿನದ ವಾಯು ಗುಣವನ್ನು ಪರೀಕ್ಷಿಸುವರು ಮತ್ತು ತರಗತಿಯಲ್ಲಿಟ್ಟಿರುವ ಗಿಡಗಳಲ್ಲಿ ಉಂಟಾಗುತಲಿರುವ ವ್ಯತ್ಯಾಸವನ್ನು ತಿಳಿಯುವರು.

ವಾರದಲ್ಲಿ ಎರಡಾವೃತ್ತಿ 30 ನಿಮಿಷಗಳ ಕಾಲ ಒಂದು ನಿಸ್ಕೃಷ್ಟವಾದ ಪ್ರಕೃತಿಯ ವಸ್ತುವನ್ನು ವಿಶೇಷವಾಗಿ ಪರೀಕ್ಷಿಸಲು ಅವಕಾಶವನ್ನು ಕಲ್ಪಿಸಿರುವೆವು. ಇಂತಹ ಪರೀಕ್ಷೆಯು ಕೆಲವು ವಾರ ಅಥವಾ ತಿಂಗಳುಗಳವರಿಗೆ ನಡೆಯುಬಹುದು. ಈ ಕಾಲದಲ್ಲಿ ನಮ್ಮ ದೃಷ್ಟಿಗೆ ಬೀಳುವ ಇತರ ವಸ್ತುಗಳನ್ನು ನಾವು ನೋಡುವದಿಲ್ಲವೆಂದು ಭಾವಿಸಬಾರದು. ನಾವು ವಿಶೇಷವಾಗಿ ನೋಡುತಿರುವ

ವಸ್ತುವಿಗೂ ಉಳಿದ ವಸ್ತುಗಳಿಗೂ ಇರುವ ಸಂಬಂಧವನ್ನು ತಿಳಿಯುತ್ತಲೇ ಇರುವೆವು. ಈ ವಸ್ತುವಿನಿಂದ ಮಕ್ಕಳ ದಿನಚರ್ಯೆಯಲ್ಲಾಗುವ ಪ್ರಯೋಜನವನ್ನೂ ತಿಳಿಯುವೆವು. ಕೆಲವು ವೇಳೆಗಳಲ್ಲಿ ಒಂದು ವಸ್ತುವಿನ ಪರೀಕ್ಷೆಯನ್ನು ಕೆಲವುದಿವಸಗಳ ವರಿಗೆ ನಿಲ್ಲಿಸಿ ಆಮೇಲೆ ತೆಗೆದುಕೊಳ್ಳಬೇಕಾಗುವುದು. ನಿದರ್ಶನವಾಗಿ ನಾವು ಮುಲ್ಲಂಗಿಯ ವಿಷಯವನ್ನು ಒಂದು ವರ್ಷದಲ್ಲಿ ಜೂನ್ ತಿಂಗಳಲ್ಲಿ ವಿಶೇಷವಾಗಿ ಪರೀಕ್ಷಿಸುತಿದ್ದೆವು ಈ ಪರೀಕ್ಷೆಯನ್ನು ಆಗ ನಿಲ್ಲಿಸಿ ಪುನಃ ಆಗಸ್ಟ್ ತಿಂಗಳಲ್ಲಿ ಅಂದರೆ ಗೆಡ್ಡೆಯ ಕರಗಿ ಗಿಡವು ಬೆಳೆದು ಹೂವಾಗಿ ಕಾಯಿಬಿಟ್ಟಾಗ ತೆಗೆದುಕೊಂಡೆವು. ಈ ರೀತಿಯಲ್ಲಿ ಮಧ್ಯದಲ್ಲಿ ವಿರಾಮವನ್ನು ಕೊಟ್ಟು ಆಮೇಲೆ ಪರೀಕ್ಷೆಯನ್ನು ಪುನಃ ತೆಗೆದುಕೊಳ್ಳುವೆವು. ಹೀಗೆ ವಿಶೇಷವಾಗಿ ಪರೀಕ್ಷಿಸಲು ತೋಟದಲ್ಲಿ ಬೆಳೆಯುವ ವಸ್ತುಗಳಲ್ಲೊಂದನ್ನು ವಾಡಿಕೆಯಾಗಿ ಆರಿಸಿಕೊಳ್ಳುವೆವು. ಆದರೆ ತೋಟಕ್ಕೆ ಆಗಾಗ್ಗೆ ಬರುವ ಪ್ರಾಣಿಗಳನ್ನೂ ತೋಟಕ್ಕೆ ಅನುಕೂಲ ಅಥವಾ ಪ್ರತಿಕೂಲವಾದ ಮಳೆ ಗಾಳಿ ಮುಂತಾದವುಗಳನ್ನೂ ವಿಶೇಷ ಪರೀಕ್ಷೆಗೆ ಗುರಿಮಾಡವದೂ ಉಂಟು.

ಪಾಠಶಾಲೆಯಲ್ಲಿರುವ ಪ್ರಾಣಿಗಳಿಗೆ ತಿಂಡಿಯನ್ನೂ ತೋಟಕ್ಕೆ ಬೇಕಾದ ಬೀಜಗಳನ್ನೂ ಕೊಂಡುಕೊಳ್ಳಲು ಮಕ್ಕಳು ಅಂಗಡಿಗೆ ಹೋದಾಗ ಅಳತೆ, ತೂಕ, ನಾಣ್ಯದ ಬೆಲೆ ಮುಂತಾದ ಅಂಶಗಳು ಅವರಿಗೆ ತಿಳಿಯುವವು. ಓದುಬರಹವನ್ನು ಸಾಧ್ಯವಾದಾಗ ಲೆಲ್ಲಾ ತೋಟದ ಕೆಲಸದೊಡನೆ ಸಂಬಂಧಿಸುವೆವು. ಆದರೆ 6 ವರ್ಷದೊಳಗಿನ ಮಕ್ಕಳಿಗೆ ಯಾವವಿಧವಾದ ಓದು ಬರಹಗಳ ಪಾಠವೂ ಇಲ್ಲ. ಪ್ರಕೃತಿ ಪರೀಕ್ಷೆ, ಕಿಂಡರ್ ಗಾರ್ಟ್ನ್ ಆಟಗಳು, ಕಥೆ, ಚಿತ್ರ ಬರೆಯುವುದು ಇವೇ ಇಂತಹ ಮಕ್ಕಳ ಮುಖ್ಯ ಕೆಲಸಗಳಾಗಿರುವುವು. ಕೆಲವು ವೇಳೆಗಳಲ್ಲಿ ಪ್ರಕೃತಿ ಪರೀಕ್ಷೆಗೆ ಸಹಾಯವಾಗಿ ಅತ್ಯುತ್ತಮವಾದ ಶಿಲ್ಪಿಯು ಬರೆದ ಚಿತ್ರವನ್ನೂ ಪ್ರಸಿದ್ಧನಾದ ಕವಿಯು ಬರೆದ ಗ್ರಂಥಗಳನ್ನೂ ಉಪಯೋಗಿಸುವದುಂಟು.

ಈ ಕೆಲಸಕ್ಕೆ ನಮ್ಮ ಪಾಠಶಾಲೆಯ ಉಪಾಧ್ಯಾಯರು ಹೇಗೆ ಸಿದ್ಧಪಡಿಸುವರೆಂಬುದನ್ನು ಸ್ವಲ್ಪ ತಿಳಿಸುವೆನು. ಅವರು ತಿಳಿಸಬೇಕೆಂದು ಉದ್ದೇಶಿಸಿರುವ ವಸ್ತುವನ್ನು ತಾವು ಮೊದಲು ಕ್ರಮವಾಗಿ ಪರೀಕ್ಷಿಸಿ ತಮಗೆ ತಿಳಿದ ಅಂಶವನ್ನು ಬರೆದಿಡುವರು. ಆಮೇಲೆ ಆ ವಿಷಯಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನೊೀದಿ ವಿಶೇಷಾಂಶಗಳಿದ್ದರೆ ಬರೆದಿಡುವರು. ತಾವು ತಿಳಿದಿರುವ ಅಂಶಗಳನ್ನು ಮಕ್ಕಳಿಗೆ ಯಾವರೀ

ತಿಯಲ್ಲಿ ಬೋಧಿಸಬೇಕೆಂಬುದನ್ನು ಆಮೇಲೆ ಯೋಚಿಸುವರು. ಕೊನೆಗೆ, ಮಕ್ಕಳು ತಮ್ಮ ಅನುಭವವನ್ನು ಬ್ರಷ್ ಮತ್ತು ಬಣ್ಣ, ಚಾಕ್ ಮತ್ತು ಕಾಗದ, ಜೇಡೀ ಮಣ್ಣು, ಇಟ್ಟಿಗೆ, ಈ ಪದಾರ್ಥಗಳ ಸಹಾಯದಿಂದ ಸ್ಥೂಲ ರೂಪದಲ್ಲಿ ಹೇಗೆತೋರ್ಪಡಿಸಬೇಕೆಂಬುದನ್ನು ಯೋಚಿಸುವರು.

ಪಾಠಶಾಲೆಯ ತೋಟದಿಂದ ಪ್ರಕೃತಿಪರೀಕ್ಷೆಗೆ ಯಾವವಿಧವಾದ ಸಹಾಯವಾಗುವುದೆಂಬುದನ್ನು ತಿಳಿಸಿದೆನು. ಇಂತಹ ತೋಟದಿಂದ ಮಕ್ಕಳಿಗೂ ಅವರ ಮೂಲಕ ಜನಾಂಗಕ್ಕೂ ಆಗುವ ಪ್ರಯೋಜನ ವೇನೆಂದು ಯೋಚಿಸೋಣ. ಮಕ್ಕಳಲ್ಲಿ ದೈಹಿಕವಾದ ಶಕ್ತಿಗಳೆಂತಲೂ ಮಾನಸಿಕವಾದ ಶಕ್ತಿಗಳೆಂತಲೂ ಎರಡು ವಿಧವಾದ ಶಕ್ತಿಗಳು ಸಹಜವಾಗಿರುವುವಷ್ಟೆ. ಇವುಗಳಲ್ಲಿ ದೈಹಿಕವಾದ ಶಕ್ತಿಗಳೇ ಬಾಲ್ಯದಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುವುವಷ್ಟೆ. ಈ ಶಕ್ತಿಗಳ ಬೆಳವಳಿಕೆಗೆ ತೋಟದಿಂದ ವಿಶೇಷ ಸಹಾಯವಾಗುವುದು. ತೋಟದ ಕೆಲಸವು ಪಾಠಶಾಲೆಯ ಹೊರಗಡೆ ನಡೆಯುವುದರಿಂದ ಈ ಕಾಲದಲ್ಲಿ ಮಕ್ಕಳು ಪರಿಶುದ್ಧವಾದ ಗಾಳಿಯಲ್ಲಿರುವರು. ಇಂತಹ ಕೆಲಸದಲ್ಲಿ ಮನಃಪೂರ್ವಕವಾಗಿ ನಿರತರಾಗುವುದರಿಂದ ಕೆಲಸಮಾಡುವಾಗ ಸಂತೋಷವುಳ್ಳವರಾಗಿರುವರು. ಇವರಿಗೆ ಯಾವ ಕೆಲಸವೂ ಕಷ್ಟವಾಗಿ ಕಾಣುವುದಿಲ್ಲ. ಈ ಕೆಲಸಗಳಿಗೆ ಚಲನೆಯು ಅವಶ್ಯಕವಷ್ಟೆ. ಮಕ್ಕಳಲ್ಲಿರುವ ದೈಹಿಕವಾದ ಚಟುವಟಿಕೆಯು ಹೀಗೆ ಕ್ರಮವಾಗಿ ಉಪಯೋಗಿಸಲ್ಪಡುವುದರಿಂದ ಜೇಷ್ಟೆ ಮುಂತಾದ ಒರಟು ತನವು ತಪ್ಪುವುದು. ತೋಟದಲ್ಲಿರುವ ಸುಂದರವಾದ ಹೂಗಳ, ಮತ್ತು ಪ್ರಾಣಿಗಳ ನೋಟದಿಂದಲೂ, ಹೂಗಳ ಸುವಾಸನೆಯಿಂದಲೂ, ಮಳೆಯಾದ ಮೇಲೆ ನೆಲದಿಂದ ಏಳುವ ಸುವಾಸನೆಯಿಂದಲೂ, ಆಕಾಶದಲ್ಲಿ ಕಾಣುವ ಆಶ್ಚರ್ಯಕರವಾದ ನೋಟಗಳಿಂದಲೂ, ಪಕ್ಷಿಗಳ ಗಾನವನ್ನು ಕೇಳುವುದರಿಂದಲೂ, ತೋಟದಲ್ಲಿ ಬಿಡುವ ಹಣ್ಣುಗಳನ್ನು ರುಚಿನೋಡುವುದರಿಂದಲೂ ಮಗುವಿನ ಇಂದ್ರಿಯಗಳು ಸ್ವಾಭಾವಿಕವಾದ ಮತ್ತು ಉತ್ತಮವಾದ ರೀತಿಯಲ್ಲಿ ಪಟುವಾಗುವುವು. ಹೀಗೆ ಉಂಟಾದ ಸಂತೋಷಕರವಾದ ಅನುಭವಗಳು ಮಕ್ಕಳ ಪುರೋಭಿವೃದ್ಧಿಗೆ ಸಾಧಕವಾಗುವುವು.

ಪ್ರಕೃತಿಯನ್ನು ಕ್ರಮವಾಗಿ ಪರೀಕ್ಷಿಸುವಾಗ ಸುಂದರವಾದ ವಸ್ತುಗಳಲ್ಲಿ ಮಕ್ಕಳಿಗೆ ಪ್ರೀತಿಯುಂಟಾಗುವುದಷ್ಟೆ. ಇಂತಹ ಪ್ರೀತಿಯು ಮಕ್ಕಳ ಸ್ವಭಾವ

ದಲ್ಲಿ ಮಾರ್ದವವನ್ನುಂಟುಮಾಡುವುದು. ತೋಟದಲ್ಲಿ ಆದರದಿಂದ ಕೆಲಸಮಾಡು ತಿದ್ದ ಯಾವ ಮಗುವೂ ಆಮೇಲೆ ನಿಷ್ಕರುಣೆಯಿಂದ ಹೂಗಳನ್ನು ಚೂರುಮಾಡು ವುದಕ್ಕೂ, ಮನಃಪೂರ್ವಕವಾಗಿ ಒಂದು ಕ್ರಿಮಿಯನ್ನು ತುಳಿಯುವುದಕ್ಕೂ, ಅಥವಾ ಒಂದು ಚಿಟ್ಟೆಯನ್ನು ಕೊಂದು ಕಾಗದಕ್ಕೆ ಅಂಟಿಸಿ ಇಡುವುದಕ್ಕೂ ಇಷ್ಟ ಪಡುವುದಿಲ್ಲ. ಪ್ರಕೃತಿಯ ವಸ್ತುಗಳಲ್ಲಿ ಪ್ರೀತಿಯು ಇಂತಹ ವಸ್ತುಗಳನ್ನೆಲ್ಲಾ ಸೃಷ್ಟಿಸಿದ ದೇವರಲ್ಲಿ ಪ್ರೀತಿಯನ್ನೂ, ಭಕ್ತಿಯನ್ನೂ ಹೆಚ್ಚಿಸುವುದು.

ತೋಟವು ದಾನದಿಂದಾಗುವ ಸಂತೋಷವನ್ನು ಅನುಭವಿಸುವುದಕ್ಕೂ ಮಕ್ಕಳಿಗೆ ಅವಕಾಶವನ್ನು ಕಲ್ಪಿಸುವುದು. ತೋಟದಲ್ಲಿ ಬೆಳೆದ ಹೂಗಳನ್ನು ಅಸ್ವಸ್ಥನಾದ ಸ್ನೇಹಿತನ ಕೊಠಡಿಯನ್ನಲಂಕರಿಸುವುದಕ್ಕೆ ಮಕ್ಕಳು ಉಪಯೋಗಿಸ ಬಹುದು. ಹೀಗೆ ದಾನ ಮಾಡುವಾಗ ತಮಗೆ ಪ್ರಿಯರಾದ ತಾಯಿತಂದೆಗಳನ್ನೂ, ಉಪಾಧ್ಯಾಯರನ್ನೂ ಮಕ್ಕಳು ಮರೆಯುವುದಿಲ್ಲ. ತಾವು ಬೆಳೆದ ವಸ್ತುಗಳಲ್ಲಿ ಕೆಲ ವನ್ನು ಅವರಿಗೂ ವಿಶ್ವಾಸದಿಂದ ಕೊಡುವರು.

ತೋಟದಲ್ಲಿ ಮಕ್ಕಳು ನೋಡಿದ ಸಂತೋಷ ಜನಕವಾದ ವಸ್ತುಗಳು ಅವು ಗಳ ವಿಷಯದಲ್ಲಿ ವಿಶೇಷಾಂಶಗಳನ್ನು ತಿಳಿಯಬೇಕೆಂಬ ಕುತೂಹಲವನ್ನು ಹುಟ್ಟಿ ಸುವುವು. ಈ ಕುತೂಹಲವೇ ಬುದ್ಧಿಯ ವ್ಯಾಪಾರಗಳ ವೃದ್ಧಿಗೆ ಸಾಧಕವಾಗು ವುದು. ಮಕ್ಕಳ ಪರೀಕ್ಷಣ ಶಕ್ತಿಯು ಹೆಚ್ಚುವುದು. ಇಲ್ಲಿ ಮಕ್ಕಳಿಗೆ ಉಂಟಾದ ಜ್ಞಾನವು ಈ ವಿಷಯದಲ್ಲಿ ಪುಸ್ತಕಗಳಿಂದ ಹೆಚ್ಚು ಜ್ಞಾನವನ್ನು ಸಂಪಾದಿಸಬೇಕೆಂಬ ಆಶೆಗೆ ಕಾರಣವಾಗುವುದು.

ತೋಟವು ಮಕ್ಕಳಿಗೆ ಅಂಕಗಳ ಜ್ಞಾನವನ್ನುಂಟುಮಾಡುವುದಕ್ಕೂ ಸಾಧಕ ವಾಗುವುದು. ತೋಟದ ಪಾತಿಗಳ, ಮತ್ತು ದಾರಿಗಳ ಸಂಖ್ಯೆ ಮತ್ತು ಪ್ರಮಾಣ ಗಿಡಗಳ ಎತ್ತರ, ಒಂದು ಕಾಂಡದ ಮೇಲಿರುವ ಮಗ್ಗುಗಳ ಮತ್ತು ಹೂಗಳ ಸಂಖ್ಯೆ, ಗಿಡಗಳಿಂದುಂಟಾದ ಬೀಜದ ಅಳತೆ, ಇಂತಹ ಅಂಶಗಳನ್ನು ತಿಳಿಸುವಾಗ ಅಂಕ ಗಣಿತ ಪಾಠಕ್ಕೆ ವಿಶೇಷ ಅವಕಾಶ ವಿರುವುದು. ಈ ರೀತಿಯಲ್ಲಿ ತಿಳಿಸಿದ ಅಂಕ ಗಣಿತವು ಮಕ್ಕಳ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವುದು.

ತೋಟದಲ್ಲಿ ಮಕ್ಕಳು ಕಳೆದ ಪ್ರತಿಯೊಂದು ಘಂಟೆಯನ್ನೂ ಪ್ರಾಕೃತಿಕ ಶಾಸ್ತ್ರಗಳಲ್ಲೂ ಕಾವ್ಯ ಶಾಸ್ತ್ರಗಳಲ್ಲೂ ಪ್ರವೇಶವುಂಟಾಗುವುದಕ್ಕೆ ಒಂದೊಂದು ಬಾಗಿಲೆಂದೆಣಿಸಬಹುದು. ಮಗುವು ಪಾಠಶಾಲೆಯು ಏಕ ದೇಶವಾಗಿರುವದು,

ಮಕ್ಕಳನ್ನು ಶಿಕ್ಷಿಸಿದರೆ ಮೊದಲು ಪಾಠಶಾಲೆಯೂ ಆಮೇಲೆ ಜನಾಂಗವೂ ಉತ್ತಮ ಸ್ಥಿತಿಗೆ ಬರಲು ಸಂಶಯವಿಲ್ಲವೆಂದು ತೋರುವುದು ಆದುದರಿಂದ ವಿದ್ಯಾಭ್ಯಾಸದ ಅಧಿಕಾರಿಗಳು ಪ್ರತಿಯೊಂದು ಪಾಠಶಾಲೆಯಲ್ಲೂ ಒಂದು ತೋಟವಿರಬೇಕೆಂತಲೂ ಮಕ್ಕಳು ಅಲ್ಲಿ ಪಾಠಶಾಲೆಯ ಕಾಲದಲ್ಲಿ ಕೆಲಸ ಮಾಡಲು ಸರಿಯಾದ ಅವಕಾಶವನ್ನು ಕಲ್ಪಿಸಬೇಕೆಂತಲೂ, ವಸ್ತು ಈ ಕೆಲಸವನ್ನು ಪಾಠಶಾಲೆಯ ಇತರ ಕೆಲಸಗಳಿಗೆಲ್ಲಾ ಆಧಾರವಾಗಿಟ್ಟುಕೊಳ್ಳಬೇಕೆಂತಲೂ ನಿಯಮಿಸುವದು ಅವಶ್ಯಕವು. ನಮ್ಮ ಕೆಲಸವು ಮನುಷ್ಯರನ್ನು ಶಿಕ್ಷಿಸುವುದು ಯಂತ್ರಗಳನ್ನು ನಡೆಸುವದಲ್ಲ.

ಈ ರೀತಿಯಲ್ಲಿ ನಾನು ಪ್ರಕೃತಿ ಪರೀಕ್ಷೆಯು ಪಾಠವು ವಿದ್ಯಾಭ್ಯಾಸಕ್ಕೆಲ್ಲಾ ಆಧಾರವಾಗಿರಬೇಕೆಂದು ವಾದಿಸುತ್ತಿರುವಾಗ ವಸ್ತುತಃ ಕಿಂಡರ್ ಗಾರ್ಟನ್ ಕ್ರಮಕ್ಕಾಗಿಯೇ ವಾದಿಸುತ್ತಿರುವೆನು. ಏಕೆಂದರೆ ಪ್ರಕೃತಿ ಪರೀಕ್ಷೆಯೇ ಕಿಂಡರ್ ಗಾರ್ಟನ್ ಕ್ರಮಕ್ಕೆಲ್ಲಾ ಆಧಾರವಾಗಿರುವುದು. ಫ್ರೊಬೆಲ್ಲನ ಕ್ರಮದಲ್ಲಿ ಈ ಭಾಗವನ್ನು ಮರೆತು ಕರಣಗಳಮೇಲೆಯೇ ವಿಶೇಷ ಗಮನವನ್ನಿಟ್ಟಿರುವುದರಿಂದ ಅನೇಕವೇಳೆ ಕಿಂಡರ್ ಗಾರ್ಟನ್ ಕ್ರಮವೇ ನಮಗೆ ಅರ್ಥವಿಲ್ಲದಂತೆ ಕಂಡಿರುವುದು. ಪಾಠಶಾಲೆಯಲ್ಲಿ ಸಜೀವನಾದ ಮತ್ತು ಬೆಳೆಯುವ ಪದಾರ್ಥಗಳಿರುವುದೇ ಕಿಂಡರ್ ಗಾರ್ಟನ್ ಕ್ರಮಕ್ಕೆ ಜೀವವನ್ನು ಕೊಡುವುದು. ಮಗುವು ತಾನು ಪ್ರತಿನಿತ್ಯವೂ ಬೆಳೆಸುತಿರುವ ಗಿಡದ ಚಿತ್ರವನ್ನು ಬರೆಯುವುದಕ್ಕೂ ಯಾವತ್ತೋ ಒಂದಾವೃತ್ತಿ ಕೇಳಿದ ಅಥವಾ ನೋಡಿದ ಗಿಡದ ಚಿತ್ರವನ್ನು ಬರೆಯುವುದಕ್ಕೂ ವಿಶೇಷ ವ್ಯತ್ಯಾಸ ವಿರುವುದು. ಮೊದಲನೇ ಕೆಲಸದಲ್ಲಿರುವ ಆದರವು ಎರಡನೇ ಕೆಲಸದಲ್ಲೆಂದಿಗೂ ಇರಲಾರದು.

ವಿದ್ಯಾಭ್ಯಾಸವು ಪ್ರಾಣಿಗಳ ಬೆಳವಳಿಕೆಯಂತೆ ಕ್ರಮಕ್ರಮವಾಗಿ ವೃದ್ಧಿಹೊಂದುವ ಅಂಶವಾಗಿರುವುದು. ಇದರಲ್ಲಿ ಹಿಂದು ಮುಂದಿನ ಭಾಗಗಳಿಗೆ ಸರಿಯಾದ ಸಂಬಂಧವಿರಬೇಕು. ಪ್ರಕೃತಿ ಪರೀಕ್ಷೆಯ ಪಾಠವನ್ನು ಕನಿಷ್ಠಪಕ್ಷ ೯ ವಯಸ್ಸಿನವರಿಗೆ ಪಾಠಶಾಲೆಯ ಪಾಠದಲ್ಲಿ ಮುಖ್ಯವಾದ ಪಾಠವನ್ನಾಗಿಟ್ಟು ಕೊಂಡಿರಬೇಕು. ಆಮೇಲೆ ಇದನ್ನೇ ಮಕ್ಕಳಿಗೆ ಪ್ರಾಕೃತಿಕ ಶಾಸ್ತ್ರಗಳನ್ನು ತಿಳಿಸುವುದಕ್ಕೆ ಅನುಕೂಲವಾದ ಪಾಠವನ್ನಾಗಿ ಮಾಡಿಕೊಳ್ಳಬೇಕು. ನಿದರ್ಶನವಾಗಿ ಸಣ್ಣ ಮಕ್ಕಳು ಸೂರ್ಯನ ವಿಷಯವನ್ನು ತಿಳಿಯುತಿರುವಾಗ ಅವನ ಬೆಳಕಿನಿಂದಲೂ, ಶಾಖದಿಂದಲೂ ನಮಗೆ ಉಂಟಾಗುವ ಸುಖವನ್ನು ಮಾತ್ರ ತಿಳಿಯುವರು. ದೊಡ್ಡವರು ಅದೇ ವಿಷ

ಯವನ್ನು ತಿಳಿಯುತಿರುವಾಗ ಬೇರೆಬೇರೆ ಕಾಲಗಳಲ್ಲೂ ಅಕ್ಷಾಂಶಗಳಲ್ಲೂ ಸೂರ್ಯ ರಶ್ಮಿಗಳು ಭೂಮಿಯೊಡನೆ ಮಾಡುವ ಕೋಣಗಳನ್ನಳೆಯುವರು. ವರ್ಷದ ಬೇರೆ ಬೇರೆ ಕಾಲಗಳಲ್ಲಿ ನೆರಳು ಬೇರೆಬೇರೆ ಉದ್ದವುಳ್ಳದ್ದಾಗಿರುವುದಕ್ಕೆ ಕಾರಣವನ್ನು ತಿಳಿಯುವರು. ದೊಡ್ಡ ತರಗತಿಯಲ್ಲಿ ಓದುವ ಹೆಣ್ಣುಮಕ್ಕಳಿಗೆ ಪಾಕಶಾಸ್ತ್ರವನ್ನು ಹೇಳಿಕೊಡುವಾಗ ಪಾಠಶಾಲೆಯ ತೋಟವು ವಿಶೇಷ ಸಹಾಯ ಮಾಡುವುದು. ಇಂತಹ ಮಕ್ಕಳು ತೋಟದಲ್ಲಿ ಹೊಂದಿದ ಜ್ಞಾನವು ಮುಂದೆ ಅವರ ಕರ್ತವ್ಯವನ್ನು ಮಾಡುವಾಗ ವಿಶೇಷ ಪ್ರಯೋಜನಕರವಾಗುವುದು. ಇವರು ಆಮೇಲೆ ಕೆಟ್ಟ ಕಾಯಿಪಲ್ಯಗಳನ್ನು ಉಪಯೋಗಿಸಲು ಎಂದಿಗೂ ಕುತೂಹಲಪಡುವದಿಲ್ಲ. ಮತ್ತು ಸಾಧ್ಯವಾದರೆ ತಮ್ಮ ಮನೆಗಳಲ್ಲಿ ಕಾಯಿಪಲ್ಯಗಳನ್ನು ಬೆಳೆಸಲು ಪ್ರಯತ್ನಿಸುವರು.

ಪ್ರಕೃತಿಯಲ್ಲಿ ಪ್ರೀತಿಯನ್ನು ಹುಟ್ಟಿಸುವುದೇ ಮೊದಲು ಮಕ್ಕಳಿಂದ ತೋಟ ಮಾಡಿಸುವುದರ ಉದ್ದೇಶವು. ಆಮೇಲೆ ಕ್ರಮವಾದ ವಸ್ತುಪರೀಕ್ಷೆಯೇ ಈಕಾರ್ಯದ ಉದ್ದೇಶವಾಗುವುದು.

ಈ ಉಪನ್ಯಾಸದಿಂದ ನನ್ನ ಮಾರ್ಗವನ್ನು ಅನುಸರಿಸಬೇಕೆಂಬ ಉತ್ಸಾಹವು ನಿಮ್ಮಲ್ಲಿ ಕೆಲವರಿಗಾದರೂ ಉಂಟಾದರೆ ನಾನು ಬಹಳ ಸಂತೋಷಪಡುವೆನು.

. . . . . .

ಮೇಲಿನ ಉಪನ್ಯಾಸದಿಂದ ಮಿಸ್. ಲ್ಯಾಟರವರು ನಮ್ಮ ದೇಶದಲ್ಲಿ ಮಾಡಬೇಕೆಂದು ಉದ್ದೇಶಿಸಿದ್ದ ಕೆಲಸವೇನೆಂಬುದು ಸ್ಪಷ್ಟವಾಗಿ ತಿಳಿಯುವುದು. ಇಂತಹ ಘನವಾದ ಉದ್ದೇಶವನಿಟ್ಟುಕೊಂಡು ಇಲ್ಲಿಗೆ ಬಂದಿದ್ದವರಿಗೆ ಉಂಟಾದ ಅಕಾಲ ಮರಣವನ್ನು ನಮ್ಮ ದೇಶದ ವಿದ್ಯಾಭ್ಯಾಸದ ದುರದೃಷ್ಟವೆಂತಲೇ ಭಾವಿಸಬೇಕಾಗಿರುವುದು. ಆದರೆ ಹಿಡಿದ ಕೆಲಸವನ್ನು ಬಿಡುವುದು ಸತ್ಪುರುಷರ ಲಕ್ಷಣವಲ್ಲವಾದುದರಿಂದ ನಮ್ಮ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಮಿಸ್. ಲ್ಯಾಟರವರ ಕೆಲಸವನ್ನು ಪೂರೈಸುವುದಕ್ಕಾಗಿ ಬೆಂಗಳೂರು ವೆಸ್ಲಿಯನ್ ಮಿಷನ್ ಗರ್ಲ್‌ಸ್ಕೂಲುಗಳ ಸೂಪರಿಂಟೆಂಡೆಂಟರಾದ ಮಿಸ್ ವಿಲಿಯಂಸ್ ಎಂಬುವರನ್ನು ನಿಯಮಿಸಿರುವರು. ಇವರು ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಕಿಂಡರ್‌ಗಾರ್ಟನ್ ವಿಷಯದಲ್ಲಿ ಇಂಗ್ಲೀಷಿನಲ್ಲಿ ಉಪನ್ಯಾಸಗಳನ್ನು ಮಾಡುತಿರುವರು. ಮತ್ತು ಮಹಾರಾಣಿ ಕಾಲೇಜಿನ ಮಕ್ಕಳ ತರಗತಿಗಳಲ್ಲಿ ಮಿಸ್. ಲ್ಯಾಟರವರ ಕ್ರಮಕ್ಕನುಸಾರವಾಗಿ ಪಾಠಗ

ಳನ್ನೇರ್ಪಡಿಸುತಿರುವರು. ಬೆಂಗಳೂರಿನಲ್ಲಿ ಮಿಸ್. ಲ್ಯಾಟರವರ ಜೊತೆಯಲ್ಲಿ ಕೆಲ ಸಮಾಡುತಿದ್ದ ಮ॥ ರಾ॥ ವೆಂಕಟಸುಬ್ಬಯ್ಯನವರನ್ನು ಮಾಹಾರಾಣೀ ಕಾಲೇಜಿನಲ್ಲಿ ಕಿಂಡರ್ ಗಾರ್ಟನ್ ವಿಷಯದಲ್ಲಿ ಕನ್ನಡದಲ್ಲಿ ಉಪನ್ಯಾಸಗಳನ್ನು ಮಾಡುವುದಕ್ಕೂ ಮೈಸೂರಲ್ಲಿರುವ ಗೌರ್ನಮೆಂಟ್ ಕನ್ನಡ ಸ್ಕೂಲಿನ ಮಕ್ಕಳ ತರಗತಿಗಳಲ್ಲಿ ಮಿಸ್. ಲ್ಯಾಟರವರ ಕ್ರಮಕ್ಕನುಸಾರವಾಗಿ ಪಾಠಗಳನ್ನೇರ್ಪಡಿಸುವುದಕ್ಕೂ ನಿಯುಮಿಸಿರುವರು. ನಾರ್ಮಲ್ ಸ್ಕೂಲ್ ಹೆಡ್ಮಾಸ್ಟರು ಮ॥ ರಾ॥ ಹಿರಿಯಣ್ಣನವರನ್ನು ನಾರ್ಮಲ್ ಸ್ಕೂಲಿನಲ್ಲಿ ಕಿಂಡರ್‌ಗಾರ್ಟನ್ ವಿಷಯವಾಗಿ ಉಪನ್ಯಾಸಗಳನ್ನು ಮಾಡಲು ನಿಯಮಿಸಿರುವರು.

ವಿದ್ಯಾಭ್ಯಾಸ.

ಪೌರಕಾರ್ಯ್ಯಗಳನ್ನು ಸಮಂಜಸವಾಗಿ ಮಾಡುವುದಕ್ಕೂ ದೇಹ ಮನಶಾಸ್ತ್ರಗಳ ಜ್ಞಾನವು ಅವಶ್ಯಕವಾಗಿರುವುದು. ಸಂಘಕ್ಕೆ ಸೇರಿದ ಪ್ರತಿಪ್ರಾಣಿಯೂ ಮಾಡುವ ಕಾರ್ಯಗಳೆಲ್ಲಾ ಒಟ್ಟಾಗಿ ಸೇರಿ ಸಂಘಕಾರ್ಯಗಳೆನಿಸುವುವು. ಆದಪ್ರಯುಕ್ತ ಪ್ರತಿಯೊಬ್ಬರ ಕಾರ್ಯಗಳನ್ನೂ ವಿಚಾರ ಮಾಡಿದರೆ ಸಂಘಕಾರ್ಯಗಳೆಂಥವೆಂಬುದು ಗೊತ್ತಾಗುವುದು. ಮನುಷ್ಯರ ಸ್ವಭಾವಾನುಸಾರವಾಗಿ ಅವರವರ ಕಾರ್ಯಗಳು ಮಾಡಲ್ಪಡುವುವು. ಈ ಸ್ವಭಾವ ನಿಯಮಗಳನ್ನು ಗೊತ್ತುಮಾಡಿಕೊಳ್ಳದ ಹೊರತು ಅಕಾರ್ಯಗಳ ವಿವರವು ಗೊತ್ತಾಗುವುದಿಲ್ಲ. ಈ ನಿಯಮಗಳಾದರೋ ಮನುಷ್ಯ ದೇಹ ಮನೋ ಧರ್ಮಗಳಿಗೆ ಸಂಬಂಧಪಟ್ಟಿರುವುವು. ಆದುದರಿಂದ ಪೌರಕಾರ್ಯ್ಯಗಳ ಅವಗಾಹನಕ್ಕೆ ದೇಹ ಮನಶ್ಶಾಸ್ತ್ರಗಳ ವಿಜ್ಞಾನವು ಅವಶ್ಯಕವಾಗಿರುವುದು. ಆದರೆ ನಮ್ಮ ಈಗಿನ ಪಾಠಶಾಲೆಗಳಲ್ಲಿ ಸಾಮಾನ್ಯವಾಗಿ ಹೇಳಿಕೊಡುವ ವಿಷಯಗಳು ಪೌರ ಕಾರ್ಯಕ್ಕೆ ಉಪಯುಕ್ತವಾಗುವುದು ಬಹಳ ಕಡಮೆ. ಅಲ್ಲಿ ಕಲಿಸುವ ಚರಿತ್ರೆಯಲ್ಲಿ ಅಲ್ಪಾಂಶ ಮಾತ್ರ ಪೌರಕಾರ್ಯ್ಯಕ್ಕೆ ಸ್ವಲ್ಪ ಉಪಯೋಗಕ್ಕೆ ಬರುತಕ್ಕುದಾಗಿರುವುದು. ಆದರೆ ಈ ಅಲ್ಪಾಂಶವನ್ನೂ ಕೂಡ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ಹುಡುಗರಿಗೆ ಹೇಳಿಕೊಡುವುದಿಲ್ಲ.

ಈಗ ಮನುಷ್ಯಕಾರ್ಯಗಳ ಐದನೆಯ ದೊಡ್ಡ ವಿಭಾಗವು ವಿಚಾರಮಾಡಲ್ಪಡುವುದು. ನಿರಂತರವಾಗಿ ಆತ್ಮರಕ್ಷಣಕ್ಕೂ ಜೀವಿಕೆಗೂ ಮಕ್ಕಳ ಪೋಷಣ ಶಿಕ್ಷಣಕ್ಕೂ ಸಮಂಜಸವಾಗಿ ಪೌರಕಾರ್ಯವನ್ನು ನಿರ್ವಹಿಸಲಿಕ್ಕೂ ಬೇಕಾದ ವಿದ್ಯೆಗಳನ್ನು ವ್ಯಾಸಂಗಮಾಡುವ ರೀತಿಯನ್ನು ತಿಳಿಸಿದ ಬಳಿಕ, ಮನುಷ್ಯರು ತಮ್ಮ ಅವಕಾಶ ಕಾಲದಲ್ಲಿ ಸಂತೋಷಕ್ಕಾಗಿಯೂ ವಿನೋದಾರ್ಥವಾಗಿಯೂ ಮಾಡಬೇಕಾದ ಕಾರ್ಯಗಳು ಯಾವುವೆಂಬುದನ್ನು ಈಗ ಗೊತ್ತುಮಾಡಿಕೊಳ್ಳತಕ್ಕುದು. ಚಿತ್ರಲೇಖನ ಸಂಗೀತ ಸಾಹಿತ್ಯ ಕಾವ್ಯನೃತ್ಯ ಮುಂತಾದವು ಅವಕಾಶಕಾಲದಲ್ಲಿ ವಿನೋದಾರ್ಥವಾಗಿ ಮಾಡುವಂಥಾ ಕಾರ್ಯಗಳಾಗಿರುವುವು. ಈ ಕಾರ್ಯಸಂಬಂಧವಾದ ವಿದ್ಯೆಗಳೇ ಕುಶಲ ಕಲೆಗಳೆನಿಸುವುವು. ಇವು ಪರಿಪೂರ್ಣ ಜೀವನಕ್ಕೆ ಸಹಾಯಕಾರಿಗಳಲ್ಲವೆಂತಲೂ ಆದುದರಿಂದ ಇವು ಅಷ್ಟು ಬೆಲೆಯುಳ್ಳವಲ್ಲವೆಂತಲೂ ಭಾವಿಸಕೂಡದು. ಇವೂ ನಮಗೆ ಮಹಾ ಪ್ರಯೋಜನಕಾರಿಗಳಾಗಿರುವುವು. ಈ ಕುಶಲಕಲೆಗಳಿಲ್ಲದೆ ಹೋದರೆ ಆನಂದವೂ ಉಲ್ಲಾಸವೂ ಕಡಿಮೆಯಾಗಿ ಮನುಷ್ಯ ಜನ್ಮವೆ ಅರ್ಧಮಟ್ಟಿಗೆ ಸಪ್ಪೆಯಾಗಿ ಹೋಗುವುದು. ಈಗಿನಕಿಂತಲೂ ಇನ್ನು ಮುಂದಕ್ಕೆ ಜನರು ಕ್ರಮೇಣ ಕುಶಲ ಕಲೆಗಳಿಗೆ ಹೆಚ್ಚಾದ ಅವಕಾಶವನ್ನು ಕೊಡುವರೆಂದು ನಿರೀಕ್ಷಿಸಬೇಕಾಗಿದೆ. ಏಕೆಂದರೆ ಮನುಷ್ಯರು ಬುದ್ಧಿ ಕೌಶಲ್ಯದಿಂದ ಜೀವಿಕೆಗೆ ಅವಶ್ಯಕವಾದ ಕೆಲಸವನ್ನು ಹೆಚ್ಚು ಕಾಲ ಹರಣವಿಲ್ಲದೆ ಸುಲಭವಾಗಿ ಮಾಡಲಿಕ್ಕೆ ಕಲಿತ ಬಳಿಕ, ಅವರಿಗೆ ವಿರಾಮ ಕಾಲವು ವಿಶೇಷವಾಗಿ ಸಿಕ್ಕುವದರಲ್ಲಿ ಸಂದೇಹವಿಲ್ಲ. ಆಗ ಆ ವಿರಾಮ ಕಾಲದಲ್ಲಿ ಅವರ ಮನಸ್ಸು ಕುಶಲ ಕಲೆಗಳಲ್ಲಿ ಅಧಿಕವಾಗಿ ಪ್ರವೇಶಿಸದೆ ಇರಲಾರದು.

ಹೀಗೆ ಕುಶಲಕಲೆಗಳು ಆನಂದವನ್ನು ವೃದ್ಧಿಪಡಿಸಲು ಸಹಾಯಮಾಡುವಂಥವಾದಾಗ್ಯೂ, ಇವು ಮೊದಲು ಹೇಳಲ್ಪಟ್ಟ ಅತ್ಯಾವಶ್ಯಕವಾದ ನಾಲ್ಕು ದೊಡ್ಡ ಕಾರ್ಯಗಳಿಗಿಂತ ಕಡಿಮೆ ದರ್ಜೆಯವಾಗಿಯೇ ಇರುವುವು. ಈ ನಾಲ್ಕು ಕಾರ್ಯಗಳು ಎಂದರೆ ಅವ್ಯವಹಿತ ಆತ್ಮರಕ್ಷಣ, ವ್ಯವಹಿತ ಆತ್ಮರಕ್ಷಣ, ಮಕ್ಕಳ ಪೋಷಣ, ಪೌರ ಕಾರ್ಯ—ಇವುಗಳು ಸಮಂಜಸವಾಗಿ ನಡೆಯದ ಹೊರತು ಕುಶಲ ಕಲೆಗಳಿಗೆ ಅವಕಾಶವು ಸಿಕ್ಕಲಾರದು. ಆದುದರಿಂದ ಆ ನಾಲ್ಕು ಕಾರ್ಯಗಳಿಗೆ ಸಂಬಂಧಪಟ್ಟ ವಿದ್ಯೆಗಳಿಗೆ ಲೋಪವು ಬಾರದಂತೆ ನೋಡಿಕೊಂಡು ಆಮೇಲೆ ಕುಶಲ ಕಲೆಗಳಿಗೆ ಅವಧಾನವನ್ನು ಕೊಡುವುದು ಎಲ್ಲ ವರಿಗೂ ಪರಮ ಧರ್ಮವಾಗಿರುವುದು. ಹೂವ

ಡಿಗನು ಹೂಗಳಿಗೋಸ್ಕರ ಗಿಡಗಳನ್ನು ಬೆಳೆಸುವನು. ಗಿಡಗಳಿಲ್ಲದೆ ಹೂಗಳು ಸಿಕ್ಕಲಾರವಾದುದರಿಂದ, ಅತನು ಗಿಡಗಳನ್ನು ಮೊದಲು ಪೋಷಿಸಬೇಕು. ಪುಷ್ಪ ಗಳು ಬೇಕೆಂಬ ಆತುರದಿಂದ, ಗಿಡಗಳನ್ನು ಸರಿಯಾಗಿ ಪೋಷಿಸಲು ಉಪೇಕ್ಷೆಮಾಡಿ ದರೆ ಅತನಿಗೆ ಉತ್ತಮವಾದ ಪುಷ್ಪಗಳು ದೊರಕಲಾರವು. ಆದ ಪ್ರಯುಕ್ತ ಅತನು ಗಿಡಗಳನ್ನು ಚೆನ್ನಾಗಿ ಆರೈಕೆ ಮಾಡಬೇಕು. ಕುಶಲ ಕಲೆಗಳ ವಿಷಯವೂ ಇದ ರಂತೆಯೇ ಇರುವುದು. ನೃತ್ಯಗೀತ ಕಾವ್ಯ ಅಲಂಕಾರ ನಾಟಕ ಮುಂತಾದವು ಗಳು ನಾಗರಿಕ ಜನಾಂಗದವರಿಗೆ ಪುಷ್ಪಪ್ರಾಯವಾಗಿರುವುವೆಂದು ಹೇಳಬಹುದು. ಆದರೆ ಈ ಕುಶಲ ಕಲೆಗಳೆಂಬ ಪುಷ್ಪಗಳನ್ನು ಹೊಂದಬೇಕಾದರೆ ನಾಗರಿಕ ಜನಾಂ ಗಗಳೆಂಬ ಸಸಿಗಳನ್ನು ಚೆನ್ನಾಗಿ ಪೋಷಿಸಬೇಕು. ಆದುದರಿಂದ ನಾಗರಿಕ ಜನಾಂ ಗಗಳ ಪೋಷಣಕ್ಕೆ ಉಪಯುಕ್ತವಾದ ಕಾರ್ಯಗಳಿಗೆ ಪ್ರಥಮತಃ ಅವಧಾನವನು ಕೊಡತಕ್ಕುದು.

ನಮಗೀಗ ಈಗಿನಕಾಲದ ವಿದ್ಯಾಭ್ಯಾಸ ಪದ್ಧತಿಯ ದೋಷವು ಚೆನ್ನಾಗಿ ವ್ಯಕ್ತವಾಗುವುದು. ಆ ಪದ್ಧತಿಯು ಹೇಗಿರುವುದೆಂದರೆ ಹೂವಿಗೆ ಆತುರಬಿದ್ದು ಸಸಿಯನ್ನು ಉಪೇಕ್ಷಿಸಿದಂತೆ ಇರುವುದು. ಸೊಗಸಿಗೆ ಆಶೆಬಿದ್ದು ವಸ್ತುಪ್ರಯೋಜನ ವನ್ನೇ ಮರೆತಂತಿರುವುದು. ಆತ್ಮರಕ್ಷಣಕ್ಕೆ ಸಾಧಕವಾದ ವಿದ್ಯೆಗಳನ್ನು ಪಾಠಶಾಲೆ ಗಳಲ್ಲಿ ಕಲಿಸುವುದಿಲ್ಲ. ಜೀವನ ಸಂವಾದಕ ವಿದ್ಯೆಗಳನ್ನು ಪಾಠಶಾಲೆಗಳಲ್ಲಿ ಬಹು ಅಲ್ಪವಾಗಿ ಹೇಳಿಕೊಡುವುದರಿಂದ, ಅವನ್ನು ಹುಡುಗರು ಬೇರೆ ಮಾರ್ಗದಿಂದ ಆ ಮೇಲೆ ಕಲಿಯಬೇಕಾಗಿರುವುದು. ಮಕ್ಕಳ ರಕ್ಷಣ ಶಿಕ್ಷಣ ಸಂಬಂಧವಾದ ವಿದ್ಯೆ ಗಳನ್ನಂತು ಸುತರಾಂ ಕಲಿಸುವುದಿಲ್ಲ. ಹಾಗೆಯೇ ವ್ಯಾವಹಾರಕಾರ್ಯಕ್ಕೆ ಯೋಗ್ಯವಾದ ವಿದ್ಯೆಗಳೂ ಕಲಿಸಲ್ಪಡುವುದಿಲ್ಲ. ಆದರೆ ತಳಕಿಗೂ ಸೊಗಸಿಗೂ ಖ್ಯಾತಿಗೂ ದಂ ಭಕ್ಕೂ ಸಾಧಕವಾದ ವಿದ್ಯೆಗಳು ಬೋಧಿಸಲ್ಪಡುವುವು. ಪರಿಪೂರ್ಣ ಜೀವನಕ್ಕೆ ಅವಶ್ಯಕವಾದ ವಿದ್ಯೆಗಳನ್ನು ಕಲಿಸುವುದಕ್ಕೆ ಬದಲಾಗಿ ಅನ್ಯದೇಶೀಯರ ಭಾಷೆಗ ಳನ್ನು ಹೇಳಿಕೊಡುವುದರಲ್ಲಿ ಕಾಲಹರಣ ಮಾಡುವರು.

ಇಂಗ್ಲೀಷ್ ಹುಡುಗರು ಗ್ರೀಕ್ ಮತ್ತು ರೋಮನರ ಪುರಾತನ ಗ್ರಂಥಗ ಳನ್ನು ವ್ಯಾಸಂಗಮಾಡುವುದರಿಂದ, ಸೊಗಸನ್ನೂ ತಳಕನ್ನೂ ಮಾಡುವುದರಲ್ಲಿ ಗಟ್ಟಿ ಗರಾಗಬಹುದು. ಆದರೆ ಈ ಗ್ರಂಥಗಳು ಮಕ್ಕಳ ಪೋಷಣ ವಿದ್ಯೆಗೆ ಸಮವಾಗು ವುವೆ? ಪುರಾತನ ಭಾಷೆಗಳಲ್ಲಿ ರಚಿಸಲ್ಪಟ್ಟ ಕಾವ್ಯಗಳನ್ನೋದುವುದರಿಂದ, ಕಾವ್ಯ

ದಲ್ಲಿ ಅಭಿರುಚಿಯು ಹೆಚ್ಚಬಹುದು. ಆದರೆ ಅದು ಆರೋಗ್ಯಶಾಸ್ತ್ರ ಜ್ಞಾನದಷ್ಟು ಬೆಲೆಯುಳ್ಳದಾದೀತೆ? ಆದುದರಿಂದ ನಾಗರಿಕತೆಗೆ ಪುಷ್ಪಪ್ರಾಯವಾಗಿರುವ ಕುಶಲ ಕಲೆಗಳನ್ನು ನಾಗರಿಕತೆಗೆ ಯಾವುವು ಆಧಾರಭೂತವಾಗಿವೆಯೋ ಆ ವಿದ್ಯೆಗಳಿಗಿಂತ ಕಡಿಮೆಯ ದರ್ಜಿಗೆ ಸೇರಿಸಬೇಕೇ ಹೊರತು, ಆ ಆಧಾರಭೂತವಾದ ವಿದ್ಯೆಗಳನ್ನು ತಳ್ಳಿಬಿಟ್ಟು ಕುಶಲ ಕಲೆಗಳಿಗೆ ಪ್ರಥಮ ಸ್ಥಾನವನ್ನು ಕೊಡಲಾಗದು. ಪರಿಪೂರ್ಣ ಜೀವಿಕೆಯ ಮುಖ್ಯ ಕಾರ್ಯಗಳನ್ನು ಮಾಡಿದ ಬಳಿಕ, ಅವಕಾಶಕಾಲದಲ್ಲಿ ವಿನೋದ ಕಾರ್ಯಗಳನ್ನು ಮಾಡಬಹುದಾಗಿರುವುದರಿಂದ, ಆತ್ಮರಕ್ಷಣಾವಿಗಳಿಗೆ ಸಂಬಂಧಪಟ್ಟ ಮುಖ್ಯ ವಿದ್ಯೆಗಳನ್ನು ಕಲಿತ ಬಳಿಕ ವ್ಯವಧಾನ ಕಾಲದಲ್ಲಿ ಕುಶಲ ಕಲೆಗಳನ್ನು ಅಭ್ಯಾಸ ಮಾಡಬಹುದಾಗಿದೆ.

ಈ ರೀತಿಯಲ್ಲಿ ಕುಶಲ ಕಲೆಗಳಿಗೆ ವಿದ್ಯಾವ್ಯಾಸಂಗ ಕ್ರಮದಲ್ಲಿ ಐದನೆಯ ಸ್ಥಾನವನ್ನು ಕೊಡಬೇಕಾಗಿರುವುದು. ಮೊದಲಿನ ನಾಲ್ಕುಬಗೆಯ ವಿದ್ಯೆಗಳಿಗೆ ಸಾಕಾದಷ್ಟು ಅವಧಾನವನ್ನು ಕೊಟ್ಟಬಳಿಕ, ಕುಶಲ ಕಲೆಗಳನ್ನು ಅಭ್ಯಾಸ ಮಾಡತಕ್ಕುದು. ಈ ಕುಶಲ ಕಲೆಗಳಲ್ಲಿ ಪಾಂಡಿತ್ಯವನ್ನು ಸಮಂಜಸವಾಗಿ ಹೊಂದಲು ನಮಗೆ ಯಾವುದು ಸಾಧಕವಾಗಿರುವುದೆಂಬುದನ್ನು ಈಗ ವಿಚಾರ ಮಾಡಬೇಕು. ಇವುಗಳಲ್ಲಿ ಸರಿಯಾದ ಯೋಗ್ಯತೆಯನ್ನು ಹೊಂದಬೇಕಾದರೂ ನಮಗೆ ಶಾಸ್ತ್ರಜ್ಞಾನವು ಅವಶ್ಯಕವಾಗಿರುವುದು. ಶಾಸ್ತ್ರಜ್ಞಾನವೇ ಕುಶಲ ಕಲೆಗಳಿಗೆ ಆಸ್ತಿವಾರವಾಗಿರುವುದು. ಶಾಸ್ತ್ರಜ್ಞಾನವಿಲ್ಲದವರು ಕುಶಲ ಕಾರ್ಯಗಳನ್ನು ಚೆನ್ನಾಗಿ ಮಾಡಲಾರರು ಮತ್ತು ಚೆನ್ನಾಗಿ ಮಾಡಲ್ಪಟ್ಟ ಕುಶಲ ಕಾರ್ಯಗಳನ್ನು ಗ್ರಹಿಸಲೂ ಸಮರ್ಥರಾಗುವುದಿಲ್ಲ. ಪ್ರಸಿದ್ಧರಾದ ಶಿಲ್ಪಿಗಳು ಮೊದಲಾದವರು ಗ್ರಂಥವ್ಯಾಸಂಗದಿಂದ ಶಾಸ್ತ್ರಜಾನವನ್ನು ಹೊಂದದೆ ಇದ್ದಾಗ್ಗೂ ವಸ್ತುಗಳನ್ನು ಚೆನ್ನಾಗಿ ಪರಿಸೀಲಿಸುವುದರಿಂದ ಸಾಕಾದಷ್ಟು ಶಾಸ್ತ್ರಜ್ಞಾನವನ್ನು ಪಡೆಯುವರು.

ಹೀಗೆ ಯಾವರೀತಿಯಿಂದಲಾದರೂ ಯಾರು ಸಾಕಾದಷ್ಟು ಶಾಸ್ತ್ರಜ್ಞಾನವುಳ್ಳವರಾಗಿರುವುದಿಲ್ಲವೋ ಅವರು ಮಾಡುವ ಕುಶಲ ಕಾರ್ಯಗಳು ಎಂದಿಗೂ ಶ್ಲಾಘ್ಯವಾಗಿರಲಾರವು. ಕುಶಲ ಕಾರ್ಯಗಳನ್ನು ಸಮಂಜಸವಾಗಿ ಮಾಡಬೇಕಾದರೆ ಶಾಸ್ತ್ರಜ್ಞಾನವು ಆವಶ್ಯಕವಾಗಿ ಬೇಕೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ಸಕಲ ಕುಶಲ ಕಾರ್ಯಗಳೂ ಪ್ರಾಕೃತಿಕ ಅಥವಾ ಮಾನಸಿಕ ಧರ್ಮಗಳನ್ನೇ ಸೂಚಿಸುವಂಥವಾಗಿರುವುವು. ಹೀಗಿರುವುದರಿಂದ ಪ್ರಕೃತಿ ಮನಸ್ಸುಗಳ ಧರ್ಮಗಳನು

ಸಾಕಾದಷ್ಟು ಮಟ್ಟಿಗೆ ತಿಳಿದು ಅವಕ್ಕನುಸಾರವಾಗಿ ಮಾಡಿದ ಕುಶಲ ಕಾರ್ಯಗಳು ಸಮಂಜಸವಾಗಿರುವುವೇ ಹೊರತು ಅವನ್ನರಿಯದೆ ಯದ್ವಾತದ್ವಾ ಮಾಡಿದ ಕುಶಲ ಕಾರ್ಯಗಳೆಂದಿಗೂ ಸಮರ್ಪಕವಾಗಲಾರವು. ಈ ನಿರ್ಣಯವು ನಮ್ಮನುಭವಕ್ಕೆ ಸರಿಹೋಗುವುದೆಂಬುದನ್ನು ಕೆಳಗಿನ ಉದಾಹರಣೆಯು ದೃಢೀಕರಿಸುವುದು. ಹೇಗೆಂದರೆ—ಬೊಂಬೆಗಳನ್ನು ಮಾಡಲಿಕ್ಕೆ ಕಲಿಯುವವರು ಮೊದಲು ಮನುಷ್ಯದೇಹದ ಎಲುಬುಗಳೂ ಮಾಂಸಖಂಡಗಳೂ ಎಲ್ಲೆಲ್ಲಿವೆ ಅವುಗಳ ಆಕಾರವು ಹೇಗಿದೆ ಅವು ಹೇಗೆ ಚಲಿಸುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು. ಇದು ಶಾಸ್ತ್ರಕ್ಕೆ ಸಂಬಂಧಪಟ್ಟ ಜ್ಞಾನವಾಗಿರುವುದು. ಈ ವಿಷಯವನ್ನರಿಯದವರು ಮಾಡಿದ ಬೊಂಬೆಗಳು ಎಂದಿಗೂ ಸಮಂಜಸವಾಗಿರುವುದಿಲ್ಲ.—S. V.

(ಸಶೇಷ.)

ಲೋವರ್‌ಸೆಕೆಂಡರಿ ಪರೀಕ್ಷೆ.

ಈ ಪರೀಕ್ಷೆ ನಡೆಯುವಾಗ ವಿದ್ಯಾರ್ಥಿಗಳ ಮೇಲ್ವಿಚಾರಣೆಗಾಗಿ ನಮ್ಮನ್ನು ಕರೆದಿದ್ದರು. ಅದರಮೇರೆಗೆ ಪರೀಕ್ಷಾಸ್ಥಾನಕ್ಕೆ ಹೋಗಿ, ಅಲ್ಲಿ ನೂರಾರು ವಿದ್ಯಾರ್ಥಿಗಳು ಸರಭಸವಾಗಿ ಬರೆಯುತ್ತಿರುವ ಉತ್ತರಗಳನ್ನು ಸುಮ್ಮನೆ ದೂರದಿಂದಲೆ ಕಡೆಗಣ್ಣಿನಿಂದ ನೋಡುತ್ತ ಬಂದೆವು. ಆ ವಿದ್ಯಾರ್ಥಿಗಳ ಬರವಣಿಗೆಯ ವಿಷಯದಲ್ಲಿ ನಮಗೆ ತೋರಿದ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಸೂಚಿಸುವೆವು.

ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ಉಪಾಧ್ಯಾಯರು ಅವರು ಪರೀಕ್ಷಾಸ್ಥಾನಕ್ಕೆ ಪ್ರವೇಶಿಸಿದ ಮೇಲೆ ಮಾಡಬೇಕಾದ ಕೆಲಸಗಳನ್ನು ಚೆನ್ನಾಗಿ ತಿಳಿಸಬೇಕು. ಅಂತಹ ಕ್ರಮವನ್ನು ತಮ್ಮ ತಮ್ಮ ಸ್ಕೂಲುಗಳ ಪರೀಕ್ಷೆಯ ಕಾಲದಲ್ಲಿ ಹುಡುಗರಿಗೆ ಅಭ್ಯಾಸ ಮಾಡಿಸಬೇಕು. ಈ ವಿಷಯದಲ್ಲಿ ಇಂಗ್ಲೀಷ್ ಓದುವ ವಿದ್ಯಾರ್ಥಿಗಳು ಸ್ವಲ್ಪ ವಾಸಿ. ಕನ್ನಡದ ವಿದ್ಯಾರ್ಥಿಗಳನೇಕರಿಗೆ ಏನೂ ತಿಳಿಯದು.

ಮೊದಲು ಬಾಲಕರ ಕೈ ಬರವಣಿಗೆಯೇ ಚೆನ್ನಾಗಿಲ್ಲ.

ಈ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಕೊಡುವ ವೇಳೆಗೆ ಬಾಲಕರು ಬಹಳ ಸುಂದರವಾಗಿ ಅಕ್ಷರಗಳನ್ನು ಬರೆಯಲು ಸಿದ್ಧರಾಗಿರಬೇಕೆಂಬುದೇ ನಮ್ಮ ಸರಕಾರದ ಉದ್ದೇಶ್ಯವು. ಇದಕ್ಕಾಗಿಯೇ ಮೊದಲಿಂದ ಎಂಟು ನಂಬರ ವರೆಗೆ ಕಾಪಿ ಬುಕ್ಕುಗಳನ್ನು ಅಚ್ಚು ಹಾಕಿಸಿ ಬಾಲಕರು ಆದರಂತೆ ಬರೆವುದನ್ನು ಕಲಿಯಲಿ ಎಂದು ನಿರ್ಬಂಧ ಮಾಡಿರುವರು. ಅದುದರಿಂದಲೇ ಲೋವರ್ ಸೆಕೆಂಡರಿ ಪರೀಕ್ಷೆಗೆ ಮೇಲ್ಪಟ್ಟ ಪರೀಕ್ಷೆಗಳಲ್ಲಿ ಕೈ ಬರವಣಿಗೆ ಎಂಬ ಭಾಗವನ್ನು ಏರ್ಪಡಿಸಿಲ್ಲವು. ಈಗಿನ ವಿದ್ಯಾರ್ಥಿಗಳ ಬರವಣಿಗೆಯಲ್ಲಿ ಅಕ್ಷರಗಳು ಸರಕಾರದ ಉದ್ದೇಶಕ್ಕೆ ಅನುಗುಣವಾಗುವಷ್ಟು ಸುಂದರವಾಗಿಲ್ಲವು. ಪಂಗ್ತಿಗಳು ಸೊಟ್ಟಗಿರುವವು. ಚಿತ್ತು ಬಹಳ. ಒಂದುಸಾರಿ ಬರೆದ ತಪ್ಪಕ್ಷರವನ್ನು ಕೈಬೆರಳಿಂದಲೇ ಒರಸಿ ಬರವಣಿಗೆಯನ್ನು ಕೊಳಕುಮಾಡುವರು. ಕಾಗದಗಳ ಎಡಪಕ್ಕದಲ್ಲಿ ಪರೀಕ್ಷಕರು ನಂಬರು ಹಾಕುವುದಕ್ಕೆ ಅನುಕೂಲವಾಗುವಷ್ಟು ಸ್ಥಲವನ್ನು ಬಿಡುವುದಿಲ್ಲ. ಉತ್ತರಗಳನ್ನು ಪರೀಕ್ಷಕರು ನೋಡುವಂತೆ, ಪಂಗ್ತಿಗಳು ವಿರಳ ವಿರಳವಾಗಿಯೂ, ಅಕ್ಷರಗಳು ಸ್ಪುಟವಾಗಿಯೂ, ಸುಮಾರು ದೊಡ್ಡಪುಗಳಾಗಿಯೂ ಇರುವುದಿಲ್ಲ. ಪುಟಗಳನ್ನು ಮೊದಲಿಂದ ಕ್ರಮವಾಗಿ ಜೋಡಿಸುವದಿಲ್ಲ. ಮತ್ತು ಕಾಗದಗಳು ಜೋಡಣೆಯಲ್ಲಿ ಏರುಪೇರಾಗಿರುವುವು. ಜೋಡಿಸಿದ ಪತ್ರಿಕೆಯಮೇಲುಗಡೆ ಸರಕಾರದ ನಿಯಮದಂತೆ ಅವರ ರಿಜಸ್ಟರ್ ನಂಬರು, ಹೆಸರು ಇವೆರಡನ್ನುಮಾತ್ರ ಬರಿಯಬೇಕು. ಮತ್ತು ಕೆಲವು ಪತ್ರಿಕೆಗಳಲ್ಲಿ ಭಾಗಗಳನ್ನು ಬರೆಯುವುದೂ ಆವಶ್ಯಕವು. ಇಷ್ಟು ಬರೆಯದೆ ಇವುಗಳ ಜೊತೆಗೆ ತಮ್ಮ ಸ್ಕೂಲಿನ ಹೆಸರು, ಊರಿನ ಹೆಸರು, ಪುಟಸಂಖ್ಯೆ, ಪರೀಕ್ಷೆಯ ವಿಷಯ, ತಾರೀಕು ಇವುಗಳನ್ನೆಲ್ಲಾ ಒಳಗೂ ಹೊರಗೂ ವ್ಯರ್ಥವಾಗಿ ಬರೆಯುವರು. ಇದರಿಂದ ಅಯಾ ಪತ್ರಿಕೆಯ ಕ್ಲೃಪ್ತಕಾಲದಲ್ಲಿ ಕೆಲವುಭಾಗ ವ್ಯರ್ಥವಾಗಿ ಕಳೆದು ಯೋಗುವದಿಲ್ಲವೆ! ಮೇಲೆ ತಿಳಿಸಿದ ಸರಕಾರದ ನಿಯಮವು ವಿದ್ಯಾರ್ಥಿಗಳ ಪ್ರವೇಶ ಪತ್ರಿಕೆಗಳಲ್ಲಿಯೇ ಅಚ್ಚುಹಾಕಲ್ಪಟ್ಟಿದೆ.

ಭಾಗಗಳನ್ನು ಬೇರೆ ಬೇರೆ ಬರೆಯಬೇಕು ಎಂಬ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳುವುದೇ ಇಲ್ಲ.

ಪರೀಕ್ಷೆಯ ಸ್ಥಾನದಲ್ಲಿ ಪ್ರಶ್ನಪತ್ರಿಕೆಯ ವಿಷಯದಲ್ಲಿ ಏನನ್ನೂ ಕೇಳಕೂಡದು. ಹೀಗಿದ್ದರೂ ಪತ್ರಿಕೆಯಲ್ಲಿರುವ ಪ್ರಶ್ನೆಗಳಿಗೆ ಅರ್ಥ ಕೇಳುತ್ತಾರೆ.

ಅತಿ ರೂಢಿಯಾದ ಶಬ್ದಗಳ ಅಕ್ಷರ ಸಂಯೋಜನದಲ್ಲಿಯೂ ತಪ್ಪು ಬರೆಯುತ್ತಾರೆ. ಉದಾಹರಣೆ:—ಭವಿಷ್ಯದ್ರೂಪ—ಭೌಷ್ಯದ್ರೂಪ, ಸನ್ನಿದಾನಂಗಳಿಗೆ—ಸಂನಿದಾನಂಗಳಿಗ್ಗೆ, ಕೆಲಸ, ಬಾಲಕ = ಕೆಲ್ಸ, ಬಾಲ್ಕ, ಇತ್ಯಾದಿ.

ಕೇಳಿದ ಪ್ರಶ್ನೆಗಳಿಗೆ ಅರ್ಥಮಾಡಿಕೊಂಡು ತಕ್ಕ ಉತ್ತರಗಳನ್ನು ಬರೆಯಬೇಕು. ಕೇಳಪೆ ಇರುವ ಸಂಗತಿಯನ್ನೂ ಅಧಿಕವಾಗಿ ಬರೆಯಬಾರದು. ಉ—ಕಬ್ಬಿಣದ ಉಪಯೋಗವನ್ನು ಕುರಿತು ಬರೆಯಬೇಕೆಂದು ಕೇಳಿದ್ದರೆ ಅದರ ಉತ್ಪತ್ತಿ ಅದು ಸಿಕ್ಕುವಬಗೆ, ಯಾವಯಾವಸ್ಥಳದಲ್ಲಿ ಸಿಕ್ಕುತ್ತದೆ ಇವು ಮುಂತಾದ ಸಂಗತಿಗಳನ್ನೂ ಬರೆಯುತ್ತಾರೆ. ಬರೆಯುವಾಗ ಕೆಲವು ದುರಭ್ಯಾಸಗಳನ್ನು ಆಚರಿಸುವರು. ಶಾಯಿಯನ್ನು ಅದ್ದಿ ಅದ್ದಿ ಪಕ್ಕದಲ್ಲಿ ಎರಚಿ ಎರಚಿ ಬರೆಯುವದು, ಕೈಕಾಲು ಮುಂತಾದುದರಲ್ಲಿ ಕರಪಲ ಚೇಷ್ಟೆಗಳು.

ಇವು ಮುಂತಾಗಿ ಇನ್ನೂ ದೋಷಗಳಿರಬಹುದು. ಇದನ್ನೆಲ್ಲಾ ಆಯಾ ಉಪಾಧ್ಯಾಯರು ತಮ್ಮ ಶಿಷ್ಯರಿಗೆ ತಿಳಿಸಿ ತಿದ್ದುವರೆಂದು ನಂಬಿದೇವೆ.

ರೇಷ್ಮೆ ವ್ಯವಸಾಯ.

ಇದರ ಸ್ವಭಾವ ಲಕ್ಷಣ—

ಈ ಜಾತಿಯು ಕ್ರಿಮಿಯು ಪ್ರಕೃತಿಶಾಸ್ತ್ರದ ಪ್ರಾಣಿಕೋಟಿಯಲ್ಲಿ (ಇಂಸೆಕ್ಟ) 3 ನೇ ಭಾಗವಾದ ಕ್ರಿಮಿಕೋಟಿಗೆ ಸೇರಿದುದು. ಕ್ರಿಮಿಗಳ ಸಂಖ್ಯೆಯು ಲಕ್ಷದವರಿಗೂ ಇರುವುದೆಂದು ಶಾಸ್ತ್ರಜ್ಞರು ಹೇಳುವರು. ಇದರಲ್ಲಿ ಕೆಲವು ಕ್ರಿಮಿಗಳನ್ನು ಪರೀಕ್ಷಿಸಿ ನೋಡಿದರೆ ಎರಡು ವಿಧವೆಂಬುದಾಗಿ ತಿಳಿಯ ಬರುವುದು.

೧. ತಲೆಯಲ್ಲಿ—ಬಾಯಿ, ಕೊಂಡಿ, ಕಣ್ಣು, ಇರುವುದು.

೨. ಅಗಿದು ತಿನ್ನುವುದು. ಹೀರಿ ಕುಡಿಯುವುದು. ಎಂಬುದಾಗಿ ಶಾಸ್ತ್ರಜ್ಞರು ಪರೀಕ್ಷಿಸಿರುವರು. ಆದರೆ, ಕ್ರಿಮಿಗಳು ತಮ್ಮ ಮರಿಗಳು ಹುಟ್ಟುವುದಕ್ಕೆ ಮೊದಲೇ ಸಾಯುವವು. ಮೊಟ್ಟೆ ಇಟ್ಟು ಮರಿಮಾಡುವುವು. ಕೆಲವು ಮರಿಯನ್ನೇ ಹಾಕುವುವು. ಎಂಬದಾಗಿ ಗೊತ್ತಾಗಿರುತದ್ದೆ.

ಪ್ರಕೃತದಲ್ಲಿ ವರ್ಣನೀಯವಾದ "ರೇಷ್ಮೆ ಹುಳುವಿಗೆ" 6000 ಕಣ್ಣು 4000 ಮಾಂಸಖಂಡಗಳು, ನರಗಳು, ಪಂಚೇಂದ್ರಿಯಗಳು, ರಕ್ತಚಲನೆಯು, (ರಕ್ತನಾಳವು) ಕೊಳವೆಯುಂತಿರುವುದು. ಮೈಯಲ್ಲಾ ಶ್ವಾಸ ರಂಧ್ರಗಳಾಗಿರುತ್ತವೆ ಯೆಂಬುದಾಗಿ ತಿಳಿಯಬಂದಿದೆ.

ಈ ರೇಷ್ಮೆ ಹುಳಗಳು ಪೂರ್ವದಲ್ಲಿ ಕಾಡು, ಬೆಟ್ಟ, ಮುಂತಾದ ಸ್ಥಳಗಳಲ್ಲಿದ್ದು ಕೀಟಗಳನ್ನು ತಿನ್ನುತ್ತಾ ಇದ್ದುವೆಂಬದಾಗಿ ಕೆಲವರು ಹೇಳುವರು.

ಈ ಸೀಮೆಯಲ್ಲಿ ವ್ಯವಸಾಯ ಮಾಡುವ ಕ್ರಮ ಹೇಗೆಂದರೆ?—

ಮರಿಮಾಡುವ ಕ್ರಮ.

ಒಳ್ಳೇದಾದ ರೇಷ್ಮೆ ಗೂಡುಗಳನ್ನು ತರಿಸಿ ಗೆರಸಿ (ಬಾಯಿ ಅಗಲವಾದ) ಯಲ್ಲಿ 10—12 ದಿವಸ ಪರ್ಯಂತ ಇರಿಸುವರು. ನಂತರ, ಆ ಗೂಡುಗಳಿಂದ ಚಿಟ್ಟೆಯರೂಪವಾದ ರೇಷ್ಮೆ ಕ್ರಿಮಿಗಳು ಈಚೆಗೆ ಬರುವುವು. ಆಮೇಲೆ ದಂಪತಿ ಚಿಟ್ಟೆಗಳನ್ನೆಲ್ಲಾ ಸೇರಿಸಿ ಇರಿಸಿದರೆ ಬಿಳೀ ಸಾಸುವೆಯ ಆಕಾರವಾದ ಮೊಟ್ಟೆಯಾಗುವುವು. 12 ನೇ ದಿವಸಕ್ಕೆ ಕರೀ ಸಾಸುವೆ ವರ್ಣವಾದ ಮರಿಗಳಾಗುವವು. ಈ ಮರಿಗಳನ್ನು ಕೈಯಲ್ಲಿ ಮುಟ್ಟಲು ಅಸಾಧ್ಯವಾದಕಾರಣ ಗರುಡನ ಗೆರೆಯಿಂದ ಹರವುವರು. ಇವುಗಳ ಆಹಾರವು ಹೀರ್ಲದ ಸೊಪ್ಪಾಗಿರುತ್ತದೆ.

ವೃದ್ಧಿಮಾಡುವರೀತಿ. ಇದರ ಲಕ್ಷಣ.

ಹಿಪ್ಪಲ ನೇರಲೆಯ ಸೊಪ್ಪನ್ನು ತಂದು ಬಹಳ ಸಣ್ಣವಾಗಿ ಕತ್ತರಿಸಿ ದಿನ 1ಕ್ಕೆ ಆರಾವರ್ತಿ ಹಾಕುವರು. ಇದು ಹಾಕಿದ 6 ನೇ ದಿನಕ್ಕೆ, 1 ನೇ ಮತ್ತಾವಸ್ಥೆಗೆ ಬೀಳುವುವು. (ಇದಕ್ಕೆ ಗ್ರಾಮ್ಯದವರು 1 ನೇ ಜರವೆಂದು ಹೇಳುವರು.) ಆಗ ಒಂದು ಗೋಧಿಯ ಪ್ರಮಾಣವಾಗಿ ಕಪ್ಪುವರ್ಣವಾಗಿರುವುದು. ಈರೀತಿ 4 ಮತ್ತಾವಸ್ಥೆಯನ್ನು ಪಡೆಯುವುವು.

2 ನೇ ಅವಸ್ಥೆಯಲ್ಲಿ $\frac{1}{2}$ ಅಂಗುಲ ಪ್ರಮಾಣ ನಸುಬಿಳೀಬಣ್ಣವುಳ್ಳುದಾಗಿಯು 3 ನೇ ಅವಸ್ಥೆಯಲ್ಲಿ $1\frac{1}{2}$ ಅಂಗುಲ ಪ್ರಮಾಣವುಳ್ಳುದಾಗಿ ಬಿಳೀ ಬಣ್ಣಗಳಾಗಿರುವುದು. ಆಗ ಆಹಾರವನ್ನು ಅಂದರೆ ಹೀರಲದ ಸೊಪ್ಪನ್ನು ಸಾಮಾನ್ಯವಾಗಿ ಕತ್ತರಿಸಿ ದಿನ 1 ಕ್ಕೆ 4 ಆವರ್ತಿ ಕಡಮೆಯಾಗದ ಹಾಗೆ ಹಾಕುವರು. ಈರೀತಿ ವೃದ್ಧಿಮೊಡಿದ ಬಳಿಕ 20—24 ದಿನಗಳ ನಂತರ 4 ನೇ ಮತ್ತಾವಸ್ಥೆಯನ್ನು ಪಡೆಯುವುವು. ಆಮೇಲೆ, ಹೀರಲದ ಸೊಪ್ಪನ್ನು ಎಂದಿಗೂ ತಿನ್ನಲಾರವು. ಅದಕ್ಕೆ

ಹಣ್ಣು ಹುಳಗಳೆಂದು ಹೆಸರು. ಆ ಹಣ್ಣು ಹುಳುಗಳನ್ನೆಲ್ಲಾ ತೆಗೆದುಕೊಂಡು ಚಂದ್ರಿಕೆ (ಬಿದರತಟ್ಟೆ) ಯಲ್ಲಿ ಬಿಟ್ಟು $\frac{1}{4}$ ಗಂಟೆ ಬಿಸಲಿನಲ್ಲಿರಿಸುವರು. ಆ ಬಿಸಲಿನ ತಾಪಕ್ಕೆ ವ್ಯಥೆಪಡುವುವು. ಅದನ್ನು ಕಂಡು ನೆರಳಿನಲ್ಲಿರಿಸಿದರೆ ಅದರ ಬಾಯಿಯಿಂದ ಜೊಲ್ಲು ಬರುವುದು. ಆ ಜೊಲ್ಲೆ ರೇಷ್ಮೆಯು. ಅನಂತರ ಹುಳುವು ಒಳಗೆ ಸೇರಿ ನೇರಲೇಹಣ್ಣಿನ ಆಕಾರವಾಗಿ 2 ಅಂಗುಲಪ್ರಮಾಣ ಗೂಡು ಕಟ್ಟುವುವು.

ಹಣ್ಣು ಹುಳುವಿನ ಲಕ್ಷಣ.

ಇದು 2 ಅಂಗುಲ ಉದ್ದವಿರುವುದು. ಇದಕ್ಕೆ 9 ಗ್ರಂಥಿಗಳು ಉಭಯಪಾರ್ಶ್ವಗಳಲ್ಲೂ 9 ಜೊತೆ ಕರೀ ಚುಕ್ಕೆಗಳಿರುವುವು. ಇದರ ಬಾಯಿ ಗುಂಡಾಗಿ ಕಪ್ಪು ಮಿಶ್ರವಾಗಿರುತ್ತದೆ. ಶರೀರವು ಮೃದುವಾಗಿ ಶುಭ್ರವಾಗಿ ನೋಟಕ್ಕೆ ಬಹಳ ಆಶ್ಚರ್ಯವಾಗಿರುವುದು.

ಈ ಕ್ರಿಮಿಯನ್ನು ತಪಸ್ವಿಗೆ ಸಮಾನವೆಂದು ಹೋಲಿಸುವರು.

ವರ್ಣನೆ:—

ಇದಕ್ಕೆ 8 ಜೊತೆ ಕಾಲುಗಳಿರುವುವು. ಹೇಗೆಂದರೆ,

1 ನೇ ಗ್ರಂಥಿಯಲ್ಲಿ 3 ಜೊತೆ ಇರುವುವು.

4 ನೇ ,, 1 ,,

5 ನೇ ,, 1 ,,

6 ನೇ ,, 1 ,,

7 ನೇ ,, 1 ,,

9 ನೇ ,, 1 ,,

ಇದರ ಬೆನ್ನಿನಮೇಲೆ ಬಂದು ಕರೀಗೆರೆ ಇರುವುದು. ಇದರ ಬಾಯಿಯು ಜೊಲ್ಲೆ ಶುದ್ಧ ರೇಷ್ಮೆ. 9 ನೇ ಗ್ರಂಥಿಯ ಮೇಲೆ 1 ಮುಳ್ಳು ಇರುವುದು. ಹಿಂಬಾಗದ ಕೊನೆಯಲ್ಲಿರುವುದು.

ವಿಧಗಳು.—

ಕೆಲವು ದೇಶಗಳಲ್ಲಿ ಈ ಕ್ರಿಮಿಗಳ ಆಹಾರವು ಎಲಚಿ, ಹರಳು ಸೊಪ್ಪಾಗಿರುತ್ತವೆ. ಇವಕ್ಕೆ ಏರಂಡ ರೇಷ್ಮೆ, ಬದರೀ ರೇಷ್ಮೆ ಎಂಒದಾಗಿ ಹೇಳುವರು.

ಉಪಯೋಗ.—

ಈ ರೀತಿಯಾಗಿ ವ್ಯವಸಾಯ ಮಾಡಲ್ಪಟ್ಟ ರೇಷ್ಮೆ ಗೂಡುಗಳನ್ನು ಮರಳುವ

ನೀರಿನಲ್ಲಿ ಬೇಯಿಸಿ ಸಣ್ಣದಾದ ರೇಷ್ಮೆ ದಾರದ ಕೊನೆಯನ್ನು ರಾಟೆಗೆ ಸುತ್ತಿ ಕೈಯಿಂದ ಸವರುತ್ತಾ ಬರುವರು. ರೇಷ್ಮೆಯು ರಾಟೆಗೆ ಸುತ್ತುವುದು. ಈ ರೇಷ್ಮೆಯು ಹೊಂಬಣ್ಣವಾಗಿ ಸ್ವಚ್ಛವಾಗಿರುವುದು. ಇದನ್ನು ಅನರ್ಘ್ಯವಾಗಿ ತೆಗೆದು ಹದ ಮಾಡಿ ನಾನಾವಿಧವಾದ ಬಣ್ಣಗಳನ್ನು ಹಾಕಿ ಬಹಳ ಬೆಲೆಯುಳ್ಳ ಪಟ್ಟೆ ಪೀತಾಂಬರಾದಿ ಉಡುಪು ತೊಡುಪು ಮುಂತಾದ ವಸ್ತ್ರಗಳನ್ನು ಮಾಡುವರು.

ಸಾರಾಂಶ.—

ಆದರೆ, ರೇಷ್ಮೆ ಗೂಡಿನಲ್ಲಿರುವ ಹುಳಗಳನ್ನು ಮಾತ್ರ ತೆಗೆದುಬಿಟ್ಟು ರೇಷ್ಮೆ ದಾರವನ್ನು ತೆಗೆದರೆ, ರೇಷ್ಮೆ ಕೆಡುವುದೇ ಹೊರತು ಒಳ್ಳೇ ರೇಷ್ಮೆಯಾಗುವುದಿಲ್ಲವೆಂದು ವಿದ್ವಾಂಸರು ಹೇಳುವರು. ಅಂದರೆ ಗೂಡು ಸಹಿತವಾದ ರೇಷ್ಮೆ ಹುಳವನ್ನೇ ಮರಳುವ ನೀರಿಗೆ ಹಾಕಿ ತನ್ಮೂಲಕ ಹುಳು ಸತ್ತರೇನೆ ಉತ್ತಮ ರೇಷ್ಮೆಯಾಗುತ್ತದೇಹೊರತು ಮತ್ತೆಬೇರೆ ಅಲ್ಲ. ರೇಷ್ಮೆ ಹುಳುವಿನಿಂದ ತೆಗೆದು ಬಿಟ್ಟ ಕಶ್ಮಲಕ್ಕೆ 'ನಟ್ಟ' ಎಂಬದಾಗಿ ಹೇಳುವರು. ಇದರಿಂದ ಒಳ್ಳೇ ದಾರ ಬರುವುದಿಲ್ಲ. (ಸಶೇಷ.)

ವ್ಯಾಕರಣಶಾಸ್ತ್ರ.

(230 ನೆ ಪುಟದ ಶೇಷ).

ಹಿಂದೆ ॥ ಮೋನಸ್ವರೆ ॥ 77 ॥ ನಪಿವಾ ॥78॥ ಎಂಬ ಸೂತ್ರಗಳು ಪ್ರವರ್ತಿಸುವ ವಿಷಯದಲ್ಲಿ ಎಡು ಜ್ಞಾಪನಗಳನ್ನು ಹೇಳಿದೆಯಷ್ಟೆ—ಆ ಹಿಂದೆ ಹೇಳಿದ ಎರಡು ಜ್ಞಾಪನಗಳನ್ನು ನೋಡಿದಲ್ಲಿ-ಮಿ-ಅಮಿ-ಇಮಿ-ಅತ್ತಣಿಮಾ-ಎಂಬಸುಪ್ಪ್ರತ್ಯಯ ಮತ್ತು ಅಮಾ—ಎಂಬ ತಿಪ್ಪ್ರತ್ಯಯ-ಈ ಎರಡರಲ್ಲಿ—ಮಾ—ಎಂಬ ಪ್ರತ್ಯಯ ಹೊರತು ಮಿಕ್ಕ ನಾಲ್ಕು ಪ್ರತ್ಯಯದ ಮಕಾರಕ್ಕೂ ಸ್ವರವು ಪರವಾದಾಗ ನಿಯತವಾಗಿ ನಕಾರಾದೇಶವು ಬರುವುದು. ಎಂದು ನಿಷ್ಕೃಷ್ಟವಾಗುವದರಿಂದ ॥ ಮನಸ್ಸಿದತ್ತಣಿನದೊಳ್ ಸುಪ್ ॥ 16 ॥ ಅನರಯಿನೆರೆವುತಿಙ್ ॥ 17 ॥ ಎಂದು ಹೇಳಬೇಕಾಗಿದ್ದರೂ ವೂರ್ವಾಚಾರ್ಯರಾದ ನಾಗವರ್ಮನೇ ಮೊದಲಾದವರಮೇಲೆ

ಇಟ್ಟಿರತಕ್ಕ ಗೌರವದಿಂದ ॥ ಮಮಿಮ್ಗೆದತ್ತಣಿಮದೊಳ್ ಸುಪ್ ॥ 16 ॥ ಅಮರ ಯಿರೆನೆರೆವುತಿಜ್ ॥ 17 ॥ ಎಂಬದಾಗಿ ಪ್ರಾಚೀನರ ಅಭಿಪ್ರಾಯಾನುಸಾರವಾಗಿ ನಮ್ಮ ಶಬ್ದಾನುಶಾಸನ ಸೂತ್ರಕಾರನು ಸೂತ್ರವನ್ನು ಸೂತ್ರಿಸಿರುವನು. ಎಂಬಂಶವನ್ನು ಸೂಚಿಸಬೇಕಾಗಿಲ್ಲ.

ಭಾಷಾಭಿಜ್ಞರಾದ ಸಹೃದಯರೆ ಶಬ್ದಾನುಶಾಸನದಮೇಲೆ ಹಿಂದೆ ಹೇಳಿದ ದೋಷಗಳನ್ನು ವಾರಣೆಮಾಡತಕ್ಕ ದಾರಿಯು ಅದೇ ಸೂತ್ರಮಾಲೆಯಲ್ಲಿಯೇ ಸ್ಪಷ್ಟವಾಗಿ ಕಾಣುತ್ತಿದ್ದರೂ ಆ ದಾರಿಯನ್ನು ನೋಡದೆ ದೋಷವು ತಲೆಹಾಕುವಂತ್ಟೆಯೇ ವ್ಯಾಖ್ಯಾನಮಾಡಿದ ಭಟ್ಟಾಕಳಂಕನು ತಾನೇ ಸೂತ್ರಕಾರನಾಗಿದ್ದಲ್ಲಿ ತನ್ನ ಸೂತ್ರದ ರಹಸ್ಯವು ತನಗೆ ಅಂದರೆ ಸೂತ್ರಕಾರನೆಂದು ಹೇಳಿಕೊಳ್ಳುವ ಭಟಾಕಳಂಕನಿಗೆ ಯಾತಕ್ಕೆ ತಿಳಿಯಲಿಲ್ಲವೊ? ಅಭಿಜ್ಞರೇ ಆಲೋಚಿಸಬೇಕು.

ಇದಲ್ಲದೆ ॥ ನಾಡ್ವಾದಿಭ್ಯಃಕಳುಬ್ವಾ॥ 233 ॥ ಎಂಬ ಸೂತ್ರದಂತೆ-ನಾಡು-ಇತ್ಯಾದಿ ಶಬ್ದಗಳಮೇಲೆ ವಿಕಲ್ಪವಾಗಿ ಕಳುಪ್ರತ್ಯಯವು ಪರವಾಗಿ-ನಾಡು+ಕಳ್-ಎಂದಿರುವಾಗ ನ್ಯಾಯವಾಗಿ ॥ಪ್ರತ್ಯಯೇ॥ 84 ॥ ಎಂಬ ಸೂತ್ರವು ಪ್ರವರ್ತಿಸಬೇಕಾಗಿದ್ದರೂ ಅದನ್ನು ಹೇಳದೆ॥ ಱುಡೋರ್ದೋರಳಂವ್ಯಂಜನೇ ॥82॥ ಎಂಬ ಸೂತ್ರದಂತೆ ಳಕಾರಾದೇಶವು ಬರುವದೆಂದು ವ್ಯಾಖಾನದಲ್ಲಿ ಬರದಿರುತ್ತಾನೆ.-ಹೀಗೆ ಸೂತ್ರಪ್ರವೃತ್ತಿಯನ್ನೆ ತಿಳಿಯದವನನ್ನು ಸೂತ್ರಕಾರನೆಂದು ಹೇಳಬಹುದೇ:

ಮತ್ತು ನಾಡು + ಕಳ್-ಇತ್ಯಾದಿಗಳಲ್ಲಿ ॥ ಱುಡೋರ್ದೋರಳಂವ್ಯಂಜನೇ ॥82॥ಎಂಬ ಸೂತ್ರವೇ ಪ್ರವರ್ತಿಸುವ ಪಕ್ಷದಲ್ಲಿ ಈ 82 ನೆ ಸೂತ್ರವು ವಿಕಲ್ಪವಾಗಿ ಳಾದೇಶವನ್ನು ವಿಧಾನಮಾಡುವುದೆಂದು ಇವನೇ ಹೇಳಿರುವದರಿಂದ ಈ ಭಟ್ಟಾ ಕಳಂಕನ ವೃತ್ತಿಯಲ್ಲಿರತಕ್ಕ ನಾಳ್ಕಳ್-ನಾಡುಗಳ್-ನಾಳ್ಗಳ್-ಎಂಬ ರೂಪತ್ರಯದ ಜೊತೆಗೆ-ನಾಡುಕಳ್-ಎಂಬ ಮತ್ತೊಂದು ರೂಪವೂ ಸಿದ್ಧವಾಗಿ ಯಾವ ಕರ್ಣಾಟಕ ಕವಿಯೂ ಪ್ರಯೋಗಿಸದ-ನಾಳ್ಗಳ್-ನಾಡುಕಳ್-ಎಂಬ ರೂಪವೂ ಸೂತ್ರಕಾರನಿಗೆ ಸಮ್ಮತವೆಂದು ತೋರುವದು. ಹೀಗೆ ಅನಿಷ್ಟರೂಪವು ಸಿದ್ಧಿಯಾಗುವಂತೆ ಬರೆದ ಭಟ್ಟಾಕಳಂಕನನ್ನು ಸೂತ್ರಕಾರನೆಂದು ಯಾರುತಾನೇ ಒಪ್ಪಬಹುದು.

(ಸಶೇಷ)

ಕನ್ನಡದ 3 ನೇ ಪುಸ್ತಕದ ಟಿಪ್ಪಣಿ.

(೨೩೬ ನೇ ಪುಟದ ಸೇಷ.)

೩೭. ಕೇಂ—ಬೀಗ, ಹಾವುಗಾರರು—ಹಾವಾಡಿಗರು, ಈ ಪಾಠದಿಂದ ಯಾವ ನೀತಿಯನ್ನು ತಿಳಿಯಬಹುದು ? ಓಹೋ, ಇಗೊ ಇವು ಯಾವ ವಾಚಕಗಳು ?

೩೮. ಗಣೆ—ದೊಂಬರ ಗಣೆ, ಕಸರತ್ತು—ಸಾಧನೆ, ಅರಿದು—ಅಪರೂಪ, ದೊಂಬರ ಸಾಧನೆಗಳು ಕೆಲವನ್ನು ಹೇಳಿರಿ. ಈ ಪಾಠದಲ್ಲಿನ ನಾಲ್ಕು ನಾಮ ಪದ ಗಳನ್ನೂ ನಾಲ್ಕು ಕ್ರಿಯಾ ಪದಗಳನ್ನೂ ಅರಿಸಿ ಹೇಳಿರಿ ?

೩೯. ಶಬರ—ಬೇಡನು, ಭರದೆ—ವೇಗದಿಂದ, ನಿರ್ಮೋಹಿ—ದಯೆಯಿಲ್ಲದ, ಈ ಕವಿತೆಗಳ ತಾತ್ಪರ್ಯವನ್ನು ಹೇಳಿರಿ. ಮೂರನೆಯ ಪದ್ಯದಲ್ಲಿರುವ ಸಮಾಸ ಪದ ಗಳನ್ನು ಹೇಳಿರಿ.

೪೦. ಕಲಾಕೌಶಲ್ಯ-ಚಮತ್ಕಾರವಾದ ಕೈಗಾರಿಕೆ, ಪರಿಣಾಮ—ಫಲ, ಅಜ್ಞಾನಿಗಳಿಗೆ ಉಂಟಾಗುವ ತೊಂದರೆ ಏನು ? ಇದೆಲ್ಲ ವಿದ್ಯೆಕಲಿಯದೆ ಇದ್ದುದರ ಪರಿ ಣಾಮವು. ಇಲ್ಲಿನ ಪದಗಳಿಗೆಲ್ಲ ವಾಚಕಗಳನ್ನು ಹೇಳಿರಿ.

೪೧. ಪ್ರವಾಸ—ದೇಶಸಂಚಾರ, ಪ್ರತಿಮೆ—ರೂಪ, ಉಸುಬು—ಮರಳು, ಈ ಪಾಠದಿಂದ ಏನು ಕಲಿಯಬಹುದು ? ಈ ಪಾಠದಲ್ಲಿರುವ ಅನ್ಯದೇಶ್ಯ ಶಬ್ದಗ ಳನ್ನು ಅರಿಸಿ ಹೇಳಿರಿ.

೪೨. ಶ್ರೀಮಂತರು—ಐಶ್ವರ್ಯವಂತರು, ದಂಡೆ—ನದೀತೀರ, ಶೈಲ—ಬೆಟ್ಟ, ಮಿಕ - ಮೃಗ, ಝರಿ—ಬೆಟ್ಟದ ಹೊಳೆ, ಹಿಂಸ್ರ—ಪ್ರಾಣಿಹಿಂಸೆ ಮಾಡುವ, ಕವಿತೆ ಯಲ್ಲಿರುವ ಅಭಿಪ್ರಾಯವನ್ನು ಮಾತುಗಳಲ್ಲಿ ಬರೆಯಿರಿ. ನಮಿಸುವ, ಬೆಳೆವುದು, ಬರುವವು. ಇವು ಎಂಥ ಕ್ರಿಯಾಪದಗಳು ?

೪೩. ಉಗಮ—ಉತ್ಪತ್ತಿ, ಜವುಳು-ಒರತೆ, ತಡಸಲ. ಧಬಧಬೆ—ಜಲಪಾತ ಶಾಖಾನದಿ—ಉಪನದಿ, ಮದಗದ ಕೆರೆ ಎಲ್ಲಿದೆ? ಸರೋವರವಂದರೇನು? ಮೊದ ಲನೆಯ ಕವಿತೆಯಲ್ಲಿರುವ ವಾಕ್ಯಗಳನ್ನು ಬೇರೆಬೇರೆ ವಿಂಗಡಿಸಿರಿ.

೪೪. ಬಂದರ—ರೇವು, ತೆರೆ—ಅಲೆ, ಸಾಗರಕ್ಕೂ ಸಮುದ್ರಕ್ಕೂ ಭೇದವೇನು ಈ ಪಾಠದಲ್ಲಿರುವ ಅವ್ಯಯಗಳನ್ನು ಹೇಳಿರಿ.

೪೫. ಆಖಾತ—ಸಮುದ್ರಶಾಖೆ (ಖಾರಿ) ಪಶ್ಚಿಮತೀರದಲ್ಲಿರುವ ಬಂದರುಗಳು ಯಾವವು? ಭೂಶಿತ ಎಂದರೇನು?

೪೬. ಕಮತ—ಸ್ವಂತ ವ್ಯವಸಾಯ, ಕಮತಿಗ—ಆರಂಬಗಾರ, ಲಾವಣಿ—ಗುತ್ತಿಗೆ, ಕೋರು—ಬೆಳೆದುದರಲ್ಲಿ ಕೊಡುವ ಭಾಗ, ನೇಕಾರರು—ನೇಗೆಯವರು, ಅರಿವೆ—ಬಟ್ಟೆಗಳು, ಜತಿಗಿ—ಎತ್ತಿನ ಕೊರಳಿಗೆ ಕಟ್ಟುವ ಹಗ್ಗ, ನಾವಲಿಗ—ನಾಯಿಂದ, ಒಕ್ಕಲಿಗರಿಗೆ ಬೇಕಾದ ಸಾಮಾನುಗಳು ಯಾವವು? ಈ ಪಾಠದಲ್ಲಿ ಯಾವುದಾದರೂ ನಾಲ್ಕು ವಾಕ್ಯಗಳನ್ನು ಬರೆದು, ಅವುಗಳ ಕರ್ತೃ, ಕರ್ಮ, ಕ್ರಿಯೆಗಳನ್ನು ವಿಂಗಡಿಸಿರಿ.

೪೭. ಸ್ಥೂಲಶರೀರ—ದಪ್ಪವ್ಯೆ, ಗಿರಣಿ—ಕಾರ್ಖಾನೆಯ ಯಂತ್ರ, ಎತ್ತುಗಳ ಸಂಭಾಷಣೆಯಿಂದ ಏನು ತಿಳಿಯಬಹುದು? ಡಂಬ, ಸಿಂಗಾರ, ಸಾಲೆ, ಇವುಗಳ ತತ್ಸಮ ಶಬ್ದಗಳನ್ನು ಹೇಳಿರಿ.

೪೮. ವತನದಾರ—ಸ್ಥಳವಂತ, ಗಾವಟಿಶಾಲೆ—ಹಳ್ಳಿಯ ಮಠ, ಕುಲಕರ್ಣಿ—ಶ್ಯಾನುಭಾಗ, ಲಕ್ಷ್ಯ—ಗುರಿ, ನೊಂದಣೀಕಚೇರಿ—ಸಬರಿಜಸ್ಟ್ರಾರ ಆಪೀಸ, ದವಾಖಾನೆ—ಔಷಧಶಾಲೆ (ಹಾಸ್ಪತ್ರೆ) ಮಂಜುಳ—ಮನೋಹರವಾದ, ಶಿಕ್ಷಕ—ಉಪಾಧ್ಯಾಯ, ತಾಲ್ಲೂಕಿನ ನೌಕರರು ಯಾರುಯಾರು? ಇವರು ಯಾವಯಾವ ಕೆಲಸಗಳನ್ನು ಮಾಡುವರು, ಹೌದು, ದೇವರು, ಎಲ್ಲಹಣವನ್ನು ಶಿರಸ್ತೇದಾರರ ಕಡೆಗೆ ಒಪ್ಪಿಸಿದೇನೆ. ಇಲ್ಲಿನ ಪ್ರತಿಯೊಂದು ಪದಕ್ಕೂ ವಾಚಕ ಹೇಳಿರಿ.

೪೯. ಅಮಲಿನಲ್ಲಿ—ಆಚರಣೆಯಲ್ಲಿ, ಪಿಡುಗು—ಅಂಟುರೋಗ, ಸ್ಯಾನಿಟರಿ—ಆರೋಗ್ಯವಿಚಾರ, ಬೊಂಬೈ ಆಧಿಪತ್ಯದ ಕನ್ನಡ ಜಿಲ್ಲೆಗಳು ಯಾವುವು? ಈ ಪಾಠದಲ್ಲಿನ ಸಂಧಿಗಳನ್ನೂ ಸಮಾಸಗಳನ್ನೂ, ವಿಂಗಡಿಸಿ ಹೇಳಿರಿ.

೫೦. ಸ್ವತಃ—ಸ್ವಂತವಾಗಿ, ಇಮಾರತು—ಕಟ್ಟಡ, ಜಿಲ್ಲೆಯಲ್ಲಿರುವ ಅಧಿಕಾರಿಗಳು ಯಾರುಯಾರು? ಇವರು ಯಾವ ಕೆಲಸಗಳನ್ನು ನೋಡುವರು, ಸಿವಿಲ ಸರ್ಜನ, ಪೌಜದಾರ, ಪಬ್ಲಿಕವರ್ಕ್ಸ, ಇವುಗಳಿಗೆ ಸಮಾನಾರ್ಥದ ಶಬ್ದಗಳನ್ನು ಹೇಳಿ?

೫೧. ಮುಗಿಲು—ಆಕಾಶ (ಮೋಡ) ರಾಡಿ—ಕೆಸರು, ಬರ್ಪ—ಮಂಜಿನ ಗೆಡ್ಡೆ, ಉಗಿ—ಆವಿ (ಹಬೆ) ಮಳೆಬರುವುದು ಹೇಗೆ! ಹೊಳೆಗಳು, ಹೇಗೆ ಆಗುತ್ತವೆ? ಕೆಲವುಭಾಗವು ನೆಲದೊಳಗೆ ಇಂಗುವುದು. ಈ ವಾಕ್ಯದಲ್ಲಿ ಯಾವಯಾವಪದಗಳಿವೆ.

೫೨. ಮೊಳಾಳ—ಮುಂಕು. ಕಟಿದು—ಒಂದರಮೇಲೊಂದನಿಟ್ಟು ಹೊಡೆದು, ನೇಗೆ ಎಂದರೇನು? ದೀಪವನ್ನು ನಂದಿಸುವ ವಾಯು ಯಾವುದು? ಗಾಳೀಬೀಸುವುವು, ತುಸುಹೊತ್ತು, ಮೇಣಬತ್ತಿ ಇವು ಯಾವ ಸಮಾಸಗಳು.

೫೩. ಸೊರಗಿ—ಕಂದಿ, ಗುಂಪೀ ಮಾಡುವುದು—ರಾಶಿಮಾಡುವುದು, ಸಕ್ಕರೆ, ಉಪ್ಪು ಇವುಗಳಿಗೆ ಭೇದವೇನು? ಉಪ್ಪಿನ ಉಪಯೋಗಗಳ್ಯಾವುವು?

೫೪. ಹಳಕು—ಹರಳು, ಗಂಧಕದ ಹೊಗೆಯಲ್ಲಿ ಯಾವ ಗುಣ ಉಂಟು? ದೀಪದ ಕಡ್ಡಿ ತುದಿಗೆ ಗಂಧಕ ಬಳಿಯುವುದೇಕೆ? ಈ ಪಾಠದಲ್ಲಿನ ಅವ್ಯಯ, ಸರ್ವನಾಮ ಇವುಗಳಲ್ಲಿ ನಾಲ್ಕನ್ನು ಆರಿಸಿ ಹೇಳಿರಿ.

೫೫. ಜುವರಿಗೆ—ಕೂಗುದೀಪದ ಮೇಲಣತಟ್ಟೆ, ಲೋಲಕ—ಅಂಚಿಗೆ ಇಳಿಬಿಟ್ಟ ಗಾಜುಚೂರು. ಯಾವಬಣ್ಣದ ಹರಳುಗಳಿಗೆ ಯಾವ ಹೆಸರುಗಳಿವೆ? ಗಾಜನ್ನು ಮಾಡುವುದು ಹೇಗೆ? ಅವರ ಕೊರಳಲ್ಲಿ ಒಂದು ಕಂಠಿ ಇತ್ತು. ಈ ಪದಗಳು ಯಾವಯಾವ ವಾಚಕಗಳು?

56. ಹಣಿಸಿ—ತಟ್ಟಿಸಿ, ಹೊಯ್ದಕಬ್ಬಿಣ—ಎರಕದಕಬ್ಬಿಣ ಅರ್ಥ—ತಿಕ್ಕುವ ಅರ, ಕಬ್ಬಿಣಕ್ಕೂ, ಉಕ್ಕಿಗೂ ಭೇದವೇನು? ಶುದ್ಧ ಕಬ್ಬಿಣದಿಂದ ಯಾವ ಸಾಮಾನುಗಳು ಆಗುವುವು? ಒಂದುದಿನ ಭೀಮನ ತಂದೆಯು ಅವನಿಗೆ ಗುದ್ದಲಿಯನ್ನು ಹಣಿಸಿಕೊಂಡು ಬಾರೆಂದು ಹೇಳಿದನು, ಈ ದೊಡ್ಡ ವಾಕ್ಯವನ್ನು ಬೇರೆಬೇರೆ ಸಣ್ಣ ವಾಕ್ಯಗಳಿಗೆ ಮಾಡಿರಿ?

೫೭. ವನಸ್ಪತಿ—ಗಿಡಗಳು, ಗಿಡಗಳ ನಾಲ್ಕು ಅವಯವಗಳು ಯಾವುವು? ಬೇಡಾದ, ಬೊಡ್ಡಿ, ಏನಂದಿ, ಈ ಪದಗಳ ಶುದ್ಧರೂಪಗಳು ಯಾವುವು?

೫೮. ಪಚೆನವಾಗುವುದು—ಅರಗುವುದು, ಇಯತ್ತೆ—ತರಗತಿ, ರಬ್ಬರೆಂದರೇನು? ಇದು ಯಾವ ಕೆಲಸಕ್ಕೆ ಉಪಯೋಗಿಸುವುದು? ಸಬ್ಬಕ್ಕಿಯು ಹೇಗೆ ಆಗುವುದು? ಮೊನ್ನೆ ಆಲೇಮನೆಗೆ ಹೋಗಿದ್ದೆವು. ಇಲ್ಲಿನ ಪದಗಳು ಯಾವಯಾವ ವಾಚಕಗಳು?

೫೯. ಊಬು—ಊಗು (ಮೊನೆ) ಸೀರ—ಕಿರಿದು (ಸೀರಲು) ಪೌಷ್ಟಿಕ—ಬಲಕಾರಿ ಪದಾರ್ಥ, ತಂಬಿ—ಹೊಟ್ಟು, ಯಾವುದಕ್ಕೆ ಉಮ್ಮಿಗೆ ಎನ್ನುವರು? ಗೋದುವೆಯ ಉಪಯೋಗಗಳ್ಯಾವುವು?

* ವಿದ್ಯಾದಾಯಿನಿ *

(A MONTHLY JOURNAL.)

ಭಾಗ ೧೫.] ಡಿಶಂಬರ್.—೧೯೦೭.. [ಸಂಚಿಕೆ ೧೦

ಮೈಸೂರಿನಲ್ಲಿ ನಡೆದ ವಿದ್ಯಾಭ್ಯಾಸವಿಷಯಕವಾದ ವಸ್ತು ಪ್ರದರ್ಶನ.

ಮೈಸೂರಿನಲ್ಲಿ ನಡೆದ ವಿದ್ಯಾಭ್ಯಾಸ ವಿಷಯಕವಾದ ವಸ್ತು ಪ್ರದರ್ಶನಕಾಲದಲ್ಲಿ ಇನ್‌ಸ್ಪೆಕ್ಟರ್ ಜನರಲ್ ಮೆ॥ ಭಾಭಾ ಸಾಹೇಬರೂ, ಮೆ॥ ಡಾಕ್ಟರ್ ಲಾರ್ಸ್ ಸಾಹೇಬರೂ, ಮ್ಯಾನ್ಯುಅಲ್ ಟ್ರೈನಿಂಗ್ ವಿಷಯವಾಗಿ ಮಾಡಿದ ಉಪನ್ಯಾಸಗಳು

ಈ ಎರಡು ಉಪನ್ಯಾಸಗಳು 1907 ನೇ ಇಸವಿ ಅಕ್ಟೋಬರ್ 21ರಲ್ಲಿ ಮೈಸೂರಲ್ಲಿರುವ ಮಹಾರಾಜರವರ ಕಾಲೇಜ್ ಹಾಲಿನಲ್ಲಿ ನಡೆದುವು. ಆಕಾಲದಲ್ಲಿ ಡಾಕ್ಟರ್ ಲಿವ್ಯಾ ಸಾಹೇಬರವರು ಅಗ್ರಾಸನವನ್ನು ವಹಿಸಿದ್ದರು. ಈ ಎರಡು ಉಪನ್ಯಾಸಗಳ ಸಾರಾಂಶವನ್ನು ಮುಂದೆ ತಿಳಿಸುವೆವು.

ಮೆ॥ ಭಾಭಾ ಸಾಹೇಬರು ಮುಂದೆ ಹೇಳುವ ರೀತಿಯಲ್ಲಿ ಉಪನ್ಯಾಸ ಮಾಡಿದರು.

ಮಹನೀಯರೇ !

" ಮ್ಯಾನ್ಯುಅಲ್ ಟ್ರೈನಿಂಗ್ ಎಂಬ ಶಬ್ದಕ್ಕೆ ಸ್ಲಾಯ್ಡ್ ಎಂಬುದು ಒಂದು ಪ್ರತಿಪದವಷ್ಟೆ. ಸ್ಲಾಯ್ಡ್ ಎಂದರೆ ಹಸ್ತಕೌಶಲವನ್ನು ಹೆಚ್ಚಿಸುವ ಕೆಲಸವೆಂದರ್ಥವು. ಆದರೆ ಈಚಿಗೆ ಈ ಶಬ್ದವನ್ನು ಮರಗೆಲಸವೊಂದಕ್ಕೆ ಮಾತ್ರ ಉಪಯೋಗಿಸಿರುವರು. ಈ ವಿಷಯದಲ್ಲಿ ಪರಿಚಯವಿಲ್ಲದ ಅನೇಕರು ತಮ್ಮ ಬಾಲಕರನ್ನು ಬಡಗಿಗಳನ್ನಾಗಿ ಮಾಡುವುದಕ್ಕಾಗಿ ಸರ್ಕಾರದವರು ಈ ಮ್ಯಾನ್ಯುಅಲ್ ಟ್ರೈನಿಂಗ್ ಪಾಠವನ್ನು ನಮ್ಮ ದೇಶದಲ್ಲಿ ಇಡಲು ಪ್ರಯತ್ನಿಸಿರುವರೆಂದು ಅಭಿಪ್ರಾಯಪ

ಡುತಿರುವರು. ಈ ತಪ್ಪಭಿಪ್ರಾಯವನ್ನು ನಾಶಪಡಿಸಬೇಕೆಂಬುದೇ ಈ ದಿವಸ ನಾನು ಮಾತನಾಡುವುದರ ಉದ್ದೇಶವಾಗಿರುವುದು.

ನಮ್ಮ ದೇಹದಲ್ಲಿರುವ ಮಿದಳು, ಮಿದಳುಬಳ್ಳಿ, ನರಗಳು' ಇವುಗಳಲ್ಲಿ ಎರಡು ಭಾಗಗಳಿರುವುವು. ಒಂದು ವಿಧದ ನರಗಳಿಗೂ, ಕೇಂದ್ರಗಳಿಗೂ, ಜ್ಞಾನವಾಹಿ ನರಗಳು ಅಥವಾ ಕೇಂದ್ರಗಳೆಂದು ಹೆಸರು. ಈ ನರಗಳು ಇಂದ್ರಿಯಗಳಿಂದ ತಿಳಿದ ಜ್ಞಾನವನ್ನು ಮಿದಳುಬಳ್ಳಿ, ಮಿದಳು. ಇವುಗಳಿಗೆ ಒಯ್ಯುವುವು. ಮತ್ತೊಂದು ವಿಧದ ನರಗಳಿಗೂ ಕೇಂದ್ರಗಳಿಗೂ ಚಾಲಕತಂತುಗಳೆಂದೂ ಕೇಂದ್ರಗಳೆಂದೂ ಹೆಸರು. ಇವುಗಳೇ ದೇಹದಲ್ಲಿ ಮಾಂಸಖಂಡಗಳ ಸಹಾಯದಿಂದ ನಡೆಯುವ ಚಲನೆಗೆಲ್ಲಾ ಕಾರಣವಾಗಿರುವುವು. ಈಗ ನಮ್ಮಲ್ಲಿ ಆಚರಣೆಯಲ್ಲಿರುವ ವಿದ್ಯಾಭ್ಯಾಸಕ್ರಮವು ನಮ್ಮ ದೇಹದ ಜ್ಞಾನವಾಹಿಕೇಂದ್ರಗಳಿಗೂ, ತಂತುಗಳಿಗೂ ಮಾತ್ರ ವಿಶೇಷ ಕೆಲಸವನ್ನು ಕೊಡುವುದು. ನಮ್ಮ ದೇಹದ ಮಾಂಸಖಂಡಗಳಿಗೆ ಸರಿಯಾದ ಕೆಲಸವನ್ನು ಕೊಟ್ಟು ಅವುಗಳ ಸಹಾಯದಿಂದ ನಮ್ಮ ದೇಹದ ಚಾಲಕ ನರಗಳ ಮತ್ತು ಕೇಂದ್ರಗಳ ಶಕ್ತಿಯನ್ನು ವೃದ್ಧಿಗೊಳಿಸುವ ಕೆಲಸವು ನಮ್ಮ ಪಾಠಶಾಲೆಗಳಲ್ಲಿ ಸರಿಯಾಗಿ ನಡಿಯುತ್ತಿಲ್ಲ. ನಮ್ಮ ಪಾಠಶಾಲೆಗಳಲ್ಲಿ ಬಾಲಕರು ಆಡುವ ಫುಟ್‌ಬಾಲ್, ಕ್ರಿಕೆಟ್ ಮುಂತಾದ ಆಟಗಳಿಂದ ದೊಡ್ಡ ದೊಡ್ಡ ಮಾಂಸಖಂಡಗಳಿಗೆ ಮಾತ್ರ ಸ್ವಲ್ಪ ಕೆಲಸ ದೊರೆಯುವುದು. ದೇಹದ ಸಣ್ಣ ಸಣ್ಣ ಮಾಂಸಖಂಡಗಳಿಗೂ ಕೆಲಸವನ್ನು ಕೊಟ್ಟು ಅವುಗಳ ಶಕ್ತಿಯನ್ನು ಬೆಳಸಬೇಕೆಂಬುದೇ ವ್ಯಾನ್ಯೂಲ್ ಟ್ರೈನಿಂಗಿನ ಉದ್ದೇಶವಾಗಿರುವುದು. ಈ ಕಲಸದಿಂದ ಮಕ್ಕಳ ಹಸ್ತಕೌಶಲವು ಹೆಚ್ಚುವುದರಲ್ಲಿ ಸಂಶಯವಿಲ್ಲ. 5 ವರ್ಷದಿಂದ 15 ವರ್ಷಗಳವರೆಗೆ ಈ ಮಾಂಸಖಂಡಗಳೂ, ಇವುಗಳಿಗೆ ಆಧಾರವಾದ ನರಗಳೂ ಕೇಂದ್ರಗಳೂ ವೃದ್ಧಿಹೊಂದುವುವು. ಈ ಕಾಲದಲ್ಲಿ ಇವುಗಳಿಗೆ ಕೆಲಸ ಕೊಟ್ಟು ಇವುಗಳ ಶಕ್ತಿಯನ್ನು ಹೆಚ್ಚಿಸಬೇಕು. ಮಿದುಳಿನ ಒಂದು ಭಾಗದ ವೃದ್ಧಿಗೆ ಸರಿಯಾಗಿ ಗಮನ ಕೊಡದಿದ್ದರೆ ಆ ಭಾಗದ ಶಕ್ತಿಯು ಕಡಮೆಯಾಗುವುದಲ್ಲದೆ ಉಳಿದ ಭಾಗಗಳ ಶಕ್ತಿಯೂ ಕಡಮೆಯಾಗುವುದು. ಆದುದರಿಂದ ಮಕ್ಕಳ ಬುದ್ಧಿಯ ವ್ಯಾಪಾರಗಳ ಅಭಿವೃದ್ಧಿಗೂ, ಒಳ್ಳೆ ನಡತೆಯ ಅಭಿವೃದ್ಧಿಗೂ ಕುಂದುಂಟಾಗುವುದು. ವ್ಯಾನ್ಯೂಲ್ ಟ್ರೈನಿಂಗ್ ಪಾಠದಿಂದ ಮಕ್ಕಳ ಹಸ್ತಕೌಶಲವು ಹೆಚ್ಚುವುದಕ್ಕೆ ಅವಕಾಶವಿರುವುದಲ್ಲದೆ ಅವರ ಬುದ್ಧಿಯು ವೃದ್ಧಿಹೊಂದುವುದಕ್ಕೂ ನಡತೆಯು ತಿದ್ದುವುದಕ್ಕೂ ಅವ

ಕಾಶವಿರುವುದು. ಮಕ್ಕಳಿಗೆ ಕೈಕೆಲಸದಲ್ಲಿ ಸರಿಯಾದ ಗೌರವವು ಹುಟ್ಟುವುದು. ಈ ಪಾಠವನ್ನು ಕಲಿವುದಕ್ಕಿಂತಲೂ ಮುಂಚೆ ಸ್ವಲ್ಪವೂ ಅವಧಾನ ವಿಡುವ ಶಕ್ತಿಯು ಇಲ್ಲದೇ ಇದ್ದ ಬಾಲಕರು ಈ ಪಾಠವನ್ನು ಕಲಿವುದಕ್ಕೆ ಪ್ರಾರಂಭಿಸಿದ್ದನೇಲೆ ಕ್ರಮವಾದ ಅವಧಾನವನ್ನಿಡುವ ಶಕ್ತಿಯನ್ನು ಹೊಂದಿ ಇತರ ಪಾಠಗಳಲ್ಲೂ ಸರಿಯಾದ ಫಲವನ್ನು ಹೊಂದಿರುವರು. ಮೇಲಾಗಿ ಈಗ ಪಾಠಶಾಲೆಗಳಲ್ಲಿ ನಡೆವ ಪಾಠಗಳಲ್ಲಿ ಮಕ್ಕಳ ಕಲ್ಪನಾಶಕ್ತಿಯ ಬೆಳವಳಿಕೆಗೆ ವಿಶೇಷ ಅವಕಾಶವಿಲ್ಲ. ಮಾನ್ಯೂಲ್ ಟ್ರೈನಿಂಗ್ ಕೆಲಸದಲ್ಲಿ ಮಕ್ಕಳು ತಾವೇ ಊಹಿಸಿ ಹೊಸ ಮಾದರಿಗಳನ್ನು ಮಾಡುವಾಗ ಈ ಶಕ್ತಿಯು ಅಭಿವೃದ್ಧಿಗೆ ವಿಶೇಷ ಅವಕಾಶವಿರುವುದು. ಸೋಮಾರಿಗಳಾಗಿದ್ದ ಅನೇಕ ಹುಡುಗರನ್ನು ಈ ಕೆಲಸಕ್ಕೆ ಹಾಕಿದೊಡನೆಯೇ ಅವರಲ್ಲಿದ್ದ ಸೋಮಾರಿತನವು ಹೋಗಿ ಚಟವಟಕೆಯು ಹೆಚ್ಚಿದುದು ಅನುಭವಕ್ಕೆ ಬಂದಿರುವ ಅಂಶವು.

ಈ ಪಾಠವು ಇಷ್ಟು ಮುಖ್ಯವಾದುದಾದರೂ ಜನರು ಇದರ ವಿಷಯದಲ್ಲಿ ಈಗೀಗ ಏತಕ್ಕೆ ಗಮನ ಕೊಡುತ್ತಿರುವರು? ಇದುವರೆಗೂ ಏಕೆ ಗಮನಕೊಡಲಿಲ್ಲ? ಎಂಬ ಪ್ರಶ್ನೆಗಳು ನಿಮಗೆ ತೋರಬಹುದು. ಆದರೆ, ಮೂರುನಾಲ್ಕು ಶತಮಾನಗಳಿಂದಲೂ ಇದರ ಅವಶ್ಯಕತೆಯನ್ನು ವಿದ್ಯಾಭ್ಯಾಸದ ಕೆಲಸದಲ್ಲಿ ನಿರತರಾಗಿರುವವರು ಆಗಾಗ್ಯೆ ತಿಳಿಸುತ್ತಲೇ ಇರುವರು. 1876 ರಲ್ಲಿ ಮಾಸ್ಕೊ ನಗರದಲ್ಲಿ ನಡೆದ ವಸ್ತುಪ್ರದರ್ಶನದಲ್ಲಿ ಬಾಲಕರು ಪಾಠಶಾಲೆಯಲ್ಲಿ ಮಾಡಿದ ಕೈಕೆಲಸದ ವಸ್ತುಗಳು ಒಂದು ಭಾಗವಾಗಿದ್ದುವು. ಜರ್ಮಾಡೀರಂಕಲ್ ಎಂಬ ವಿದ್ವಾಂಸನು ಪಾಠಶಾಲೆಗಳಲ್ಲಿ ಈ ವಿಧವಾದ ಕೆಲಸದ ಅವಶ್ಯಕತೆಯನ್ನು ಸ್ಪಷ್ಟಪಡಿಸಿದನು. 1877—79 ರಲ್ಲಿ ಬಾಸ್ಟ್ನ್ ನಗರದಲ್ಲಿ ಈ ವಿಧವಾದ ಪಾಠಶಾಲೆಗಳು ಸ್ಥಾಪಿಸಲ್ಪಟ್ಟವು. ಅಲ್ಲಿಂದೀಚೆಗೆ ಈ ಪದ್ಧತಿಯು ವಿಶೇಷ ಬೆಳೆಯುತ ಬಂದಿರುವುದು. ಸಂಯುಕ್ತ ಸಂಸ್ಥಾನದ ಸರ್ಕಾರದವರು ಈ ವಿಷಯದಲ್ಲಿ ಕಾನೂನು ಮಾಡಿ ಜಾರಿಗೆ ತಂದಿರುವುರು. ಈ ಕಾನೂನಿನ ಪ್ರಕಾರ 20 ಸಾವಿರ ಜನರಿರುವ ಪ್ರತಿಯೊಂದು ಊರಿನಲ್ಲೂ ಒಂದು ಮ್ಯಾನ್ಯೂಲ್ ಟ್ರೈನಿಂಗ್ ಸ್ಕೂಲಿರಬೇಕು. ಆದರೆ ವಸ್ತುತಃ 4000 ಜನರಿರುವ ಅನೇಕ ಪಟ್ಟಣಗಳಲ್ಲೇ ಈ ಸ್ಕೂಲುಗಳಿರುವುವು. 1905 ರಲ್ಲಿ ಸಂಯುಕ್ತ ಸಂಸ್ಥಾನದಲ್ಲಿ 106 ಮ್ಯಾನ್ಯೂಲ್ ಟ್ರೈನಿಂಗ್ ಸ್ಕೂಲುಗಳು ಇದ್ದುವು. ಈ ಸ್ಕೂಲುಗಳಲ್ಲಿ ಶಿಕ್ಷಿತರಾಗುವವರು ಬಾಲಕರುಮಾತ್ರವಲ್ಲ. ಬಾಲಕಿಯರೂ ಶಿಕ್ಷಿತರಾಗುವರು. ಇವರಿಗೆ ಅಡಿಗೆ ಮಾಡುವುದು ಬಟ್ಟೆ ಒಗೆವುದು ಮುಂತಾದ ಕೆಲಸಗಳನ್ನು ಕಲಿಸಿ ಅವರ ಹಸ್ತಕೌಶಲವನ್ನು ಹೆಚ್ಚಿಸುವರು.

ಮಾಸ್ಟಿ ಎಂಬ ವಿದ್ವಾಂಸನು ಮ್ಯಾನ್ಯುಯಲ್ ಟ್ರೈನಿಂಗ್ ವಿಷಯವನ್ನೆಲ್ಲಾ ಚೆನ್ನಾಗಿ ಪರಿಶೋಧಿಸಿ ಇದರಿಂದ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರಯೋಜನವಿರುವುದೆಂತಲೂ ಹೈಸ್ಕೂಲುಗಳಲ್ಲಿ ಈ ಕೆಲಸವನ್ನಿಡುವುದರಿಂದ ಕಿಂಡರ್ ಗಾರ್ಟನ್ನಿಗೂ ಕೈಗಾರಿಕೆ ಪಾಠಶಾಲೆಗೂ ಮಧ್ಯದಲ್ಲಿ ಮಕ್ಕಳ ಹಸ್ತಕೌಶಲದ ವೃದ್ಧಿಗಿರುವ ನ್ಯೂನತೆಯನ್ನೂ ತಪ್ಪಿಸುವುದೆಂತಲೂ ಸ್ಪಷ್ಟಪಡಿಸಿರುವನು. ಮೂರುವರ್ಷ ಮರಗೆಲಸವನ್ನೂ ಎರಡುವರ್ಷ ಲೋಹ ಕೆಲಸವನ್ನೂ ನಮ್ಮ ಪಾಠಶಾಲೆಗಳಲ್ಲಿಡಬೇಕೆಂದು ಈತನು ಹೇಳುವನು.

ಅನಂತರ ಡಾಕ್ಟರ್ ಲಾರ್ಸ್ಟ್ ಸಾಹೇಬರು ಮುಂದೆ ಹೇಳುವ ರೀತಿಯಲ್ಲಿ ಉಪನ್ಯಾಸವನ್ನು ಮಾಡಿದರು.

"ಈ ರಾಜ್ಯದಲ್ಲಿ ಮಕ್ಕಳ ಹಸ್ತ ಕೌಶಲವನ್ನು ಹೆಚ್ಚಿಸುವ ವಿಷಯದಲ್ಲಿ ನೀವು ಮಾಡುತ್ತಿರುವ ಕೆಲಸಗಳನ್ನು ತಿಳಿಯುವುದಕ್ಕೂ ಈ ವಿಷಯದಲ್ಲಿ ಮುಂದೆ ಮಾಡಬಹುದಾದ ಅಂಶಗಳನ್ನು ತಿಳಿಸುವುದಕ್ಕೂ ನನಗೆ ಅವಕಾಶ ಸಿಕ್ಕಿದುದಕ್ಕಾಗಿ ನಾನು ಬಹಳ ಸಂತೋಷಿಸುವೆನು.

ಮೈಸೂರಿನಲ್ಲಿ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರಾದ ಮೆ॥ ಹೆಚ್. ಜಿ. ಭಾಭಾ ಸಾಹೇಬರು ಅಮೆರಿಕಾಖಂಡಕ್ಕೆ ಬಂದಿದ್ದಾಗ ಅವರಿಗೂ ನನಗೂ ಸಂಭಾಷಣೆಯು ನಡೆದು ನಿಮ್ಮ ದೇಶಕ್ಕೆ ನಾನು ಕೆಲವು ದಿವಸ ಬಂದು ನಿಮ್ಮಲ್ಲಿ ಕೆಲವು ಉಪಾಧ್ಯಾಯರ ಸಂಗಡ ಕೆಲಸವಾಡಿ ನಿಮ್ಮ ಪಾಠಶಾಲೆಗಳಲ್ಲಿ ಮ್ಯಾನ್ಯುಯಲ್ ಟ್ರೈನಿಂಗ್ ಇಡಲು ಸಹಾಯಮಾಡಬೇಕೆಂಬುವ ನಿಮ್ಮ ಸರ್ಕಾರದ ವರ ಕೋರಿಕೆಯನ್ನು ನಾನು ಸಂತೋಷದಿಂದ ಒಪ್ಪಿಕೊಂಡೆನು.

ಮ್ಯಾನ್ಯುಯಲ್ ಟ್ರೈನಿಂಗನ್ನು ತಮ್ಮ ಪಾಠಶಾಲೆಗಳಲ್ಲಿಡಬೇಕೆಂಬುವ ಯಾವ ಸಮುದಾಯವನ್ನಾದರೂ ನಾನು ವಿಶೇಷ ಕೊಂಡಾಡುವೆನು. ಪ್ರತಿಯೊಂದು ಮಗುವೂ ಪ್ರಪಂಚದಲ್ಲಿ ಹುಟ್ಟಿದೊಡನೆಯೇ ತನ್ನ ಹಸ್ತ ಕೌಶಲವನ್ನು ಹೆಚ್ಚಿಸುವುದಕ್ಕನುಕೂಲವಾದ ಕೆಲಸವನ್ನು ಕಲಿಯುವ ಹಕ್ಕನ್ನು ಹೊಂದಿರುವುದು. ಮ್ಯಾನ್ಯುಯಲ್ ಟ್ರೈನಿಂಗ್ ಪಾಠವು ಮಕ್ಕಳ ವಿದ್ಯಾಭ್ಯಾಸದಲ್ಲಿ ಒಂದು ಭಾಗವಾಗಿರಬೇಕೆಂಬುದನ್ನು ತಿಳಿದು ಆ ಪಾಠಶಾಲೆಗಳಲ್ಲಿ ಇಡುವುದಕ್ಕೆ ಪ್ರಯತ್ನಿಸಲು ಹಿಂದೂ ಸ್ಥಾನದಲ್ಲೆಲ್ಲಾ ಮೈಸೂರು ದೇಶವೇ ಮೊದಲನೆಯ ಸಂಸ್ಥಾನವೆಂದು ನನಗೆ ತೋರುವುದು. ಈ ಸಂಸ್ಥಾನದ ಜನರಲ್ಲಿ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಇಷ್ಟು ಚೆನ್ನಾಗಿ ಯೋಚಿಸುವ ಜನರಿರುವುದಕ್ಕಾಗಿ ನಾನು ಬಹಳ ಸಂತೋಷ ಪಡುವೆನು.

ನನ್ನ ಅನುಭವದ ವಿಷಯದಲ್ಲಿ ಕೆಲವು ಅಂಶಗಳನ್ನು ನಿಮ್ಮ ಅನುಜ್ಞೆಯಿಂದ ನಾನು ನಿಮಗೆ ತಿಳಿಸುವೆನು, ನನ್ನ ಬಾಲ್ಯ ವಿದ್ಯಾಭ್ಯಾಸವು ಸ್ವೀಡ್ಡ ದೇಶದಲ್ಲಿ ನಡೆಯಿತು. ಉಪಾಧ್ಯಾಯನ ಕೆಲಸದಲ್ಲಿ ಮೊದಲನೇ ಅನುಭವವೂ ಅಲ್ಲೇ ಉಂಟಾಯಿತು. ಸುಮಾರು 20 ವರ್ಷಗಳಿಗೆ ಮೊದಲು ನಾನು ಅಮೆರಿಕಾಕ್ಕೆ ಬಂದು ಅಲ್ಲೇ ವಾಸನಾಗಿರುವೆನು. ಈ ಕಾಲದಲ್ಲಿ ನಾನು ಆಗಾಗ್ಗೆ ಯೂರೋಪ್ ಖಂಡಕ್ಕೆ ಹೋಗುತ ಅಲ್ಲಿ ಮ್ಯಾನ್ಯೂಲ್ ಟ್ರೇನಿಂಗ್ ವಿಷಯದಲ್ಲಿ ನಡೆಯುತ್ತಿರುವ ವ್ಯತ್ಯಾಸಗಳನ್ನು ತಿಳಿಯುತಲೇ ಇರುವೆನು.

ನಾನು ಸ್ವಲ್ಪಕಾಲದವರಿಗೆ ಮಾತ್ರ ಬಿಟ್ಟು ಬಂದಿರುವ ಬಾಸ್ಟ್ನ ನಗರದ ಪಾಠಶಾಲೆಯು ಜನೋಪಕಾರದಲ್ಲಿ ನಿರತಳಾದ ಒಬ್ಬಳು ಹೆಂಗಸಿಂದ ಸ್ಥಾಪಿಸಲ್ಪಟ್ಟಿರುವುದು. ಈ ಪಾಠಶಾಲೆಯಲ್ಲಿ ಉಪಾಧ್ಯಾಯರಿಗೆ 9 ತಿಂಗಳ ಕಾಲ ಟ್ರೇನಿಂಗ್ ದೊರೆಯುತ್ತಿರುವುದು. ಈಗಿನವರಿಗೆ ಸುಮಾರು 270 ಜನರು ಈ ಪಾಠಶಾಲೆಯಿಂದ ಶಿಕ್ಷಿತರಾಗಿ ಹೋಗಿ ಸಂಯುಕ್ತ ಸಂಸ್ಥಾನದ ಎಲ್ಲಾ ರಾಜ್ಯಗಳಲ್ಲೂ ಈ ಕೆಲಸವನ್ನು ಮಾಡುತಿರುವರು. ಸ್ಲಾಯ್ಡ ಪದ್ಧತಿಯು ಒಬ್ಬನು ಕಂಡುಹಿಡಿದದುಲ್ಲ ಅಥವಾ ಒಂದುಸ್ಥಳದಲ್ಲಿ ಹುಟ್ಟಿದುದಲ್ಲ. ಆದರೆ ಈ ಪದ್ಧತಿಯನ್ನು ಸ್ಥಾಪಿಸುವ ವಿಷಯದಲ್ಲಿ ಸ್ವೀಡ್ಡರಾಜ್ಯದ ನಾಸ್ ಎಂಬ ನಗರದಲ್ಲಿದ್ದ ಆಟೊಸಾಲಮನ್ ಎಂಬ ದೊಡ್ಡ ಮನುಷ್ಯನು ಈ ಕೆಲಸಕ್ಕೆ ಪ್ರಯತ್ನಪಟ್ಟಿರುವಷ್ಟು ಮತ್ತಾರೂ ಪ್ರಯತ್ನಪಟ್ಟಿಲ್ಲವೆಂದು ಕಾಣುವುದು. ಸ್ಲಾಯ್ಡ ಎಂಬುದು ಸ್ವೀಡಿಷ್ ಭಾಷೆಯ ಶಬ್ದವು, ಇದಕ್ಕೆ ವಿದ್ಯಾಭ್ಯಾಸಕ್ಕೆ ಅನುಕೂಲವಾದ ಮ್ಯಾನ್ಯೂಲ್ ಟ್ರೈನಿಂಗ್ ಎಂದರ್ಥವು. ಮಕ್ಕಳಲ್ಲಿ ಸಹಜವಾಗಿರುವ ಚಟುವಟಿಕೆಯನ್ನು ಕ್ರಮವಾಗಿ ಏರ್ಪಡಿಸಿರುವ ಆಯುಧಗಳ ಕೆಲಸಗಳಿಂದ ಹೆಚ್ಚಿಸುವುದೇ ಈ ಕೆಲಸದ ಉದ್ದೇಶವಾಗಿರುವುದು. ವಿದ್ಯಾಭ್ಯಾಸದ ಉದ್ದೇಶದಂತೆ ಸ್ಲಾಯ್ಡನ ಉದ್ದೇಶವು ಮಕ್ಕಳ ದೈಹಿಕಮಾನಸಿಕ ಶಕ್ತಿಗಳನ್ನು ವೃದ್ಧಿಗೊಳಿಸುವುದೂ, ಅವರ ನಡತೆಯನ್ನು ತಿದ್ದುವುದೂ ಆಗಿರುವುದು. ಆದುದರಿಂದ ಇತರ ಪಾಠಗಳಿಗಿರುವಂತೆ ಈ ಪಾಠಕ್ಕೂ ಪಾಠಶಾಲೆಯಲ್ಲಿ ಕಾಲವನ್ನು ಕಲ್ಪಿಸಬೇಕೆಂಬುದು ನನ್ನ ಮತವು. ಮಾಂಸಖಂಡಗಳು ವಿಶೇಷವಾಗಿ ಬೆಳೆಯುವ ಬಾಲ್ಯವನ್ನು ಬಿಟ್ಟರೆ ಇದಕ್ಕನುಕೂಲವಾದ ಕಾಲವು ಮತ್ತಾವದೂಇಲ್ಲ.

ಮಕ್ಕಳ ದೈಹಿಕವಾದ ಶಕ್ತಿಗಳನ್ನು ವೃದ್ಧಿಗೊಳಿಸುವುದು ಅವಶ್ಯಕವೆಂದು ಬಹಳ ಪುರಾತನ ಕಾಲದಿಂದಲೂ ಜನರು ತಿಳಿದಿರುವರು. ಈಗ 2000 ಸಾವಿರ

ವರುಷಗಳ ಕೆಳಗೆ ಚೀನಾದೇಶದಲ್ಲಿದ್ದ ಕ್ಯಂಫ್ಯೂಷಿಯಸ್ ಎಂಬ ವಿದ್ವಾಂಸನು ಅಂಗ ಸಾಧನೆಗಳಿಂದಲೂ ಆಟಗಳಿಂದಲೂ ಮಕ್ಕಳ ದೇಹದ ಶಕ್ತಿಗಳನ್ನಭಿವೃದ್ಧಿಗೊಳಿಸುವುದು ಆವಶ್ಯಕವೆಂಬುದನ್ನು ಸ್ಪಷ್ಟವಾಗಿ ಹೇಳಿರುವನು. ಗ್ರೀಸ್ ದೇಶದವರು ಮಕ್ಕಳ ದೇಹಾರೋಗ್ಯವನ್ನು ಹೆಚ್ಚಿಸುವುದಕ್ಕನುಕೂಲವಾದ ಅಂಗಸಾಧನೆಯನ್ನು ತಮ್ಮ ವಿದ್ಯಾಭ್ಯಾಸದಲ್ಲಿ ಮುಖ್ಯವಾಗಿಟ್ಟುಕೊಂಡಿದ್ದರು. ಕೊವಿಾನಿಯಸ್, ರೂಸೊ, ಪೆಸ್ಟಲಾಟ್ಸಿ, ಫ್ರೋಬೆಲ್ ಮುಂತಾದ ದೊಡ್ಡ ಉಪಾಧ್ಯಾಯರುಗಳೆಲ್ಲರೂ ಮಕ್ಕಳ ದೈಹಿಕವಾದ ಶಕ್ತಿಗಳನ್ನು ಬೆಳಿಸುವುದಕ್ಕೆ ವಿಶೇಷ ಗಮನವನ್ನು ಕೊಟ್ಟಿರುವರು. ಈಗಿನ ಕಾಲದಲ್ಲೂ ಈ ವಿಧವಾದ ಅಭಿಪ್ರಾಯಗಳನ್ನನುಮೋದಿಸುವವರು ಅನೇಕವಾಗಿರುವರು. ವಿಲಿಯಂ ಜೇಂಸ್ ಎಂಬ ವಿದ್ವಾಂಸನು ಈ ವಿಷಯದಲ್ಲಿ ಹೇಳುವದೇನಂದರೆ "ಈಗ ನಮ್ಮ ವಿದ್ಯಾಭ್ಯಾಸದಲ್ಲಿ ಒಂದು ಅತ್ಯುತ್ತಮವಾದ ಬದಲಾವಣೆ ಯುಂಟಾಗಿರುವುದು, ನಮ್ಮ ಪಾಠಶಾಲೆಗಳಲ್ಲಿ ಮ್ಯಾನ್ಯೂಅಲ್ ಟ್ರೇನಿಂಗ್ ಇಟ್ಟುದೇ ಈ ಬದಲಾವಣೆಯಾಗಿರುವುದು, ಇದರಿಂದ ನಿಪುಣರಾದ ಬಡಗಿಗಳನ್ನು ತಯಾರ್ಮಾಡುವುದು ನಮ್ಮ ಉದ್ದೇಶವಲ್ಲ. ಮಕ್ಕಳ ಹಸ್ತಕೌಶಲವನ್ನು ಹೆಚ್ಚಿಸುವುದೇ ನಮ್ಮ ಉದ್ದೇಶವು"

ಸ್ಲಾಯ್ಡ್ ಪದ್ಧತಿಯು ಇತರ ವಿಧವಾದ ಮ್ಯಾನ್ಯೂಅಲ್ ಟ್ರೇನಿಂಗ್ ಪದ್ಧತಿಗಳಿಗಿಂತಲೂ ಉತ್ತಮವಾದ ಪದ್ಧತಿಯೆಂದು ನಾನು ತಿಳಿದಿರುವೆನು. ನಾನು ಹೀಗೆ ಅಭಿಪ್ರಾಯಪಡುವುದಕ್ಕೆ ಮುಖ್ಯವಾದ ಕಾರಣಗಳೇನೆಂದರೆ.

(1) ಸ್ಲಾಯ್ಡ್ ಪದ್ಧತಿಯಲ್ಲಿ ಸುಲಭವಾದ ಕಾರ್ಯಗಳಿಂದ ಕಷ್ಟವಾದ ಕಾರ್ಯಗಳಿಗೆ ಮಕ್ಕಳು ಹೋಗುವುದಕ್ಕೆ ಅವಕಾಶವಿರುವುದು. ಆದುದರಿಂದ ಉತ್ತಮವಾದ ಫಲವುಂಟಾಗುವುದು.

(2) ಒಂದು ಉಪಯೋಗಕರವಾದ ವಸ್ತುವನ್ನು ಮಾಡುವುದೇ ಈ ಪದ್ಧತಿಯಲ್ಲಿ ಬಾಲಕನ ಕೆಲಸವಾದುದರಿಂದ ಅಂತಹ ಕೆಲಸವನ್ನು ಅವನು ಉತ್ಸಾಹದಿಂದ ಮಾಡುವನು.

3) ಮಕ್ಕಳ ಮಾಂಸ ಕಂಡಗಳು ಉತ್ತಮವಾದ ರೀತಿಯಲ್ಲಿ ಬೆಳೆಯುವದಕ್ಕನುಕೂಲಿಸುವಂತೆ ಆಯುಧಗಳು ಎಚ್ಚರಿಕೆಯಿಂದ ಅರಿಸಲ್ಪಟ್ಟಿರುವುವು.

4) ಇತರ ಮ್ಯಾನ್ಯೂಅಲ ಟ್ರೇನಿಂಗ್ ಪದ್ಧತಿಗಳಲ್ಲಿರುವಂತೆ ಮಕ್ಕಳ ಕೈಯಿನ ಉಪಯೋಗವನ್ನು ಕಡಮೆಮಾಡುವ ಯಂತ್ರಗಳ ಉಪಯೋಗವು ಈ ಪದ್ಧತಿಯು

ಸ್ಲಾಯ್ಡ್ ಪದ್ಧತಿಯನ್ನು ಒಂದು ದೇಶದಲ್ಲಿ ಆಚರಣೆಗೆ ತರಬೇಕಾದರೆ ಆ ದೇಶದ ಉಪಾಧ್ಯಾಯರನ್ನು ಮೊದಲು ಸಿದ್ಧಪಡಿಸಬೇಕಷ್ಟೆ. ಇಂತಹ ಉಪಾಧ್ಯಾಯನು ಮಕ್ಕಳ ಸ್ವಭಾವವನ್ನರಿತವನಾಗಿರಬೇಕು. ಮಕ್ಕಳ ಶಿಕ್ಷಣದಲ್ಲಿ ಕುಶಲನಾಗಿರಬೇಕು. ಇವನಿಗೆ ಮರಗೆಲಸವು ಬಂದಿರುವುದು ಅವಶ್ಯಕ. 4 5 ತಿಂಗಳವರಿಗೆ ಇವನಿಗೆ ಮ್ಯಾನ್ಯೂಅಲ್ ಟ್ರೈನಿಂಗಿನಲ್ಲಿ ಅಭ್ಯಾಸವನ್ನು ಕೊಟ್ಟರೆ ಇವನು ಈ ಪಾಠವನ್ನು ಕಲಿಸಲು ಶಕ್ತನಾಗುವನು. ಮ್ಯಾನ್ಯೂಅಲ್ ಟ್ರೈನಿಂಗ್ ಉಪಾಧ್ಯಾಯರ ವಿಷಯದಲ್ಲಿ ನನ್ನ ಸ್ನೇಹಿತರಾದ ಡಾಕ್ಟರ್ ಹೆಂಡರ್‌ಸ್ಸ್ ಎಂಬುವರು ಹೇಳುವುದೇನಂದರೆ-" ತಮ್ಮ ಕೈಯನ್ನು ಉಪಯೋಗಿಸುವ ಶಕ್ತಿಯುಳ್ಳ ವಿದ್ಯಾವಂತರಾದ ಗಂಡಸರು ಮತ್ತು ಹೆಂಗೆಸರು ಸಿಕ್ಕುವುದು ಕಷ್ಟವು. ಮರಗೆಲಸವನ್ನು ಮಾತ್ರ ಕಲಿತಿರುವ ಬಡಗಿಯು ಸುಲಭವಾಗಿ ಸಿಕ್ಕುವನು. ಅವನು ತನಗೆ ಕೊಟ್ಟ ಕೆಲಸವನ್ನೇನೋ ಚನ್ನಾಗಿ ಮಾಡುವನು. ಆದರೆ ಅವನು ನಿರ್ಜೀವವಾದ ವಸ್ತುವಿನ ವಿಷಯದಲ್ಲಿ ಕೆಲಸಮಾಡಲು ಮಾತ್ರ ಚತುರನಾಗಿರುವನು. ನಮಗೆ ಬೇಕಾದವರು ಇಂತಹ ಜನರಲ್ಲ. ಸಜೀವಿಗಳಾದ ಮಕ್ಕಳ ವಿಷಯದಲ್ಲಿ ಕೆಲಸ ಮಾಡಿ ಅವರ ಹಸ್ತಕೌಶಲವನ್ನು ಹೆಚ್ಚಿಸುವ ಶಕ್ತಿಯುಳ್ಳ ಉಪಾಧ್ಯಾಯರೇ ನಮಗೆ ಬೇಕಾದವರು. "

ಉಪಾಧ್ಯಾಯರನ್ನು ಆರಿಸಿಕೊಂಡಮೇಲೆ ಕೆಲಸಮಾಡಲು ಅನುಕೂಲವಾದ ಅಂಶಗಳನ್ನು ಏರ್ಪಡಿಸಿಕೊಳ್ಳಬೇಕಷ್ಟೆ. ಈ ಕೆಲಸಕ್ಕೆ ಬಹಳ ಚೆನ್ನಾಗಿ ಬೆಳಕು ಬೀಳುವ ವಿಶೇಷ ಗಾಳಿ ಸಂಚಾರವಿರುವ ಕೊಠಡಿಗಳೇ ಬೇಕು. ಇತರ ಪಾಠಗಳಿಗಿಂತಲೂ ಈ ಪಾಠದಲ್ಲಿ ಮಕ್ಕಳು ತಮ್ಮ ಕಣ್ಣುಗಳನ್ನು ವಿಶೇಷವಾಗಿ ಉಪಯೋಗಿಸಬೇಕಾಗಿರುವುದು. ಮತ್ತು ಈ ಪಾಠಕಾಲದಲ್ಲಿ ಅವರ ಶ್ವಾಸಕೋಶಗಳು ವಿಶೇಷ ಚಟುವಟಿಕೆಯಿಂದ ಕೆಲಸ ಮಾಡುವುವು. ಅನುಕೂಲವಿಲ್ಲದ ಸ್ಥಿತಿಯಲ್ಲಿ ಮಕ್ಕಳಿಂದ ಕೆಲಸ ಮಾಡಿಸಿದರೆ ಅವರ ನಡತೆಯು ಸರಿಯಾಗಿರಲಾರದು. ಮೇಲಾಗಿ ಈ ಪಾಠದಿಂದ ವಿಶೇಷ ಪ್ರಯೋಜನವುಂಟಾಗಬೇಕಾದರೆ ಒಬ್ಬ ಉಪಾಧ್ಯಾಯನ ಬಳಿಯಲ್ಲಿ 20 ಜನ ಬಾಲಕರು ಮಾತ್ರವಿರಬೇಕು. ಈ ಪಾಠವನ್ನು ಹೇಳುವ ಕೊಠಡಿಯಲ್ಲಿ ಸಾಮಾನನ್ನು ಸಿದ್ಧಪಡಿಸಿರುವ ಕ್ರಮವು ಅಂಗಡಿಯೆಂಬ ಅಭಿಪ್ರಾಯವನ್ನುಂಟುಮಾಡುವಂತಿರಬಾರದು. ಪಾಠ ನಡೆಯುವ ಸ್ಥಳವೆಂಬ ಅಭಿಪ್ರಾಯವನ್ನುಂಟುಮಾಡಬೇಕು. ಮಕ್ಕಳು ಕೆಲಸ ಮಾಡುವ ಬೆಂಚುಗಳು ಅವರವ

ರಿಗೆ ತಕ್ಕ ಎತ್ತರವುಳ್ಳವುಗಳಾಗಿರಬೇಕು. ಇವುಗಳನ್ನು ಬೆಳಕಿಗೆ ಅನುಕೂಲವಾದ ರೀತಿಯಲ್ಲಿ ಒಂದು ಬೆಂಚಿಗೂ ಇನ್ನೊಂದು ಬೆಂಚಿಗೂ ಮಧ್ಯೆ ಸಾಕಾದಷ್ಟು ಸ್ಥಳವಿರುವಂತಿಡಬೇಕು. ಪ್ರತಿಯೊಂದು ಬೆಂಚಿನಮೇಲೂ ವಿಶೇಷ ಉಪಯೋಗಕ್ಕೆ ಬರುವ ಸಾಮಾನುಗಳೆಲ್ಲವೂ ಇರಬೇಕು. ಒಂದೇ ನೋಟದಿಂದ ಇವುಗಳೆಲ್ಲವೂ ಸರಿಯಾದ ರೀತಿಯಲ್ಲಿವೆ ಎಂದು ಹೇಳುವುದಕ್ಕನುಕೂಲಿಸುವಂತೆ ಎಲ್ಲಾ ಸಾಮಾನುಗಳನ್ನೂ ಕ್ರಮವಾಗಿಟ್ಟಿರಬೇಕು. ಪ್ರತಿಯೊಂದು ಬೆಂಚಿಗೂ ಒಂದು ಪೆಟ್ಟಿಗೆ ಇರಬೇಕೆಂದು ಕೆಲವರು ಹೇಳುವರು. ಆದರೆ ಪೆಟ್ಟಿಗೆಯೊಳಗೆ ಪದಾರ್ಥಗಳನ್ನು ಮಕ್ಕಳು ಸರಿಯಾಗಿಡುವುದಿಲ್ಲ. ತರಗತಿಯಲ್ಲಿರುವ ಎಲ್ಲ ಪದಾರ್ಥಗಳನ್ನೂ ಶುಭ್ರವಾಗಿಟ್ಟಿರಬೇಕು. ಪ್ರತಿದಿವಸವೂ ನೆಲವನ್ನು ಚೆನ್ನಾಗಿ ಗುಡಿಸಬೇಕು. ಅತ್ಯುತ್ತಮವಾದ ಬೆಂಚುಗಳನ್ನೂ ಆಯುಧಗಳನ್ನೂ ಉಪಯೋಗಿಸಬೇಕು. ಇಂತಹ ಸಾಮಾನುಗಳನ್ನು ಕೆಡಿಸಲು ಮಕ್ಕಳು ಇಷ ಪಡುವುದಿಲ್ಲ.

ಪಾಠಶಾಲೆಗಳಲ್ಲಿ ಆಚರಣೆಯಲ್ಲಿರುವ ನಾನಾವಿಧವಾದ ಮ್ಯಾನ್ಯೂಲ್ ಟ್ರೇನಿಂಗ್ ಕ್ರಮಗಳು ಒಂದೇಸಮನಾದ ಬೆಲೆಯುಳ್ಳವುಗಳಲ್ಲ. ಚೆನ್ನಾಗಿ ವಿಮರ್ಶೆ ಮಾಡದೆ ಮೇಲೆ ಮೇಲೆ ನೋಡತಕ್ಕವರು ತಯಾರಾದ ಪದಾರ್ಥಗಳ ಸೌಂದರ್ಯದಿಂದ ಮೋಸಹೋಗಬಹುದು. ಆದರೆ ಯಾವುದೊಂದು ಮ್ಯಾನ್ಯೂಲ್ ಟ್ರೈನಿಂಗ್ ಕ್ರಮದ ಬೆಲೆಯನ್ನು ನಿರ್ಣಯಿಸಲು ಪದಾರ್ಥದ ಸೌಂದರ್ಯವೊಂದೇ ಆಧಾರವಲ್ಲ. ಅದರಿಂದ ಮಕ್ಕಳಿಗಾಗುವ ಪ್ರಯೋಜನವನ್ನೂ ನೋಡಬೇಕಾಗುವುದು. ಅಮೇರಿಕ ಖಂಡದಲ್ಲೂ, ಯೂರೋಪ್ ಖಂಡದ ಕೆಲವು ಪಾಠಶಾಲೆಗಳಲ್ಲೂ ಮಕ್ಕಳಿಗೆ ಆಗಬೇಕಾದ ಪ್ರಯೋಜನವನ್ನು ಸರಿಯಾಗಿ ಯೋಚಿಸದೆ ಮನಸ್ಸಿಗೆ ಬಂದ ಕೈಗಾರಿಕೆಗಳನ್ನೆಲ್ಲಾ ಮ್ಯಾನ್ಯೂಲ್ ಟ್ರೇನಿಂಗ್ ತರಗತಿಯಲ್ಲಿ ಪ್ರಯತ್ನಪಡುವುದುಂಟು. ನಿದರ್ಶನವಾಗಿ ಮಣಿಯು ಕೆಲಸ, ಕಸೂತಿಯ ಕೆಲಸ, ಗೊಡೆ ಮಾಡುವುದು, ತೊಗಲಿನ ಕೆಲಸ ಈ ವಿಧವಾದ ಕೆಲಸಗಳನ್ನು ಎಷ್ಟು ಉತ್ತಮವಾದ ಕ್ರಮದಲ್ಲಿ ನಡೆಸಿದರೂ ಮಕ್ಕಳ ಸ್ವಾಭಾವಿಕವಾದ ಶಕ್ತಿಗಳ ಬೆಳವಳಿಕೆಗೆ ವಿಶೇಷ ಅವಕಾಶವಿಲ್ಲ. ಇವುಗಳಲ್ಲಿ ಕೆಲವು ಮಕ್ಕಳಿಗೆ ಬಾಧಕವೇ ಆದುವುಗಳು. ಮಕ್ಕಳು ಮಾಡಿದ ಕೆಲಸದ ಪ್ರದರ್ಶನದಿಂದ ಆ ಕೆಲಸದ ನಿಜವಾದ ಬೆಲೆಯು ತಿಳಿಯುವುದಿಲ್ಲ. ಮಕ್ಕಳು ಕೆಲಸ ಮಾಡುತಿರುವಾಗ ಪಾಠಶಾಲೆಗೆ ಹೋಗಿ ಅವರು ಕೆಲಸ ಮಾಡುವರೀತಿಯನ್ನು ನೋಡಬೇಕು. ಮತ್ತು ಮುಂದಿನ ಪ್ರಶ್ನೆಗಳಿಗೆ ಮಕ್ಕಳು ಮಾಡುವ ಕೆಲಸದ ವಿಮರ್ಶೆಯಿಂದ ಯಾವ ಉತ್ತರಗಳು ಬರುವುವೆಂಬುದನ್ನು ನೋಡಬೇಕು. ಈ ಪ್ರಶ್ನೆಗಳು ಯಾವನೆಂದರೆ,

(1) ಕೆಲಸದಲ್ಲಿ ನಿರತರಾಗಿರುವಾಗ ಮಕ್ಕಳು ಮಾಡುವ ಚಲನೆಗಳು ಅವರ ದೇಹದ ಬೆಳವಳಿಕೆಗೆ ಅನುಕೂಲವಾದುವೇ? ಬಾಧಕವಾದುವೇ?

(2) ಉಪಾಧ್ಯಾಯರ ಪ್ರೇರಣೆಯಿಲ್ಲದೆ ಮಕ್ಕಳೇ ಯೋಚಿಸುವರೆ?

(3) ಮಕ್ಕಳು ಕೆಲಸ ಮಾಡುವರೀತಿಯಿಂದ ಸ್ವವಿಷಯದಲ್ಲಿ ಗೌರವವು ಹುಟ್ಟುವಂತಿರುವುದೆ? ಅಥವಾ ಡಂಭವು ಹುಟ್ಟುವಂತಿರುವುದೆ?

(4) ಉತ್ತಮವಾದ ಕೆಲಸವು ಯಾವುದೆಂಬುದನ್ನು ಮಕ್ಕಳು ತಿಳಿದುಕೊಂಡು ತಮ್ಮ ಕೆಲಸದಲ್ಲಿರುವ ಗುಣದೋಷಗಳನ್ನು ಕಂಡುಹಿಡಿಯುವ ಶಕ್ತಿಯು ಅವರಿಗಿರುವುದೆ?

(5) ಉತ್ತಮವಾದ ಆಕೃತಿಯು ಜ್ಞಾನವು ಮಕ್ಕಳಿಗಿರುವುದೆ? ಮತ್ತು ಅನಾವಶ್ಯಕವಾದ ಅಲಂಕಾರವನ್ನು ಬಿಟ್ಟಿರುವರೇ!

(6) ಇತರರಿಗೋಸ್ಕರ ಅದರದಿಂದ ಕೆಲಸ ಮಾಡುವ ಗುಣವು ಮಕ್ಕಳಲ್ಲಿರುವುದೇ?

(7) ಮಾಡಿದ ವಸ್ತುವು ಪೂರ್ಣವಾಗಿ ಮಗುವಿನ ಪ್ರಯತ್ನದಿಂದಲೇ ಆದದ್ದೆ? ಕೆಲಸವು ಚನ್ನಾಗಿರುವುದೆ? ಉದ್ದಿಷ್ಟವಾದ ವಸ್ತುವನ್ನು ಮಾಡುವುದು ಬಹಳ ಕಷ್ಟವಾಗಿತ್ತೆ?

ಈ ಸಂಸ್ಥಾನದಲ್ಲಿ ಸ್ಲಾಯ್ಡ ಪದ್ಧತಿಯ ಪ್ರಚಾರಕ್ಕಾಗಿ ಈಗ ನಾವು ಮಾಡುತ್ತಿರುವ ಕೆಲಸವನ್ನೂ, ಮುಂದೆ ಮಾಡಬೇಕೆಂದು ಉದ್ದೇಶಿಸಿರುವುದನ್ನೂ, ನಿಮಗೆ ಸ್ವಲ್ಪ ತಿಳಿಸುವೆನು. ಕ್ರಮವಾಗಿ ಶಿಕ್ಷಿತರಾದ ಉಪಾಧ್ಯಾಯರನ್ನು ಸಿದ್ಧಪಡಿಸಿಕೊಳ್ಳುವುದೇ ಈ ಕೆಲಸಕ್ಕೆ ಆದಿಯಷ್ಟೆ. ನಿಮ್ಮ ಸರ್ಕಾರದವರು ಈ ಸಂಸ್ಥಾನದ ನಾನಾಭಾಗಗಳಿಂದ ಕರೆಸಿರುವ 20 ಮಂದಿ ಉಪಾಧ್ಯಾಯರು ನನ್ನಲ್ಲಿ ಈ ಕೆಲಸವನ್ನು ಅಭ್ಯಾಸ ಮಾಡುತಿರುವರು. ಇವರಿಗೆ ದಿನಕ್ಕೆ 6 ಘಂಟೆಗಳಮೇರೆ 16 ವಾರಗಳ ಕೆಲಸ ಕೊಡಬೇಕೆಂದುದ್ದೇಶಿಸಲ್ಪಟ್ಟಿರುವುದು. ಅಮೇರಿಕದಲ್ಲಿರುವ ಕೆಲವು ಸ್ಕೂಲುಗಳಲ್ಲಿ ಉಪಾಧ್ಯಾಯರಿಗೆ ಟ್ರೇನಿಂಗ್ ನಡೆಯುವ ಕಾಲದೊಡನೆ ಹೋಲಿಸಿದರೆ ಈ ಕಾಲವು ಕಡಮೆಯಾಗಿ ಕಾಣಬಹುದು. ಆದರೆ ಇಂಗ್ಲೆಂಡ್, ಜರ್ಮನಿ, ಸ್ವೀಡ್ ರಾಜ್ಯಗಳಲ್ಲಿ ಉಪಾಧ್ಯಾಯರ ಟ್ರೇನಿಂಗಿಗಾಗಿ ಕೊಡುವ ಕಾಲಕ್ಕಿಂತಲೂ ಮೂರು ನಾಲ್ಕರಷ್ಟು ಹೆಚ್ಚಾಗಿರುವುದು. ಸ್ಲಾಯ್ಡ ಪದ್ಧತಿಯ ವಿಷಯದಲ್ಲಿ ಉಪನ್ಯಾಸಗಳೂ, ಕೆಲಸಮಾಡುವ ಮತ್ತು ಪಾಠ ಹೇಳುವ ಕ್ರಮದ ವಿಷ

ಯದಲ್ಲಿ ಚರ್ಚೆಯೂ, ಮ್ಯಾನ್ಯುಯಲ್ ಟ್ರೇನಿಂಗಿನ ವಿಷಯದಲ್ಲಿ ಪುಸ್ತಕಗಳನ್ನೋದಿ ಟಿಪ್ಪಣಿ ಬರೆಯುವುದೂ, ಮಾಡಬೇಕಾದ ವಸ್ತುಗಳ ಚಿತ್ರಗಳನ್ನು ಪ್ರಮಾಣಕ್ಕೆ ತಕ್ಕಂತೆ ಬರೆಯುವುದೂ, ಬೆಂಚಿನ ಹತ್ತರ ಮರಗೆಲಸವನ್ನು ಮಾಡುವುದೂ, ಮ್ಯಾನ್ಯುಯಲ್ ಟ್ರೇನಿಂಗ್ ಕೊಠಡಿಗಳಲ್ಲಿರಬೇಕಾದ ಏರ್ಪಾಡಿನ ವಿಷಯವನ್ನು ಚರ್ಚಿಸುವುದೂ, ಮರದಲ್ಲಿ ಕಡೆತದ ಕೆಲಸವನ್ನೂ, ಕೆತ್ತನೆಯ ಕೆಲಸವನ್ನೂ ಮಾಡುವುದೂ, ಇವೇ ಇಲ್ಲಿರುವ ಉಪಾಧ್ಯಾಯರು ಮಾಡುವ ಕೆಲಸಗಳಾಗಿರುವವು. ಇವರಿಗೆ ಸ್ಲಾಯ್ಡ ಪದ್ಧತಿಯಲ್ಲಿ ಸ್ವಲ್ಪ ಅನುಭವವುಂಟಾದಮೇಲೆ ಮಕ್ಕಳಿಗೆ ಪಾಠಹೇಳುವುದಕ್ಕೂ ಅವಕಾಶವು ಕೊಡಲ್ಪಡುವುದು. ಇದಕ್ಕಾಗಿ ಬೆಂಗಳೂರಲ್ಲಿರುವ ಕೆಲವು ಸ್ಕೂಲುಗಳಿಂದ ಬಾಲಕರು ಕರೆಸಲ್ಪಡುವರು. ಈ ಹೊಸಪದ್ಧತಿಯನ್ನು ಆಚರಣೆಗೆ ತರುವುದರಿಂದ ಸರಿಯಾದ ಫಲವುಂಟಾಗಬೇಕೆಂದು ನೀವು ಕೋರಬಹುದು. ಇಂತಹ ಫಲವುಂಟಾಗಬೇಕಾದರೆ ವಿದ್ಯಾಭ್ಯಾಸದ ಅಧಿಕಾರಿಗಳು ಮುಂದಿನ ಅಂಶಗಳಿಗೆ ಗಮನ ಕೊಡಬೇಕಾಗುವುದು.

(1) ಕ್ರಮವಾದ ಪಾಠಶಾಲೆಯು ಕೆಲಸದಲ್ಲಿ ಅನುಭವವುಳ್ಳ ಸ್ಲಾಯ್ಡ ಪದ್ಧತಿಯನ್ನು ಕಲಿತಿರುವ ಉಪಾಧ್ಯಾಯರನ್ನು ಈ ಕೆಲಸಕ್ಕೆ ನಿಯಮಿಸಿ ಅವರ ಸಂಬಳದ ಜೊತೆಗೆ ಈ ಕೆಲಸಕ್ಕಾಗಿ ಸ್ವಲ್ಪ ಹೆಚ್ಚುವೇತನವನ್ನು ಕೊಡಬೇಕಾಗುವುದು.

(2) ಪಾಠಶಾಲೆಯ ಕಟ್ಟಡದಲ್ಲಿ ಅಥವಾ ಅದರ ಸಮೀಪದಲ್ಲಿ ಸರಿಯಾದ ಗಾಳಿ ಬೆಳಕು ಉಳ್ಳ ಕ್ರಮವಾದ ಉಪಕರಣಗಳುಳ್ಳ 20 ಜನರು ಕೆಲಸಮಾಡುವುದಕ್ಕೆ ಅನುಕೂಲವಾದ ಕೊಠಡಿಗಳನ್ನು ಸಿದ್ಧಪಡಿಸಬೇಕು.

(3) ಎರಡು, ಮೂರು, ನಾಲ್ಕನೇ ಫಾರಂಗಳ ವಿದ್ಯಾರ್ಥಿಗಳನ್ನು ಆರಿಸಿಕೊಂಡು, ಇವರಿಗೆ ವಾರಕ್ಕೆ 2 ಘಂಟೆಗೆ ಕಡಮೆ ಇಲ್ಲದಂತೆ ಕೆಲಸವನ್ನು ಕೊಡಬೇಕು.

(4) ಈ ತರಗತಿಗಳಲ್ಲಿ ಕೆಲಸವು ತೃಪ್ತಿಕರವಾಗಿ ನಡೆದಮೇಲೆ ಇವುಗಳ ಮೇಲಿನ ತರಗತಿಗಳಲ್ಲೂ, ಕೆಳಗಿನ ತರಗತಿಗಳಲ್ಲೂ ಈ ಕೆಲಸಗಳನ್ನಿಡಬೇಕು.

(5) ಕೆಳಗಿನ ತರಗತಿಗಳಲ್ಲಿ ಮಣ್ಣಿನ ಕೆಲಸ, ರಟ್ಟಿನ ಕೆಲಸ, ತೆಳುವಾದ ಮರದ ಕೆಲಸ ಇವುಗಳನ್ನಿಟ್ಟು ಎಲ್ಲಾ ಪಾಠಗಳನ್ನು ಹೇಳುವ ಉಪಾಧ್ಯಾಯರೇ ಈ ಪಾಠಗಳನ್ನೂ ಹೇಳಲು ಶಕ್ತರಾದರೆ ಅವರಿಂದಲೇ ಹೇಳಿಸಬೇಕು.

(6) ಹೈಸ್ಕೂಲು ತರಗತಿಗಳಲ್ಲಿ ವಿಶೇಷ ಕಷ್ಟವಾದ ಮರಗೆಲಸವನ್ನೂ ಕಡೆತದ ಕೆಲಸವನ್ನೂ, ಕೆತ್ತನೆಯ ಕೆಲಸವನ್ನೂ ಹೇಳಿಕೊಡಬೇಕು.

(7) ಬಾಲಕರು ಮಾಡುವ ವಸ್ತುಗಳು ಉಪಯೋಗವಾದುವುಗಳೆಂದು ಅವರಿಗೆ ತೋರುವಂತೆ ಇರಬೇಕು. ಮತ್ತು ಇಂತಹ ವಸ್ತುಗಳನ್ನು ಅವರಿಗೇ ಕೊಡಬೇಕು.

(8) ಕೆಲಸ ಮಾಡುವ ಬೆಂಚುಗಳನ್ನೂ ಆಯುಧಗಳನ್ನೂ ಸಾಧ್ಯವಾದರೆ ಈ ದೇಶದಿಂದಲೇ ಒದಗಿಸಿಕೊಳ್ಳಬೇಕು.

(9) ಪ್ರತಿಯೊಂದು ನಾರ್ಮಲ್ ಸ್ಕೂಲಿನಲ್ಲೂ ಸ್ಲಾಯ್ಡ್ ಪದ್ಧತಿಯನ್ನು ಹೇಳಿಕೊಡುವ ಒಂದು ತರಗತಿಯನ್ನಿಟ್ಟು ಅಲ್ಲಿನ ವಿದ್ಯಾರ್ಥಿಗಳಿಗೆ ಈ ಪದ್ಧತಿಯನ್ನು ಕಲಿಸಬೇಕು.

(10) ಆಮೇಲೆ ಈ ವಿದ್ಯಾರ್ಥಿಗಳನ್ನು ಸ್ಲಾಯ್ಡ್ ಸ್ಕೂಲುಗಳಲ್ಲಿ ಪ್ಯೂಪಲ್ ಟೀಚೆರುಗಳಾಗಿ ಒಂದು ವರುಷವಿಟ್ಟುರಬೇಕು.

(11) ರಜಾಕಾಲಗಳಲ್ಲಿ ನಾರ್ಮಲ್ ಸ್ಕೂಲುಗಳಲ್ಲಿ ಡಿಪಾರ್ಟಮೆಂಟಿನ ಉಪಾಧ್ಯಾಯರ ಅನುಕೂಲಕ್ಕಾಗಿ ಸ್ಲಾಯ್ಡ್ ತರಗತಿಗಳನ್ನು ನಡೆಸಬೇಕು.

(12) ಈ ಸ್ಲಾಯ್ಡ್ ಪದ್ಧತಿಗೆ ಅನುಸಾರವಾದ ಅಂಗಸಾಧನೆಗಳನ್ನೂ ಸ್ಕೂಲುಗಳಲ್ಲಿ ಮಾಡಿಸಬೇಕು.

(13) ಕುಲುಮೇ ಕೆಲಸ, ಯಂತ್ರದ ಕೆಲಸ ಮುಂತಾದ ಕೆಲಸಗಳನ್ನು ಇಂಡಸ್ಟ್ರಿಯಲ್ ಸ್ಕೂಲುಗಳಲ್ಲಿ ಮಾತ್ರ ಹೇಳಿಕೊಡಬೇಕು.

ಒಂದು ಕೈಗಾರಿಕೆಯನ್ನು ಕಲಿತು ಅದರಿಂದ ಜೀವನವನ್ನು ಸಂಪಾದಿಸಿಕೊಳ್ಳಕ್ಕೇಕೆಂಬ ಕೆಲವರಿಗೆ ಮಾತ್ರ ಇಂಡಸ್ಟ್ರಿಯಲ್ ಸ್ಕೂಲುಗಳಲ್ಲಿ ಈ ಕೆಲಸಗಳನ್ನು ಹೇಳಿಕೊಡಬೇಕಾಗುವುದು. ಆದರೆ ಇಂತಹ ಕೆಲಸಗಳು ಸಾಧಾರಣವಾದ ವಿದ್ಯಾಭ್ಯಾಸದಲ್ಲಿ ಸೇರಲು ಅವಕಾಶವಿಲ್ಲ.

ಮೇಲೆ ಹೇಳಿರುವ ನಿಯಮಗಳಿಗನುಸಾರವಾಗಿ ಅಂದರೆ ಒಳ್ಳೇ ಉಪಾಧ್ಯಾಯನು, ಕೆಲವು ಮಂದಿ ಮಾತ್ರ ವಿದ್ಯಾರ್ಥಿಗಳೂ, ಒಳ್ಳೇ ಗಾಳಿ ಬೀಸುವ ಬೇಕಾದಷ್ಟು ಬೆಳಕು ಬೀಳುವ ಸರಿಯಾದ ಉಪಕರಣಗಳಿರುವ ಕೊಠಡಿ ಮುಂತಾದ ಅನುಕೂಲಗಳಿಗನುಸಾರವಾಗಿ ಸ್ಲಾಯ್ಡ್ ಕೆಲಸವನ್ನು ನಡೆಸುವುದರಿಂದ ಆಗುವ ಪ್ರಯೋಜನಗಳನ್ನು ಸ್ವಲ್ಪಮಟ್ಟಿಗೆ ತಿಳಿಸುವೆನು. ಈ ಕೆಲಸದಿಂದ ಮಗುವಿನ ದೈಹಿಕ ಮಾನಸಿಕ ಶಕ್ತಿಗಳು ವೃದ್ಧಿಹೊಂದುವುವು. ಅವರ ನಡತೆಯು ತಿದ್ದಲ್ಪಡುವುದು.

ಸ್ಲಾಯ್ಡ್ ಕೆಲಸವು ಆರೋಗ್ಯಕ್ಕೆ ಅನುಕೂಲವಲ್ಲದ ಸ್ಥಿತಿ, ಮತ್ತು ಚಲನೆಯನ್ನು ತಪ್ಪಿಸುವುದು. ಅದರಲ್ಲಿರುವ ನಾನಾವಿಧವಾದ ಚಲನೆಯಿಂದಲೂ, ಆ ಕೆಲಸಕ್ಕೆ ಬೇಕಾಗುವ ನಾನಾವಿಧವಾದ ಆಯುಧಗಳನ್ನು ಉಪಯೋಗಿಸುವುದರಿಂದಲೂ ದೇಹದ ಎಲ್ಲಾ ಭಾಗಗಳಲ್ಲೂ ಇರುವ ಮಾಂಸಖಂಡಗಳಿಗೆ ಕೆಲಸವು ದೊರೆಯುವುದು. ಈ ಗುಣವಿಲ್ಲದ ಕೈಕೆಲಸವು ಎಷ್ಟು ಉಪಯೋಗವಾದದ್ದಾದರೂ ಮಕ್ಕಳಿಗೆ ತಕ್ಕುದಲ್ಲ.

ಮಕ್ಕಳು ವೃದ್ಧಿಹೊಂದುವಕಾಲದಲ್ಲಿ ಅವರ ಮಾಂಸಖಂಡಗಳಿಗೆ ವಿಶೇಷ ಕೆಲಸವನ್ನು ಕೊಡುವುದರಿಂದ ಅವರ ಮಿದುಳಿನ ಶಕ್ತಿಯನ್ನು ಹೆಚ್ಚಿಸುವುದಕ್ಕೂ ಅನುಕೂಲವಾಗುವುದು. ಸ್ವೀಡ್ ದೇಶದಲ್ಲಿ ನಾನಾವಿಧವಾದ ಕೈಗಾರಿಕೆಗಳನ್ನು ಅವು ಮಕ್ಕಳ ವಿದ್ಯಾಭ್ಯಾಸಕ್ಕೆ ಎಷ್ಟರಮಟ್ಟಿಗೆ ಪ್ರಯೋಜನವಾದುವು ಎಂದು ಪರೀಕ್ಷಿಸಿನೋಡುವಲ್ಲಿ ಸ್ಲಾಯ್ಡ್ ಕೆಲಸದಷ್ಟು ಉತ್ತಮವಾದ ಕೆಲಸವು ಮತ್ತಾವುದೂ ಕಾಣಲಿಲ್ಲ.

ಸ್ಲಾಯ್ಡ್ ಪದ್ಧತಿಯಿಂದ ಮಕ್ಕಳು ಸ್ವಾವಲಂಬನವುಳ್ಳವರಾಗಿಯೂ ಸರಿಯಾಗಿ ಯೋಚಿಸುವ ಶಕ್ತಿಯುಳ್ಳವರಾಗಿಯೂ ಆಗುವರು. ಈ ಪದ್ಧತಿಯಲ್ಲಿ ಪ್ರತಿಯೊಂದು ಕೆಲಸಕ್ಕೂ ಒಂದು ಕಾರಣವನ್ನು ಯೋಚಿಸಬೇಕಾಗುವುದು. ಅದುದರಿಂದ ಸ್ಲಾಯ್ಡ್ ಕೆಲಸವು ಮಗುವಿನ ಬುದ್ಧಿಶಕ್ತಿಯನ್ನು ಹೆಚ್ಚಿಸುವುದರಲ್ಲಿ ಸಂಶಯವಿಲ್ಲ. ಮೇಲಾಗಿ ಸ್ಲಾಯ್ಡ್ ಪದ್ಧತಿಯು ಒಂದು ಕೆಲಸವನ್ನು ಬಿಡದೆ ಸ್ವಪ್ರಯತ್ನದಿಂದಲೇ ಮಾಡಬೇಕೆಂಬ ಮನೋದಾರ್ಢ್ಯವನ್ನುಂಟುಮಾಡುವುದು. ಮಧ್ಯದಲ್ಲಿ ಎಷ್ಟು ತೊಂದರೆಗಳು ಸಂಭವಿಸಿದರೂ ಅವುಗಳನ್ನೆಲ್ಲಾ ಪರಿಹರಿಸಿಕೊಂಡು ಉದ್ದೇಶಿಸಿದ ಕೆಲಸವನ್ನು ನೆರವೇರಿಸಬೇಕೆಂಬ ಕುತೂಹಲವುಂಟಾಗುವುದು. ಅದುದರಿಂದ ಈ ಪದ್ಧತಿಯು ಮಕ್ಕಳ ನಡತೆಯನ್ನು ತಿದ್ದಲು ಉತ್ತಮವಾದ ಮಾರ್ಗವೆಂದು ಯೋಚಿಸಬಹುದಲ್ಲವೇ ?

ಮಕ್ಕಳ ವಿದ್ಯಾಭ್ಯಾಸದಲ್ಲಿ ಸ್ಲಾಯ್ಡ್ ಪದ್ಧತಿಯು ಮುಖ್ಯವಾದ ಸ್ಥಾನವನ್ನು ವಹಿಸಬೇಕೆಂದು ಹೇಳಲು ಸಾಕಾದಷ್ಟು ಕಾರಣಗಳನ್ನು ತೋರಿಸಿರುವೆನೆಂದು ನಾನು ಊಹಿಸುವೆನು. ನಾನು ಹೇಳಿರುವ ಅಂಶಗಳು ನಿಮ್ಮ ಮನಸ್ಸಿನಲ್ಲಿ ಬೇರೂರಿ ಚೆನ್ನಾಗಿ ಬೆಳೆದು ಹಿಂದುಸ್ಥಾನದ ಭವಿಷ್ಯಜ್ಜನರಿಗೆ ಪ್ರಯೋಜನಕರವಾಗಬೇಕೆಂದುನಾನು ಕೋರುವೆನು. ”

ವಿದ್ಯಾಭ್ಯಾಸ.

ಪ್ರತಿಮೆಗಳನ್ನು ಮಾಡುವವರಿಗೆ ಯಂತ್ರ ಶಾಸ್ತ್ರಜ್ಞಾನವೂ ಇರಬೇಕು. ಅದನ್ನರಿಯದವರು ಮಾಡಿದ ಕೆಲಸವು ಕೆಟ್ಟುಹೋಗುವುದು. ಆ ಶಾಸ್ತ್ರಜ್ಞಾನವಿಲ್ಲದವರು ಪ್ರತಿಮೆಯನ್ನು ಸ್ಥಿರವಾಗಿ ನಿಲ್ಲಿಸುವುದಕ್ಕೆ ಬದಲಾಗಿ ಸೊಟ್ಟವಾಗಿ ನಿಲ್ಲಿಸುವರು. ಹೀಗೆ ಬಲಾಬಲಜ್ಞಾನವಿಲ್ಲದವರು ಮಾಡಿದ ಪ್ರತಿಮೆಗಳು ವಕ್ರವಾಗಿ ಕಾಣಿಸುವುವು. ಚಿತ್ರಗಳನ್ನು ಬರೆಯುವವರಿಗೂ ಶಾಸ್ತ್ರಜ್ಞಾನವು ಬೇಕು. ಅದಿಲ್ಲದೆ ಮಾಡಿದವರ ಕಾರ್ಯಗಳು ಅಸಮಂಜಸವಾಗುವುವು. ಚೀನಾದೇಶೀಯರ ಚಿತ್ರಗಳೇ ಇದಕ್ಕೆ ದೃಷ್ಟಾಂತರವಾಗಿರುವುವು. ಅವು ನೋಟಕ್ಕೆ ಬಹು ಕುರೂಪವಾಗಿ ಕಾಣಿಸುವುವು.

ಚಿಕ್ಕಮಕ್ಕಳು ಬರೆದ ಚಿತ್ರಗಳೂ ಕುರೂಪವಾಗಿಯೂ ವಕ್ರವಾಗಿಯೂ ಇರುತ್ತವೆ. ಇದಕ್ಕೆ ಕಾರಣವೇನು? ವಸ್ತುಗಳು ಬೇರೆ ಬೇರೆ ಸ್ಥಿತಿಗಳಲ್ಲಿ ತೋರತಕ್ಕ ರೂಪಗಳ ಜ್ಞಾನವು ಅವರಿಗೆ ಇಲ್ಲದೆ ಇರುವುದರಿಂದಲೇ ಅವರ ಚಿತ್ರಗಳು ಅವಿವೇಕಕಾಗಿ ಕಾಣಿಸುವುವು. ವಸ್ತುಗಳ ಸ್ವಭಾವಾಕೃತಿಗಳನ್ನು ಅನುಸರಿಸಿ ಬರೆದ ಚಿತ್ರಗಳೇ ಸುಂದರವಾಗಿ ಕಾಣಿಸುವುವು. ಈ ಸ್ವಭಾವಾಕೃತಿಗಳ ತಿಳವಳಿಕೆಯೇ ಚಿತ್ರಶಾಸ್ತ್ರಜ್ಞಾನವಾಗಿರುವುದು. ಇಂಥಾ ಶಾಸ್ತ್ರಜ್ಞಾನವಿಲ್ಲದವರು ಚಿತ್ರಗಳನ್ನು ಎಷ್ಟು ಕಷ್ಟಪಟ್ಟು ಬರೆದಾಗ್ಗೂ ಅವು ಸಮಂಜಸವಾಗುವುದಿಲ್ಲ. ಮತ್ತು ಚಿತ್ರಗಳು ಸರಿಯಾಗಿವೆಯೋ ಇಲ್ಲವೋ ಎಂದು ಪರೀಕ್ಷಿಸುವವರಿಗೂ ಚಿತ್ರಶಾಸ್ತ್ರಜ್ಞಾನವಿರಬೇಕು. ಅದಿಲ್ಲದವರು ಚಿತ್ರಗಳಲ್ಲಿರುವ ಗುಣದೋಷಗಳನ್ನು ಕಂಡುಹಿಡಿಯಲು ಸಮರ್ಥರಾಗುವುದಿಲ್ಲ.

ಸಂಗೀತವನ್ನು ಸಮಂಜಸವಾಗಿ ಹೇಳುವವರಿಗೂ ಶಾಸ್ತ್ರಜ್ಞಾನವಿರಬೇಕು. ಸಂಗೀತಗಾರರ ಯೋಗ್ಯತೆಯನ್ನು ಗೊತ್ತುಮಾಡುವವರಿಗೂ ಶಾಸ್ತ್ರಜ್ಞಾನವು ಬೇಕು. ಸಂಗೀತವು ಮನುಷ್ಯರ ಮನಸ್ಸಿನಲ್ಲುಂಟಾಗುವ ರಾಗದ್ವೇಷಾದಿ ನಾನಾರಸಗಳನ್ನು ಸೂಚಿಸುವ ಸ್ವಾಭಾವಿಕಭಾಷೆಯಾಗಿರುವುದು. ಆದುದರಿಂದ ಈ ಸ್ವಾಭಾವಿಕ ಭಾಷಾ ನಿಯಮಗಳನ್ನನುಸರಿಸಿದ ಸಂಗೀತವೇ ಸಮಂಜಸವಾಗಿರುವುದು. ಆ ನಿಯಮಗಳನ್ನು ಸರಿಸದ ಹಾಡುಗಳು ಎಂದಿಗೂ ಚೆನ್ನಾಗಿರಲಾರವು. ಬೇರೆ ಬೇರೆ ರಸಗಳನ್ನೂ ಅವುಗಳ ಆಧಿಕ್ಯವನ್ನೂ ದುರ್ಬಲವನ್ನೂ ತೋರಿಸುವಾಗ ಹುಟ್ಟುವ ಸ್ವರಭೇದಗಳಿಂದಲೇ ಸಂಗೀತವು ಉಂಟಾಗಿರುವುದು.

ಈ ರಸಗಳಾದರೋ ಕೆಲವು ದೇಹ ಮನೋನಿಯಮಗಳನ್ನನುಸರಿಸಿ ಮನುಷ್ಯರಲ್ಲಿ ತೋರಿಕೊಳ್ಳುವುವು. ಆದುದರಿಂದ ರಸಗಳನ್ನು ಸರಿಯಾಗಿ ಸೂಚಿಸುವ

ಸ್ವಭಾವಿಕವಾದ ಭಾಷೆಗನುಸಾರವಾಗಿ ಸ್ವರಗಳನ್ನು ಜೋಡಿಸಿ ಮಾಡಿದ ಸಂಗೀತಗಳು ಶಾಸ್ತ್ರವ್ಯವಾಗಿಯೂ ಹೃದಯಂಗಮವಾಗಿಯೂ ಇರುವುವು. ಹಾಗಿಲ್ಲದೆ ಯದ್ವಾತದ್ವಾ ಸ್ವರಗಳನ್ನು ಜೋಡಿಸಿ ಮಾಡಿದ ಹಾಡುಗಳು ಕರ್ಣಕಠೋರವಾಗಿರುವುವು. ಪ್ರಸಿದ್ಧರಾದ ವಿದ್ವಾಂಸರು ಮಾಡಿದ ಹಾಡುಗಳು ಉತ್ತಮ ಸಂಗೀತಕ್ಕೂ ಹಳ್ಳಿಯ ಮೂಢರು ಮಾಡಿದ ಲಾವಣಿಗಳು ನೀಚ ಸಂಗೀತಕ್ಕೂ ಉದಾಹರಣೆಗಳಾಗಿರುವುವು. ಹೀಗೆಯೇ ದಿವ್ಯಕಾವ್ಯಗಳನ್ನು ರಚಿಸಬೇಕಾದರೂ ಶಾಸ್ತ್ರಜ್ಞಾನವು ಬೇಕು. ರಚಿಸಲ್ಪಟ್ಟ ಕಾವ್ಯಗಳ ಯೋಗ್ಯತೆಯನ್ನು ತಿಳಿಯಬೇಕಾದರೂ ಶಾಸ್ತ್ರಜ್ಞಾನವು ಚೆನ್ನಾಗಿರಬೇಕು,

ಹೀಗೆ ಶಾಸ್ತ್ರವು ತಕ್ಷಣ ಚಿತ್ರಲೇಖನ ಸಂಗೀತಕಾವ್ಯಗಳಿಗೆ ಆಧಾರಭೂತವಾಗಿರುವುದಲ್ಲದೆ, ಶಾಸ್ತ್ರವೇ ಕಾವ್ಯಪ್ರಾಯವಾಗಿರುವುದು. ಶಾಸ್ತ್ರಕ್ಕೂ ಕಾವ್ಯಕ್ಕೂ ವಿರೋಧವಿರುವುರೆಂದು ಜನರು ಸಾಮಾನ್ಯವಾಗಿ ಇಟ್ಟುಕೊಂಡಿರುವ ಅಭಿಪ್ರಾಯವು ತಪ್ಪಾಗಿರುವುದು. ಚೆನ್ನಾಗಿ ಪರ್ಯಾಲೋಚಿಸಿ ನೋಡಿದರೆ ಅವುಗಳಿಗೆ ವಿರೋಧವಿಲ್ಲವೆಂಬುದು ಗೊತ್ತಾಗುವುದು. ಶಾಸ್ತ್ರವು ವಸ್ತುವಿಜ್ಞಾನವನ್ನೂ ಕಾವ್ಯವು ರಸೋತ್ತೇಜನವನ್ನೂ ಉಂಟುಮಾಡುವುದು ನಿತ್ಯ. ವಿಶೇಷವಾಗಿ ವಸ್ತುವಿಚಾರ ಮಾಡುವವರಲ್ಲಿ ರಸೋತ್ತೇಜನವು ಕಡಿಮೆಯಾಗಿರುವುದು. ಹಾಗೆಯೇ ವಿಶೇಷವಾಗಿ ರಸೋತ್ತೇಜನವುಳ್ಳವರಲ್ಲಿ ವಸ್ತುವಿಚಾರವು ಕಡಿಮೆಯಾಗಿರುವುದು. ಹೀಗಾದಾಗ್ಯೂ ಶಾಸ್ತ್ರ ಕಾವ್ಯಗಳಿಗೆ ಮೈತ್ರ್ಯವು ಇದ್ದೇ ಇರುವುದು. ಅವುಗಳು ಪರಸ್ಪರವಾಗಿ ಸಹಾಯಕಾರಿಗಳಾಗಿಯೇ ಇರುವುವು. ಶಾಸ್ತ್ರವಿಷಯುಗಳು ಕಾವ್ಯಪ್ರಾಯವಾಗಿಯೇ ಇರುವುವು. ಮತ್ತು ಶಾಸ್ತ್ರವು ಕಾವ್ಯರಚನೆಗೆ ಸರಿಯಾದ ದಾರಿಯನ್ನು ತೋರಿಸಿ ಕೊಡುವುದು.

ಆದುದರಿಂದ ಶಾಸ್ತ್ರವನ್ನರಿಯದವರಿಗೆ ಈ ದಾರಿಯೇ ಗೊತ್ತಾಗುವುದಿಲ್ಲ. ಶಾಸ್ತ್ರಾನ್ವೇಷಣದಲ್ಲಿ ಪ್ರವೃತ್ತಿಸಿದವರು ಕಾವ್ಯದಲ್ಲಿ ಬೇರೆಯವರಿಗಿಂತಲೂ ಅಧಿಕವಾಗಿ ಅಭಿರುಚಿಯುಳ್ಳವರಾಗಿರುವರು. ಭೂರಚನಾಶಾಸ್ತ್ರ ಮುಂತಾದುವನ್ನು ಬರೆದ ಹಲವು ಪ್ರಸಿದ್ಧರಾದ ಗ್ರಂಥಕಾರರ ಜೀವನ ಚರಿತ್ರೆಯನ್ನು ಪರಾಂಬರಿಸಿದರೆ ಅವರಿಗೆ ಕಾವ್ಯದಲ್ಲಿ ಎಷ್ಟರಮಟ್ಟಿಗೆ ವಿಜ್ಞಾನವೂ ಅಭಿರುಚಿಯೂ ಇದ್ದುವೆಂಬುದು ಗೊತ್ತಾಗುವುದು. ಶಾಸ್ತ್ರಾನ್ವೇಷಕರು ಆತ್ಮಪ್ರಕೃತಿ ಮನಸ್ಸುಗಳನ್ನು ಕುರಿತು ವಿಶೇಷವಾಗಿ ವಿಚಾರಮಾಡಿ ಆ ಸಂಬಂಧವಾದ ತತ್ವತಳನ್ನು ತಿಳಿದಿರುವರಾದುದರಿಂದ ಅವರು ಆ ವಿಷಯುಗಳಿಗೆ ತುಂಬಾ ಗೌರವವನ್ನು ತೋರಿಸದೆ ಇರರು. ಆತ್ಮ ಪ್ರಕೃತಿ ಮನೋವಿಷಯುಗಳೇ ಕಾವ್ಯಗಳಲ್ಲಿಯೂ ಅಡಕವಾಗಿರುವುದರಿಂದ ಅಂಥಾ ಶಾಸ್ತ್ರಾನ್ವೇಷಕರು ಕಾವ್ಯಗಳನ್ನು ಪ್ರೀತಿಸುವುದಿಲ್ಲವೆಂದು ಭಾವಿಸುವುದು ಹುಚ್ಚುತನವೆಂದು ಹೇಳಬೇಕು.

ಪ್ರಕೃತಿ ಶಾಸ್ತ್ರಜ್ಞನು ಒಂದು ತೊಟ್ಟು ನೀರಿನಲ್ಲಿ ಇರುವ ಮೂಲವಸ್ತುಗಳು ಯಾವುವು, ಅವನ್ನು ಎಂಥಾ ಶಕ್ತಿಯು ಒಂದಾಗಿ ಸೇರಿಸಿರುವುದು, ಉಪಾಯಾಂತರದಿಂದ ಆ ಶಕ್ತಿಯನ್ನು ಫಕ್ಕನೆ ಪ್ರತ್ಯೇಕಿಸಿದರೆ ಆ ಸಮಯದಲ್ಲಿ ವಿುಂಚು ಹುಟ್ಟುವುದು ಎಂಬುದನ್ನು ಬಲ್ಲನು. ಈ ವಿಷಯಗಳು ಪಾಮರನಿಗೆ ಗೊತ್ತಿಲ್ಲ. ಹಿಮದ ಪರೆಯು ಸಾಮಾನ್ಯನಿಗೆ ಸಾಮಾನ್ಯವಾಗಿಯೇ ಕಾಣುವುದು. ಆದರೆ ಸೂಕ್ಷ್ಮದರ್ಶಿಯಲ್ಲಿಟ್ಟು ಅದನ್ನು ಪರೀಕ್ಷಿಸಿದ ಪಂಡಿತನಿಗಾದರೋ ಅದರಲ್ಲಿರುವ ಅಂದವಾದ ನಾನಾ ಆಕೃತಿಗಳು ಹೊಳೆಯುವುವು. ಉದ್ದುದ್ದವಾದ ಸೀಳುಗಳುಳ್ಳ ಗುಂಡಾದ ಬಂಡೆಯನ್ನು ನೋಡಿದರೆ ಬಹುಕಾಲಗಳಿಗೆ ಹಿಂದೆ ಅದರಮೇಲೆ ಹಿಮವಾಹಿನಿಯು ಹರಿದುಹೋಗಿತ್ತು ಎಂಬ ಸಂಗತಿಯನ್ನು ಭೂರಚನಾಶಾಸ್ತ್ರಜ್ಞನು ಗೊತ್ತುಮಾಡಿಕೊಳ್ಳುವನು. ಈ ಸಂಗತಿಯು ಪಾಮರನಿಗೆ ಗೊತ್ತಾಗಲಾರದು. ಮೇಲೆ ಹೇಳಿದಂಥಾ ವಿಷಯಗಳು ಕಾವ್ಯಕ್ಕೆ ಬಹು ಅನುಕೂಲವಾದ ವಿಷಯಗಳಾಗಿರುವುವು. ಆದುದರಿಂದ ಇಂಥಾ ವಿಷಯಗಳನ್ನು ಬಲ್ಲಂಥಾ ಪಂಡಿತರಿಗೆ ಕಾವ್ಯದಲ್ಲಿರುವಷ್ಟು ಆಭಿರುಚಿಯು ಸಾಮಾನ್ಯಜನರಿಗಿರಲಾರದು.

ಹೀಗೆ ಶಾಸ್ತ್ರಾನ್ವೇಷಣದಲ್ಲಿ ಪ್ರವೇಶವಿಲ್ಲದವರಿಗೆ ಕಾವ್ಯಕ್ಕನುಕೂಲವಾದ ಎಷ್ಟೋ ವಿಷಯಗಳು ಗೊತ್ತಿರುವುದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಪ್ರಕೃತಿಯಲ್ಲಿ ಕಂಡುಬರುವ ಇಂಥಾ ಸೂಕ್ಷ್ಮವಿಷಯಗಳು ಈಶ್ವರನ ಹಸ್ತದಿಂದ ಭೂಮಿ ಜಲ ಅಂತರಿಕ್ಷಗಳಲ್ಲಿ ಬರೆದ ಕಾವ್ಯಗಳೆಂಬುದನ್ನು ತಿಳಿಯಲು ಪಾಮರರು ಸಮರ್ಥರಾಗಿಲ್ಲ. ಹೀಗೆ ಕುಶಲ ಕಾರ್ಯಗಳನ್ನು ಸಮಂಜಸವಾಗಿ ಮಾಡಲಿಕ್ಕೂ ಶಾಸ್ತ್ರಜ್ಞಾನವು ಅವಶ್ಯಕವೆಂಬುದು ಮೇಲಿನ ವಿಚಾರದಿಂದ ಸ್ಪಷ್ಟವಾಗುವುದು. ಕುಶಲಕಲೆಗಳು ಶಾಸ್ತ್ರನಿಯಮಗಳನ್ನೇ ಅನುಸರಿಸಿರುವುವು. ಈ ನಿಯಮಗಳನ್ನು ಚೆನ್ನಾಗಿ ಅರಿತವರೇ ಆ ಕಲೆಗಳಲ್ಲಿ ಪೂರ್ಣಪಾಂಡಿತ್ಯವನ್ನು ಹೊಂದಲು ಅರ್ಹರಾಗುವರು. ಮಾಡಲ್ಪಟ್ಟ ಕುಶಲ ಕಾರ್ಯಗಳ ಗುಣದೋಷಗಳನ್ನು ಕಂಡುಹಿಡಿಯಲಿಕ್ಕೂ ಶಾಸ್ತ್ರಜ್ಞಾನವು ಅವಶ್ಯಕವಾಗಿರುವುದು. ಹೀಗೆ ಶಾಸ್ತ್ರವಿಷಯಗಳು ಕುಶಲ ಕಲೆಗಳಿಗೆ ಸಹಾಯಕಾರಿಗಳಾಗಿರುವುದಲ್ಲದೆ, ಅವುಗಳೇ ಕಾವ್ಯಪ್ರಾಯವಾಗಿಯೂ ಇರುವುವು.

ಇದುವರೆಗೂ ಎಂಥಾ ವಿಜ್ಞಾನವು ಮನುಷ್ಯರಿಗೆ ಪರಿಪೂರ್ಣ ಜೀವಿಕೆಗೆ ಮಾರ್ಗದರ್ಶಿಯಾಗಿರುವುದೆಂಬುದನ್ನು ವಿಚಾರಪೂರ್ವಕವಾಗಿ ನಿರ್ಣಯಿಸಿದ್ದಾ

ಯಿತು. ಈಗ ಮನುಷ್ಯರ ಶಿಕ್ಷಣಕ್ಕೆ ಎಂದರೆ ಆಚರಣೆಗಳನ್ನು ಕ್ರಮಪಡಿಸಲಿಕ್ಕೆ ಎಂಥಾ ವಿಜ್ಞಾನವು ಬೇಕಾಗಿರುವುದೆಂಬುದನ್ನು ವಿಚಾರ ಮಾಡಬೇಕು. ಈ ವಿಷಯವನ್ನು ವಿಸ್ತಾರವಾಗಿ ಚರ್ಚಿಸಬೇಕಾದ್ದಿಲ್ಲ. ಅದು ಸುಲಭವಾಗಿ ಗೊತ್ತಾಗುವಂಥಾದ್ದಾಗಿರುವುದು. ಮಾರ್ಗದರ್ಶನಕ್ಕೆ ಬೇಕಾದ ವಿಜ್ಞಾನವನ್ನು ಗೊತ್ತುಮಾಡಿಕೊಂಡ ಬಳಿಕ ಶಿಕ್ಷಣಕ್ಕೂ ಬೇಕಾದ ವಿಜ್ಞಾನವನ್ನು ಗೊಕ್ತುಮಾಡಿಕೂಂಡಂತೆಯೇ ಆಯಿತು. ಮಾರ್ಗದರ್ಶನಕ್ಕೆ ಯಾವುದು ಬೇಕೋ ಆ ವಿಜ್ಞಾನವೇ ಶಿಕ್ಷಣಕ್ಕೂ ಬೇಕಾಗಿರುವುದು. ಈಶ್ವರನು ಈ ಎರಡು ವಿಷಯುಗಳಿಗೂ ಅನುಕೂಲಿಸುವಂತೆ ಒಂದೇಬಗೆಯ ವಿಜ್ಞಾನವನ್ನು ಏರ್ಪಡಿಸಿರುವನು. ಬೇರೆ ಬೇರೆ ಕಾರ್ಯಗಳನ್ನು ನಿರ್ವಹಿಸಲಿಕ್ಕೆ ಬೇಕಾಗುವ ಬುದ್ಧಿ ವಿಶೇಷಗಳು ಆಯಾ ಕಾರ್ಯಗಳನ್ನು ಪದೇ ಪದೇ ಮಾಡುವುದರಿಂದಲೇ ಅಭಿವೃದ್ಧಿಯನ್ನು ಹೊಂದುವುವು. ಅವು ಕೃತಕೋಪಾಯಗಳಿಂದೆಂದಿಗೂ ಚೆನ್ನಾಗಿ ವರ್ಧಿಸಲಾರವು.

ಇದಕ್ಕೆ ನಿದರ್ಶನ; ರೆಡ್ ಇಂಡಿಯರ್ ಜನರು ಪದೇ ಪದೇ ಮೃಗಗಳನ್ನು ಬೆನ್ನಟ್ಟಿ ಹೋಗುವುದರಿಂದ ಒಳ್ಳೆಯಬೇಟೆಗಾರರಾಗಿರುವರು. ಬೇರೆ ಮಾರ್ಗದಿಂದ ಅವರಂಥಾ ಬೇಟೆಗಾರರಾಗಲು ಸಾಧ್ಯವಿಲ್ಲ. ಮತ್ತು ಅವರು ಬಗೆಬಗೆಯ ಶ್ರಮವಾದ ಕೆಲಸಗಳನ್ನು ಮಾಡುವುದರಿಂದಲೇ ದೇಹಸಾಮರ್ಥ್ಯವನ್ನೂ ಲಾಘವವನ್ನೂ ಹೊಂದಿರುವರು. ಬರೀ ಗರಡೀಸಾಧಕ ಮಾಡುವುದರಿಂದ ಶ್ರಮಸಾಧ್ಯವಾದ ಕೆಲಸಗಳಲ್ಲಿ ಅವರಷ್ಟು ಗಟ್ಟಿಗರಾಗಲು ಸಾಧ್ಯವಿಲ್ಲ. ಅವರಿಗೆ ಶತ್ರುಗಳನೂ ಮೃಗಗಳನ್ನೂ ಬೆನ್ನಟ್ಟಿ ಹೋಗಿ ಹೋಗಿ ಬಹುಕಾಲದ ರೂಢಿಯಿರುವುದರಿಂದ ಆ ಕಾರ್ಯದಲ್ಲಿ ಇತರರು ಅವರಷ್ಟುಮಟ್ಟಿಗೆ ಸಮರ್ಥರಾಗಿಲ್ಲ. ಎಲ್ಲಾ ಕಾರ್ಯಗಳ ವಿಷಯದಲ್ಲಿಯೂ ರೂಢಿಯೇ ಮುಖ್ಯವಾದುದು. ರೂಢಿಯಿಂದಲೇ ಆಯಾಕಾರ್ಯಗಳಲ್ಲಿ ನಿಪುಣತೆಯೂ ನಿರ್ವಾಹಶಕ್ತಿಯೂ ಜನರಿಗೆ ಉಂಟಾಗುವುವು. ವಿದ್ಯಾವ್ಯಾಸಂಗ ವಿಷಯದಲ್ಲಿಯೂ ಇದೇ ನಿಯಮವಿರುವುದು. ಅಭ್ಯಾಸಮಾಡುವುದರಿಂದಲೇ ಆಯಾ ವಿದ್ಯೆಗಳಲ್ಲಿ ಜನರು ವೃದ್ಧಿಯನ್ನು ಹೊಂದುವರು. ಹೀಗೆ ಮೇಲಿನ ವಿಚಾರದಿಂದ, ಮಾರ್ಗದರ್ಶನಕ್ಕೆ ಯಾವವಿದ್ಯೆಯು ಅಥವಾ ವಿಜ್ಞಾನವು ಉತ್ತಮವಾದ ಸಾಧನವಾಗಿದೆಯೋ ಅದೇ ಅಭ್ಯಾಸದ್ವಾರ ಶಿಕ್ಷಣಕ್ಕೂ ಉತ್ತಮವಾದ ಸಾಧನವಾಗಿದೆಂಬುದು ವ್ಯಕ್ತವಾಗುವುದು.

ಸಶೇಷ. S. V.

ರೇಷ್ಮೆ ವ್ಯವಸಾಯ.

(೨೫೬ ನೇ ಪುಟದ ಶೇಷ)

ಇದರಿಂದ ತೋರುವ ನೀತಿ ಏನೆಂದರೆ:—

ಪರೋಪಕಾರವೇ ಮುಖ್ಯವಾದುದು.

ಶ್ಲೋ ॥ ಪರೋಪಕಾರಾಯು ವಹಂತಿನಿಮ್ನಗಾಃ । ಪರೋಪಕಾರಾಯುದುಹಂತಿ ಧೇನವಃ ॥ ಪರೊಪಕಾರಾಯ ಫಲಂತಿಭೂರುಹಾಃ । ಪರೋಪಕಾರಾಯು ಸತಾಂವಿಭೂತಯಃ ॥

ಎಂಬ ನೀತಿಪ್ರಕಾರ ಲೋಕದಲ್ಲಿ ಪರೋಪಕಾರಕ್ಕಿಂತಲೂ ಮುಖ್ಯವಾದ ಧರ್ಮಕಾರ್ಯ ಬೇರೆ ಇಲ್ಲವೆಂಬುದಕ್ಕೆ ಅನೇಕ ಶ್ರುತಿ ಸ್ಮೃತಿ ಪುರಾಣೇತಿಹಾಸ ಸಾಧನಗಳು ವಿದಿತವಾಗಿರುವುದು ಸಕಲರಿಗೂ ಶ್ರುತವಾಗಿರುವುದು ಸರಿಯಷ್ಟೆ. ಆದರೂ ಈ ವಿಷಯವನ್ನೇ ಪುನರುಕ್ತಿದೋಷದಿಂದ ಅನೇಕ ವಿದ್ವನ್ಮಂಡಲಿಯ ಸಮುಖದಲ್ಲಿ ಶುತ್ರಪಡಿಸಿಕೊಳ್ಳುತ್ತೇನೆ. ಇದರಲ್ಲಿ ಅರ್ಥತಃ ಆಗಲಿ ಶಬ್ದತಃ ಆಗಲಿ ವಾಕ್ಯತಃ ಆಗಲಿ ಏನಾದರೂ ಸ್ಖಾಲಿತ್ಯದೋಷವಿದ್ದಲ್ಲಿ ಗುಣೈಕ ಪಕ್ಷಪಾತಿಗಳಾದ ಪ್ರಾಜ್ಞರು ದಯವಿಟ್ಟು ಕ್ಷಮಿಸಬೇಕೆಂಬದಾಗಿ ಪ್ರಾರ್ಥಿಸುತ್ತೇನೆ.

ಸಾಕ್ಷಾಜ್ಜಗದೀಶ್ವರನಿಂದ ನಿರ್ಮಿಸಲ್ಪಟ್ಟ ಪೃಥಿವ್ಯಪ್ತೇಜೋವಾಯ್ವಾಕಾಶಗಳೆಂಬ ಪಂಚಭೂತಗಳೂ ಕೂಡ ಪರೋಪಕಾರಕ್ಕಾಗಿಯೇ ಸೃಷ್ಟಿಸಲ್ಪಟ್ಟಿರುವ ಅಂಶವು ಆಬಾಲವೃದ್ಧರಿಗೂ ತಿಳಿದಿರಬಹುದು.

ಮತ್ತು ಪ್ರಕೃತಿ ಶಾಸ್ತ್ರಜ್ಞರು ಗಣನೇ ಮಾಡಿರುವ ವಾಯುತತ್ವವಾದ ವನಸ್ಪತಿ ಕೋಟಿ, ಭೂತತ್ವವಾದ ಧಾತುಕೋಟಿ, ಜಲತತ್ವವಾದ ಜೀವಕೋಟಿಗಳೆಂಬ ಸಜೀವ ನಿರ್ಜೀವಗಳಾದ ಚರಾಚರ ವಸ್ತುಗಳೂ ಕೂಡ ಸರ್ವದಾ ಪರೋಪಕಾರಿಗಳೇ ಆಗಿರುವ ವಿಷಯವು ಮೇಲಿನ ಶ್ಲೋಕದಿಂದಲೇ ಚರಿತಾರ್ಥವಾಗಬಹುದು.

ಮುಖ್ಯವಾಗಿ ವಿದ್ಯಾವಂತರೇ ಆಗಲಿ ಅವಿದ್ಯಾವಂತರೇ ಆಗಲಿ ಯಾವುದಾದರೂ ಒಂದು ವ್ಯಾಪಾರದಿಂದ ದ್ರವ್ಯವಂತರಾಗಿ ಕೇವಲ ದ್ರವ್ಯಲೋಭದಿಂದಲೇ ಕೊರತೆಸಟ್ಟು ಪರೋಪಕಾರ ಶಬ್ದವನ್ನು ಕೂಡ ತಿಳಿಯಲು ಆಗುವುದಿಲ್ಲವೆಂಬದಾಗಿ ಹೇಳುವಂಥಾವರ ಜನ್ಮವೂ ಮತ್ತು ದ್ರವ್ಯವೂ ಸಹ ಕೇವಲ ನಿಂದಾಕರವಾದುದಲ್ಲವೇ?

ಶ್ಲೋ ॥ ಯಸ್ಮಿನ್ ಜೀವತಿ ಜೀವಂತಿ ಬಹವಸ್ಸ ತು ಜೀವತು ।
ಬಕೋಪಿಕಿಂ ನ ಕುರುತೆ ಚಂಚ್ವಾ ಸ್ವೋದರಪೂರಣಂ ॥

ಚಿ॥ ಶ್ರೀಕಂಠಶಾಸ್ತ್ರಿ.

ವ್ಯಾಕರಣ ಶಾಸ್ತ್ರ.

(257 ನೇ ಪುಟದ ಶೇಷ.)

ಇದೂ ಅಲ್ಲದೆ ॥ ವಾಗಿ ॥ 85 ॥ ಇತ್ಯಾದಿ ಸೂತ್ರಗಳಲ್ಲಿ ಸೂತ್ರಕ್ಕೆ ಅರ್ಥವನ್ನೇ ತಿಳಿದುಕೊಳ್ಳದೆ ತೋರ್ಗೆ-ಮಾಳ್ಗೆ-ಇತ್ಯಾದಿಯಾದ ಅನಿಷ್ಟರೂಪಗಳನ್ನು ಬರೆಯುವನು. ಅನಿಷ್ಟರೂಪವು ಸಿದ್ಧಿಸುವಂತೆ ಸೂತ್ರಕ್ಕೆ ಅರ್ಥವನ್ನು ಬರೆದು ಸರಿಯಾದ ಸೂತ್ರಾರ್ಥವರಿಯದವನು ಹೇಗೆ ತಾನೆ ಸೂತ್ರಚೋರನಾಗದಿರುವನು ?

ಇಷ್ಟೇ ಅಲ್ಲದೆ—ಅಂದು—ಇಂದು ಇತ್ಯಾದಿಗಳ ವಿಷಯದಲ್ಲಿ ॥ ಶ್ಲುಬುತಃ ಕಾಲಾರ್ಥಾತ್ ॥ 278 ॥ ಅಮಃ ॥ 279 ॥ ಎಂಬದಾಗಿ ಸೂತ್ರಗಳನ್ನು ಬರೆದು ಇದ್ದರೂ॥ ವುದುಮಾದ್ಯವ್ಯಯಂ ॥ 19 ॥ ಎಂಬ ಸೂತ್ರದ ವ್ಯಾಖ್ಯಾನದಲ್ಲಿ " ಅತ್ರ-ದುಇತ್ಯವಿಶೇಷೇಣ ಪಾಠಾತ್ ಕಾಲೆದುರಿತಿ ತದ್ಧಿತೊಪಿಗೃಹ್ಯತೆ. ಅಂದು, ಇಂದು—ಇತ್ಯಾದೀನಾಮಪ್ಯವ್ಯಯತ್ವಾತ್ " ಎಂಬದಾಗಿ 278 ಮತ್ತು 279 ನೆ ಸೂತ್ರಗಳನ್ನು ಮರೆತು—ಅಂದು—ಇಂದು—ಇತ್ಯಾದಿಗಳನ್ನು ಅವ್ಯಯವೆಂದು ಹೇಳುತ್ತಾನೆ. ಇಷ್ಟು ವಿಸ್ಮರಣಶೀಲನಿಗೆ ಸೂತ್ರನಿರ್ಮಾಣಶಕ್ತಿಯು ತಾನೆ ಎಲ್ಲಿಂದ ಬರುವದು ?

ಇಷ್ಟೇ ಅಲ್ಲದೆ ನೃಪತುಂಗನು ಕವಿರಾಜಮಾರ್ಗವೆಂಬ ಗ್ರಂಥದ ದ್ವಿತೀಯ ಪ್ರಕರಣದಲ್ಲಿ,

ನೋಡುವೆನಾ ಮಹೀಪತಿಯ ನರ್ಥಿಗುಣಾನ್ವಿವೃತಕಲ್ಪವೃಕ್ಷನಂ
ಬೇಡುವೆ ನರ್ಥಸಂಚಯಮನೆಂಬುದಿದುತ್ತರಮಾರ್ಗವಾಚಕಂ ॥
ನಿಡುಮುದಾತ್ತಚಾರುಗುಣನಂ ಮನದೊಳ್ಳೆಱೆನೋಱ್ಪೆನಱ್ತಿಯೊಳ್
ಕೂಡಿರವೇಱ್ಪುದೆಂಬುದಿದು ದಕ್ಷಿಣಮಾರ್ಗವಾಚಕಂ ॥ ಎಂದು ಹೇಳಿ

ಸೂಡುವೆನೆಂಬುದಲ್ಲದಣವಾಗದುಸೂಚ್ಪಿನಮೋಘಮೆಂಬುದಂ
ಕೂಡುವೆನೆಂಬುದಲ್ಲದಿನಿಸಾವುದುಮಾಗದುಕೂಚ್ಪಿನೆಂಬುದಂ
ಕಾಡುವೆನೆಂಬುದಲ್ಲದೆ ಸುಮಾರ್ಗದೊಳಾಗದು ಕಾಚ್ಪಿನೆಂಬುದಂ
ತೋಡುವೆನೆಂಬುದಲ್ಲದಿಡಲಾಗದುನಿಕ್ಕುವತೊಚ್ಪಿನೆಂಬು ॥ದಂ

ಎಂಬದಾಗಿ ಸೂಡು ಮೊದಲಾದ ಧಾತುಗಳಿಗೆ ವಕಾರಾದಿಪ್ರತ್ಯಯವು ಪರವಾದಾಗ— ಸೂಪ್ಪಿಂ—ಇತ್ಯಾದಿಯಾಗಿ ಟಾ ದೇಶವು ಬರುವದಿಲ್ಲವೆಂದು ಲೋಕಪ್ರಯೋಗಾನುಸಾರವಾಗಿ ಕಂಠೋಕ್ತವಾಗಿ ನಿಷೇಧಿಸಿದ್ದರೂ ನಮ್ಮ ಭಟ್ಟಾಕಳಂಕನು ॥ ನವಿಮುಖ್ಯೆ ॥86॥ ಎಂಬ ಸೂತ್ರಕ್ಕೆ ಸರಿಯಾದ ಅರ್ಥವನ್ನು ತಿಳಿದುಕೊಳ್ಳದಕಾರಣ ॥ ಅದಿಷ್ಟಾದ್ರಳಃ ॥ 514॥ ಎಂಬ ಸೂತ್ರಕ್ಕೆ ಸೂಪ್ಪಿಂ—ಸೂಚ್ಪಿನಂ—ಎಂಬ ಪದಗಳನ್ನು ಲಕ್ಷ್ಯವಾಗಿ ಕೊಟ್ಟಿರುವನು. ಹೀಗೆ ಪ್ರಾಕ್ತನಕವಿಗಳಿಗೂ ಪ್ರಾಕ್ತನಲಾಕ್ಷಣಿಕರಿಗೂ ಅಸಮ್ಮತವಾದ ಲಕ್ಷ್ಯಗಳನ್ನು ಬರೆಯುತಕ್ಕವನನ್ನು ಲಾಕ್ಷಣಿಕನೆಂದು ಹೇಳುವದು ಶುದ್ಧಾಂಗವಾಗಿ ಸಂಗತವಲ್ಲ. ವಿಚಾರಮಾಡಿದಲ್ಲಿ ನಮ್ಮ ಭಟ್ಟಾಕಳಂಕನಿಗೆ ಅನೇಕ ಸೂತ್ರಗಳ ಅರ್ಥವೇ ಗೊತ್ತಿಲ್ಲದ್ದರಿಂದ ತಪ್ಪುತಪ್ಪಾಗಿ ವೃತ್ತಿ ವ್ಯಾಖ್ಯಾನಗಳನ್ನು ಬರೆದಿರುವನು. ಈ ಅಂಶವೆಲ್ಲವೂ ಮುಂದೆ ಮುದ್ರಿತವಾಗತಕ್ಕ ಭಟ್ಟಾಕಳಂಕಚೌರ್ಯಾದರ್ಶವೆಂಬ ಗ್ರಂಥವನ್ನು ನೋಡಿದರೆ ಇನ್ನೂ ವಿಶದವಾಗಿ ವಾಚಕರಿಗೆ ಗೊತ್ತಾಗುವದು. ಪ್ರಕೃತದಲ್ಲಿ ಭಟ್ಟಾಕಳಂಕನು,

ಯಃ ಕರ್ಣಾಟಕಶಬ್ದಶಾಸನಮಿದಂ ನಿರ್ಮಾಯ ಶರ್ಮಾವಹಂ।
ವೃತ್ತಿಂ ಚಾರಯಚ್ಚ ತಸ್ಯ ವಿದುಷಾಂ ಪ್ರೌಢಪ್ರರೂಢಶ್ರಿಯಂ॥
ತೇನೇದಂ ವ್ಯರಚಿ ಪ್ರಗಲ್ಭವಚಸಾ ಭಟ್ಟಾಕಳಂಕೇನ ತ।
ದ್ವೃತ್ತೇಸ್ಸಾಧುನಿಬಂಧನಂ ಚ ಮಕರಂದಾಖ್ಯಂಸಮಾಖ್ಯಾಸ್ಪದಂ ॥

ಇತ್ಯಾದಿಯಾಗಿ ಬರೆದುಕೊಂಡು ತಾನೇ ಕರ್ಣಾಟಕ ಶಬ್ದಾನುಶಾಸನವೆಂಬ ಸಿದ್ಧಾಹೀತ್ಯಾದಿ ಸೂತ್ರಗಳನ್ನು ರಚಿಸಿದವನೆಂಸು ಹೇಳಿಕೊಂಡಿದ್ದರೂ ಪ್ರಾಕ್ತನ ಕವಿಗಳಿಗೂ ಪ್ರಾಕ್ತನ ಲಾಕ್ಷಣಿಕರಿಗೂ ಅಸಮ್ಮತವಾದ ಸೂಪ್ಪಿಂ—ಇತ್ಯಾದಿ ಲಕ್ಷ್ಯವನ್ನು ॥ ಅದಿಷ್ಟಾದ್ರಳಃ ॥ 514 ॥ ಎಂಬ ಸೂತ್ರದಲ್ಲಿ ಉದಾಹರಿಸಿರುವುದನ್ನು ನೋಡಿದರೆ ॥ ನವಿಮುಖ್ಯೆ ॥ 86 ॥ ಎಂಬಸೂತ್ರಕ್ಕೂ

ನಾಡ್ವಾದಿಭ್ಯಃ ಕಳುಬ್ವಾ ॥ 233 ॥ ಎಂಬ ಸೂತ್ರದ ವೃತ್ತಿಯಲ್ಲಿ ಪ್ರಾಕ್ತನ ಕವಿಪ್ರಯೋಗದಲ್ಲಿ ಕಾಣಿಸದ ನಾಳ್ಗಳ್—ಎಂಬ ಲಕ್ಷ್ಯವನ್ನು ಕೊಟ್ಟಿರುವದನ್ನು ನೋಡಿದರೆ ॥ ವಾಗಿ ॥ 85॥ ಎಂಬ ಸೂತ್ರಕ್ಕೂ

ಆದೇ 233 ನೇ ಸೂತ್ರದವ್ಯಾಖ್ಯಾನದಲ್ಲಿ ನಾಡು+ಕಳ್—ಎಂದಿದ್ದಾಗ ವಿಶೇಷಸೂತ್ರವಾದ ॥ ಪ್ರತ್ಯಯೆ ॥ 84 ॥ ಎಂಬ ಸೂತ್ರವು ಪ್ರವರ್ತಿಸುವದೆಂಬಂಶವನ್ನು ತಿಳಿಯದೆ ॥ ಬುಡೊದ್ರೋರಳಂವ್ಯಂಜನೆ ॥82॥ ಎಂಬ ಸೂತ್ರವು ಪ್ರವರ್ತಿಸುವುದೆಂದುಹೇಳಿರುವುದರಿಂದ ॥ ಪ್ರತ್ಯಯೆ ॥ 84 ॥ ಎಂಬ ಸೂತ್ರಕ್ಕೂ ಕೂಡ, ಸರಿಯಾದಅರ್ಥವಾಗದೆ ಲಕ್ಷ್ಯೈಕಚಕ್ಷುಷ್ಕನಾದ ಸೂತ್ರಕಾರನ ಭಾವವನು ಸಾರವಾಗಿಲ್ಲದೆ ಲಕ್ಷಣೈಕಚಕ್ಷುಷ್ಕನಂತೆ ಏನೋ ಒಂದುವಿಧವಾಗಿ ತನಗೆ ತೋರಿದಂತೆಬರೆದಿರುವನೆಂದು ವಾಚಕರು ಊಹಿಸುವಷ್ಟು ಮಟ್ಟಿಗೆ ವೃತ್ತಿವ್ಯಾಖ್ಯಾನಗಳನ್ನು ಬರೆದಿರುವುದರಿಂದಲೂ,

ಅಂದು, ಇಂದು, ಇತ್ಯಾದಿಗಳ ವಿಷಯದಲ್ಲಿ ಹೇಳಿರತಕ್ಕ ಸೂತ್ರಗಳಿಗೆವಿರುದ್ಧವಾಗಿರುವುದು ॥ ಮಾದ್ಯವ್ಯಯಂ ॥19॥ ಎಂಬ ಸೂತ್ರದ ವ್ಯಾಖ್ಯಾನದಲ್ಲಿ ಅಂದು, ಇಂದು, ಇತ್ಯಾದಿಗಳನ್ನು ಅವ್ಯಯವೆಂದು ಹೇಳಿ ತನ್ನ ವಿಸ್ಮೃತಿಯನ್ನುಪ್ರಕಾಶಪಡಿಸಿಕೊಂಡಿರುವುದರಿಂದಲೂ,

ಮತ್ತು ॥ ಮೋನಸ್ಸ್ವರೆ ॥ 77 ॥ ನಪಿವಾ ॥ 78 ॥ ಎಂಬ ಸೂತ್ರಗಳುಪ್ರವರ್ತಿಸತಕ್ಕ ಸ್ಥಳವನ್ನು ಸಂಗತವಾಗಿ ತಿಳಿದುಕೊಳ್ಳದಿರುವುದರಿಂದಲೂ

ಮತ್ತು ವೃತ್ತಿವ್ಯಾಖ್ಯಾನಗಳ ಅಭಿಪ್ರಾಯವನ್ನು ಬಿಟ್ಟುಬಿಟ್ಟು ಸಯುಕ್ತಿಕವಾಗಿ ಸೂತ್ರಕ್ಕೆ ಮಾತ್ರ ಅರ್ಥ ವಿಚಾರಮಾಡಿದಲ್ಲಿ ವೃತ್ತಿ ವ್ಯಾಖ್ಯಾನಗಳ ಅಭಿಪ್ರಾಯದಮೇಲೆ ಬರುವ ದೋಷಗಳಿಂದ ಆಕ್ರಾಂತವಾಗದಂತೆ ಸೂತ್ರಾರ್ಥವಾಗುವುದರಿಂದಲೂ, ವೃತ್ತಿವ್ಯಾಖ್ಯಾಕಾರನಾದ ಭಟ್ಟಾಕಳಂಕನು ಸೂತ್ರಕಾರನಲ್ಲವೆಂತಲೂ ಮತ್ತು ಸೂತ್ರಗಳ ಸರಿಯಾದ ಭಾವವು ಇವನಿಗೆ ಗೊತ್ತಾಗಲಿಲ್ಲವೆಂತಲೂ ನಿಶ್ಚಯಿಸಬಹುದು.

ಹೀಗೆ ಕರ್ಣಾಟಕ ಶಬ್ದಾನು ಶಾಸನ ಸೂತ್ರಕಾರನೇಬೇರೆ—ಅದರ ವೃತ್ತಿವ್ಯಾಖ್ಯಾಕಾರನೇ ಬೇರೆ ಎಂದು ನಿಶಿತವಾಗುವದಲ್ಲದೆ ಹೀಗೆ ನಿಶ್ಚಯಿಸುವದಕ್ಕೆ ವೃತ್ತಿಕಾರನು ಬರೆದಿರತಕ್ಕ ಸೂತ್ರದ ಅಸಂಗತವಾದ ಅರ್ಥವೇ ಸಾಧಕವಾಗಿರುವದರಿಂದ ಸೂತ್ರಾರ್ಥವನ್ನೂ ಕೂಡ ವೃತ್ತಿವ್ಯಾಖ್ಯಾಕಾರನಾದ ಭಟ್ಟಾಕಳಂಕನು ಸಯುಕ್ತಿಯಾಗಿ ಬರೆದಿಲ್ಲವೆಂದು ನಾವು ತಿರಿಗಿಯೂ ಹೇಳಬೇಕಾಗಿಲ್ಲ—

ಆದ್ದರಿಂದಲೇ ॥ ನಶ್ಚ ಬಿಂದುರನ್ಯತ್ರ ॥ ತದನ್ತ್ಯೋವಾವರ್ಗೆ ॥80 ॥ ಎಂಬ ಸೂತ್ರಗಳ ಮೇಲೆಯೂ ಹಿಂದೆಹೇಳಿದ ಆಕ್ಷೇಪಣೆಯು ತಲೆಹಾಕಿ ಭಟ್ಟಾಕಳಂಕನ ಅರ್ಥವು ಅಸಂಗತವೆಂದು ತೋರುವದಾದ್ದರಿಂದ ದೋಷಾಕ್ರಾನ್ತವಾಗದಂತೆ ಈ ಸೂತ್ರಗಳಿಗೆ ಅರ್ಥವನ್ನು ಹೇಳಬಹುದೇ ? ನೋಡೋಣ—

K. N. (ಸಶೇಷ)

ಮೈಸೂರು ವಿದ್ಯಾಭ್ಯಾಸದ ಇಲಾಖೆ.

1907—1908.

ಕಿಂಡರ್‌ಗಾರ್ಟ್ನ್ ಪಾಠ.

ವಿಷಯ ಸೂಚನೆ.

1. ಶೈಶವವು ಮತ್ತು ಶೈಶವಕ್ಕೆ ಬೇಕಾದುದು. ಪ್ರಾರಂಭದಲ್ಲಿ ನಡೆಯುವ ಶಿಕ್ಷಣದ ಮುಖ್ಯತೆ. ಶಿಕ್ಷಣದ ಪರಮೋದ್ದೇಶ:—ದೇಹವನ್ನು, ನಡತೆಯನ್ನು, ಇತರರೊಡನೆ ಸೇರಿ ವ್ಯವಹರಿಸುವ ಸ್ವಭಾವವನ್ನು ಸಹ ಸಾಧ್ಯವಾದಷ್ಟು ವೃದ್ಧಿಗೊಳಿಸುವುದು.

2. ಶೈಶವಕ್ಕೆ ಬೇಕಾದುದನ್ನು ಸಾಧಿಸಿಕೊಡಲು ಕೊಮೆನಿಯಸ್, ರುಸೊ, ಸ್ವೀಡ್‌ಬರ್ಗ್, ಪೆಸ್ಟಲಾಟ್ಸಿ. ಫ್ರೊಬೆಲ್, ಈ ಶಿಕ್ಷಕರು ಮಾಡಿದ ಏರ್ಪಾಡು.

3. ಪೆಸ್ಟಲಾಟ್ಸಿ, ಈತನ ಜೀವನಚರಿತ್ರೆಯ ಸಂಗ್ರಹ. ಸ್ವಾಟ್ಸ್ ಎಂಬಕಡೆ ಆತನು ನಡೆಯಿಸಿದ ಕಾರ್ಯದ ಪ್ರಯೋಜನ, ಶಿಕ್ಷಣದ ಮೂಲಸಾರವು ಅನುರಾಗವೇ ಹೊರತು ಬೋಧನೆಯಲ್ಲವೆಂಬ ಈತನ ನಂಬಿಕೆ.

4. ಫ್ರೊಬೆಲ್. ಆತನ ಜೀವನ ಚರಿತ್ರೆಯ ವಿಭಾಗಗಳು—(i) ಮೊದಲಿನ ಹತ್ತುವರ್ಷ; (ii) ಫ್ರಾಂಕ್‌ಫರ್ಟ್ ಮತ್ತು ಥ್ಯೂರಿಂಜಿಯಾದಲ್ಲಿರುವ ಕೀಲ್‌ಹೌ ಈ ಊರುಗಳಲ್ಲಿ ಉಪಾಧ್ಯಾಯನಾಗಿದ್ದು ಈತನು ಸಂವಾದಿಸಿದ ಅನುಭವ. (iii) ಮಕ್ಕಳ ಶಿಕ್ಷಣಕ್ಕಾಗಿ ಈತನು ಮಾಡಿರುವ ಕೆಲಸ.

5. ಪ್ರಪಂಚದಲ್ಲಿ ಅಂದರೆ ಮುಖ್ಯವಾಗಿ ಅಮೆರಿಕ, ಜರ್ಮನಿ, ಫ್ರಾನ್ಸ್, ಇಟಲಿ, ಇಂಗ್ಲೆಂಡ್—ಈ ದೇಶಗಳಲ್ಲಿ ಶ್ರದ್ಧಾಳುಗಳು ಫ್ರೊಬೆಲ್‌ನ ಏರ್ಪಾಡಿನಲ್ಲಿ ಈಚೆಗೆ ಮಾಡಿರುವ ಅಭಿವೃದ್ಧಿಯು.

6. ಆಟದ ಅರ್ಥ. ಚಟುವಟಿಕೆಯೇ ಪ್ರಾಣಿಗೆ ಮುಖ್ಯವಾದ ಗುರುತು, ಈ ಚಟುವಟಿಕೆಯು ಹೊರಪಡಿಸಿಕೊಳ್ಳುವ ವಿಧಾನ. ಕ್ರಮಪಡಿಸಿದ ಆಟದ ಪ್ರಯೋಜನ. ಆಟಗಳ ವಿಭಜನೆ. ಆಟಗಳನ್ನು ನಿರ್ಣಯಿಸುವುದರಲ್ಲೂ, ಆಡಿಸುವುದರಲ್ಲೂ ಉಪಯೋಗವಾಗುವ ಕೆಲವು ಅಂಶಗಳು.

7. ಸಾಮಾನ್ಯವಾದ ಪ್ರಕೃತಿಬೋಧೆಯೇ ಶಿಕ್ಷಣಕ್ಕೂ ಬೋಧನೆಗೂ ಆಧಾರಭೂತವಾದುದು. ಸಾರ್ವತ್ರಿಕವಾದ ಶಿಕ್ಷಣದಲ್ಲಿ ಕೈತೋಟ ಮಾಡಿಸುವುದಕ್ಕೆ ಕೊಡಬೇಕಾದ ಅವಕಾಶ. ಮಕ್ಕಳಿಗೆ ಒಂಭತ್ತು ವರ್ಷವಾಗುವವರೆಗಾದರೂ

ಪಾಠಶಾಲೆಯಲ್ಲಿ ಮಾಡುವ ಕೆಲಸದಲ್ಲೆಲ್ಲ ತೋಟವನ್ನಾಗಲಿ, ಪ್ರಕೃತಿಬೋಧೆಯನ್ನಾಗಲಿ ಆಧಾರವನ್ನಾಗಿಟ್ಟುಕೊಳ್ಳಬೇಕೆಂದು ಅನುಭವದಿಂದ ನಿರ್ಧರಿಸಿರುವುದು. ವಯಸ್ಸಾದ ವಿದ್ಯಾರ್ಥಿಗಳಿಗೆ ಶಾಸ್ತ್ರಗಳಲ್ಲನೇಕವನ್ನು ಬೋಧಿಸುವುದರಲ್ಲಿ ಇದರಿಂದಾಗುವ ವಿಶೇಷವಾದ ಸಹಾಯ.

8. ಕೈತೋಟ ಮಾಡಿಸುವುದರಿಂದ ಮಗುವಿಗೂ, ಪಾಠಶಾಲೆಗೂ, ಸಾಮಾನ್ಯವಾಗಿ ಜನಾಂಗಕ್ಕೂ ಆಗುವ ಪ್ರಯೋಜನ. ಈ ವಿಷಯದಲ್ಲಿ ವಿದ್ಯಾಧಿಕಾರಿಗಳ ಮೇಲಿರುವ ಭಾರ.

9. ಪ್ರಕೃತಿಸಂಬದ್ಧವಾದ ವಸ್ತುಗಳನ್ನು ಫ್ರೋಬೆಲ್ ಮತಾನುಸಾರವಾಗಿ ವಿಮರ್ಶೆ ಮಾಡುವುದಕ್ಕೆ ಉದಾಹರಣೆ.

10. ಕಥೆಯನ್ನು ಶಿಕ್ಷಣೋಪಾಯವಾಗಿ ಉಪಯೋಗಿಸಿಕೊಳ್ಳುವುದು. ಕಥೆಗಳ ವಿಭಜನೆ. ಕಥೆಗಳನ್ನು ಹೇಳುವುದರಲ್ಲಿ ಉಪಾಧ್ಯಾಯರಿಗೆ ಸಹಾಯಕವಾದ ಸೂಚನೆಗಳು.

11. ಪದ್ಯಗಳು ಮತ್ತು ಹಾಡುಗಳು. ಇವುಗಳನ್ನು ಆರಿಸಿ ತೆಗೆದುಕೊಳ್ಳುವುದರಲ್ಲಿ ಉಪಾಧ್ಯಾಯರು ನೆನಪಿನಲ್ಲಿಡಬೇಕಾದ ಅಂಶಗಳು

12. ಕೈಕೆಲಸಕ್ಕೂ ಮತ್ತು ಪ್ರಕೃತಿವಿಮರ್ಶೆಗೂ ಸಂಬಂಧ.

13. ವರ್ಣ, ಆಕಾರ, ಸಂಖ್ಯೆ ಇವುಗಳ ಬೋಧನಕ್ರಮ. ಇಂಥ ಬೋಧನೆಯಲ್ಲಿ ಕಿಂಡರ್ ಗಾರ್ಟ್ನ ಪದ್ಧತಿಯ ಪ್ರಯೋಜನ.

14. ಭಾಷೆಯ ಪಾಠ. ಸಲ್ಲಾಪೋಪದೇಶ. ಅದರ ಸ್ವರೂಪಮತ್ತು ಅದಕ್ಕೆ ವೇಳಾಪತ್ರಿಕೆಯಲ್ಲಿ ಉಪಾಧ್ಯಾಯರು ಕೊಡಬೇಕಾದ ಅವಕಾಶ. ಓದುವುದು ಮತ್ತು ಬರೆವಣಿಗೆ, ಪಾಠದ ಪಟ್ಟಿಯಲ್ಲಿ ಇವುಗಳ ಸ್ಥಾನ.

15. ಸಣ್ಣ ಮಕ್ಕಳಿಗೂ ಪ್ರೈಮರಿ ಮತ್ತು ಇತರ ತರಗತಿಗಳಲ್ಲಿ ಓದುವ ಹುಡುಗರಿಗೂ, ಉಚಿತವಾದ ಕೆಲಸಗಳು. ಫ್ರೋಬೆಲ್ಲಿನ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಜನರು ಅನ್ಯಥಾ ಭಾವಿಸಿರುವುದು.

16. 1, 2, 3, 4, 5, 6 ನೇ ಕರಣಗಳು ಮಣಿ ಮುಂತಾದುವುಗಳನ್ನು ಪೋಣಿಸುವುದು; ಬಟ್ಟೆಯ ದಾರವನ್ನು ಬಿಡಿಸಿ ಬೇರೆ ಬೇರೆಯಾಗಿ ರಚಿಸುವುದು; ಮರಳು ಕೆಲಸ; ಕಡ್ಡಿಗಳನ್ನೂ ಉಂಗುರಗಳನ್ನೂ ವಿಧವಿಧವಾಗಿ ಇಡುವುದು; ಕಾಗದವನ್ನು ಮಡಿಸುವುದು; ಚಿತ್ರ; ಮಾದರಿ ಮಾಡುವುದು; ತೂಲಿಕಾಚಿತ್ರ—ಇವುಗಳಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಉಪಯೋಗಿಸುವ ಕ್ರಮ. ಆ ವಿಷಯವಾಗಿ ಟಿಪ್ಪಣಿ.

17. ವೇಳಾಪತ್ರಿಕೆ— ಪುನರ್ವಿಮರ್ಶೆ.

ಕನ್ನಡ ಮೂರನೇ ಪುಸ್ತಕದ ಟಿಪ್ಪಣಿ.

(೨೬೦ ನೇ ಪುಟದ ಶೇಷ)

೬೦. ತುಂಬಿನಲ್ಲಿ—ಮೊದಲಿನಲ್ಲಿ, ಔಡ್ಲ ಎಲೆ—ಹರಳೆಲೆ, ಟಸಿಲು—ಕವಲು, ಪಪಯಿಯ-ಗಸಗಸೆ, ಎಲೆಯ ಭಾಗಗಳ್ಯಾವುವು? ಎಲೆ ಉದುರುವುದು ಯಾವಾಗ? ದೊಡ್ಡ ಎಲೆ ಬಿಡುವ ಮರಗಳು ಯಾವುವು?

೬೧. ಮಕರಂದ—ಹೂವಿನರಸ, ತತ್ತಿ—ಮೊಟ್ಟೆ; ಎಲ್ಲಾ ಹುಳುಗಳಿಗೂ ಸಾಮಾನ್ಯ ಲಕ್ಷಣಗಳ್ಯಾವುವು? ಈವಾತದಲ್ಲಿರುವ ಸಂಭಾಷಣೆಯ ವಾಕ್ಯಗಳನ್ನು ಸಂಗ್ರಹಿಸಿ ಹೇಳಿರಿ?

೬೨. ದಿಟ್ಟ—ಧೈರ್ಯಶಾಲಿ, ಪುಚ್ಛ—ಬಾಲ, ಸಪ್ಪಳ-ಸದ್ದು ರಣಹದ್ದುಗಳಿಂದ ನಮಗೆ ಪ್ರಯೋಜನವೇನು? ಹದ್ದಿಗೂ ರಣಹದ್ದಿಗೂ ಭೇದವೇನು? ಅಷ್ಟರೊಳಗೆ ಒಂದು ಹದ್ದು ಎರಗಿ ಗಂಟನ್ನು ಕಚ್ಚಿಕೊಂಡು ಹೋಯಿತು. ಇಲ್ಲಿನ ಪದಗಳು ಯಾವವಾಚಕಗಳು?

೬೩. ಇಣಿಚಿ—ಅಳಿಲು, ಕೌತುಕ—ಆಶ್ಚರ್ಯ, ಹೋಟೆ-ಪೊಟ್ಟರೆ ಉಲುವು—ಉಲಿ—ಸದ್ದು, ಜಬಡವ-ಹರಿದಾಡುವ, ನಖ—ಉಗುರು; ಇಣಚಿಗಳ ಆಹಾರವೇನು? ವರ್ಣ, ವೃದು, ಅಟವಿ, ಭೂತಿ ಇವುಗಳ ತದ್ಭವ ಪದಗಳು ಯಾವುವು? ಎಲ್ಲಿ ಪ್ರಯೋಗವಾಗಿವೆ?

೬೪. ದಣುವು—ಆಯಾಸ, ಗೆಳೆಯ-ಸ್ನೇಹಿತ; ಬೆಕ್ಕಿಗೂ ನಾಯಿಗೂ ಇರುವ ಭೇದಗಳನ್ನು ವಿವರಿಸಿ; ಜಾಣತನ, ಎಷ್ಟು, ಇನ್ನು, ಸಣ್ಣ ಇವು ಯಾವವಾಕ್ಯಗಳು?

೬೫. ಲಗು—ಬೇಗನೆ, ಗಡುತರ—ಗಟ್ಟಿ, ಸೀರ—ಸೀರಲು, ನಾಯಜಾತಿಗೆ ಸೇರಿದ ಪ್ರಾಣಿಗಳು ಯಾವುವು? ನರಿಯ ಜಾಣತನದಬಗ್ಗೆ ಒಂದು ಕಥೆಯನ್ನು ಬರೆಯಿರಿ. ಈ ಪಾತದಲ್ಲಿ ಬರುವ ಆರು ಕ್ರಿಯಾಪದಗಳನ್ನೂ ಅವುಗಳಿಗೆ ತಕ್ಕ ಆರು ಕರ್ತೃಪದಗಳನ್ನೂ ಬರೆಯಿರಿ?

೬೬. ಒದರು—ಆರಚು, ಕಾಮಿ-ಹೆಣ್ಣುಬೆಕ್ಕು, ಗುದ್ದು-ಬಿಲಗಳು, ಬೆಕ್ಕಿನ ಅವಯವ ರಚನೆಯನ್ನೂ ಅವುಗಳ ಉಪಯೋಗವನ್ನೂ ಹೇಳಿರಿ, ನಾನು ನಡೆದರೆ ಸಪ್ಪಳವಾಗುವುದಿಲ್ಲ. ಅದರಿಂದ ನಾನು ಬರುವುದು ಇಲಿಗಳಿಗೆ ಗೊತ್ತಾಗುವುದಿಲ್ಲ ಇವುಗಳನ್ನು ಒಂದೇ ವಾಕ್ಯವಾಡಿ ಹೇಳಿರಿ?

೬೩. ಹಳುವ-ಕಾಡು, ಹಬ್ಬು—ವಿಸ್ತಾರ, ಅಯಾಲು, ಎಂದರೇನು? ಬರ್ರಿ, ತುಸು, ಕರೇ, ಈ ಶಬ್ದಗಳು. ಸಾಧುವಾಗಿವೆಯೊ? ಸಮವಾದ ಪ್ರಯೋಗ ಹೇಗೆ?

೬೪. ಕಪಾಟಿನಲ್ಲಿ-ಸಂದೂಕದಲ್ಲಿ, ಕೀಡಿ-ಹುಳು (ಕೀಟ) ಅಸಡ್ಡಾಳ—ವ್ಯರ್ಥ, ಅಸ್ಥಿ—ಎಲುಬು, ಪುಪ್ಪುಸ-ಶ್ವಾಸಕೋಶಸ್ನಾಯು—ನರ; ನಮ್ಮ ಮೈಯಲ್ಲಿ ಎಷ್ಟು ಎಲುಬುಗಳಿವೆ? ಸ್ನಾಯುಗಳ ಉಪಯೋಗವೇನು? ಲಿಂಗ, ವಿಭಕ್ತಿ, ವಚನಗಳ ಹೆಸರುಗಳನ್ನು ಬರೆಯಿರಿ?

೬೫. ಕೃತ್ರಿಮ—ಕಲ್ಪಿತವಾದ, ಧಕ್ಕಿ—ಪೆಟ್ಟು. ಗಂಡಕ—ಘೇಂಡಾಮೃಗ ಚರ್ಮದ ಉಪಯೋಗಗಳನ್ನು ಹೇಳಿರಿ.

೬೦. ಬೂಟ—ಮೋಜಾ, ಢೋರರು—ಕೋಚಿಗಳು, ತೋಟೆ—ತೊಗಟೆ, ಅರಳೀಕಾಯಿ—ಆಳಲೇಕಾಯಿ; ಹದಗೊಳಿಸಿದ ತೊಗಲಿನಿಂದ ಏನೇನು ಮಾಡುವರು? ಈ ಪಾಠದಲ್ಲಿ ಬಂದಿರುವ ಕ್ರಿಯಾಪದಗಳನ್ನೆಲ್ಲ ಹೇಳಿರಿ.

೬೧. ತಾಳುತ್ತವೆ—ಬಾಳಿಕೆ ಬರುತ್ತವೆ, ಉಣ್ಣೆಯ ಬಟ್ಟೆಯ ಉಪಯೋಗಗಳಾವುವು? ನೂತು, ನೆಯ್ದು, ಹೊದ್ದು ಇವುಗಳ ಧಾತುಗಳನ್ನು ಹೇಳಿರಿ.

೬೨. ತೇವು—ತೇವ, ಅಡಕಲಕೋಣೆ—ಸಾಮಾನು ತುಂಬುವ ಮನೆ, ಜಿನೆ—ಮೆಟ್ಟು, ಶೌಚಕೂಪ—ಪಾಯಖಾನೆಗುಳಿ, ಕುಳ್ಳು—ಬೆರಣಿ, ಬೆಳಕೂ ಗಾಳಿಯೂ ಇರುವ ಮನೆಗೆ ವೈದ್ಯನು ಬರುವುದಿಲ್ಲ. ಈ ವಾಕ್ಯದ ತಾತ್ಪರ್ಯವೇನು? ಬೆಳಕು ಗಾಳಿಯು ಇದನ್ನು ಸಮಾಸ ಮಾಡಿರಿ.

೬೩. ಹತ್ತಿಯಾಗಿರುವುದು—ಅಮುಕಿಕೊಂಡಿರುವುದು, ವರ್ತುಲ—ಗುಂಡಾದವಸ್ತು, ಉಸುಬಿನ ಗಡಿಯಾರಗಳು ಹೇಗಿರುವುವು? ಛಾಯಾಯಂತ್ರವೆಂದರೇನು? ಮುಂಜಾನೆ ಸೂರ್ಯನು ಪೂರ್ವಕ್ಕಿರುತ್ತಾನೆ. ಇದರ ಅರ್ಥವನ್ನು ವಿವರಿಸಿರಿ.

೬೪. ಬಟ್ಟನ್ನ—ಗುಂಡಾದ, ರೋಮ್ಯ ಅಂಕೆಗಳು ೧೨ ನ್ನೂ ಬರೆಯಿರಿ. ಗಡಿಯಾರದಲ್ಲಿ ಹೊತ್ತು ತಿಳಿಯುವ ಬಗೆಹೇಗೆ? ಅಷ್ಟೀಹೊತ್ತು, ಅಷ್ಟುಹೊತ್ತು ಇವುಗಳ ಅರ್ಥವ್ಯತ್ಯಾಸವನ್ನು ತಿಳಿಸಿರಿ.

೬೫. ಪರಡಿ—ಬಟ್ಟಲು, ಬೋಳಜೀಕ—ದೊಡ್ಡತಕ್ಕಡಿ, (ಚಿಂತಾಲು) ತಕ್ಕಡಿಯ ಉಪಯೋಗಗಳ್ಯಾವುವು? ಈ ಪಾಠದಲ್ಲಿನ ನ್ಯೂನಕ್ರಿಯೆಗಳನ್ನೆಲ್ಲ ಆರಿಸಿ ಹೇಳಿರಿ.

K. R.

ಚೈತ್ರಿಕೆ ಸಂಖ್ಯೆ—

Annual Subscription Rs. 1-8-0 including Postage.

ವಿದ್ಯಾದಾಯಿನಿ.

(A MONTHLY JOURNAL.

ಭಾಗ ೧೬] ~~ನಸಂಬರ್ ೧೯೦೮~~ 1908 [ಸಂಚಿಕೆ ೧೧.

ಕೊಳೆಯಿಲ್ಲದೆ ಬಿರಿಸಿಲ್ಲದೆ ।
ಹುಳುಕಿಲ್ಲದೆ ಸೊಗಸುವಡೆದು ಕುಡಲುಂ ಕೊಳಲುಂ ॥
ಅಳವಾಗದೆ ರಾರಾಜಿಪ ।
ತಿಳಿವೆಂಬೀರನ್ನ ದೆಸಕಮೇನತಿಶಯಮೋ ॥

ವಿಷಯಸೂಚಿಕೆ.

೧. ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ದಿವಾನರವರು ಮಾಡಿದ [ಉಪನ್ಯಾಸ.
೨. ಕೋತಿಯನ್ನು ಕುರಿತು ಪಾಠ ... ...
೩. ಕೋಪ ... ...
೪. ಒಳ್ಳೆಯ ನಡತೆ ... ...
೫. ನೀತಿವಚನಮಾಲೆ ... ...
೬. ಗಣಿತ ... ...
೭. ಜಪಾನೀಯರ ವ್ಯಾಯಾಮವಿದ್ಯೆ ... ...
೮. ಪುಲಿಯ ಕೂಟ ... ...

PRINTED BY
J. M. MYSOREVALLA
AT THE G. T. A. PRESS, MYSORE.
1909.

ಚಂದ-ಅಂಚೆಪಾಸಲು ಸೇರಿ ಒಂದು ವರ್ಷಕ್ಕೆ ರೂ. ೧—೮—೦



ಅಂಬರ್ ಕಡ್ಡಿ ಸೇರು 1ಕ್ಕೆ	5—0—0	ಕಸ್ತೂರಿಬಿಲ್ಲೆ ತೊಲ 1ಕ್ಕೆ	1— —0
ಕಸ್ತೂರಿ ಕಡ್ಡಿ ಡಿ ಡಿ	2—8—0	ಕೇಸರಿಬಿಲ್ಲೆ ಡಿ	0—1—6
ಪುನಗು ಕಡ್ಡಿ ಡಿ ಡಿ	1—4—0	ಶೈವವೈಷ್ಣವದರಾಂಗ ಪ.	0—4—0
ಅರಗಜ ನಂ. 1 ತೊಲಕ್ಕೆ	2—0—0	ಅರಗಜ ನಂ. 2 ತೊಲಕ್ಕೆ	0—12—0
ಕೇಶೋಲ್ಲಾಸಿನಿ ಶೀಸೆ 1ಕ್ಕೆ	0—6—0	ಟೂತ್ ಪೌಡರ್ ಡಬ್ಬಿ 1ಕ್ಕೆ	0—2—0
ತಾಂಬೂಲವಿಹಾರಿಣಿ ಶೀಸೆಗೆ	0—4—0	ಬಾಲಗ್ರಹಧೂಪ ತೊ 10ಕ್ಕೆ	0—8—0

N.B.—ಏಜಂಟರಾಗಲಪೇಕ್ಷೆಯುಳ್ಳವರು ಈ ಕೆಳಗಣ ವಿಳಾಸಕ್ಕೆ ಬರೆದುಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
"ಸುಗಂಧಕಾರಿ" ಮೈಸೂರು.

ಭಕ್ತವಿಜಯ.

ಭಗವದ್ಭಕ್ತರ ಚರಿತ್ರೆಯುಳ್ಳದು. ವಚನಗ್ರಂಥ, ಬಹು ರಸಭರಿತ, ಓದುವವರಿಗತ್ಯಾನಂದಕರ, ಸ್ತ್ರೀಯರೂ ಓದಲು ತಕ್ಕುದು. ಈ ಸೌಮ್ಯಸಂವತ್ಸರಾದಿಯಿಂದ ಅರಂಭ, ಮಾಸಾದಿಯಲ್ಲಿ ಪ್ರಕಟಿಸಲ್ಪಡುವುದು. ತಿಂಗಳಿಗೆ 8 ಫಾರಂ, ರಾಯಲ್ ೮ ಪೇಜು, ಸೊಗಸಾದ ಕಾಗದ; ಅಂದವಾದ ಮುದ್ರಣ. ವಾರ್ಷಿಕಚಂದಾ ೦ ರೂ. ಪರಸ್ಥಳಕ್ಕೆ ೨—೪—೦ ಆರುತಿಂಗಳಿಗೊಂದುಚಿತ.

ವಿದ್ಯಾರ್ಥಿಗಳಿಗೆ ಇನ್ನು ಕೆಲವು ತಿಂಗಳವರಿಗೆ ಎಂಟಾಣೆ ಕಡಮೆ. ವಿದ್ಯಾರ್ಥಿಗಳು ತಾವು ಪಾಠಶಾಲೆಯಲ್ಲಿ ಓದುವರೆಂಬುದಕ್ಕೆ ಹೆಡ್ಮಾಸ್ಟರ ಬಿಪ್ಪಿತವನ್ನು ಅವಶ್ಯವಾಗಿ ಇಳುಹಿಸಬೇಕು. ವಿಳಾಸ— "ಎಡಿಟರ್ ಭಕ್ತವಿಜಯ" ಮೈಸೂರು.

ಪದ್ಮರಾಜಪುರಾಣಂ

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮರ ಪುಣ್ಯಚರಿತ್ರೆ. 521 ವರ್ಷಗಳ ಕೆಳಗೆ ಪದ್ಮಣಾಂಕ ಮಹಾಕವಿಯಿಂದ ರಚಿಸಲ್ಪಟ್ಟದ್ದು. ಕನಡ ಭಾಷೆಯಲ್ಲಿ ಅತಿ ಪ್ರೌಢವೂ, ಬಂಧುರವೂ ಆದ ಪದ್ಯಕಾವ್ಯಗಳಲ್ಲಿ ಬಹು ಗಣ್ಯವಾದದ್ದು, ಈಗ ಹೊಸದಾಗಿ ಪರಿಷ್ಕರಿಸಿ ಆಚ್ಚುಹಾಕಿಸಿದೆ. ವಾರ್ಧಿಕಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಕವಿತಾರಸಪರಿಪಾಕವನ್ನರಿತ ರಸಜರೂ, ಭಕ್ತಿಯ ಮಹಿಮೆಯಲ್ಲಿ ವಾತ್ಸಲ್ಯವುಳ್ಳ ಆಸ್ತಿಕರೂ, ಒಲ್ಲಾಳರಾಜರ ಕಾಲದಲ್ಲಿ ಶೈವರಿಗೂ ವೈಷವರಿಗೂ ಇದ್ದ ಸಂಬಂಧವನ್ನು ತಿಳಿಯಲಪೇಕ್ಷೆಯುಳ್ಳ ಆಧುನಿಕರೂ, ಈ ಪುರಾಣವನ್ನು ಅವಶ್ಯಕವಾಗಿ ನೋಡತಕ್ಕದ್ದಾಗಿದೆ. "ಶಿವಾದ್ವೈತ ಸಾಕಾರಸಿದ್ಧಾಂತ" ಪುಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ. ಸ್ಫುಟಾಕ್ಷರ, ನುಣುಪುಕಾಗದ ಕಿತ್ತಾನಾರು ಅಥವಾ ಕ್ಯಾಲಿಕೊ ಬೈಂಡು—ಕ್ರಯ ೨—೦—೦ ಪ್ಯಾಕಿಂಗ ಮತ್ತು ಪೋಸ್ಟೇಜು ೦—೪—೦ ಣೆ. ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಬಿ. ಮಲ್ಲಾರಾಧ್ಯರು, ಗರ್ಲ್ಸ್‌ಸ್ಕೂಲ್ ಗಲ್ಲಿ, ಹಳೇಅಗ್ರಹಾರ, ಮೈಸೂರು.

ಅಥವಾ—ಬಿ. ಬಸವಾರಾಧ್ಯರು, ಡೆಪ್ಯುಟಿ ರಿಜಿಸ್ಟ್ರಾರ್, ಚೀಫ್ ಕೋರ್ಟ್, ಬೆಂಗಳೂರು.